ವಿಷಯಾನುಕ್ರಮಣಿಕೆ

# ಪಾರಿಭಾಷಿಕ ಶಬ್ದಕೋಶ

( ಶ್ರೀ ಶಾಂಕರ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ )

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

2003

# ವಿಷಯಾನುಕ್ರಮಣಿಕೆ

ಮುನ್ನುಡಿ

ಪ್ರಸ್ತಾವನೆ

ಪ್ರಕಾಶಕರ ಬಿನ್ನಹ

ಸಂಕೇತಾಕ್ಷರಗಳ ವಿವರಣೆ

ಅ ಆ ಇ ಈ ಉ ಊ ಋ ಎ ಏ ಐ

ಒ ಓ ಔ ಅಂ ಅಃ

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಯ ರ ಲ ವ ಶ ಷ ಸ ಹ ಳ

# ಮುನ್ನುಡಿ

ಆಸಕ್ತಿಯಿಂದ ಅಧ್ಯಯನ ಮಾಡುವವರಿಗೆ **ಪಾರಿಭಾಷಿಕ ಶಬ್ದಕೋಶದ** ನೆರವು ಎಷ್ಟೆಂಬುದನ್ನು ಹೇಳಬೇಕಾದುದಿಲ್ಲ. ಶಾಸ್ತ್ರದಲ್ಲಿರುವ ಸೌಲಭ್ಯವೂ ಕ್ಲಿಷ್ಟತೆಯೂ ಪಾರಿಭಾಷಿಕಶಬ್ದಗಳಿಂದಲೇ. ಶಾಸ್ತ್ರದ ಚೌಕಟ್ಟಿನಲ್ಲಿ ಬಳಸುವ ಮಾತುಗಳಿಗೆ ವಿಶಿಷ್ಟವಾದ ಅರ್ಥಗಳು ಒದಗಿಬರುವುದು ಸಹಜ. ಅವು ಸಾಮಾನ್ಯವಾದ ಮಾತುಗಳಂತಲ್ಲ. ನಿಘಂಟುಗಳಲ್ಲಿ ಕಾಣಸಿಗುವಂಥ ಅರ್ಥಗಳು ಅವಕ್ಕಿರವು. ರೂಢಿಯಲ್ಲಿನ ಅರ್ಥಗಳೂ ಇಲ್ಲಿ ಪ್ರಸಕ್ತವಾಗಲಾರವು. ಶಬ್ದದ ವ್ಯುತ್ಪತ್ತಿಯನ್ನನುಸರಿಸಿ ಮಾಡುವ ಯೌಗಿಕಾರ್ಥವಾಗಲಿ ತಾತ್ಪರ್ಯವನ್ನು ತಿಳಿಸಲಾರವು. ಶಾಸ್ತ್ರಕ್ಕೇ ಸಿದ್ಧವಾದ ಮಾತುಗಳು ಪರಿಭಾಷೆಯೆನಿಸಿಕೊಳ್ಳುತ್ತವೆ. ಹಾಗೆ ಮಾತುಗಳನ್ನು ಗ್ರಹಿಸಿದಾಗಲೇ ಶಾಸ್ತ್ರಮರ್ಯಾದೆಗನುಗುಣವಾಗಿ ತಿಳಿವಳಿಕೆ ಮೂಡುವುದು. ಶಾಸ್ತ್ರದ ನಿಲುವು, ನೆಲೆ, ಧೋರಣೆ, ಉದ್ದೇಶ, ಪ್ರಕ್ರಿಯೆಗಳನ್ನು ಪಾರಿಭಾಷಿಕಶಬ್ದಗಳು ಪ್ರತಿಬಿಂಬಿಸುತ್ತವೆ, ಅಳವಡಿಸಿಕೊಳ್ಳುತ್ತವೆ.

ಪ್ರಕೃತ, ವೇದಾಂತಶಾಸ್ತ್ರ ಒಡಮೂಡಿದ್ದು ಉಪನಿಷತ್ತುಗಳ ಆಧಾರದ ಮೇಲೆ. ಅದು ಹೇಳಿಕೇಳಿ ಔಪನಿಷದ ದರ್ಶನ. ಉಪನಿಷತ್ತುಗಳನ್ನು ಅವಲಂಬಿಸಿಯೇ ಮೈದುಂಬಿ ಬಂದುದು ಭಗವದ್ಗೀತೆ. ಉಪನಿಷತ್ತು ಶ್ರುತಿಯಾದರೆ ಗೀತೆ ಸ್ಮೃತಿ. ಉಪನಿಷತಿನ ಒಕ್ಕಣೆಯಲ್ಲಿ ಕಂಡುಬರುವ ವೈವಿಧ್ಯವನ್ನ ಗಮನಿಸಿ ಅದನು ಸಮನ್ವಯ ಮಾಡಿ ಏಕೋದ್ದೇಶವನ್ನು ಸಾಧಿಸಲು ಹೊರಟದ್ದು ವೇದಾಂತ ಸೂತ್ರಗಳು (ಬಾದರಾಯಣರ ಶಾರೀರಕ ಮೀಮಾಂಸಾ ಸೂತ್ರಗಳು). ವೇದಾಂತ ಶಾಸ್ತ್ರದಲ್ಲಿ ಇವು ಮೂರು ಪ್ರಸ್ಥಾನಗಳೆನಿಸಿಕೊಂಡಿವೆ, ಸರ್ವಮಾನ್ಯವಾಗಿವೆ ; ಶಾಸ್ತ್ರ ಪ್ರಕ್ರಿಯೆಯನ್ನು ಸ್ಪಷ್ಟಗೊಳಿಸುತ್ತವೆ. ವೇದಾಂತ ಶಾಸ್ತ್ರದ ಚೌಕಟ್ಟಿನಲ್ಲಿ ಮಾರ್ಗದರ್ಶನ ಮಾಡಿರುವ ಎಲ್ಲ ಆಚಾರ್ಯರೂ ಈ ಪ್ರಸ್ಥಾನತ್ರಯವನ್ನೇ ಹಿಡಿದಿದ್ದಾರೆ.

ವೇದಾಂತಶಾಸ್ತ್ರ ಸಂಪ್ರದಾಯದ ಪ್ರಸಿದ್ಧ ಆಚಾರ್ಯರಲ್ಲಿ ಆದ್ಯರು **ಶ್ರೀಶಂಕರಾಚಾರ್ಯರು.** ಅವರಿಗೆ ಮೊದಲೇ ಸಂಪ್ರದಾಯವಿದ್ದುದು ಅವರ ಮಾತುಗಳಲ್ಲಿಯೇ ಸ್ಪಷ್ಟವಾಗುತ್ತದೆ. ('ಸಂಪ್ರದಾಯವಿದ್ಭಿರಾಚಾರ್ಯೈಃ' ಮೊದಲಾದ ಉಲ್ಲೇಖಗಳಿವೆ). ಸಂಪ್ರದಾಯದ ನಿಲುವನ್ನು ಅರಿತುಕೊಳ್ಳದೆ ವಿಚಾರ ಮಾಡತೊಡಗಿದವನು ಎಷ್ಟೇ ಪಂಡಿತನಾದರೂ ಮೂರ್ಖನೇ ಎಂಬುದನ್ನು ಅವರೇ ತಿಳಿಯಪಡಿಸಿದ್ದಾರೆ. ವೇದಾಂತ ಸಂಪ್ರದಾಯವನ್ನು ಉಳಿಸುವ ಸಲುವಾಗಿಯೇ ಅವರು ವೇದಾಂತಸೂತ್ರಗಳಿಗೂ, ಗೀತೆಗೂ, ಉಪನಿಷತ್ತುಗಳಿಗೂ ಭಾಷ್ಯಗಳನ್ನು ರಚಿಸಿದರು. ವೇದಾಂತ ಸಂಪ್ರದಾಯದ ಹೆಮ್ಮರಕ್ಕೆ ಈ ರಚನೆಗಳೇ ತಾಯಿಬೇರು. ಉಳಿದೆಲ್ಲ ಹೆಸರಾಂತ ಭಾಷ್ಯಗಳಿಗೂ ಶ್ರೀ ಶಂಕರರ ಪ್ರಸ್ಥಾನತ್ರಯ ಭಾಷ್ಯವೇ ಪ್ರೇರಣೆ, ಸ್ಫೂರ್ತಿ, ಆಕರ, ಉಪಜೀವ್ಯ.

ವೇದಾಂತ ಶಾಸ್ತ್ರದಲ್ಲಿನ ಪರಿಭಾಷೆಗೂ ಶ್ರೀ ಶಂಕರರ ರಚನೆಗಳೇ ಕೈದೀವಿಗೆಯಂತಿವೆ ಎನ್ನಬಹುದು. ಸಂದರ್ಭವನ್ನು, ಶ್ರುತಿಶುದ್ಧಿಯನ್ನು, ಸಿದ್ಧಾಂತದ ಸ್ವಾರಸ್ಯವನ್ನು, ಸಾಧನೆಯ ಪ್ರಯೋಜನವನ್ನು ಗಮನಿಸಿಯೇ ಪಾರಿಭಾಷಿಕ ಶಬ್ದಗಳನ್ನು ಅವರು ಬಳಸಿ ತಾತ್ಪರ್ಯವನ್ನು ಖಚಿತಗೊಳಿಸಿದ್ದಾರೆ. ಅವರ ವಿವರಣೆಗಳಿಂದ ಈ ಪಾರಿಭಾಷಿಕ ಶಬ್ದಗಳಿಗೆ ಸಮುಚಿತವಾದ ಅರ್ಥಗೌರವ ಒದಗಿಬಂದಿದೆ. ಆಚಾರ್ಯರ ಅಭಿಪ್ರಾಯಗಳನ್ನು ಸರಿಯಾಗಿ ಅರಿತುಕೊಳ್ಳುವುದಕ್ಕೆ ಈ ಪಾರಿಭಾಷಿಕ ಶಬ್ದಗಳ ಅನುಸಂಧಾನ ಅಗತ್ಯವಾಗಿದೆ. ಸಂಸ್ಕೃತದಲ್ಲಿರುವ ಈ ಪಾರಿಭಾಷಿಕಪದಗಳು ವೇದಾಂತಶಾಸ್ತ್ರ ಮಾತ್ರವಲ್ಲದೆ ಪೂರ್ವಮೀಮಾಂಸೆ, ನ್ಯಾಯದರ್ಶನ, ಸಾಂಖ್ಯ-ಯೋಗ ಪದ್ಧತಿಗಳಿಗೆಲ್ಲ ಬಹುಮಟ್ಟಿಗೆ ಸಾಮಾನ್ಯವಾಗಿಯೇ ಇರುವುದರಿಂದ ಇವುಗಳ ಕೋಶ ಎಲ್ಲ ದರ್ಶನಗಳ ಅಭ್ಯಾಸಿಗಳಿಗೂ ಉಪಯುಕ್ತವೇ ಆಗುತ್ತದೆ.

'ಅಭಿನವಶಂಕರ'ರೆಂದು ಪ್ರಸಿದ್ಧರಾದ ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳು ಶ್ರೀ ಶಂಕರರ ಶುದ್ಧಪ್ರಕ್ರಿಯೆಯ ಪ್ರಸಾರಕ್ಕೆಂದೇ ತಮ್ಮ ಇಡೀ ಜೀವನವನ್ನು ಮುಡಿಪಿಟ್ಟು, ಆಚಾರ್ಯರ ಪ್ರಸ್ಥಾನತ್ರಯಭಾಷ್ಯಗಳನ್ನು ಕನ್ನಡದಲ್ಲಿ ಅನುವಾದಮಾಡಿದರು. ಅವುಗಳಲ್ಲಿ ವ್ಯಕ್ತವಾಗುವ ದಾರ್ಶನಿಕ ನಿಲುವನ್ನು ಸ್ಪಷ್ಟಗೊಳಿಸಲು ಸುಮಾರು ೨೦೦ಕ್ಕೂ ಮೀರಿ ಗ್ರಂಥಗಳನ್ನು ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ರಚಿಸಿ ಲೋಕಸಂಗ್ರಹಕ್ಕೆ ಕಾರಣರಾಗಿದ್ದಾರೆ. ಅವರ ಸಾರಸ್ವತವ್ಯವಸಾಯ ಅಭೂತಪೂರ್ವವಾದುದು. ಅವರ ಬರಹದಲ್ಲಿ ಆಳವಾದ ಅಧ್ಯಯನ, ಗಂಭೀರವಾದ ಚಿಂತನೆ, ನಿಶ್ಚಿತವಾದ ವಿಮರ್ಶೆ ಕಾಣಿಸಿಕೊಳ್ಳುತ್ತದೆ. ಅಷ್ಟೇ ಅಲ್ಲ, ಬರವಣಿಗೆಯ ಶೈಲಿಯಲ್ಲೂ ಸಂಯಮ, ಶಿಸ್ತು, ಅಚ್ಚುಕಟ್ಟು ಇವು ಹಾಸುಹೊಕ್ಕಾಗಿವೆ. ಶಾಸ್ತ್ರದ ಪ್ರತಿಪಾದನೆಯಲ್ಲಿ ವಿಜ್ಞಾನದ ಬಳಕೆಯ ಸ್ವಾರಸ್ಯ ಅವರ ಬರಹದಲ್ಲಿ ಎದ್ದು ಕಾಣುತ್ತದೆ.

ಆದುದರಿಂದ ಶ್ರೀಶ್ರೀಗಳವರ ಪ್ರಸ್ಥಾನತ್ರಯಭಾಷ್ಯ ಪ್ರಕಟಣೆಗಳಲ್ಲಿ ಕೊನೆಗೆ ಅನುಬಂಧವಾಗಿ ಆಯಾಗ್ರಂಥದಲ್ಲಿ ಬಳಕೆಗೆ ಬಂದಿರುವ ಪಾರಿಭಾಷಿಕ ಶಬ್ದಗಳನ್ನು ಪಟ್ಟಿಮಾಡಿ, ಎಲ್ಲ ಅಭ್ಯಾಸಿಗಳಿಗೂ ಸುಲಭವಾಗಿ ತಿಳಿಯುವ ರೀತಿಯಲ್ಲಿ ಅರ್ಥಗಳನ್ನು ಅಳವಡಿಸಿಕೊಡುವುದು ವಾಡಿಕೆ. ವೇದಾಂತದ ಯಾವ ವಿದ್ಯಾರ್ಥಿಗಾದರೂ ಇದರ ಪ್ರಯೋಜನವಿದ್ದೇ ಇದೆಯೆಂದು ಬೇರೆ ಹೇಳಬೇಕಾಗಿಲ್ಲ. ಆದರಲ್ಲೂ ಶಾಂಕರವೇದಾಂತವನ್ನೇ ಅಧ್ಯಯನಮಾಡಲು ಹೊರಟವರಿಗಂತೂ ಇದು ತುಂಬ ಮುಖ್ಯವಾಗುತ್ತದೆ. ಶ್ರೀಶಂಕರರು ತಳೆದ ದಾರ್ಶನಿಕನಿಲುವನ್ನು ಕಟ್ಟುನಿಟ್ಟಾಗಿ ಅನುಸರಿಸಿ ಸುರೇಶ್ವರಾಚಾರ್ಯರ 'ನೈಷ್ಕರ್ಮ್ಯಸಿದ್ಧಿ'ಯೆಂಬ ಗ್ರಂಥವನ್ನೂ ಶ್ರೀಶ್ರೀಗಳವರು ಕನ್ನಡದಲ್ಲಿ ಅನುವಾದಮಾಡಿ ಅನುಗ್ರಹಿಸಿದ್ದಾರೆ ; ಈ ಗ್ರಂಥದ ಕಡೆಯಲ್ಲೂ ಪಾರಿಭಾಷಿಕ ಶಬ್ದಕೋಶವನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಮತ್ತೆ

ಶ್ರೀಶ್ರೀಗಳವರು ತಾವೇ ನಡೆಸುತ್ತಿದ್ದ 'ಅಧ್ಯಾತ್ಮಪ್ರಕಾಶ ಮಾಸಪತ್ರಿಕೆ'ಯಲ್ಲಿ 'ಶಾಂಕರವೇದಾಂತ ನಿಘಂಟು' ಎಂಬುದನ್ನು ಕೆಲವಾರು ವರ್ಷಗಳ ಕಾಲ (೧೯೪೭ ರಿಂದ ೧೯೫೦ರ ವರೆಗೆ) ಅನುಕ್ರಮವಾಗಿ ಪ್ರಕಟಿಸಿದರು.

ಈ ಸಾಮಗ್ರಿಯನ್ನೆಲ್ಲ ಸಂಗ್ರಹಿಸಿ ಈಗ ಇದೊಂದು '**ಪಾರಿಭಾಷಿಕ ಶಬ್ದಕೋಶ**'ವನ್ನು ಶ್ರೀಶ್ರೀಗಳವರಿಂದಲೇ ಪ್ರವರ್ತಿತವಾದ 'ಅಧ್ಯಾತ್ಮಪ್ರಕಾಶ ಕಾರ್ಯಾಲಯ'ವು ಹೊರತರುತ್ತಿರುವುದು ಸಂತೋಷದ ಸಂಗತಿ. ಪ್ರಸ್ಥಾನತ್ರಯ ಶಾಂಕರಭಾಷ್ಯಗಳಲ್ಲಿ ತೋರಿಕೊಳ್ಳುವ ಪಾರಿಭಾಷಿಕ ಪದಗಳನ್ನು ಅಕಾರಾದಿಯಾಗಿ ಕೊಟ್ಟು, ಶ್ರೀಶ್ರೀಗಳವರ ಅರ್ಥನಿರೂಪಣೆಯನ್ನೇ ಅಳವಡಿಸಿರುವುದು ಈ ಗ್ರಂಥದ ವೈಶಿಷ್ಟ್ಯ. ಸಂಕಲನ ಬೇರೆಯವರದ್ದಾದರೂ, ಮೂಲಬರಹ ಶ್ರೀಶ್ರೀಗಳವರದ್ದೇ ಎನ್ನುವುದನ್ನು ಗಮನಿಸಬೇಕು. ಪಾರಿಭಾಷಿಕಪದಗಳ ಆಯ್ಕೆಯಾಗಲಿ, ವಿವರಣೆಗಳಾಗಲಿ ಶ್ರೀಶ್ರೀಗಳವರದ್ದೇ. ಅವೆಲ್ಲ
ಈಗಣ ಸಂಕಲನಕಾರರು ಓದುಗರಿಗೆ ಉಪಕಾರ ಮಾಡಿದ್ದಾರೆ. ಹೀಗಾಗಿ ನಮ್ಮ ಕೃತಜ್ಞತೆ ಅವರಿಗೆ ಸಲ್ಲಬೇಕು. ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಈ ಪ್ರಕಟಣೆಯು ಸರ್ವೋಪಕಾರಕವಾಗಿ ಪರಿಣಮಿಸುವುದರಲ್ಲಿ ಸಂದೇಹವಿರದು.

ಶಾಂಕರವೇದಾಂತವನ್ನು ಅಧ್ಯಯನಮಾಡುವ ಜಿಜ್ಞಾಸುಗಳಿಗೆ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಹೊಸದೊಂದು ದಾರಿಯನ್ನು ತೆರೆದುಕೊಟ್ಟಿದ್ದಾರೆ, ತೋರಿಸಿದ್ದಾರೆ. ಭಾಮತೀ ಮುಂತಾದ ಇತರ ವ್ಯಾಖ್ಯಾನಕಾರರ ಅಭಿಪ್ರಾಯಗಳಿಗೆ ಜೋತುಬೀಳದೆ, ಮುಂದಣ ವಿದ್ಯಾರಣ್ಯರೇ ಮೊದಲಾದ ಬರಹಗಾರರ ಜಾಡನ್ನು ಹಿಡಿಯದೆ, ಸ್ವತಂತ್ರವಾಗಿ ಶ್ರೀ ಶಂಕರರ ಭಾಷ್ಯಗ್ರಂಥಗಳನ್ನೇ ಅವಲಂಬಿಸಿ ಶುದ್ಧಶಾಂಕರ ದರ್ಶನವನ್ನು ತಿಳಿದುಕೊಳ್ಳುವುದು ಈ ದಾರಿಯ ಹಿರಿಮೆ. ಭಾಷ್ಯಗಳು ಮೂಲಗ್ರಂಥಗಳು (ಪ್ರಸ್ಥಾನತ್ರಯವನ್ನು ಬಿಟ್ಟರೆ). ಅವುಗಳನ್ನು ರಚಿಸಿದ ಆಚಾರ್ಯರು ಅವತಾರಪುರುಷರು ; ಸಾಕ್ಷಾತ್ಕಾರವನ್ನು ಸಾಧಿಸಿಕೊಂಡವರು ; ಶ್ರುತ್ಯರ್ಥವನ್ನು ನೇರಾಗಿ ಗ್ರಹಿಸುವ ಸಾಮರ್ಥ್ಯವನ್ನು ತಂದುಕೊಡುವ ತಪಸ್ಸು, ಅಂತಃಪ್ರಕಾಶ, ದೈವಾನುಗ್ರಹಗಳನ್ನು ಪಡೆದುಕೊಂಡವರು ; ಅದನ್ನು ಸ್ಪಷ್ಟವಾಗಿ ತಿಳಿಯಹೇಳುವ ಅಲೌಕಿಕ ಪ್ರತಿಭೆಯೂ ಇದ್ದವರು. ಅವರ ಮಾತುಗಳಲ್ಲಿರುವ ಶಕ್ತಿಯಾಗಲಿ ಸ್ವಾರಸ್ಯವಾಗಲಿ ಇತರ ವ್ಯಾಖ್ಯಾನಕಾರರ ಬರಹದಲ್ಲಿ ಒಡಮೂಡಿಬರುವುದಾದರೂ ಹೇಗೆ ? ವ್ಯಾಖ್ಯಾನ, ವಿವೃತ್ತಿ, ಟೀಕೆ, ಟಿಪ್ಪಣಿಗಳ ಅಗತ್ಯವಿಲ್ಲವೆಂದಲ್ಲ, ನಮ್ಮಂಥವರಿಗೆ ಅವು ನೆರವಾಗುವುದು ಇದ್ದದ್ದೇ. ಇದನ್ನು ಅಲ್ಲಗಳೆಯುವುದು ಉದ್ದೇಶವಲ್ಲ. ಆದರೆ ಬಹುಮಂದಿ ಅಭ್ಯಾಸಿಗಳು ವ್ಯಾಖ್ಯಾನ, ಟೀಕೆ, ಟಿಪ್ಪಣಿಗಳಲ್ಲೇ ಕೃತಾರ್ಥರಾಗಿ ಬಿಡುತ್ತಾರೆ ; ಮೂಲಗ್ರಂಥದ ಕಡೆ ದೃಷ್ಟಿಯನ್ನೇ ಹೊರಳಿಸುವುದಿಲ್ಲ. ಮೂಲ ಗ್ರಂಥವನ್ನು ನೋಡುವ ಬಯಕೆಯಿದವರೂ ಕೂಡ,

ವ್ಯಾಖ್ಯಾನ, ಟೀಕೆ, ಟಿಪ್ಪಣಿಗಳು ಒದಗಿಸುವ ಧೋರಣೆಯನ್ನೇ ಹಿಡಿದು ಮೂಲವನ್ನೂ ಅರ್ಥಮಾಡಿಕೊಳ್ಳುತ್ತಾರೆ. ಇದು ಎಷ್ಟರಮಟ್ಟಿಗೆ ಸರಿಯಾದುದು ? ನಿದರ್ಶನಕ್ಕೆ, ಶ್ರೀ ಶಂಕರರ ಭಾಷ್ಯಗಳನ್ನು ಮೂರು ತೆರನಾಗಿ ವಿವರಿಸುವವರಿದ್ದಾರೆ. ಭಾಮತೀ ವ್ಯಾಖ್ಯಾನವನ್ನು ಬರೆದ ವಾಚಸ್ಪತಿಮಿಶ್ರರು ಒಂದು ತೆರನಾಗಿ, ಪಂಚಪಾದಿಕಾಕಾರರು ಇನ್ನೊಂದು ತೆರನಾಗಿ, ಸುರೇಶ್ವರರು ಮತ್ತೊಂದು ತೆರನಾಗಿ. ಮೂರರಲ್ಲಿ ಹೊಂದಾಣಿಕೆಯಿರದು. ಜಿಜ್ಞಾಸುಗಳು ಯಾವುದನ್ನನುಸರಿಸಬೇಕು ?

ಇದನ್ನು ಮನವರಿಕೆಮಾಡಿಕೊಂಡು, ಕುತೂಹಲಿಜಿಜ್ಞಾಸುಗಳಿಗೆ ಉಂಟಾಗಿರುವ ಗೊಂದಲವನ್ನು ಪರಿಹರಿಸಲು ಶ್ರೀಶ್ರೀಗಳವರು ಮೂಲಭಾಷ್ಯ ಗಳನ್ನಷ್ಟೆ ಹಿಡಿಯಬೇಕೆಂದು ಸೂಚಿಸಿದರು. ಸೂಚಿಸಿದ್ದಷ್ಟೆ ಅಲ್ಲ, ತಮ್ಮ ಅನುವಾದಗಳಲ್ಲೂ, ಭಾಷ್ಯವನ್ನು ಕುರಿತಂತೆ ತಮ್ಮ ಆಲೋಚನೆಯಲ್ಲೂ ಶ್ರೀ ಶಂಕರರ ಮಾತುಗಳನ್ನಷ್ಟೆ ಅವಲಂಬಿಸಿದರು. ಇದೊಂದು ರಾಜಮಾರ್ಗ ; ಆದರ್ಶ. ಇದಕ್ಕಾಗಿ ವೇದಾಂತ ವಿದ್ಯಾರ್ಥಿಗಳು ಎಂದೆಂದಿಗೂ ಅವರಿಗೆ ಋಣಿ. ಮೂಲಭಾಷ್ಯಗಳನ್ನು ಸ್ವತಂತ್ರವಾಗಿ ಅಧ್ಯಯನ ಮಾಡುವವರಿಗೆ ಈ **ಪಾರಿಭಾಷಿಕಕೋಶ** ತುಂಬ ನೆರವಾಗುತ್ತದೆ. ಪಾರಿಭಾಷಿಕಪದಗಳಿಗೆ ಅರ್ಥವನ್ನು ಹೇಳುವಾಗ ಶ್ರೀ ಶ್ರೀಗಳವರು ಶ್ರೀಶಂಕರರ ಮಾತುಗಳನ್ನಷ್ಟೆ ಹಿಡಿದಿದ್ದಾರೆ ಎಂಬುದನ್ನು ಗಮನಿಸಬೇಕು. ವ್ಯಾಖ್ಯಾನಕಾರರ, ಟೀಕಾಕಾರರ ನೂರಾರು ಗ್ರಂಥಗಳಿವೆ ; ಅವುಗಳಲ್ಲಿ ಯಾವುದನ್ನೂ ಇಲ್ಲಿ ಅವಲಂಬಿಸಿಲ್ಲ. ಸಾಮಾನ್ಯವಾಗಿ ಶ್ರೀ ಶಂಕರರ ಭಾಷ್ಯವನ್ನು ಚತುರ್ಗ್ರಂಥೀ ಎಂಬ ಪದ್ಧತಿಯಲ್ಲಿ ಅಧ್ಯಯನಮಾಡುವುದು ವಾಡಿಕೆ. (ಭಾಷ್ಯ-ಭಾಮತೀ-ಕಲ್ಪತರು-ಪರಿಮಳ). ಈ ಪದ್ಧತಿಯಲ್ಲಿ ಶುದ್ಧಶಾಂಕರಪ್ರಕ್ರಿಯೆ ನಮಗೆ ದೊರಕಲಾರದು. ಶ್ರೀಶ್ರೀಗಳವರ ಸೂಚನೆಯನ್ನನುಸರಿಸಿದರೆ ಮಾತ್ರ ಅದು ಖಚಿತವಾದೀತು. ಇದರಲ್ಲಿ ಪ್ರಸ್ತುತ ಪಾರಿಭಾಷಿಕ ಕೋಶದ ಮೂಲಕ ಶ್ರೀಶ್ರೀಗಳವರು ನಮಗೆ ನೆರವಾಗುತ್ತಾರೆ.

ಇದನ್ನು ಸಂಕಲನಮಾಡಿ ಪ್ರಕಟಪಡಿಸಿ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ನಮಗೆಲ್ಲ ಮಹೋಪಕಾರಮಾಡಿದೆ ಎಂದು ಮತ್ತೊಮ್ಮೆ ಉಲ್ಲೇಖಿಸಿ, ಕಾರ್ಯಾಲಯಕ್ಕೆ ನನ್ನ ಕೃತಜ್ಞತೆಯನ್ನು ಸಲ್ಲಿಸಿ ವಿರಮಿಸುತ್ತೇನೆ. 'ಜೀಯಾಚ್ಛಂಕರಭಾರತೀ'.

ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ,
ಸಂಗೀತಕಲಾರತ್ನ, ವಾಚಸ್ಪತಿ
**ಸಾ. ಕೃ. ರಾಮಚಂದ್ರರಾವ್**

ತಾ॥ ೨೬-೧೦-೨೦೦೩
ಬೆಂಗಳೂರು

# ಪ್ರಸ್ತಾವನೆ

ಭಾರತವು ಪರಮ ಪವಿತ್ರವಾದ ದೇಶ. ಭೂಮಂಡಲದಲ್ಲಿ ಸಭ್ಯತೆಯ ವಿಕಾಸವು ಈ ದೇಶದಿಂದಲೇ ಆಗಿದೆಯೆಂಬುದು ಹೆಮ್ಮೆಯ ವಿಷಯ. ಇದಕ್ಕಾಗಿ ಈ ದೇಶದ ಪ್ರಾಚೀನ ಮಹರ್ಷಿಗಳು ತ್ರಿಕಾಲವಂದ್ಯರಾಗಿದ್ದಾರೆ. ಭಾರತವು ಕರ್ಮಭೂಮಿಯೂ ಹೌದು, ಧರ್ಮಭೂಮಿಯೂ ಹೌದು, ಜ್ಞಾನ ಭೂಮಿಯೂ ಹೌದು.

''ಏತದ್ದೇಶಪ್ರಸೂತಸ್ಯ ಸಕಾಶಾದಗ್ರಜನ್ಮನಃ।
ಸ್ವಂಸ್ವಂಚರಿತ್ರಂಶಿಕ್ಷೇರನ್ ಪೃಥಿವ್ಯಾಂಸರ್ವಮಾನವಾಃ॥''

ಮನುವಿನ ಈ ಮಾತು ತ್ರಿಕಾಲ ಸತ್ಯವಾಗಿದೆ. ಇತರ ಪ್ರಾಣಿಗಳಿಗಿಂತ ಮನುಷ್ಯನ ಜೀವನವು ಶ್ರೇಷ್ಠವಾದುದು. ಆತ್ಮದರ್ಶನವೇ ಸರ್ವಶ್ರೇಷ್ಠವಾದ ಧರ್ಮ. ಜೀವನವನ್ನು ಸಾರ್ಥಕಪಡಿಸಿಕೊಳ್ಳಲು ಬೇಕಾದ ಸಾಧನೋಪಾಯಗಳನ್ನು ತಿಳಿಸುವುದು ಶಾಸ್ತ್ರವೆನಿಸುತ್ತದೆ. ಶಾಸ್ತ್ರವು ದರ್ಶನದಲ್ಲಿ ಪರ್ಯವಸಾನವಾಗುವುದರಿಂದ ಶಾಸ್ತ್ರವನ್ನು ದರ್ಶನವೆಂದೂ ಕರೆಯಲಾಗುತ್ತದೆ.

''ಶಾಸನಾತ್ ಶಂಸನಾತ್ ಶಾಸ್ತ್ರಂ ಶಾಸ್ತ್ರಮಿತ್ಯಭಿಧೀಯತೇ।
ಶಂಸನಂ ಭೂತವಸ್ತ್ವೇಕ ವಿಷಯಂ ನಕ್ರಿಯಾಪರಮ್॥''

ಶಾಸನ ಮಾಡುವುದರಿಂದ ಶಾಸ್ತ್ರವೆನಿಸುತ್ತದೆ. ಶಂಸನ ಮಾಡುವುದೂ ಶಾಸ್ತ್ರವೇ. ಶಂಸನ ಮಾಡುವ ಶಾಸ್ತ್ರವು ಬೋಧಕಶಾಸ್ತ್ರವೆನಿಸುತ್ತದೆ.

ಸಮಸ್ತ ವಿದ್ಯೆಗಳಲ್ಲೂ ಬ್ರಹ್ಮವಿದ್ಯೆಯು ಸರ್ವಶ್ರೇಷ್ಠವಾದುದು. ''ಸ ಬ್ರಹ್ಮವಿದ್ಯಾಂ ಸರ್ವವಿದ್ಯಾ ಪ್ರತಿಷ್ಠಾಮಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ'' (ಮುಂಡಕ) ಎಂದು ಉಪನಿಷತ್ತು ಸಾರುತ್ತದೆ. ಅಧ್ಯಾತ್ಮವಿದ್ಯೆಯು ಭಗವಂತನ ವಿಭೂತಿರೂಪವಾದುದು. ''ಅಧ್ಯಾತ್ಮವಿದ್ಯಾ ವಿದ್ಯಾನಾಮ್'' ಎಂದು ಗೀತೆಯಲ್ಲಿ ಭಗವಂತನೇ ಹೇಳಿದ್ದಾನೆ.

ಮಾನವಜೀವನದ ಪರಮಲಕ್ಷ್ಯವು ಆತ್ಮಸಾಕ್ಷಾತ್ಕಾರವೇ ಆಗಿದೆ. ಈ ಅನುಭವವನ್ನು ಪಡೆಯಲು ಉಪನಿಷತ್ತು ತಿಳಿಸುವ ಮೂರು ಸಾಧನೋಪಾಯಗಳಲ್ಲಿ ಕೇಂದ್ರಭೂತವಾದ ಮನನವು ಮುಖ್ಯವಾಗಿ ವೇದಾಂತ ದರ್ಶನದಿಂದ ಆಗಬೇಕು. ಈ ಸಂಸಾರಚಕ್ರದ ಬಂಧನವು ಕೇವಲ ಅವಿದ್ಯೆಯಿಂದ ಉಂಟಾಗಿದೆ. ವಸ್ತುವಿನ ಯಥಾರ್ಥವಾದ ಸ್ವರೂಪವನ್ನು ತಿಳಿಯದಿರುವುದೇ ಅವಿದ್ಯೆ ಅಥವಾ ಅಜ್ಞಾನ.

ಜ್ಞಾನವೊಂದೇ ಅವಿದ್ಯೆಯಿಂದ ಮುಕ್ತಿಯನ್ನು ಹೊಂದಲು ಸಾಧನವಾಗಿದೆ. ''ಋತೇಜ್ಞಾನಾನ್ನ ಮುಕ್ತಿಃ'' ಎಂದು ಶಾಸ್ತ್ರವು ಏಕಕಂಠದಿಂದ ಸಾರುತ್ತದೆ.

ವೇದವು ಭಾರತೀಯ ಧರ್ಮ ಹಾಗೂ ದರ್ಶನದ ಮತ್ತು ಸಂಸ್ಕೃತಿಯ ಪರಮಪ್ರಾಣವಾಗಿದೆ. ಸನಾತನವಾದ ವೈದಿಕಧರ್ಮಕ್ಕೆ ವೇದವಿರೋಧಿಗಳು ಕಾಲಕಾಲಕ್ಕೆಸಗಿದ ಆಕ್ರಮಣದಿಂದ ವೈದಿಕ ಮರ್ಯಾದೆಯು ಅಸ್ತವ್ಯಸ್ತವಾಗಿ ಧಕ್ಕೆ ಉಂಟಾದ ಒಂದು ವಿಷಮಪರಿಸ್ಥಿತಿಯಲ್ಲಿ ಶ್ರೀ ಶಂಕರಭಗವತ್ಪಾದರ ಆವಿರ್ಭಾವ-ವಾಯಿತು. ಆಚಾರ್ಯರು ಅಪ್ರತಿಮವಾದ ವೈದುಷ್ಯ ಮತ್ತು ಭಾಷ್ಯಗಳ ರಚನಾ ಶೈಲಿಗಳಿಂದ ಸಮಸ್ತ ವೇದಾಂತ ವಾಕ್ಯಗಳಿಗೆ ಅದ್ವಿತೀಯಬ್ರಹ್ಮವಸ್ತುವಿನಲ್ಲಿ ಸಮನ್ವಯವನ್ನು ಮಾಡಿ ಬ್ರಹ್ಮಾತ್ಮೈಕತ್ವದ ಸಿದ್ಧಾಂತವನ್ನು ಸಾರಿದ್ದಾರೆ. ಇದರಿಂದಾಗಿ ಪ್ರತ್ಯೇಕ ಮಾನವನಿಗೆ ಅಂಧಕಾರದಿಂದ ಆತ್ಮಜ್ಯೋತಿಯ ಕಡೆಗೆ ಹೋಗಲು ಪ್ರಬಲವೂ ಮಂಗಲಕರವೂ ಆದ ಪ್ರೇರಣೆ ದೊರಕಿದೆ. ಭಾರತ ಭೂಮಿಯಲ್ಲಿ ಇಂದಿಗೆ ವೈದಿಕ ಸಂಸ್ಕೃತಿಯ ಅವಶೇಷವೇನಾದರೂ ಇರುವುದಾದರೆ ಅದು ಶ್ರೀ ಶಂಕರಭಗವತ್ಪಾದರ ಕೊಡುಗೆಯೆಂದು ನಿಸ್ಸಂದಿಗ್ಧವಾಗಿ ಹೇಳಬಹುದು.

ಆತ್ಮಾನುಭವವು ಸ್ವರೂಪವೇ ಆಗಿರುವುದರಿಂದ ಸ್ವಯಂಸಿದ್ಧವಾಗಿದೆ. ''ಸತ್ಯಂ ಜ್ಞಾನಮನಂತಂ ಬ್ರಹ್ಮ'' ಎಂದು ಮುಂತಾದ ಶ್ರುತಿವಚನಗಳು ಈ ವಿಷಯವನ್ನು ಪ್ರಮಾಣೀಕರಿಸುತ್ತವೆ. ಈ ಜಗತ್ತು ಜಡಭೂತವಾಗಿರುವುದರಿಂದ ಅನುಭೂತಿಯ ಮೇಲೆ ಅವಲಂಬಿತವಾಗಿದೆ. ಜ್ಞಾನವು ಎರಡು ವಿಧವಾಗಿರುತ್ತದೆ. ಒಂದು ಅಂತಃಕರಣ ವೃತ್ತಿರೂಪವಾದುದು. ಮತ್ತೊಂದು ಸ್ವರೂಪಭೂತವಾದದು. ನಾಮರೂಪಾತ್ಮಕವಾದ ಈ ಜಗತ್ತಿನ ಜ್ಞಾನವು ಅಂತಃಕರಣ ವೃತ್ತಿರೂಪವಾದುದು. ಆದುದರಿಂದ ಅದು ಅನಿತ್ಯವೂ ಜಡವೂ ಆಗಿದೆ. ಸ್ವರೂಪಾತ್ಮಕವಾದ ಜ್ಞಾನವು ನಿತ್ಯವಾದ ಆತ್ಮಸ್ವರೂಪವಾಗಿದೆ. ''ನ ದ್ರಷ್ಟುಃ ದೃಷ್ಟೇಃ ವಿಪರಿಲೋಪೋವಿದ್ಯತೇ''-(ದ್ರಷ್ಟೃವಿನ ಸ್ವರೂಪಾತ್ಮಕವಾದ ಜ್ಞಾನವೆಂಬ ದೃಷ್ಟಿಗೆ ನಾಶವಿಲ್ಲ) ಎಂದು ಶ್ರುತಿಯು ಸಾರುತ್ತದೆ. ಜೀವ-ಬ್ರಹ್ಮರ ಭೇದವು ಪಾರಮಾರ್ಥಿಕವಲ್ಲ, ಅದು ಕೇವಲ ಔಪಾಧಿಕವಾದುದು. ''ತತ್ತ್ವಮಸಿ'' ಮುಂತಾದ ವೇದಾಂತ ವಚನಗಳಿಂದ ಚೆನ್ನಾಗಿ ಮನನ ಮಾಡಿ ಈ ತತ್ತ್ವವನ್ನು ಅರಿಯಬೇಕು. ''ಯೋವೈ ಭೂಮಾ ತದಮೃತಮಥ ಯದಲ್ಪಂ ತನ್ಮರ್ತ್ಯಮ್'' (ಭೂಮವೇ ಅಮೃತ. ಅಲ್ಪವಾದುದು ನಶ್ವರ), ''ಆನಂದಂ ಬ್ರಹ್ಮಣೋ ವಿದ್ವಾನ್ । ನಬಿಭೇತಿ ಕುತಶ್ಚನ'' (ಬ್ರಹ್ಮಾನಂದವನ್ನು ಅನುಭವಿಸಿದ ವಿದ್ವಾಂಸನು ಯಾವುದರಿಂದಲೂ ಭಯಪಡುವುದಿಲ್ಲ) - ಮುಂತಾದ ಶ್ರುತಿವಚನಗಳು ಮನುಷ್ಯಮಾತ್ರನಿಗೆ ಚರಮಲಕ್ಷ್ಯವಾದ ಆತ್ಯಂತಿಕ ದುಃಖನಿವೃತ್ತಿ

ಹಾಗೂ ನಿತ್ಯನಿರತಿಶಯವಾದ ಆನಂದಪ್ರಾಪ್ತಿಗೆ ಸ್ಫೂರ್ತಿದಾಯಕವಾದ ಪ್ರೇರಣೆಯನ್ನು ನೀಡುತ್ತಿವೆ. ಇದು ಬ್ರಹ್ಮಸಾಕ್ಷಾತ್ಕಾರಮಾತ್ರದಿಂದ ಆಗುತ್ತದೆ.

ಈ ವಿಷಯವನ್ನು ಆಚಾರ್ಯ ಶಂಕರರು ಪ್ರಸನ್ನ ಗಂಭೀರವಾದ ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಹಾಗೂ ಇತರ ಪ್ರಕರಣ ಗ್ರಂಥಗಳಲ್ಲಿ ಆತ್ಮವಿಶ್ವಾಸ-ಪೂರ್ವಕವಾಗಿ ನಿರೂಪಿಸಿದ್ದಾರೆ. ವೇದಾಂತ ವಚನಗಳ ಯಥಾರ್ಥವಾದ ಅರ್ಥ ಮತ್ತು ಅರ್ಥಾಭಾಸಗಳನ್ನು ನೀರಕ್ಷೀರ ವಿವೇಕದಿಂದ ತೋರಿಸಿಕೊಟ್ಟ ಪರಮಹಂಸ-ಧೀರರು ಶ್ರೀ ಶಂಕರರು. ಶ್ರೀ ಶಂಕರಭಗವತ್ಪಾದರ ಪ್ರಸ್ಥಾನತ್ರಯ ಭಾಷ್ಯಗಳ ಅಧ್ಯಯನ, ಶ್ರವಣ, ಮನನಗಳಿಂದ ತತ್ತ್ವಜಿಜ್ಞಾಸುಗಳಾದ ಸಜ್ಜನರು ಆತ್ಮಾನುಭವವನ್ನು ಹೊಂದಿ ದೇವದುರ್ಲಭವಾದ ಮಾನವ ಜೀವನವನ್ನು ಧನ್ಯವನ್ನಾಗಿಯೂ ಸಾರ್ಥಕವನ್ನಾಗಿಯೂ ಮಾಡಿಕೊಳ್ಳುತ್ತಾರೆ.

ಶ್ರೀಶಂಕರರ ಭಾಷ್ಯಗಳು ಸಂಸ್ಕೃತ ಭಾಷೆಯಲ್ಲಿವೆ. ಸಂಸ್ಕೃತಭಾಷೆ, ಶಾಸ್ತ್ರ ಪರಿಜ್ಞಾನ ಮತ್ತು ಉತ್ತಮ ಸಂಸ್ಕಾರವುಳ್ಳವರಿಗೆ ಅವರ ಭಾಷ್ಯಗಳ ಸುಧಾರಸಾಸ್ವಾದವು ಸಾಧ್ಯವಾಗುತ್ತದೆ. ಸಂಸ್ಕೃತ ಭಾಷೆಯನ್ನು ತಿಳಿಯದವರಿಗೆ ಅವುಗಳ ಅಮೃತದ ಔತಣವು ದುರ್ಲಭವಾಗುತ್ತದೆ. ಕರ್ಣಾಟಕದೇಶದ ತತ್ತ್ವಜಿಜ್ಞಾಸುಗಳಿಗೆ ಅಭಿನವಶಂಕರರಾಗಿ ಜನ್ಮತಾಳಿದ ಬ್ರಹ್ಮೀಭೂತರಾದ ಪರಮಪೂಜ್ಯ **ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು** ಶಾಂಕರವೇದಾಂತದ ಪ್ರತಿನಿಧಿ ಸ್ವರೂಪರಾಗಿ ಬೆಳಗಿದ ಮಹಾತ್ಮರು. ಶಾಂಕರವೇದಾಂತದ ಪ್ರಚಾರಕ್ಕಾಗಿಯೇ ತಮ್ಮ ಸಂಪೂರ್ಣ ಜೀವನವನ್ನು ಮುಡುಪಾಗಿಟ್ಟ ಮಹಾಮನೀಷಿಗಳು ಶ್ರೀಶ್ರೀ ಸ್ವಾಮಿಗಳು. ಶಾಂಕರವೇದಾಂತ ಕ್ಷೇತ್ರದಲ್ಲಿ ಅವರ ಅಸಂಖ್ಯಾತವಾದ ಕೃತಿಗಳು ಅವರ ವೇದಾಂತಮಯ ಜೀವನವನ್ನು ಪ್ರತಿಬಿಂಬಿಸುತ್ತಾ ಅಮರವಾಗಿ ಬೆಳಗುತ್ತಿವೆ. ಈ ರೀತಿಯ ವೇದಾಂತ ಸಾರಸ್ವತ ಸೇವೆಯಿಂದ ಅವರು ಪುರುಷಸರಸ್ವತಿಯಾಗಿ ಬೆಳಗಿದ್ದಾರೆ. ಕನ್ನಡದೇಶದ ತತ್ತ್ವಜಿಜ್ಞಾಸುಗಳು ಇದಕ್ಕಾಗಿ ಶ್ರೀಶ್ರೀ ಸ್ವಾಮಿಗಳಿಗೆ ಚಿರಋಣಿಗಳಾಗಿದ್ದಾರೆ.

ಶ್ರೀ ಶಂಕರರ ಭಾಷ್ಯಗ್ರಂಥಗಳನ್ನು ಕನ್ನಡದಲ್ಲಿ ಅನುವಾದಮಾಡಿ ಸೂಕ್ತವಾದ ವಿವರಣೆಗಳನ್ನು ಶ್ರೀಶ್ರೀ ಸ್ವಾಮಿಗಳು ತಮ್ಮ ಅಮೋಘವಾದ ಕೃತಿಗಳಲ್ಲಿ ಮಾಡಿದ್ದಾರೆ. ಶ್ರೀಶ್ರೀ ಸ್ವಾಮಿಗಳ ಗ್ರಂಥಗಳಿಂದಲೇ ಸಂಗ್ರಹಿಸಿ ಈ ಶಬ್ದಕೋಶದಲ್ಲಿ ಪಾರಿಭಾಷಿಕ ಶಬ್ದಗಳನ್ನೂ ಅವುಗಳ ಅರ್ಥಸಂಗ್ರಹವನ್ನೂ ಮಾಡಲಾಗಿದೆ. ಶ್ರೀಶಂಕರರ ಭಾಷ್ಯಗಳ ಅರ್ಥನಿರ್ಣಯವನ್ನು ಪಡೆಯಲು ಈ ''ಪಾರಿಭಾಷಿಕ ಶಬ್ದಕೋಶವು'' ಜ್ಞಾನಮಾರ್ಗದೀಪಿಕೆಯಾಗಿದೆಯೆಂದು ಸಂದೇಹವೇ ಇಲ್ಲದೆ ಸಂತೋಷ

ಧೈರ್ಯಗಳಿಂದ ಹೃತ್ಪೂರ್ವಕವಾಗಿ ಪ್ರಶಂಸೆಮಾಡಬಹುದು. ಸಂಗ್ರಹಕಾರರ ಈ ಸೇವೆಯು ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿ ನಿಲ್ಲುತ್ತದೆ.

ವೇದಾಂತಶಾಸ್ತ್ರವು ಅತ್ಯಂತ ಗಹನವಾದುದು. ಸಂದರ್ಭಕ್ಕೆ ಅನುಸಾರವಾಗಿ ಶಬ್ದಗಳ ಅರ್ಥನಿರ್ಣಯವನ್ನು ಮಾಡಬೇಕು. ಆರು ವಿಧವಾದ ತಾತ್ಪರ್ಯ ನಿರ್ಣಾಯಕ ಲಿಂಗಗಳಿಂದ ಪ್ರಕರಣದ ತಾತ್ಪರ್ಯವನ್ನು ನಿಶ್ಚಯಿಸಬೇಕು. ಈ ದಿಶೆಯಲ್ಲಿ ಶ್ರೀ ಶಂಕರರ ನಿರೂಪಣಾ ಸರಣಿಯು ಅಮೋಘವಾದುದು. ವಿದ್ಯೆ, ಅವಿದ್ಯೆ, ಬ್ರಹ್ಮ, ಪರಬ್ರಹ್ಮ, ಅಪರಬ್ರಹ್ಮ, ಆಲಂಬನೋಪಾಸನೆ, ಪ್ರತೀಕೋಪಾಸನೆ, ಸಂನ್ಯಾಸದಸ್ವರೂಪ, ಪ್ರತಿಪತ್ತಿಕರ್ಮ, ಅಧ್ಯಾಸ, ಅದ್ವೈತ, ಕರ್ಮ, ಉಪಾಸನಾ, ಜ್ಞಾನ, ಪೂರ್ವಪ್ರಜ್ಞಾ, ತರ್ಕ, ಆಕಾಶ- ಇತ್ಯಾದಿ ಶಬ್ದಗಳ ಅರ್ಥನಿರ್ಣಯವನ್ನು ಶಾಂಕರಭಾಷ್ಯಾನುಸಾರವಾಗಿ ತಿಳಿಯಲು ಈ ಕೋಶದಿಂದ ಪರಮೋಪಕಾರ ವಾಗುತ್ತದೆ. ಮತ್ತೆ ಮತ್ತೆ ಅವಲೋಕನ ಮಾಡುತ್ತಾ ಅರ್ಥಗಳನ್ನು ಮನನ ಮಾಡುವ ಸುಕೃತಿಗಳು ಶಾಂಕರವೇದಾಂತದ ಅಮೃತವನ್ನು ಸವಿದು ಧನ್ಯರಾಗುತ್ತಾರೆ. ಗುರಿತಪ್ಪಿ ಹುಚ್ಚುಹೊಳೆಯಂತೆ ಹರಿಯುತ್ತಿರುವ ಇಂದಿನ ಜೀವನದಲ್ಲಿ ಯಥಾರ್ಥವಾದ ಶಾಂತಿಯನ್ನು ಹೊಂದಲು ವೇದಾಂತವೊಂದೇ ರಕ್ಷಣಾಧಾರವಾಗಿದೆ. ಋಷಿಗಳು ಅನುಭವಿಸಿದ ಸತ್ಯಸಾಕ್ಷಾತ್ಕಾರದ ಬೆಳಕು ಅಜ್ಞಾನಾಂಧಕಾರವನ್ನು ಹೋಗಲಾಡಿಸಿ ಮಾನವ ಜೀವನದ ಲಕ್ಷ್ಯದ ಕಡೆಗೆ ಒಯ್ಯುತ್ತದೆ. ಅದಕ್ಕಾಗಿ ಈ ಕೋಶವು ಒಂದು ಜ್ಞಾನಕೋಶವೇ ಆಗಿದೆ. ತತ್ತ್ವಜಿಜ್ಞಾಸುಗಳು ಇದರಿಂದ ಜ್ಞಾನಾಮೃತವನ್ನು ಸವಿದು ಸತ್ಯದ ಬೆಳಕಿನತ್ತ ಸಾಗುವಂತಾಗಲಿ. ಕನ್ನಡದಲ್ಲಿ ಇಂತಹ ಒಂದು ಶಬ್ದಕೋಶವು ಅತ್ಯಂತ ಆವಶ್ಯಕವಾಗಿತ್ತು. ಪರಮಪೂಜ್ಯ ಶ್ರೀ ಶ್ರೀಸ್ವಾಮಿಗಳ ಗ್ರಂಥಗಳಿಂದ ಸಂಗ್ರಹಮಾಡಿರುವ ಈ ಶ್ರೀಕೋಶದ ಸಂಗ್ರಹಕಾರರನ್ನೂ ಪ್ರಕಾಶಕರನ್ನೂ ಭೂರಿಭೂರಿಯಾಗಿ ಪ್ರಶಂಸೆಮಾಡುತ್ತೇನೆ.

''ಬ್ರಹ್ಮವಿದಾಪ್ನೋತಿ ಪರಮ್''

''ಸತ್ಯಂ ಜ್ಞಾನಮನಂತಂ ಬ್ರಹ್ಮ''

''ಸಯೋ ಹ ವೈ ತತ್ ಪರಮಂ ಬ್ರಹ್ಮವೇದ ಬ್ರಹ್ಮೈವಭವತಿ''

ಬೆಂಗಳೂರು

ದಿನಾಂಕ: ೨೪-೧೧-೨೦೦೩

**ವಿದ್ವಾನ್ ಶೇಷಾಚಲಶರ್ಮಾ**

ನಿವೃತ್ತಸಂಸ್ಕೃತ ಪ್ರಾಧ್ಯಾಪಕ

# ಪ್ರಕಾಶಕರ ಬಿನ್ನಹ

ಸುತ್ತಲಿನ ಕನ್ನಡ ಜನತೆಗೆ ಭಾರತೀಯ ಸಂಸ್ಕೃತಿಯ ಮಕುಟ ಮಣಿ ಎನಿಸಿರುವ ವೇದಾಂತ ಸಿರಿಸಂಪತ್ತನ್ನು ಸುಲಲಿತವಾದ ಕನ್ನಡದಲ್ಲಿ ಹಂಚುವ ಪ್ರಧಾನ ಉದ್ದೇಶದಿಂದಲೇ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತಿಸ್ವಾಮಿಗಳವರು ಅಧ್ಯಾತ್ಮ ಪ್ರಕಾಶ ಕಾರ್ಯಾಲಯವನ್ನು ಸ್ಥಾಪಿಸಿ, ತಮ್ಮ ಧ್ಯೇಯವನ್ನು ಅರ್ಧಶತಮಾನಕ್ಕೂ ಹೆಚ್ಚಿನ ದೀರ್ಘಕಾಲದ ಅವಿರತ ಜ್ಞಾನತಪಸ್ಸಿನಿಂದ ಸಾರ್ಥಕಪಡಿಸಿದರು ; ಎಡೆಬಿಡದ ಪ್ರವಚನಗಳು, ಲೇಖನಗಳು, ಮಾಸಪತ್ರಿಕೆ ಮತ್ತು ವಿಪುಲವಾದ ಗ್ರಂಥರಾಶಿಗಳಿಂದ ತಮ್ಮ ನಿಗದಿತ ಕಾರ್ಯವನ್ನು ಸಾಧಿಸಿದರು. ಈ ಎಲ್ಲ ಸಾಹಿತ್ಯಕ್ಕೂ, ವಿಶೇಷವಾಗಿ ಶ್ರೀ ಶಂಕರ ಭಗವತ್ಪಾದಾಚಾರ್ಯರವರ ಪ್ರಸ್ಥಾನತ್ರಯ ಭಾಷ್ಯಗಳು, ಅಧ್ಯಾತ್ಮ ವಿಚಾರಗಳು, ಉಳಿದಂತೆ ಇತರ ಆಚಾರ್ಯವರ್ಯರ ಬರಹಗಳು ಪ್ರಧಾನ ಸಾಮಗ್ರಿಗಳಾಗಿ ವೇದಾಂತಾಭಿಮಾನಿಗಳಿಗೆ ಅಧ್ಯಾತ್ಮ ದಾರಿ ದೀಪವಾಗಿದೆ. ಹೀಗೆ ಶ್ರೀ ಶಂಕರರ ಪ್ರಸ್ಥಾನಭಾಷ್ಯಗಳ ಗ್ರಂಥಿ ಗ್ರಂಥಿಗಳನ್ನೂ ಎಳೆಎಳೆಯಾಗಿ ಬಿಡಿಸಿ ಶಾಂಕರವೇದಾಂತದ ಮೂಲತಿರುಳನ್ನು ಬೇರೆಕೆಗೆ ಅವಕಾಶವಿಲ್ಲದಂತೆ ಅನುಭವಗಮ್ಯವಾಗಿ ತಿಳಿಸುವ ಪರೋಪಕಾರವನ್ನು ಶ್ರೀಶ್ರೀಗಳು ಮಾಡಿರುತ್ತಾರೆ. ವಿಷಯವನ್ನು ಸ್ಪಷ್ಟವಾಗಿಸುವ ಪೀಠಿಕೆ, ಪರಿಚಯ ಲೇಖನಗಳು, ಪರಿಶಿಷ್ಟಗಳು, ಶಬ್ದಾನುಕ್ರಮಣಿಕೆಗಳು ಮತ್ತು ವಿವರಣೆಗ್ಗಳಿಗೆ ಮೂಲಗ್ರಂಥ ಭಾಗಗಳ ಸೂಚಿಗಳು - ಇವು ಈ ಎಲ್ಲ ಗ್ರಂಥಗಳ ವಿಶಿಷ್ಟತೆಗಳು.

ಅನುಪಮವಾದ ಈ ಪ್ರಧಾನೋದ್ದೇಶವನ್ನು ಶ್ರೀಶ್ರೀಗಳವರು ತೋರಿಸಿ ಕೊಟ್ಟ ಮಾರ್ಗದಲ್ಲಿಯೇ ಕಾರ್ಯಾಲಯದವರು ಮುಂದುವರೆಸಿ ಸತತವಾಗಿ ಗ್ರಂಥಗಳನ್ನು ಪ್ರಕಟಿಸುತ್ತಲೇ ಇದ್ದು, ಹಳೆಯ ಗ್ರಂಥಗಳ ಮರುಮುದ್ರಣವನ್ನೂ ಮಾಡಿಸಿ ಜ್ಞಾನದಾಸೋಹವನ್ನು ನಡೆಸಿರುತ್ತಾರೆ. ಈ ಗ್ರಂಥವೂ ಸಹಿತ ಪೂರ್ಣವಾಗಿ ಶ್ರೀಶ್ರೀಗಳವರ ಕೃತಿಯೇ ಆಗಿದ್ದು, ಅಧ್ಯಾತ್ಮ ಸಾಧಕರಿಗೂ, ಜಿಜ್ಞಾಸುಗಳಿಗೂ ಬಹಳ ಉಪಯುಕ್ತವಾಗುವ ಅಮೂಲ್ಯಗ್ರಂಥ ಎನ್ನುವುದರಲ್ಲಿ ಸಂಶಯವಿಲ್ಲ.

**ಹಿನ್ನೆಲೆ :** ''ಭೌತಿಕ ಸಂಪತ್ತಿನ ಸುಖವನ್ನು ಅನುಭವಿಸುವದಕ್ಕೆ, ಅಧ್ಯಾತ್ಮ (ನಮ್ಮೊಳಗಿನ ಪ್ರಪಂಚದ) ವಿದ್ಯೆಯ ತಳಹದಿಯು ಬೇಕು. ಈ ವಿದ್ಯಾವೃಕ್ಷದ ತಾಯಿಬೇರು ವೇದಾಂತ, ಅದರ ಆವಾಸಸ್ಥಾನ ಉಪನಿಷತ್ಸಿದ್ಧಾಂತ, ಅದನ್ನು ಪರಿಪುಷ್ಟಿಗೊಳಿಸುವದು ಮಿಕ್ಕದರ್ಶನಗಳು.'' ಇಂತಹ ಮೂಲ ಅರಿವಿನಿಂದ ಸಕಲ

ಮಾನವರಿಗೂ ಸುಖ, ಶಾಂತಿ, ಆನಂದವನ್ನು ಕೊಡುವ ವೇದ, ಉಪನಿಷತ್ತುಗಳಲ್ಲಿ ಅಡಗಿರುವ ಪವಿತ್ರವಾದ ಭಾರತ ಸಂಸ್ಕೃತಿಯನ್ನು, ಅಧ್ಯಾತ್ಮ ವಿದ್ಯೆಯನ್ನು ಶುದ್ಧವಾಗಿ, ತಿಳಿಯಾಗಿ, ಎಲ್ಲರ ಒಳಿತಿಗಾಗಿ ಕನ್ನಡದಲ್ಲಿ ಪ್ರಸಾರ ಮಾಡಲೆಂದೇ ಭಾಷ್ಯಾನುವಾದಗಳು, ವಿಮರ್ಶಾತ್ಮಕ ವಿವರಣೆಗಳು ಮುಂತಾದ ವಿವಿಧ ಪ್ರಾಕಾರಗಳ ೧೮೦ಕ್ಕೂ ಹೆಚ್ಚಿನ ಗ್ರಂಥಗಳನ್ನು ಬರೆದು ಪ್ರಕಟಿಸಿದುದು ಶ್ರೀಗಳವರ ಅಭೂತಪೂರ್ವ ಕಾರ್ಯ. ವಿಶೇಷವಾಗಿ ಶ್ರೀಶಂಕರ ಭಾಷ್ಯಗಳು ಪ್ರಧಾನವಾದ ಈ ಬರಹಗಳು ಪ್ರೌಢಿಮೆಯಿಂದ ವಿದ್ವಾಂಸರಿಗೆ ಮಾನ್ಯವೂ, ಸರಳತೆಯಿಂದ ಸಾಮಾನ್ಯರಿಗೆ ಪ್ರಿಯವೂ, ಸ್ಫುಟಮಾರ್ಗೋಪಾಯದಿಂದ ಸಾಧಕರಿಗೆ ಕೈಪಿಡಿಯೂ ಆಗಿವೆ. ''ಈ ಗ್ರಂಥಗಳ ನಿಜವಾದ ಸ್ಥಿತಿಯನ್ನು ತಿಳಿಯಲು ತಮ್ಮ ಅಭಿಪ್ರಾಯಗಳನ್ನು ಬೆರೆಸದೆ, ವ್ಯಾಖ್ಯಾನಗಳ ವಿಸ್ತಾರದಿಂದ ಮೂಲವೇ ಮರೆತು ಹೋಗದಂತೆ, ತಕ್ಕ ಟಿಪ್ಪಣಿಗಳ ಸಮೇತ ಇರುವ ಮೂಲದ ಸಾಕ್ಷಾದನುವಾದಗಳು ಉಪಯುಕ್ತವಾಗುವವು. ಶ್ರೀ ಶಂಕರಾಚಾರ್ಯರ ಭಾಷ್ಯಗಳಲ್ಲಿ ಉಪಯೋಗಿಸಿರುವ ಕೆಲವು ಶಬ್ದಗಳನ್ನೂ, ನುಡಿಗಟ್ಟುಗಳನ್ನೂ ವಿವರಿಸಿದರೆ, ಶಂಕರಾಚಾರ್ಯರ ವೇದಾಂತ ಪ್ರಕ್ರಿ ಸಾಧಾರಣ ರೂಪವನ್ನು ತಿಳಿದುಕೊಳ್ಳಬೇಕೆನ್ನುವವರಿಗೆ

ಎಂಬ ನಂಬಿಕೆಯಿಂದ, ಗ್ರಂಥವನ್ನೋದುವ ಸಾಮಾನ್ಯರಿಗೂ ಸಾಕಷ್ಟು ಹೆಚ್ಚಿನ ಮಟಿಗೆ ನೆರವಾಗುವ ಉದ್ದೇಶದಿಂದ, ಶ್ರೀ ಶ್ರೀಗಳು ಶ್ರೀಶಂಕರರ ಪ್ರಸ್ಥಾನತ್ರಯ ಭಾಷ್ಯ ಗ್ರಂಥಗಳ, ಶ್ರೀ ಶಂಕರರ ಶಿಷ್ಯರಾದ ಶ್ರೀ ಸುರೇಶ್ವರರ **ನೈಷ್ಕರ್ಮ್ಯಸಿದ್ಧಿಯ** ಪರಿಶಿಷ್ಟಗಳಲ್ಲಿರುವ ಶಬ್ದಕೋಶಗಳನ್ನೂ ಮತ್ತು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ ಸಂಪುಟಗಳು ೧೭ರಿಂದ ೨೦ರ ವರೆಗಿನ - ಅಕ್ಟೋಬರ್ ೧೯೪೩ ರಿಂದ ಆಗಸ್ಟ್ ೧೯೫೦ರ - ಸಂಚಿಕೆಗಳಲ್ಲಿರುವ **ಶಾಂಕರವೇದಾಂತನಿಘಂಟುವಿನ** ಶಬ್ದಗಳನ್ನೂ ಬರೆದು ಸೇರಿಸಿದರು. ಹೀಗೆ ಹೊರಬಂದ ಅರ್ಥವಿವರಣಾಪಟ್ಟಿಯೇ ಈ ಗ್ರಂಥದ ಮೂಲ ಬಂಡವಾಳ. ಕ್ರೋಢೀಕೃತ ಸಂಕಲನದ ಸದುಪಯೋಗವೇ ಅದಕ್ಕಿರುವ ಸಾರ್ಥಕತೆ, ಶ್ರೀ ಶ್ರೀಗಳವರ ಉದ್ದೇಶ ಸಾಧನೆ.

ಎಂದಿನಂತೆ ತಮ್ಮ ಸೊಗಸಾದ ವಿಮರ್ಶೆ ಮತ್ತು ವಿವರಣಾತ್ಮಕ ಮುನ್ನುಡಿಯಿಂದ ಗ್ರಂಥಕ್ಕೆ ಮೆರುಗನ್ನು ನೀಡಿರುವ ಹಿರಿಯರು, ವಿದ್ವನ್ಮಣಿ ಶ್ರೀ ಎಸ್.ಕೆ. ರಾಮಚಂದ್ರರಾಯರು ಮತ್ತು ಶ್ರೀ ಶಂಕರರ ಅಮೂಲ್ಯ ಕೊಡುಗೆ ಹಾಗೂ ಗ್ರಂಥದ ಉಪಯುಕ್ತತೆಯನ್ನು ಕುರಿತಂತೆ ಪ್ರಸ್ತಾವನೆಯನ್ನು ನೀಡಿರುವ ಹಿರಿಯ ವಿದ್ವಾಂಸರು ಶ್ರೀಶೇಷಾಚಲಶರ್ಮರು, ಇವರುಗಳಿಗೆ ಕಾರ್ಯಾಲಯವು ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಅರ್ಪಿಸುತ್ತದೆ. ಇಂತಹ ಗೌರವಾನ್ವಿತ ಹಿರಿಯರ

ಸೌಜನ್ಯ, ಅಭಿಮಾನಗಳು ಕಾರ್ಯಾಲಯಕ್ಕೊದಗಿರುವ ಅನುಪಮ ಅನುಗ್ರಹದ ಲಾಭ.

ಇಂತಹ ವಿಶೇಷ ಸೌಲಭ್ಯದ ಗ್ರಂಥದ ಯೋಜನೆಯನ್ನು ಸಿದ್ಧಗೊಳಿಸಿ, ಸಂಪಾದಕತ್ವ ಕಾರ್ಯವನ್ನು ಸುಗಮವಾಗಿ ನೆರವೇರಿಸಿಕೊಟ್ಟ ಮಾನ್ಯ ಶ್ರೀ ಡಿ. ಗಣಪತಿ ಶಾಸ್ತ್ರಿಗಳಿಗೂ, ಕರಡು ಪ್ರತಿಯನ್ನು ತಿದ್ದಿ ಪರಿಷ್ಕರಿಸಿಕೊಟ್ಟ ಶ್ರೀ ಜಿ.ಆರ್. ಸತ್ಯನಾರಾಯಣ (ಗಜಾನನ), ಪಂಡಿತ ಪ್ರಧಾನರು ವೇ|| ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ, ವೇ|| ಶ್ರೀ ಎಂ.ಎಸ್. ಚಂದ್ರಮೌಳಿ ಅವಧಾನಿಗಳಿಗೂ ಮತ್ತು ಗ್ರಂಥ ಪ್ರಕಟಣೆಗೆ ಔದಾರ್ಯದಿಂದ ಸಹಾಯ ಮಾಡಿರುವ ಅಭಿಮಾನಿ ದಾನಿಗಳಿಗೂ, ಕಾರ್ಯಾಲಯವು ಶ್ರೀ ಶ್ರೀಗಳವರ ಆಶೀರ್ವಾದಾನುಗ್ರಹದಿಂದ ಸಕಲ ಸನ್ಮಂಗಳಗಳನ್ನೂ ಪ್ರಾರ್ಥಿಸಿ ಕೃತಜ್ಞತಾ ಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸುತ್ತದೆ.

ತಮ್ಮ ಹತ್ತುವರ್ಷಗಳ ಅವಧಿಯಲ್ಲಿ ಕಾರ್ಯಾಲಯದ ಪ್ರಕಟಣೆಗಳ ಮರುಮುದ್ರಣ, ವೇದಾಂತ ಶಿಬಿರ - ಸಪ್ತಾಹಗಳನ್ನು ಅತಿಶಯವಾಗಿ ನಡೆಸಿರುವ ವಿಶ್ವಸ್ತ ಸಮಿತಿಯ ಹಿಂದಿನ ಅಧ್ಯಕ್ಷರಾದ ಶ್ರೀ ಹೆಚ್. ವೆಂಕಟನರಸಪ್ಪನವರು, ಈ ಸಂಕಲನವು ಹೆಚ್ಚು ಉಪಯೋಗವಾಗುವಂತೆ ಮೂಲಕೋಶ ಮತ್ತು ಪರಿಶಿಷ್ಟಗಳೆರಡನ್ನೂ ಒಟ್ಟುಗೂಡಿಸಿ ಸಾರ್ಥಕ್ಯವನ್ನು ನೀಡಲು ಮೊದಲಿನಂತೆಯೇ ಹಗಲಿರುಳೂ ಶ್ರಮಿಸಿದ್ದಾರೆ. ಅವರ ಅಪ್ರತಿಮಸೇವೆಯನ್ನು ಕಾರ್ಯಾಲಯವು ತುಂಬು ಹೃದಯದಿಂದ ಸ್ಮರಿಸುತ್ತದೆ.

ಹಾಗೆಯೇ ಈ ಗ್ರಂಥವನ್ನು ಶ್ರೀಶ್ರೀಗಳವರ ಮತ್ತು ಕಾರ್ಯಾಲಯದ ಇತರ ಪ್ರಕಟಣೆಗಳಂತೆ ಪ್ರೀತಿಯಿಂದ ಸ್ವಾಗತಿಸಿ, ಶ್ರದ್ಧೆಯಿಂದ ಉಪಯೋಗಮಾಡಿ-ಕೊಳ್ಳುವದರ ಮೂಲಕ ನಮ್ಮ ಕಾರ್ಯವನ್ನು ಸಫಲ ಸಾರ್ಥಕಗೊಳಿಸುವ ವೇದಾಂತಾಸಕ್ತ ಓದುಗರಿಗೆ ಧನ್ಯವಾದದ ವಂದನೆಗಳು.

೧೬-೧೧-೨೦೦೩, ಸ್ವಭಾನು ಸಂವತ್ಸರ
ಕಾರ್ತಿಕ ಬಹುಳ ಸಪ್ತಮಿ, ಭಾನುವಾರ

ಪ್ರಕಾಶಕರು
ಹೊಳೆನರಸೀಪುರ

## ಈ ಪುಸ್ತಕ ಪ್ರಕಟನೆಗೆ ದಾನ ನೀಡಿರುವ ಉದಾರಾಶ್ರಯದಾತರ ವಿವರ

| ಕ್ರಮ ಸಂಖ್ಯೆ | ಹೆಸರು | ಸ್ಥಳ | ಜಮಾ |
|---|---|---|---|
| | ಶ್ರೀಯುತ/ಶ್ರೀಮತಿ | | |
| ೧. | ಟಿ.ಆರ್. ಚಂದ್ರಶೇಖರ್ | ಬೆಂಗಳೂರು | ೫,೦೦೦ ರೂ. |
| ೨. | ಡಾ॥ ತ್ರಿಯಂಬಕ್ | ಬೆಂಗಳೂರು | ೨,೫೦೦ ರೂ. |
| ೩. | ಡಾ॥ ಹೆಚ್.ವಿ. ನಾಗಪ್ರಸಾದ್ | ಬೆಂಗಳೂರು | ೨,೫೦೦ ರೂ. |
| ೪. | ಎಮ್.ವಿ. ಶ್ರೀಧರ್ | ಬೆಂಗಳೂರು | ೨,೦೦೦ ರೂ. |
| ೫. | ಜಿ.ಆರ್. ಮಹಾಲಿಂಗೇಗೌಡ | ಗಂಗನಘಟ್ಟ | ೧,೫೦೦ ರೂ. |
| ೬. | ಬಿ.ಆರ್. ನಾರಾಯಣಹೊಳ್ಳ | ಶಿವಮೊಗ್ಗ | ೧,೫೦೦ ರೂ. |
| ೭. | ಕ್ಯಾಪ್ಟನ್ ಎಲ್.ಎನ್. ಸಿಂಗ್ | ಲಕ್ನೊ | ೧,೦೦೧ ರೂ. |
| ೮. | ಶ್ರೀ ಶಾರದಾ ವಿದ್ಯಾ ಪ್ರತಿಷ್ಠಾನ | ಬೆಂಗಳೂರು | ೧,೦೦೧ ರೂ. |
| ೯. | ದೀನಬಂಧು ದೇವಸ್ಥಾನಮ್ (ಚಿನ್ಮಯ ಮಿಷನ್) | ಬೆಂಗಳೂರು | ೧,೦೦೦ ರೂ. |
| ೧೦. | ಬಿ.ಕೆ. ಅನಂತರಾಮಯ್ಯ | ಮುಂಬಯಿ | ೧,೦೦೦ ರೂ. |
| ೧೧. | ಕೆ.ಟಿ. ಅನಂತಸುಬ್ಬರಾವ್ | ಬೆಂಗಳೂರು | ೬೦೦ ರೂ. |
| ೧೨. | ಟಿ. ಅಶ್ವತ್ಥನಾರಾಯಣರಾವ್ | ಬೆಂಗಳೂರು | ೫೦೧ ರೂ. |
| ೧೩. | ಬಿ.ಆರ್. ಸತ್ಯನಾರಾಯಣ (ಗಜಾನನ) | ಬೆಂಗಳೂರು | ೫೦೧ ರೂ. |
| ೧೪. | ಕೆ.ಪಿ. ಗೋಪಾಲಕೃಷ್ಣಭಟ್ಟ (ಮಾತಾಪಿತೃಗಳ ಸ್ಮರಣಾರ್ಥ) | ಬೆಂಗಳೂರು | ೫೦೧ ರೂ. |
| ೧೫. | ಡಿ. ಗಣಪತಿ ಶಾಸ್ತ್ರಿ | ಬೆಂಗಳೂರು | ೫೦೦ ರೂ. |
| ೧೬. | ನಾಗಲಕ್ಷ್ಮಿ ಸೂರ್ಯನಾರಾಯಣ | ಬೆಂಗಳೂರು | ೫೦೦ ರೂ. |
| ೧೭. | ಲಕ್ಷ್ಮಿ ಆರ್. ಯಾಜಿ | ಚಿಕ್ಕಮಗಳೂರು | ೫೦೦ ರೂ. |
| ೧೮. | ಲಲಿತ ಎ. ರಾವ್ | ಹಾಸನ | ೩೦೧ ರೂ. |
| ೧೯. | ಬಿ.ಎನ್. ಶ್ರೀನಿವಾಸಭಟ್ಟ | ಬೆಂಗಳೂರು | ೨೫೧ ರೂ. |
| ೨೦. | ಡಾ॥ ಬಿ.ಎನ್.ಎಸ್. ರಾವ್ | ಬೆಂಗಳೂರು | ೨೫೧ ರೂ. |
| ೨೧. | ಎಸ್.ಕೆ. ಮುತ್ತಣ್ಣ | ಮೈಸೂರು | ೨೫೦ ರೂ. |
| ೨೨. | ಬಿ.ಟಿ. ದಂಡವತಿ | ಹೊಂಬಳ | ೨೫೦ ರೂ. |
| ೨೩. | ಡಾ॥ ರತ್ನ ಎನ್. ರಾವ್ | ಪುಣೆ | ೨೫೦ ರೂ. |
| ೨೪. | ನಾಗರತ್ನಮ್ಮ - ವಿಶ್ವನಾಥಶ್ರೇಷ್ಠಿ | ತಿಪಟೂರು | ೨೫೦ ರೂ. |
| ೨೫. | ಎ.ಆರ್ ಸೀತಾರಾಮ್ | ಬೆಂಗಳೂರು | ೨೫೦ ರೂ. |
| ೨೬. | ಶ್ರೀಮತಿ ರೂಪಾಲಿ ಜಿ. ಧಾಕಪ್ಪ | ಮುಂಬಯಿ | ೨೫೦ ರೂ. |
| | | ಒಟ್ಟು | ೨೪೯೦೮ ರೂ. |

ಉದಾರವಾಗಿ ಧನಸಹಾಯಮಾಡಿದ ಮೇಲ್ಕಂಡ ದಾನಿಗಳಿಗೆಲ್ಲಾ ಕಾರ್ಯಾಲಯದ ಪರವಾಗಿ ಕೃತಜ್ಞತಾ ಪೂರ್ವಕವಾದ ವಂದನೆಗಳು.

# ಸಂಕೇತಾಕ್ಷರಗಳ ವಿವರಣೆ

| ಸಂಕೇತಾಕ್ಷರ | ವಿವರಣೆ | ಮುದ್ರಣ | ಇಸವಿ |
|---|---|---|---|
| ಬ್ರ.ಸೂ-೧ | ಬ್ರಹ್ಮಸೂತ್ರಭಾಷ್ಯ ಸಂಪುಟ ೧ | III | 1998 |
| ಬ್ರ.ಸೂ-೨ | ಬ್ರಹ್ಮಸೂತ್ರಭಾಷ್ಯ ಸಂಪುಟ ೨ | III | 1998 |
| ಈಶ. | ಈಶಾವಾಸ್ಯೋಪನಿಷತ್ತು | V | 1997 |
| ಕೇನ. | ಕೇನೋಪನಿಷತ್ತು | V | 1994 |
| ಕಠ. | ಕಠೋಪನಿಷತ್ತು ; ಕಾಠಕೋಪನಿಷತ್ತು | V | 2002 |
| ಮುಂ. | ಮುಂಡಕೋಪನಿಷತ್ತು | IV | 1999 |
| ಪ್ರಶ್ನ. | ಪ್ರಶ್ನೋಪನಿಷತ್ತು | IV | 1992 |
| ಮಾಂ. | ಮಾಂಡೂಕ್ಯೋಪನಿಷತ್ತು | V | 2002 |
| ಐತ. | ಐತರೇಯೋಪನಿಷತ್ತು | III | 1993 |
| ತೈ. | ತೈತ್ತಿರೀಯೋಪನಿಷತ್ತು | III | 1998 |
| ಛಾಂ. | ಛಾಂದೋಗ್ಯೋಪನಿಷತ್ತು | II | 1986 |
| ಬೃಹ-೧ | ಬೃಹದಾರಣ್ಯಕೋಪನಿಷತ್ತು - ಭಾಗ ೧ | III | 2002 |
| ಬೃಹ-೨ | ಬೃಹದಾರಣ್ಯಕೋಪನಿಷತ್ತು - ಭಾಗ ೨ | III | 2002 |
| ಭ.ಗೀ. | ಶ್ರೀಮದ್ಭಗವದ್ಗೀತಾಭಾಷ್ಯ | VI | 1997 |
| ನೈ. | ನೈಷ್ಕರ್ಮ್ಯಸಿದ್ಧಿ | I | 1951 |
| ಶಾಂ. ನಿ. | ಶ್ರೀಶಾಂಕರವೇದಾಂತ ನಿಘಂಟು (ಶ್ರೀಶ್ರೀಗಳವರು ೧೯೪೭ರಿಂದ ೧೯೫೦ರವರೆಗೆ ಅ.ಪ್ರ. ಪತ್ರಿಕೆಗಳಲ್ಲಿ ಪ್ರಕಟಿಸಿರುವ ಶಬ್ದಗಳ ಸಂಕಲನ) | | |

ವಿ.ಸೂ. : ಕಾರ್ಯಾಲಯದಿಂದ ಪ್ರಕಾಶನಗೊಂಡಿರುವ ಮೇಲೆ ಸೂಚಿಸಿರುವ ಮುದ್ರಣಗ್ರಂಥಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡಿದೆ.

# ಓದುಗರಿಗೆ

## ಈ ಗ್ರಂಥದಲ್ಲಿ

೧. ಶ್ರೀಶಂಕರಾಚಾರ್ಯರ ಬ್ರಹ್ಮಸೂತ್ರ ಭಾಷ್ಯ, ದಶೋಪನಿಷತ್ತುಗಳು, ಭಗವದ್ಗೀತೆ ಹಾಗೂ ಶ್ರೀ ಸುರೇಶ್ವರಾಚಾರ್ಯರ ನೈಷ್ಕರ್ಮ್ಯಸಿದ್ಧಿ ಗ್ರಂಥಗಳಲ್ಲಿರುವ ಪ್ರಧಾನ ಶಬ್ದಗಳನ್ನು ಈ ಗ್ರಂಥದಲ್ಲಿ ಅಳವಡಿಸಿದೆ.

೨. ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಗಳಲ್ಲಿ ಅಕ್ಷರಾನುಕ್ರಮವಾಗಿ **ಶಾಂಕರವೇದಾಂತ ನಿಘಂಟು** ಎಂಬ ಲೇಖನಗಳಲ್ಲಿ ಪ್ರಕಟಿಸಿದ್ದ ಶಬ್ದಗಳ ಅರ್ಥ, ವಿವರಣೆ, ಉಪಯುಕ್ತ ಎಂದು ಕಂಡುಬಂದದ್ದರಿಂದ ಇಲ್ಲಿ ಸೇರಿಸಿದೆ.

೩. ಅಕ್ಷರಾನುಕ್ರಮಣಿಕೆಯಲ್ಲಿ ಶಬ್ದಗಳನ್ನು ಜೋಡಿಸುವಾಗ ಕೈತಪ್ಪಿನಿಂದ ಕೆಲವು ಕಡೆ ಹಿಂದುಮುಂದಾಗಿರಬಹುದು. ದಯವಿಟ್ಟು ಹೊಂದಿಸಿ ಓದಿಕೊಳ್ಳಬೇಕಾಗಿ ವಿನಂತಿ.

೪. ಶಬ್ದಗಳ ಮುಂದೆ ಸೂಚಿಸಿರುವ ಸಂಖ್ಯೆಗಳು ಶಬ್ದವು ಯಾವ ಸಂಸ್ಕೃತ ಭಾಷ್ಯಭಾಗಗಳಲ್ಲಿ ಬಂದಿವೆ ಎಂಬುದನ್ನು ಸೂಚಿಸುತ್ತದೆ.

೫. ಬ್ರ.ಸೂ. ಸಂಪುಟ ಸಂಖ್ಯೆಯ ಮುಂದೆ ಅಡ್ಡಗೀಟು (-) ಹಾಕಿದೆ. ಉದಾಹರಣೆಗೆ : ೧-೨೦೧, ೨೪೩ ; ೨-೩೮೨, ೩೮೩ ; ಎಂದರೆ ಬ್ರಹ್ಮಸೂತ್ರ ಒಂದನೆಯ ಸಂಪುಟದಲ್ಲಿ ೨೦೧, ೩೪೩, ಎರಡನೆಯ ಸಂಪುಟದಲ್ಲಿ ೩೮೨, ೩೮೩ ಭಾಷ್ಯಭಾಗ ಎಂದರ್ಥ.

೬. ವಿವರಣೆಯಲ್ಲಿ ಒಂದು ಶಬ್ದವನ್ನು ಕಪ್ಪಕ್ಷರದಲ್ಲಿ ಮುದ್ರಿಸಿದ್ದರೆ ಅಕ್ಷರಾನುಕ್ರಮಣಿಕೆಯ ಕ್ರಮದಲ್ಲಿ ಮುಂದೆ ಆ ಶಬ್ದವನ್ನು ನೋಡಬೇಕು ಎಂದರ್ಥ.

# ಪಾರಿಭಾಷಿಕ ಶಬ್ದಕೋಶ

## (ಶ್ರೀಶಾಂಕರ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ)

## ಅ

**ಅಂಶಃ - ಭ.ಗೀ.** ಪರಮಾತ್ಮನ ಒಂದಂಶ, ಮಾಯೆಯಿಂದ ಅವತರಿಸಿದ ಶ್ರೀಕೃಷ್ಣ ೧ ; ಪರಮಾತ್ಮನ ಒಂದಂಶದಂತೆ ಇರುವ ಜೀವ, ೯೦೨, ೯೦೩.

**ಅಂಶತ್ರಯಮ್ - ಬೃಹ ೧.** ಏನನ್ನು, ಏತರಿಂದ, ಹೇಗೆ?- ಎಂಬ ಆಕಾಂಕ್ಷೆಯನ್ನು ಪರಿಹರಿಸಲು ಕಾರಣವಾದ ಮೂರು ಅಂಶಗಳು, (ಕರ್ಮಕ್ಕೂ ಉಪಾಸನೆಗೂ ಇವು ಬೇಕಾಗಿರುತ್ತವೆ), ೧೩೫ ; ಹೀಗೂ ಒಂದು ಅರ್ಥಮಾಡುವದೂ ಉಂಟು - *ಆಕಾಂಕ್ಷೆಯನ್ನು ಪರಿಹರಿಸಲು ಕಾರಣವಾದ ಮೂರು ಅಂಶಗಳು.*

**ಅಕರ್ತ್ರಾತ್ಮಬೋಧ - ನೈ.** ಆತ್ಮನು ಕರ್ತೃತ್ವಸ್ವಭಾವದವನಲ್ಲವೆಂಬ ಜ್ಞಾನ; ಇದನ್ನು ಮೀಮಾಂಸಕರು ಒಪ್ಪಿಲ್ಲವಾಗಿ ಅವರ ಮತದಲ್ಲಿ ಅದರಿಂದ ಕರ್ಮವು ಹೋಗುವದೆಂಬುದು ಆಗುವಂತಿಲ್ಲ, ೧-೮೧.

**ಅಕರ್ತೃ - ಭ.ಗೀ.** ಕರ್ತೃವಲ್ಲದ ಬ್ರಹ್ಮ ಅಥವಾ ಆತ್ಮ, ೧೨, ೪೪, ೪೫.

**ಅಕೃತಕರ್ತೃ - ಮಾಂ.** ಮೊದಲೇ ಆಗದಿರುವ ಅರಿವನ್ನುಂಟು ಮಾಡಿಕೊಡತಕ್ಕ (ಶಾಸ್ತ್ರ), ೧೧೫.

**ಅಕೃತ್ಸ್ನ - ಬೃಹ-೧.** ಪೂರ್ಣನಲ್ಲದ, ಪೂರ್ಣನಾದ ಆತ್ಮನಲ್ಲದ ವಕ್ತೃ, ದ್ರಷ್ಟೃ- ಮುಂತಾದ ಪರಿಚ್ಛಿನ್ನರೂಪನು, ೧೩೧, ೧೩೨.

**ಅಕರ್ಮ - ಭ.ಗೀ.** ಕರ್ಮವನ್ನು ಮಾಡದಿರುವದು, ೯೨, ೧೬೭ ; ಕರ್ಮವು ಇಲ್ಲದಿರುವದು, ೨೬೧, ೨೬೨, ೨೬೩., ೨೬೪, ೨೬೫, ೨೭೧, ೨೭೪.

**ಅಕರ್ಮಶೇಷಃ - ಈಶ.** ಕರ್ಮಕ್ಕೆ ಅಂಗವಾಗದ, ಸ್ವತಂತ್ರವಾದ, ೧.

**ಅಕರ್ಮಸಂಬನ್ಧಿ - ಐತ.** ಕರ್ಮಕ್ಕೆ ಸಂಬಂಧಪಡದ ೩.,೪,೫.

ಶ್ರೀ ಶ್ರೀಗಳವರು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ ಸಂಚಿಕೆಗಳಲ್ಲಿ 'ಶಾಂಕರವೇದಾಂತ ನಿಘಂಟು' ಎಂಬ ಶೀರ್ಷಿಕೆಯಿಂದ ಪ್ರಕಟಿಸಿದ್ದ ಶಬ್ದಗಳನ್ನು ಉಪಯುಕ್ತ ಎಂದು ಕಂಡುಬಂದದ್ದರಿಂದ ಈ ಗ್ರಂಥದಲ್ಲಿ ಸೇರಿಸಿದೆ.

**ಅಕರ್ಮಿ - ಐತ.** ಕರ್ಮವನ್ನು ತ್ಯಾಗಮಾಡಿರುವ ಸಂನ್ಯಾಸಿ, ೪.

**ಅಕ್ಷಜಮ್ - ನ್ಯೈ.** ಇಂದ್ರಿಯಗಳಿಂದಾಗುವ ಜ್ಞಾನ, ಇದಕ್ಕೂ ವಾಕ್ಯಜ್ಞಾನಕ್ಕೂ ವಿರೋಧವಿಲ್ಲ, ೩-೮೪.

**ಅಕ್ಷರಮ್ - ಬ್ರ.ಸೂ.-೨.** ನಾಶರಹಿತವಾದದ್ದು; ಅವ್ಯಾಕೃತವೆಂಬ ಈಶ್ವರನ ಉಪಾಧಿ, ಸರ್ವವಿಕಾರಕ್ಕೂ ಕಾರಣ, ೧-೨೦೧ ; ಓಂಕಾರವೆಂಬ ಅಕ್ಷರ. ಇದು ಸರ್ವಾತ್ಮವೆಂದು ಉಪಾಸ್ಯ, ೧-೨೪೩ ; ಛಾಂದೋಗ್ಯದಲ್ಲಿ ಸರ್ವಾತ್ಮಕವೆಂದು ಹೇಳಿರುವ ಗಾಯತ್ರಿಯು ಬ್ರಹ್ಮವೇ, ಅಕ್ಷರಸಂನಿವೇಶರೂಪವಾದ ಛಂದಸ್ಸಲ್ಲ, ೧-೧೩೧ ; ಅವ್ಯಾಕೃತಾಕಾಶದವರೆಗೂ ಇರುವದಕ್ಕೆಲ್ಲ ಆಧಾರವಾದ ನಾಶರಹಿತಪರಬ್ರಹ್ಮ , ೧-೨೪೪ ; ಬೇರೆ ಬೇರೆ ಶ್ರುತಿಗಳಲ್ಲಿರುವ ನಿಷೇಧ್ಯಧರ್ಮಗಳನ್ನೆಲ್ಲ ಸೇರಿಸಿಕೊಂಡು ಅಕ್ಷರಸ್ವರೂಪವನ್ನು ತಿಳಿಯಬೇಕು, ೨-೩೮೨, ೩.೮೩ ; **ಮುಂ.** ಪರಮಾತ್ಮ, ೧೬, ೧೭, ೧೯, ೨೦, ೨೧, ೨೩, ೨೫, ೨೬, ೪೮, ೪೯, ೫೧, ೫೯, ೭೪, ೭೫, ೭೬, ೭೭, ೯೦, ೧೨೬ ; ಅವ್ಯಾಕೃತ, ೫೨, ೫೫, ೧೨೧; ಶಬ್ದ ೧೨, ೧೭ ; **ಪ್ರಶ್ನ.** ಪರಮಾತ್ಮ, ೩೯, ೫೨, ೫೮, ೭೦, ೭೪, ೭೬, ೭೭ ; **ತೈ.** ಶಬ್ದ ೧೩.೩ ; **ಬೃಹ-೨.** ಅಸ್ಥೂಲತ್ವಾದಿಧರ್ಮಗಳುಳ್ಳ ಪರಮಾರ್ಥ, ೮೦ ರಿಂದ ೮೩, ೮೭ ರಿಂದ ೯೧ ; **ಭ.ಗೀ.** ಪರಮಾತ್ಮ, ೧೭೭, ೫೦೨, ೫೧೪, ೫೨೯, ೫೩೦, ೬೭೪, ೭೦೦, ೭೨೯ ; ಓಂಕಾರ, ೫೧೭, ೬೩೩ ; ಅಕಾರಾದಿವರ್ಣಗಳು, ೬೪೦ ; **ಶಾಂ. ನಿ.** (೧) ನಿರುಪಾಧಿಕವಾದ ಪರಬ್ರಹ್ಮ (ಗೀ. ಭಾ. ೭-೩) ಇದರಲ್ಲಿ ಯಾವ ವಿಶೇಷವೂ ಇಲ್ಲದ್ದರಿಂದ ಇದನ್ನು ಅಸ್ಥೂಲ, ಅನಣು-ಎಂದು ಮುಂತಾಗಿ (ಬೃ. ೩-೮-೮) ರಲ್ಲಿ ವರ್ಣಿಸಿರುತ್ತದೆ. ಇದು ಯಾವ ಇಂದ್ರಿಯಕ್ಕೂ ಗೋಚರವಲ್ಲದಿದ್ದರೂ ಎಲ್ಲರಿಗೂ ಆತ್ಮನಾಗಿರುವದರಿಂದ ವಿಶೇಷಗಳನ್ನು ಅಲ್ಲಗಳೆದರೆ ಇದನ್ನು ನಾನೇ ಎಂದು ಅರಿತುಕೊಳ್ಳಬಹುದು (ಮುಂ. ಭಾ. ೧-೧-೬). ಇದರ ಆಳ್ವಿಕೆಗೆ ಒಳಪಟ್ಟು ಜಗತ್ತಿನ ವ್ಯವಹಾರವು ನಿಯಮದಿಂದ ಸಾಗಿರುತ್ತದೆ (ಬೃ. ೩-೮-೯). ಇದನ್ನು ಅರಿಯದ್ದರಿಂದ ಸಂಸಾರವೂ, ಅರಿತುಕೊಳ್ಳುವದರಿಂದ ಮುಕ್ತಿಯೂ ಆಗುವವು (ಬೃ. ೩-೮-೧೦). ಇದನ್ನು ಯಾವದೂ ವಿಷಯೀಕರಿಸಿ ತಿಳಿಯಲಾರದು, ಇದು ಎಲ್ಲವನ್ನೂ ಅರಿಯುವದು. (ಬೃ. ೩-೮-೧೧) ಇದನ್ನು ತಿಳಿಯುವ ವಿದ್ಯೆಗೆ '**ಪರವಿದ್ಯೆ**' ಎಂದು ಹೆಸರು. ಅಕ್ಷರೋಪಾಸಕರು ಆ ಪರಬ್ರಹ್ಮವನ್ನೇ ಸೇರುವರು ; ಆದರೆ ಸೋಪಾಧಿಕನಾದ ಈಶ್ವರನ ಉಪಾಸಕರಿಗಿಂತಲೂ ಅವರಿಗೆ ಕ್ಲೇಶವು ಹೆಚ್ಚು (ಗೀ. ಭಾ. ೧೨-೫) ; (೨) ನಾಮರೂಪಗಳ ಬೀಜವಾಗಿರುವ ಅವ್ಯಾಕೃತ (ಮುಂ. ಭಾ. ೨-೧-೨) ಇದರಿಂದ ಹುಟ್ಟುವ ಕಾರ್ಯವೆಲ್ಲವೂ ನಾಶವಾಗುವದರಿಂದ ಕ್ಷರವು. ಕ್ಷರವು

ನಾಶವಾದರೂ ಇದು ನಾಶವಾಗುವದಿಲ್ಲವಾದ್ದರಿಂದಲೂ (ಗೀ. ಭಾ. ೧೫-೧೬), ಕಾಲತ್ರಯವನ್ನೂ ಮೀರಿರುವದರಿಂದಲೂ; (ಬೃ. ಭಾ. ೩-೮-೭, ಮಾಂ. ಭಾ. ೧); ಇದು **ಅಕ್ಷರ**ವೆನಿಸುತ್ತದೆ. ಇದೇ ಪರಮಾತ್ಮನ ಮಾಯಾಶಕ್ತಿ (ಗೀ. ಭಾ. ೧೫-೧೬) ಇದು ಅಕ್ಷರವೆಂಬ ಪರಬ್ರಹ್ಮದಲ್ಲಿ ಓತಪ್ರೋತವಾಗಿರುತ್ತದೆ. (ಮುಂ. ಭಾ. ೨-೧-೨). ಇದಕ್ಕಿಂತಲೂ ಹೆಚ್ಚಿನದಾದ್ದರಿಂದ ಬ್ರಹ್ಮಕ್ಕೆ ಮುಖ್ಯಾರ್ಥದಲ್ಲಿ ಅಕ್ಷರವೆಂದು ಹೆಸರು. (ಮುಂ. ಭಾ. ೨-೧-೨, ಗೀ. ೮-೨೧) ; **(೩)** ಓಂಕಾರವೆಂಬ ಅಕ್ಷರವು ; ಬ್ರಹ್ಮದ ಹೆಸರು (ಗೀ. ೮-೧೩, ಸೂ. ಭಾ. ೧-೩-೧೦).

**ಅಕೃತಾಭ್ಯಾಗಮಕೃತನಾಶೌ** - ಬೃಹ-೧. ಮಾಡದ ಕರ್ಮದ ಫಲವು ಉಂಟಾಗುವದು, ಮಾಡಿದ ಕರ್ಮಕ್ಕೆ ಫಲವಾಗದೆ ಹೋಗುವದು, ೧೯೪.

**ಅಕೃತಾಭ್ಯಾಗಮಕೃತವಿಪ್ರಣಾಶೌ** - ಬೃಹ-೨. ಮಾಡದ ಕರ್ಮದ ಫಲವು ಉಂಟಾಗುವದು, ಮಾಡಿದ್ದರ ಫಲವು ಆಗದೆ ಹೋಗುವದು - ಎಂಬ ದೋಷ, ೧೩೪, ೧೮೧, ೩೫೧.

**ಅಕೃತಾಭ್ಯಾಗಮಃ** - ಭ.ಗೀ. ಮಾಡದೆ ಇರುವ ಕರ್ಮದ ಫಲವು ಉಂಟಾಗುವದು, ೫೨೭.

**ಅಕ್ರಮದೃಕ್** - ನೈ. ಆತ್ಮನು ವಿಷಯಗಳನ್ನು ಒಂದೊಂದಾಗಿ ಅರಿಯುವ ಬುದ್ಧಿವೃತ್ತಿಗಳನ್ನೆಲ್ಲ ವ್ಯಾಪಿಸಿಕೊಂಡಿರುವಂತಿರುತ್ತಾನೆ. ಅವುಗಳನ್ನು ಒಂದೊಂದಾಗಿ ಅರಿಯುವದಿಲ್ಲ, ಯಾವ ಕ್ರಮವೂ ಇಲ್ಲದೆ ಒಟ್ಟಿಗೆ ಅರಿಯುತ್ತಾನೆ. ೨-೬೯, ೮೨.

**ಅಕ್ಷರೋಪಾಸಕಾಃ** ಭ.ಗೀ. ಪರಮಾತ್ಮನನ್ನು ಅರಿತುಕೊಂಡು ಚಿಂತಿಸುತ್ತಿರುವವರು, ೭೩೧, ೭೩೨, ೭೪೩, ೭೫೧.

**ಅಕಾರ್ಯಕರಣಃ** - ಬ್ರ.ಸೂ-೧. ಶರೀರವಾಗಲಿ, ಇಂದ್ರಿಯಗಳಾಗಲಿ ಇಲ್ಲದ (ಪರಮೇಶ್ವರ), ೬೫, ೧೮೯, ೧೯೨.

**ಅಕಾರಕ (ಬ್ರಹ್ಮ)** - ನೈ. ಕರ್ತೃ , ಕರ್ಮ, ಮುಂತಾದ ಕಾರಕಗಳ ವಿಂಗಡವಿಲ್ಲದ ಬ್ರಹ್ಮರೂಪವಾದ ಆತ್ಮ. ಈ ಆತ್ಮಸ್ವರೂಪವನ್ನರಿತುಕೊಂಡವನಿಗೆ **ವಿಧಿಚೋದ್ಯತ್ವವಿಲ್ಲ**; ಅವಗತಿರೂಪನಾಗಿಯೇ ಇರುವದರಿಂದ ಆತ್ಮನಲ್ಲಿ ಕಾರಕಾದಿಗಳಿಲ್ಲ ೧-೫೭, ೨-೫೭, ೧೧೩.

**ಅಕಾರಕತ್ವಮ್** - ಬೃಹ-೧. (ಜ್ಞಾನವು ಮಿಥ್ಯಾಜ್ಞಾನವನ್ನು ಕಳೆಯುವದೇ ಹೊರತು) ಹೊಸದಾಗಿ ಏನನ್ನೂ ಉಂಟುಮಾಡದಿರುವದು. ೧೫೬

**ಅಕ್ರಿಯಾಕಾರಕಫಲಾತ್ಮಕ** - ಬೃಹ-೧. ಕ್ರಿಯೆ, ಕಾರಕಗಳು, ಫಲ - ಎಂಬ ವಿಂಗಡವಿಲ್ಲದ (ಆತ್ಮ), ೩೯೬.

**ಅಗತಿಕಾಗತಿಃ** - ಬ್ರ.ಸೂ-೧. ಬೇರೊಂದು ಬಗೆಯು ಗೊತ್ತಾಗದಿರುವದರಿಂದ ಕಲ್ಪಿಸಬೇಕಾದದ್ದು, ೨೫೬.

**ಅಗ್ರಜಃ** - ಮುಂ. ದೇವತೆಗಳಿಗಿಂತಲೂ ಮೊದಲು ಹುಟ್ಟಿದ ಹಿರಣ್ಯಗರ್ಭ ಹನು, ೮.

**ಅಗ್ರಹಣಮ್** - ನೈ. ಅರಿಯದೆ ಇರುವ ಅವಿದ್ಯೆ ; ಅನ್ಯಥಾಗ್ರಹಣದಂತೆ ಇದೂ ಅಂತಃಕರಣದ ಧರ್ಮವೇ, ಆತ್ಮನ ಧರ್ಮವಲ್ಲ , ೪-೪೫; ಅನ್ಯಥಾಗ್ರಹಣಕ್ಕೆ ಇದು ಬೀಜ, ೧-೪೦.

**ಅಗ್ರಹಣಾದಿಃ** - ಭ.ಗೀ. ತಿಳಿಯದೆ ಇರುವದು, ಸಂಶಯ, ತಪ್ಪು ತಿಳಿವಳಿಕೆ, ೭೬೧.

**ಅಗ್ನ್ಯಪತ್ಯಮ್** - ಬೃಹ-೨. ಅಗ್ನಿಗಳಿಂದ ಹುಟ್ಟಿದವನು (ಪಂಚಾಗ್ನ್ಯುಪಾಸಕ) ೮೪೭.

**ಅಗ್ನ್ಯಾದಿಭಾವಃ** - ಬೃಹ-೨. ವಾಗಾದಿಗಳು ಪ್ರಾಣೋಪಾಸನೆಯಿಂದಲೂ ಅಗ್ನ್ಯಾದಿದರ್ಶನದಿಂದಲೂ ಅಗ್ನ್ಯಾದಿಸ್ವರೂಪವನ್ನು ಪಡೆದದ್ದು, ಅತಿಮುಕ್ತಿ, ೭,

**ಅಙ್ಗಮ್** - ನೈ. ಗುಣ. ಒಂದಕ್ಕೆ ಉಪಕಾರವಾಗಿರುವ ಸಾಧನ. ಕರ್ಮ ಪ್ರಕರಣದಲ್ಲಿರುವ ಜ್ಞಾನವು ಅದಕ್ಕೆ ಅಂಗ ; ಅವಿದ್ಯೆಯನ್ನು ಕಳೆಯುವ ಆತ್ಮಜ್ಞಾನವು ಕರ್ಮಕ್ಕೆ ಅಂಗವೂ ಅಲ್ಲ ; ಪ್ರಧಾನವೂ ಅಲ್ಲ. ೧-೬೩, ೬೪, ೭೯.

**ಅಙ್ಗಾಙ್ಗಿತಾ** - ಈಶ. ಒಂದು ಅಧೀನವಾಗಿಯೂ ಒಂದು ಪ್ರಧಾನವಾಗಿಯೂ ಇರುವದು. (ಜ್ಞಾನ ಕರ್ಮಗಳೆರಡೂ ಅಂಗಾಂಗಿಭಾವದಿಂದ ಸಮುಚ್ಚಯವಾಗಲೆಂದಾಗಲಿ ವ್ಯಾಕೃತಾವ್ಯಾಕೃತೋಪಾಸನೆಗಳು ಅಂಗಾಂಗಿಭಾವದಿಂದ ಸಮುಚ್ಚಯವಾಗಲೆಂದಾಗಲಿ ಈ ಉಪನಿಷತ್ತಿನಲ್ಲಿ ಹೇಳಿಲ್ಲ), ೨೩.

**ಅಙ್ಗಾಙ್ಗಿಭಾವಃ** - ನೈ. ಜ್ಞಾನವು ಕರ್ಮಕ್ಕೆ ಅಂಗ , ಅಥವಾ ಜ್ಞಾನಕ್ಕೆ ಕರ್ಮವು ಅಂಗ- ಹೀಗಿರುವದು ಜ್ಞಾನಕರ್ಮಗಳ ಅಂಗಾಂಗಿಭಾವ. ಮೀಮಾಂಸಕರು ಈ ಅಂಗಾಂಗಿಭಾವವನ್ನು ಒಪ್ಪಿರುತ್ತಾರೆ. ಅವರು ಹೇಳುವ ಆತ್ಮಜ್ಞಾನವು ಕರ್ತೃರೂಪನಾದ ಆತ್ಮನ ಜ್ಞಾನ ಅಥವಾ ಉಪಾಸನೆ. ಆದರೆ ತತ್ತ್ವಮಸ್ಯಾದಿವಾಕ್ಯಗಳಿಂದುಂಟಾಗುವ ಆತ್ಮಜ್ಞಾನವು ಕರ್ಮಕ್ಕೆ ಬಾಧಕವಾಗಿರು

ವದರಿಂದ ಈ ಅಂಗಾಂಗಿಭಾವವು ಆ ಜ್ಞಾನಕ್ಕೂ ಕರ್ಮಕ್ಕೂ ಇರಲಾರದು ಎಂಬುದು ವೇದಾಂತಿಗಳ ಮತ. ೧-೨೦,೬೧, ೬೫, ೭೯.

**ಅಙ್ಗಫಲಮ್ -** **ಐತ.** ಮುಖ್ಯವಾದದ್ದಕ್ಕೆ ಅಧೀನವಾಗಿರುವದರ ಫಲ ೧೯.

**ಅಗ್ನಿಃ -** **ಬ್ರ.ಸೂ-೧.** ಬೆಂಕಿ, ೨೦೮, ೨೦೯, ೪೪೨ ('ಬೆಂಕಿಯು ಬಿಸಿ' ಎಂದು ಸಮ್ಯಗ್ಜ್ಞಾನಕ್ಕೆ ದೃಷ್ಟಾಂತ), ೪೨೯ ; ದೇವತೆ, ೨೦೮; ೨೦೯ ; ಪರಮಾತ್ಮ, ೨೧೩ ; **ಕಠ.** ವಿರಾಟ್ಪುರುಷ, ನಾಚಿಕೇತಾಗ್ನಿಯೂ ವಿರಾಟ್ಪುರುಷನೂ ಒಂದೇ, ೪, ೨೪, ೨೫, ೨೬, ೨೭, ೩೧, ೩೨, ೬೨ ; **ಬೃಹ-೧.** ವಿರಾಡಭಿನ್ನವಾದ ಅಗ್ನಿ, ೨೮, ೨೯, ೩೦, ೩೧, ೩೨, ೩೩, ೩೮ ; ವಾಗಭಿಮಾನಿದೇವತೆ, ೭೦ ; ಹೋಮಾಧಿ ಕರಣವಾದ ಅಗ್ನಿ, ೧೮೫ ; ಬೆಂಕಿ, ೩೦೨.

**ಅಗ್ನಿವಿದ್ಯಾ -** **ಕಠ.** ನಾಚಿಕೇತಾಗ್ನಿಯ ಚಯನ ಮತ್ತು ವಿರಾಟ್ಪುರುಷನ ಉಪಾಸನೆ, ೪, ೨೪.

**ಅಗ್ನೀಷೋಮೌ -** **ಬೃಹ-೧.** ಅನ್ನಾನ್ನಾದರೂಪವಾಗಿರುವ (ಜಗತ್ತಿನ) ರೂಪಗಳು, ೧೧೫ ; **ಭ.ಗೀ.** ಭೋಕ್ತೃಭೋಜ್ಯರೂಪದಿಂದ ಇಡಿಯ ಜಗತ್ತೇ ಆಗಿ ಪರಿಣಮಿಸಿರುವ ಅಗ್ನಿ ಮತ್ತು ಸೋಮ ಇವರು, ೯೧೪.

**ಅಗ್ನಿಹೋತ್ರಮ್ -** **ಮುಂ.** ಒಂದು ವೈದಿಕಕರ್ಮ, ೧೮, ೨೮, ೨೯, ೩೨, ೩೪, ೬೫, ೯೭, ೧೦೫ ; **ಬೃಹ-೨.** ಶತಪಥಬ್ರಾಹ್ಮಣದಲ್ಲಿ ಹೇಳಿರುವ ಅಗ್ನಿಹೋತ್ರ ಕರ್ಮದ ವಿಷಯದ ಉಪಾಸನೆಯ ಪ್ರಕರಣ, ೧೫೮, ೪೨೬, ೪೪೦, ೪೪೬.

**ಅಗ್ನಿಹೋತ್ರಾದಿಃ -** **ಭ.ಗೀ.** ಶ್ರುತಿಯಲ್ಲಿ ವಿಧಿಸಿರುವ ಅಗ್ನಿಹೋತ್ರವೇ ಮುಂತಾದ ನಿತ್ಯಕರ್ಮ, ೪೪, ೧೪೮, ೨೮೫, ೩೮೦, ೩೮೧, ೧೧೩೧, ೧೧೩೪, ೧೧೩೫, ೧೧೪೦.

**ಅಗ್ನಿಹೋತ್ರಾದೀನಿ -** **ಬ್ರ.ಸೂ-೧.** ಅಗ್ನಿಹೋತ್ರವೇ ಮುಂತಾದ ವೇದೋಕ್ತ ಕರ್ಮಗಳು ೧೪, ೩೯.

**ಅರ್ಚಾ -** **ಛಾಂ.** ದೇವತೆಯ ಪ್ರತಿಮೆ, ೭.

**ಅರ್ಚಿರಾದಿಮಾರ್ಗಃ -** **ಛಾಂ.** ಬ್ರಹ್ಮಲೋಕಕ್ಕೆ ಹೋಗುವ ಉತ್ತರ ಮಾರ್ಗ, ೨, ೪೦೨, ೪೧೩.

**ಅಚಿಂತ್ಯ -** **ಮಾಂ.** ಮನಸ್ಸಿನಿಂದ ಚಿಂತಿಸುವದಕ್ಕೆ ಆಗದಿರುವ (ಆತ್ಮತತ್ತ್ವ), ೪೨ ; ಇಂಥದ್ದೆಂದು ಗೊತ್ತುಪಡಿಸುವದಕ್ಕಾಗದ ವಸ್ತು, ಇದನ್ನು ಈಗಿನ ವೇದಾಂತಿಗಳು ಅನಿರ್ವಚನೀಯವೆನ್ನುತ್ತಾರೆ, ೨೮೬, ೩೦೦.

**ಅಚಿನ್ತ್ಯಶಕ್ತಿಃ** - ಕಠ. ಇಂಥದ್ದೆಂದು ಯೋಚಿಸುವದಕ್ಕೂ ಸಾಧ್ಯವಾಗದ ಶಕ್ತಿಯುಳ್ಳ, ೧೫೨.

**ಅಚಿಂತ್ಯಾನಂತಶಕ್ತಯಃ** - ಛಾಂ. ಬ್ರಹ್ಮದಲ್ಲಿ ತರ್ಕದಿಂದ ಚಿಂತಿಸುವದಕ್ಕೆ ಅಸದಳವಾದ ಅನಂತಶಕ್ತಿಗಳು ೪೬೪.

**ಅಚೇತನ** - ಬ್ರ.ಸೂ-೧. ಅರಿಯಲು ಶಕ್ತಿಯಿಲ್ಲದ ಕಲ್ಲು , ಮಣ್ಣು ಮುಂತಾದ ಪದಾರ್ಥ (ಪರಮಾಣು, ಪ್ರಧಾನ - ಮುಂತಾದವುಗಳು ಅನಾತ್ಮವಾದ್ದರಿಂದ ಅಚೇತನ), ೬೭, ೭೩, ೭೬, ೭೭, ೭೮, ೧೬೯, ೧೭೫, ೧೯೨, ೧೯೭, ೨೨೬, ೩೦೨, ೩೯೯, ೪೧೦, ೪೧೩, ೪೧೫, ೪೨೦.

**ಅಚೋದ್ಯಸ್ವಾಭಾವ್ಯಮ್** - ನೈ. ವಿಧಿಗೆ ಕಟ್ಟುಬೀಳುವ ಸ್ವಭಾವವಿಲ್ಲದವನಾಗಿರುವಿಕೆ. ಬ್ರಹ್ಮಾತ್ಮನು ಅಕಾರಕನಾಗಿರುವದರಿಂದ ಅವನು ಅಚೋದ್ಯನು, ೧-೫೭.

**ಅಜ** - ಮಾಂ. ಹುಟ್ಟಿಲ್ಲದ, ನಿರ್ವಿಕಾರವಾದ (ಬ್ರಹ್ಮ), ೫೩, ೧೨೮, ೧೨೯, ೧೭೦, ೧೭೫, ೧೭೮, ೧೮೮, ೧೯೩, ೨೦೫, ೨೧೨, ೨೨೯, ೨೩೨, ೩೦೮, ೩೦೯, ೩೧೩, ೩೩೬, ೩೫೯, ೩೬೧.

**ಅಜಂ ಬ್ರಹ್ಮ** - ಛಾಂ. ಜನ್ಮರಹಿತವಾದ ಬ್ರಹ್ಮ, ೨೨೬, ೬೦೧.

**ಅಜಾತ** - ಮಾಂ. ಎಂದಿಗೂ ಹುಟ್ಟದೆ ಇರುವ ನಿರ್ವಿಕಾರವಾದ (ಬ್ರಹ್ಮ), ೧೬೬, ೨೬೯.

**ಅಜಾತಿ** - ಶಾಂ. ನಿ. ಅಕ್ಷರವು ಅಥವಾ ಪರಬ್ರಹ್ಮವು ಹುಟ್ಟಿಲ್ಲದ್ದು. ಇದಕ್ಕೆ ಅವಯವಗಳಿಲ್ಲದ್ದರಿಂದ ಅವಯವವೈಷಮ್ಯದಿಂದ ಪರಿಣಾಮವಾಗಿ ಹುಟ್ಟುವ ಸಂಭವವೇ ಇಲ್ಲ(ಮಾಂ. ಕಾ. ಭಾ. ೩-೨). ಆಕಾಶವು ಘಟವೇ ಮುಂತಾದವುಗಳ ಹುಟ್ಟುವಿಕೆಯಿಂದ ಘಟಾಕಾಶವೇ ಮುಂತಾದ ರೂಪಗಳಿಂದ ಹುಟ್ಟುವಂತೆ ತೋರುವ ಹಾಗೆ ಪರಮಾತ್ಮನೂ ಜೀವರೂಪದಿಂದ ಹುಟ್ಟುವಂತೆ ತೋರುತ್ತಾನೆ. ಆಕಾಶವು ಪೃಥಿವ್ಯಾದಿಗಳ ರೂಪದಿಂದ ಹುಟ್ಟಿ ಘಟವಾಗುವಂತೆ ತೋರಿದರೂ ನಿಜವಾಗಿ ಆಕಾಶವೇ ಆಗಿರುವಂತೆ ಆತ್ಮನೂ ಶರೀರೇಂದ್ರಿಯಗಳ ಗುಂಪಿನ ರೂಪದಿಂದ ತೋರಿಕೊಳ್ಳುತ್ತಾನೆ (ಮಾಂ. ಕಾ. ಭಾ. ೩-೩). ಹುಟ್ಟುವ ಸ್ವಭಾವವೇ ಇಲ್ಲದ ಬ್ರಹ್ಮಕ್ಕೆ ನಿಜವಾಗಿ ಹುಟ್ಟು ಇದೆ ಎಂದು ಕೆಲವರು ವಾದಿಗಳು ಹೇಳುವದುಂಟು ; ಆದರೆ ಹುಟ್ಟಿಲ್ಲದ್ದು ಅಮೃತವು, ಹುಟ್ಟುವದು ಮರ್ತ್ಯವು. ಆದ್ದರಿಂದ ಅವರ ಮತದಲ್ಲಿ ಅಮೃತಸ್ವಭಾವವಾಗಿರುವ ಬ್ರಹ್ಮವು

ಮರ್ತ್ಯವಾಗುವದೆಂದು ಹೇಳಿದಂತೆ ಆಗುವದು. ಅದು ಎಂದಿಗೂ ಯುಕ್ತವಲ್ಲ (ಮಾಂ. ಕಾ. ಭಾ. ೩-೨೦, ೪-೯, ೪-೨೯).

**ಅಜಾತಿಃ - ಮಾಂ.** ಹುಟ್ಟದೆ ಇರುವದು, ೨೪೪, ೨೪೯ ; ಹುಟ್ಟೆಂಬ ವಿಕಾರವಿಲ್ಲದ (ಬ್ರಹ್ಮ), ೧೩೦, ೧೩೧, ೧೩೯, ೨೮೭.

**ಅಜಾವಿಪಾಲಾಃ - ಬ್ರ.ಸೂ-೧.** ಆಡುಕುರಿಗಳನ್ನು ಕಾಯುವವರು, ಶಾಸ್ತ್ರ ಜ್ಞಾನವಿಲ್ಲದವರು, ೫೯.

**ಅಜ್ಞ, ಅನಾತ್ಮಜ್ಞಃ, ಅನಾತ್ಮವಿತ್ - ಭ.ಗೀ.** ಆತ್ಮನನ್ನು ಅರಿತುಕೊಳ್ಳದೆ ಇರುವವನು, ೧೩೩, ೧೬೩, ೧೬೪, ೧೬೬, ೧೮೮, ೧೮೯, ೩೧೫, ೩೨೧, ೩೨೨, ೮೩೨, ೧೦೦೪, ೧೦೨೫, ೧೧೩೬.

**ಅಜ್ಞಾತಜ್ಞಾಪನಮ್ - ನೈ.** ವಿಷಯಗಳನ್ನು ಪ್ರಮಾಣಗಳಿಂದ ಅರಿತುಕೊಳ್ಳ ಬೇಕಾಗಿರುತ್ತದೆ; ನಾವು ಅವನ್ನು ಮೊದಲು ಅರಿಯದೆ ಇದ್ದು ಪ್ರಮಾಣಗಳಿಂದ ಅರಿತುಕೊಳ್ಳುವೆವು. ಆದರೆ ಆತ್ಮನು ಅವಗತಿಸ್ವರೂಪನೇ ಆದ್ದರಿಂದ ಅವನನ್ನು ಹೊಸದಾಗಿ ಪ್ರಮಾಣವು ತಿಳಿಸಿಕೊಡಬೇಕಾದದ್ದಿಲ್ಲ, ಆತ್ಮನ ಅವಿದ್ಯೆಯನ್ನು ಕಳೆಯುವದೊಂದೇ ಪ್ರಮಾಣದ ಫಲವು, ೧-೧೦೫.

**ಅಜ್ಞಾತಾರ್ಥಜ್ಞಾಪನಮ್ - ಭ.ಗೀ.** ತಿಳಿಯದಿದ್ದ ವಸ್ತುವನ್ನು ವಿಷಯೀಕರಿಸಿ ತಿಳಿಸುವದು, ೩೪.

**ಅಜ್ಞಾನಮ್ - ಈಶ.** ತಪ್ಪಾಗಿ ತಿಳಿಯುವದು, ೨ ; ತಿಳಿಯದೆ ಇರುವದು, ೨, ೯, ೪೨ ; ಕೇನ. ಆತ್ಮನನ್ನು ತಿಳಿಯದಿರುವದು, ತಪ್ಪಾಗಿ ತಿಳಿದುಕೊಂಡಿರುವದು, ೪ ; ಪ್ರಶ್ನ. ತಿಳಿಯದೆ ಇರುವದು, ೩, ೮೮ ; ಐತ. ಜ್ಞಾನಾಭಾವ, ೬೮ ; ತೈ. ಬ್ರಹ್ಮದ ವಿಷಯದ ತಪ್ಪು ತಿಳಿವಳಿಕೆ ೯೦ ; ಬೃಹ-೧. ಇಷ್ಟವನ್ನು ಪಡೆಯಬೇಕೆಂಬ ಮತ್ತು ಅನಿಷ್ಟವನ್ನು ತಪ್ಪಿಸಿಕೊಳ್ಳಬೇಕೆಂಬ ಇಚ್ಛೆಗೆ ಕಾರಣವಾದ ತಪ್ಪು ತಿಳಿವಳಿಕೆ (ಅವಿದ್ಯಾ), ೫, ೧೬೨ ; ಬೃಹ-೨. ಸ್ವಾಭಾವಿಕವಾಗಿರುವ ತಪ್ಪು ತಿಳಿವಳಿಕೆ, ಆತ್ಮನನ್ನರಿಯದಂತೆ ಮರೆಮಾಡಿರುವ ಅವಿದ್ಯೆ, ೮, ೧೬, ೩೨, ೩೩, ೫೪ ; ವಿಶೇಷಜ್ಞಾನಾಭಾವ ೨೧೪ ; ಭ.ಗೀ. ತಿಳಿಯದಿರುವದು, ತಪ್ಪುತಿಳಿವಳಿಕೆ, ೪೬, ೧೩೩, ೩೧೯, ೩೫೩, ೩೫೪, ೩೫೬, ೩೫೭, ೪೬೮, ೫೧೧, ೬೧೭, ೭೮೮, ೮೩೨, ೯೩೧, ೯೪೫, ೯೪೬, ೧೦೧೪, ೧೧೫೨, ೧೧೫೩ ; ಜ್ಞಾನವು ಹುಟ್ಟುವದಕ್ಕೆ ಅಡ್ಡಿಯಾಗಿರುವ ಮನಸ್ಸಿನ ಕಲ್ಮಷ, ಮಾನಿತ್ವ, ದಂಭಿತ್ವ ಮುಂತಾದದ್ದು, ೭೮೮ ; ನೈ. ಅಜ್ಞಾನವೆಂದರೆ ಆತ್ಮನನ್ನು ಅರಿಯದೆ ಇರುವದು, ೩-೧, ೮ ; ಅಜ್ಞಾನ, ಅಗ್ರಹಣ, ಅನವಗಮ,

ಅನವಬೋಧ, ಅಪ್ರತಿಪತ್ತಿ, ಅಪ್ರಬೋಧ, ಅವಿದ್ಯೆ, ತಮಸ್ಸು, ಧ್ವಾಂತ, ಭ್ರಾಂತಿ, ಮೋಹ-ಇವೆಲ್ಲ ಪರ್ಯಾಯಶಬ್ದಗಳು. ವಾರ್ತಿಕಪ್ರಸ್ಥಾನದಲ್ಲಿ ಈ ಶಬ್ದಗಳಿಗೆಲ್ಲ ಜ್ಞಾನಾಭಾವವೆಂದೇ ಅರ್ಥ. ಈ ಶಬ್ದಗಳಿಗೆ **ಪೀಠಿಕೆಯನ್ನು** ನೋಡಿ. ಅಜ್ಞಾನಕ್ಕೆ ಆತ್ಮನೇ ಆಶ್ರಯ, ಆತ್ಮನೇ ವಿಷಯ, ೩-೧; ಆತ್ಮನು ಸುಖಸ್ವರೂಪನಾಗಿದ್ದರೂ ಅವನನ್ನು ಮುಚ್ಚಿಹಾಕಿ ೧-೧, ೭೦ **ಮಿಥ್ಯಾದ್ವೈತವನ್ನು** ತೋರಿಸುವದರ ಮೂಲಕ ಇದು ಅನರ್ಥಕ್ಕೆ ಕಾರಣವಾಗಿರುವದು (ಅವ); ಅಜ್ಞಾನವು ಹೋದರೆ **ಸಕಲಪುರುಷಾರ್ಥಪ್ರಾಪ್ತಿ** (ಅವ); ಅಜ್ಞಾನದ ನಾಶವೇ ಮುಕ್ತಿ ೧-೨೪; ಕರ್ಮವು ಅಜ್ಞಾನದಿಂದುಂಟಾಗುತ್ತದೆಯಾದ್ದರಿಂದ ಅದನ್ನು ಕಳೆಯಲಾರದು, ಜ್ಞಾನವೇ ಕಳೆಯುತ್ತದೆ, ೧-೩೫, ೩೭, ೪೦; ಅಜ್ಞಾನವು **ಸುಷುಪ್ತಿಯಲ್ಲಿಯೂ** ಇರುತ್ತದೆ, ೩-೫೮; ಅಜ್ಞಾನವನ್ನು ಕಳೆಯುವದಕ್ಕೆ ಜ್ಞಾನವು ನಿರಪೇಕ್ಷಸಾಧನ, ೧-೫೪, ಹುಟ್ಟಿದ ಮಾತ್ರದಿಂದ ಅಜ್ಞಾನವನ್ನು ಕಳೆಯದೆ ಇರುವದು ಜ್ಞಾನವೇ ಅಲ್ಲ, ೧-೬೫, ೬೭ ; **ಶಾಂ. ನಿ.** ಅರಿಯದಿರುವದು. ಅಗ್ರಹಣ (ಮಾಂ. ಕಾ. ಭಾ. ೧-೧೩), ಅಪ್ರತಿಬೋಧ (ಮಾಂ. ಕಾ. ಭಾ. ೧-೧೩), ಅಪ್ರಬೋಧ (ಸೂ. ಭಾ. ೪-೧-೩), ಅವಿದ್ಯಾ (ಮಾಂ. ಕಾ. ಭಾ. ೩-೩೬), ಅನಿಶ್ಚಯ (ಮಾಂ. ಕಾ. ಭಾ. ೨-೧೭), ಅನವಗಮ (ಬೃ. ಭಾ. ೧-೪-೧೦) - ಮುಂತಾದ ಶಬ್ದಗಳೆಲ್ಲವನ್ನೂ ಒಂದೇ ಅರ್ಥದಲ್ಲಿ ಭಾಷ್ಯಕಾರರು ಉಪಯೋಗಿಸಿರುತ್ತಾರೆ. ಈ ಶಬ್ದಗಳಿಗೆ ಮುಖ್ಯಾರ್ಥವು ಅರಿಯದಿರುವದು ಎಂದು. ವೇದಾಂತಶಾಸ್ತ್ರದಲ್ಲಿ ಬ್ರಹ್ಮವನ್ನು ಅರಿಯದಿರುವದೇ ಅಜ್ಞಾನವು. ಈ ಶಬ್ದವನ್ನು ಜ್ಞಾನಕ್ಕೆ ಬೇರೆಯಾದದ್ದು, ವಿರುದ್ಧವಾದದ್ದು - ಎಂಬ ಅರ್ಥದಲ್ಲಿಯೂ ಉಪಯೋಗಿಸುವದುಂಟು. ಆಗ ಅಜ್ಞಾನವೆಂದರೆ ತಪ್ಪು ತಿಳಿವಳಿಕೆ. ಆತ್ಮಾನಾತ್ಮಗಳನ್ನು ಒಂದನ್ನು ಮತ್ತೊಂದೆಂದು ತಿಳಿಯುವದು, ಒಂದರ ಧರ್ಮಗಳನ್ನು ಮತ್ತೊಂದರದೆಂದು ಭಾವಿಸುವದು, **ಅವಿದ್ಯೆ** ಎಂದು ಸೂತ್ರಭಾಷ್ಯದ ಉಪೋದ್ಘಾತದಲ್ಲಿ ಬರೆದಿರುತ್ತದೆ. ಈ ಅರ್ಥದಲ್ಲಿ ಇದನ್ನು **ಅಧ್ಯಾಸವೆಂದು** ಶಂಕರಾಚಾರ್ಯರು ಕರೆದಿರುತ್ತಾರೆ. ಅಧ್ಯಾಸಶಬ್ದದ ವಿವರಣೆಯಲ್ಲಿ ಈ ವಿಷಯವನ್ನು ಮತ್ತೆ ತೆಗೆದುಕೊಳ್ಳುವೆವು. ಬ್ರಹ್ಮವು ನಿಜವಾಗಿ ಯಾವ ವಿಕಾರವನ್ನೂ ಹೊಂದಿಲ್ಲವಾದರೂ ಅರಿತುಕೊಳ್ಳದೆ ಇರುವದರಿಂದ ಅದನ್ನು ಪ್ರಪಂಚವೆಂದು ಜನರು ಕಲ್ಪಿಸಿಕೊಂಡಿರುತ್ತಾರೆ. ನಸುಗತ್ತಲೆಯಲ್ಲಿ ಕಾಣುವ ಹಗ್ಗವನ್ನು ಹಗ್ಗವೇ ಎಂದು ನಿಶ್ಚಯಿಸಿಕೊಳ್ಳದೆ ಇರುವದರಿಂದ ಅದು ಹಾವು, ಕೋಲು, ನೀರಿನ ಕೋಡಿ ಎಂದು ಮುಂತಾಗಿ ಜನರು ಬಗೆಬಗೆಯಾಗಿ ಕಲ್ಪಿಸಿಕೊಳ್ಳುವಂತೆ ಅಜ್ಞಾನದ ಮಬ್ಬಿನಿಂದ ಎಲ್ಲರ ಆತ್ಮನಾದ ಬ್ರಹ್ಮವನ್ನೇ ಚೇತನಾಚೇತನರೂಪವಾದ ಜಗತ್ತಿನ ರೂಪದಲ್ಲಿ ಕಲ್ಪಿಸುತ್ತಿರುವರು - ಎಂಬುದೇ ಉಪನಿಷತ್ಸಿದ್ಧಾಂತವು (ಮಾಂ. ಕಾ. ಭಾ. ೨-೧೭).

**ಅಜ್ಞಾನತ್ರೈವಿಧ್ಯಮ್** - **ಬೃಹ-೨.** ಜ್ಞಾನಾಭಾವ, ಸಂಶಯಜ್ಞಾನ, ವಿಪರೀತಜ್ಞಾನ - ಎಂಬ ರೂಪದಲ್ಲಿರುವ ಅಜ್ಞಾನ, ೨೪೨.

**ಅಜ್ಞಾನನಿದ್ರಾ - ಕಠ.** ತತ್ತ್ವವನ್ನು ತಿಳಿಯದೆ ಇರುವದೆಂಬ ನಿದ್ರೆ, ೧೦೫.

**ಅಜ್ಞಾನವಿಜೃಂಭಿತ - ನೈ.** ಅಜ್ಞಾನದಿಂದ ಉಂಟಾಗಿರುವ (ಅಹಂಕಾರ) ೨-೪೬. ಅಜ್ಞಾನವಿಜೃಂಭಿತ, ಅಜ್ಞಾನೋತ್ಥ, ಅಜ್ಞಾನೋಪಾದಾನ - ಇವೆಲ್ಲವೂ ಪರ್ಯಾಯಗಳು. ಬುದ್ಧ್ಯಾದಿಗಳ ಕರ್ತೃತ್ವವು **ಅಜ್ಞಾನೋತ್ಥವು,** ೨-೫೮; ಬುದ್ಧಿಯು **ಅಜ್ಞಾನೋಪಾದಾನಕವು** (೩-೧೫) - ಎಂದರೆ ಅಜ್ಞಾನದಿಂದ ತೋರುತ್ತದೆ ಎಂದೇ ಅರ್ಥ. ಇಲ್ಲಿ ಉಪಾದಾನವೆಂದರೆ ಕಾರಣವೆಂದಿಷ್ಟೇ ಅರ್ಥ; ಮಣ್ಣು ಮಡಕೆಗೆ ಉಪಾದಾನಕಾರಣವಾಗಿರುವಂತೆ ಎಂದೇನೂ ಅರ್ಥವಲ್ಲ.

**ಅಜ್ಞೋಽಸ್ಮಿ - ನೈ.** ಅಜ್ಞನಾಗಿದ್ದೇನೆ, ಎಂದರೆ ಆತ್ಮಸ್ವರೂಪವನ್ನು ಅರಿಯೆನು ಎಂಬ ಅನುಭವವಿರುವದರಿಂದ ಅಜ್ಞಾನವು ಆತ್ಮನಿಗೇ ಆತ್ಮನ ವಿಷಯದಲ್ಲಿಯೇ ಎಂದು ಹೇಳಬೇಕಾಗುತ್ತದೆ. ತನಗೆ ತನ್ನ ವಿಷಯದಲ್ಲಿಯೇ ಅಜ್ಞಾನವು ಹೇಗೆ? ಎಂದು ಆಕ್ಷೇಪಿಸುವದಕ್ಕಿಲ್ಲ ; ಇಲ್ಲಿ ಈ ಆಶ್ರಯವಿಷಯವಿಭಾಗವೂ ಅಜ್ಞಾನನಿಮಿತ್ತವಾಗಿಯೇ ಆಗಿರುತ್ತದೆ. ನಿಜವಾಗಿ ಆತ್ಮನಿಗೆ ಅಜ್ಞಾನವಿಲ್ಲವೇ ಇಲ್ಲ, ೩-೧.

**ಅಣವಃ - ಬ್ರ.ಸೂ-೧.** ಜಗತ್ತಿಗೆ ಕಾರಣವೆಂದು ವೈಶೇಷಿಕರು ಕಲ್ಪಿಸಿರುವ ಪರಮಾಣುಗಳು, ೫, ೨೯ ; **ಐತ.** ಜಗತ್ಕಾರಣವೆಂದು ವೈಶೇಷಿಕರು ಒಪ್ಪಿರುವ ಪರಮಾಣುಗಳು, ೨೯.

**ಅಣಿಮಾದ್ಯೈಶ್ವರ್ಯಮ್ - ಬ್ರ.ಸೂ-೧.** ತೀರ ಸಣ್ಣದಾಗುವದು, ತೀರ ಹಗುರವಾಗುವದು - ಮುಂತಾದ ಎಂಟು ಬಗೆಯ ಸಿದ್ಧಿ, ೧೮೮, ೨೮೩ ; **ಈಶ.** ಹಿರಣ್ಯಗರ್ಭನ ಉಪಾಸನೆಯಿಂದ ಬರುವ ಸಿದ್ಧಿಗಳು, ೩೦ ; **ಮಾಂ.** ಅಣಿಮಾ, ಮಹಿಮಾ, ಗರಿಮಾ ಲಘಿಮಾ, ಪ್ರಾಪ್ತಿಃ, ಪ್ರಾಕಾಮ್ಯಮ್, ಈಶಿತ್ವಮ್, ವಶಿತ್ವಮ್ - ಎಂಬ ಎಂಟು ಯೋಗಸಿದ್ಧಿಗಳು.

**ಅಣು - ಬ್ರ.ಸೂ-೨.** ಸೂಕ್ಷ್ಮವಾದ. ಬುದ್ಧಿ ಅಥವಾ ಅನ್ತಃಕರಣವೆಂಬ ಉಪಾಧಿಯ ಸಂಬಂಧದಿಂದ ಜೀವನನ್ನು ಅಣುವೆಂದಿದೆ, ೨-೧೩೮, ೨-೧೩೯ ; ಅಥವಾ ಅವನನ್ನು ತಿಳಿದುಕೊಳ್ಳುವದು ಕಷ್ಟವೆಂಬ ಅಭಿಪ್ರಾಯದಿಂದ ಹೀಗೆಂದಿದೆ, ೨-೧೩೮ ; ಪರಮೇಶ್ವರನನ್ನು ಅಣುವೆನ್ನುವದೂ ಉಪಾಧಿನಿಮಿತ್ತದಿಂದ, ೨-೧೩೯; ಪ್ರಾಣಗಳು ಅಣುವೆನ್ನುವದು ಅವು ಸೂಕ್ಷ್ಮವಾಗಿ ಪರಿಚ್ಛಿನ್ನವಾಗಿರುವವು - ಎಂಬ

ಕಾರಣದಿಂದ, ಪರಮಾಣುಪರಿಮಾಣವುಳ್ಳ- ವೆಂದಲ್ಲ ೨-೧೮೬
ಮುಖ್ಯಪ್ರಾಣವೂ ಈ ಅರ್ಥದಲ್ಲಿಯೇ ಅಣು, ೨-೧೯.

**ಅಣುಃ** - ಬ್ರ.ಸೂ-೨. ವೈಶೇಷಿಕರು ಒಪ್ಪಿರುವ ಪರಮಾಣು, ೧-೨೬, ೬೪ ; ೨-೨೧, ೨೬, ೨೭, ೨೯; ಸರ್ವಾಸ್ತಿತ್ವವಾದಿಗಳು ಒಪ್ಪಿರುವ ಕ್ಷಣಿಕವಾದ ಅಣುಗಳು, ೨-೪೪ ; ಜೈನರು ಒಪ್ಪಿರುವ ಪುದ್ಗಲವೆಂಬ ಹೆಸರಿನ ಅಣುಗಳು, ೨-೬೮ ; ಕಠ. ಇಂದ್ರಿಯಗಳಿಗೆ ನಿಲುಕದ, ಸೂಕ್ಷ್ಮವಾದ, ೩೫, ೫೯, ೬೫, ೭೫.

**ಅಣ್ಡಮ್** - ಮುಂ. ವಿರಾಟ್‌ಪುರುಷನ ಉತ್ಪತ್ತಿಗೆ ಮೊದಲು ಆಗುವ ಬ್ರಹಾಂಡ, ೬೦ ; ಐತ. ಇಡಿಯ ಜಗತ್ತಿನ ಮುದ್ದೆ, ಇದರೊಳಗೇ ವಿರಾಟ್ಪುರುಷನಿರುವದು, ೩೨, ೮೮ ; ಬೃಹ-೨. ಬ್ರಹ್ಮಾಂಡ (ದ್ಯಾವಾಪೃಥಿವಿಗಳೆಂಬ ಕಪಾಲಗಳಿಂದಾಗಿರುವ), ಸ್ಥೂಲಪ್ರಪಂಚ, ೪೨, ೭೫.

**ಅಣ್ಡಕ್ರಮಃ** - ಮುಂ. ಅಂಡವು ಉತ್ಪತ್ತಿಯಾಗುವ ಕ್ರಮ, ೨೩.

**ಅಣ್ಡೋತ್ಪತ್ತಿಕ್ರಮಃ** - ಪ್ರಶ್ನ. ಬ್ರಹ್ಮಾಂಡವು ಉತ್ಪತ್ತಿಯಾಗುವ ಕ್ರಮ, ೫.

**ಅತ್ತಾ** - ತೈ. ಶರೀರದೊಳಗೆ ಇದ್ದುಕೊಂಡು ವಿಷಯಗಳನ್ನು ಭೋಗಿಸುವ ಪ್ರಾಣ, ೯೬.

**ಅತತ್ತ್ವನಿಷ್ಠ** - ಛಾಂ. ತತ್ತ್ವದಲ್ಲಿ ಕೊನೆಗಾಣದ (ವಾದ), ೪೬೫.

**ಅತದ್ಧರ್ಮಾರೋಪಣರೂಪತ್ವಮ್** - ಬೃಹ-೨. ಅದಲ್ಲದ್ದರ ಧರ್ಮವನ್ನು ಆರೋಪಿಸುವಿಕೆ, ಅವಿದ್ಯೆಯ ರೂಪ, ೨೪೨.

**ಅತದ್ಧರ್ಮಾಧ್ಯಾರೋಪಣಮ್, ಅತದ್ಧರ್ಮಾರೋಪಃ** - ಭ.ಗೀ. ಆತ್ಮನಲ್ಲಿಲ್ಲದ ಧರ್ಮವನ್ನು ಹುಟ್ಟಿಹಾಕುವ ಭ್ರಾಂತಿ, ೩೪.

**ಅತಸ್ಮಿಂಸ್ತದ್ಬುದ್ಧಿಃ** - ಬ್ರ.ಸೂ-೧. ಅದಲ್ಲದ್ದರಲ್ಲಿ ಅದೆಂಬ ತಿಳಿವಳಿಕೆ, ತಪ್ಪು ತಿಳಿವಳಿಕೆಯ (ರೂಪದ ಅಧ್ಯಾಸ), ೮.

**ಅತ್ಯಂತಪ್ರಚಲಿತಾವಸ್ಥಾ** - ಬೃಹ-೨. ಬ್ರಹ್ಮದ ಕೊನೆಯ ಅವಸ್ಥಾವಿಶೇಷ, ಕ್ಷೇತ್ರಜ್ಞ (ಭ.ಪ್ರ), ೯೩.

**ಅತ್ಯನ್ತೋಚ್ಛಿತ್ತಿಃ** - ನೈ. ತೀರ ನಾಶವಾಗುವದು. ಆತ್ಮನ ಅಜ್ಞಾನವು ಮತ್ತೆ ತಲೆದೋರದಂತೆ ತೀರ ನಾಶವಾದರೆ ಎಲ್ಲಾ ಪುರುಷಾರ್ಥವೂ ನೆರವೇರಿದಂತೆ.

**ಅತ್ಯಾಶ್ರಮೀ** - ಛಾಂ. ಸ್ವಾರ್ಥಸಂನ್ಯಾಸಲಿಂಗವಿಲ್ಲದ ಪರಮಹಂಸ, ೧೮೩.

**ಅತೀಂದ್ರಿಯ** - ಬ್ರ.ಸೂ-೧. ಇಂದ್ರಿಯಗಳನ್ನು ಮೀರಿದ, ಇಂದ್ರಿಯಗಳಿಗೆ ಗೋಚರವಲ್ಲದ, ಪ್ರತ್ಯಕ್ಷಾದಿಗಳಿಗೆ ಸಿಕ್ಕದ, ೪೦೨.

**ಅತೀನ್ದ್ರಿಯವಿಷಯ** - ನೈ. ಇಂದ್ರಿಯಗಳನ್ನು ಮೀರಿದ ವಸ್ತುವನ್ನು ತಿಳಿಸುವ (ವಾಕ್ಯ). ತತ್ತ್ವಮಸಿ ಮುಂತಾದ ವಾಕ್ಯವು **ಅಭಿಧಾಶ್ರುತಿಯಾದರೂ** ಅತೀಂದ್ರಿಯವಾಗಿರುವ ಆತ್ಮನನ್ನು ತಿಳಿಸಿಕೊಡುವದರಿಂದ ಪ್ರಮಾಣ, ೩-೪೯.

**ಅತೀತಾನಾಗತವಿಜ್ಞಾನಮ್** - ಬ್ರ.ಸೂ-೧. ಹಿಂದೆ ಕಳೆದದ್ದರ ಮತ್ತು ಮುಂದೆ ಆಗಲಿರುವದರ ಪ್ರತ್ಯಕ್ಷಜ್ಞಾನ, ಯೋಗಿಗಳಿಗೆ ಆಗುವ ಪ್ರತ್ಯಕ್ಷ, ೬೯.

**ಅರ್ಥವಾದಃ** - ಬ್ರ.ಸೂ-೧. ವಿಹಿತವಾದದ್ದನ್ನು ಹೊಗಳುವ ವಾಕ್ಯ ಅಥವಾ ನಿಷಿದ್ಧವಾದದ್ದನ್ನು ನಿಂದಿಸುವ ವಾಕ್ಯ, ೫೬, ೨೮೧, ೨೮೬, ೨೯೯, ೩೦೨, ೩೯೩; ಬ್ರ.ಸೂ-೨. ವಿಹಿತವಾದದ್ದನ್ನು ಹೊಗಳುವ, ಅಥವಾ ನಿಷಿದ್ಧವಾದದ್ದನ್ನು ನಿಂದಿಸುವ ವಾಕ್ಯ. ದೇವತೆಗಳಿಗೆ ಶರೀರಾದಿಗಳುಂಟೆಂಬುದಕ್ಕೆ ಅರ್ಥವಾದ, ೧-೨೮೧, ೨೮೬; ಅರ್ಥವಾದಗಳಿಗೂ ಒಂದೊಂದು ಅರ್ಥದಲ್ಲಿ ಅವಾಂತರತಾತ್ಪರ್ಯವಿರಬಹುದು. ಅದು ಪ್ರಮಾಣಾಂತರವಿರುದ್ಧವಾದರೆ-ಅನುವಾದ, ಪ್ರಮಾಣಾಂತರಕ್ಕೆ ಅವಿರುದ್ಧವಾದರೆ-ಗುಣವಾದ, ಈ ಎರಡೂ ಇಲ್ಲದಲ್ಲಿ ಇದ್ದದ್ದನ್ನೇ ತಿಳಿಸುತ್ತದೆ, ೧-೩೦೩ ; **ಐತ.** ಹೇಳಬೇಕೆಂದಿರುವದನ್ನು ಹೊಗಳುವ ವಾಕ್ಯ, ೭, ೬೧ ; **ಬೃಹ-೧.** ತನ್ನ ಅರ್ಥದಲ್ಲಿ ತಾತ್ಪರ್ಯವಿಲ್ಲದೆ ಮತ್ತೊಂದನ್ನು ಹೊಗಳುವ ವಾಕ್ಯ , ೧೭೨ ; **ಶಾಂ.** ನಿ. ಮುಖ್ಯೋಪದೇಶವನ್ನು ಹೊಗಳುವ, ಅಥವಾ ಅದಕ್ಕೆ ವಿಪರೀತವಾದದ್ದನ್ನು ನಿಂದಿಸುವ ವಾಕ್ಯ. ಕರ್ಮವನ್ನು ವಿಧಿಸುವದೇ ಶಾಸ್ತ್ರದ ಮುಖ್ಯೋದ್ದೇಶವೆಂದು ಪೂರ್ವಮೀಮಾಂಸಕರೆನ್ನುತ್ತಿದ್ದರು. ಅವರ ಅಭಿಪ್ರಾಯದಲ್ಲಿ ಉಪನಿಷತ್ತುಗಳು ಕೂಡ ಕರ್ಮಕ್ಕೆಬೇಕಾದ ಕರ್ತೃವನ್ನೋ ಅಥವಾ ದೇವತೆಯನ್ನೋ ತಿಳಿಸುವದರಿಂದ ಪ್ರಮಾಣವಾಗಬಹುದು ; ಅಥವಾ ವಿಧಿಯನ್ನು ಹೊಗಳುವ ಅರ್ಥವಾದವಾಗಬೇಕು. ಆದರೆ ಉಪನಿಷತ್ತುಗಳಲ್ಲಿರುವ ವಾಕ್ಯಗಳು ತಾತ್ಪರ್ಯದಿಂದ ಬ್ರಹ್ಮವನ್ನೇ ಹೇಳುತ್ತವೆ ; ಮುಖ್ಯವಾದ ವಾಕ್ಯಗಳಲ್ಲಿರುವ ಪದಗಳು ಬ್ರಹ್ಮಸ್ವರೂಪವನ್ನು ತಿಳಿಸುವ ಸಮನ್ವಯವುಳ್ಳವಾಗಿರುವದರಿಂದ ಉಪನಿಷತ್ತುಗಳು ನೇರಾಗಿ ಬ್ರಹ್ಮವನ್ನು ತಿಳಿಸುವ ಪ್ರಮಾಣಗಳಾಗಿವೆ - ಎಂದು ಆಚಾರ್ಯರು ಪ್ರತಿಪಾದಿಸಿರುತ್ತಾರೆ. ಸೂ. ಭಾ. ೧-೧-೪, ಬೃ. ಭಾ. ೧-೪-೧೦ ಐ.ಭಾ. ಸಂಬಂಧಗ್ರಂಥ.

ಅರ್ಥವಾದಗಳಲ್ಲಿರುವ ಅಭಿಪ್ರಾಯವು ಪ್ರಮಾಣಾಂತರಕ್ಕೆ ವಿಷಯವಾಗಿದ್ದರೆ ಅದು ಅನುವಾದವು, ಎಂದರೆ ತಿಳಿದದ್ದನ್ನೇ ತಿಳಿಸತಕ್ಕದ್ದಾದ್ದರಿಂದ ಅದು ಪ್ರಮಾಣವಲ್ಲ. ಎಲ್ಲಿ ಪ್ರಮಾಣಾಂತರಕ್ಕೆ ವಿರುದ್ಧವಾಗಿರುತ್ತದೆಯೋ ಅಲ್ಲಿ ಗುಣವಾದವು, ಎಂದರೆ ಆಯಾ ಗುಣವನ್ನು ಮಾತ್ರ ತಿಳಿಸುವದು. ಆದರೆ ಎಲ್ಲಿ ಈ ಎರಡು ಪ್ರಕಾರಗಳೂ ಹೊಂದುವದಿಲ್ಲವೋ ಅಲ್ಲಿ ಭೂತಾರ್ಥವಾದವೇ, ಎಂದರೆ ಇದ್ದದ್ದನ್ನೇ ತಿಳಿಸುವದು - ಎಂದು ಇಟ್ಟುಕೊಳ್ಳಬೇಕು ಎಂಬುದು ಆಚಾರ್ಯರ ಮತವು. ಸೂ. ಭಾ. ೧-೩-೩೩.

**ಅಥಾತಃ** - ಬ್ರ.ಸೂ-೨. ಇನ್ನು ಆದ್ದರಿಂದ. ಒಂದನೆಯ ಸೂತ್ರದಲ್ಲಿ ಅಥ ಎಂದರೆ ಸಾಧನಚತುಷ್ಟಯವಾದ ಬಳಿಕ ಎಂದರ್ಥ, ೧-೧೩ ; ಈ ಸೂತ್ರದಲ್ಲಿ ಅತಃ ಎಂದರೆ ಕರ್ಮದ ಫಲವು ಅನಿತ್ಯ, ಬ್ರಹ್ಮಜ್ಞಾನದ ಫಲವೇ ನಿತ್ಯವಾದ **ಪರಮಪುರುಷಾರ್ಥ** ಎಂದು ವೇದವೇ ಹೇಳುವದರಿಂದ ಎಂದರ್ಥ, ೧-೧೪.

**ಅರ್ಥಾನರ್ಥೌ**- ಬ್ರ.ಸೂ-೧. ಒಳ್ಳೆಯ ಕರ್ಮದಿಂದಾಗುವ ಪುರುಷಾರ್ಥ, ನಿಷಿದ್ಧಕರ್ಮದಿಂದಾಗುವ ಅನರ್ಥ, ಇವುಗಳು, ೪೨ ; ಬ್ರ.ಸೂ-೨. ಒಳ್ಳೆಯ ಕೆಟ್ಟ ಫಲಗಳು, ಧರ್ಮಾಧರ್ಮಗಳ ಫಲಗಳಾದ ಅರ್ಥಾನರ್ಥಗಳು ತಾರತಮ್ಯದಿಂದ ಇರುವವು, **ಮೋಕ್ಷವು** ಅವಕ್ಕಿಂತ ವಿಲಕ್ಷಣ, ೧-೪೨ ; ಅರ್ಥಾನರ್ಥಗಳು ತಾಪಕ, ಪುರುಷನು ತಪ್ಯ - ಎಂಬ ವಿಭಾಗವು ವೇದಾಂತದಲ್ಲಿ ವ್ಯಾವಹಾರಿಕ, ೨-೨೦.

**ಅರ್ಥಿತ್ವಾದಿ** - ಬ್ರ.ಸೂ-೧. ಪುರುಷಾರ್ಥವನ್ನು ಬಯಸುವದು, ಅನುಷ್ಠಾನಕ್ಕೆ ಯೋಗ್ಯನಾಗಿರುವದು, ಕರ್ಮವಿಚಾರವನ್ನು ತಿಳಿದಿರುವದು, ಕರ್ಮವನ್ನು ಮಾಡಕೂಡದೆಂದು ನಿಷಿದ್ಧನಾಗದೆ ಇರುವದು - ಎಂಬ ಕರ್ಮಾಧಿಕಾರ ಲಕ್ಷಣಗಳು, ೨೮೧, ೩೦೫.

**ಅದೃಷ್ಟ**- ಬ್ರ.ಸೂ-೧. ಕಾಲಾಂತರದಲ್ಲಿ ಲೋಕಾಂತರದಲ್ಲಿ ಆಗುವ (ಫಲ), ೪೦ ; ಪರೋಕ್ಷವಾದ, ಅನುಮಾನದಿಂದ ತಿಳಿಯಬೇಕಾದ, ೪೧೯ ; ಬ್ರ.ಸೂ-೨. ಕಾಣದಿರುವ ಪರಬ್ರಹ್ಮದ ಉಪಾಸನೆಗೆ ಕಾಲಾಂತರದಲ್ಲಿ ಮೋಕ್ಷವೆಂಬ ಅದೃಷ್ಟಫಲವೆಂದು ವೃತ್ತಿಕಾರರು ಕಲ್ಪಿಸಿದ್ದ (ಫಲ), ೧-೪೦ ; ಸಿದ್ಧಾಂತದಲ್ಲಿ ರಬ್ರಹ್ಮವಿದ್ಯೆಗೆ ದೃಷ್ಟಫಲ, ೧-೪೧, ೨-೪೮೭ ; ಧರ್ಮಾಧರ್ಮಗಳು, ಅದೃಷ್ಟ ದ್ವಾರದಿಂದ ಕರ್ಮಫಲಸಾಂಕರ್ಯವನ್ನು ತಪ್ಪಿಸಿಕೊಳ್ಳುವದು ಸಾಂಖ್ಯರಿಗಾಗಲಿ ಕಾಣಾದರಿಗಾಗಲಿ ಸಾಧ್ಯವಿಲ್ಲ, ೨-೧೭೦ ರಿಂದ ೧೭೨ ; ಪರೋಕ್ಷವಾಗಿರುವ (ಅನುಮೇಯ), ಯುಕ್ತಿಯು ದೃಷ್ಟಸಾಮ್ಯದಿಂದ ಅದೃಷ್ಟವನ್ನು ಸಮರ್ಥಿಸುತ್ತದೆ, ೧-೪೧೯.

**ಅದೃಷ್ಟಂ ದ್ರಷ್ಟೃ** - ಬೃಹ-೨. ತಾನು ದೃಷ್ಟಿಗೆ ಅವಿಷಯವಾಗಿ ಸ್ವರೂಪವಾಗಿರುವ (ಅಕ್ಷರ) ; 'ಅಶ್ರುತಂ ಶ್ರೋತೃ'- ಮುಂತಾದವುಗಳಿಗೂ ಹೀಗೆಯೇ ಅರ್ಥ, ೮೮.

**ಅದೃಷ್ಟಂ (ಫಲಮ್)** - **ಈಶ.** ಕರ್ಮಕ್ಕೆ ಸಿಕ್ಕುವ ಸ್ವರ್ಗವೇ ಮುಂತಾದ ಪರಲೋಕದಲ್ಲಾಗುವ ಫಲ,೧ ; **ಪ್ರಶ್ನ.** ಈ ಲೋಕದಲ್ಲಿ ಕಾಣಲರಿಯದ, ಪರಲೋಕದಲ್ಲಾಗುವದೆಂದು ಶಾಸ್ತ್ರದಲ್ಲಿ ಹೇಳಿರುವ ಫಲ, ೨೧.

**ಅದೃಷ್ಟಾರ್ಥ** - **ತೈ.** ಪರಲೋಕದಲ್ಲಿ ಪಡೆಯಬೇಕಾದ ಫಲಕ್ಕಾಗಿ ಮಾಡುವ (ಕರ್ಮ), ೬೩, ೧೯೮.

**ಅದ್ವಯ** - **ಮಾಂ.** ತನಗೆರೆಡನೆಯದಿಲ್ಲದ (ಬ್ರಹ್ಮ), ೧೧೭, ೧೧೯, ೧೨೧, ೧೨೮, ೧೪೮, ೧೬೦, ೧೭೬, ೧೯೭, ೨೮೨, ೨೮೮, ೨೯೨, ೨೯೩.

**ಅದ್ವಯಃ** - **ಐತ.** ತನಗೆ ಎರಡನೆಯದಿಲ್ಲದ ಆತ್ಮನು, ೨೮.

**ಅದ್ವಿತೀಯ, ಏಕ** - **ಬ್ರ.ಸೂ-೧.** ತನಗೆರಡನೆಯದಿಲ್ಲದ (ಬ್ರಹ್ಮ), ೪೪೮, ೪೫೮ ; **ಬ್ರ.ಸೂ-೨.** ತನಗೆರಡನೆಯದಿಲ್ಲದ (ಬ್ರಹ್ಮ). ಅದ್ವಿತೀಯವಾದ ಪರಬ್ರಹ್ಮದಿಂದಲೇ ಜಗತ್ತಿನ ಸೃಷ್ಟಿ, ೧-೪೪೦, ೪೪೩, ೪೬೨, ೨-೫೭೫ ; ಅವಿದ್ಯೆಯಿಂದ ಆತ್ಮನ ಅದ್ವಿತೀಯತ್ವಕ್ಕೆ ಹಾನಿಯಿಲ್ಲ, ೨-೫೧೦ ; **ನೈ.** ತನಗೆರಡನೆಯದಿಲ್ಲದ (ಬ್ರಹ್ಮ, ಆತ್ಮ). ಅದ್ವಯ ಬ್ರಹ್ಮದಲ್ಲಿ ವಿವಿಧಕಲ್ಪನೆ, ೨-೯೩, ಆತ್ಮನು ಅದ್ವಿತೀಯನು, ಮತ್ತೊಬ್ಬ ಆತ್ಮನಿಲ್ಲ - ಎಂಬುದು ಆತ್ಮನಾದ್ದರಿಂದಲೇ ಸಿದ್ಧವಾಗುತ್ತದೆ; ಏಕೆಂದರೆ ಆತ್ಮನಿಗೆರಡನೆಯದಿದ್ದರೆ ಅನಾತ್ಮವೇ ಆಗುವದೇ ಹೊರತು, ಆತ್ಮನಾಗಲಾರದು. ಅದ್ವಿತೀಯತ್ವವೆಂಬುದು ತತ್ತ್ವಮಸಿವಾಕ್ಯದಲ್ಲಿ ತತ್ಪದಕ್ಕೆ ವಿವಕ್ಷಿತವಾದ ಅರ್ಥವು; ಅದು ಆತ್ಮನನ್ನು ಬಿಟ್ಟರೆ ಇರಲೇ ಆರದು, ೩-೭೬, ೭೮.

**ಅದ್ವೈತ** - **ಮಾಂ.** ತನಗೆರಡನೆಯದಿಲ್ಲದ (ಬ್ರಹ್ಮ), ೧೨, ೧೩, ೪೨, ೫೩, ೫೪, ೫೫, ೧೧೪, ೧೨೬, ೧೨೭, ೧೬೩.

**ಅದ್ವೈತದರ್ಶನಮ್, ಅದ್ವಯಾತ್ಮದರ್ಶನಮ್** - **ಮಾಂ.** ಅದ್ವೈತತತ್ತ್ವದ ಜ್ಞಾನ, ಅದ್ವೈತವೇ ಪರಮಾರ್ಥವೆಂದು ಹೇಳುವ ಶ್ರೀಗೌಡಪಾದರೇ ಮೊದಲಾದವರು ಒಪ್ಪಿರುವ ವೇದಾಂತದರ್ಶನ, ೧೬೦, ೨೦೨, ೨೦೩, ೨೦೫, ३.೪೫.

**ಅದ್ವೈತಾತ್ಮದರ್ಶನಮ್,ವಿಜ್ಞಾನಮ್, ವಿದ್ಯಾ-** **ಛಾಂ.** ಎರಡನೆಯದಿಲ್ಲದ ಆತ್ಮನೇ ತಾನೆಂಬ ಅರಿವು, ೨, ೩, ೪, ೫.

**ಅದ್ವೈತಪ್ರತಿಪತ್ತಿಃ, ಅದ್ವೈತಭಾವಃ - ಮಾಂ.** ಅದ್ವೈತವನ್ನು ಅರಿತು ಅದ್ವೈತಸ್ವರೂಪನಾಗುವದು, ೨, ೩.

**ಅದ್ವೇಷ್ಟೃತ್ವಾದಿಸಾಧನಾನಿ - ನೈ.** ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ ಹೇಳಿರುವ ಸಾಧನಗಳು. ಇವುಗಳಿರುವವನೇ ಈ ಗ್ರಂಥಕ್ಕೆ ಅಧಿಕಾರಿ, ೪-೬೮; ಇವು ಜ್ಞಾನಿಗೆ ಸ್ವಭಾವವಾಗಿಯೇ ಇರುತ್ತವೆ; ಆವನು ಇವನ್ನು ಸಾಧನವೆಂದೇನೂ ಭಾವಿಸಿರುವದಿಲ್ಲ, ೪-೬೯.

**ಅದ್ಧಾತಮ - ನೈ.** ಸ್ಪಷ್ಟತಮವಾದ. ಆತ್ಮವಿಷಯವಾದ **ಅವಿದ್ಯೆಯನ್ನು** ಕಳೆಯುವದಕ್ಕೆ ತತ್ತ್ವಮಸಿ ಮುಂತಾದ ವಾಕ್ಯವೇ ನಿಶ್ಚಿತವಾದ ಪ್ರಮಾಣವು, ೩.-೧೧೭.

**ಅರ್ಧಜರತೀಯಮ್ - ಬ್ರ.ಸೂ-೧.** ಹೇಂಟೆಯ ಅರ್ಧವನ್ನು ಅಡಿಗೆಮಾಡಿ ಉಳಿದ ಅರ್ಧವನ್ನು ಮೊಟ್ಟೆಹಾಕುವದಕ್ಕೆ ಇಟ್ಟುಕೊಳ್ಳುವ ರೀತಿಯ ಅಭಿಪ್ರಾಯ, ೧೦೭, ೧೬೮ ; ಬೃಹ-೧. ಕೋಳಿಯನ್ನು ಅರ್ಧರ್ಧವಾಗಿ ಮಾಡಿ ಮೊಟ್ಟೆಯಿಡುವದಕ್ಕೂ ಅಡಿಗೆಗೂ ಉಪಯೋಗಿಸುವಂತೆ ವಸ್ತುವನ್ನು ಹೀಗೂ ಇರಲಿ, ಹಾಗೂ ಇರಲಿ - ಎಂಬ ನ್ಯಾಯ, ೧೫.

**ಅರ್ಧವೈನಾಶಿಕಃ - ಮಾಂ.** ಬೌದ್ಧಪಕ್ಷವನ್ನೂ ಸ್ವಲ್ಪಮಟ್ಟಿಗೆ ಅಂಗೀಕರಿಸುವವನು, ಜೈನ, ೩೪.

**ಅಧ್ವಾ - ಬ್ರ.ಸೂ-೧.** ಭೂತಭವಿಷ್ಯದ್ವರ್ತಮಾನಕಾಲ, ೪೨೮.

**ಅಧ್ಯಸ್ತಮ್ - ಈಶ.** ಹುಟ್ಟುಗಟ್ಟಿದ, ಭ್ರಾಂತಿಯಿಂದ ಕಲ್ಪಿಸಿದ, ೩.

**ಅಧ್ಯವಸಾಯಃ - ಕೇನ.** ಅಂತಃಕರಣದ ಬುದ್ಧಿವೃತ್ತಿಯ ವ್ಯಾಪಾರ, ನಿಶ್ಚಯಿಸುವದು, ೧೬, ೧೮, ೨೪.

**[illegible]ತ್ಮ - ಬ್ರ.ಸೂ-೧.** ಆತ್ಮನಿಗೆ ಸಂಬಂಧಪಟ್ಟ, ೧೩೯, ೪೦೭ ; ಶರೀರದ ಒಳಗಿರುವ, ೧೧೨, ೧೮೮, ೨೧೦, ೨೦೨ ; ತೈ. ನಮ್ಮ ಒಳಗಿನ ೧೩, ೪೮.

**ಅಧ್ಯಾತ್ಮಮ್ - ಕೇನ.** ತನ್ನೊಳಗಿನ, ಆತ್ಮವಿಷಯವಾದ, ೪೩, ೭೮ ; **ಕಠ.** ಶರೀರದೊಳಗಿನ ವಿಷಯದಲ್ಲಿ, ೧೨೨, ೧೨೩ ; ತನ್ನ ಸ್ವರೂಪವನ್ನೇ, ೧೮೮ ; **ಮಾಂ.** ತನ್ನೊಳಗೆ, ೧೫೦ ; **ಛಾಂ.** ಶರೀರದೊಳಗಿನ ವಿಷಯದ್ದು, ೩೩, ೫೫, ೬೫, ೬೯, ೨೭೯ ; **ಭ.ಗೀ.** ಪ್ರತ್ಯಗಾತ್ಮನಾಗಿರುವ ಬ್ರಹ್ಮಸ್ವರೂಪ, ೪೯೮, ೫೦೨, ೮೯೮; ಶರೀರಕ್ಕೆ ಸಂಬಂಧಪಟ್ಟ, ೭೮೫.

**ಅಧ್ಯಾತ್ಮಮ್, ಆಧ್ಯಾತ್ಮಿಕಮ್** - ಪ್ರಶ್ನ. ತನಗೆ ಸಂಬಂಧಪಟ್ಟ, ತನ್ನ ಶರೀರದೊಳಗಿನ, ೩೭, ೪೫, ೫೦.

**ಅಧ್ಯಾತ್ಮವಿದ್ಯಾ, ಅಧ್ಯಾತ್ಮಜ್ಞಾನಮ್** - ಭ.ಗೀ. ಆತ್ಮಸ್ವರೂಪವನ್ನು ಗೊತ್ತುಪಡಿಸುವ ವಿದ್ಯೆ, ೬೪೦, ೬೫೨, ೭೮೮.

**ಅಧ್ಯಾತ್ಮಪರಿಚ್ಛೇದಃ** - ಈಶ. ಶರೀರದೊಳಗೆ ಕಟ್ಟುಬಿದ್ದಿರುವದು, ೩೭.

**ಅಧ್ಯಾತ್ಮಶಾಸ್ತ್ರಮ್** - ಭ.ಗೀ. ಆತ್ಮಸ್ವರೂಪವನ್ನು ತಿಳಿಸುವ ಶಾಸ್ತ್ರ, ೬೫೨,

**ಅಧ್ಯಾತ್ಮಾದಿದೇವತಾಃ** - ಐತ. ದೇಹದ ಒಳಗಿನ ಕರಣಗಳ ಮತ್ತು ಹೊರಗಿರುವ ದೇವತೆಗಳು, ೪೫.

**ಅಧ್ಯಾತ್ಮಾದಿಭೇದಭಿನ್ನ** - ಬ್ರ.ಸೂ-೧. ಅಧ್ಯಾತ್ಮ, ಅಧಿಭೂತ, ಅಧಿದೈವ - ಹೀಗೆ ವಿಂಗಡಿಸಿಕೊಂಡಿರುವ, ೨೬೦.

**ಅಧ್ಯಾತ್ಮಾಧಿಭೂತಾಧಿದೈವಭಾವಃ** - ಬೃಹ-೧. ಶರೀರದ ಒಳಗೆ, ಹೊರಗೆ ಮತ್ತು ಅಂತರಿಕ್ಷದಲ್ಲಿ - ಎಂದು ಮೂರು ವಿಭಾಗವಾಗಿ ಒಡೆದುಕೊಂಡಿರುವದು, ೧೦೯, ೨೫೮.

**ಅಧ್ಯಾತ್ಮಾಧಿಭೂತಪರಿಚ್ಛೇದಃ** - ಬೃಹ-೨. ಅಗ್ನ್ಯಾದಿಗಳು ತಮ್ಮ 'ಅಧಿದೈವತರೂಪವನ್ನು ಪಡೆಯುವ ಮುಂಚೆ ಇರುವ ಅಧ್ಯಾತ್ಮ ಮತ್ತು ಅಧಿಭೂತದ ಅಲ್ಪರೂಪ, ೭, ೮, ೧೦ ;

**ಅಧ್ಯಾತ್ಮಯೋಗಃ** - ಕಠ. ಮನಸ್ಸನ್ನು ವಿಷಯಗಳಿಂದ ಹಿಂದಕ್ಕೆಳೆದುಕೊಂಡು ಆತ್ಮನಲ್ಲಿಡುವದು, ೬೪.

**ಅಧ್ಯಾರೋಪಃ** - ಪ್ರಶ್ನ. ಕಲ್ಪನೆ, ತತ್ತ್ವವನ್ನು ತಿಳಿಸುವದಕ್ಕಾಗಿ ಶ್ರುತಿಯಲ್ಲಿಟ್ಟುಕೊಂಡಿರುವ ಕಲ್ಪನೆ, ೯೦ ; ನೈ. ಮೇಲೆಹಾಕುವದು, ಕಲ್ಪಿಸುವದು, ಆತ್ಮನಲ್ಲಿ ಅಜ್ಞರು ಬುದ್ಧ್ಯಾದಿಗಳನ್ನು ಕಲ್ಪಿಸುತ್ತಾರೆ, ೧-೬೦.

**ಅಧ್ಯಾರೋಪಣಮ್** - ಕಠ. ಹುಟ್ಟುಗಟ್ಟುವದು, ಕಲ್ಪಿಸುವದು, ೩೨ ;

**ಅಧ್ಯಾರೋಪಣಮ್, ಅಧ್ಯಾರೋಪಣಾ** - ಬೃಹ-೧. ಶಾಸ್ತ್ರದಲ್ಲಿ ಹೇಳಿರುವಂತೆ ದೃಷ್ಟಿಯನ್ನು ಹಾಕಿ ಧ್ಯಾನಿಸುವದು, ೯. ಭ್ರಾಂತಿಯಿಂದ ಹಾಗೆಂದು ಹುಟ್ಟುಗಟ್ಟಿ ತಪ್ಪಾಗಿ ತಿಳಿದುಕೊಳ್ಳುವದು, ೧೫೨, ೧೫೩, ೧೬೦, ೧೬೨.

**ಅಧ್ಯಾರೋಪಿತ** - ಛಾಂ. ಭ್ರಾಂತಿಯಿಂದ ಹುಟ್ಟುಗಟ್ಟಿದ, ೫

**ಅಧ್ಯಾರೋಪಾಪನಯಃ** - ಬೃಹ-೨. ಆತ್ಮನಲ್ಲಿ ಹುಟ್ಟುಗಟ್ಟಿದ ವಿಶೇಷಗಳನ್ನು

**ಅಧ್ಯಾಸಃ** - ಬ್ರ.ಸೂ-೨. (೧) ಒಂದರಲ್ಲೊಂದನ್ನು ಹುಟ್ಟುಗಟ್ಟುವದು. ಆತ್ಮಾನಾತ್ಮಗಳ ಅನ್ಯೋನ್ಯಾಧ್ಯಾಸವೆಂಬ ಅವಿದ್ಯೆಯಿಂದ ವ್ಯವಹಾರ, ೧-೧, ೪. (೨) ಅನ್ಯತ್ರ ಒಂದರಲ್ಲಿ ಮತ್ತೊಂದೆಂಬ ದೃಷ್ಟಿಯನ್ನು ಮಾಡುವದು, ೧-೪೬, -೩.೩.( ಸಾರೂಪ್ಯನಿಮಿತ್ತವಾಗಿ ಅಧ್ಯಾಸವನ್ನು ಮಾಡುತ್ತಾರೆ, ೧-೧೨೬ : **ಕಠ.** ಹುಟ್ಟುಗಟ್ಟುವದು, ಕಲ್ಪಿಸುವದು, ೧೫೧ ; **ಭ.ಗೀ.** ಅದಲ್ಲದ್ದನ್ನು ಅದೆಂದು ತಿಳಿಯುವದು, ೮೨೬ ; **ನೈ.** (೧) ಕಲ್ಪಿಸುವದು, **ಅಧ್ಯಾರೋಪ.** ಆತ್ಮನಲ್ಲಿ ಅಹಂಕಾರ ಮಮಕಾರಗಳಿಲ್ಲವೇ ಇಲ್ಲ. ಸೂರ್ಯನಲ್ಲಿ ಕತ್ತಲೆಯನ್ನು ಅಧ್ಯಾಸಮಾಡಿ ಅಲ್ಲಗಳೆಯುವಂತೆ, ಆತ್ಮನಲ್ಲಿ ಇವುಗಳ ಅಧ್ಯಾಸವನ್ನು ಮಾಡಿ ಅಲ್ಲಗಳೆಯುತ್ತಾರೆ, ೨-೧೦೭: ದ್ವೈತವಸ್ತುವಿನಲ್ಲಿ ಒಳ್ಳೆಯದು ಕೆಟ್ಟದ್ದು ಎಂದು ಅಧ್ಯಾಸಮಾಡುವದು ರಾಗದ್ವೇಷಗಳಿಂದ (ಅವ). ಆತ್ಮನಲ್ಲಿ ದೇಹಾದಿಗಳನ್ನು ಮೂಢರು ಅಧ್ಯಾಸ ಮಾಡುವರು, ೧-೫೯; ಅಂತಃಕರಣದ ಧರ್ಮಗಳಾದ ಸುಖಿತ್ವಾದಿಗಳನ್ನು ಆತ್ಮನಲ್ಲಿಯೂ ಆತ್ಮನ ಚೈತನ್ಯವನ್ನು ಅಹಂಕಾರದಲ್ಲಿಯೂ ಅಧ್ಯಾಸಮಾಡುವದೂ ಅಜ್ಞಾನದಿಂದಲೇ ೨-೧೦೧, ೧೦೨. **ಇತರೇತರಾಧ್ಯಾಸ**ಶಬ್ದವನ್ನು ನೋಡಿ. (೨) **ಅಧ್ಯಾಸಮಾಡಿಕೊಂಡಿರುವ ಪದಾರ್ಥಕ್ಕೂ** ಅಧ್ಯಾಸವೆಂದೇ ಹೆಸರು. ಸಂಸಾರವು ಆತ್ಮನಲ್ಲಿ ಅಧ್ಯಾಸವೇ, ೨-೧೧೬ ; **ಶಾಂ. ನಿ.** ಒಂದು ವಸ್ತುವಿನಲ್ಲಿಲ್ಲದ ಸ್ವರೂಪವನ್ನು ಅದರಲ್ಲಿ ಹುಟ್ಟುಗಟ್ಟುವ ತಪ್ಪು ತಿಳಿವಳಿಕೆ. ಶರೀರವೇ ನಾನೆಂಬುದು ಅಧ್ಯಾಸ, ಮಿಥ್ಯಾಜ್ಞಾನ ಎಂದು ತಾರ್ಕಿಕರೇ ಮೊದಲಾದವರೂ ಒಪ್ಪಿದ್ದರು. ಆದರೆ ಶರೀರಕ್ಕಿಂತ ಬೇರೆಯಾಗಿ ''ನಾನು'' ಎಂಬ ಅರಿಯಬರುವ ಆತ್ಮಸ್ವರೂಪವೂ ನಿಜವಾಗಿರುವದಲ್ಲ, ಅದೂ ಆತ್ಮನಲ್ಲಿ ಕಲ್ಪಿತವಾಗಿರುವ ರೂಪವೇ ಎಂದು ಶಂಕರಾಚಾರ್ಯರು ತಮ್ಮ ಸೂತ್ರಭಾಷ್ಯದ ಮುನ್ನುಡಿಯಲ್ಲಿ ತಿಳಿಸಿರುತ್ತಾರೆ. ನಾನು, ನೀನು-ಎಂದು ವಿಂಗಡಿಸುವದಕ್ಕೆ ಬಾರದ ಶುದ್ಧವಾದ ಆತ್ಮನಲ್ಲಿ ಅನಾತ್ಮವಾದ ಅಂತಃಕರಣವೇ ಮುಂತಾದವುಗಳನ್ನೂ ಅವುಗಳಲ್ಲಿ ಆತ್ಮನನ್ನೂ ಭ್ರಾಂತಿಯಿಂದ ಹುಟ್ಟುಗಟ್ಟುವದೇ ಎಲ್ಲಕ್ಕೂ ಮೂಲವಾದ ಅಧ್ಯಾಸವು ಎಂಬುದು ಶಾಂಕರಾದ್ವೈತದ ಸಿದ್ಧಾಂತವು. ಈ ಅಧ್ಯಾಸಕ್ಕೆ **'ಅವಿದ್ಯೆ'** ಎಂಬ ಹೆಸರೂ ಉಂಟು.

ಅಧ್ಯಾಸವೆಂದರೆ **'ಅದಲ್ಲದ್ದರಲ್ಲಿ ಅದೆಂಬ ಬುದ್ಧಿ'** ಎಂದು ಭಾಷ್ಯಕಾರರು ಸೂತ್ರಭಾಷ್ಯದಲ್ಲಿ ಕಂಠೋಕ್ತವಾಗಿ ಹೇಳಿರುತ್ತಾರೆ. ಆದ್ದರಿಂದ ತಪ್ಪಾದ ತಿಳಿವಳಿಕೆಯಿಂದ ಒಂದು ವಸ್ತುವನ್ನು ಮತ್ತೊಂದೆಂದು ಭಾವಿಸುವದೇ ಅಧ್ಯಾಸವು ಎಂಬುದು ಅವರ ಮತವು. ಒಂದು ವಸ್ತುವಿನಲ್ಲಿ ಹುಟ್ಟುಗಟ್ಟಿದ ಹುಸಿತೋರಿಕೆಯ

ವಸ್ತುವನ್ನು **ಅರ್ಥಾಧ್ಯಾಸ** ಎಂದು ಕರೆಯುವ ವಾಡಿಕೆಯು ವ್ಯಾಖ್ಯಾನಗಳಲ್ಲಿ ಕಂಡುಬರುತ್ತದೆ ; ಆದರೆ ಭಾಷ್ಯದಲ್ಲಿ ಆ ಶಬ್ದವನ್ನು ಬಳಸಿರುವದಿಲ್ಲ.

ಆತ್ಮನ ದೇಹಾದಿಗಳನ್ನೂ ಆತ್ಮನ ರೂಪವೆಂದೇ ಕಲ್ಪಿಸಿಕೊಂಡು ಆ ಕಲ್ಪಿತರೂಪವನ್ನೇ ಆತ್ಮಸ್ವರೂಪವನ್ನು ತಿಳಿಸುವದಕ್ಕೆ ವೇದಾಂತದಲ್ಲಿ ಉಪಾಯವಾಗಿ ಮಾಡಿಕೊಳ್ಳುವದುಂಟು ; ಈ ಕಲ್ಪನೆಗೂ ಅಧ್ಯಾರೋಪ ಎಂಬ ಹೆಸರನ್ನು ಉಪಯೋಗಿಸುತ್ತಾರೆ. ಆತ್ಮಸ್ವರೂಪವನ್ನು ತಿಳಿಸಿಕೊಟ್ಟ ಬಳಿಕ ಇಂಥ ಕಲ್ಪಿತ ರೂಪವನ್ನು ಅಲ್ಲಗಳೆಯುವದಕ್ಕೆ **'ಅಪವಾದ'** ಎಂಬ ಹೆಸರನ್ನು ಉಪಯೋಗಿಸುವರು. ಆಚಾರ್ಯರು **"ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ"** ಎಂಬ ಸಂಪ್ರದಾಯವಿದರ ಉಕ್ತಿಯನ್ನು ಗೀತಾಭಾಷ್ಯ (೧೩-೧೩) ದಲ್ಲಿ ಉದಾಹರಿಸಿರುತ್ತಾರೆ. ಇಲ್ಲಿಯೂ ಅಧ್ಯಾರೋಪವೆಂದರೆ ಹುಟ್ಟುಗಟ್ಟುವಿಕೆ ಎಂದೇ ಅರ್ಥವಾದರೂ ಉಪದೇಶಕ್ಕಾಗಿ ಹುಟ್ಟುಗಟ್ಟಿದವರು ಜ್ಞಾನಿಗಳಾದ್ದರಿಂದ ಈ ಅಧ್ಯಾರೋಪವು ಭ್ರಾಂತಿಯಲ್ಲ.

ಶ್ರುತಿಯಲ್ಲಿ "ನಾಮವನ್ನು ಬ್ರಹ್ಮವೆಂದು ಉಪಾಸನೆಮಾಡಬೇಕು" ಎಂದು ಮುಂತಾಗಿ ಉಪದೇಶಿಸಿರುತ್ತದೆ. ಪ್ರತಿಮೆಯೇ ಮುಂತಾದವುಗಳನ್ನು ವಿಷ್ಣು ಮುಂತಾದ ದೇವತೆಗಳೆಂದು ಉಪಾಸನಮಾಡಬೇಕೆಂದು ಪುರಾಣಗಳಲ್ಲಿ ಹೇಳಿರುತ್ತದೆ. ಅದನ್ನೂ 'ಅಧ್ಯಾಸ' ಎಂದು ಕರೆಯುವದುಂಟು. ಆದರೆ ಇದೂ ಶಾಸ್ತ್ರದಲ್ಲಿ ಹೇಳಿದ್ದಾದ್ದರಿಂದ ಭ್ರಾಂತಿಜ್ಞಾನವಲ್ಲ.

**ಅಧಿಕರಣಾಧಿಕರ್ತವ್ಯತಾ - ಛಾಂ.** ಒಂದರಲ್ಲೊಂದಿರುವದು, ಆಧಾರಾಧೇಯಭಾವ, ೫೯.

**ಅಧಿಕೃತಃ - ಭ.ಗೀ.** ಅಧಿಕಾರಿ, ಅನುಷ್ಠಾನ ಮಾಡಲು ಅರ್ಹನು, ೧೫೬, ೧೬೬, ೧೭೦, ೧೭೫, ೧೭೮, ೧೭೯, ೨೦೨, ೧೦೦೪, ೧೦೦೫, ೧೦೧೩, ೧೦೧೯, ೧೦೨೧, ೧೦೨೨.

**ಅಧಿಕಾರಃ - ಬ್ರ.ಸೂ-೧.** ಪ್ರಕರಣದ ಆರಂಭ ; ಪ್ರಕರಣ, ೧೧, ೧೦೩ ; ಅನುಷ್ಠಾನಕ್ಕೆ ಅಥವಾ ಜ್ಞಾನಕ್ಕೆ ತಕ್ಕ ಯೋಗ್ಯತೆ, ೨೭೯, ೨೮೧, ೨೮೨, ೩೦೦, ೩೦೫, ೩೦೬, ೩೦೭, ೩೦೯, ೩೧೧, ೩೧೨, ೩೧೩ ; **ಬ್ರ.ಸೂ-೨.** ಪ್ರಕರಣದ ಆರಂಭ, ಪ್ರಕರಣ. ಈ ಶಾಸ್ತ್ರದ ಮೊದಲನೆಯ ಸೂತ್ರದಲ್ಲಿ ಅಥಶಬ್ದಕ್ಕೆ ಅಧಿಕಾರವೆಂಬರ್ಥವಿಲ್ಲ, ೧-೧೧. ತಕ್ಕ ಯೋಗ್ಯತೆ. ಮನುಷ್ಯರಿಗೆ ಶಾಸ್ತ್ರದಲ್ಲಿ ಅಧಿಕಾರ. ೧-೨೭೯ ; ದೇವತೆಗಳಿಗೂ ಋಷಿಗಳಿಗೂ ಬ್ರಹ್ಮ ವಿದ್ಯೆಯಲ್ಲಿ ಅಧಿಕಾರವುಂಟು,

೧-೨೮೧, ೨೮೨, ೩೦೦ ; ಶೂದ್ರರಿಗೆ ಬ್ರಹ್ಮವಿದ್ಯೆಗಳಲ್ಲಿ ವೇದಪೂರ್ವಕವಾದ ಅಧಿಕಾರವಿಲ್ಲ, ೧-೩೦೭, ೩೧೦ ರಿಂದ ೩೧೨ ; ಶೂದ್ರರಿಗೂ ಇತಿಹಾಸ ಪುರಾಣಾದಿಗಳ ಮೂಲಕ ಜ್ಞಾನಕ್ಕೆ ಅಧಿಕಾರ, ೧-೩೧೩ ; **ಆಶ್ರಮಕರ್ಮ**ವಿಲ್ಲದ ವಿಧುರಾದಿಗಳಿಗೂ ಜ್ಞಾನದಲ್ಲಿ ಅಧಿಕಾರ, ೨-೪೮೨. ಲೋಕಸ್ಥಿತಿಗೆ ಬೇಕಾದ ಕಾರ್ಯ. ಜ್ಞಾನಿಗಳಿಗೆ ಆಯಾ ಅಧಿಕಾರವಿರುವವರೆಗೆ ಕರ್ಮಕ್ಷಯವಿಲ್ಲ , ೨-೩೮೦ ; **ಈಶ.** ತಕ್ಕ ಯೋಗ್ಯತೆ ; ಅಧಿಕಾರೀ - ಯೋಗ್ಯತೆಯುಳ್ಳವನು, ೨, ೩ ; **ಮುಂ.** ತಕ್ಕ ಯೋಗ್ಯತೆ, ೪, ೪೪ ; **ತೈ.** (ಕರ್ಮಕ್ಕೆ ಅಥವಾ ಜ್ಞಾನಕ್ಕೆ ಬೇಕಾದ) ಯೋಗ್ಯತೆ, ೭೦, ೭೨, ೮೬.

**ಅಧಿಕೃತಾಧಿಕಾರಃ** - **ಬ್ರ.ಸೂ-೧.** ಒಂದು ಅನುಷ್ಠಾನಕ್ಕೆ ಅಧಿಕಾರವಿರುವವನಿಗೆ ಮತ್ತೊಂದರಲ್ಲಿ ಅಧಿಕಾರವಿರುವಿಕೆ, ೧೨.

**ಅಧಿಕಾರಿತಾರತಮ್ಯಮ್** - **ಬ್ರ.ಸೂ-೧.** ಅಧಿಕಾರಿಗಳಲ್ಲಿರುವ ಯೋಗ್ಯತೆಯ ಹೆಚ್ಚು ಕಡಿಮೆ, ೪೨.

**ಅಧಿಕಾರವಿದಃ** - **ಈಶ.** ಕರ್ಮಕ್ಕೆ ಅಧಿಕಾರವು ಯಾವದೆಂಬುದನ್ನು ಬಲ್ಲ ಮೀಮಾಂಸಕರು, ೧.

**ಅಧಿಕಾರೀ** - **ಕಠ.** ವಿದ್ಯೆಗೆ ತಕ್ಕವನು, ೬.

**ಅಧಿಗತಸಕಲವೇದಾರ್ಥಃ** - **ಛಾಂ.** ಎಲ್ಲಾ ವೇದದ ಅರ್ಥವನ್ನೂ ತಿಳಿದುಕೊಂಡಿರುವವ (ಕರ್ಮಾಧಿಕಾರಿ), ೪.

**ಅಧಿದೈವ, ಅಧಿದೈವತ** - **ಬ್ರ.ಸೂ-೧.** ದೇವತೆಗಳಾದ ಸೂರ್ಯಾದಿಗಳ ವಿಷಯದ್ದು, ೧೧೨, ೧೮೮, ೨೧೦, ೨೧೨ ;

**ಅಧಿದೈವಮ್** - **ಕಠ.** ದೇವತೆಗಳ ವಿಷಯದಲ್ಲಿ, ೧೨೩.

**ಅಧಿದೈವತಮ್** - **ಕೇನ.** ದೇವತೆಗಳ ವಿಷಯವಾದದ್ದು, ೪೩, ೭೭ ; **ಪ್ರಶ್ನ.** ಸೂರ್ಯನೇ ಮುಂತಾದ ದೇವತೆಗಳಿಗೆ ಸಂಬಂಧಪಟ್ಟಿರುವ, ೩೭, ೪೫ ; **ಮಾಂ.** ದೇವತೆಗಳ ವಿಷಯವಾಗಿ, ೧೫೦ ; **ಛಾಂ.** ದೇವತೆಗಳ ವಿಷಯದ್ದು, ೩೩, ೩೪, ೫೪, ೬೪, ೨೭೯.

**ಅಧಿದೈವತಾತ್ಮಾ** - **ಈಶ.** ದೇವತಾಸ್ವರೂಪನಾದ, ೩೭.

**ಅಧಿಭೂತ** - **ಬ್ರ.ಸೂ-೧.** ಪೃಥಿವ್ಯಾದಿಭೂತಗಳ ವಿಷಯದ್ದು ೧೮೮.

**ಅಧಿಭೂತಮ್** - **ಪ್ರಶ್ನ.** ಭೂತಗಳಿಗೆ ಸಂಬಂಧಪಟ್ಟ, ಹೊರಗಿನ, ೩೭.

**ಅಧಿಯಜ್ಞಮ್ - ಕಠ.** ಯಜ್ಞದ ವಿಷಯದಲ್ಲಿ, ೧೨೨.

**ಅಧಿಷ್ಠಾತೃ, ಅಧ್ಯಕ್ಷಃ - ಬ್ರ.ಸೂ-೧.** ಆಳುವ, ಮೇಲೆ ನೋಡಿಕೊಳ್ಳುವ (ಕರ್ತೃ - ಯಜಮಾನ, ದೇವತೆ ಇತ್ಯಾದಿ), ೧೭೬, ೩೦೨, ೩೬೯, ೩೯೧, ೪೧೪ ; ಬ್ರ.ಸೂ-೨. ಮೇಲಿದ್ದು ಆಳುವ, ಅಚೇತನಕ್ಕೆ ಚೇತನವು ಅಧಿಷ್ಠಾತೃ, ೧-೩೦೨, ೩೯೧, ೪೧೪ ; ಜಗತ್ಕಾರಣಕ್ಕೆ ಮತ್ತೊಂದು ಅಧಿಷ್ಠಾತೃವಿಲ್ಲ, ೧-೩೯೧ ; ಬ್ರಹ್ಮವು ಕೇವಲಾಧಿಷ್ಠಾತೃ ಎಂಬ ಸಾಂಖ್ಯಯೋಗಾಶ್ರಿತಪಕ್ಷಗಳ ಮತ್ತು ವೈಶೇಷಿಕಾದಿಗಳ ಮತವು ಸರಿಯಲ್ಲ, ೨-೭೪, ೭೫.

**ಅಧಿಷ್ಠಾತಾ - ಐತ.** ಆಳುವ (ದೇವತೆ), ೩.೫, ೫೧.

**ಅಧಿಷ್ಠಾನಮ್ - ಬ್ರ.ಸೂ-೧.** ಆಶ್ರಯ, ಭೋಗಕ್ಕೆ ಆಶ್ರಯವಾಗಿರುವ ಶರೀರ, ೫ ; **ಬ್ರ.ಸೂ-೨.** ಆಳುವದು. ತಾರ್ಕಿಕರ ಈಶ್ವರನಿಗೆ ರೂಪರಹಿತವಾದ ಪ್ರಧಾನದ ಅಧಿಷ್ಠಾನವು ಹೊಂದದ್ದು, ೨-೭೭. ಆಶ್ರಯ, ಶರೀರ, ಇಂದ್ರಿಯವ್ಯವಹಾರಕ್ಕೆ ಅಧ್ಯಸ್ತವಾದ ದೇಹವೆಂಬ ಅಧಿಷ್ಠಾನವು ಬೇಕು, ೧-೫ ; ತಾರ್ಕಿಕರ ಈಶ್ವರನಿಗೆ ಅಧಿಷ್ಠಾನವಿಲ್ಲದ್ದರಿಂದ ಅಧಿಷ್ಠಾತೃತ್ವವು ಹೊಂದದ್ದು, ೨-೭೯ ; **ಐತ.** ಆಶ್ರಯ, ಸ್ಥಾನ, ೩೩, ೩೫, ೪೧, ೪೨, ೪೪, ೪೫, ೬೨ ; **ಛಾಂ.** ಭೋಗಕ್ಕೆ ಆಶ್ರಯವಾದ, ಜೀವರೂಪದಿಂದ ಪರಮಾತ್ಮನು ಇದ್ದುಕೊಂಡಿರುವ ಸ್ಥಾನವಾದ ಶರೀರ, ೬೬೬ ; **ಭ.ಗೀ.** ಆಶ್ರಯ, ೨೨೩ ; ಇಚ್ಛಾದಿಗಳು ತೋರಿಕೊಳ್ಳುವದಕ್ಕೆ ಆಶ್ರಯವಾದ ಶರೀರ, ೪೯೪ ; **ಶಾಂ. ನಿ.** ಇಚ್ಛೆ, ದ್ವೇಷ, ಸುಖ, ದುಃಖ, ಜ್ಞಾನ - ಮುಂತಾದವುಗಳು ಹೊರತೋರಿಕೊಳ್ಳುವದಕ್ಕೆ ಆಶ್ರಯವಾದ ಶರೀರ. ಭಗವದ್ಗೀತೆಯ ಭಾಷ್ಯದಲ್ಲಿಯೂ (೧೮-೧೪) ಮಿಕ್ಕ ಭಾಷ್ಯಗಳಲ್ಲಿಯೂ ಈ ಅರ್ಥದಲ್ಲಿಯೇ ಅಧಿಷ್ಠಾನಶಬ್ದವನ್ನುಪಯೋಗಿಸಿದೆ. ಯಾವದರಲ್ಲಿ ಭ್ರಾಂತಿಯಿಂದ ತೋರಿಕೆಯ ವಸ್ತುಗಳನ್ನು ಆರೋಪಿಸುವರೋ ಅಂಥ ವಸ್ತು ; ಹಾವಿಗೆ ಹಗ್ಗವೂ ಬೆಳ್ಳಿಗೆ ಕಪ್ಪೆಯ ಚಿಪ್ಪೂ ಅಧಿಷ್ಠಾನವು ಎಂಬರ್ಥದಲ್ಲಿಯೂ ಈಚಿನ ವೇದಾಂತಿಗಳು ಈ ಶಬ್ದವನ್ನು ಉಪಯೋಗಿಸುತ್ತಾರೆ ; ಆದರೆ ಭಾಷ್ಯದಲ್ಲಿ ಈ ಅರ್ಥದಲ್ಲಿ ಪ್ರಯೋಗವಿಲ್ಲ.

**ಅಧೋಗತಿಃ - ಕೇನ.** ಪಶ್ವಾದಿಗಳಿಂದ ಹಿಡಿದು ಸ್ಥಾವರಪ್ರಾಣಿಗಳವರೆಗಿನ ಜನ್ಮಗಳನ್ನು ಪಡೆಯುವದು. ದಕ್ಷಿಣೋತ್ತರಮಾರ್ಗಗಳಿಗಿಂತ ಬೇರೆಯಾದ ಮೂರನೆಯ ಗತಿ - ಶಾಸ್ತ್ರೀಯಕರ್ಮವನ್ನಾಗಲಿ ಉಪಾಸನೆಯನ್ನಾಗಲಿ ಮಾಡದೆ ಸ್ವೇಚ್ಛೆಯಿಂದ ನಡೆಯುವವರಿಗೆ ಆಗುವ ಕೀಳುಗತಿ, ೨.

**ಅನರ್ಥಃ** - ನೈ. ಸಂಸಾರವು. ಅಜ್ಞಾನದಿಂದಲೇ ಅನರ್ಥ (ಅವ). ಮಿಥ್ಯಾ ಜ್ಞಾನದಿಂದಲೇ ಅನರ್ಥವೆಂಬ ಸಾಂಖ್ಯರ ಮತ ಸರಿಯಲ್ಲ, ೩-೬.

**ಅನನ್ತಃ** - ಬ್ರ.ಸೂ-೧. ಕಾಲಗಳಲ್ಲಿ ಕೊನೆಗಾಣದೆ ಇರುವ (ಅಧ್ಯಾಸ), ೯ ; ಪರಿಚ್ಛೇದವಿಲ್ಲದ (ಬ್ರಹ್ಮ), ೧೧೯, ೩೬೬.

**ಅನಧಿಕಾರಪ್ರಯೋಜಕಧರ್ಮಾಃ** - ಈಶ. ಅಧಿಕಾರವಿಲ್ಲದಿರುವದಕ್ಕೆ ಕಾರಣವಾದ ಧರ್ಮಗಳು, ೧.

**ಅನಧಿಕೃತಾಃ** - ಐತ. ಕರ್ಮಕ್ಕೆ ಅಧಿಕಾರಿಗಳಲ್ಲದ ಕುರುಡರು, ಹೆಳವರು ಮುಂತಾದವರು, ೭, ೨೩.

**ಅನಧಿಗತವಸ್ತುಪರಿಚ್ಛೇದಃ, ಅನಧಿಗತಾಧಿಗಮಃ** - ನೈ. ತಿಳಿಯದೆ ಇರುವ ವಸ್ತುವನ್ನು ತಿಳಿಸಿಕೊಡುವದು (ಪ್ರಮಾಣ), ೧-೯೧; ಆತ್ಮನು ಅವಗತಿರೂಪನಾಗಿಯೇ ಇರುವದರಿಂದ ಅವನು ಅನಧಿಗತನಾಗಿದ್ದು ಶಾಸ್ತ್ರವು ಹೊಸದಾಗಿ ತಿಳಿಸಿಕೊಡುವದಿಲ್ಲ, ೨-೧೦೫.

**ಅನನ್ವಯಃ** - ನೈ. ಅನ್ವಯವಿಲ್ಲದಿರುವದು, ವ್ಯತಿರೇಕ, ೨-೩೨.

**ಅನನ್ಯಶೇಷಃ** - ಬ್ರ.ಸೂ-೧. ಮತ್ತೊಂದಕ್ಕೆ ಅಧೀನವಾಗಿಲ್ಲದ (ಪರಮಾತ್ಮ), ೫೪.

**ಅನಪಾಯೋಪಜನಧರ್ಮಕಮ್** - ಪ್ರಶ್ನ. ನಾಶವಾಗಲಿ, ಹುಟ್ಟಾಗಲಿ ತನ್ನ ಧರ್ಮವಲ್ಲದಿರುವ ಚೈತನ್ಯ, ೯೧.

**ಅನಭಿಧೇಯ** - ನೈ. ಆತ್ಮನಲ್ಲಿ ಷಷ್ಠೀಗುಣಾದಿಗಳು ಇಲ್ಲವಾದ್ದರಿಂದ ಅವನು ಅನಭಿಧೇಯ, ಯಾವ ಹೆಸರಿನಿಂದಲೂ ಪಡೆಯುವದಕ್ಕೆ ತಕ್ಕವನಲ್ಲ, ೩-೧೦೩; ಅನಭಿಧೇಯನಾದ ಆತ್ಮನ ವಿಷಯಕ್ಕೆ ಶಬ್ದವು ಅವಿದ್ಯಾನಿರಾಕರಣ ಮೂಲಕವಾಗಿ ಪ್ರಮೆಯನ್ನುಂಟುಮಾಡುತ್ತದೆ, ೩-೧೦೫, ೧೦೬.

**ಅನಭಿವ್ಯಕ್ತನಾಮರೂಪಮ್** - ಬ್ರ.ಸೂ-೧. ನಾಮರೂಪಗಳು ಹೊರತೋರಿಕೊಳ್ಳದ (ಪ್ರಪಂಚ) ೩೩೯.

**ಅನವಗಮಃ** - ನೈ. ಅಜ್ಞಾನ. ಬುದ್ಧ್ಯಾದಿಗಳು ಅನವಗಮಸ್ವರೂಪವೇ; ಏಕೆಂದರೆ ಅವಕ್ಕೆ ಮೋಹವೇ ಉಪಾದಾನ, ೨-೯೯.

**ಅನವಬೋಧಃ** - ನೈ. ಅಜ್ಞಾನ. ಅನವಬೋಧವೇ ಅನರ್ಥಕ್ಕೆ ಕಾರಣ, (ಅವ); ಅನವಬೋಧವೇ ಕರ್ಮಪ್ರವೃತ್ತಿಗೆ ಹೇತು, ೧-೩೦;

**ಅಪುರುಷತಂತ್ರಜ್ಞಾನವೇ** ಇದನ್ನು ನಾಶಗೊಳಿಸುವದು, ೧-೮೮; ಆತ್ಮಚೈತನ್ಯದಲ್ಲಿ ಪ್ರತಿಬಿಂಬಿತವಾಗಿರುವ ಅನವಬೋಧವನ್ನಾಶ್ರಯಿಸಿಯೇ ಸಂಸಾರವು ತೋರುತ್ತದೆ; ಸಂಸಾರಕ್ಕೆ ಅದೇ **ಉಪಾದಾನವು,** ೨-೯೭, ೯೮; ಅನವಬೋಧವು ಅನಾತ್ಮಸ್ವಭಾವದ್ದಾಗಿರುತ್ತದೆ, ೩-೨೯; ಪ್ರಮಾತ್ರಾದಿಗಳಿಗೆ ಅನವಬೋಧವೇ ಉಪಾದಾನ, ೨-೧೦೫; ಇದೇ ಪ್ರತ್ಯಗಾತ್ಮನಿಗೆ ದುಃಖಿತ್ವ ಸದ್ವಿತೀಯತ್ವಕ್ಕೂ ಹೇತು, ೩-೭೭, ೭೮; ಜ್ಞಾನವಾದ ಮೇಲೂ ಅನವಬೋಧದಿಂದ ಆದ ರಾಗದ್ವೇಷಾದಿಗಳು ತೋರುತ್ತವೆ ಎಂಬುದು ಸರಿಯಲ್ಲ, ೧-೩೮.

**ಅನಾಗಮಪ್ರಮಾಣಪ್ರಮೇಯತ್ವಮ್ - ಬೃಹ-೨.** ಆಗಮವಲ್ಲದ ಪ್ರಮಾಣಕ್ಕೆ ಪ್ರಮೇಯವಾಗಿರುವದು, ೨೯೮.

**ಅನಾಗಮಾಪಾಯಿ - ನೈ. ಆಗಮಾಪಾಯಿ**ಯಲ್ಲದ ಸುಖವು, ಆತ್ಮಸ್ವರೂಪವೇ, (ಅವ).

**ಅನಾಗಮಿಕ - ನೈ.** ಆಗಮ (ವೇದ)ಕ್ಕೆ ಸಂಬಂಧಪಡದ ಪ್ರತ್ಯಕ್ಷಾದಿಗಳು, (ಅವ).

**ಅನಾತ್ಮಾ - ಬ್ರ.ಸೂ-೧.** ಆತ್ಮನಲ್ಲದ್ದು, ಆತ್ಮನಲ್ಲಿ ಕಲ್ಪಿತವಾಗಿರುವದು, ೩, ೮೫ ; ಸ್ವರೂಪವಲ್ಲದ್ದು, ೪೫೦ ; ನೈ. ಆತ್ಮನಲ್ಲದ್ದು, **ಬುದ್ಧ್ಯಾದಿದೇಹಾಂತಗಳು,** ೨-೧೫, ೧೯; ಅನಾತ್ಮವು ಅಜ್ಞಾನಕ್ಕೆ ಆಶ್ರಯವೂ ಅಲ್ಲ, ವಿಷಯವೂ ಅಲ್ಲ, ಏಕೆಂದರೆ ಅದು **ಅಜ್ಞಾನದಿಂದ** ಉಂಟಾಗಿರುತ್ತದೆ ೩-೧; ಅಜ್ಞಾನಸಿದ್ಧವಾದ್ದರಿಂದಲೇ ಅನಾತ್ಮವು ಇಂದ್ರಜಾಲದಂತೆ ಹುಸಿ, ೨-೧೧೨; ಆತ್ಮನನ್ನಾಶ್ರಯಿಸಿಯೇ ಸಿದ್ಧವಾಗಿರುತ್ತದೆ, ೨-೧೧೨, ೧೧೫; **ಆಗಮಾಪಾಯಿ,** ೩-೨೨; ಶರೀರಾದಿಗಳು ಅನಾತ್ಮವೆಂಬುದನ್ನು ಅರಿತುಕೊಳ್ಳುವ ಬಗೆ, ೨-೨೧, ೨೨, ೨೩, ೩-೫೬; ಬುದ್ಧ್ಯಾದಿಗಳು ಅನಾತ್ಮವೆಂದು ಅರಿತುಕೊಳ್ಳುವ ವಿವೇಕವು **ಬುದ್ಧಿಯಲ್ಲಿಯೇ,** ೪-೧೪; ಅವು ಆತ್ಮನಲ್ಲವೆಂದು ತಿಳಿದರೂ ಕಳವಳವು ತಪ್ಪುವದಿಲ್ಲ, ೪-೯, ೧೦.

**ಅನಾತ್ಮಕ - ನೈ.** ತಿರುಳಿಲ್ಲದ **ದ್ವೈತ,** ೨-೪೪.

**ಅನಾತ್ಮದರ್ಶೀ, ಅನಾತ್ಮವಿತ್ - ತೈ.** ಆತ್ಮನಲ್ಲದ ದೇಹಾದಿಗಳನ್ನು ತಾನೆಂದುಕೊಂಡು ವಿಷಯಗಳನ್ನು ಸತ್ಯವೆಂದು ತಿಳಿಯುವವನು, ೬, ೮೦.

**ಅನಾತ್ಮಲೋಕಾಃ - ಬೃಹ-೨.** ಆತ್ಮನಲ್ಲದ ಮನುಷ್ಯಪಿತೃದೇವಲೋಕಗಳು, ೫೬.

**ಅನಾತ್ಮಾಧ್ಯಾರೋಪಣಮ್** - ಭ.ಗೀ. ಆತ್ಮನಲ್ಲದ್ದನ್ನು ಹುಟ್ಟುಗಟ್ಟುವದು, ೨೬೮.

**ಅನಾದಿಃ** - ಬ್ರ.ಸೂ-೧. ಯಾವಾಗ ಮೊದಲಾಯಿತೆಂಬುದು ತಿಳಿಯದ (ಅಧ್ಯಾಸ), ೯, (ಜೀವನ ಶರೀರಕ್ಕೂ ಧರ್ಮಗಳಿಗೂ ಸಂಬಂಧ) ೫೮, (ಸಂಸಾರ) ೨೯೩, ೪೭೪, ೪೭೫, ೬೭೬ ; **ಮಾಂ.** ಆದಿಯಿಲ್ಲದ, ಅನಾದಿಕಾಲದಿಂದ ಬಂದಿರುವ (ಮಾಯೆ), ೫೩. ; ಹುಟ್ಟದೆ ಇರುವ, ೨೫೫ ; **ನೈ.** ಆದಿಯಿಲ್ಲದ್ದು. ಸಂಸಾರವು ಅನಾದಿಯಾಗಿರುವದರಿಂದ ಹಿಂದೆ ಸೂಚಿತವಾಗಿರುವ ಕರ್ಮಗಳು ಇಷ್ಟೆಂಬುದನ್ನು ಗೊತುಪಡಿಸುವದು ಆಗುವದಿಲ್ಲ. ೧-೮೧.

**ಅನಾದ್ಯವಿದ್ಯಾ** - **ಕಠ.** ಎಂದುಂಟಾಯಿತೆಂದು ತಿಳಿಯುವದಕ್ಕೆ ಆಗದಿರುವ ತಪ್ಪು ತಿಳಿವಳಿಕೆ, ಆತ್ಮಾನಾತ್ಮರ ಅಧ್ಯಾಸ, ೧೦೫.

**ಅನಾರಬ್ಧಫಲ** - **ನೈ.** ಫಲವನ್ನು ಕೊಡದೆ ಇರುವ ಕರ್ಮ. ಅನಾರಬ್ಧ ಫಲವುಳ್ಳ ಅಶುಭಕರ್ಮಗಳನ್ನು ಮಾತ್ರ ಪ್ರಾಯಶ್ಚಿತ್ತದಿಂದ ಮುಗಿಸಬಹುದು, ೧-೮೧.

**ಅನಾವರಣಜ್ಞಾನ** - ಬ್ರ.ಸೂ-೧. ಮುಸುಕಿಲ್ಲದ ನಿತ್ಯಜ್ಞಾನ, ೭೦

**ಅನಾವರಣಜ್ಞಾನಶಕ್ತಿಃ** - ಭ.ಗೀ. ಮುಸುಕಿಲ್ಲದ ಜ್ಞಾನಶಕ್ತಿಯುಳ್ಳ ಈಶ್ವರ, ೨೫೬.

**ಅನಿರ್ವಚನೀಯ** - ಬ್ರ.ಸೂ-೨. ಗೊತ್ತುಪಡಿಸಿ ಹೇಳಲಿಕ್ಕಾಗದ ಅವ್ಯಾಕೃತನಾಮರೂಪಗಳು. ಬ್ರಹ್ಮವೆಂದಾಗಲಿ ಅದಕ್ಕಿಂತ ಬೇರೆಯೆಂದಾಗಲಿ ನಿರ್ವಚನಮಾಡಲಿಕ್ಕಾಗದವು, ೧-೬೯, ೪೪೦ ; ನಾಮರೂಪಗಳು ಅನಿರ್ವಚನೀಯವಾಗಿರುವದರಿಂದಲೇ ಅದಕ್ಕೆ ಮಾಯೆ, ಅವ್ಯಕ್ತ ಎಂದು ಹೆಸರು, ೧-೩೩೯ ; **ಶಾಂ. ನಿ.** ಪರಮಾತ್ಮನಲ್ಲಿ ಕಲ್ಪಿತವಾಗಿರುವ ನಾಮರೂಪಗಳು ಆತನ ಸ್ವರೂಪವೆಂದಾಗಲಿ ಆತನಿಗಿಂತ ಬೇರೆಯೆಂದಾಗಲಿ ನಿರ್ವಚನಮಾಡಿ ಹೇಳುವದಕ್ಕೆ ಆಗುವಂತಿಲ್ಲವೆಂದು **'ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯೇ'** ಎಂಬ ಪದದಿಂದ ಕರೆದಿರುವದು ಅಲ್ಲಲ್ಲಿ (ಸೂ. ಭಾ. ೧-೧-೫, ೨-೧-೧೪, ಬೃ. ಭಾ. ೨-೪-೧೦) ಭಾಷ್ಯದಲ್ಲಿ ಕಂಡುಬರುತ್ತದೆ. ವ್ಯವಹಾರದೃಷ್ಟಿಯಿಂದ ಹೀಗೆ ಇವು ಅನಿರ್ವಚನೀಯವಾದರೂ ಪರಮಾರ್ಥದೃಷ್ಟಿಯಿಂದ ನೋಡಿದರೆ ಆತ್ಮಸ್ವರೂಪವೇ ಆಗಿರುತ್ತವೆ ಎಂದು ಐತರೇಯ, ಬೃಹದಾರಣ್ಯಕ, ಛಾಂದೋಗ್ಯ ಭಾಷ್ಯಗಳಲ್ಲಿ ಆಚಾರ್ಯರು ಸ್ಪಷ್ಟಪಡಿಸಿರುತ್ತಾರೆ.

ವ್ಯಾಖ್ಯಾನಗಳಲ್ಲಿ "**ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯ**" ಎಂಬ ಮಾತನ್ನು ಕಾಣುವದು ಅಪೂರ್ವ. 'ಅನಿರ್ವಚನೀಯ'ವೆಂದರೆ ಸತ್ತಲ್ಲದ, ಅಸತ್ತಲ್ಲದ, ಸದಸತ್ತಲ್ಲದ ; ತನ್ನ ಅಧಿಷ್ಠಾನಕ್ಕಿಂತ ಭಿನ್ನವಲ್ಲದ, ಅಭಿನ್ನವಲ್ಲದ, ಭಿನ್ನಾಭಿನ್ನವಲ್ಲದ ; ಸಾಂಶವಲ್ಲದ, ನಿರಂಶವಲ್ಲದ, ಸಾಂಶನಿರಂಶವಲ್ಲದ-ಹುಸಿತೋರಿಕೆಯ ವಸ್ತು. ಭ್ರಾಂತಿಯ ಕಾಲದಲ್ಲಿ ಅದು ಅವಿದ್ಯೆಯ ಪರಿಣಾಮವಾಗಿ ಹುಟ್ಟಿ ಭ್ರಾಂತಿ ತೊಲಗುತ್ತಲೂ ನಾಶವಾಗುತ್ತದೆ. ಪ್ರಪಂಚವು ಬ್ರಹ್ಮದಲ್ಲಿ **ಮೂಲಾವಿದ್ಯೆ**ಯೆಂಬ ಶಕ್ತಿಯ ಪರಿಣಾಮವಾಗಿ ಹುಟ್ಟಿಕೊಂಡಿರುತ್ತದೆ ; ಕಪ್ಪೆಯ ಚಿಪ್ಪಿನಲ್ಲಿ ಹುಸಿಬೆಳ್ಳಿಯು **ತೂಲಾವಿದ್ಯೆ**ಯೆಂಬ ಬಿಡಿಯಾದ ಅವಿದ್ಯೆಯ ಪರಿಣಾಮವಾಗಿ ಹುಟ್ಟಿರುತ್ತದೆ-ಎಂದು ವ್ಯಾಖ್ಯಾನಕಾರರ ಹೇಳಿಕೆ. ಈ ಅಭಿಪ್ರಾಯವು ಭಾಷ್ಯದಲ್ಲಿ ಎಲ್ಲಿಯೂ ಇಲ್ಲ. 'ಬೆಳ್ಳಿ ಎಂದು ಸುಮ್ಮನೆ ಭಾವಿಸುತ್ತಾನೆಯೇ ಹೊರತು ನಿಜವಾಗಿ ಬೆಳ್ಳಿಯು ಅಲ್ಲಿರುವದಿಲ್ಲ' ಎಂದು (ಸೂ. ಭಾ. ೪-೧-೫) ಆಚಾರ್ಯರು ಬರೆದಿರುತ್ತಾರೆ.

**ಅನುಗಮಃ** - ಛಾಂ. ಕಾರ್ಯದಿಂದ ಅದರ ಕಾರಣವನ್ನು ಹುಡುಕುತ್ತಾ ಪರಮಕಾರಣವಾದ ಆತ್ಮನನ್ನು ಅರಸುವ ಕ್ರಮ, ೫೦೨.

**ಅನುದಿತಾನಸ್ತಮಿತ** - ನೈ. ಹುಟ್ಟುಹೊಂದುಗಳಿಲ್ಲದ ಆತ್ಮನ ಜ್ಞಾನವು ಅವನ ಸ್ವರೂಪವೇ, ೨-೯೭, ೩-೫೭, ೧೧೧, ೧೧೬.

**ಅನುಪಸನ್ನ** - ಬೃಹ-೧. ವಿಧಿವತ್ತಾಗಿ ಶಿಷ್ಯನಾಗಿ ಬರದೆ ಇರುವ, ೨೭೬.

**ಅನುಭವಃ** - ಬ್ರ.ಸೂ-೧. ವೇದಾಂತಪ್ರಮಾಣದ ಕೊನೆಯಲ್ಲಾಗುವ ಅರಿವು, ೨೮, ೪೦೪, ೪೧೮ ; ಬ್ರ.ಸೂ-೨. ವಸ್ತುವಿನ **ಅರಿವು**. ಅನುಭವಾದಿಗಳೂ ಬ್ರಹ್ಮಜಿಜ್ಞಾಸೆಯಲ್ಲಿ ಪ್ರಮಾಣ, ೧-೨೮ ; ಬ್ರಹ್ಮಜ್ಞಾನವು ಅನುಭವದಲ್ಲಿ ಕೊನೆಗಾಣತಕ್ಕದ್ದು, ೧-೨೮, ೪೧೯ ; ಮನನವೆಂಬುದು ಅನುಭವಾಂಗವಾದ **ತರ್ಕ**, ೧-೪೧೮ ; ಜ್ಞಾನಫಲವು ಅನುಭವಾರೂಢ, ೨-೩೮೧, ೪೫೨ ; ಯಾವ ದುಃಖವೂ ಇಲ್ಲದ ಆತ್ಮಚೈತನ್ಯವೇ ನಾನು ಎಂಬುದೇ ಆತ್ಮಾನುಭವ, ೨-೫೦೭, ೫೦೮ ; ಜ್ಞಾನಿಗಳಿಗೆ ತುಷ್ಟ್ಯನುಭವವೇ ಮುಂತಾದದ್ದು ಕಂಡುಬರುತ್ತದೆ, ೨-೫೮೩ ; ತತ್ಪದಾರ್ಥವು ಅನುಭವಾತ್ಮಕ, ೨-೫೦೬ ; ನೈ. **ಅವಿದ್ಯೆ**ಯು ಆತ್ಮಾನುಭವದಿಂದ ಸಿದ್ಧವಾಗಿರುತ್ತದೆ, ೧-೭; ಆತ್ಮನು ಅನುಭವಮಾತ್ರ ಸ್ವರೂಪನಾಗಿರುತ್ತಾನಾದ್ದರಿಂದಲೂ ತಾರ್ಕಿಕರೆಲ್ಲರೂ ಅನುಭವವನ್ನೇ ಆಶ್ರಯಿಸ ಬೇಕಾಗಿರುವದರಿಂದಲೂ ಆತ್ಮಸ್ವರೂಪವನ್ನು ಹೇಳುವ ವೇದಾಂತವು ಸರ್ವಸಂಮತವಾದದ್ದು, ೨- ಆತ್ಮನು ಅನುಭವಸ್ವರೂಪ ನಾಗಿದ್ದರೂ ಭೋಕ್ತೃತ್ವವು ಅಧ್ಯಾಸದಿಂದ , ೨-೬೬; ವಾಕ್ಯದಿಂದ ಅನುಭವವಾಗದೆ ಇದ್ದರೆ

ಅದಕ್ಕೆ ಅರ್ಥವಾಗಿ ವಿಧಿಯನ್ನು ಕಲ್ಪಿಸಬಹುದಾಗಿತ್ತು, ಆದರೆ ಹಾಗಿಲ್ಲ ೩-೧೧೯; ಬುದ್ಧ್ಯಾದಿಗಳು ಅನುಭವವೆಂಬ ಫಲವುಂಟಾದಮೇಲೆ ಸಿದ್ಧವಾಗತಕ್ಕವು, ಆತ್ಮನಿಗೆ ಹೀಗಿಲ್ಲ; ಏಕೆಂದರೆ ಅವನು ಚೈತನ್ಯರೂಪನಾಗಿರುವದರಿಂದ ಅವನ ವಿಷಯದಲ್ಲಿ ಅವಿದ್ಯಾನಾಶವೇ ಫಲವು, ೨-೯೯, ೧೦೫ ; ಶಾಂ. ನಿ. ಬ್ರಹ್ಮವಿದ್ಯೆಯಲ್ಲಿ ಶ್ರುತ್ಯಾದಿಗಳಂತೆ ಅನುಭವಾದಿಗಳೂ ಪ್ರಮಾಣವಾಗಿರುವವು ; ಏಕೆಂದರೆ ಬ್ರಹ್ಮವಿದ್ಯೆಯು ಭೂತವಸ್ತುವಿಷಯವಾಗಿದೆ, ಮತ್ತು ಅನುಭವದಲ್ಲಿಯೇ ಕೊನೆ ಗಾಣಬೇಕಾಗಿದೆ - (ಸೂ. ಭಾ. ೧-೧-೨) ಎಂದು ಆಚಾರ್ಯರು ಬರೆದಿರುತ್ತಾರೆ. ಈ ಅನುಭವವು ಪ್ರತ್ಯಕ್ಷಾನುಮಾನಗಳಿಂದಾಗುವ ಜ್ಞಾನಕ್ಕಿಂತ ಬೇರೆ (ಬೃ. ಭಾ. ಸಂ. ಭಾ.), ಶಾಸ್ತ್ರಾಚಾರ್ಯರ ಉಪದೇಶದಿಂದ ಇದು ಆಗುವದು. '**ಅನುಬೋಧ**' ಎಂಬ ಶಬ್ದವನ್ನು ನೋಡಿ.

**ಅನುಬೋಧಃ - ಶಾಂ. ನಿ.** ಶಾಸ್ತ್ರಾಚಾರ್ಯರ ಉಪದೇಶವನ್ನು ಅನುಸರಿಸಿ ಅರಿತುಕೊಳ್ಳುವದು. (ಮಾಂ. ಕಾ. ಭಾ. ೩-೩೨). ಶಾಸ್ತ್ರದಿಂದಾದ ತಿಳಿವಳಿಕೆ, ಗುರುಗಳಿಂದಾದ ತಿಳಿವಳಿಕೆ ಮತ್ತು ತನ್ನ ಅನುಭವ - ಈ ಮೂರೂ ಒಂದಾಗಬೇಕೆಂಬ ಅಭಿಪ್ರಾಯವನ್ನು ಆಚಾರ್ಯರು ಅನುಬೋಧ, ಅನುದರ್ಶನ-ಮುಂತಾದ ಶಬ್ದಗಳಲ್ಲಿರುವ 'ಅನು' ಎಂಬ ಉಪಸರ್ಗದ ಅರ್ಥಸ್ವಾರಸ್ಯವನ್ನು ತಿಳಿಸುವದರ ಮೂಲಕ ವಿವರಿಸಿರುತ್ತಾರೆ. ಗೀ. ಭಾ. ೧೩-೩೦, ಛಾಂ, ಭಾ. ೮-೨-೬, ಕ. ಭಾ. ೨-೫-೧೨.

**ಅನುಮಾನಮ್, ಅನುಮಿತಿಃ - ಬ್ರ.ಸೂ-೧.** ಪ್ರತ್ಯಕ್ಷವಾಗಿರುವ ಗುರುತಿನಿಂದ ಅದರ ವ್ಯಾಪಕವಾದ ಪರೋಕ್ಷವಾದ ವಸ್ತುವನ್ನು ಗೊತ್ತುಪಡಿಸುವ ಪ್ರಮಾಣ, ೨೭, ೨೮, ೨೯, ೩೪, ೩೮ ; ವೇದಾಂತಾವಿರೋಧಿ ತರ್ಕ, ೨೮, ೪೧೮; ಅನುಮಾನಪ್ರಮಾಣ ಗಮ್ಯವಾದ ಪ್ರಧಾನ, ೧೦೫, ೨೨೬ ; ಸ್ಮೃತಿ, ೨೮೭; ತಿಳಿಸುವ ಗುರುತು, ೨೦೮ ; **ಬ್ರ.ಸೂ-೨.** ಅನುಮಾನಪ್ರಮಾಣ, ತರ್ಕ, **ಜಗತ್ಕಾರಣವು** ಅನುಮಾನಗಮ್ಯವಲ್ಲ, ೧-೨೯, ೨೯೬, ೪೬೯ ; ಈಶ್ವರನು ಅನುಮಾನಗಮ್ಯನೆಂಬ ತಾರ್ಕಿಕರ ತಪ್ಪು ತಿಳಿವಳಿಕೆ, ೧-೨೭ ; ಶಾಸ್ತ್ರಪ್ರಾಮಾಣ್ಯವು ಅನುಮಾನಗಮ್ಯವಲ್ಲ, ೧-೩೮ ; **ಐತ.** ಹೊಗೆಯ ಗುರುತಿನಿಂದ ಬೆಂಕಿಯನ್ನು ಊಹಿಸುವಂತೆ ಊಹಿಸಿ ನಿಶ್ಚಯಿಸುವ ಪ್ರಮಾಣ, ೬೫ ; **ನೈ.** ಆತ್ಮನನ್ನು ಅರಿಯುವದಕ್ಕೆ ಬೇಕಾದ **ಅನ್ವಯವ್ಯತಿರೇಕನ್ಯಾಯವೆಂಬ** ಯುಕ್ತಿ. ಅನುಮಾನದಿಂದ ಶರೀರಾದಿಗಳೇ ನಾನೆಂಬ ಬುದ್ಧಿಯು ಹೋಗಿ ಅವು ನಾನಲ್ಲವೆಂಬ **ಅಭಾವ**ಬುದ್ಧಿಯುಂಟಾಗುತ್ತದೆ. ಈ ಅಭಾವದಿಂದ ನಿವೃತ್ತಿಯು ಅನುಮಾನ

ದಿಂದಾಗಲಾರದು, ಅದಕ್ಕೆ ವಾಕ್ಯವೇ ಬೇಕು, ೩-೧೧೩, ೧೧೪, ೧೧೫; ಅನುಮಾನವು ಪ್ರತ್ಯಕ್ಷವನ್ನವಲಂಬಿಸಿರುತ್ತದೆ; ಆದರೆ ಪ್ರತ್ಯಕ್ಷಕ್ಕೆ ಪ್ರತ್ಯಗಾತ್ಮನನ್ನು ಅರಿಯುವ ಶಕ್ತಿಯಿಲ್ಲದ್ದರಿಂದ ಅನುಮಾನಕ್ಕೂ ಆ ಶಕ್ತಿಯಿಲ್ಲ, ೨-೨೫, ೩-೫೧ ; **ಶಾಂ. ನಿ.** ಪ್ರತ್ಯಕ್ಷವಾದ ಗುರುತಿನಿಂದ ನಿಶ್ಚಯಿಸುವದು ; ಇದನ್ನು ತರ್ಕವೆಂದೂ ಕರೆಯುವರು. ಆತ್ಮನನ್ನು ಕೇವಲ ಅನುಮಾನದಿಂದ ಅರಿಯುವದಕ್ಕೆ ಎಂದಿಗೂ ಆಗುವದಿಲ್ಲ, ಸೂ. ಭಾ. ೧-೧-೨, ೨-೧-೬, ಐ. ಭಾ. ೧ನೆಯ ಅಧ್ಯಾಯಭಾಷ್ಯದ ಉಪಸಂಹಾರ (ಭಾ. ಭಾ. ೬೩), ಬೃ. ಭಾ. ೨-೧ರ ಉಪಸಂಹಾರ.

**ಅನುಮಾನಗಮ್ಯ, ತರ್ಕಾವಗಾಹ್ಯ - ಬ್ರ.ಸೂ-೧.** ಅನುಮಾನದಿಂದ ತಿಳಿಯುವದಕ್ಕೆ ಶಕ್ಯವಾದ, ೩೯೬, ೪೬೯.

**ಅನುವಾದಃ, ಅನ್ವಾಖ್ಯಾನಮ್ - ಬ್ರ.ಸೂ-೧.** ಪ್ರಮಾಣಾಂತರದಿಂದ ಸಿದ್ಧವಾದದ್ದನ್ನೇ ಹೇಳುವದು, ೩೦೩, ೩೨೭, ೩೨೯.

**ಅನುವಾದಃ - ಈಶ.** ಗೊತ್ತಿರುವದನ್ನು ಅಥವಾ ಮತ್ತೊಂದು ಕಡೆ ಹೇಳಿರುವದನ್ನು ಹೇಳಿಕೊಂಡಿರುವದು, ೧೫.

**ಅನುಶಯಃ - ಬ್ರ.ಸೂ-೨.** ಐಹಿಕಫಲಕ್ಕಾಗಿರುವ ಕರ್ಮಶೇಷ, ಇಷ್ಟಾದಿಕರ್ಮಗಳನ್ನು ಉಪಭೋಗಿಸಿದವರು ಅನುಶಯಸಹಿತರಾಗಿ ಇಳಿಯುತ್ತಾರೆ, ೨-೨೨೫, ೨೨೯ ; ಅನುಶಯವೆಂದರೆ ಸ್ವರ್ಗಾರ್ಥಕರ್ಮದ ಶೇಷವಲ್ಲ, ೨-೨೨೮ ; ಆಚಾರಕ್ಕೂ ಅನುಶಯಕ್ಕೂ ಭೇದವಿಲ್ಲ, ೨-೨೩೨.

**ಅನುಶಯಿನಃ - ಛಾಂ.** ಕರ್ಮವು ಭುಕ್ತವಾಗಿ ಉಳಿದಿರುವ ಅನುಶಯ (ಕರ್ಮಶೇಷ) ವುಳ್ಳವರು, ೪೧೩, ೪೧೪, ೪೧೬.

**ಅನುಶಾಸನಮ್ - ತೈ.** ಗುರುಹಿರಿಯರ ಅಪ್ಪಣೆ , ೬೧, ೬೮ ; ಈಶ್ವರ-ವಚನ, ೬೮.

**ಅನುಷಙ್ಗಃ - ತೈ.** ಹಿಂದಿನ ಮಾತನ್ನು ಇಲ್ಲಿಯೂ ಸೇರಿಸಿಕೊಳ್ಳುವದು, ೧೩.

**ಅನುಷ್ಠಾನಮ್ - ಬ್ರ.ಸೂ-೧.** (ಕರ್ಮವನ್ನು) ಮಾಡತಕ್ಕದ್ದು, ೧೨ ; **ಬ್ರ.ಸೂ-೨.** ಮಾಡತಕ್ಕದ್ದು, ಧರ್ಮಜ್ಞಾನಕ್ಕೆ ಅನುಷ್ಠಾನದ ಅಪೇಕ್ಷೆಯಿದೆ, ಬ್ರಹ್ಮಜ್ಞಾನಕ್ಕೆ ಇಲ್ಲ, ೧-೧೨ ; ಜ್ಞಾನವಾದಮೇಲೆ ಉಪಾಸನೆಯೆಂಬ ಅನುಷ್ಠಾನವು ಉಳಿದಿರುತ್ತದೆ ಎಂಬ ಮತವು ಸರಿಯಲ್ಲ, ೧-೪೦, ೪೨, ೪೩.

**ಅನುಸಂಧಾನಮ್** - ಬ್ರ.ಸೂ-೧. ಸ್ಮರಣೆ, ೨೯೪.

**ಅನುಸ್ಮೃತಿಃ** - ಬ್ರ.ಸೂ-೨. ಅನುಭವವಾದಮೇಲೆ ಅದೇ ಇದೆಂಬ ನೆನಪಿನ ರೂಪವಾಗಿ ಆಗುವ ಪ್ರತ್ಯಭಿಜ್ಞೆ. ಇದರಿಂದ ಆತ್ಮನ ಸ್ಥಿರತ್ವಸಿದ್ಧಿ, ೨-೫೧ ; ಇದು ಸಾದೃಶ್ಯನಿಮಿತ್ತಕವೆಂಬ ಬೌದ್ಧರ ವಾದವು ಯುಕ್ತಿವಿರುದ್ಧ, ೨-೫೧೨ ; ಸುಷುಪ್ತಿಗೆ ಹೋದ ಜೀವನೇ ಎಚ್ಚರುತ್ತಾನೆಂಬುದಕ್ಕೆ ಅನುಸ್ಮೃತಿಯೊಂದು ಪ್ರಮಾಣ, ೨-೨೬೯.

**ಅನೃತ** - ಬ್ರ.ಸೂ-೨. ಅಸತ್ಯ, ಮಿಥ್ಯೆ, ಹುಸಿಯಾದ. ಅನಾತ್ಮವು ಅನೃತ. ಸತ್ಯಾನೃತಗಳ ಅಧ್ಯಾಸದಿಂದ ವ್ಯವಹಾರ, ೧-೧ ; ವಿಕಾರವು ಅನೃತ, ೧-೨೨೩, ೪೩೩, ೪೩೫ ; ಮೋಕ್ಷಶಾಸ್ತ್ರವೂ ಅನೃತ, ಅಸತ್ಯ, ೧-೪೩೬, ೪೩೭ ; ಕನಸಿನಲ್ಲಿಕಂಡ ಹಾವಿನ ಕಚ್ಚುವಿಕೆ ಮುಂತಾದವು ಮಿಥ್ಯೆಯಾದರೂ ಅವುಗಳಿಂದಾದ ಅರಿವು ಸತ್ಯವೇ, ೧-೪೩೭ ; ಅನೃತಾಕ್ಷರಗಳಿಂದ ಸತ್ಯಾಕ್ಷರಗಳ ಅರಿವು, ೧-೪೩೭ ; ಸತ್ಯಾನೃತವ್ಯವಹಾರವೆಲ್ಲ ಆತ್ಮೈಕತ್ವಾವಗತಿಗಿಂತ ಮೊದಲೇ, ೧-೪೩೮ ; **ಛಾಂ.** ಮಿಥ್ಯಾವಸ್ತು, ೩, ೧೭೯, ೪೬೫, ೫೦೧, ೫೩೭, ೫೪೯, ೬೧೧ ; ಮಿಥ್ಯಾಜ್ಞಾನದಿಂದಾಗುವ ತೃಷ್ಣೆ, ೬೧೯.

**ಅನೃತಮ್, ಅಸತ್ಯಮ್** - ಬ್ರ.ಸೂ-೧. ಹುಸಿತೋರಿಕೆಯು ೧, ೮, ೨೨೩, ೪೩೩, ೪೩೭, ೪೩೮ ; **ಈಶ.** ಹುಸಿತೋರಿಕೆಯು, ೩ ; **ಮುಂ.** ಹುಸಿತೋರಿಕೆ, ೫೦, ೫೭, ೮೮ ; ಸುಳ್ಳಾಡುವದು, ೬೬, ೯೯, ೧೦೧ ; **ಪ್ರಶ್ನ.** ಸುಳ್ಳಾಡುವದು, ೨೧, ೨೨ ; ಹುಸಿತೋರಿಕೆ, ೩೯ ; **ತೈ.** ಮಾರ್ಪಡುವ ಸ್ವರೂಪದ್ದು, ೯೮, ೧೦೩, ೧೧೨ ; ಹುಸಿತೋರಿಕೆ (ಬಿಸಿಲುಕುದುರೆಯ ನೀರಿನಂಥದ್ದು), ೧೮೦.

**ಅನೃತಾಕ್ಷರಮ್** - ಬ್ರ.ಸೂ-೧. ಲಿಪಿರೂಪವಾದ ಅಕ್ಷರ, ಶಬ್ದಾತ್ಮಕವಾದ ನಿಜವಾದ ಅಕ್ಷರವಲ್ಲ, ೪೩೭.

**ಅನೈಕಾನ್ತಃ** - **ನೈ.** ನಿಯಮವಿಲ್ಲದ್ದು. 'ನಾನು ಬ್ರಹ್ಮವು' ಎಂಬ ಸಾಮಾನಾಧಿಕರಣ್ಯ ವಾಕ್ಯಪ್ರಮಾಣದಿಂದ ಬ್ರಹ್ಮಕ್ಕೆ ಅಹಂಕಾರವು ಧರ್ಮವೆನ್ನುವದು ಅನೈಕಾಂತವು, ಏಕೆಂದರೆ 'ನಾನು ಬೆಳ್ಳಗಿರುವವನು' ಎಂಬ ಸಾಮಾನಾಧಿಕರಣ್ಯವ್ಯಪದೇಶವಿದ್ದರೂ ಬಿಳುಪು ಆತ್ಮನ ಧರ್ಮವಲ್ಲವೆಂಬುದು ಸರ್ವಸಂಮತ, ೧-೨೮; ವಾಕ್ಯಶ್ರವಣವಿಲ್ಲದೆ ಜ್ಞಾನವಾಗುವದಿಲ್ಲ ಎಂಬುದು ಅನೈಕಾಂತಿಕವಲ್ಲ, ೨-೪.

**ಅನ್ತಃಕರಣಮ್** - ಬ್ರ.ಸೂ-೧. ಮನಸ್ಸು, ಬುದ್ಧಿ-ಮುಂತಾದ ವೃತ್ತಿಗಳುಳ್ಳ ಒಳಗಿನ ಕರಣ, ೮, ೧೭೪ ; **ಬ್ರ.ಸೂ-೨.** ಮನಸ್ಸು, ಬುದ್ಧಿ, ವಿಜ್ಞಾನ, ಚಿತ್ತ -

ಮುಂತಾದ ಹಲವು ಹೆಸರುಗಳುಳ್ಳ ಜೀವೋಪಾಧಿ. ಅಂತಃಕರಣವಿದೆಯೆಂದು ಒಪ್ಪಬೇಕು, ೨-೧೪೩ ; ಭೂತಗಳಂತೆ ಬ್ರಹ್ಮದಿಂದ ಉತ್ಪನ್ನವಾಗುತ್ತದೆ, ೨-೧೧೭ ; ಇದರ ಸಂಬಂಧವು ಜೀವನಿಗೆ ಮೋಕ್ಷವಾಗುವವರೆಗೂ, ೨-೧೪೦ ; **ಸುಷುಪ್ತಿ ಪ್ರಲಯಗಳಲ್ಲಿ** ಇದರ ಸಂಬಂಧವು ಬೀಜರೂಪದಲ್ಲಿರುತ್ತದೆ, ೨-೧೪೨ ; **ಈಶ.** ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ - ಎಂಬ ವೃತ್ತಿಗಳುಳ್ಳ ಒಳಗಿನ ಕರಣ, ೧೧ ; **ಕೇನ.** ಒಳಗಿನ ಕರಣ ; ಮನಸ್ಸು, ಬುದ್ಧಿ-ಎಂಬ ವೃತ್ತಿಗಳುಳ್ಳದ್ದು, ೧೮, ೩೪, ೩೬, ೩೮, ೪೨ ; **ಐತ.** ಒಳಗಿನ ಕರಣ ; ಬೇರೆಬೇರೆಯ ವೃತ್ತಿಗಳುಳ್ಳ ಮನಸ್ಸು ೩೫, ೮೬, ೮೭ ; **ಭ.ಗೀ.** ಮನಸ್ಸು ಬುದ್ಧಿ- ಮುಂತಾದ ಹೆಸರಿನ ಒಳಗಿನ ಕರಣ, ೧೦೩, ೧೦೫, ೨೭೬, ೩೬೩, ೯೨೮, ೯೬೨, ೯೮೦, ೧೦೧೯, ೧೦೩೪, ೧೦೯೩ ; **ನೈ. ಅವಿದ್ಯೆಯಿಂದ** ಉಂಟಾದ ಮನಸ್ಸು , ಬುದ್ಧಿ , ಅಹಂಕಾರ - ಮುಂತಾದ ರೂಪಗಳಿಂದ ತೋರಿಕೊಳ್ಳುವ ಶರೀರದೊಳಗಿನ ಕರಣ. ಇದರಿಂದ ಆತ್ಮನಿಗೆ **ಜ್ಞಾತೃತ್ವವೂ ಅಹಂತ್ವವೂ** ಉಂಟಾಗುತ್ತವೆ, ೩-೬೦; ಅಂತಃಕರಣವು ಅಜ್ಞಾನಕ್ಕೆ ವ್ಯಂಜಕವು, ೩-೫೮ ; **ಶಾಂ. ನಿ.** ಅದ್ವಿತೀಯಾತ್ಮನಿಗೆ ಅನೇಕತ್ವವನ್ನೂ ಸಂಸಾರಿತ್ವವನ್ನೂ ತೋರಿಸುವ ಉಪಾಧಿ. ಇದನ್ನು ಮನಸ್ಸು, ಬುದ್ಧಿ, ವಿಜ್ಞಾನ, ಚಿತ್ತ-ಎಂದೂ ಕರೆಯುವರು. ವಿಷಯಗಳನ್ನು ಒಂದೊಂದಾಗಿ ಇಂದ್ರಿಯಗಳ ಮೂಲಕ ಅರಿಯುವ ಸಾಧನವಿದು. ಕಾಮ, ಸಂಕಲ್ಪ, ಸಂಶಯ, ಶ್ರದ್ಧೆ, ಜ್ಞಾನ, ಭಯ- ಮುಂತಾದವುಗಳೆಲ್ಲವೂ ಮನಸ್ಸಿನ ವೃತ್ತಿಗಳು. ಸಂಶಯಾದಿವೃತ್ತಿಯುಳ್ಳ ಅಂತಃಕರಣವನ್ನು ಮನಸ್ಸೆಂದೂ ನಿಶ್ಚಯಾದಿವೃತ್ತಿಯುಳ್ಳದ್ದನ್ನು ಬುದ್ಧಿಯೆಂದೂ ವಿಂಗಡಿಸಿ ಕರೆಯುವರು. ಸೂ. ಭಾ. ೨-೩-೩೨.

**ಅನ್ತಃಕರಣಗುಹಾ – ತೈ.** ಬುದ್ಧಿಯೆಂಬ ಗುಹೆ, ೧೭೭.

**ಅನ್ತರ್ಧಾನಾದಿಕ್ರಿಯಾ – ಬ್ರ.ಸೂ-೧.** ಕಾಣದಂತೆ ಮರೆಯಾಗುವದೇ ಮುಂತಾದ ಕ್ರಿಯೆ, ೨೮೩.

**ಅನ್ತರ್ಬಹಿಃಕರಣಾನಿ – ಪ್ರಶ್ನ.** ಒಳಗಿನ ಕರಣವಾದ ಮನಸ್ಸು ಮತ್ತು ಹೊರಗಿನ ಕರಣಗಳಾದ ಇಂದ್ರಿಯಗಳು, ೧೧೨.

**ಅನ್ತರ್ಬಾಹ್ಯನಿಮಿತ್ತಭೇದಃ – ನೈ.** ಅಜ್ಞಾನವೆಂಬುದು ಅಂತಃಕರಣದ ಜ್ಞಾತೃತ್ವಕ್ಕೆ ಒಳಗಿನ ನಿಮಿತ್ತವು, ವಿಷಯಗಳ ಉಪಕಾರಿತ್ವ , ಅಪಕಾರಿತ್ವವೆಂಬುದು ಅಹಂಕಾರದ ವಿಕಾರವಾದ **ಮಮತ್ವಕ್ಕೆ** ಹೊರಗಿನ ನಿಮಿತ್ತವು , ೩-೬೧.

**ಅನ್ತರ್ಯಾಮೀ – ಬ್ರ.ಸೂ-೧.** ಎಲ್ಲದರ ಒಳಗಿದ್ದು ಆಳುವ ಪರಮಾತ್ಮ, ೧೧೬, ೧೯೫ ; **ತೈ.** ನಮ್ಮೊಳಗಿದ್ದುಕೊಂಡು ನಮ್ಮ ಶರೀರೇಂದ್ರಿಯಗಳನ್ನು

೦೯ ನಲ್ಲಿಟ್ಟುಕೊಂಡಿರುವ ಆತ್ಮ, ೫೭ ; ಐತ. ಒಳಗಿದ್ದು ಎಲ್ಲವನ್ನೂ ವಶದಲ್ಲಿಟ್ಟು ಕೊಂಡಿರುವ ಪರಮಾತ್ಮ, ೮೮.

**ಅನ್ತರಙ್ಗಮ್** - ಭ.ಗೀ. ಒಳಗಿನ ಅಂಗ, ಹತ್ತಿರದ ಸಾಧನ, ೩೭೨, ೩೭೬.

**ಅನ್ತರಾತ್ಮಾ** - ಪ್ರಶ್ನ. ಆತ್ಮನಿಗೂ ಶರೀರಕ್ಕೂ ನಡುವೆ ಇದ್ದು ಆತ್ಮನಂತೆ ಕಾಣುತ್ತಿರುವ ಸೂಕ್ಷ್ಮಶರೀರ, ೮೩, ೧೧೨ ; ಮುಂ. ಆತ್ಮನಿಗೂ ಶರೀರಕ್ಕೂ ನಡುವೆ ಆತನಂತೆ ಕಾಣುತ್ತಿರುವ ಸೂಕ್ಷ್ಮಶರೀರ, ೬೧, ೬೮.

**ಅನ್ಧಗೋಲಾಙ್ಗೂಲನ್ಯಾಯಃ** - ಬ್ರ.ಸೂ-೧. ಕುರುಡನು ಎತ್ತಿನ ಬಾಲವನ್ನು ನೆಚ್ಚಿ ಹಿಡಿದುಕೊಂಡು ಕಷ್ಟಪಟ್ಟಂತೆ, ೭೯.

**ಅನ್ಧಪರಂಪರಾ** - ಬ್ರ.ಸೂ-೧. ಹುಟ್ಟುಕುರುಡರು ಒಬ್ಬರಿಗೊಬ್ಬರು ತಿಳಿಸುವಂತೆ, ೫೮ ; ಬೃಹ-೨. ಕುರುಡರ ಸಾಲು, ಅಸಿದ್ಧವಾದದ್ದರಿಂದ ಅಸಿದ್ಧವಾದದ್ದನ್ನು ಸಾಧಿಸುತ್ತಾ ಹೋಗುವ ದೋಷ ; ಕುರುಡನನ್ನು ಅನುಸರಿಸುವ ಕುರುಡರಂತಿರುವ ಆಜ್ಞರ ಸಂಪ್ರದಾಯ, ೫೭, ೧೮೧, ೧೮೨.

**ಅನ್ತ್ಯ** - ಬ್ರ.ಸೂ-೨. ಕೊನೆಯ. ಸಾಯುವಾಗಿನ ಕೊನೆಯ ಉಪಾಸನಾ ಪ್ರತ್ಯಯವು ಅದೃಷ್ಟಫಲವನ್ನು ಕೊಡುತ್ತದೆ, ಕರ್ಮಗಳ ಫಲಕ್ಕೂ ಅಂತ್ಯಪ್ರತ್ಯಯವು ಅವಶ್ಯ, ೨-೫೨೫ ; ಅವಿದ್ಯೆಯನ್ನು ತೊಲಗಿಸಿ ಪ್ರಮಾಣವ್ಯವಹಾರವನ್ನೇ ಕಳೆಯುವದರಿಂದ ಶಾಸ್ತ್ರವು ಅಂತ್ಯ ಪ್ರಮಾಣ, ೧-೪೩೮ ; ಆತ್ಮರು ಬೇರೆ ಬೇರೆ ಎಂಬುದಕ್ಕೆ ವೈಶೇಷಿಕರು ಕಲ್ಪಿಸಿಕೊಂಡಿರುವ ಅಂತ್ಯವಿಶೇಷಗಳಿಗೆ ಪ್ರಮಾಣವಿಲ್ಲ, ೨-೧೭೨.

**ಅನ್ತ್ಯಂ ಪ್ರಮಾಣಮ್** - ಬ್ರ.ಸೂ-೧. ಪ್ರಮಾಣವ್ಯವಹಾರವನ್ನು ಕೊನೆಗಾಣಿಸುವ ಶಾಸ್ತ್ರಪ್ರಮಾಣ, ೪೩೮ ; ಭ.ಗೀ. ಕೊನೆಯ ಪ್ರಮಾಣ, ಪ್ರಮಾಣ ವ್ಯವಹಾರವೇ ಸುಳ್ಳೆಂದು ತಿಳಿಸುವ ಶಾಸ್ತ್ರ ೩೪, ೧೩೫ ; ಶಾಂ. ನಿ. ಆತ್ಮನಲ್ಲಿ ತೋರುವ ಪ್ರಮಾತೃತ್ವವೆಂಬ ಅಧ್ಯಾಸವನ್ನು ತೆಗೆದುಹಾಕುವದರಿಂದ ಪ್ರಮಾಣಪ್ರಮೇಯ ವ್ಯವಹಾರವನ್ನೇ ಕೊನೆಗೊಳಿಸುವ, ಕೊನೆಯ ಪ್ರಮಾಣವಾದ, ಶಾಸ್ತ್ರ ಗೀ. ಭಾ. ೨-೧೮, ೨-೬೯. ಅದ್ವಿತೀಯಾತ್ಮನನ್ನು ತಿಳಿಸುವದರಿಂದ ಈ ಪ್ರಮಾಣದಿಂದಾದ ಜ್ಞಾನವುಂಟಾದ ಬಳಿಕ ಏನು ? ಏತರಿಂದ ? ಹೇಗೆ ? - ಎಂಬ ಆಕಾಂಕ್ಷೆಯುಂಟಾಗುವದಿಲ್ಲ, ಸೂ. ಭಾ. ೨-೧-೧೪.

**ಅನ್ತ್ಯಃ ಪ್ರತ್ಯಯಃ** - ಬೃಹ-೧. ಆತ್ಮನನ್ನು ಅರಿಯುವ ಜ್ಞಾನಧಾರೆಯಲ್ಲಿ ಕಡೆಯದು, ೧೭೧, ೧೭೨.

**ಅನ್ತ್ಯಭಾವವಿಕಾರಃ, ಅನ್ತ್ಯಾವಿಕ್ರಿಯಾ** - ಭ.ಗೀ. ವಸ್ತುವಿನ ಮಾರ್ಪಾಡುಗಳಲ್ಲಿ ಕೊನೆಯದು, ನಾಶ, ೩೯, ೪೨, ೮೨೮.

**ಅನ್ತ್ಯಾ ವಿಶೇಷಾಃ** - ಭ.ಗೀ. ನಿತ್ಯವಸ್ತುಗಳಾದ ಆತ್ಮರೇ ಮುಂತಾದವುಗಳಲ್ಲಿ ಪರಸ್ಪರಭೇದವನ್ನು ತಿಳಿಸುವದೆಂದು ವೈಶೇಷಿಕರು ಕಲ್ಪಿಸಿರುವ ಪದಾರ್ಥಗಳು, ೩೬೦.

**ಅನ್ನಮ್** - ಬ್ರ.ಸೂ-೨. ಪೃಥಿವಿ. ಅಪ್ಪಿನಿಂದ ಹುಟ್ಟಿತೆಂದು ಛಾಂದೋಗ್ಯದಲ್ಲಿ ಹೇಳಿರುವ ಅನ್ನವು ಪೃಥಿವಿಯೇ, ೨-೧೧೧ ; ಅನ್ನಾದಿಕಾರ್ಯವನ್ನು ಹೇಳಿರುವದು ಕಾರಣವಾದ ಬ್ರಹ್ಮದ ಜ್ಞಾನಕ್ಕೆ, ೧-೩೬೭ ; ಅನ್ನ, ಆಹಾರ. ಅನ್ನಮಯವೇ (ಶರೀರವೇ) ಮುಂತಾದ ಪಂಚಕೋಶಗಳನ್ನು ಬ್ರಹ್ಮವನ್ನು ತಿಳಿಸುವದಕ್ಕಾಗಿ ಹೇಳಿದೆ, ೧-೧೦೭, ೩೬೬, ೩೬೮ ; ಸರ್ವಾನ್ನಭಕ್ಷಣವು ಪ್ರಾಣೋಪಾಸಕನಿಗೆ ವಿಹಿತವಲ್ಲ, ೧-೪೭೩ ; ಸರ್ವಾನ್ನಭಕ್ಷಣವು ಆಪತ್ತಿನಲ್ಲಿ - ಎಂದು ಶ್ರುತಿಯಲ್ಲಿ ಸೂಚಿಸಿದೆ, ಸ್ಮೃತಿಯಲ್ಲಿ ಹೇಳಿದೆ, ೧-೪೭೩, ೪೭೪ ; ಸುರಾಪಾನವೇ ಮುಂತಾದ ಅನ್ನವನ್ನು ಶ್ರುತಿಯಲ್ಲಿ ನಿಷೇಧಿಸಿದೆ, ೧-೪೭೫ ; **ಪ್ರಶ್ನ.** ಭೋಗ್ಯವಾದದ್ದು, ಪ್ರಾಣ, ರಯಿ-ಇವುಗಳಲ್ಲಿ ಎರಡನೆಯದು, ೫, ೬, ೧೨, ೧೭ ; ಆಹಾರವಸ್ತು ೨೦ ; **ಮುಂ.** ಬತ್ತ, ಜವೆ-ಮುಂತಾದ ಆಹಾರವಸ್ತು, ೨೫ ; ಅವ್ಯಾಕೃತ, ೨೩.

**ಅನ್ನಬ್ರಹ್ಮವಿತ್** - ತೈ. ಸಮಷ್ಟ್ಯನ್ನವನ್ನು ಬ್ರಹ್ಮವೆಂದು ಉಪಾಸನೆ ಮಾಡುವವನು ೧೨೦.

**ಅನ್ನಮಯಾದಿಕೋಶಾಃ, ಶರೀರಾದಿಕೋಶಾಃ** - ಬ್ರ.ಸೂ-೧. ಪರಮಾತ್ಮನನ್ನು ಮರೆಮಾಡಿರುವ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಎಂಬ ಕೋಶಗಳು, ೧೦೭, ೩೬೬, ೩೬೮.

**ಅನ್ನರಸಮಯಃ, ಅನ್ನಮಯಃ** - ತೈ. ಅನ್ನರಸದಿಂದ ಆಗಿರುವ ಶರೀರ, ಆತ್ಮನೆಂದು ಜನರು ತಪ್ಪಾಗಿ ತಿಳಿದುಕೊಂಡಿರುವ ಕೋಶಗಳಲ್ಲಿ ಒಂದು, ೧೧೫, ೧೧೮, ೧೧೯, ೧೨೨.

**ಅನ್ನಾನ್ನಾದೌ** - ತೈ. ಭೋಜ್ಯ, ಭೋಕ್ತೃ. ಯಾವದು ಒಳಗೆ ಅಧೀನದಲ್ಲಿರುವದೋ ಅದು ಅನ್ನ ; ಯಾವದರ ಅಧೀನದಲ್ಲಿ ಅದರೊಳಗೆ ಇರುವದೋ ಅದು ಅನ್ನಾದವು ೨೫೮.

**ಅನ್ನಾನ್ನಾದಲಕ್ಷಣಮ್** - ಐತ. ಒಂದನ್ನೊಂದು ತಿನ್ನುವಂತೆ ಚಿಂತಿಸಬೇಕಾದ ಭೂತಗಳು, ೮೭.

**ಅನ್ವಯವ್ಯತಿರೇಕೌ** - ಬ್ರ.ಸೂ-೧. ಅದಿದ್ದರೆ ತಾನೂ ಇರುವದು, ಇಲ್ಲದಿದ್ದರೆ ಇಲ್ಲದಿರುವದು, ೫೯, ೪೧೪, ೪೩೭ ; ನೈ. ಅದಿದ್ದರೆ ಅದಿರುವದೆಂಬುದು ಅನ್ವಯವು, ಅದಿದ್ದರೂ ಅದಿರುವದಿಲ್ಲವೆಂಬುದು ವ್ಯತಿರೇಕವು. ಹೀಗೆ ಅನ್ವಯ, ಅನನ್ವಯ ಅಥವಾ ವ್ಯತಿರೇಕ - ಇವುಗಳಿಂದ ಅನಾತ್ಮವನ್ನು ಗೊತ್ತುಪಡಿಸಬೇಕು. ತತ್ತ್ವಮಸ್ಯಾದಿವಾಕ್ಯದಲ್ಲಿರುವ ಪದಗಳಿಗೆ ಈ ಅನ್ವಯವ್ಯತಿರೇಕಗಳಿಂದ ಪದಾರ್ಥಜ್ಞಾನವನ್ನು ಮಾಡಿಕೊಳ್ಳಬೇಕು, ೨-೮, ೯; ಬೋದ್ಧೃತ್ವವೇ ಮುಂತಾದ ಉಪಾಧಿಗಳಿಂದೊಡಗೂಡಿದ ಆತ್ಮನನ್ನಿಟ್ಟುಕೊಂಡು ಅಹಂಕಾರಾದಿಗಳು ಅನಾತ್ಮವೆಂದು ತಿಳಿದುಕೊಳ್ಳಬೇಕು; ಸಾಕ್ಷಿತ್ವವನ್ನಾಶ್ರಯಿಸಿ ಕೊಂಡು ಕರ್ತೃತ್ವಾದಿ ಪರಿಣಾಮಗಳು ಆತ್ಮನಿಗಿಲ್ಲವೆಂದು ತಿಳಿಯಬೇಕು, ೨-೫೮; ಹೀಗೆ ಅನ್ವಯವ್ಯತಿರೇಕಗಳಿಂದಲೇ ಗೃಹೀತೃಗ್ರಹಣಗ್ರಾಹ್ಯಗೃಹೀತಿಗಳೆಂಬ ಸಂಸಾರವು ಅನಾತ್ಮವೆಂಬುದು ತಿಳಿಯಬರುತ್ತದೆ, ೨-೯೭, ೩.-೫೪.

**ಅನ್ಯಥಾಗ್ರಹಣಮ್** - ಮಾಂ. ತಪ್ಪುತಿಳಿವಳಿಕೆ, ೧೫, ೪೫, ೪೬, ೫೦, ೫೩ ; ನೈ. ಅಗ್ರಹಣವೇ ಇದಕ್ಕೆ ಬೀಜ, ೪-೪೦, ೪-೪೩.; ಅಗ್ರಹಣ, ಅನ್ಯಥಾಗ್ರಹಣ- ಈ ಎರಡೂ ಅನಾತ್ಮಧರ್ಮ, ೪-೪೫.

**ಅನ್ಯಾಪೋಹಃ** - ಭ.ಗೀ. ಅದಕ್ಕಿಂತ ಬೇರೆಯಾದದ್ದನ್ನು ಅಲ್ಲಗಳೆಯುವದು, ೨೧೪.

**ಅನ್ಯೋನ್ಯಾಧ್ಯಾಸಃ** - ಶಾಂ. ನಿ. ಆತ್ಮ, ಅನಾತ್ಮ - ಇವುಗಳಲ್ಲಿ ಒಂದನ್ನು ಇನ್ನೊಂದರಲ್ಲಿಯೂ ಒಂದರ ಧರ್ಮಗಳನ್ನು ಇನ್ನೊಂದರಲ್ಲಿಯೂ ಅಧ್ಯಾಸ ಮಾಡುವದು. ಅಧ್ಯಾಸಭಾಷ್ಯ ; ಗೀ. ಭಾ. ೧೩-೨೬. ಆತ್ಮನನ್ನು ಅನಾತ್ಮದಲ್ಲಿ ಅಧ್ಯಾಸಮಾಡುವಾಗ ಆತ್ಮನಿಗೆ ಸಂಸರ್ಗದ ಅಧ್ಯಾಸವೇ ಹೊರತು ಸ್ವರೂಪದ ಅಧ್ಯಾಸವಾಗುವದಿಲ್ಲ ಎಂದು ವ್ಯಾಖ್ಯಾನಕಾರರು ಬರೆದಿರುತ್ತಾರೆ. ಆದರೆ ಇದಕ್ಕೆ ಭಾಷ್ಯದ ಆಧಾರವು ಕಾಣುವದಿಲ್ಲ.

**ಅನ್ವೇಷಣಮ್** - ಶಾಂ. ನಿ. ಆತ್ಮನನ್ನು ಹುಡುಕುವದು ; ಶಾಸ್ತ್ರಾಚಾರ್ಯರ ಉಪದೇಶದಿಂದ ಆತ್ಮನನ್ನು ಪರೋಕ್ಷವಾಗಿ ಅರಿತುಕೊಳ್ಳುವದು. ಛಾಂ. ಭಾ. ೮-೧-೧-, ೮-೭-೧. ಆತ್ಮನು ನಮ್ಮೆಲ್ಲರ ಸ್ವರೂಪವೇ ಆಗಿದ್ದರೂ ತತ್ತ್ವವನ್ನು ಬಿಡಿಸಿ ತಿಳಿದುಕೊಳ್ಳದಿರುವ ನಿಮಿತ್ತದಿಂದ ದೇಹಾದಿಗಳೇ ನಾವೆಂಬ ತಪ್ಪುತಿಳಿವಳಿಕೆ ಯುಂಟಾಗುತ್ತದೆ. ಹೀಗೆ ದೇಹಾದಿಗಳೇ ತಾನೆಂಬ ತಿಳಿವಳಿಕೆಯುಳ್ಳವರಿಗೆ ಆತ್ಮನು ಅನ್ವೇಷ್ಟವ್ಯನಾಗುತ್ತಾನೆ, ಶಾಸ್ತ್ರಾಚಾರ್ಯರ ಉಪದೇಶದಿಂದ ಅರಿತುಕೊಳ್ಳಬೇಕಾದವ ನಾಗುತ್ತಾನೆ. ಸೂ. ಭಾ. ೧-೧-೧೭.

**ಅನ್ವೇಷಣಾಸಹ** - ನೈ. ವಿಚಾರವನ್ನು ಸಹಿಸದಿರುವ ಅವಿದ್ಯೆ. ಅವಿದ್ಯೆಯು ಅವಿಚಾರಸಿದ್ಧವಾಗಿರುವದರಿಂದ ಅದು ಆತ್ಮನಲ್ಲಿ ಹೇಗೆ ಬಂತೆಂದು ಹುಡುಕುವದಕ್ಕಾಗುವದಿಲ್ಲ; ಏಕೆಂದರೆ ಅದರ ಸ್ವಭಾವವು ವಿಚಾರಕ್ಕೆ ನಿಲ್ಲುವದಲ್ಲ,

**ಅನೇಕಕಾರಕಸಾಧ್ಯ** - ಬೃಹ-೧. ಕರ್ತೃ, ಕರ್ಮ - ಮುಂತಾಗಿ ಹಲವು ಕಾರಕಗಳಿಂದ ಆಗಬೇಕಾಗಿರುವ (ಕ್ರಿಯೆ), ೩೨೫.

**ಅನೇಕಚಂದ್ರದರ್ಶೀ** - ಭ.ಗೀ. ಇಬ್ಬರು ಚಂದ್ರರನ್ನು ಕಾಣುವ ಪರೆಗಣ್ಣಿನವ, ೮೨೯.

**ಅನೇಕರಸ, ಅನೇಕಾತ್ಮಕ** - ಬ್ರ.ಸೂ-೧. ತನ್ನೊಳಗೆ ನಾನಾಭೇದಗಳುಳ್ಳ, ಸಾವಯವವಾದ, ೬೬, ೭೨, ೨೨೩, ೪೩೫, ೪೩೮.

**ಅನೇಕರಸಮ್, ಅನೇಕಾತ್ಮಕಮ್** - ಬೃಹ-೨. ಸ್ವಗತ-ನಾನಾತ್ವವುಳ್ಳ ಬ್ರಹ್ಮ (ಭ.ಪ್ರ.), ೩೫೧, ೩೫೨.

**ಅನೇಕಶರೀರಯೋಗಃ** - ಬ್ರ.ಸೂ-೧. (ಯೋಗಿಗಳು) ಅನೇಕಶರೀರ ಗಳನ್ನು ಪಡೆಯುವದು, ೨೮೩.

**ಅಪಮೃತ್ಯುಃ** - ತೈ. ಆಯುಸ್ಸು ಮುಗಿಯುವದರೊಳಗೇ ಒದಗುವ ಮೃತ್ಯು, ೧೨೯.

**ಅಪರ** - ಬ್ರ.ಸೂ-೨. ಮತ್ತೊಂದು. ಸೂತ್ರಗಳಿಗೆ ಮತ್ತೊಂದು ವ್ಯಾಖ್ಯಾನವನ್ನು ಹೇಳುವದಕ್ಕೆ 'ಅಪರ ಆಹ' ಎಂದು ಭಾಷ್ಯದಲ್ಲಿ ತಿಳಿಸಿದೆ, ೧-೧೩೨, ೧೩೪, ೨೨೪, ೨೫೦ ; ಅನ್ಯೋಽರ್ಥಃ, ೧-೧೪೪ ; ಅನ್ಯೇ ಪುನರ್ಮನ್ಯನ್ತೇ, ೧-೨೦೪ ; ಅಪರಾ ವ್ಯಾಖ್ಯಾ, ೧-೨೮೪ ; ತತ್ರಾಪಿ, ೧-೩೮೬ ; ಕಡಿಮೆಯ, ಉಪಾಸನೆಗಾಗಿ ಹೇಳಿರುವ ಬ್ರಹ್ಮ, ಮುಖ್ಯಬ್ರಹ್ಮವಲ್ಲ. ಕಾರ್ಯ, ಸಗುಣ, ಸವಿಶೇಷ, ಸಾಕಾರ, ಸೋಪಾಧಿಕ - ಇವೆಲ್ಲ ಅಪರಬ್ರಹ್ಮಕ್ಕೆ ಹೆಸರುಗಳು. ಒಂದೇ ಬ್ರಹ್ಮವನ್ನು ಉಪಾಸ್ಯವೆಂದೂ ಜ್ಞೇಯವೆಂದೂ ತಿಳಿಸುವದಕ್ಕಾಗಿ ಅಪರಬ್ರಹ್ಮ, ಪರಬ್ರಹ್ಮ ಎಂದು ವಿಂಗಡಿಸಿದೆ. ಉಪಾಸ್ಯವೂ ಪರಬ್ರಹ್ಮವೇ, ೧-೯೦, ೯೨, ೧೧೦, ೧೨೮, ೨೪೮, ೨-೫೨೩. ಪೀಠಿಕೆಯನ್ನು ನೋಡಿ. ಅಪರವಿದ್ಯೆಯು ಅಭ್ಯುದಯವನ್ನು ಕೊಡುವದು, ಪರವಿದ್ಯೆಯಂತೆ ನಿಃಶ್ರೇಯಸವನ್ನು ಕೊಡುವದಿಲ್ಲ, ೧-೧೪೯ ; ಕರ್ಮವಿದ್ಯೆಯೂ ಅಪರವಿದ್ಯೆ, ೧-೧೪೯ ; ಸಗುಣೋಪಾಸನೆಯೂ ಅಪರವಿದ್ಯೆ, ೨-೫೦೦, ೫೨೧, ೫೩೯, ೫೪೯, ೫೮೧.

**ಅಪರಬ್ರಹ್ಮ - ಈಶ.** ಕಡಿಮೆಯ ಬ್ರಹ್ಮ, ಹಿರಣ್ಯಗರ್ಭ, ೩೩ ; **ಕಠ.** ಬ್ರಹ್ಮ, ಧ್ಯಾನಕ್ಕೆ ಇಟ್ಟುಕೊಳ್ಳುವ ಸಗುಣಬ್ರಹ್ಮ, ೮೬, ೧೫೭ ; **ಐತ.** ಕಡಿಮೆ ಬ್ರಹ್ಮ, ಸಗುಣಬ್ರಹ್ಮ, ಹಿರಣ್ಯಗರ್ಭ, ೧, ೮೭ ; **ಬೃಹ-೨.** ಉಪಾಸ್ಯವಾದ ಸಗುಣಬ್ರಹ್ಮ, ೫೬, ೩೧೦.

**ಅಪರತನ್ತ್ರ - ನೈ.** ಪರಾಧೀನವಲ್ಲದ, ಸ್ವತಂತ್ರವಾದ ಸುಖ. ಇದು ಆತ್ಮನ ಸ್ವರೂಪವೇ ಆಗಿರುತ್ತದೆ ಆದಕ್ಕೆ **ಅನವಬೋಧವೇ** ಮುಸುಕು (ಅವ).

**ಅಪರಂ ಬ್ರಹ್ಮ - ಬ್ರ.ಸೂ-೧.** ಉಪಾಸ್ಯವಾದ ಬ್ರಹ್ಮ, ೨೪೮, ೨೪೯ ; **ಪ್ರಶ್ನ.** ಕಡಿಮೆಯ ಬ್ರಹ್ಮ, ಹಿರಣ್ಯಗರ್ಭ, ೨, ೨೬, ೮೦, ೮೬ ; **ಮಾಂ.** ಸಗುಣಬ್ರಹ್ಮ, ನಿರ್ವಿಶೇಷಬ್ರಹ್ಮಕ್ಕಿಂತ ಕಡಿಮೆಯಾದ ಬ್ರಹ್ಮ, ೭೧ ; **ಶಾಂ. ನಿ.** ಕಡಿಮೆಯ ಬ್ರಹ್ಮ. ಅವಿದ್ಯಾಕೃತವಾದ ನಾಮ ರೂಪಾದಿಗಳಿಂದ ಕೂಡಿರುವ ಉಪಾಸ್ಯಬ್ರಹ್ಮವು ಅಪರಬ್ರಹ್ಮವು. ಇದನ್ನು ಕಾರ್ಯಬ್ರಹ್ಮ, ಸಗುಣಬ್ರಹ್ಮ, ಸೋಪಾಧಿಕಬ್ರಹ್ಮ- ಎಂದೂ ಕರೆಯುವರು. ಸೂ. ಭಾ. ೪-೩-೭, ೪-೩-೧೪. ಪರಬ್ರಹ್ಮವನ್ನೇ ಮನೋಮಯತ್ವಾದಿಗಳಿಂದ ಕೂಡಿರುವದೆಂದು ಉಪಾಸನೆಗಾಗಿ ಉಪದೇಶಿಸಿರುತ್ತದೆ, ಇದಕ್ಕೆ ಅಪರಬ್ರಹ್ಮವೆಂದು ಹೆಸರು. ಸೂ. ಭಾ. ೪-೩-೯.

**ಅಪರಂ ಬ್ರಹ್ಮ, ಅಮುಖ್ಯಂ ಬ್ರಹ್ಮ - ಬೃಹ-೧.** ಕಡಿಮೆಯ ಬ್ರಹ್ಮ, ಹಿರಣ್ಯಗರ್ಭ, ೧೫೦ ; ಆದಿತ್ಯಾದಿಗಳಲ್ಲಿ ವಿಭಕ್ತವಾಗಿರುವ ಹಿರಣ್ಯಗರ್ಭ, ೨೭೬.

**ಅಪರಂ ಬ್ರಹ್ಮ, ಕಾರ್ಯಲಕ್ಷಣಂ ಬ್ರಹ್ಮ - ಮುಂ.** ಕಡಿಮೆ ಬ್ರಹ್ಮ, ಸಗುಣಬ್ರಹ್ಮ, ಹಿರಣ್ಯಗರ್ಭ, ೯೪, ೧೨೫.

**ಅಪರಂ ರೂಪಮ್ - ಮುಂ.** ತಪ್ಪುತಿಳಿವಳಿಕೆಯಿಂದ ಆತ್ಮನಲ್ಲಿ ತೋರುವ ಆತ್ಮನ ಕೀಳುರೂಪ, ೧೧೨ ; **ಛಾಂ.** ಆತ್ಮನ ಕೀಳುರೂಪ, ದೇಹಾತ್ಮಭಾವ, ೬೨೩.

**ಅಪರವಿದ್ಯಾ - ಪ್ರಶ್ನ.** ಕಡಿಮೆಯ ವಿದ್ಯೆ, ಕರ್ಮ ಮತ್ತು ಉಪಾಸನೆ, ೪, ೫೧ ; **ಮುಂ.** ಕಡಿಮೆಯ ವಿದ್ಯೆ, ವೇದರಾಶಿಯನ್ನು ತಿಳಿದುಕೊಳ್ಳುವದು, ಕರ್ಮೋಪಾಸನೆಗಳನ್ನು ಮಾಡುವದು, ೨, ೧೩, ೧೫, ೨೬, ೨೭, ೪೨, ೪೩, ೪೫, ೪೯, ೫೦, ೭೭ ; **ಬೃಹ-೧.** ಅಪರಬ್ರಹ್ಮದ ಉಪಾಸನೆ, ೬.

**ಅಪರಾ ಪ್ರಕೃತಿಃ - ಭ.ಗೀ.** ತ್ರಿಗುಣಾತ್ಮಕಮಾಯೆ ಎಂಬ ಪ್ರಕೃತಿ, ಈಶ್ವರನ ಜಡಶಕ್ತಿ, ೪೫೮, ೪೫೯, ೪೬೦, ೭೫೩.

**ಅಪರಿಚ್ಛಿನ್ನ - ಬ್ರ.ಸೂ-೧.** ಅಳತೆಯ ಕಟ್ಟಿಲ್ಲದ, ೧೪೮.

**ಅಪರಿಣಾಮಿ - ನೈ.** ಅಂತಃಕರಣದಂತೆ ಪರಿಣಾಮಿಯಲ್ಲದ ಆತ್ಮ, ೨-೯೧.

**ಅಪರೇ - ಬೃಹ-೧.** ಬೇರೆಯ ಕೆಲವು ಪೂರ್ವಪಕ್ಷಿಗಳು (ಆಚಾರ್ಯರಿಗೆ ಒಪ್ಪಿಲ್ಲದ ಪಕ್ಷದವರು), ೧೧೨, ೧೩೬, ೧೬೯, ೧೯೦.

**ಅಪವಾದಃ - ಬ್ರ.ಸೂ-೨.** ಮಿಥ್ಯಾಬುದ್ಧಿಯ ನಿವರ್ತನೆ. ದಿಗ್ಭ್ರಾಂತಿಯನ್ನು ದಿಗ್ಯಾಥಾತ್ಮ್ಯಬುದ್ಧಿಯು ಕಳೆಯುವಂತೆ ತತ್ತ್ವಮಸಿವಾಕ್ಯಜನ್ಯಬುದ್ಧಿಯು ದೇಹಾದ್ಯಾತ್ಮಬುದ್ಧಿಯನ್ನು ತೊಲಗಿಸುತ್ತದೆ, ೨-೩೩೧, ೩೩೨ ; ಸಾಮಾನ್ಯಶಾಸ್ತ್ರಕ್ಕೆ ಪ್ರತಿಯಾಗಿರುವ ವಿಶೇಷಶಾಸ್ತ್ರ ೧-೨೮, ೨-೨೫೧ ; **ಬೃಹ-೨.** ಸಾಮಾನ್ಯನಿಯಮಕ್ಕೆ ಬಾಧಕವಾದ ವಿಶೇಷವಾಕ್ಯ, ೩೫೦.

**ಅಪವರ್ಗಃ - ಬೃಹ-೨.** ಭೋಜ್ಯಜಗತ್ತಿಗಿಂತ ಬೇರೆಯಾಗಿ ಪರಮಾತ್ಮಪ್ರಾಪ್ತಿಯು ಇನ್ನೂ ಆಗದಿರುವ ಅಂತರಾಲಾವಸ್ಥೆ (ಭ.ಪ್ರ.), ೨೫.

**ಅಪಹತಪಾಪ್ಮಾ - ಛಾಂ.** ಧರ್ಮಾಧರ್ಮಗಳ ಸಂಬಂಧವಿಲ್ಲದ (ಆತ್ಮ), ೬೧೨, ೬೨೧, ೬೪೬.

**ಅಪಹಾರಃ - ನೈ.** ತೆಗೆದುಹಾಕುವದು. ಸೂರ್ಯನು ಪಾತ್ರೆಗಳ ನೀರಿನಲ್ಲಿ ಪ್ರತಿಬಿಂಬಿಸಿ ತೋರಿದರೂ ಪಾತ್ರೆಗಳೇನೂ ಸೂರ್ಯನ ಸ್ವರೂಪವನ್ನು ಅಪಹರಿಸಿರುವದಿಲ್ಲ ; ಇದರಂತೆ ಬುದ್ಧಿಗಳಲ್ಲಿ ಚಿದಾಭಾಸವು ತೋರುತ್ತಿದ್ದರೂ ಆತ್ಮನ ಸ್ವರೂಪವನ್ನೇನೂ ಅವು ಅಪಹರಿಸಿರುವದಿಲ್ಲ . ಆತ್ಮನು ನಿಜವಾಗಿ ಅನೇಕನಾಗಿರುವದಿಲ್ಲ, ೨-೪೯.

**ಅಪಕ್ಷಯಃ - ಭ.ಗೀ.** ಸವೆಯುವದೆಂಬ ಮಾರ್ಪಾಡು, ೩೯, ೪೨.

**ಅಪವಿದ್ಧದ್ವಯಃ - ನೈ.** ದ್ವೈತವನ್ನು ಕಳೆದುಕೊಂಡವನು. ದಶಮನು ಯಾವಾಗಲೂ ಹತ್ತನೆಯವನಾಗಿದ್ದರೂ ತನ್ನನ್ನು ತಾನು ಅರಿಯದಿರುವಂತೆ ಯಾವಾಗಲೂ ಅದ್ವೈತನಾಗಿದ್ದರೂ ವಾಕ್ಯೋಪದೇಶವಿಲ್ಲದವನು ಹಾಗೆಂದು ಅರಿತುಕೊಳ್ಳದೆ ಇರುತ್ತಾನೆ, ೩-೬೫.

**ಅಪೂರ್ವಮ್ - ಬ್ರ.ಸೂ-೨.** ಕರ್ಮಕಾರ್ಯ. ಕರ್ಮವು ಫಲವನ್ನು ಕೊಡುವದಕ್ಕೆ ದ್ವಾರಕಾರಣವೆಂದು ಮೀಮಾಂಸಕರು ಕಲ್ಪಿಸಿರುವ ಅದೃಷ್ಟವಿಶೇಷ, ೨-೩೧೬ ; ಅದರ ಖಂಡನೆ, ೨-೩೧೪, ೩೧೭ ; ಇಷ್ಟಾದಿಕಾರಿಗಳು ಕೊಟ್ಟ ಆಹುತಿಗಳು ಅಪೂರ್ವರೂಪವನ್ನು ಹೊಂದಿ ಅವರನ್ನು ಆಶ್ರಯಿಸುತ್ತವೆ, ೨-೨೨೦ ; **ಬೃಹ-೨.** ಕರ್ಮವು ಫಲಪ್ರಾಪ್ತಿಗೆ ಪೂರ್ವದಲ್ಲಿ ಪಡೆಯುವ ಅದೃಷ್ಟರೂಪ (ಮೀಮಾಂಸಕರ ಕಲ್ಪನೆ), ೮೫, ೪೫೦ ; **ಭ.ಗೀ.** ಕರ್ಮದಿಂದ ಹುಟ್ಟುವದೆಂದು ಮೀಮಾಂಸಕರು ಕಲ್ಪಿಸಿರುವ ಸ್ವರ್ಗಾದಿಫಲಕಾರಣ, ೧೭೬.

**ಅಪೂರ್ವವಿಧಿಃ** - ಬೃಹ-೧. ಅಪ್ರಾಪ್ತವಾಗಿರುವದನ್ನು ಹೊಸದಾಗಿ ಮಾಡಬೇಕೆಂದು ಹೇಳುವ ವಿಧಿ, ೧೩೪, ೧೩೫, ೧೩೭, ೧೪೨ ; ನೈ. ಇದುವರೆಗೆ ಪ್ರಾಪ್ತವಾಗದೆ ಇರುವದನ್ನು ಮಾಡಬೇಕೆಂದು ಹೇಳುವ ವಿಧಿ. 'ಆತ್ಮೇತ್ಯೇವೋಪಾಸೀತ' (ಆತ್ಮನೆಂದೇ ಉಪಾಸನೆಮಾಡಬೇಕು), 'ಆತ್ಮಾ ವಾ ಅರೇ ದ್ರಷ್ಟವ್ಯಃ' (ಎಲೆ, ಆತ್ಮನನ್ನೇ ದರ್ಶನಮಾಡಿಕೊಳ್ಳಬೇಕು), ಎಂಬಿವು ಅಪೂರ್ವವಿಧಿಯಲ್ಲ, ಏಕೆಂದರೆ ಆತ್ಮಜ್ಞಾನವು ಪುರುಷತಂತ್ರವಲ್ಲವಾದ್ದರಿಂದ ವಿಧಿಯೇ ಅಲ್ಲ. ಒಂದುವೇಳೆ ಇದು ವಿಧಿಯೆಂದರೂ ಅಪೂರ್ವವಿಧಿಯಲ್ಲ , ಏಕೆಂದರೆ ಆತ್ಮಜ್ಞಾನವನ್ನು ಹೊಸದಾಗಿ ಮಾಡಿಸಬೇಕಾದದ್ದಿಲ್ಲ, ೧-೮೮.

**ಅಪ್ರವೃತ್ತಫಲಾನಿ** - ಮುಂ. ಫಲವನ್ನು ಕೊಡುವದಕ್ಕೆ ತೊಡಗದಿರುವ ಕರ್ಮಗಳು, ೮೩, ೧೨೦.

**ಅಪ್ರವೃತ್ತಫಲಮ್** - ಛಾಂ. ಫಲವು ಇನ್ನೂ ಆಗದಿರುವ (ಕರ್ಮ), ೫೨೯.

**ಅಪ್ರಬೋಧಃ** - ನೈ. ಅರಿಯದೆ ಇರುವದು. ಅಜ್ಞಾನವು ಅವಿಚಾರ-ದಶೆಯಲ್ಲಿ ಇದೆಯೆಂದು ತೋರುವದರಿಂದ ಆತ್ಮನಲ್ಲಿ ಭದ್ರವಾಗಿರುವದಿಲ್ಲ, ಆತ್ಮನ ಸ್ವರೂಪವೇ ನಿತ್ಯಪ್ರಬುದ್ಧನಾಗಿರುವದು. ಆತ್ಮನನ್ನು ಹೊಸದಾಗಿ ಅರಿಯಬೇಕಾದದ್ದೇನೂ ಇಲ್ಲ, ೩-೧೧೦.

**ಅಪ್ರತಿಪತ್ತಿಃ** - ನೈ. ತಿಳಿಯದೆ ಇರುವದು. ಅಜ್ಞಾನ. ಐಕಾತ್ಮ್ಯವನ್ನು ತಿಳಿಯದೆ ಇರುವದೇ ಅವಿದ್ಯೆ , ೧-೭.

**ಅಪ್ರತಿಬೋಧಃ** - ಬೃಹ-೧. ತಿಳಿಯದೆ ಇರುವದು (ಅವಿದ್ಯಾ), ೧೬೦.

**ಅಪ್ರಮೇಯಃ** - ಭ.ಗೀ. ಪ್ರಮಾಣಗಳಿಗೆ ನಿಲುಕದ ಪ್ರಮಾತೃವಿನ ನಿಜವಾದ ರೂಪ, ೩೪ ; ೬೭೨ ; ನೈ. ಪ್ರಮಾಣಕ್ಕೆ ವಿಷಯನಲ್ಲದೆ ಇರುವ ಆತ್ಮನು ಪ್ರಮೇಯನಲ್ಲವಾದ್ದರಿಂದ ಅವನನ್ನು ಪ್ರಮಾಣದಿಂದ ಅರಿಯಬೇಕಾದದ್ದಿಲ್ಲ , ೧-೮೯; ಪ್ರಮಾಣಪ್ರಮೇಯವ್ಯವಹಾರವು ಆತ್ಮನ ಅನವಬೋಧವನ್ನಾಶ್ರಯಿಸಿ ಉಂಟಾಗುವದರಿಂದ ಆತ್ಮನು ಅಪ್ರಮೇಯನು, ೨-೯೮; ಆತ್ಮನು ಅಪ್ರಮೇಯ-ನಾಗಿರುವದರಿಂದ ಪ್ರತ್ಯಕ್ಷಾದಿಗಳಿಗೆ ವಿಷಯನಲ್ಲ, ೩-೪೮.

**ಅಪ್ರಮೋತ್ಥಮ್** - ನೈ. ತಪ್ಪುತಿಳಿವಳಿಕೆ. ತತ್ತ್ವದರ್ಶನದಿಂದ ಅಜ್ಞಾನವು ಹೋಗುತ್ತದೆ ಎಂಬುದು ಸಾಮಾನ್ಯನಿಯಮ; ಆದ್ದರಿಂದ ಆತ್ಮನ ವಿಷಯಕವಾದ ಅಜ್ಞಾನವೂ ಆತ್ಮತತ್ತ್ವಜ್ಞಾನದಿಂದ ಅವಶ್ಯವಾಗಿ ಹೋಗಿಬಿಡುತ್ತದೆ, ೩-೧೦೪.

**ಅಪ್ರಸೂತಫಲಮ್, ಅನಾರಮ್ಭಫಲಮ್, ಅನಾರಬ್ಧಕಾರ್ಯಮ್** - ಭ.ಗೀ. ಫಲವನ್ನು ಕೊಡದೆ ಇರುವ, ಸಂಚಿತವಾದ (ಕರ್ಮ), ೮೨೦, ೧೧೨೯, ೧೧೩೨.

**ಅಪ್ರತಿಷ್ಠಿತ** - ಬ್ರ.ಸೂ-೧. ಇದೇ ಸರಿಯೆಂದು ನಿಲುಗಡೆಹೊಂದದ (ತರ್ಕ), ೪೨೭.

**ಅಪ್ರತಿಹತಜ್ಞಾನ** - ಬ್ರ.ಸೂ-೧. ಜ್ಞಾನಕ್ಕೆ ಅಡ್ಡಿಯಿಲ್ಲದ, ೧೩೮.

**ಅಪ್ರತ್ಯಕ್ಷ** - ಬ್ರ.ಸೂ-೧. ಇಂದ್ರಿಯಕ್ಕೆ ಗೋಚರವಿಲ್ಲದ, ೩.

**ಅಪ್ರಾಕೃತಮ್** - ಭ.ಗೀ. ಪ್ರಕೃತಿಯ ಕಾರ್ಯವಲ್ಲದ, ಅಲೌಕಿಕವಾದ, ೨೪೨.

**ಅಪ್ರಾಪ್ತನಿಷೇಧಃ** - ಭ.ಗೀ. ಒದಗದೆ ಇದ್ದದ್ದನ್ನೇ ಅಲ್ಲಗಳೆಯುವದು, ೨೭೭.

**ಅಪ್ರಾಪ್ತಪ್ರಾಪ್ತಿಲಕ್ಷಣ** - ಬೃಹ-೧. ಪಡೆಯದೆ ಇದ್ದದ್ದನ್ನು ಪಡೆದುಕೊಳ್ಳುವ ರೂಪದ (ಲಾಭ), ೧೪೫.

**ಅಪ್ರಾಮಾಣ್ಯಕಾರಣಮ್** - ನೈ. ಅನುಕ್ತ (ಹೇಳದೆ ಇರುವದು), ದುರುಕ್ತ (ತಪ್ಪಾಗಿ ಹೇಳುವದು) ಇವು - ವಾಕ್ಯವು ಪ್ರಮಾಣವಲ್ಲವೆಂಬುದಕ್ಕೆ ಕಾರಣ, ೧-೫,

**ಅಪೌರುಷೇಯ** - ಬ್ರ.ಸೂ-೧. ಪುರುಷನು ರಚಿಸದೆ ಇರುವ (ವೇದ), ೧೫೦.

**ಅಪೌರುಷೇಯಮ್** - ಶಾಂ. ನಿ. ಭಾರತವೇ ಮುಂತಾದ ಗ್ರಂಥದಂತೆ ಸ್ವತಂತ್ರನಾದ ಕರ್ತೃವು ಮಾಡಿದ್ದೆಂದು ಯಾವ ಸ್ಮೃತಿಯಲ್ಲಿಯೂ ಹೇಳಿಲ್ಲವಾದ್ದರಿಂದಲೂ ಶಬ್ದಾರ್ಥಸಂಬಂಧವು ನಿತ್ಯವಾಗಿರುವದರಿಂದಲೂ ವೇದವು ಯಾವ ಪುರುಷನೂ ಮಾಡಿದ್ದಲ್ಲವೆಂದು ಪೂರ್ವಮೀಮಾಂಸಕರು ಹೇಳುತ್ತಾರೆ. ಇದನ್ನು ಉತ್ತರ ಮೀಮಾಂಸದಲ್ಲಿಯೂ ಒಪ್ಪಿರುತ್ತದೆ. (ಸೂ. ಭಾ. ೧-೨-೨, ೧-೩-೨೯). ಆದರೆ ವೇದವು ಮನುಷ್ಯನ ನಿಃಶ್ವಾಸದಂತೆ ಲೀಲಾನ್ಯಾಯದಿಂದ ಬ್ರಹ್ಮದಿಂದ ಉಂಟಾಗಿರುವದೆಂದೂ ಸೂ. ಭಾ. ೧-೧-೩, ಪರಮಾರ್ಥವಾಗಿ ಇದು ಆತ್ಮಸ್ವರೂಪವಾಗಿಯೇ ಸತ್ಯವಾಗಿರುವದೆಂದೂ (ತೈ. ಭಾ. ೨-೩, ಭಾ. ಭಾ. ೧೩೩), ತನ್ನ ರೂಪದಿಂದ ಅದೂ ಅನೃತವೇ ಎಂದೂ (ಸೂ. ಭಾ. ೪-೧೩) ಆಚಾರ್ಯರು ಅಭಿಪ್ರಾಯಪಟ್ಟಿರುತ್ತಾರೆ.

**ಅಬ್ರಹ್ಮತ್ವಮ್** - ಬೃಹ-೧. ಬ್ರಹ್ಮವಲ್ಲದಿರುವಿಕೆ, ಸಂಸಾರಿಯಾಗಿರುವಿಕೆ, ೧೫೧.

**ಅಬ್ರಹ್ಮಪ್ರತ್ಯಯಃ** - ಮುಂ. ಬ್ರಹ್ಮವಲ್ಲದ ವಸ್ತುವಿನ ಜ್ಞಾನ, ೮೯.

**ಅಬೀಜಾವಸ್ಥಾ** - ಮಾಂ. ಕಾರಣವಲ್ಲದ ತುರೀಯಾತ್ಮನಾಗಿರುವ, ೩, ೨೫.

**ಅಭಯಮ್** - ಬೃಹ-೨. ಜನ್ಮಾದಿಭಯಶೂನ್ಯವಾದ (ಬ್ರಹ್ಮ), ೧೫೬, ೧೫೭, ೩೧೭ ; ಅವಿದ್ಯಾರಹಿತ, ೨೧೩, ೩.೨೦.

**ಅಭಾಗವತಂ ಮತಮ್** - ಭ.ಗೀ. ಭಗವಂತನ ಅಭಿಪ್ರಾಯಕ್ಕೆ ವಿರುದ್ಧವಾದ ಮತ, ೧೦೮೫.

**ಅಭಾವಃ** - ಬ್ರ.ಸೂ-೨. ಇಲ್ಲದ್ದು. ಕಾರ್ಯವು ಮೊದಲು ಇಲ್ಲದೆ ಹುಟ್ಟುವದೆಂಬ ವೈಶೇಷಿಕರ ಅಸತ್ಕಾರ್ಯವಾದದ ಖಂಡನೆ, ೧-೧೧೯ ; ಅಭಾವವು ವಂಧ್ಯಾಪುತ್ರನಂತೆ, ೧-೧೧೯ ; ಅಭಾವದಿಂದ ಭಾವೋತ್ಪತ್ತಿಯೆಂಬ ಸರ್ವಾಸ್ತಿತ್ವ ವಾದಿಗಳ ನಿರಸನ, ೨-೫೩, ೫೫, ೫೬ ; ಬೃಹ-೧. ಪ್ರಾಗಭಾವ, ಪ್ರಧ್ವಂಸಾಭಾವ, ಅತ್ಯಂತಾಭಾವ, ಇತರೇತರಾಭಾವ-ಎಂಬ ನಾಲ್ಕು ಬಗೆಯ ಇಲ್ಲದಿರುವಿಕೆಗಳು, ೨೩ ; ಮೊಲದ ಕೊಂಬಿನಂತೆ ಅತ್ಯಂತವಾಗಿಲ್ಲದಿರುವದು, ೨೪.

**ಅಭ್ಯಾಸಃ** - ಭ.ಗೀ. ಒಂದೇ ಚಿತ್ತಭೂಮಿಕೆಯಲ್ಲಿ ಒಂದೇ ಪ್ರತ್ಯಯವನ್ನು ಆವೃತ್ತಿ ಮಾಡುತ್ತಿರುವದು, ೪೩೫, ೪೩೬, ೫೦೯, ೭೩೭, ೭೪೧, ೧೦೬೩.

**ಅಭಿಚರಣಮ್** - ಛಾಂ. ಶತ್ರುವಿನ ಮರಣಕ್ಕಾಗಿ ಮಾಡುವ ಕರ್ಮ, ೧೮೧.

**ಅಭಿಧಾನಮ್** - ಮಾಂ. ಹೆಸರು, ವಾಚಕ, ೪, ೫, ೭, ೫೮ ; ತೈ. ಹೆಸರು ೫೧, ೨೨೨ ; ಶಾಂ. ನಿ. ವಸ್ತುವನ್ನು ಹೇಳುವ ಶಬ್ದ. ಇದನ್ನು ವಾಚಕವೆಂದೂ ಕರೆಯುವರು. ಬ್ರಹ್ಮವು ಯಾವ ಅಭಿಧಾನದಿಂದಲೂ ಹೇಳಲ್ಪಡುವ ವಸ್ತುವಲ್ಲ, ಅಭಿಧೇಯವೂ ಅಲ್ಲ, ಅದರ ಸ್ವರೂಪವು ಅಭಿಧಾನ, ಅಭಿಧೇಯ - ಈ ಎರಡಕ್ಕಿಂತಲೂ ಬೇರೆಯಾಗಿದೆ. ನಾಮ, ಜಾತಿ - ಮುಂತಾದ ವಿಕಲ್ಪಗಳಿರುವ ವಸ್ತುಮಾತ್ರ ಅಭಿಧಾನಕ್ಕೆ ವಿಷಯವಾಗಿ ಅಭಿಧೇಯವಾಗಿರುವದು. ಮಾಂ. ಭಾ. ೧; ಮಾಂ. ಭಾ. ಭಾ. ೩೫ ; ತೈ. ಭಾ. ೨-೯ ಭಾ. ಭಾ. ೨೨೦.

**ಅಭಿಧಾನಾಭಿಧೇಯಾಭಿಧಾತೃ ವ್ಯವಹಾರಃ** - ಬ್ರ.ಸೂ-೧. ಹೆಸರು, ವಸ್ತು ಹೆಸರಿಸುವವನು - ಎಂಬ ವ್ಯವಹಾರ, ೨೯೩.

**ಅಭಿಧಾನಾಭಿಧೇಯಭೇದಃ** - ಛಾಂ. ಶಬ್ದ, ಅರ್ಥ-ಎಂಬ ಭೇದ, ೪೫೬,

**ಅಭಿಧಾನಾಭಿಧೇಯಸಂಬನ್ಧಃ** - ನೈ. ವಾಚಕ, ವಾಚ್ಯ- ಎಂಬ ಶಬ್ದಾರ್ಥಗಳ ಸಂಬಂಧ. ಆತ್ಮನನ್ನು ಶಬ್ದವು ಈ ಸಂಬಂಧದಿಂದ ಹೇಳುವದಿಲ್ಲ; ಏಕೆಂದರೆ ಆತ್ಮನಲ್ಲಿ ಶಬ್ದಹೇತುಗಳಿಲ್ಲ, ೩-೧೦೩, ೧೦೪; ಅಭಿಧಾನವು ಅಭಿಧೇಯಕ್ಕೆ ಸಂಬಂಧಪಡದೆಯೂ ಯಥಾರ್ಥಜ್ಞಾನವನ್ನುಂಟುಮಾಡಬಹುದು, ೩-೧೦೫, ೧೦೬.

**ಅಭಿಧಾನಾಭಿಧೇಯೇ** - **ಮಾಂ.** ವಾಚಕ ಮತ್ತು ವಾಚ್ಯ-ಇವು ೪, ೫, ೭, ೫೮, ೬೦ ; ಇವುಗಳನ್ನು ತಿಳಿಸುವ ವಾಙ್ಮನಸ್ಸುಗಳು, ೬೮.

**ಅಭಿಧಾಶ್ರುತಿಃ** - ನೈ. ವಸ್ತುವನ್ನು ಹೇಳುವ ಶಬ್ದ. ಅಭಿಧಾಶ್ರುತಿಯು ಸಾಮಾನ್ಯವಾಗಿ ಲೋಕದಲ್ಲಿ ಪ್ರಮಾಣಾಂತರವನ್ನು ಬಯಸಿಯೇ ವಸ್ತುವನ್ನು ತಿಳಿಸುತ್ತದೆಯಾದರೂ ಸುಪ್ತಪುರುಷಪ್ರಬೋಧಕವಾಕ್ಯದಂತೆ ನೇರಾಗಿಯೂ ತಿಳಿಸಬಹುದು, ೩-೪೭.

**ಅಭಿಧೇಯಮ್** - **ಈಶ.** ಹೇಳಬೇಕಾದ ವಿಷಯ, ೨ ; **ಮಾಂ.** ಗ್ರಂಥದ ವಿಷಯ, ೧, ೨ ; ತೈ. ಹೆಸರಿಸುವ ವಸ್ತು, ೫೧.

**ಅಭಿಧ್ಯಾನಮ್** - ಪ್ರಶ್ನ. ಯಮನಿಯಮಾದಿಗಳಿಂದ ಕೂಡಿಕೊಂಡು ಭಕ್ತಿಯಿಂದ ಚಿಂತಿಸುವುದು, ೭೯, ೮೧.

**ಅಭಿನ್ನಾರ್ಥಮರ್ಯಾದಃ** - **ಮುಂ.** ಧರ್ಮಧರ್ಮಗಳ ವ್ಯವಸ್ಥೆಯಕಟ್ಟನ್ನು ಒಡೆಯದವನು, ೯೭.

**ಅಭೂತಪ್ರಾದುರ್ಭಾವಃ** - ನೈ. ಇಲ್ಲದೆ ಇದ್ದದ್ದು ಹುಟ್ಟುವದು, ಸಾಧ್ಯವಾದದ್ದು. ಇಲ್ಲದ್ದನ್ನುಂಟುಮಾಡುವ ಫಲವುಳ್ಳ 'ಯಜೇತ' ಮುಂತಾದ ಕ್ರಿಯಾಪದಗಳಿದ್ದರೇ ವಾಕ್ಯದ ಪದಗಳು ಅನ್ವಯವಾಗುವವೆಂಬ ನಿಯಮವಿಲ್ಲ, ಅಸಿ, ಅಸ್ಮಿ-ಮುಂತಾದ ಕ್ರಿಯಾಪದಗಳಿದ್ದರೂ ಸಾಕು, ೧-೯೭.

**ಅಭೂತಾಭಿನಿವೇಶಃ** - ನೈ. ಇಲ್ಲದ್ದರಲ್ಲಿ ಇದೆಯೆಂಬ ಅಭಿಮಾನ. ದ್ವಿತೀಯ ವಸ್ತುವೇ ಇಲ್ಲದಿದ್ದರೂ ಆತ್ಮಜ್ಞಾನವಿಲ್ಲದವನು ಅಭೂತಾಭಿನಿವೇಶದಿಂದ ತನ್ನನ್ನು ತಾನೇ ವಂಚಿಸಿಕೊಳ್ಳುತ್ತಾನೆ, ೨-೫೧.

**ಅಭ್ಯುಚ್ಚಯಃ** - ಬ್ರ.ಸೂ-೧. ಹಿಂದೆ ಹೇಳಿದ್ದಕ್ಕೆ ಇನ್ನೂ ಒಂದನ್ನು ಸೇರಿಸಿ ಹೇಳಿದ ಯುಕ್ತಿ, ೩೭೭, ೩೯೩, ೪೫೭.

**ಅಭ್ಯುದಯಃ** - ಬ್ರ.ಸೂ-೧. ಕರ್ಮದಿಂದಾಗುವ ಶ್ರೇಯಸ್ಸು ೧೨, ೯೧, ೩೫೦, ೩೮೮, ೩೮೯ ; ಬ್ರ.ಸೂ-೨. ಕರ್ಮದಿಂದ ಅಥವಾ ಉಪಾಸನೆಯಿಂದ

ಆಗುವ ಶ್ರೇಯಸ್ಸು, ೧-೧೨, ೯೧, ೩೫೦, ೩೮೯ ; ಅಭ್ಯುದಯವನ್ನು ಕೊಡುವ ಸಗುಣೋಪಾಸನೆಗಳಿಗೆಲ್ಲ ದೇವಯಾನ ಗತಿ, ೨-೩೭೭ ; ಕಠ. ಸಾಧನದಿಂದ ಪಡೆಯುವ ಸುಖ, ೪೮ ; ಛಾಂ. ಏಳಿಗೆ, ಮೋಕ್ಷವಲ್ಲದ ಸಾತಿಶಯಪುರುಷಾರ್ಥ, ೫ ; ಬೃಹ-೧. ಮೋಕ್ಷವಲ್ಲದ ಕರ್ಮಫಲ, ೨೫೦, ೧೬೯, ೧೬೫ ; ಬೃಹ-೨. ಮೋಕ್ಷವಲ್ಲದ ಕರ್ಮಫಲ, ೩೪೬ ; ಭ.ಗೀ. ಸ್ವರ್ಗವೇ ಮುಂತಾದ ಸಾಧನಜನ್ಯಫಲ, ೧, ೧೫೬, ೨೪೦, ೬೨೪.

**ಅಮೃತ** - **ಮುಂ.** ಕರ್ಮವು ಸವೆಯುವವರೆಗೂ ನಾಶವಾಗದ (ಫಲ), ೨೩ ; ಕಲ್ಪಾಂತದವರೆಗೂ ಇರುವ ಹಿರಣ್ಯಗರ್ಭ, ೪೨ ; ಎಂದಿಗೂ ನಾಶವಾಗದ ಬ್ರಹ್ಮ, ೭೦, ೭೪, ೮೧, ೧೧೮ ; ಮೋಕ್ಷ, ೭೭ ; **ಛಾಂ.** ಅಮೃತವಾಚಕ, ೬೨೫ ; ನಾಶವಿಲ್ಲದ ಸ್ವಭಾವದ, ೫೯೬, ೬೨೩, ೬೫೧, ೬೫೫ ; ವೇದಫಲ, ೨೧೨, ೨೧೩, ೨೧೪, ೨೧೫ ; **ಬೃಹ-೨.** ಸಂಸಾರಧರ್ಮವರ್ಜಿತ (ಬ್ರಹ್ಮ), ಬ್ರಹ್ಮಸ್ವರೂಪ, ೭೦, ೭೨.

**ಅಮೃತಮ್** - **ಈಶ.** ನಾಶವಿಲ್ಲದ ಮೋಕ್ಷ, ೨ ; ಬಹುಕಾಲ ನಾಶವಿಲ್ಲದ ಪ್ರಕೃತಿಲಯವೇ ಮುಂತಾದ ಅಪೇಕ್ಷಿಕ ಉತ್ತಮಗತಿ, ೨೬, ೩೩, ೪೨ ; **ಪ್ರಶ್ನ.** ನಾಶವಿಲ್ಲದ ಮೋಕ್ಷ (ಆಪೇಕ್ಷಿಕ), ೧೪, ೪೮, ೫೦ ; ಮರಣವಿಲ್ಲದ ಸ್ಥಿತಿ, ಮುಖ್ಯ ಮೋಕ್ಷ, ೮೬, ೧೧೫ ; **ಬೃಹ-೧.** ಶಾಸ್ತ್ರೀಯವಾದ ಕರ್ಮವೂ ಉಪಾಸನೆಯೂ, ೯೩ ; ನಾಶವಾಗದ ದೇವಭಾವ, ೯೩ ; ಕ್ರಿಯಾತ್ಮಕನಾದ ಪ್ರಾಣ, ೨೫೯ ; ಅಮೂರ್ತ ರೂಪವಿಶಿಷ್ಟಬ್ರಹ್ಮ, ೩೩೫, ೩೩೬ ; **ಭ.ಗೀ.** ಯಜ್ಞದಲ್ಲಿ ಉಳಿದ ಅನ್ನ, ೧೭೪, ೨೯೭ ; ದೇವತೆಗಳ ಆಹಾರ, ೬೩೫, ೧೦೬೪, ೧೦೬೫.

**ಅಮೃತಮ್, ಅಮೃತತ್ವಮ್** - **ಭ.ಗೀ.** ಮುಕ್ತಿ, ೨೪, ೮೭೯.

**ಅಮೃತತ್ವಮ್** - **ಬ್ರ.ಸೂ-೧.** ನಾಶವಿಲ್ಲದ ಮುಕ್ತಿ, ೩೮೦, ೩೮೫ ; **ಬ್ರ.ಸೂ-೨.** ನಾಶವಿಲ್ಲದ ಮೋಕ್ಷ, ೧-೩೮೦, ೩೮೫. ಅಪರವಿದ್ಯೆಯಿಂದ ದೊರಕುವ ಬಹುಕಾಲವಿರುವ ಅಮೃತತ್ವವು ಆಪೇಕ್ಷಿಕ, ಜ್ಞಾನದಿಂದ ಆತ್ಯಂತಿಕ, ೧-೩೮೦, ೩೮೫, ೨-೫೪೮ ; **ಕೇನ.** ಮರಣದ ಸಂಬಂಧವಿಲ್ಲದ ಮುಕ್ತಿ ೨೩, ೫೮, ೫೯, ೮೫ ; **ಕಠ.** ಮರಣವಿಲ್ಲದಿರುವದು, ದೇವತ್ವ, ೨೪, ೧೮೪ ; ಪ್ರತ್ಯಗಾತ್ಮ ಸ್ವರೂಪದಿಂದ ನಿಲ್ಲುವ ಮುಕ್ತಿ ೪೮, ೧೮೪ ; **ಛಾಂ.** ಮೋಕ್ಷ ೧೭೬, ೧೭೭, ೧೭೮, ೧೮೭, ೧೮೯ ; ಕ್ರಮಮುಕ್ತಿ ೬೪೪ ; **ಬೃಹ-೧.** ಸಾವಿಲ್ಲದವನಾಗಿರುವ ಮೋಕ್ಷ ೩೫೩, ೩೫೫, ೩೫೬, ೩೫೭, ೩೫೮, ೩೭೯, ೩೮೨ ; **ಬೃಹ-೨.** ಮೋಕ್ಷ, ೩೨೨, ೩೩೩.

**ಅಮೃತಾಃ** - ಕಠ. ದೇವತೆಗಳು, ೪೫, ೧೧೩, ಬ್ರಹ್ಮ, ೧೬೦, ೧೭೨.

**ಅಮನೀಭಾವಃ** - ಮಾಂ. ಮನಸ್ಸು ಮನಸ್ಸಲ್ಲದೆ ಹೋಗಿ ಆತ್ಮನಲ್ಲಿ ಅಡಗುವದು, ೧೮೪, ೧೮೫, ೧೮೬, ೧೮೯.

**ಅಮಾನಿತ್ವಾದೀನಿ** - ನೈ. ಗೀತೆಯ ಹದಿಮೂರನೆಯ ಅಧ್ಯಾಯದಲ್ಲಿ ಹೇಳಿರುವ ಅಮಾನಿತ್ವ , ಅದಂಭಿತ್ವ - ಮುಂತಾದ ಜ್ಞಾನಸಾಧನಗಳು. ಅಮಾನಿತ್ವಾದಿನಿಷ್ಠನೇ ಜ್ಞಾನಕ್ಕೆ ಅಧಿಕಾರಿ, ಆದ್ದರಿಂದ ಈ ಗ್ರಂಥವನ್ನು ಅಭ್ಯಾಸಮಾಡುವವನು ಈ ಸಾಧನಗಳನ್ನು ಅವಲಂಬಿಸಬೇಕು. ೪-೬೮, ೭೦.

**ಅಮುಖ್ಯ ಆತ್ಮಾ, ಅಮುಖ್ಯಂ ಬ್ರಹ್ಮ** - ಬ್ರ.ಸೂ-೧. ಮುಖ್ಯಾರ್ಥದಲ್ಲಿ ಆತ್ಮನಲ್ಲದ, ಬ್ರಹ್ಮವಲ್ಲದ, ೯೫, ೯೭ ; ಬ್ರ.ಸೂ-೨. ಮುಖ್ಯಾರ್ಥದಲ್ಲಿ ಆತ್ಮನಲ್ಲದ (ಜೀವ), ಮುಖ್ಯಾರ್ಥದಲ್ಲಿ ಬ್ರಹ್ಮವಲ್ಲದ (ದೇವತೆಗಳು), ೧-೯೫, ೯೭, ೩೭೨ ; ಗೌಣವಾದ ಅಪರಬ್ರಹ್ಮ, ೨-೫೨೭.

**ಅಮೂರ್ತ** - ಬೃಹ-೧. ಅಪರಿಚ್ಛಿನ್ನವಾದ, ಆಕಾರವಿಲ್ಲದ, ೮೫, ೯೬ ; ಪೃಥಿವ್ಯಪ್ತೇಜಸ್ಸುಗಳು, ೩೩೭.

**ಅಯಂ ಲೋಕಃ** - ತೈ. ಭೂಲೋಕ, ೩೪, ೮೨ ; ಇಹಪರ ಲೋಕಗಳಲ್ಲಿರುವ ಇಷ್ಟವಿಷಯಗಳ ಸಮೂಹ, ೨೧೦.

**ಅಯಃಪಿಂಡಃ** - ಬ್ರ.ಸೂ-೧. (ಬೆಂಕಿಯ ಬಿಸಿಯ ನಿಮಿತ್ತದಿಂದ ಸುಡುವ) ಕಬ್ಬಿಣದ ಗಟ್ಟಿ, ೬೮.

**ಅಯೌಗಪದ್ಯಮ್** - ಐತ. ಜ್ಞಾನಗಳು ಒಟ್ಟಿಗೆ ಆಗಲಾರದೆಂಬುದು ೬೬, ೭೦.

**ಅರುಂಧತೀ** - ಬ್ರ.ಸೂ-೧. ಒಂದು ನಕ್ಷತ್ರ. ಬಲುಸೂಕ್ಷ್ಮವಾಗಿರುವದನ್ನು ತಿಳಿಸುವದಕ್ಕೆ ಅದಕ್ಕೆ ಸಮೀಪವಾಗಿರುವ ಸ್ಥೂಲವಸ್ತುವನ್ನು ತಿಳಿಸುವದಕ್ಕೆ ಇದರ ದೃಷ್ಟಾಂತವನ್ನು ಕೊಡುವರು (ಇದನ್ನು 'ಅರುಂಧತೀನ್ಯಾಯ' ಎಂದು ಕರೆಯುತ್ತಾರೆ), ೮೩, ೯೭.

**ಅಲುಪ್ತದೃಕ್ಸ್ವಭಾವಃ, ಅಲುಪ್ತವಿಜ್ಞಾನಶಕ್ತಿಃ** - ಬೃಹ-೨. ನಾಶವಾಗದ ಚೈತನ್ಯ ಸ್ವಭಾವದ, ೭೨, ೧೮೬.

**ಅಲುಪ್ತಸಾಕ್ಷೀ, ಅಲುಪ್ತೈಕದರ್ಶನಃ, ಅಲುಪ್ತದೃಷ್ಟಿಃ** - ನೈ. ಎಂದಿಗೂ ನಾಶವಾಗದ ಚೈತನ್ಯರೂಪವಾದ ದೃಷ್ಟಿಯುಳ್ಳ ಆತ್ಮನು ಸ್ವತಃಸಿದ್ಧನಾದ್ದರಿಂದ

ಇಲ್ಲವೆನ್ನುವದಕ್ಕಾಗುವದಿಲ್ಲ, ೨-೩೬; ಈ ಆತ್ಮನು ದೃಶ್ಯನಾಗಲಾರನು, ೨-೪೧; ಇವನು ವಿಕಾರವಿಲ್ಲದೆ ಬುದ್ಧಿಪ್ರವೃತ್ತಿಗಳನ್ನೆಲ್ಲ ನೋಡುತ್ತಿರುತ್ತಾನೆ, ೨-೫೮.

**ಅಲೇಪಕಪಕ್ಷಃ** - ನೈ. ನಿಷಿದ್ಧಕರ್ಮವನ್ನು ಮಾಡಿದರೂ ಜ್ಞಾನಿಗೆ ಅದರ ಫಲವು ಅಂಟುವದಿಲ್ಲವೆಂಬುವರ ಪಕ್ಷ, ಇದರ ತಿರಸ್ಕಾರ, ೧-೬೨ ರಿಂದ ೬೭.

**ಅಲೌಕಿಕ** - ಬ್ರ.ಸೂ-೧. ಲೋಕಪ್ರಸಿದ್ಧವಲ್ಲದ, ಶಾಸ್ತ್ರಸಿದ್ಧವಾದ (ಯೂಪಾದಿ), ೩೯ ; ಬೃಹ-೨. ಲೌಕಿಕಪ್ರಮಾಣಸಿದ್ಧವಲ್ಲದ (ಸಮಷ್ಟಿ ವ್ಯಷ್ಟ್ಯಾತ್ಮದರ್ಶನ), ೪೦.

**ಅಲೌಕಿಕಮ್** - ಬೃಹ-೧. ಲೋಕಸಿದ್ಧವಲ್ಲದ (ಕರ್ಮಜ್ಞಾನಗಳು), ೫೨ ; ನೈ. ಲೋಕಸಿದ್ಧವಲ್ಲದ. ಶಾಸ್ತ್ರವು ಅಲೌಕಿಕಪ್ರಮಾಣ, ೧-೨೯; ವೇದಶಬ್ದಗಳೂ ಲೋಕಶಬ್ದಗಳೇ ಆಗಿರುತ್ತವೆ, ಲೋಕದಲ್ಲಿರುವ ಶಬ್ದಗಳ ಅರ್ಥವಲ್ಲದೆ ವೈದಿಕಶಬ್ದಗಳಿಗೆ ಬೇರೆಯ ಅರ್ಥವಿದೆಯೆಂದರೆ ಅಲೌಕಿಕವಾಗಿ ಅಪ್ರಾಮಾಣ್ಯವು ಬರುವದು, ೩-೭೮.

**ಅವರಂ ಕರ್ಮ** - ಮುಂ. ಕೀಳಾದ, ಉಪಾಸನೆಯಿಲ್ಲದ ಬರಿಯ ಕರ್ಮ,

**ಅವಗತಿಃ, ಅವಗಮಃ** - ಬ್ರ.ಸೂ-೨. ಅರಿವು, ಅನುಭವ. ಬ್ರಹ್ಮಜಿಜ್ಞಾಸೆಯು ಅವಗತಿರೂಪಫಲಕ್ಕಾಗಿ, ೧-೧೮ ಮನನನಿದಿಧ್ಯಾಸನಗಳೂ ಶ್ರವಣದಂತೆ ಅವಗತಿಗಾಗಿ ೧-೬೧, ವೇದಾಂತವಾಕ್ಯಗಳು ಬ್ರಹ್ಮಾವಗತಿಪರ, ೧-೬೪ ; ಆತ್ಮೈಕಾವಗತಿಯು ನಿಜವಾಗಿ ಹುಟ್ಟುತ್ತದೆ, ಅವಿದ್ಯಾನಿವೃತ್ತಿಯು ಅದಕ್ಕೆ ಫಲ, ಅದು ಬಾಧಿತವಾಗುವದಿಲ್ಲ ೧-೪೩೮ ; ಆತ್ಮಾವಗಮಕ್ಕಾಗಿ ಯೋಗ, ೧-೩೩೭ ; ಅವಗತಿಯು ಎಲ್ಲರ ಆತ್ಮನೂ ಒಬ್ಬನೇ ಎಂಬ ರೂಪದಲ್ಲಿರುತ್ತದೆ, ೧-೪೩೮ ; ಏಕತ್ವಾವಗತಿಗಿಂತ ಮೊದಲೇ ಸತ್ಯಾನೃತ ವ್ಯವಹಾರ, ೧-೪೩೮.

**ಅವಗಮಃ** - ಬೃಹ-೧. ಬ್ರಹ್ಮಾತ್ಮನು ಒಬ್ಬನೇ ಪರಮಾರ್ಥವೆಂಬ ನಿಶ್ಚಯ, ೧೫೪.

**ಅವಗತಬ್ರಹ್ಮಾತ್ಮಭಾವಃ** - ಬ್ರ.ಸೂ-೧. ಬ್ರ ತನ್ನ ಸ್ವರೂಪವೆಂಬ ಅನುಭವವನ್ನು ಹೊಂದಿರುವಾತನು, ೫೭, ೬೦.

**ಅವಗತಿಃ** - ಬ್ರ.ಸೂ-೧. ಫಲರೂಪವಾಗಿರುವ ಜ್ಞಾನ, (ಶಾಸ್ತ್ರದಿಂದಾಗುವ ಮೋಕ್ಷಕಾರಣಜ್ಞಾನ), ೧೪, ೧೮, ೬೧, ೬೪, ೪೩೮ ; ನೈ. (೧) ಜ್ಞಾನಸ್ವರೂಪ. ಒಂದೊಂದು ವಿಷಯಕ್ಕೆ ಒಂದೊಂದು ಬೇರೆ ಬೇರೆ ಬುದ್ಧಿಯಿರುವಂತೆ,

ಅವಗತಿಯು ಬೇರೆಬೇರೆಯಿರುವದಿಲ್ಲ; ಏಕೆಂದರೆ ಎಲ್ಲಾ ಬುದ್ಧಿಗಳಲ್ಲಿಯೂ, ಚಿತ್ತಿನ ಆಭಾಸವೇ ಇರುತ್ತದೆ, ೨-೮೯; ಅಹಂಕಾರವೇ ಮುಂತಾದ ದ್ವೈತವು ಅವಗತ್ಯಾತ್ಮನಿಂದ ಬಂದುಹೋಗುತ್ತಿರುತ್ತದೆ, ೨-೯೫; ಆತ್ಮನು ಅವಗತಿರೂಪದಿಂದಲೇ ಇರುವದರಿಂದ ಅವನನ್ನು ಪ್ರಮಾಣವು ಹೊಸದಾಗಿ ತಿಳಿಸಿತೋರಿಸಬೇಕಾದದ್ದಿಲ್ಲ , ೨-೧೦೫; ದ್ವೈತವು ತನ್ನ ರೂಪದಿಂದಲಾಗಲಿ ಅವಗತಿರೂಪದಿಂದಾಗಲಿ ಸಿದ್ಧವಾಗಿಲ್ಲವಾದ್ದರಿಂದ ಅದ್ವೈತವೇ ಸಿದ್ಧವಾಗುತ್ತದೆ, ೨-೧೧೨, ೧೧೩; ಆತ್ಮನು ಅವಗತಿರೂಪನಾಗಿರುವದರಿಂದ ಅವನ ವಿಷಯದಲ್ಲಿ ಸಂಶಯವಿಲ್ಲ , ೩-೩೭ ; ಆತ್ಮನು ನಿತ್ಯಾವಗತಿರೂಪನಾಗಿರುವದರಿಂದ ಪ್ರತ್ಯಕ್ಷಾದಿವಿಷಯನಲ್ಲ, ೩-೪೮; ಅವಗತಿರೂಪನಾದ ಆತ್ಮನಿಗೆ ದುಃಖವಿದ್ದರೆ ಅದು ವಿಷಯವಾಗಬೇಕು, ೩-೮೭; ಬುದ್ಧಿವೃತ್ತಿಗಳು ಭಿನ್ನವಾದರೂ ಅವಗತಿ ಭಿನ್ನವಾಗಿರುವದಿಲ್ಲ , ೨-೮೬, ೮೮, ೮೯; (೨) **ಪ್ರಮಾಣಫಲವಾದ ಪ್ರಮಿತಿ.** ಅವಗತ್ಯಂತವಾದ ಪ್ರತ್ಯಯವು ಯಾವನಿಂದ ಬೆಳಗುವದೋ ಅವನೇ ನನ್ನ ಆತ್ಮನು ಎಂಬುದೇ ವಾಕ್ಯಜನ್ಯಜ್ಞಾನವು, ೩-೪೬; ವಾಕ್ಯದಿಂದ ಅವಗತಿಯುಂಟಾದರೂ ಅದು ಅನೃತವೆನ್ನುವದಾದರೆ ಪ್ರಸಂಖ್ಯಾನದಿಂದಾದ ಅವಗತಿಯೂ ಅನೃತವೆಂದೇ ಒಪ್ಪಬೇಕಾಗುವದು, ೩-೧೧೮.

**ಅವಗತಿಸಾಧನಾನಿ** - ಬ್ರ.ಸೂ-೧. ಶ್ರವಣಮನನಾದಿಗಳು, ವೇದಾನುವಚನ ಮುಂತಾದವುಗಳು, ೪೩೮.

**ಅವದಾನಪ್ರಕರಣಮ್** - ಬೃಹ-೧. ದೇವತೆಗಳಿಗಾಗಿ ಮಾಡುವ ಯಾಗ ಹೋಮಗಳನ್ನು ವಿಧಿಸಿ, ಯಜ್ಞಾದಿಗಳನ್ನು ಋಣವನ್ನು ತೀರಿಸುವಂತೆ ಆವಶ್ಯವಾಗಿ ಮಾಡಬೇಕೆಂದು ಹೇಳಿರುವ, ಶತಪಥ (೧-೭-೨-೧) ಬ್ರಾಹ್ಮಣದ ಪ್ರಕರಣ.

**ಅವನಿಃ** - ಬ್ರ.ಸೂ-೧. ಭೂಮಿ (ಉಪಸಂಹಾರಕಾರಣಕ್ಕೆ ದೃಷ್ಟಾಂತ), ೩೯೮.

**ಅವಬೋಧಃ** - ನೈ. ತಿಳಿವಳಿಕೆ. ಪ್ರಮಾಣಗಳು ತಾವೇ ಅರ್ಥವನ್ನು ತಿಳಿಸುತ್ತವೆ, ೩-೮೬; ತ್ವಮರ್ಥದ ತಿಳಿವಳಿಕೆಗಾಗಿ ಅನ್ವಯವ್ಯತಿರೇಕವಿಧಿ ಯುಂಟೆಂಬುದು ಸಿದ್ಧಾಂತ, ೩-೪, ೫, ೧೨೬.

**ಅವಭಾಸ್ಯಾವಭಾಸಕಸಂಬನ್ಧಃ** - ನೈ. ಜ್ಞಾತೃವಿಗೂ ಅಹಂಕಾರಕ್ಕೂ ಇರುವ ಸಂಬಂಧ , ೩-೬೦.

**ಅವಸ್ತು** - ನೈ. ನಿಜವಾದ ವಸ್ತುವಲ್ಲದ್ದು . ಕಲ್ಪಿತವಾದವುಗಳು ಅವಸ್ತು ವಾಗಿರುವದರಿಂದ ಅವು ಒಂದಕ್ಕೊಂದು ವಿರುದ್ಧವಾದರೂ ಒಂದೇ ವಸ್ತುವಿನಲ್ಲಿ

ಕಾಣಬಹುದು, ೨-೫೦; ಅಜ್ಞಾನವು ಜ್ಞಾನಾಭಾವವಾದ್ದರಿಂದ ಅವಸ್ತುವಾಗಿದೆಯಾಗಿ ಸಂಸಾರಕಾರಣವಾಗಲಾರದೆಂಬುದು ಸರಿಯಲ್ಲ , ಏಕೆಂದರೆ ಅಜ್ಞಾತವಾದ ಸತ್ತೇ ಜಗತ್ಕಾರಣವಾಗಿರುತ್ತದೆ, ೩-೭.

**ಅವಸ್ಥಾಃ** - **ಬ್ರ.ಸೂ-೧.** ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಸ್ಥೆಗಳು, ಸೃಷ್ಟ್ಯಾದ್ಯವಸ್ಥೆಗಳು, ೪೨೪ ; ಯಾವದಾದರೊಂದು ಸ್ಥಿತಿ, ೪೩೫ ; **ಬ್ರ.ಸೂ-೨.** ಜಾಗ್ರದಾದ್ಯವಸ್ಥೆಗಳು, ಸೃಷ್ಟ್ಯಾದಿಗಳು, ವಯೋಽವಸ್ಥೆಗಳು. ಪರಮಾತ್ಮನು ಅವಸ್ಥಾತ್ರಯದಿಂದೊಡಗೂಡಿರುವಂತೆ ತೋರುವದು ರಜ್ಜುಸರ್ಪದಂತೆ ಮಾಯಾಮಾತ್ರ, ೧-೪೨೪ ; ಕ್ರಿಯಾಕಾರಕಫಲವ್ಯವಹಾರವಿಲ್ಲವಾಗುವದು ಒಂದಾನೊಂದು ಅವಸ್ಥೆಯಲ್ಲಲ್ಲ, ೧-೪೩೫ ; ಬ್ರಹ್ಮಪ್ರಾಪ್ತಿಯೆಂಬುದು ಬಾಲ್ಯವನ್ನು ಬಿಟ್ಟು ವಾರ್ಧಕಾವಸ್ಥೆಯನ್ನು ಪಡೆದಂತೆ ಅಲ್ಲ, ೩-೫೮೨ ; ಜಾಗ್ರದಾದ್ಯವಸ್ಥೆಗಳನ್ನು ಶ್ರುತಿಯಲ್ಲಿ ಹೇಳುವದು ಆತ್ಮನಿಗೆ ಅವಸ್ಥಾರಹಿತತ್ವವನ್ನು ತಿಳಿಸುವದಕ್ಕೆ, ೧-೩೩೧.

**ಅವಸ್ಥಾ** - **ಮಾಂ.** ಅರಿಯುವದು, ಅರಿಯದಿರುವದು-ಎಂಬ ಅನುಭವ ರೂಪವಾದ ಎಚ್ಚರ-ಕನಸು,ತನಿನಿದ್ರೆ ಇವು, ೧೬, ೨೦, ೩೮, ೪೦, ೫೨ ; **ಶಾಂ. ನಿ.** ಜಾಗರಿತ, ಜಾಗ್ರತ್ (ಎಚ್ಚರ) ; ಸ್ವಪ್ನ (ಕನಸು), ಸುಷುಪ್ತಿ ಸುಷುಪ್ತ (ತನಿನಿದ್ರೆ) ಎಂಬ ಮೂರೂ ಜೀವನ ಅವಸ್ಥೆಗಳು. ಈ ಮೂರು ಅವಸ್ಥೆಗಳಲ್ಲಿಯೇ ವಾದಿಗಳು ಕಲ್ಪಿಸಿರುವ ವಸ್ತುಗಳೆಲ್ಲ ಅಡಕವಾಗಿರುವವು ; ಇವುಗಳ ತತ್ತ್ವವನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತುಕೊಂಡಂತೆ. ಮಾ.ಂ ಕಾ. ಭಾ. ೪-೮೮. ಅವಸ್ಥೆಗಳಲ್ಲಿ ಕಾಣುವ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ದೃಶ್ಯಗಳೆಲ್ಲವೂ ಆಯಾ ಅವಸ್ಥೆಗೇ ಸೇರಿದ್ದು ಎಂದು ತಿಳಿಯಬೇಕು. ಮಾಂ. ಕಾ. ಭಾ. ೩.

**ಅವಾಕ್ಯಾರ್ಥಃ, ಅವಾಚ್ಯಾರ್ಥಃ** - **ಶಾಂ. ನಿ.** ಬ್ರಹ್ಮದಲ್ಲಿ ಶಬ್ದಪ್ರವೃತ್ತಿಗೆ ನಿಮಿತ್ತವಾದ ಜಾತಿ, ದ್ರವ್ಯ - ಮುಂತಾದ ವಿಕಲ್ಪಗಳಿಲ್ಲದ್ದರಿಂದ ಅದು ಯಾವ ಶಬ್ದಕ್ಕೂ ವಾಚ್ಯವಲ್ಲ, ಪದಾರ್ಥಗಳ ಸಂಸರ್ಗವನ್ನೇ ವಾಕ್ಯವು ತಿಳಿಸುವದರಿಂದ ಯಾವದರ ಸಂಬಂಧವೂ ಇಲ್ಲದ ಬ್ರಹ್ಮವು ವಾಕ್ಯಾರ್ಥವೂ ಅಲ್ಲ, ತೈ. ಭಾ. ೨-೧. **'ಅಭಿಧಾನಮ್'** ಎಂಬ ಶಬ್ದದ ವಿವರವನ್ನು ನೋಡಿರಿ.

**ಅವಾಂತರವಾಕ್ಯಮ್** - **ಬ್ರ.ಸೂ-೧.** ಒಂದು ವಾಕ್ಯದೊಳಗೆ ತನ್ನದೇ ಆದ ಮತ್ತೊಂದು ತಾತ್ಪರ್ಯವನ್ನು ತಿಳಿಸುವ ವಾಕ್ಯ, ೩೦೩..

**ಅವಾಂತರಪ್ರಕೃತಿಃ** - **ಬ್ರ.ಸೂ-೨.** ಒಳ ಕಾರಣ, ಬ್ರಹ್ಮವೆಂಬ ಮೂಲಪ್ರಕೃತಿಯಲ್ಲ, ಪ್ರಾಣಗಳು ಮೊದಲೂ ಇದ್ದವು ಎಂಬುದು ಅವಾಂತರ

ಪ್ರಕೃತಿಯ ವಿಷಯ, ೨-೧೭೬ ; ವ್ಯಾಕೃತವಿಷಯದಲ್ಲಿಯೂ ಪ್ರಕೃತಿವಿಕೃತಿಭಾವವನ್ನು ಶ್ರುತಿಯಲ್ಲಿ ಹೇಳಿದೆ, ೨-೧೭೬.

**ಅವಾಂತರಫಲಮ್** - **ಈಶ.** ಮುಖ್ಯವಲ್ಲದ ಒಳಫಲ, ೨೩.

**ಅವ್ಯಕ್ತ** - ಬ್ರ.ಸೂ-೧. ವ್ಯಕ್ತವಲ್ಲದ (ಬೀಜಶಕ್ತಿ), ೩೩೯ ; ಶರೀರ, ೩೩೮ ; ಈಶ್ವರನ ಸ್ವರೂಪವೆಂದಾಗಲಿ ಅಲ್ಲವೆಂದಾಗಲಿ ಹೇಳುವದಕ್ಕೆ ಬಾರದ ಮಾಯೆ, ೩೩೯, ತಾನು ವ್ಯಕ್ತವಾಗದೆ ಜೀವನ ವ್ಯವಹಾರವನ್ನು ಸಾಗಿಸುತ್ತಿರುವ ಅವಿದ್ಯೆ, ೩೪೦ ; **ಕಠ.** ಜಗತ್ತಿಗೆ ಕಾರಣವಾಗಿರುವ ನಾಮರೂಪಗಳ ಸೂಕ್ಷ್ಮಾವಸ್ಥೆ, ೧೫೭.

**ಅವ್ಯಕ್ತಃ** - ಭ.ಗೀ. ಇಂದ್ರಿಯಗಳಿಗೆ ಗೋಚರವಲ್ಲದ ಆತ್ಮ, ೫೫, ೫೩೦ ; **ಶಾಂ. ನಿ.** ಇಂದ್ರಿಯಗಳಿಗೆ ಗೋಚರನಲ್ಲದ ಆತ್ಮ, ಗೀ. ಭಾ. ೮-೨೦.

**ಅವ್ಯಕ್ತಮ್** - ಬ್ರ.ಸೂ-೨. ನಾಮರೂಪಗಳಾಗಿ ವ್ಯಕ್ತವಾಗದ ಬೀಜಾತ್ಮಕ ಜಗತ್ತು, ಅವ್ಯಾಕೃತ. ಇದು ಪರಮೇಶ್ವರನಿಗೆ ಅಧೀನವಾದ ಸತ್ತೆಯುಳ್ಳದ್ದು ೧-೩೩೯ ; ಪರಮಾತ್ಮನಿಂದ ವ್ಯಕ್ತವಾಗುತ್ತದೆ, ೧-೪೦೧ ; ಕಠಶ್ರುತಿಯಲ್ಲಿ ಶರೀರವನ್ನೇ ಅವ್ಯಕ್ತವೆಂದಿದೆ, ೧-೩೩೮, ೩೩೯, ಇದನ್ನು ಅಸತ್ ಎಂದು ಶ್ರುತಿಯಲ್ಲಿ ಕರೆದಿದೆ, ೧-೪೪೫ ; ತಾನು ವ್ಯಕ್ತವಾಗದೆ ಜೀವನ ವ್ಯವಹಾರವನ್ನೆಲ್ಲ ಸಾಗಿಸುತ್ತಿರುವ ಅವಿದ್ಯೆ, ೧-೩೪೦ ; ಎಲ್ಲಕ್ಕೂ ಸಾಕ್ಷಿಯಾಗಿರುವ ಬ್ರಹ್ಮ, ೨-೨೯೮ ; **ಈಶ.** ಜಗತ್ತಿನ ಸೂಕ್ಷ್ಮಸ್ಥಿತಿ, ಕಾರಣಬ್ರಹ್ಮ, ೧೫ ; **ಕಠ.** ಇಂದ್ರಿಯಗಳಿಗೆ ಗೋಚರವಾಗದ ಸೂಕ್ಷ್ಮವಾದ ಜಗತ್ತಿನ ಕಾರಣರೂಪ, ಅವ್ಯಾಕೃತ, ೯೯ ; ಭ.ಗೀ. ಪ್ರಜಾಪತಿಯ ನಿದ್ರಾವಸ್ಥೆ, ೫೨೬ ; ಭೂತಗಳ ಬೀಜವಾದ ಅವ್ಯಾಕೃತ ಅಥವಾ ಮಾಯೆ, ೪೫೮, ೫೩೦, ೭೮೦, ೮೯೨ ; ಪರಮಾತ್ಮ ೭೨೯, ೭೩೧ ; **ಶಾಂ. ನಿ.** ನಾಮರೂಪಾತ್ಮಕವಾದ ಜಗತ್ತಿನ ಬೀಜವಾದ ಅವ್ಯಾಕೃತ ಅಥವಾ ಮಾಯೆ. ಇದು ಸಾಂಖ್ಯರು ಕಲ್ಪಿಸಿರುವ ಪ್ರಧಾನದಂತೆ ಸ್ವತಂತ್ರವಾಗಿ ಪರಿಣಾಮವಾಗುವದಲ್ಲ ; ಅವಿದ್ಯೆಯಿಂದ ಆತ್ಮನಲ್ಲಿ ಶಕ್ತಿಯೆಂದು ಕಲ್ಪಿತವಾಗಿರುವದು. ಸೂ. ಭಾ. ೧-೪-೩, ೧-೪-೯, ೨-೧-೧೪.

**ಅವ್ಯಕ್ತಾದಿಸ್ಥಾವರಾಂತಾನಿ** - **ಈಶ.** ಬ್ರಹ್ಮದಿಂದ ಸ್ಥಾವರಪ್ರಾಣಿಗಳವರೆಗಿನ, ೧೫.

**ಅವ್ಯಕ್ತಾದಿಸ್ಥಾವರಾನ್ತಃ** - **ಕಠ.** ಅವ್ಯಕ್ತದಿಂದ ಹಿಡಿದು ಮರಗಿಡಗಳವರೆಗೆ ಹಬ್ಬಿರುವ ಸಂಸಾರ, ೧೫೭.

**ಅವ್ಯಕ್ತಾದಿಸ್ಥಾವರಾನ್ತಾಃ** - **ಮುಂ.** ಅವ್ಯಾಕೃತಾತ್ಮನಲ್ಲಿ ಸೇರುವದರಿಂದ ಹಿಡಿದು ಸ್ಥಾವರಪ್ರಾಣಿಯ ಜನ್ಮವನ್ನು ಪಡೆಯುವವರೆಗಿನ ಲೋಕಗಳು, ೪೫.

**ಅವ್ಯಕ್ತಾದಿಸ್ಥಾವರಾಂತಮ್** - **ಭ.ಗೀ.** ಜಗತ್ತಿನ ಬೀಜರೂಪದಿಂದ ಹಿಡಿದು ಸ್ಥಾವರಪ್ರಾಣಿಯವರೆಗಿನ, ೧೦೪೩.

**ಅವ್ಯಭಿಚಾರಿ** - **ನೈ.** ತನ್ನ ಸ್ವರೂಪವನ್ನು ಮಾರ್ಪಡಿಸದ ಆತ್ಮವಸ್ತು, ೨-೭೮.

**ಅವ್ಯಭಿಚಾರಿಪ್ರಾಮಾಣ್ಯಮ್** - **ನೈ.** ಪ್ರಾಮಾಣ್ಯವು ಎಂದಿಗೂ ತಪ್ಪದ ತತ್ತ್ವಮಸ್ಯಾದಿವಾಕ್ಯ. ಇದು ಪ್ರತ್ಯಕ್ಷಾದಿಗಳಿಗಿಂತಲೂ ಪ್ರಬಲ, ೩-೯೪.

**ಅವ್ಯಯ** - **ಭ.ಗೀ.** ಸೊರಗದ ಅಥವಾ ನಾಶವಾಗದ ಆತ್ಮ, ೨, ೩೧, ೪೨, ೨೫೧, ೪೬೯ ; ನಾಶವಾಗದ ಫಲವುಳ್ಳ ಆತ್ಮಜ್ಞಾನ, ೫೪೫.

**ಅವ್ಯಯಮ್** - **ಮುಂ.** ಸ್ವರೂಪದಿಂದಾಗಲಿ, ಧರ್ಮದಿಂದಾಗಲಿ, ಸವೆಯದ ಬ್ರಹ್ಮ, ೧೯.

**ಅವ್ಯಯಾತ್ಮಾ** - **ಮುಂ.** ಕಲ್ಪಾಂತದವರೆಗೆ ಸವೆಯದ ಸ್ವಭಾವವುಳ್ಳ ಹಿರಣ್ಯಗರ್ಭ, ೪೨.

**ಅವ್ಯಾಕೃತ** - **ಬ್ರ.ಸೂ-೧.** ಬೇರೆಬೇರೆಯಾಗಿ ವಿಂಗಡಿಸಿಕೊಳ್ಳದ (ನಾಮರೂಪ) ೨೦೧, ೩೫೭ ; **ಮಾಂ.** ಬಿಡಿಬಿಡಿಯಾಗಿರುವ ಪ್ರಾಣ, ೨೩ ; ಕಾರಣರೂಪನಾದ (ಆತ್ಮ), ೧೩, ೨೪ ; ಅವ್ಯಕ್ತವಾಗಿರುವ ಭಾವನೆಗಳು, ೯೬, ೯೯; **ತೈ.** ವಿಂಗಡವಾಗಿ ಬಿಡಿಸದೆ ಇರುವ (ನಾಮರೂಪಗಳು), ೧೮೩ ; **ಛಾಂ.** ಬಿಡಿಬಿಡಿಯಾಗಿ ವಿಂಗಡವಾಗದೆ ಇರುವ, ೨೮೩, ೪೬೬ ; **ಬೃಹ-೧.** ನಾಮರೂಪಗಳಾಗಿ, ಅಥವಾ ನಾಮರೂಪ ಕರ್ಮಗಳಾಗಿ, ವಿಂಗಡಿಸದ, ೭, ೧೧೮, ೧೨೦, ೧೯೦, ೪೦೫.

**ಅವ್ಯಾಕೃತಮ್** - **ಬ್ರ.ಸೂ-೨.** ಬಿಡಿಬಿಡಿಯಾಗದ ನಾಮರೂಪಬೀಜ, ಭೂತಸೂಕ್ಷ್ಮ, ಸೃಷ್ಟಿಗೆ ಮುಂಚೆ ಈಶ್ವರನ ಜ್ಞಾನಕ್ಕೆ ವಿಷಯ, ೧-೬೯ ; ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯ, ೧-೬೯, ೪೪೦ ; ಅವಿದ್ಯಾಕಲ್ಪಿತ, ೧-೪೪೦, ೪೬೪ ನಾಮರೂಪಗಳ ವ್ಯಾಕೃತಾವ್ಯಾಕೃತರೂಪಭೇದದಿಂದ ಈಶ್ವರನಿಗೆ ಪರಿಣಾಮಾದಿ ವ್ಯವಹಾರ, ೧-೪೬೪ ; **ಈಶ.** ಬಿಡಿಬಿಡಿಯಾಗಿ ತೋರದ ಸೂಕ್ಷ್ಮಸ್ಥಿತಿ, ಅವ್ಯಕ್ತ, ೨೭, ೨೮, ೩೦, ೩೨ ; **ಕೇನ.** ಅವಿದ್ಯೆ, ಕಾಮ, ಕರ್ಮ - ಎಂಬ ಸಂಸಾರಹೇತು, ೨೭ ; **ಕಠ.** ಬಿಡಿಬಿಡಿಯಾಗಿಲ್ಲದ ನಾಮರೂಪಗಳ ತತ್ತ್ವ, ೯೯ ; **ಮುಂ.** ನಾಮರೂಪಾತ್ಮಕವಾದ ಜಗತ್ತಿನ ಸೂಕ್ಷ್ಮಸ್ಥಿತಿ, ೨೩, ೫೨, ೫೫ ; ಈ ಸ್ಥಿತಿಯನ್ನು

ಉಪಾಧಿಯಾಗುಳ್ಳ ಬ್ರಹ್ಮ, ೫೫ ; **ಮಾಂ.** ನಾಮರೂಪಾತ್ಮಕವಾಗಿರುವ ಜಗತ್ತಿನ ಬೀಜ, ೬ ; **ಐತ.** ಜಗತ್ತಿನ ಬೀಜರೂಪವಾಗಿರುವ ನಾಮರೂಪಗಳ ಸೂಕ್ಷ್ಮ ೨೮, ૩೧, ೮೮ ; **ಭ.ಗೀ.** ಜಗತ್ತಿನ ಸೂಕ್ಷ್ಮಸ್ಥಿತಿ, ಅವ್ಯಕ್ತ, ಮಾಯೆ, ೭೨೯, ೭೮೦, ೧೧೯೭ ; **ಶಾಂ. ನಿ.** ಜಗತ್ತಿನ ಬೀಜರೂಪ. ಇದು ಅವಿದ್ಯೆಯಿಂದ ಆತ್ಮನಲ್ಲಿ ಕಲ್ಪಿತವಾಗಿರುತ್ತದೆ. ಆತ್ಮನಿಗಿಂತ ಬೇರೆಯೆಂದಾಗಲಿ ಬೇರೆಯಲ್ಲವೆಂದಾಗಲಿ ಹೇಳಬರುವದಲ್ಲ. ಇದರ ಪರಿಣಾಮದಿಂದಲೇ ಬ್ರಹ್ಮಕ್ಕೆ ಪರಿಣಮಿಸುವದೆಂಬ ವ್ಯವಹಾರ ಸೂ. ಭಾ. ೨-೧-೨೭ ಇದನ್ನು ಮೂಲಾವಿದ್ಯೆಯೆಂದು ಕರೆದು ಇದೇ ಆತ್ಮಾನಾತ್ಮರ ಅಧ್ಯಾಸಕ್ಕೆ ಕಾರಣವೆಂದು ವ್ಯಾಖ್ಯಾನಕಾರರು ಬರೆದಿರುತ್ತಾರೆ ; ಈ ವಾದಕ್ಕೆ ಭಾಷ್ಯದಲ್ಲಿ ಆಧಾರವಿಲ್ಲ.

**ಅವ್ಯಾಕೃತಧರ್ಮೀ** - **ಬೃಹ-೨.** ನಾಮರೂಪಗಳಾಗಿ ವಿಂಗಡಿಸಿಕೊಳ್ಳದಿರುವ (ಮೋಕ್ಷ), ૩೦.

**ಅವ್ಯಾಕೃತಾಕಾಶಃ** - **ಬೃಹ-೨.** ಜಗತ್ತು ನಾಮರೂಪಗಳಾಗಿ ವಿಂಗಡಿಸಿಕೊಳ್ಳುವ ಮುನ್ನಿನ ಸೂಕ್ಷ್ಮಸ್ಥಿತಿ, ೭೬, ೯೦.

**ಅವಿಕಾರಃ** - **ಬ್ರ.ಸೂ-೧.** ವಿಕಾರವಲ್ಲದ (ಅವ್ಯಾಕೃತ), ವಿಕಾರವಿಲ್ಲದ (ಪರಮೇಶ್ವರ), ೨೦೧.

**ಅವಿಕಾರೀ** - **ನೈ.** ವಿಕಾರವನ್ನು ಹೊಂದದ, **ಕೂಟಸ್ಥನಾದ** ಆತ್ಮ, ೨-೫૩; ಸಾಮಾನ್ಯವಿಶೇಷಗಳಿಲ್ಲದ ಆತ್ಮ, ૩-೧೭.

**ಅವಿಚಾರಿತಸಿದ್ಧ** - **ನೈ.** ವಿಚಾರಮಾಡದೆ ಇರುವಾಗ ಮಾತ್ರ ಸಿದ್ಧವಾಗುವ ದ್ವೈತ, (ಅವ); ಅನವಬೋಧವು ಅವಿಚಾರಿತಸಿದ್ಧ, ೨-೯೭.

**ಅವಿಕ್ರಿಯಃ** - **ಭ.ಗೀ.** ವಿಕಾರವಿಲ್ಲದ (ಆತ್ಮ), ૩೫, ૩೭,, ೪೧, ೪೨, ೪૩, ೪೫, ೪೬, ೫೪, ೭೬೮, ೭೭૩.

**ಅವಿದ್ಯಾ** - **ಬ್ರ.ಸೂ-೧.** ಅಧ್ಯಾಸ, ಆತ್ಮಾನಾತ್ಮಗಳನ್ನು ಒಂದನ್ನೊಂದೆಂದು ತಿಳಿದುಕೊಂಡಿರುವದು, ೪, ೫, ೨೨೫, ೨೫೧, ೪೦೯, ೪೭೫ ; ದ್ವೈತವನ್ನು ಕಲ್ಪಿಸುವದು, ೨೬೪ ; **ಬ್ರ.ಸೂ-೨.** ತಪ್ಪುತಿಳಿವಳಿಕೆ, ಮಿಥ್ಯಾಪ್ರತ್ಯಯ, ಮಿಥ್ಯಾಜ್ಞಾನ, ಮಿಥ್ಯಾಬುದ್ಧಿ ಭ್ರಾನ್ತಿ ತಮಸ್ಸು ಅನವಬೋಧ, ಅಪ್ರಬೋಧ - ಇವೆಲ್ಲ ಅವಿದ್ಯೆಗೆ ಪರ್ಯಾಯಗಳು. ಆತ್ಮಾನಾತ್ಮರುಗಳ ಪರಸ್ಪರಾಧ್ಯಾಸವೇ ಅವಿದ್ಯೆ, ೧-೪, ೨೨೫, ೨೪೦ ; ಅವಿದ್ಯೆಯಿಂದಲೇ ಲೌಕಿಕವೈದಿಕವ್ಯವಹಾರಗಳು, ೧-೫, ೬, ೭, ೨-೨೮೨ ; ಅವಿದ್ಯೆಯೇ ಮೋಕ್ಷಕ್ಕೆ ಪ್ರತಿಬಂಧ, ೧-೪೫ ; ಅನಾದ್ಯನಂತವಾದರೂ ವಿದ್ಯೆಯಿಂದ

ಬಾಧಿತವಾಗುವದು, ೧-೬ ಅವಿದ್ಯಾದ್ಯನರ್ಥಗಳು ಬ್ರಹ್ಮಾವಗತಿಯಿಂದ ಹೋಗುವವು, ೧-೧೮ ಅವಿದ್ಯಾಕಾಮಕರ್ಮಗಳಿಂದ ವಿಜ್ಞಾನಾತ್ಮನಲ್ಲಿ ಮರ್ತ್ಯತ್ವವು ಅಧ್ಯಾರೋಪಿತ, ೧-೧೮೫ , ಅವಿದ್ಯೆಯು ಯಾರಿಗೆಂದರೆ ಈ ಪ್ರಶ್ನೆಯನ್ನು ಕೇಳುವವನಿಗೆ, ೨-೫೧೦ ; ಅವಿದ್ಯೆಯಿಂದ ಆತ್ಮನಿಗೆ ಸದ್ವಿತೀಯತ್ವವಿಲ್ಲ, ೨-೫೧೦ ; ಅವಿದ್ಯೆಯಿರಲಿ ಹೋಗಲಿ ವಸ್ತುವಿನಲ್ಲಿ ವಿಶೇಷವಿಲ್ಲ, ೧-೩೫೧ ; ವೈಶೇಷಿಕಮತದಲ್ಲಿ ಪರಮಾಣುನಿತ್ಯತ್ವಕ್ಕೆ ಕಾರಣ, ೨-೩೨ ; ಸೌಗತಮತದಲ್ಲಿ ಸಂಸ್ಕಾರಕ್ಕೆ ಕಾರಣ, ೨-೪೩, ೪೯ ; **ಈಶ.** ತಪ್ಪುತಿಳಿವಳಿಕೆ, ೯, ೧೭, ೪೧ ; ಆತ್ಮನನ್ನು ತಪ್ಪಾಗಿ ತಿಳಿದುಕೊಂಡದ್ದರಿಂದ ಮಾಡುವ ಕರ್ಮ, ೨೨, ೨೬ ; ತಪ್ಪುತಿಳಿವಳಿಕೆಯಿಂದ ಕಾರಣವೆಂದು ಕಲ್ಪಿಸಿರುವ ಅವ್ಯಾಕೃತ, ೨೮ ; **ಕೇನ.** ಆತ್ಮನನ್ನು ತಿಳಿಯದೆ ಇರುವದು, ತಪ್ಪಾಗಿ ತಿಳಿದಿರುವದು, ಅಜ್ಞಾನ, ೫೮, ೬೨ ; **ಕಠ.** ಅಜ್ಞಾನ, ತಪ್ಪುತಿಳಿವಳಿಕೆ, ಆತ್ಮಾನಾತ್ಮರನ್ನು ಪರಸ್ಪರವಾಗಿ ಕಲ್ಪಿಸುವದು, ೪೮, ೫೩, ೫೪, ೮೪, ೮೭, ೧೧೨, ೧೨೫, ೧೨೬, ೧೪೩, ೧೪೫, ೧೫೧ ; **ಪ್ರಶ್ನ.** ಆತ್ಮನ ಸ್ವರೂಪವನ್ನು ತಪ್ಪಾಗಿ ತಿಳಿದುಕೊಂಡಿರುವದು, ೬೩, ೬೬, ೭೬, ೧೦೩, ೧೦೯, ೧೧೮ ; **ಮುಂ.** ತಪ್ಪುತಿಳಿವು, ಬ್ರಹ್ಮವನ್ನು ಬೇರೆಯಾಗಿ ತಿಳಿಯುವದು, ೨, ೬, ೧೪, ೧೬, ೩೯, ೪೦, ೪೫, ೫೪, ೭೮, ೮೩, ೮೫, ೧೦೩, ೧೧೭, ೧೧೯, ೧೨೨ ; **ಐತ.** ತಪ್ಪುತಿಳಿವಳಿಕೆ, ಸಂಸಾರಕ್ಕೆ ಮೂಲಕಾರಣವಾದದ್ದು, ೧೩, ೨೬, ೫೬, ೭೩, ೮೧ ; **ತೈ.** ಬ್ರಹ್ಮಸ್ವರೂಪವು ಇಲ್ಲವೆಂದು ತಿಳಿಯುವದು, ಅನಾತ್ಮವನ್ನು ಆತ್ಮವೆಂದು ಕಾಣುವ ತಪ್ಪುತಿಳಿವಳಿಕೆ, ೯೩, ೧೯೨, ೧೯೭, ೨೧೬, ೨೧೮, ೨೨೩ ; **ಛಾಂ.** ಅಧ್ಯಾಸರೂಪವಾದ ತಪ್ಪುತಿಳಿವಳಿಕೆ, ೪, ೨೫೪, ೬೦೫, ೬೭೦, ೬೭೫, ೬೭೬, ೬೮೩ ; ತಿಳಿಯದಿರುವದು, ೧೬, ೬೦೪ ; **ಬೃಹ-೨.** ತಪ್ಪುತಿಳಿವಳಿಕೆಯಿಂದಾದ ಭ್ರಾಂತಿ, ಅಜ್ಞಾನ, ೩೧, ೫೫ ; ಅವಿದ್ಯೆಯಿಂದ ತೋರುವ ಸಾಧ್ಯಸಾಧನಗಳು, ೨೮೭ ; ಅಚೇತನ, ೨೬೨ ; ಚೌಳುನೆಲದಂತೆ ಪರಮಾತ್ಮನಿಂದಲೇ ಹುಟ್ಟಿ ಅವನ ಒಂದು ಭಾಗದಲ್ಲಿರುವ ದೋಷ (ಭ.ಪ್ರ.), ೨೫ ; **ಭ.ಗೀ.** ನಿಜವನ್ನರಿಯದೆ ತಪ್ಪಾಗಿ ತಿಳಿಯುವದು, ಭೇದಬುದ್ಧಿ, ಪ್ರಕೃತಿಯನ್ನೇ ತಾನೆಂದು ತಿಳಿಯುವದು, ೪೩, ೧೩೨, ೧೩.೩, ೧೩.೪ ; **ನೈ.** ಆತ್ಮಾನುಭವದಿಂದ ಸಿದ್ಧವಾಗಿರುವ ಐಕಾತ್ಮ್ಯದ ಅಪ್ರತಿಪತ್ತಿಯೇ ಅವಿದ್ಯೆ ; ಅದೇ ಸಂಸಾರಬೀಜವು, ಅದರ ನಾಶವೇ ಮುಕ್ತಿ, ೧-೭; ಆತ್ಮಜ್ಞಾನವು ಹುಟ್ಟುವದಕ್ಕೆ ಮಾತ್ರ ಶಾಸ್ತ್ರಾದಿಗಳನ್ನು ಬಯಸುತ್ತದೆಯಾದರೂ ಅವಿದ್ಯಾನಿವೃತ್ತಿಗೆ ಮತ್ತೇನನ್ನೂ ಸಹಾಯಕವಾಗಿ ಬಯಸುವದಿಲ್ಲ, ೧-೩೬; ಅವಿದ್ಯೆಯು ವಿದ್ಯೆಯನ್ನು ಬಾಧಿಸಲಾರದು, ೧-೩೮; ಅವಿದ್ಯೆಯ ಅನ್ವಯವಿದ್ದರೆ ಸಂಸಾರದ ಅನ್ವಯವಿರುವದು, ೧-೩೯, ೪೧, ೪೨; ಕರ್ಮವು ಪರಂಪರೆಯಿಂದ

ಅವಿದ್ಯಾನಿವೃತ್ತಿಗೆ ಕಾರಣ, ೧-೫೨; ಅವಿದ್ಯೆ, ವಿದ್ಯೆ- ಇವೆರಡಕ್ಕೂ ವಿರೋಧ, ೧-೫೬ ; ಜ್ಞಾನವು ಹುಟ್ಟಿದ ಮಾತ್ರದಿಂದ ಅವಿದ್ಯೆಯನ್ನು ಕಳೆಯುವದು, ೧-೬೩, ೪-೫೭; ಅವಿದ್ಯೆಯಿಂದಲೇ ದೇಹವು ಆತ್ಮನೆಂದಾಗುತ್ತದೆ, ೨-೧೨; ಆತ್ಮನು ಭೇದರಹಿತನು, ಅನಾತ್ಮವು ಭೇದವುಳ್ಳದ್ದು ಎಂಬೀ ವಿಭಾಗವೂ ಅವಿದ್ಯೆಯ ಕಾರ್ಯವು, ೩-೬; ಆತ್ಮನು **ಕೂಟಸ್ಥಬೋಧರೂಪನಾಗಿದ್ದರೂ** ಅವಿದ್ಯೆಯು ಅವನಲ್ಲಿ ಅವಿದ್ಯಾಪ್ರಸಿದ್ಧಿಯಿಂದಲೇ ಇರುತ್ತದೆ, **ಅವಿಚಾರಿತಸಿದ್ಧವಾಗಿರುತ್ತದೆ,** ೩-೧೧೧; ಆತ್ಮನಲ್ಲಿ ಅವಿದ್ಯೆಯ ಸಂಭಾವನೆಯೂ ಇಲ್ಲವಾದರೂ ಅವಿದ್ಯಾನಿದ್ರೆಯಿಂದ ಮಲಗಿರುವವನಿಗೆ ವಾಕ್ಯಜ್ಞಾನವಿಲ್ಲದೆ ಅದು ತೊಲಗದು; ಅವಿದ್ಯೆಯು ಆತ್ಮನಲ್ಲಿ ಹೇಗೆ ಬಂತು ಎಂಬ ಪ್ರಶ್ನೆಯು ಅಜ್ಞನಿಗಾಗಲಿ ಜ್ಞಾನಿಗಾಗಲಿ ಉಂಟಾಗುವ ಹಾಗೇ ಇಲ್ಲ, ೩-೧೧೨, ೧೧೫, ೧೧೬ ; **ಶಾಂ. ನಿ.** ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸವೇ ಅವಿದ್ಯೆ. ಈ ಅಧ್ಯಾಸವು ಕಾರ್ಯಾವಿದ್ಯೆಯೆಂದೂ ಇದಕ್ಕೆ ಕಾರಣವಾಗಿ **ಮೂಲಾವಿದ್ಯೆ, ಮಾಯೆ** - ಎಂಬ ಹೆಸರಿನ ಅವಿದ್ಯೆಯೊಂದು ಇರುವದೆಂದೂ ವ್ಯಾಖ್ಯಾನಕಾರರು ಬರೆದಿರುತ್ತಾರೆ. ಪ್ರಸ್ಥಾನತ್ರಯಭಾಷ್ಯದಲ್ಲಿ ಈ ವಾದಕ್ಕೆ ಆಧಾರವು ಸಿಕ್ಕುವದಿಲ್ಲ.

**ಅವಿದ್ಯಾ, ಅವಿದ್ಯಾಪ್ರತ್ಯಯಃ** - ಬೃಹ-೧. ಪರಮಾರ್ಥವನ್ನು ತಿಳಿಯದಿರುವದು, ತಪ್ಪಾಗಿ ತಿಳಿದಿರುವದು, ೧೦೨, ೧೨೦, ೧೫೨, ೩೫೯.

**ಅವಿದ್ಯಾಕೃತ - ಬ್ರ.ಸೂ-೧.** ಅವಿದ್ಯೆಯಿಂದ ಮಾಡಲ್ಪಟ್ಟ, ಅವಿದ್ಯೆಯಿಂದ ತೋರುವ (ಮರ್ತ್ಯತ್ವ), ೧೮೫ ; (ಕಾರ್ಯಪ್ರಪಂಚ), ೨೨೩ ; (ಭೂತೇಂದ್ರಿಯ ಮಾತ್ರೆಗಳು), ೩೮೬ ; (ನಾಮರೂಪಗಳು), ೪೪೦ ; **ಮುಂ.** ಅವಿದ್ಯೆಯಿಂದ ಮಾಡಲ್ಪಟ್ಟಿರುವ, ಬ್ರಹ್ಮವಿಷಯಕವಾದ ತಪ್ಪುತಿಳಿವಳಿಕೆಯಿಂದ ಕಾಣಬರುವ (ನಾಮರೂಪಗಳು), ೧೨೧ ; (ಅಂತಃಕರಣ ಮುಂತಾದ ಉಪಾಧಿಗಳು), ೧೨೦ ; **ಪ್ರಶ್ನ.** ತಪ್ಪು ತಿಳಿವಳಿಕೆಯಿಂದ ಹುಟ್ಟುಗಟ್ಟಿರುವ (ನಾಮರೂಪಗಳು), ೧೦೩, ೧೦೯ ; (ಪ್ರಾಣಾದಿಕಲೆಗಳು), ೧೧೫ ; (ಭೂತಮಾತ್ರೆಗಳು), ೬೯ ; **ಮಾಂ.** ಅವಿದ್ಯಾ ನಿಮಿತ್ತದಿಂದಾಗಿರುವ (ವಿಶ್ವಾದಿಪಾದತ್ರಯ), ೩೭ ; (ಗ್ರಾಹ್ಯಗ್ರಾಹಕವೆಂಬ ಮಲ), ೧೯೨ ; (ದ್ವೈತಪ್ರಪಂಚ), ೨ ; (ನಾಮರೂಪಮಾಯೆ), ೨೯ ; (ದೇಹಾದಿ ಸಂಘಾತಗಳು), ೧೪೭ ; (ವ್ಯವಹಾರ), ೧೩೮, ೧೩೯ ; **ತೈ.** ಅವಿದ್ಯೆಯಿಂದ ಮಾಡಲ್ಪಟ್ಟಿರುವ ತಪ್ಪುತಿಳಿವಳಿಕೆಯಿಂದ ಕಾಣುವ (ಅನ್ನಮಯಾದಿ ವಿಶೇಷಾತ್ಮರು), ೨೨೩ ; (ಅನ್ಯವಸ್ತು) ೨೧೫, (ಎಚ್ಚರ ಕನಸುಗಳು) ೨೧೬ ; (ತಾದಾತ್ಮ್ಯ), ೫೧ ; (ನಾನಾತ್ವ), ೧೯೦ ; (ಪಂಚಕೋಶಗಳು), ೧೨೨, ೧೨೭ ; (ಭಯಹೇತು), ೧೯೦;

(ವಿಷಯವಿಷಯಿವಿಭಾಗ), ೧೯೭ ; ಭ.ಗೀ. ಅವಿದ್ಯೆಯಿಂದ ಮಾಡಲ್ಪಟ್ಟ ಹುಸಿತೋರಿಕೆ (ಕರ್ತೃತ್ವಾದಿ), ೪೬, (ಭೋಗ), ೩೬೫, (ಉಪಾಧಿ), ೭೫೯, ೯೦೩, (ದ್ವೈತ), ೭೬೨ (ಸಂಶಯ), ೧೦೨೦, (ಫಲ), ೧೨೨೫ ; ಸಂಸಾರ ೧೧೩೯, (ಆತ್ಮರು), ೯೧೯, ೧೧೪೦ (ಕರ್ಮ), ೧೦೩೭ ; ನೈ. ಅವಿದ್ಯೆಯಿಂದಾಗಿರುವ, ಅಜ್ಞಾನದಿಂದ ತೋರುವ, ಬುದ್ಧ್ಯಾದಿದೇಹಾಂತವು ಆತ್ಮನೆಂಬುದು **ಅವಿದ್ಯಾಕೃತ**, ೩-೨೯. ಅವಿದ್ಯಾಕಲ್ಪಿತ (ಸಾಕ್ಷಿತ್ವ), ೨-೫೮, ಅವಿದ್ಯೋತ್ಥ (ಅಂತಃಕರಣ) ೩-೬೦, (ಸದ್ವಿತೀಯತ್ವ), ೩-೭೯, ಅವಿದ್ಯೋತ್ಥಾಪಿತ (ಕರ್ತೃತ್ವಾದಿ), ೩-೭೩, ಅವಿದ್ಯೋತ್ಸಂಗವರ್ತಿ (ಆತ್ಮಾನಾತ್ಮವಿಭಾಗ), ೨-೧೦೩, ಅವಿದ್ಯೋಪಾದಾನ (ಆತ್ಮಜ್ಞಾನ), ೧-೩೬, ಅವಿದ್ಯೋಪಾಶ್ರಯ (ಇತರೇತರಾಧ್ಯಾಸ), ೨-೧೪೯- ಇವುಗಳೆಲ್ಲವೂ ಪರ್ಯಾಯಗಳು.

**ಅವಿದ್ಯಾಕರ್ತೃ - ಬೃಹ-೧.** ಅವಿದ್ಯೆಗೆ ಆಶ್ರಯವಾಗಿರುವ, ತಪ್ಪಾಗಿ ತಿಳಿದುಕೊಂಡಿರುವ, ೧೫೩..

**ಅವಿದ್ಯಾಕಲ್ಪಿತ - ಬ್ರ.ಸೂ-೧.** ಅವಿದ್ಯಾ ಭ್ರಾಂತಿಯಿಂದ ತೋರುವ, (ಭೇದ, ಸಂಸಾರಿತ್ವ), ೪೭ ; (ಶಾರೀರ), ೧೦೪ ; (ಜೀವಭೇದ) ೨೬೯ ; (ಜೀವ ಪ್ರಾಜ್ಞಭೇದ), ೩೫೨ ; (ನಾಮರೂಪಗಳ ವ್ಯವಹಾರ), ೪೪೦, ೪೬೪, ೪೭೧, ೪೭೩; (ಬ್ರಹ್ಮದ ರೂಪಭೇದ), ೪೬೪, ೪೬೯ ; **ಬ್ರ.ಸೂ-೨.** ಅವಿದ್ಯೆಯಿಂದ ತೋರುವ, ಪರಮಾರ್ಥವಲ್ಲದ, ಅವಿದ್ಯಾಕಲ್ಪಿತ, ಅವಿದ್ಯಾಕೃತ, ಅವಿದ್ಯಾತ್ಮಕ, ಅವಿದ್ಯಾಧ್ಯಸ್ತ, ಅವಿದ್ಯಾಧ್ಯಾರೋಪಿತ, ಅವಿದ್ಯಾನಿಮಿತ್ತ, ಅವಿದ್ಯಾಪ್ರತ್ಯುಪಸ್ಥಾಪಿತ - ಇವೆಲ್ಲ ಪರ್ಯಾಯಗಳು. **ಮಿಥ್ಯಾಜ್ಞಾನನಿಮಿತ್ತವಾದ** ಎಂದೇ ಇದಕ್ಕೆ ಅರ್ಥ. ಮುಂದೆ ಹೇಳುವವೆಲ್ಲ **ಅವಿದ್ಯಾಕಲ್ಪಿತ,** ಭೇದ, ಸಂಸಾರಿತ್ವ, ೧-೪೭, ೪೫೬ ; ಶಾರೀರ ೧-೧೦೪ ; ಶಾರೀರನ ಉಪಭೋಗ, ೧-೧೬೨ ; ಸತ್ತ್ವ ಅಥವಾ ಅನ್ತಃಕರಣ, ೧-೧೭೫ ; ಮರ್ತ್ಯತ್ವ, ೧-೧೮೫ ; ಕಾರ್ಯಕರಣಗಳು, ೧-೧೯೫, ೪೪೦ ; ಭೂತೇನ್ದ್ರಿಯಮಾತ್ರೆಗಳು, ೧-೩೮೬ ; ನಾಮರೂಪಗಳು, ೧-೨೦೧, ೩೩೯, ೩೮೮, ೪೪೦, ೪೫೬, ೪೭೧, ೨೦೯, ೧೬೧, ೨೬೧ ; ಕಾರ್ಯಪ್ರಪಂಚ, ೧-೨೨೩, ೨-೨೯೧ ; ಜೀವರೂಪ, ೨-೧೬೧, ೧೬೨, ೨೬೮ ; ಜೀವಭೇದ, ೧-೨೬೯ ; ಜೀವಪ್ರಾಜ್ಞಭೇದ, ೧-೩೫೨ ; ಕಾರಣದಲ್ಲಿ ಕಾರ್ಯ, ೧-೪೨೩ ; ಉಪಾಧಿಗಳು, ೧-೪೪೦, ೨-೨೮೨, ವ್ಯಾಕೃತಾವ್ಯಾಕೃತಭೇದ, ೧-೪೬೪, ೪೬೯ ; ತಪ್ಯತಾಪಕಭಾವ, ೨-೨೦ ; ಕರ್ತೃತ್ವ, ೧೫೩, ೧೫೪ ; ದುಃಖ, ೨-೧೬೨ ; ಬುದ್ಧ್ಯುಪಾಧಿಸಂಬಂಧ, ೨-೧೪೧ ; ಆಭಾಸ, ೨-೧೬೮ ; ಬಂಧ, ೨-೫೪೯ ; **ತೈ.**

ತಪ್ಪುತಿಳಿವಳಿಕೆಯಿಂದ ಹುಟ್ಟುಗಟ್ಟಿರುವ (ದ್ವೈತ), ೧೫೦, (ಆತ್ಮರು), ೨೫೬, (ಸಂಸಾರ), ೨೧೭ ; **ಶಾಂ. ನಿ.** ಅವಿದ್ಯೆಯಿಂದ ತೋರುವ ; ಭ್ರಾಂತಿನಿಮಿತ್ತವಾದ ಹುಸಿ ತೋರಿಕೆ. ಅವಿದ್ಯಾಕಲ್ಪಿತ, ಅವಿದ್ಯಾಕೃತ, ಅವಿದ್ಯಾತ್ಮಕ, ಅವಿದ್ಯಾನಿಮಿತ್ತ, ಅವಿದ್ಯಾಪ್ರತ್ಯುಪಸ್ಥಾಪಿತ, ಅವಿದ್ಯಾಧ್ಯಾರೋಪಿತ, ಅವಿದ್ಯಾಧ್ಯಸ್ತ, ಅವಿದ್ಯಾಲಕ್ಷಣ-ಈ ಎಲ್ಲಾ ಮಾತುಗಳಿಗೂ ಒಂದೇ ಅರ್ಥ. ಸೂತ್ರಭಾಷ್ಯದಲ್ಲಿ ಈ ಮುಂದೆ ಹೇಳುವದೆಲ್ಲವೂ ಅವಿದ್ಯಾಕಲ್ಪಿತವೆಂದು ತಿಳಿಸಿದೆ ; ಉಪಾಸ್ಯೋಪಾಸಕಭಾವ ೧-೧-೧೨ ; ಆತ್ಮಬುದ್ಧಿಸಂಬಂಧ ೨-೩-೩೧ ; ಕರ್ತೃತ್ವಭೋಕ್ತೃತ್ವಗಳು ೨-೩-೪೦ ; ಸಂಸಾರಿತ್ವ, ಜೀವತ್ವ, ಶಾರೀರತ್ವ ೧-೧-೪, ೧-೧-೧೭, ೧-೩-೧೯, ೨-೩-೪೬, ೨-೩-೫೦ ; ಕಾರ್ಯಕರಣಗಳು ೧-೧-೨೦ ; ತಪ್ಯತಾಪಕಭಾವ ೨-೨-೧೦; ನಾಮರೂಪಬೀಜ, ನಾಮರೂಪಮಾಯಾ ೧-೪-೩, ೨-೧-೧೪, ೨-೨-೨, ೪-೩-೧೪ ; ಜೀವಪ್ರಾಜ್ಞಭೇದ ೧-೪-೬ ; ನಾಮರೂಪರಚಿತ ದೇಹಾದ್ಯುಪಾಧಿಗಳು ೧-೪-೨೨, ೨-೩-೪೬ ; ಪ್ರಾಣಾದಿಕಲೆಗಳು ೪-೨-೧೬ ; ಬ್ರಹ್ಮದ ಉಪಾಧಿಗಳು ೨-೩-೧೫ ; ಬ್ರಹ್ಮದ ಕಾರ್ಯವಾದ ಪ್ರಪಂಚವೂ ಆದರ ಧರ್ಮಗಳೂ ೨-೧-೯ ; ಭೂತೇಂದ್ರಿಯಗಳು ೧-೪-೨೨ ; ವ್ಯಾಕೃತಾವ್ಯಾಕೃತ ನಾಮರೂಪಗಳು ೨-೧-೨೭.

**ಅವಿದ್ಯಾಕಲ್ಪಿತ, ಅವಿದ್ಯಾಕೃತ, ಅವಿದ್ಯಾಧ್ಯಾರೋಪಿತ, ಅವಿದ್ಯಾಪ್ರತ್ಯುಪಸ್ಥಾಪಿತ** - **ಬೃಹ-೧.** ಅವಿದ್ಯೆಯಿಂದ ಹುಟ್ಟುಗಟ್ಟಿರುವ, ಅವಿದ್ಯೆಯಿಂದಾಗಿರುವ, ಅವಿದ್ಯೆಯಿಂದ ಮೇಲೆ ಹಾಕಿರುವ, ಅವಿದ್ಯೆಯು ತಂದೊಡ್ಡಿರುವ, ಈ ಮುಂದೆ ಹೇಳಲಿರುವ ಪದಾರ್ಥಗಳೆಲ್ಲ ಅವಿದ್ಯೆಯಿಂದಾಗಿರುವವೆಂದು ಈ ಭಾಷ್ಯದಲ್ಲಿದೆ ; **ಅವಿದ್ಯಾಕೃತ** - ಸಂಸಾರ, ೫ ; ಕಾರ್ಯಕರಣಸಂಘಾತ, ೯೭ ; ಅಬ್ರಹ್ಮತ್ವಾಸರ್ವತ್ವಗಳು, ೧೫೧ ; ಭೇದಾಭೇದ, ೩೭೨ ; ವಿಶೇಷಾಭಿಮಾನ, ೩೭೪ ; **ಅವಿದ್ಯಾಧ್ಯಾರೋಪಿತ** - ದುಃಖಿತ್ವ, ೧೨೬ ; ಅಬ್ರಹ್ಮತ್ವಾಸರ್ವತ್ವಗಳು, ೧೫೧ ; ಕಾರ್ಯಕರಣದೇವತಾತ್ಮತ್ವ, ೨೯೩ ; ಬ್ರಹ್ಮದ ರೂಪಗಳು, ೩೩೬ ; **ಅವಿದ್ಯಾಪ್ರತ್ಯುಪಸ್ಥಾಪಿತ** - ವಸ್ತ್ವಂತರ, ೧೦೨ ; ಜೀವರೂಪಖಿಲ್ಯಭಾವ, ೩೭೫ ; **ಬೃಹ-೨** ಅವಿದ್ಯೆಯಿಂದ ತೋರುವ (ಅವಿದ್ಯಾಕೃತ, ಅವಿದ್ಯಾಧ್ಯಾರೋಪಿತ, ಅವಿದ್ಯಾಪ್ರತ್ಯುಪಸ್ಥಾಪಿತ, ಅವಿದ್ಯಾವಿಷಯ, ಅವಿದ್ಯಾಫಲಮ್ - ಇವಕ್ಕೆಲ್ಲ ಇದೇ ಅರ್ಥ), ೫೮, ೬೦.

**ಅವಿದ್ಯಾಕಲ್ಪಿತ, ಅವಿದ್ಯಾಪರಿಕಲ್ಪಿತ** - **ಭ.ಗೀ.** ತಪ್ಪುತಿಳಿವಳಿಕೆಯಿಂದ ಹುಟ್ಟುಗಟ್ಟಿದ (ಸಂಸಾರ) ೭೭೦, (ಆತ್ಮನೆಂದು ತೋರುವ ದೇಹ) ೮೧೬,

(ಸಂಸಾರ) ೧೦೬, (ಗುಣಗಳು) ೧೯೧, (ಕರ್ಮಹೇತು) ೧೦೩.೨, ೧೦೩.೪, (ನಾಮರೂಪ) ೧೯೭.

**ಅವಿದ್ಯಾಕೃತಕಾಮಕರ್ಮಬನ್ಧನಮ್ - ಕಠ.** ಅವಿದ್ಯೆಯಿಂದ ಆಗಿರುವ ಕಾಮಕರ್ಮಗಳೆಂಬ ಬಂಧ, ೧೩.೪, ೧೮೧.

**ಅವಿದ್ಯಾಕಾಮಕರ್ಮಾಣಿ ಅವಿದ್ಯಾದ್ಯನರ್ಥಃ - ಬ್ರ.ಸೂ-೧.** ಅವಿದ್ಯೆ, ಅದರಿಂದಾಗುವ ಕಾಮ, ಅದರಿಂದಾಗುವ ಕರ್ಮ - ಎಂಬ ಸಂಸಾರಾನರ್ಥ, ೧೮,

**ಅವಿದ್ಯಾಕಾಮಕರ್ಮಲಕ್ಷಣಮ್ - ಕೇನ.** ಜಗತ್ತಿನ ಮೂಲಸ್ಥಿತಿ ಅವಿದ್ಯೆಯಿಂದ ಕಲ್ಪಿತವಾದ ವ್ಯಾಕೃತನಾಮರೂಪಗಳ ಬೀಜ, ೮೯.

**ಅವಿದ್ಯಾಕಾಮಕರ್ಮಾಣಿ - ಮುಂ.** ಬ್ರಹ್ಮವನ್ನು ತಪ್ಪಾಗಿ ತಿಳಿಯುವದು, ವಿಷಯಗಳ ಬಯಕೆ, ಅವುಗಳನ್ನು ಪಡೆದುಕೊಳ್ಳುವದಕ್ಕಾಗಿ ಮಾಡುವ ಕರ್ಮ, ೨೩, ३.೭, ೬೫. **ಪ್ರಶ್ನ.** ತತ್ತ್ವವನ್ನು ತಪ್ಪಾಗಿ ತಿಳಿದು ಕೊಂಡಿರುವದು, ವಿಷಯದ ಆಸೆ, ಅದಕ್ಕಾಗಿ ಕರ್ಮವನ್ನು ಮಾಡುವದು ಇವು, ೬೬, ೬೯ ; **ಮಾಂ.** ಆತ್ಮನ ವಿಷಯದ ತಪ್ಪುತಿಳಿವಳಿಕೆ, ಅನಾತ್ಮದ ಇಚ್ಛೆ ಮತ್ತು ಕರ್ಮ- ಇವು, ೧೪ ; **ತೈ.** ಬ್ರಹ್ಮದಲ್ಲಿ ವಿಷಯಗಳನ್ನು ಕಾಣುವ ತಪ್ಪುತಿಳಿವು, ಅವುಗಳ ಬಯಕೆ, ಮತ್ತು ಅವುಗಳನ್ನು ಪಡೆಯುವದಕ್ಕೆ ಅಥವಾ ತೊಲಗಿಸುವದಕ್ಕೆ ಮಾಡುವ ಕರ್ಮ, ೧೯೭ ; **ಐತ.** ಒಂದಕ್ಕೊಂದಕ್ಕೆ ಕಾರಣವಾಗಿರುವ ತಪ್ಪುತಿಳಿವಳಿಕೆ, ಬಯಕೆ, ಕೆಲಸ - ಇವು, ೧೩, ३೬, ೭೪ ; **ಛಾಂ.** ಸಂಸಾರಕ್ಕೆ ಕಾರಣವಾದ ಅವಿದ್ಯಾಕಾಮಕರ್ಮಗಳು, ೪೯೫, ೪೯೭, ೫३೪, ೬೪೧ ; **ಬೃಹ-೨.** ತಪ್ಪುತಿಳಿವಳಿಕೆ, ಅದರಿಂದಾಗುವ ಕಾಮ, ಅದರಿಂದಾಗುವ ಕರ್ಮ - ಇವು, ೨೧೬, ೨೪೨ ; **ಭ.ಗೀ.** ಸಂಸಾರಕಾರಣಗಳು, ೮೧೯, ೮೨೭, ೮೫೦, ೧೧३೬, ೧೧३೭ ; **ನೈ.** ಅಜ್ಞಾನ, ಅದರಿಂದಾಗುವ ಕಾಮ, ಅದರಿಂದಾಗುವ ಕರ್ಮ. ಇವೇ ಸಂಸಾರಕ್ಕೆ ಕಾರಣ, ೧-೪೨.

**ಅವಿದ್ಯಾಕಾಮೌ, ಅವಿದ್ಯಾಕಾಮಕರ್ಮಾಣಿ - ಬೃಹ-೧.** ತಃ ಅದರಿಂದಾಗಿರುವ ಕಾಮ, ಅದರಿಂದಾಗಿರುವ ಕರ್ಮ - ಇವು, ೧೮೮.

**ಅವಿದ್ಯಾ ಕಾರ್ಯ - ನೈ.** ಅವಿದ್ಯಾಕೃತವಾದ (ಪ್ರವೃತ್ತಿನಿವೃತ್ತಿಗಳು), ४-೬೯.

**ಅವಿದ್ಯಾಕಾರ್ಯಮ್ - ತೈ.** ತಪ್ಪುತಿಳಿವಳಿಕೆಯ ಫಲವಾಗಿ ತೋರುವದು, ೨೨३ ; **ಭ.ಗೀ.** ತಪ್ಪುತಿಳಿವಳಿಕೆಯ ಫಲ, (ವ್ಯವಹಾರ) ೧३.೨; (ಕರ್ಮಫಲ) ೭४೫ ; **ಈಶ.** ಅವಿದ್ಯೆಯಿಂದಾಗಿರುವ ಶೋಕ, ಮೋಹ ಮುಂತಾದದ್ದು, ೧೭.

**ಅವಿದ್ಯಾಗೃಹೀತ** - ಬ್ರ.ಸೂ-೧. ಅವಿದ್ಯೆಯಿಂದ ಆತ್ಮನೆಂದು ತಿಳಿದ (ಮಿಥ್ಯಾತ್ಮ), ೪೯.

**ಅವಿದ್ಯಾಗ್ರನ್ಥಿಃ** - **ಮುಂ.** ಬಲವಾಗಿರುವ ಅವಿದ್ಯಾವಾಸನೆ, ೭೦ ; **ನೈ.** ಗಂಟುಹಾಕಿಕೊಂಡಿರುವ ಅವಿದ್ಯೆ. ಇದನ್ನು ಸದ್ಗುರುವೇ ನಾಶಮಾಡಬಲ್ಲನು, ೧-೨.

**ಅವಿದ್ಯಾಗ್ರಂಥಯಃ** - **ಕಠ.** ಅವಿದ್ಯೆಯಿಂದ ಗಂಟುಹಾಕಿಕೊಂಡಿರುವ ಕಲ್ಪನೆಗಳು, ೧೮೨, ೧೮೩.

**ಅವಿದ್ಯಾತ್ಮಕ** - ಬ್ರ.ಸೂ-೧. ಅವಿದ್ಯಾಸ್ವರೂಪವಾದ. ಅವಿದ್ಯೆಯಿಂದ ತೋರುವ, (ನಾಮರೂಪಬೀಜಶಕ್ತಿ), ೩೩೯ ; (ನಾಮರೂಪಗಳೆಂಬ ಉಪಾಧಿ), ೪೪೦ ; **ಭ.ಗೀ.** ಅವಿದ್ಯಾರೂಪವಾದ, ತಪ್ಪುತಿಳಿವಳಿಕೆಯಿಂದ ತೋರುವ (ಗುಣಗಳು) ೮೫೩, (ದೇಹಾಭಿಮಾನ) ೧೧೩೯.

**ಅವಿದ್ಯಾದಿಃ** - ಬ್ರ.ಸೂ-೧. ಅವಿದ್ಯೆ, ಕಾಮ, ಕರ್ಮ - ಎಂಬಿವುಗಳು ಅಥವಾ ಅವಿದ್ಯಾ, ರಾಗ, ದ್ವೇಷ, ಭಯ, ಮೋಹ - ಮುಂತಾದ ದೋಷಗಳು, ೧೮, ೪೨, ೭೦, ೨೨೫ ; **ಕಠ.** ಅವಿದ್ಯೆ, ಕಾಮ, ಕರ್ಮ - ಇವು ೨, ೫.

**ಅವಿದ್ಯಾದೃಷ್ಟಯಃ** **ಮುಂ.** ತಪ್ಪುತಿಳಿವಳಿಕೆಯ ಬುದ್ಧಿಯಿಂದ ನೋಡುವವರು, ೪೯.

**ಅವಿದ್ಯಾದೋಷಾಃ - ಪ್ರಶ್ನ.** ಅವಿದ್ಯೆ, ಕಾಮ, ಕರ್ಮ -ಇವು, ೧೧೩.

**ಅವಿದ್ಯಾಹೃದಯಗ್ರಂಥಯಃ** - **ಕಠ.** ಅವಿದ್ಯೆಯಿಂದ ಗಂಟುಹಾಕಿ ಕೊಂಡಿರುವಂತೆ ಇರುವ, ಅವಿದ್ಯೆ, ಕಾಮ - ಮುಂತಾದವುಗಳು, ೧೭೦.

**ಅವಿದ್ಯಾಮಾಯಾಚ್ಛನ್ನಃ** - **ಕಠ.** ಅವಿದ್ಯೆಯಿಂದಾದ ಹುಸಿತೋರಿಕೆಯಿಂದ ಮರೆಯಾಗಿರುವ, ೧೦೧.

**ಅವಿದ್ಯಾಸಞ್ಛನ್ನ** - **ಮುಂ.** ಅವಿದ್ಯೆಯಿಂದ ಮರೆಯಾಗಿರುವ ಆತ್ಮನ ಸ್ವರೂಪ, ೧೧೪.

**ಅವಿದ್ಯಾಪ್ರತ್ಯುಪಸ್ಥಾಪಿತ** - ಬ್ರ.ಸೂ-೧. ಅವಿದ್ಯೆಯು ತಂದೊಡ್ಡಿರುವ, ಭ್ರಾಂತಿ ಸಿದ್ಧವಾದ, (ಕಾರ್ಯಕರಣಗಳು), ೧೯೫ ; (ಜೀವರೂಪ) ೨೬೮ ; (ನಾಮ ರೂಪಗಳು) ೩೮೮, ೪೪೦, ೪೫೬, (ಸತ್ತ್ವ) ೧೭೫ ; **ಮಾಂ.** ಅವಿದ್ಯೆಯು ಮುಂದೊಡ್ಡಿದ (ಜೀವ) ೧೭೪.

**ಅವಿದ್ಯಾಮಯ - ಮಾಂ.** ಅವಿದ್ಯಾರೂಪವಾದ (ಇಂದ್ರಿಯಪ್ರಜ್ಞೆ), ೧೭೨.

**ಅವಿದ್ಯಾಲಕ್ಷಣ** - ಮಾಂ. ಅವಿದ್ಯೆಯಿಂದ ತೋರುವ ನಿದ್ರೆ, ಅಜ್ಞಾನ, ೧೯೩; ಭ.ಗೀ. ತಪ್ಪುತಿಳಿವಳಿಕೆಯಿಂದ ತೋರುವ ಪ್ರಕೃತಿ ಅಥವಾ ಮಾಯೆ, ೩.೫೨, ೫೫೫, [illegible]

**ಅವಿದ್ಯಾಲಕ್ಷಣಮ್** - ಕೇನ. ಅವಿದ್ಯಾಕಲ್ಪಿತವಾದ ಅವ್ಯಾಕೃತ, ೨೭.

**ಅವಿದ್ಯಾವಿಜೃಂಭಿತಮ್, ಅವಿದ್ಯಾವಿಷಯಃ** - ಮಾಂ. ಅವಿದ್ಯೆಯಿಂದ ಹರಡಿಕೊಂಡಿರುವ (ದ್ವೈತ) ೨೦೫ ; ಅವಿದ್ಯೆಗೆ ಗೋಚರವಾದ (ವ್ಯವಹಾರ) ೧೧೧.

**ಅವಿದ್ಯಾನಿವೃತ್ತಿಃ, ಅವಿದ್ಯೋಚ್ಛೇದಃ** - ತೈ. ಬ್ರಹ್ಮದ ವಿಷಯದ ತಪ್ಪು ತಿಳಿವಳಿಕೆಯು ತೊಲಗುವದು, ೨, ೧೧, ೯೧ ; ನೈ. ವಿದ್ಯೆಯಿಂದಾಗುವ ಅವಿದ್ಯೆಯ ನಾಶ, ೧-೩.೬; ವಾಕ್ಯಾರ್ಥಜ್ಞಾನದಿಂದಲೇ ಅವಿದ್ಯೋಚ್ಛೇದವಾಗುತ್ತದೆ, ೧-೫೨.

**ಅವಿದ್ಯಾನಿವೃತ್ತಿ ಫಲಮ್**- ಬ್ರ.ಸೂ-೧. ಅವಿದ್ಯೆಯನ್ನು ಬಾಧಿಸುವದೆಂಬ ವಿದ್ಯಾ.ಫಲ, ೪೫.

**ಅವಿದ್ಯಾವಸ್ಥಾ** - ತೈ. ಆತ್ಮನಿಗಿಂತ ಬೇರೆಯಾದ ಅನಾತ್ಮವನ್ನು ಕಾಣುವ ಸ್ಥಿತಿ

**ಅವಿದ್ಯಾವಸ್ಥಾ, ಅವಿದ್ಯಾವಿಷಯಃ** - ಬ್ರ.ಸೂ-೨. ಅವಿದ್ಯೆಯಿರುವ ಸ್ಥಿತಿ. ಈ ಅವಸ್ಥೆಯಲ್ಲಿಯೇ- ಉಪಾಸ್ಯೋಪಾಸಕವ್ಯವಹಾರವು, ೧-೯೧ ; ಕರ್ತೃತ್ವಾದಿ ವ್ಯವಹಾರ, ೧-೧೭೫, ೨-೧೫೧, ೧೫೪, ೧೫೫ ; ಎಲ್ಲಾ ವ್ಯವಹಾರ, ೧-೧೯೫ ; ವಿಶೇಷವಿಜ್ಞಾನ, ೧-೩೮೭ ; ಬ್ರ.ಸೂ-೧. ಅವಿದ್ಯೆಯಿರುವ ಸ್ಥಿತಿ, ೯೧ ; ಅವಿದ್ಯಾದೃಷ್ಟಿಯಲ್ಲಿ ಮಾತ್ರ ತೋರುವದು, ೧೭೫, ೧೯೫, ೩೮೭ ; ಬೃಹ-೧. ಅವಿದ್ಯೆಗೆ ಸೇರಿದ (ಸಂಸಾರ), ೨೫೯, (ಭೇದದೃಷ್ಟಿ), ೨೬೦.

**ಅವಿದ್ಯಾದಿದೋಷಾಃ** - ಬೃಹ-೧. ಅವಿದ್ಯೆ, ರಾಗ, ದ್ವೇಷ, ಭಯ-ಮುಂತಾದ ದೋಷಗಳು, ೫೩, ೫೫, ೧೭೨.

**ಅವಿದ್ಯಾನಿವೃತ್ತಿಃ, ಅವಿದ್ಯಾಪಗಮಃ** - ಬೃಹ-೧. ಅವಿದ್ಯೆಯು ತೊಲಗುವದು, ೧೩೫, ೧೭೦.

**ಅವಿದ್ಯಾಮಾತ್ರವ್ಯವಧಾನಮ್** - ಬೃಹ-೧. ಅವಿದ್ಯೆಯು ಮಾತ್ರ ಮರೆಯಾಗಿರುವ (ಜ್ಞಾನ), ೧೭೦.

**ಅವಿದ್ಯಾಕ್ಷೇತ್ರ** - ಬೃಹ-೧. ಅವಿದ್ಯೆಯೆಂಬ ಹೊಲದಲ್ಲಿ ಹುಟ್ಟಿದ (ಸಂಸಾರ), ೧೧೭.

**ಅವಿದ್ಯಾವದವಸ್ಥಾ ಅವಿದ್ಯಾವಸ್ಥಾ** ಬೃಹ-೧. ಕ್ರಿಯಾಕಾರಕ ಫಲಭೇದವಿರುವ ತಪ್ಪು ತಿಳಿವಳಿಕೆಯ ಅವಸ್ಥೆ, ೩.೭೬, ೩.೭೪.

**ಅವಿದ್ವಾನ್ - ಬ್ರ.ಸೂ-೨.** ಅರಿಯದವನು. ಉಪಾಸಕನಲ್ಲದವನು, ೨-೫೩೯, ೫೪೭, ೫೫೯ ; ಬ್ರಹ್ಮಜ್ಞಾನಿಯಲ್ಲದವನು, ೨-೫೫೫ ; **ತೈ.** ಆತ್ಮತತ್ತ್ವವನ್ನು ತಿಳಿಯದವನು ೧೫೫, ೧೫೬ ; **ಛಾಂ.** ಉಪಾಸನೆಯಿಲ್ಲದವನು, ೧೬, ೧೭ ; ಅರಿಯದೆ ಇರುವವನು, ೫೩೩, ೫೩೪, ೬೮೯ .

**ಅವಿದ್ವಾನ್, ಅವಿದ್ಯಾವಾನ್-ಬೃಹ-೧.** ಆತ್ಮಸ್ವರೂಪವನ್ನು ಸರಿಯಾಗಿ ತಿಳಿದುಕೊಳ್ಳದೆ ಇರುವವನು, ತಪ್ಪಾಗಿ ತಿಳಿದುಕೊಂಡಿರುವವನು, ೧೯೨, ೧೯೩, ೧೯೪, ೧೯೭ ; **ಭ.ಗೀ.** ಆತ್ಮತತ್ವವನ್ನು ಸರಿಯಾಗಿ ತಿಳಿದುಕೊಳ್ಳದವನು, ೪೪, ೧೯೪, ೧೯೬, ೧೯೭, ೭೫೯, ೭೬೫, ೭೬೮.

**ಅವಿದ್ವಾಂಸಃ - ಮುಂ.** ಅಜ್ಞಾನಿಗಳು, ೧೦೩.

**ಅವಿದ್ಯಾಧ್ಯಾರೋಪಿತ - ಬ್ರ.ಸೂ-೧.** ಅವಿದ್ಯೆಯಿಂದ ಹುಟ್ಟುಗಟ್ಟದ, (ಕಾರ್ಯತದ್ಧರ್ಮಗಳು), ೪೨೩ ;

**ಅವಿದ್ಯಾಧ್ಯಸ್ತ, ಅವಿದ್ಯಾಧ್ಯಾರೋಪಿತ, ಅವಿದ್ಯಾಪರಿಕಲ್ಪಿತ - ಮಾಂ.** ಭ್ರಾಂತಿಯಿಂದ ತೋರುವ (ದ್ವೈತ) ೧೧೫ ; (ಸುಖಿತ್ವಾದಿ) ೧೧೫ ; (ಉಪಾಧಿ) ೧೩೮ ; (ನಮಾಧಿಸುಖ) ೨೦೭ ; (ಧರ್ಮಾಧರ್ಮಗಳು) ೩೨೮ ; (ದ್ವೈತಮಾರ್ಗ) ೩೫೭ ; (ರಜ್ಜುಸರ್ಪ) ೧೭೪.

**ಅವಿದ್ಯಾಧ್ಯಾರೋಪಣಮ್ - ಕಠ.** ತಪ್ಪುತಿಳಿವಳಿಕೆಯನ್ನು ಆತ್ಮನಲ್ಲಿ ಹುಟ್ಟುಗಟ್ಟುವದು, ೧೭೫.

**ಅವಿದ್ಯಾಧ್ಯಾರೋಪಿತಮ್ - ಪ್ರಶ್ನ.** ತಪ್ಪುತಿಳಿವಳಿಕೆಯಿಂದ ಹುಟ್ಟುಗಟ್ಟಿರುವ, (ಕರ್ತೃತ್ವಭೋಕ್ತೃತ್ವ), ೧೦೪.

**ಅವಿದ್ಯಾಧ್ಯಾರೋಪಿತ, ಅವಿದ್ಯಾಧ್ಯಸ್ತ - ಭ.ಗೀ.** ತಪ್ಪುತಿಳಿವಳಿಕೆಯಿಂದ ಹುಟ್ಟುಗಟ್ಟುವ (ಸ್ಥಾಣುಪುರುಷ) ೭೬೦, (ಕ್ರಿಯಾಕಾರಕಫಲಗಳು) ೭೭೩, ೧೦೨೫ (ಗುಣಗಳ ಧರ್ಮ) ೧೦೯೧, (ಪದಾರ್ಥಗಳು) ೧೦೯೭.

**ಅವಿದ್ಯಾನಿಮಿತ್ತಕಃ, ಅವಿದ್ಯಾರೂಪಃ - ಭ.ಗೀ.** ಅವಿದ್ಯೆಯ ಕಾರಣದಿಂದ ತೋರುವ (ಕ್ಷೇತ್ರ ಕ್ಷೇತ್ರಜ್ಞರ ಸಂಯೋಗ) ೮೧೧, ೮೨೭.

**ಅವಿದ್ಯಾಭೂಮಿಃ, ಅವಿದ್ಯಾವಸ್ಥಾ** - ಭ.ಗೀ. ಅವಿದ್ಯೆಯಿಂದ ಆಗಿರುವ ವ್ಯವಹಾರದ ಅವಸ್ಥೆ೧೩೪, ೨೬೧.

**ಅವಿವೇಕಃ, ಅವಿವೇಕವಿಜ್ಞಾನಮ್** - ಭ.ಗೀ. ಬುದ್ಧ್ಯಾದಿಗಳನ್ನೂ ಆತ್ಮನನ್ನೂ ವಿಂಗಡಿಸಿ ಅರಿತುಕೊಳ್ಳದೆ ಇರುವದು, ೪೩, ೧೦೩, ೩೧೯, ೭೪೧ ; ಕಾರ್ಯಾ-ಕಾರ್ಯಗಳನ್ನು ಅರಿಯದಿರುವದು, ೧೨೧, ೯೩೧.

**ಅವಿದ್ವತ್ಪಾರಿವ್ರಾಜ್ಯಮ್** - ಬೃಹ-೨. ಆತ್ಮಜ್ಞರಲ್ಲದವರು ತೆಗೆದುಕೊಳ್ಳುವ ತ್ರಿದಂಡಿಸಂನ್ಯಾಸರೂಪವಾದ ಆಶ್ರಮ, ೬೧.

**ಅವಿದ್ಯಾಸಂಸಾರಕರಣಮ್, ಅವಿದ್ಯಾದಿಸಂಸಾರಬನ್ಧಃ** - ಮುಂ. ಅವಿದ್ಯೆ, ಕಾಮ, ಕರ್ಮ-ಎಂಬ ಸಂಸಾರದ ಬಂಧಕ್ಕೆ ಕಾರಣಗಳು, ೬, ೧೧೯.

**ಅಶರೀರಃ** - ಛಾಂ. ಮಿಥ್ಯಾದೇಹವೇ ತಾನೆಂಬ ಅಭಿಮಾನವು ಹೋಗಿರುವವ, ೬೬೮, ೬೬೯, ೬೭೦, ೬೭೬, ೬೭೭.

**ಅಶರೀರತಾ, ಅಶರೀರತ್ವಮ್** - ಬ್ರ.ಸೂ-೧. ಪರಮಾರ್ಥವಾಗಿ ಶರೀರವಿಲ್ಲದವನಾಗಿರುವ ಮುಕ್ತಿ, ೪೨, ೫೮, ೩೨೧ ; ಬ್ರ.ಸೂ-೨. ಶರೀರವಿಲ್ಲದಿರುವಿಕೆ. ಉಪಾಸಕಮುಕ್ತರಿಗೆ ಸಶರೀರತ್ವವೂ ಅಶರೀರತ್ವವೂ ಸಂಕಲ್ಪಾನುಸಾರ, ೨-೬೦೨ ; ಆತ್ಮನಿಗೆ ಅಶರೀರತ್ವವು ಅನುಷ್ಠೇಯಫಲವಲ್ಲ, ಸ್ವಾಭಾವಿಕ, ೧-೪೨ ; ಬದುಕಿರುವಾಗಲೇ ಅಶರೀರತ್ವವಿರುತ್ತದೆ, ೧-೫೮, ೬೦ ; ಬ್ರಹ್ಮಭಾವವಿದ್ದ ಹೊರತು ಅಶರೀರತ್ವವಿಲ್ಲ, ೧-೩೨೧.

**ಅಶಾಂತದರ್ಪಾಃ** - ಭ.ಗೀ. ಧರ್ಮವನ್ನು ಮೀರುವ ಸೊಕ್ಕನ್ನು ಕಳೆದುಕೊಳ್ಳದವರು, ೯೦೯.

**ಅಶುದ್ಧಿಕಾರಣಮ್** - ಛಾಂ. ಗೃಹಸ್ಥರಿಗೆ ಚಿತ್ತಶುದ್ಧಿಗೆ ಕಾರಣವಾಗಿರುವ ಹಿಂಸಾನೃತಾದಿದೋಷಗಳು, ೪೦೪.

**ಅಶ್ರುತಕಲ್ಪನಾ** - ಭ.ಗೀ. ಶಾಸ್ತ್ರದಲ್ಲಿ ಹೇಳದೆ ಇರುವದನ್ನು ಕಲ್ಪಿಸುವದು, ೨೬೮, ೭೬೯.

**ಅಶ್ಮಾನಿ** - ಬ್ರ.ಸೂ-೧. ಬಗೆಬಗೆಯ ಬೆಲೆಯುಳ್ಳ ಕಲ್ಲುಗಳು (ಬ್ರಹ್ಮಕ್ಕೆ ವಿಚಿತ್ರ ಶಕ್ತಿಯಿರಬೇಕೆಂಬುದಕ್ಕೆ ದೃಷ್ಟಾಂತ), ೪೫೭.

**ಅಶೇಷಕರ್ಮಸಂನ್ಯಾಸಃ, ಅಶೇಷಕರ್ಮಪರಿತ್ಯಾಗಃ** - ಭ.ಗೀ. ಎಲ್ಲಾ ಕರ್ಮಗಳನ್ನೂ ಬಿಡುವದು, ೧೦೨೨, ೧೦೨೩, ೧೦೨೫, ೧೦೩೭.

**ಅಶೇಷಪುರುಷಾರ್ಥಃ** - ನೈ. ಸ್ವಲ್ಪವೂ ಉಳಿಯದ ಪರಮಪುರುಷಾರ್ಥ, ಮೋಕ್ಷ. ಅಜ್ಞಾನವು ಹೋದರೆ ಅನರ್ಥನಿವೃತ್ತಿಯೂ ಅರ್ಥಪ್ರಾಪ್ತಿಯೂ ಪೂರ್ಣವಾಗಿ ಪುರುಷಾರ್ಥವೆಲ್ಲ ದೊರೆಯುವದು. (ಅವ).

**ಅಶೇಷವೇದಾನ್ತಸಾರಸಂಗ್ರಹಪ್ರಕರಣಮ್** - ನೈ. ಉಪನಿಷತ್ತುಗಳೆಲ್ಲ ಸಾರವಾಗಿರುವ ಆತ್ಮಜ್ಞಾನವನ್ನು ಸಂಗ್ರಹಿಸಿರುವ ಈ ಪ್ರಕರಣ. (ಅವ).

**ಅಷ್ಟಕಾದಿಸ್ಮೃತಿಃ** - ಬ್ರ.ಸೂ-೧. ಅಷ್ಟಮಿಯಲ್ಲಿ ಮಾಡುವ ಯಾಗವೇ ಮುಂತಾದವುಗಳ ಸ್ಮೃತಿ. ಮೂಲಶ್ರುತಿಯಿಲ್ಲದಿದ್ದರೂ ಇದು ಪ್ರಮಾಣವೆಂದು ಜೈ. ೧-೩-೧೦ರಲ್ಲಿ ಹೇಳಿದೆ. (ಯೋಗಸ್ಮೃತಿಗೆ ದೃಷ್ಟಾಂತ), ೪೦೬.

**ಅಸತ್** - ಬ್ರ.ಸೂ-೧. ಇಲ್ಲದಂತಿರುವ (ಅವ್ಯಾಕೃತನಾಮರೂಪ) ೪೪೫, (ನಿರಾತ್ಮಕವಾದ ಶೂನ್ಯ), ೩೬೮ ; ಬ್ರ.ಸೂ-೨. ಇಲ್ಲದಿರುವದು, ಅಭಾವ. ಮೊದಲು ಇಲ್ಲದಿದ್ದ ಕಾರ್ಯವು ಹುಟ್ಟಿದ ಬಳಿಕ ಕಾರಣಸತ್ತಾಸಂಬಂಧವನ್ನು ಪಡೆಯುವದೆಂದು ಹೇಳುವ ವೈಶೇಷಿಕರ ಅಸತ್ಕಾರ್ಯವಾದದಲ್ಲಿ ಉತ್ಪತ್ತಿಯು ಹೊಂದುವದಿಲ್ಲ, ೧-೪೪೬ ರಿಂದ ೪೪೯ ; ಕಾರ್ಯವು ಮೊದಲು ಅಸತ್ತಾಗಿತ್ತು ಎಂದರೆ ಅವ್ಯಾಕೃತವಾಗಿ ಕೇವಲಾತ್ಮರೂಪದಿಂದ ಅಸತ್ತಿನಂತೆ ಇತ್ತು, ಎಂದರ್ಥ, ೧-೩೬೮, ೪೪೫ ; ಅಭಾವದಿಂದ ಭಾವ ಹುಟ್ಟುವದೆಂಬ ಬೌದ್ಧರ ಅಸತ್ಕಾರ್ಯವಾದವೂ ಯುಕ್ತಿವಿರುದ್ಧ, ೨-೫೩, ೫೫, ೫೬ ; ಅಸತ್ತು ನಿರಾತ್ಮಕವಾದ್ದರಿಂದ ಅದರಿಂದ ಸತ್ತು ಹುಟ್ಟಲಾರದು, ೨-೧೦೬ ; ಸಾಂಖ್ಯರಿಗೆ ಅಸತ್ಕಾರ್ಯವಾದಪ್ರಸಂಗ, ೧-೪೨೬ ; ತೈ. ಇಲ್ಲದಿರುವದು ೧೫೧ ; ನಾಮರೂಪಗಳ ವಿಂಗಡವಿಲ್ಲದ ಅವ್ಯಾಕೃತರೂಪವಾದ ಬ್ರಹ್ಮ ೧೮೩ ; ಛಾಂ. ಅವ್ಯಾಕೃತ, ೨೮೩ ; ಮಿಥ್ಯಾ, ೪೫೬ ; ಸತ್ತಿನ ಅಭಾವ, ೪೫೧, ೪೫೨, ೪೫೪ ; ನೈ. (೧) ಅಭಾವರೂಪ, ಶೂನ್ಯರೂಪ. ಆತ್ಮನಿಗೆ ಜ್ಞಾನವುಂಟಾದಾಗ ವಿಕೃತಿಯಾದರೆ ಅನಿತ್ಯನು, ಆಗದಿದ್ದರೆ ಆಕಾಶದಂತೆ ಅಸದ್ರೂಪನಾಗಿರುವನೆಂಬ ಆಕ್ಷೇಪವು ಸರಿಯಲ್ಲ, ಏಕೆಂದರೆ ಭ್ರಾಂತಿಯಿಂದ ಭೋಕ್ತೃತ್ವವಾಗಬಹುದು, ೨-೬೦, ೬೩; (೨) **ಮಿಥ್ಯಾಜ್ಞಾನವಾದಾಗ** ತನ್ನ ದುಃಖವೇ ಅಸತ್ತಾಗಿರುತ್ತದೆ; ಮತ್ತೊಬ್ಬರ ದುಃಖವು ಹೇಗೆ ಬಂದೀತು ? ೨-೯೦.

**ಅಸತ್, ಅಸತ್ಯಮ್** - **ಮಾಂ.** ಇಲ್ಲದ, ಹುಸಿತೋರಿಕೆಯಾದ, ೭೬, ೮೧, ೮೫, ೮೬, ೮೭, ೮೮, ೧೧೦, ೧೧೪, ೧೧೭, ೧೨೬, ೧೭೭, ೧೭೯, ೧೮೪, ೧೮೭, ೨೭೧, ೨೭೬ ; **ಶಾಂ. ನಿ.** (೧) ಯಾವದರ ವಿಷಯವಾದ ಬುದ್ಧಿಯು ಬಾಧಿತವಾಗುವದೋ ಅದು, ಹುಸಿತೋರಿಕೆ. ಇದನ್ನು ಅನೃತ, ಮಿಥ್ಯೆ, ಮೃಷಾ

ಎಂದೂ ಕರೆಯುವರು. ಕಾರ್ಯಪ್ರಪಂಚವೆಲ್ಲವೂ ಅಸತ್ತು. ಗೀ. ಭಾ. ೨-೧೬, ತೈ. ಭಾ. ೨-೧ ; (೨) ಕಾರಣವಾದ ಅವ್ಯಾಕೃತವು. ನಾಮರೂಪಗಳಿಂದ ಕೂಡಿ ಇಂಥದ್ದೆಂದು ಹೇಳುವದಕ್ಕೆ ಬರುವ ವಸ್ತು ಸತ್ತು, ಅದಕ್ಕೆ ವಿಪರೀತವಾದದ್ದರಿಂದ ಅವ್ಯಾಕೃತವು ಅಸತ್ತು. ತೈ. ೨-೭, ಗೀ. ಭಾ. ೯-೧೯.

**ಅಸತ್, ಅಸತ್ಯ** - ಭ.ಗೀ. ಯಾವದರ ವಿಷಯವಾದ ಬುದ್ಧಿಯು ಬಾಧಿತವಾಗುವದೋ ಅದು, ಹುಸಿ, ೨೬, ೨೭, ೩೨, ೪೩ ; ಒಂದನ್ನವಲಂಬಿಸಿರುವ ವಸ್ತು, ೫೭೩ ; ಇಲ್ಲದ್ದೆಂಬ ಉಪಾಧಿಯುಳ್ಳ ಪರಮಾತ್ಮ, ೭೦೦.

**ಅಸನ್** - ತೈ. ಇದ್ದರೂ ಇಲ್ಲದಂತೆ ಎನ್ನಿಸುವ, ಪುರುಷಾರ್ಥದ ಸಂಬಂಧವಿಲ್ಲದ ೧೫೧ ; ಸನ್ಮಾರ್ಗದಲ್ಲಿಲ್ಲದ ೧೫೧.

**ಅಸತ್ಯ** - ಬ್ರ.ಸೂ-೧. ಪರಮಾರ್ಥವಲ್ಲದ, ಹುಸಿತೋರಿಕೆ, ೪೩೭.

**ಅಸತ್ಕಾರ್ಯವಾದ** - ಬ್ರ.ಸೂ-೧. ಕಾರ್ಯವು ಹುಟ್ಟುವ ಮುಂಚೆ - ಇರುವದೇ ಇಲ್ಲವೆಂಬ ವೈಶೇಷಿಕರ ಮತ್ತು ಬೌದ್ಧರ ವಾದ, ೪೨೬, ೪೪೬.

**ಅಸಙ್ಗ** - ಬ್ರ.ಸೂ-೧. ಮತ್ತೊಂದರ ಅಂಟಿಲ್ಲದ (ಆತ್ಮ), ೫, ೨೬೯.

**ಅಸಂಹತ** - ಬ್ರ.ಸೂ-೧. ಮತ್ತೊಂದರೊಡನೆ ಕೂಡಿಕೊಂಡು ಮತ್ತೊಂದಕ್ಕಾಗಿರುವ ಸ್ವಭಾವದವನಲ್ಲದ (ಆತ್ಮ) ; ೬೬, ೭೨ ; ಭ.ಗೀ. ಒಂದಕ್ಕೊಂದು ಸೇರಿಕೊಂಡು ಮತ್ತೊಬ್ಬರಿಗಾಗಿ ಕೆಲಸಮಾಡುವ ಪದಾರ್ಥಗಳ ಗುಂಪಿಗೆ ಸೇರದಿರುವ ಆತ್ಮ, ೪೩.

**ಅಸಂಹತಃ** - ಕೇನ. ಮತ್ತೊಂದರೊಡನೆ ಸೇರಿಕೊಳ್ಳದೆ ತಾನೇ ತಾನಾಗಿರುವ, ೧೬ ; ಕಠ. ಮತ್ತೆ ಯಾವದೊಂದರೊಡನೆಯೂ ಸೇರಿಕೊಳ್ಳದೆ ಸ್ವತಂತ್ರವಾಗಿರುವವನು, ೧೩೪ ; ಐತ. ಮತ್ತೊಂದರೊಡನೆ ಕೂಡಿಕೊಂಡು ಕೆಲಸ ಮಾಡದೆ ಇರುವವ, ಆತ್ಮ, ೫೨.

**ಅಸಂಸ್ಕೃತಬುದ್ಧಿಃ** - ಕಠ. ಆಚಾರ್ಯರ ಮತ್ತು ಶಾಸ್ತ್ರದ ಉಪದೇಶ, ಶಮಾದಿಗಳು - ಇವುಗಳಿಂದ ಸಂಸ್ಕಾರವನ್ನು ಹೊಂದದ ಅಂತಃಕರಣ, ೧೦೨.

**ಅಸ್ಮತ್ಪ್ರತ್ಯಯಗೋಚರ, ಅಸ್ಮತ್ಪ್ರತ್ಯಯವಿಷಯ** - ಬ್ರ.ಸೂ-೧. ನಾನೆಂಬ ಅರಿವಿಗೆ ವಿಷಯನಾದ (ಆತ್ಮ) ೧, ೩.

**ಅಸದ್ವಾದೀ** - **ಮಾಂ.** ಮೊದಲು ಇಲ್ಲದ ಕಾರ್ಯವು ಹುಟ್ಟುತ್ತದೆ ಎಂಬ (ವೈಶೇಷಿಕ), ೨೨೦, ೨೨೨, ೨೫೨, ೨೫೩, ೨೮೦, ೨೮೨, ೨೮೪, ೨೮೫ ; **ಐತ.**

ಕಾರ್ಯವಾಗಲಿ ಕಾರಣವಾಗಲಿ ಇಲ್ಲವೆನ್ನುವವನು, ೩೧.

**ಅಸಲ್ಲಿಙ್ಗಮ್** - ನೈ. ನೀರಿನ ಆವಿಯೇ ಮುಂತಾದ ಹುಸಿಲಿಂಗದಿಂದ ಬೆಂಕಿಯನ್ನು ಅನುಮಾನಮಾಡಲಾಗುವದಿಲ್ಲವಾದ್ದರಿಂದ ಅಸತ್ಯದಿಂದ ಸತ್ಯವನ್ನು ತಿಳಿಯಲಾಗುವದಿಲ್ಲವೆಂಬ ಆಕ್ಷೇಪವು ಸರಿಯಲ್ಲ ; ಉಪಾಯವಾಗಿರುವದು ಸದಸತ್ತುಗಳಿಂದ ಬೇರೆಯೇ, ೩-೧೦೮, ೧೦೯.

**ಅಸ್ಪರ್ಶಯೋಗಃ** - ಮಾಂ. ಯಾವದರ ಸಂಬಂಧವೂ ಇಲ್ಲದ ಅದ್ವೈತಾತ್ಮ ದರ್ಶನ, ೧೯೯, ೨೧೬.

**ಅಸಂಸರ್ಗಃ** - ನೈ. ಪದಾರ್ಥಗಳು ಒಂದಕ್ಕೊಂದು ಕೂಡಿಕೊಳ್ಳದೆ ಇರುವದು. ತತ್ತ್ವಮಸ್ಯಾದಿವಾಕ್ಯಗಳಲ್ಲಿ ಅವಿವಕ್ಷಿತವಾದ ದುಃಖಿತ್ವಾದಿಗಳಿಗೆ ಸಂಸರ್ಗವಿಲ್ಲ, ಆತ್ಮತ್ವ, ಅದ್ವಿತೀಯತ್ವ- ಇವುಗಳು ಅಭಿನ್ನವಾಗಿರುವದರಿಂದ ಇವುಗಳಿಗೂ ಸಂಸರ್ಗವಿಲ್ಲ. ೩-೭೬.

**ಅಸಂಸಾರೀ** - ಬೃಹ-೧. ಸಂಸಾರಿಯಲ್ಲದ ಪರಮೇಶ್ವರ, ೩೫, ೩೦೬ ; ಐತ. ಸಂಸಾರಿಯಾದ ಜೀವನಲ್ಲದ ಪರಮಾತ್ಮ, ೫೯.

**ಅಸಹಾಯಸಾಧನಮ್** - ಬೃಹ-೧. ಮತ್ತೊಂದರ ಸಹಾಯವನ್ನು ಬಯಸದೆ ಮೋಕ್ಷಕ್ಕೆ ಸಾಧನವಾಗಿರುವ ಜ್ಞಾನ, ೧೬೫.

**ಅಸ್ಯಸ್ಮೀತ್ಯಾದಿಕ್ರಿಯಾ** - ನೈ. ಕ್ರಿಯಾಪದವಿಲ್ಲದೆ ಪದಗಳು ಸೇರಿ ವಾಕ್ಯವಾಗುವದಿಲ್ಲವೆಂದರೂ ಕರ್ತವ್ಯವನ್ನು ಬೋಧಿಸುವ ವಿಧಿರೂಪದ ಕ್ರಿಯೆಯೇನೂ ಬೇಕಿಲ್ಲ; ಅಸಿ, ಅಸ್ಮಿ- ಮುಂತಾದ ಕ್ರಿಯಾಪದವೇ ಸಾಕು, ೧-೯೭.

**ಅಸ್ತಿತ್ವಭಾವಿತ** - ತೈ. ಇದೆ ಎಂಬ ಗಟ್ಟಿಯಾದ ಭಾವನೆಯುಳ್ಳ (ಬುದ್ಧಿ), ೧೫೧.

**ಅಸುರಾಃ** - ಈಶ. ಆತ್ಮಜ್ಞಾನವಿಲ್ಲದ ಕಾಮಿಗಳು, ೯ ; ಛಾಂ. ತಮೋರೂಪವಾದ ಇಂದ್ರಿಯವೃತ್ತಿಗಳು, ೨೦.

**ಅಸುರಾಣಾಮ್ ಉಪನಿಷತ್** - ಭ.ಗೀ. ದೇಹವೇ ಆತ್ಮನೆಂಬ ಅಸುರರ ಮತ.

**ಅಸರ್ವಜ್ಞತ್ವಮ್** - ಬೃಹ-೧. ನಾನು ಪರಿಚ್ಛಿನ್ನನು - ಎಂಬ ಬುದ್ಧಿ ೧೫೧, ೧೯೩.

**ಅಸೌ ಲೋಕಃ** - ತೈ. ಆ ಲೋಕ, ಸ್ವರ್ಗಲೋಕ, ೩೪ ; ಪರಮಾತ್ಮ ೧೫೫.

**ಅಹಂಕಾರ** - ಶಾಂ. ನಿ. (೧) ದೇಹಾದಿಗಳು ನಾನೆಂಬ ಅರಿವು. ನಾನು

ಕರ್ತೃನೆಂಬ ಭಾವನೆಯು ಕರ್ಮಕ್ಕೆ ಕಾರಣ. ಗೀ. ಭಾ. ೧೩-೩, ೧೮-೧೭. ತತ್ತ್ವಜ್ಞಾನಿಗೆ ಸಾತ್ವಿಕವಾದ ಅಹಂಕಾರವು ಕೂಡ ಇರುವದಿಲ್ಲ. ಗೀ. ಭಾ. ೧೩-೫೩, ೧೮-೨೪ ; (೨) ಮನಸ್ಸಿಗೆ ಕಾರಣವಾದ, ಮಹಾಭೂತಗಳಿಗೆ ಕಾರಣವಾದ ಅಹಂಕಾರವೆಂಬ ತತ್ತ್ವ. ಗೀ. ಭಾ. ೭-೪, ೭-೫.

**ಅಹಂಕಾರಃ - ಬ್ರ.ಸೂ-೨.** ಅಹಂಕಾರವು ಮನಸ್ಸಿನಿಂದ ಹುಟ್ಟುತ್ತದೆ ಎಂಬ **ಭಾಗವತಮತವು** ಲೋಕವಿರುದ್ಧ , ೨-೮೫, ಯುಕ್ತಿ ವಿರುದ್ಧ , ೨-೮೬ ; ಅಹಂಕಾರಪೂರ್ವಕವಾಗಿಯೇ ಪ್ರವೃತ್ತಿಯಾಗುವದರಿಂದ ಜೀವನು ಕರ್ತೃ, ೨-೧೫೦ ; ಅಹಂಕಾರವೂ ಜ್ಞೇಯವಾದ್ದರಿಂದ ಜೀವನ ಕರ್ತೃತ್ವವು ಸ್ವಾಭಾವಿಕವಲ್ಲ, ೨-೧೫೬ ; ಮನಸ್ಸೇ ವೃತ್ತಿವಿಶೇಷದಿಂದ ಅಹಂಕಾರವೆನಿಸುತ್ತದೆ, ೨-೧೮೩ ; **ಪ್ರಶ್ನ.** ಅಂತಃಕರಣದ ಅಭಿಮಾನಾತ್ಮಕವೃತ್ತಿ, ೭೨; **ಭ.ಗೀ.** ನಾನೆಂಬ ಬುದ್ಧಿ, ೭, ೧೯೮, ೭೪೪ ; ಮನಸ್ಸಿಗೆ ಕಾರಣವಾಗಿರುವ ಮಹಾಭೂತಗಳಿಗೆ ಕಾರಣವಾಗಿರುವ ತತ್ತ್ವ , ೪೫೮, ೭೮೦ ; ಹೆಮ್ಮೆ, ೧೩೯, ೯೪೮.

**ಅಹಂಪ್ರತ್ಯಯಃ, ಅಸ್ಮತ್ಪ್ರತ್ಯಯಃ - ಬ್ರ.ಸೂ-೨.** ನಾನು ಎಂಬ ಅರಿವು. ಆತ್ಮನು ನಿಯಮದಿಂದ ಅವಿಷಯನೇ ಎಂಬುದಿಲ್ಲ, ಅಸ್ಮತ್ಪ್ರತ್ಯಯವಿಷಯನೂ ಆಗಬಹುದು, ೧-೩ ; ಅಸ್ಮತ್ಪ್ರತ್ಯಯವಿಷಯನಾದ ಆತ್ಮನು ಅಧ್ಯಾಸಕ್ಕೆ ತಕ್ಕವನು, ೧-೧-೩ ; ಅಹಂಪ್ರತ್ಯಯಕ್ಕೆ ಆಶ್ರಯವಾಗಿರುವ ಅಂತಃಕರಣವು ಅಹಂಪ್ರತ್ಯಯಿ, ಅದರಿಂದೊಡಗೂಡಿದ ಆತ್ಮನನ್ನು ಅದರ ವೃತ್ತಿಗಳಿಗೆ ಸಾಕ್ಷಿಯಾದ ಆತ್ಮನಲ್ಲಿಯೂ ಸಾಕ್ಷಿಯನ್ನು ಅದರಲ್ಲಿಯೂ ಅಧ್ಯಾಸಮಾಡುವರು, ೧-೮ ; ಅಹಂಪ್ರತ್ಯಯ ವಿಷಯನಾದ ಪ್ರತ್ಯಯಿಯೇ ಕರ್ತೃಭೋಕ್ತೃ, ಅವನೇ ಸಂಸ್ಕಾರ್ಯನು, ೧-೪೯ ; ಅಹಂಪ್ರತ್ಯಯವಿಷಯನಾದ ಕರ್ತೃವಿಗಿಂತ ವ್ಯತಿರಿಕ್ತನಾದ **ಸಾಕ್ಷಿಯೇ** ಉಪನಿಷದ್ವೇದ್ಯನಾದ ಆತ್ಮ ೧-೫೪ ದೇಹಾದಿಗಳಲ್ಲಿರುವ ಅಹಂಪ್ರತ್ಯಯವು ಮಿಥ್ಯೆಯೇ, ೧-೫೯.

**ಅಹಮ್ - ನೈ.** (೧) ಆತ್ಮನು **ಅಹಂಪ್ರತ್ಯಯಗಮ್ಯನಾದ** ಆತ್ಮ. **ಜೈಮಿನಿಯ** ಮತದಲ್ಲಿ ಆತ್ಮನು ಅಹಂಪ್ರತ್ಯಯಗಮ್ಯನಾದರೂ **ಮೋಹಾದಿಗಳಿಲ್ಲದವನಾದ್ದ**ರಿಂದಲೂ ಅನಾತ್ಮಸಂಬಂಧವಿಲ್ಲದವನಾದ್ದರಿಂದಲೂ ಸುಖದುಃಖಗಳ ಸಂಬಂಧವಿಲ್ಲದವನಾದ್ದರಿಂದಲೂ ಕರ್ಮದಲ್ಲಿ ಅವನಿಗೆ ಪ್ರವೃತ್ತಿಯಾಗಲಾರದು, ೧-೯೨ ರಿಂದ ೯೫ ; (೨) **ಅಹಂಕಾರವು** ದೃಶ್ಯವಾಗಿರುವದರಿಂದಲೂ **ಕರ್ಮಕರ್ತೃಭಾವವು** ವಿರುದ್ಧವಾಗಿರುವದರಿಂದಲೂ ತಾನೇ ತನ್ನ ಗುಣವನ್ನು ನೋಡಲಾರನಾದ್ದರಿಂದಲೂ ಅಹಂಕಾರವು ಆತ್ಮನ ಗುಣವಲ್ಲ, ೨-೨೨ ರಿಂದ ೨೬;

ಅಹಂಬ್ರಹ್ಮ ಎಂಬ ವಾಕ್ಯದಿಂದ ಅಹಂಕಾರವು ಆತ್ಮನ ಧರ್ಮವೆಂದಾಗುವದಿಲ್ಲ, ಅದು ಭ್ರಾಂತಿಯೆಂದಾಗುತ್ತದೆ, ೨-೨೮,೨೯; ಅಹಂಪದವು ಆತ್ಮನಲ್ಲಿ ಲಕ್ಷಣೆಯಿಂದಲೂ ವರ್ತಿಸುತ್ತದೆ, ೨-೫೪, ೫೬, ೩-೧೦೨; ಅಹಂಕಾರಾದಿದ್ವೈತವು ತಾನೂ ಸಿದ್ಧವಲ್ಲ, ಆತ್ಮರೂಪದಿಂದಲೂ ಸಿದ್ಧವಲ್ಲ. ಅದು ಆತ್ಮನಲ್ಲಿ ಕಲ್ಪಿತ, ೨-೪೫; ಅಹಂಕಾರವು ದ್ರಷ್ಟೃದೃಶ್ಯರೂಪದಿಂದಿರುವದರಿಂದ ಆತ್ಮನೆಂಬ ಭ್ರಾಂತಿ, ೨-೪೬, ೫೩ ; ಅಹಂಕಾರದಿಂದಲೇ ಆತ್ಮನು ಅನೇಕನೆಂಬ ಭ್ರಾಂತಿ, ೨-೪೭ ; ಅಹಂಕಾರವು ನಾಶವಾದರೆ ಆತ್ಮನು ಅದ್ವಿತೀಯನು, ೨-೫೩; ಅಹಂಕಾರವು ಆತ್ಮನಿಗಿಂತ ಬೇರೆಯಲ್ಲ, ೨-೯೫; ಅಹಂಬುದ್ಧಿ, ಅಹಂಬುದ್ಧಿಗಮ್ಯ- ಇವೆರಡಕ್ಕಿಂತಲೂ ಆತ್ಮನು ಭಿನ್ನನು, ೨-೧೦೦; ಅಹಂತಜ್ಜ್ಞಾತೃಗಳಿಗೆ ಅವಭಾಸ್ಯಾವಬಾಸಕಭಾವಸಂಬಂಧ, ೩-೫೯.

**ಅಹಂಪ್ರತ್ಯಯಃ** - ಬೃಹ-೧. ನಾನು ಎಂಬ ಅರಿವು (ಇದಕ್ಕೆ ಆತ್ಮನು ವಿಷಯನೆಂದು ಮೀಮಾಂಸಾವಾದಿಗಳು), ೪.

**ಅಹಂಪ್ರತ್ಯಯವಿಷಯಃ** - ಬ್ರ.ಸೂ-೧. ನಾನೆಂಬ ಅರಿವಿಗೆ ವಿಷಯನಾದ (ಕಲ್ಪಿತಾತ್ಮ, ಸಾಕ್ಷಿಯಲ್ಲ), ೪೯, ೫೪, ೫೮ ; ಭ.ಗೀ. ನಾನೆಂಬ ಅರಿವಿಗೆ ವಿಷಯನಾದ ಜೀವ, ೩೭, ೧೧೩೬ ; **ಶಾಂ. ನಿ.** ನಾನೆಂಬ ಪ್ರತ್ಯಯಕ್ಕೆ ಆಶ್ರಯವೂ ವಿಷಯವೂ ಆಗಿರುವ ಜೀವಾತ್ಮ. ಅಹಂಪ್ರತ್ಯಯಕ್ಕೆ ವಿಷಯನಾಗಿಯೇ ಆತ್ಮನು ಮಾನಸಪ್ರತ್ಯಕ್ಷಕ್ಕೆ ಗೋಚರವಾಗಿರುತ್ತಾನೆಂದು ಮೀಮಾಂಸಕರೂ ನೈಯಾಯಿಕರೂ ಒಪ್ಪುತ್ತಿದ್ದರು. ಅವನಿಗೂ ಸಾಕ್ಷಿಯಾಗಿರುವ ಆತ್ಮನೇ ವೇದಾಂತವೇದ್ಯನೆಂದು ಆಚಾರ್ಯರು ಅಧ್ಯಾಸಭಾಷ್ಯ, ಬೃಹದಾರಣ್ಯಕ ಸಂಬಂಧ ಭಾಷ್ಯ, ಸೂ. ಭಾ. ೧-೧-೪ ಮುಂತಾದ ಕಡೆಗಳಲ್ಲಿ ತಿಳಿಸಿಕೊಟ್ಟಿರುತ್ತಾರೆ. ಗೀ. ಭಾ. ೨-೧೯ರಲ್ಲಿ ಆತ್ಮನು ಅಹಂಪ್ರತ್ಯಯವಿಷಯನು ಎಂದು ತಿಳಿಯುವದೇ ಅಜ್ಞಾನವೆಂದು ಹೇಳಿದೆ.

**ಅಹಂಪ್ರತ್ಯಯೀ** - ಬ್ರ.ಸೂ-೧. ನಾನೆಂಬ ಪ್ರತ್ಯಯಕ್ಕೆ ಆಶ್ರಯವಿಷಯನಾಗಿರುವ ಜೀವ, 'ಅಹಂಕರ್ತೃ' ವೇದಾಂತದಲ್ಲಿ ಹೇಳಿರುವ ಸಾಕ್ಷಿರೂಪನಾದ ಆತ್ಮನಲ್ಲ, ೮, ೪೯, ೫೪.

**ಅಹಂಮಮತ್ವಯತ್ನೇಚ್ಛಾಃ** - ನೈ. ಅಹಂಕಾರಾದಿಗಳು ಅನಾತ್ಮ. ಏಕೆಂದರೆ ಅವು ವಿಷಯವಾಗಿವೆ, ಅಗಮಾಪಾಯಿಗಳಾಗಿವೆ, ೨-೨೨, ಅಹಂಕಾರವೇ ದ್ವೈತಕ್ಕೆಲ್ಲ ಮೂಲವಾದ್ದರಿಂದ ಅದು ಹೋದರೆ ಮಮತ್ವಾದಿಗಳೂ ತೊಲಗುವವು ೨-೩೦ ; ಅಹಂಕಾರವು **ಮುಕ್ತಿಸುಷುಪ್ತಿಗಳಲ್ಲಿಲ್ಲವಾದ್ದರಿಂದ** ಆತ್ಮನ ಧರ್ಮವಲ್ಲ, ೨-೩೨;

ಶ್ರುತಿವಾಕ್ಯದಿಂದ ಅಹಂಕಾರಮಮಕಾರಗಳು ಆತ್ಮನಲ್ಲಿಲ್ಲವೇ ಇಲ್ಲವೆಂಬುದು ಗೊತ್ತಾಗುತ್ತದೆ, ೨-೧೧೭.

**ಅಹಂವ್ಯಾಜಃ -** ನೈ. ಅಹಂಕಾರದ ನೆಪ. ಈ ಮೂಲಕವಾಗಿ ಆತ್ಮನನ್ನೇ ಅಹಂ ಬ್ರಹ್ಮಾಸ್ಮಿ ಎಂಬ ವಾಕ್ಯದಲ್ಲಿ ತಿಳಿಸಿದೆ, ೩-೪೧, ೪೩; ಆದ್ದರಿಂದ ಸ್ವರೂಪಲಯದಿಂದ ಆತ್ಮನನ್ನು ತಿಳಿಸುವದಕ್ಕೆ ಅಹಂಕಾರವು ಉಪಾಯವಾಗಿದೆ, ೩-೪೩.

**ಅಹೇಯಾನುಪಾದೇಯ, ಹೇಯೋಪಾದೇಯರಹಿತ -** ಬ್ರ.ಸೂ-೧. ಬಿಡುವದಕ್ಕಾಗಲಿ ತೆಗೆದುಕೊಳ್ಳುವದಕ್ಕಾಗಲಿ ಆಗದ (ಆತ್ಮವಸ್ತು), ೩೮, ೫೧.

# ಆ

**ಆಕೃತಿಃ -** ಬ್ರ.ಸೂ-೧. ಸಾಮಾನ್ಯ, ವ್ಯಕ್ತಿಯಲ್ಲ, ೨೮೬.

**ಆಕಾಶಃ -** ಬ್ರ.ಸೂ-೧. ಪ್ರತ್ಯಕ್ಷವಲ್ಲದಿದ್ದರೂ ಅದರಲ್ಲಿ ಅಧ್ಯಾಸ ಮಾಡುವರೆಂಬುದಕ್ಕೆ ದೃಷ್ಟಾಂತ, ೩ ; ಒಂದೇ ಆಗಿದ್ದರೂ ಘಟಾಕಾಶ ಕರಕಾಕಾಶವೆಂಬ ಭೇದವ್ಯವಹಾರವು ಅಥವಾ ವಿಭಾಗವು ಇರಬಹುದು, ೭೧, ೪೩೨ ; ಇದನ್ನು ಆಕಾಶ-ಘಟಾಕಾಶನ್ಯಾಯ (ಜೀವೇಶ್ವರವಿಭಾಗಕ್ಕೆ ದೃಷ್ಟಾಂತ) ವೆನ್ನುವರು. ೪೫೬ ; ಬ್ರ.ಸೂ-೨. ಪಂಚಭೂತಗಳಲ್ಲಿ ಒಂದು. ವಿಯತ್, ನಭಃ, ವ್ಯೋಮ - ಇವೆಲ್ಲ ಪರ್ಯಾಯಗಳು, ಆಕಾಶ, ದಿಕ್ಕು, ಕಾಲ, ಮನಸ್ಸು, ಪರಮಾಣು - ಇವೆಲ್ಲ ವಿಭಕ್ತವಾಗಿರುವದರಿಂದ ಕಾರ್ಯವಸ್ತುಗಳು, ೨- ೯೮ ; ಅಪ್ರತ್ಯಕ್ಷವಾದ ಆಕಾಶದಲ್ಲಿ ತಲಮಲಿನತ್ವಾದಿಗಳ ಅಧ್ಯಾಸವಾಗುವಂತೆ ಆತ್ಮನಲ್ಲಿ ಅನಾತ್ಮದ ಅಧ್ಯಾಸ, ೧-೩ ; ಆಕಾಶ ಘಟಾಕಾಶನ್ಯಾಯದಿಂದ ಜೀವೇಶ್ವರಬುದ್ಧಿ, ೧-೭೧, ೧೦೪, ೧೫೦, ೧೯೫, ೨೩೨, ೪೪೦, ೪೫೬ ; ಆಕಾಶದ ಹೋಲಿಕೆಯಲ್ಲಿ ಪರಮಾತ್ಮನಿಗೆ ಸರ್ವಗತತ್ವಾದಿಗಳು ವಿವಕ್ಷಿತ, ೧-೧೫೧ ; ಆಕಾಶವು ನಿತ್ಯವೆಂಬ ವೈಶೇಷಿಕಮತವು ಶ್ರುತಿಯುಕ್ತಿವಿರುದ್ಧ , ೨-೯೫, ೯೬, ೯೮ ; ಆಕಾಶವು ನಿರುಪಾಖ್ಯವೆಂಬ ಸೌಗತಮತದ ನಿರಾಸ, ೨-೫೦ ; ಅವ್ಯಾಕೃತ. ಅವ್ಯಾಕೃತಾಕಾಶಕ್ಕೂ ಆಧಾರ ವಾಗಿರುವವನು ಪರಮಾತ್ಮ, ೧-೨೪೨, ೩೩೯, ಹಿರಣ್ಯಗರ್ಭನ ಬುದ್ಧಿಗೆ ಕಾರಣ, ೧-೩೩೯ ; ಅವಿದ್ಯಾಕಲ್ಪಿತ, ೧-೪೪೦ ; ಬ್ರಹ್ಮ. ಸರ್ವಭೂತ ಕಾರಣವಾಗಿರುವದೆಂದು ಛಾಂದೋಗ್ಯದಲ್ಲಿ ಹೇಳಿರುವ ಅನಂತಾಕಾಶವು ಬ್ರಹ್ಮ, ೧-೧೧೯ ; ನಾಮರೂಪನಿರ್ವಾಹಕವೆಂದು ಹೇಳಿರುವ ಆಕಾಶವು ಬ್ರಹ್ಮವು, ೧-೩೨೫ ; ದಹರಾಕಾಶವೆಂದು ಹೇಳಿರುವದೂ ಬ್ರಹ್ಮವೇ, ೧-೨೫೬ ;

ಕಠ. ಪಂಚಭೂತಗಳಲ್ಲಿ ಮೊದಲು ಸೃಷ್ಟಿಯಾಗುವ ಭೂತ, ೭೨, ೭೩, ೭೯, ೧೦೬, ೧೨೫, ೧೫೨, ೧೬೭ ; ಪ್ರಶ್ನ. ಪಂಚಭೂತಗಳಲ್ಲಿ ಒಂದು, ೨೫ ; ಸಮಾನವೆಂಬ ಪ್ರಾಣವೃತ್ತಿ, ४೫ ; ತೈ. ಪಂಚಭೂತಗಳಲ್ಲಿ ಒಂದು, ೧೧೩, ೨೨೮ ; ಆಕಾಶದಲ್ಲಿರುವ ಸಮಾನವೆಂಬ ಪ್ರಾಣವೃತ್ತಿ, ೧೨४ ; ಹೃದಯಾಕಾಶ, ೧೮೮ ; ಛಾಂ. ಪಂಚಭೂತಗಳಲ್ಲಿ ಒಂದು, ೨೩೬ ; ೬೦೮ ; ಪರಮಾತ್ಮ, ೮೨, ೨೩೮, ೬೦೮, ೬೨೧, ೬೮೬ ; ಬೃಹ-೧. ಪಂಚಭೂತಗಳಲ್ಲಿ ಒಂದು, ४, ೩೧೭, ೩೨೫ ; ಪರಮಾತ್ಮ, (ಜೀವನ) ಅಸಂಸಾರಿಸ್ವರೂಪ, ೨೮೯, ೩೦೯ ; ಮುಂ. ಜಗತ್ತಿನ ಸೂಕ್ಷ್ಮಸ್ಥಿತಿ ; ಅವ್ಯಾಕೃತ, ೫೫ ; ಪಂಚಭೂತಗಳಲ್ಲಿ ಮೊದಲು ಹುಟ್ಟಿದ್ದು, ೫೮ ; ಮಾಂ. ಆಕಾಶ, ವಾಯು, ಅಗ್ನಿ, ಅಪ್ಪು, ಪೃಥಿವಿ, ಓಷಧಿಗಳು, ಅನ್ನ, ಅನ್ನರಸಮಯಪುರುಷ - ಮುಂತಾದ ಕ್ರಮ, ೧೯೯ ; ಶಾಂ. ನಿ. (೧) ಶಬ್ದವೆಂಬ ಗುಣವುಳ್ಳ ಮಹಾಭೂತವು. ಆಕಾಶಕ್ಕೂ ವಾಯ್ವಾದಿಗಳಂತೆ ಉತ್ಪತ್ತಿಯುಂಟು ಎಂಬುದನ್ನು ಸೂ. ಭಾ. ೨-೩-೭ರಲ್ಲಿ ತೋರಿಸಿರುತ್ತದೆ ; (೨) ತನ್ನ ಕಾರ್ಯವೆಲ್ಲವನ್ನೂ ವ್ಯಾಪಿಸಿಕೊಂಡಿರುವ ಅವ್ಯಾಕೃತ. ಬೃ. ಭಾ. ೩-೮-४ ; (೩) ಸರ್ವಭೂತಗಳಿಗೂ ಕಾರಣನಾಗಿರುವ ಪರಮಾತ್ಮ ಛಾಂ. ಭಾ. ೧-೯-೧.

**ಆಖ್ಯಾನಾನಿ** - ಬ್ರ.ಸೂ-೨. ಕಥೆಗಳು. ವೇದಾಂತದಲ್ಲಿ ಕಾಣುವ ಕಥೆಗಳು ಪಾರಿಪ್ಲವಾಖ್ಯಾನಗಳಂತೆ ಕರ್ಮಶೇಷವಲ್ಲ, ೨-४೬೬ ; ಈ ಕಥೆಗಳು ವಿದ್ಯಾಸ್ತುತಿಗೆ, ತತ್ತ್ವವನ್ನು ತಿಳಿಯುವದಕ್ಕೆ ಸೌಕರ್ಯವನ್ನುಂಟುಮಾಡುವದಕ್ಕೆ, ೨-४೬೭.

**ಆಗಮಃ** - ಬ್ರ.ಸೂ-೧. ವೇದಾಂತಶಾಸ್ತ್ರ, ४೧೬, ४೨೮, ४೨೯, ४೩೦ ; ಬ್ರ.ಸೂ-೨. ವೇದ, ವೇದಾಂತ, ಚೈತನ್ಯವಿಲ್ಲದ್ದು, ಬ್ರಹ್ಮಪ್ರಕೃತಿಕವಲ್ಲ ಎಂದು ಉದಾಹರಿಸುವದಾದರೆ ಸಾಂಖ್ಯರಿಗೆ ಆಗಮವಿರೋಧ, ೧-४೧೬ ; ಪರಮಾಣುಕಾರಣವಾದಿಗೂ ಆಗಮವಿರೋಧ, ೧-४೩೦ ; ಆಗಮವಿಲ್ಲದೆ ಜಗತ್ಕಾರಣವನ್ನು ಉತ್ಪ್ರೇಕ್ಷಿಸುವದಕ್ಕೂ ಬರುವದಿಲ್ಲ ೧-४೨೮ ; ಆಗಮಗಮ್ಯವಾದ ವಿಷಯದಲ್ಲಿ ತರ್ಕವನ್ನು ಎದುರುಗಟ್ಟಬಾರದು, ೨-४೨೭ ; ಈಶ. ಪರಂಪರೆಯ ಉಪದೇಶ, ೨४ ; ಕೇನ. ಸಂಪ್ರದಾಯಪರಂಪರೆಯಿಂದ ಬಂದಿರುವ ಗುರುಗಳ ಉಪದೇಶ, ೨೬, ४४, ४೬ ; ಕಠ. ಗುರುಪರಂಪರೆಯಿಂದ ಬಂದಿರುವ ತತ್ತ್ವೋಪದೇಶ, ೫೮, ೬೦ ; ವೇದ, ೧೭೮ ; ಬೃಹ-೧. ವೇದ ४, ೧೨೬ ; ಬಲ್ಲವರಿಂದ ಆಗುವ ಉಪದೇಶ, ಪ್ರತಿಜ್ಞಾಮಾತ್ರದಿಂದ ಹೇಳುವ ವಾಕ್ಯ, ೩೭೯, ೨.೮೦ ; ಬೃಹ-೨. ಪ್ರತ್ಯಕ್ಷಾದಿಗಳಿಗೆ ನಿಲುಕದ ವಸ್ತುವನ್ನು ತಿಳಿಯಪಡಿಸುವ ಉಪದೇಶ, ೧, ೬೬ ; ಮಾಂ. ಉಪದೇಶ, ಯುಕ್ತಿಯನ್ನು ಕೊಡದೆ ಹೇಳುವದು, ೩, ೭೫, ೧೨೭, ೨೦೨ ; ನೈ. ಶಾಸ್ತ್ರ ವೇದಾಂತ ಎಂಬ ಆಗಮವಾಕ್ಯದಿಂದಲೇ

ಸಮ್ಯಗ್ಜ್ಞಾನವಾಗುತ್ತದೆ, (ಅವ); ಆಗಮಜ್ಞಾನವು ಒಂದೇ ವ್ಯಾಪಾರದಿಂದ ಅಜ್ಞಾನವನ್ನು ಕಳೆದುಬಿಡುತ್ತದೆ, ಅಜ್ಞಾನನಾಶಕ್ಕೆ ಆ ಜ್ಞಾನದ ಅಭ್ಯಾಸವೇನೂ ಬೇಕಿಲ್ಲ, ೧-೬೭; **ಅಹಂಕಾರಾದಿದ್ವೈತವು ಆತ್ಮನಲ್ಲಿಲ್ಲವೆಂಬುದಕ್ಕೆ ಆಗಮ**, ೨-೪೨; ಪ್ರತ್ಯಕ್ಷಕ್ಕೆ ವಿರುದ್ಧವಾಗಿರುವದು **ಆಗಮಾಭಾಸ ಮಾತ್ರ**, ಆಗಮವು ಅದರಲ್ಲಿ ಪ್ರಮಾಣವಲ್ಲ ೩-೪೫ ; **ಶಾಂ. ನಿ.** (೧) ಗುರುವಿನಿಂದ ಶಿಷ್ಯನಿಗೆ ಸಂಪ್ರದಾಯದಿಂದ ಬರುವ ಉಪದೇಶ. ಕೇ. ಭಾ. ಭಾ. ೩೦ ; (೨) ಶಾಸ್ತ್ರಪ್ರಮಾಣ.

**ಆಗಮವಿದಾಂ ಸೂತ್ರಮ್ - ಮಾಂ.** ಶಾಸ್ತ್ರವ್ಯಾಪಾರವನ್ನು ಬಲ್ಲ ದ್ರವಿಡಾಚಾರ್ಯರ ಸೂತ್ರವು, ೧೧೫.

**ಆಗಮಾನುಸಾರೀ ತರ್ಕಃ - ಬ್ರ.ಸೂ-೧.** ವೇದಾಂತಕ್ಕೆ ಹೊಂದುವ ಸರಿಯಾದ ತರ್ಕ, ೪೨೯.

**ಆಗಮಾಪಾಯಿ - ನೈ.** ಬಂದುಹೋಗುತ್ತಿರುವ. ಅಹಂಕಾರವು ಆತ್ಮನ ಧರ್ಮವೆಂದೇ ಆದರೆ ಆಗಮಾಪಾಯಿಯಾಗಿರುವದರಿಂದ ಆತ್ಮನಿಗೆ ವಿಕಾರವಾಗುವದು, ಅವನು ಅನಿತ್ಯನೆಂದಾಗುವದು, ೨-೨೫; ಅಹಂಕಾರಾದಿಯು ಆಗಮಾಪಾಯಿಯಾಗಿರುವದರಿಂದ ಹುಸಿ, ೨-೯೫; ಆಗಮಾಪಾಯಿಯಿಂದ ಅನಾತ್ಮವನು ಕಂಡುಹಿಡಿಯುವ ರೀತಿ, ೩-೫೬; ಆಗಮಾಪಾಯವೆಂಬ ಅನ್ವಯವ್ಯತಿರೇಕಹೇತುಗಳಿಂದ ಅನಾತ್ಮಗಳನ್ನು ತೆಗೆದುಹಾಕಿ ವಾಕ್ಯವು ಅಜ್ಞಾನವನ್ನು ಕಳೆಯುತ್ತದೆ, ೩-೨೨; ದ್ರಷ್ಟೃದೃಶ್ಯವಿಭಾಗ, ಆಗಮಾಪಾಯಿಸಾಕ್ಷಿವಿಭಾಗ- ಎಂದು ಅನ್ವಯವ್ಯತಿರೇಕವು ಎರಡು ಬಗೆ, ೩-೫೩; ಅವಸ್ಥಾತ್ರಯವು ಆಗಮಾಪಾಯಿಯಾಗಿರುವದರಿಂದ ಅದಕ್ಕೆ ಸಾಕ್ಷಿಯಾಗಿರುವವನೇ ಆತ್ಮನೆಂದು ಅನುಮಾನದಿಂದ ನಿಶ್ಚಯಿಸುವದು ಸಾಕ್ಷಾಜ್ಜ್ಞಾನವಲ್ಲ, ೩-೫೭.

**ಆಗಮಾರ್ಥಃ, ಆಗಮಗಮ್ಯಾರ್ಥಃ - ಬ್ರ.ಸೂ-೧.** ಶ್ರುತಿಗೆ ಮಾತ್ರವೇ ತಿಳಿಯಬರುವ, ಬರಿಯ ತರ್ಕಕ್ಕೆ ನಿಲುಕದ, ೪೨೭, ೪೭೦, ೪೭೨, ೪೮೯.

**ಆಗಮಬಾಹ್ಯ - ಪ್ರಶ್ನ** ವೇದಾಂತಸಂಪ್ರದಾಯಕ್ಕೆ ಹೊರಬ್ಬಾದ, ೧೦೪, ೧೦೮.

**ಆಗಮಸಂಪ್ರದಾಯಃ - ಐತ.** ಗುರುಪರಂಪರೆಯಿಂದ ಬಂದಿರುವ ವೈದಿಕೋಪದೇಶ, ೭೧.

**ಆಗೋಪಾಲಾವಿಪಾಲಪಣ್ಡಿತಮ್ - ನೈ.** ದನಕಾಯುವ ಕುರಿಕಾಯುವ ಅಜ್ಞರಿಂದ ಹಿಡಿದು ಪಂಡಿತರವರೆಗೂ. ಅಜ್ಞಾನವು ಪ್ರಮಾಣಜ್ಞಾನದಿಂದ

ಹೋಗುತ್ತದೆ ಎಂಬುದು ಎಲ್ಲರಿಗೂ ತಿಳಿದದ್ದು, ೨-೧೦೪; ಸುಷುಪ್ತಿಯಲ್ಲಿ ನಿರ್ವಿಕಲ್ಪಕವಾದ ಆತ್ಮವಸ್ತುವಿನ ಅರಿವು ಎಲ್ಲರಿಗೂ ಇದೆ ಎಂಬುದು ಸರಿಯಲ್ಲ, ಅಲ್ಲಿ ಅಜ್ಞಾನವಿದೆ, ೩-೫೮.

**ಆಚಾರ್ಯಃ - ಬ್ರ.ಸೂ-೧.** ಶಾಸ್ತ್ರವನ್ನು ಬೋಧಿಸುವ ಬಾದರಾಯಣ, ಗೌತಮ - ಮೊದಲಾದವರು, ೪೫, ೨೧೫, ೨೧೬, ೨೯೭, ೩೬೩, ೩೮೨, ೩೮೩, ೩೮೪, ೩೮೬ ; **ಪ್ರಶ್ನ.** ತತ್ತ್ವವನ್ನು ಹೇಳಬಲ್ಲ ಗುರು, ೨, ೩೮ ; **ಛಾಂ.** ತತ್ತ್ವವನ್ನು ಇದ್ದಂತೆ ಉಪದೇಶಿಸಬಲ್ಲ ಗುರು, ೫೨೬, ೫೨೭, ೫೪೪ ; **ಮುಂ.** ತತ್ತ್ವವನ್ನು ಹೇಳಬಲ್ಲ ಗುರು, ೧೦, ೪೭, ೪೮, ೭೮ ; **ತೈ.** ಶಾಸ್ತ್ರವನ್ನು ಹೇಳಿಕೊಡುವ ಗುರು ೧೪, ೧೭, ೪೫, ೬೪ ; **ಬೃಹ-೨.** ಆತ್ಮತತ್ತ್ವವನ್ನು ತಿಳಿಸಬಲ್ಲ ಗುರು, ೬೨, ೨೯೨ ; **ಭ.ಗೀ.** ತತ್ತ್ವವನ್ನುಪದೇಶಿಸುವ ಗುರು, ೪೫, ೭೮೪, ೩೦೨, ೮೨೩ ; **ಶಾಂ. ನಿ.** ಅನುಭವಿಯಾದ ಗುರು. ಶಾಸ್ತ್ರಾಚಾರ್ಯರಿಂದ ಆದ ಉಪದೇಶವು ಜ್ಞಾನಕ್ಕೆ ಕಾರಣವಾಗುವದೆಂದೂ ಆ ಜ್ಞಾನಕ್ಕೆ ತನ್ನ ಅನುಭವವೂ ಹೊಂದುಗಡೆಯಾಗಬೇಕೆಂದೂ ಭಾಷ್ಯಕಾರರು ಹಲವು ಕಡೆಗಳಲ್ಲಿ ಬರೆದಿರುತ್ತಾರೆ.

**ಆಚಾರ್ಯಃ, ಗುರುಃ - ಬೃಹ-೧.** ಪರಮಾರ್ಥವನ್ನು ತಿಳಿಸಿಕೊಡುವ ದಯಾಲುವಾದ ಗುರು, ೧೪೯, ೧೬೦.

**ಆಚಾರ್ಯಾಗಮಸಂಸ್ಕೃತಮ್ - ಕಠ.** ಗುರುಗಳ ಉಪದೇಶದಿಂದಲೂ ಶಾಸ್ತ್ರದಿಂದಲೂ ಸಂಸ್ಕಾರವನ್ನು ಹೊಂದಿರುವ ಅಂತಃಕರಣ, ೧೨೬.

**ಆಜಾನಸಿದ್ಧ - ಬ್ರ.ಸೂ-೧.** ಹುಟ್ಟುವಾಗಲೇ ಸಿದ್ಧವಾಗಿರುವ (ದೇವತೆಗಳು), ೨೮೩ ; **ಐತ.** ಆತ್ಮನನ್ನು ಅರಿತುಕೊಳ್ಳುವದಕ್ಕೆ ಸಾಧನವಾಗುವ ಸತ್ಯಾದಿಗಳು, ೩೬ ; **ಭ.ಗೀ.** ಆತ್ಮನ ಗುಣಗಳೆಂದು ವೈಶೇಷಿಕರು ಕಲ್ಪಿಸಿರುವ ಇಚ್ಛಾದಿಗಳು, ೭೮೧.

**ಆತ್ಮಗ್ರಾಹ್ಯಗ್ರಾಹಕತ್ವಮ್ - ಬೃಹ-೨.** ತಾನೇ ಗ್ರಾಹ್ಯವೂ ಗ್ರಾಹಕವೂ ಆಗಿರುವದು, ೧೭೮.

**ಆತ್ಮಗುಣಾಃ - ಶಾಂ. ನಿ.** ಆತ್ಮಜ್ಞಾನವುಂಟಾಗುವದಕ್ಕೆ ಅವಶ್ಯವಾಗಿರುವ ಸತ್ಯ, ಆರ್ಜವ, ದಾನ, ದಯೆ, ಅಹಿಂಸೆ - ಮುಂತಾದ ಗುಣಗಳು. ಐ. ಭಾ. ಭಾ.-೩೬.

**ಆತ್ಮಚೈತನ್ಯಮ್ - ಈಶ.** ಆತ್ಮಸ್ವರೂಪವಾದ ಅರಿವು, ೧೧ ; **ತೈ.** ಸ್ವರೂಪವಾಗಿರುವ ಅರಿವು, ೧೩೩.

**ಆತ್ಮಜ್ಞಾನಮ್ - ಕಠ.** ಆತ್ಮನ ನಿಜದ ಅರಿವು, ೩೨, ೪೬, ೧೦೫ ; **ಮುಂ.** ಪರಮಾತ್ಮನನ್ನು ಇದ್ದಂತೆ ಅರಿತುಕೊಳ್ಳುವದು, ೭೭, ೧೦೮.

**ಆತ್ಮಜ್ಞಾನಮ್, ಆತ್ಮವಿಜ್ಞಾನಮ್** - **ಐತ.** ಆತ್ಮನ ಸ್ವರೂಪದ, ತಿಳಿವಳಿಕೆ, ೩, ೪, ೫, ೭, ೧೧, ೧೯, ೫೭, ೮೦ ; **ಶಾಂ. ನಿ.** ಆತ್ಮಸ್ವರೂಪವನ್ನು ಇದ್ದಂತೆ ಅರಿತುಕೊಳ್ಳುವದು. ಇದಕ್ಕೆ ಶಾಸ್ತ್ರಾಚಾರ್ಯರ ಉಪದೇಶವೂ ಶಮದಮಾದಿಗಳಿಂದಾದ ಸಂಸ್ಕಾರವೂ ಬೇಕು.

**ಆತ್ಮಜ್ಞಾನಮ್, ಆತ್ಮದರ್ಶನಮ್** - **ಬೃಹ-೨.** ಪರಮಾತ್ಮನನ್ನು ಅರಿತುಕೊಳ್ಳುವದು, ೫೦, ೫೮ ; **ಭ.ಗೀ.** ಆತ್ಮನನ್ನು ಸರಿಯಾಗಿ ತಿಳಿದುಕೊಳ್ಳುವದು, ೭, ೯, ೧೨, ೧೫, ೪೫, ೪೭, ೧೩೫, ೫೪೫, ೫೪೬, ೭೬೪, ೮೨೧, ೧೦೨೦, ೧೦೨೭, ೧೧೪೧, ೧೧೫೩.

**ಆತ್ಮಜ್ಞ, ಆತ್ಮವಿತ್** - **ಭ.ಗೀ.** ಪರಮಾತ್ಮತತ್ತ್ವವನ್ನು ತಿಳಿದಿರುವವನು, ೧೩೪, ೧೩೫, ೧೭೯, ೧೮೦, ೧೯೩, ೧೯೪, ೩೨೧, ೩೨೨, ೩೨೩, ೩೨೪, ೩೨೫.

**ಆತ್ಮಜ್ಞಾನನಿಷ್ಠಾ** - **ಭ.ಗೀ.** ಆತ್ಮನ ತತ್ತ್ವವನ್ನು ಅರಿತು ಆ ಜ್ಞಾನದಲ್ಲಿಯೇ ನೆಲೆನಿಲ್ಲುವದು, ೪, ೯, ೧೭೯, ೧೯೪, ೧೯೮ ; **ಈಶ.** ಆತ್ಮನ ಅರಿವಿನಲ್ಲಿಯೇ ನೆಲೆನಿಲ್ಲುವದು, ೨೫.

**ಆತ್ಮಜ್ಞಾನಶೇಷಃ** - **ಬೃಹ-೨.** ಆತ್ಮಜ್ಞಾನಕ್ಕೆ ಬೇಕಾಗಿರುವ ಅಥವಾ ಆದಾದಮೇಲೆ ಉಳಿದಿರುವ (ಪರಮಹಂಸಪಾರಿವ್ರಾಜ್ಯ), ೬೦, ೨೮೧.

**ಆತ್ಮಜ್ಯೋತಿಃ** - **ಬೃಹ-೨.** ಆತ್ಮಸ್ವರೂಪವಾದ ಚೈತನ್ಯ, ೧೬೬, ೧೭೬.

**ಆತ್ಮಜ್ಯೋತಿಶ್ಛಾಯಾ** - **ಬೃಹ-೨.** ಆತ್ಮಚೈತನ್ಯದಂತೆ ತೋರುವ ನೆರಳು, ಚಿದಾಭಾಸ, ೧೭೩.

**ಆತ್ಮತತ್ತ್ವಮ್** - **ಈಶ.** ಆತ್ಮನು ಇದ್ದಂತೆ ಇರುವ ಸ್ವರೂಪ, ೧೦, ೧೧, ೧೨, ೧೪.

**ಆ ಃ** - **ಮಾಂ.** ಆತ್ಮನನ್ನು ಇದ್ದದ್ದು ಇದ್ದಂತೆ ತಿಳಿದುಕೊಳ್ಳುವದು, ೩, ೪.

**ಆತ್ಮದರ್ಶನಮ್** - **ಕಠ.** ಆತ್ಮನನ್ನು ಅರಿತುಕೊಳ್ಳುವದು, ೧೧೩, ೧೬೫ ; **ತೈ.** ಆತ್ಮನ ಉಪಾಸನೆ, ೫೮ ; **ಐತ.** ಆತ್ಮನನ್ನು ಕಂಡುಕೊಳ್ಳುವದು, ಆತ್ಮಜ್ಞಾನ, ೧೮.

**ಆತ್ಮನಿಷ್ಠಾ** - **ಮುಂ.** ಪರಮಾತ್ಮನ ಜ್ಞಾನದಿಂದ ಅವನಲ್ಲಿಯೇ ನೆಲೆನಿಲ್ಲುವದು, ೧೧೬.

**ಆತ್ಮಪ್ರಜ್ಞಾನಮಾತ್ರಶರೀರಪ್ರತಿಬಿಂಬಿತ, ಆತ್ಮಚೈತನ್ಯಪ್ರತಿಬಿಂಬಿತ** - ನೈ. ಆತ್ಮನ ಚಿನ್ಮಾತ್ರಸ್ವರೂಪದಲ್ಲಿ ಹುಸಿಯಾಗಿ ತೋರುವ ಅಜ್ಞಾನ, ೨-೯೭,೧-೧೨.

**ಆತ್ಮಪ್ರತ್ಯಯಃ** - **ಮಾಂ.** ನಾನೆಂಬ ಅರಿವು, ಆತ್ಮನನ್ನು ತಿಳಿಸುವದಕ್ಕೆ ಮುಖ್ಯಪ್ರಮಾಣ, ೪೨ ; **ಭ.ಗೀ.** ನಾನೆಂಬ ಅರಿವು, ೧೯೮ ; **ಶಾಂ. ನಿ.** ತಾನೆಂಬ ಅರಿವು ; ತುರೀಯನನ್ನು ತಿಳಿಯುವದಕ್ಕೆ ಬೇಕಾದ ಪ್ರಮಾಣಭೂತವಾದ ತಿಳಿವಳಿಕೆ ಮಾಂ. ಭಾ. ೭.

**ಆತ್ಮಪ್ರತ್ಯಯಿಕಮ್** - **ಭ.ಗೀ.** ತನಗೇ ಅನುಭವದಲ್ಲಿ ತೋರುವ, ೮೪೪ ; **ಶಾಂ. ನಿ.** ತನ್ನ ಅನುಭವಕ್ಕೆ ಬರುವ, ಗೀ. ಭಾ. ೧೩-೩೪.

**ಆತ್ಮಪ್ರತಿಚ್ಛಾಯಾ** - **ಬೃಹ-೧.** ಅಂತಃಕರಣವೇ ಮುಂತಾದ ಉಪಾಧಿಗಳಲ್ಲಿ ಕಾಣುವ ಆತ್ಮಚೈತನ್ಯದ ಹೊಳಪು, ೧೨೫ ;

**ಆತ್ಮಪ್ರತ್ಯಯಾನುಸಾರಿಣಃ** - **ಮುಂ.** ಒಳಗಿನ ಆತ್ಮನನ್ನೇ , ನಾನು ಎಂಬ ಅರಿವಿನ ಬಲದಿಂದ ಕಾಣುತ್ತಿರುವವರು, ೮೫.

**ಆತ್ಮಭಾವಃ** - **ಕಠ.** ತಾನೆಂಬ ಭಾವನೆ, ೨೮ ; ತಾನೆಂಬ ತಿಳಿವಳಿಕೆ, ೬೫ ; **ಮಾಂ.** ತಾನೇ ಅದಾಗುವದು, ೧೦೭ ; ಪರಮಾರ್ಥಸ್ವರೂಪ, ೧೧೯ ; **ಐತ.** ಅದೇ ತಾನೆಂದು ಭಾವಿಸಿಕೊಳ್ಳುವದು, ೧, ೭೨.

**ಆತ್ಮಭಾವಃ, ಆತ್ಮಾಭಿಮಾನಃ** - **ತೈ.** ತಾನೇ ಅದೆಂಬ ಭಾವನೆ ೧೪೨, ೧೯೦ ; **ಶಾಂ. ನಿ.** ತಾನೆಂಬ ಭಾವನೆ, ಉಪಾಸನೆಯಿಂದಾದ ಸಾಕ್ಷಾತ್ಕಾರ, ಕ. ಭಾ. ೧-೧-೧೭, ಬೃ.ಭಾ. ೧-೩-೯.

**ಆತ್ಮಭೂತ** - **ತೈ.** ಸ್ವರೂಪವಾಗಿರುವ, ೪೧, ೯೩.

**ಆತ್ಮಭಾವಿಕ** - **ತೈ.** ಆತ್ಮನೆಂಬ ಭಾವನೆಯಿಂದ ಕೂಡಿದ ೧೧೭, ೧೪೨.

**ಆತ್ಮಮನಃಸಂಯೋಗಃ** - **ಕೇನ.** ಆತ್ಮ , ಮನಸ್ಸು - ಇವೆರಡೂ ಕೂಡಿಕೊಳ್ಳುವದು ; ಇದು ಜ್ಞಾನವುಂಟಾಗುವದಕ್ಕೆ ಅವಶ್ಯವೆಂದು ಕಣಾದರ ಅನುಯಾಯಿಗಳ ಮತ, ೫೫.

**ಆತ್ಮಯಾಜಿನಃ** **ಮುಂ.** ಅಂತಃಕರಣವು ಸಂಸ್ಕೃತವಾಗಲೆಂದು ನಿಷ್ಕಾಮಕರ್ಮವನ್ನು ಮಾಡುವವರು, ೬೭.

**ಆತ್ಮಯಾಜೀ** - **ಬೃಹ-೨.** ತನ್ನ ಸಂಸ್ಕಾರಕ್ಕಾಗಿ ಫಲೇಚ್ಛೆಯಿಲ್ಲದೆ ಕರ್ಮವನ್ನು ಮಾಡುವವ, ೩೬, ೩೧೦.

**ಆತ್ಮಲಾಭಃ** - ಮುಂ. ಅವಿದ್ಯೆಯಿಂದ ಕಳೆದುಕೊಂಡಂತೆ ಆಗಿರುವ ಆತ್ಮಸ್ವರೂಪವನ್ನು ಜ್ಞಾನದಿಂದ ಪಡೆದುಕೊಳ್ಳುವದು, ೧೧೩., ೧೧೪.

**ಆತ್ಮಲೋಕಃ** - ಕೇನ. ಆತ್ಮನೆಂಬ ಲೋಕ, ಹೊರಗೆ ಸಾಧನದಿಂದ ಸಂಪಾದಿಸಿಕೊಳ್ಳಬೇಕಾಗಿರುವ ಲೋಕಗಳಿಗಿಂತ ಬೇರೆಯಾದ ಆತ್ಮ, ೫ ; **ಬೃಹ-೨.** ಆತ್ಮನೆಂಬ ಲೋಕ, ಹೊರಗೆ ಪಡೆದುಕೊಳ್ಳಬೇಕಾಗಿರುವ ಮನುಷ್ಯಾದಿಲೋಕ ವಿಲಕ್ಷಣನಾದ ಆತ್ಮ, ೩೦೯, ೩೧೦.

**ಆತ್ಮವಸ್ತು** - ನೈ. ಆತ್ಮವಸ್ತುವಿನ ಸ್ವಭಾವವನ್ನು ಅನುಸರಿಸಿ ನೋಡಿದರೆ ಅವಿದ್ಯೆಯ ಸಂಭಾವನೆಯುಕೂಡ ಆತ್ಮನಲ್ಲಿಲ್ಲ, ೩-೧೧೨; ಆತ್ಮವಸ್ತುವಿನ ಸ್ವರೂಪವನ್ನು ಮಾತ್ರ ಆಶ್ರಯಿಸಿಕೊಂಡು ಆತ್ಮಜ್ಞಾನವು ಅವಿದ್ಯೆಯನ್ನು ಕಳೆಯುತ್ತದೆ, ೧-೩೬; ಆತ್ಮವಸ್ತುಸಾಕ್ಷಾತ್ಕರಣಕ್ಕಾಗಿ ಮಾಡುವ ಅನ್ವಯವ್ಯತಿರೇಕವು ವಿಧಿಪ್ರಾಪ್ತ, ೧-೮

**ಆತ್ಮವಾದಿನಃ** - ಭ.ಗೀ. ದೇಹಕ್ಕಿಂತ ಬೇರೆಯಾಗಿ ಆತ್ಮನು ಇರುವನೆಂಬ ವಾದಿಗಳು, ೭೬೨.

**ಆತ್ಮವಿಜ್ಞಾನಮ್, ಆತ್ಮಜ್ಞಾನಮ್** - ನೈ. ಆತ್ಮನನ್ನು ಅರಿಯುವದು. ಅರಿವು ಎಂಬ ಅರ್ಥದ 'ಅವಬೋಧ' 'ಪ್ರತಿಪತ್ತಿ' ಮುಂತಾದ ಶಬ್ದಗಳನ್ನೆಲ್ಲ ಆತ್ಮಶಬ್ದಕ್ಕೆ ಸೇರಿಸಿಕೊಂಡು ಇದಕ್ಕೆ ಪರ್ಯಾಯವಾಗಿ ಪ್ರಯೋಗಿಸುವರು. ಅಮಾನಿತ್ವಾದಿಗಳಿಂದ ಜ್ಞಾನವು ಉಂಟಾಗುತ್ತದೆ, ೪-೬೮; ಆತ್ಮಜ್ಞಾನವುಂಟಾದಮೇಲೆ ಅಮಾನಿತ್ವಾದಿಗಳು ಅಯತ್ನವಾಗಿಯೇ ಜ್ಞಾನಿಯಲ್ಲಿರುವವು, ೪-೬೯.

**ಆತ್ಮವಿದಃ** - ಮುಂ. ಪರಮಾತ್ಮನನ್ನು ಇದ್ದಂತೆ ಅರಿತಿರುವವರು, ೧೧೬.

**ಆತ್ಮವಿದ್ಯಾ** - ಕೇನ. ಪರಮಾತ್ಮಸ್ವರೂಪವನ್ನು ಅರಿತುಕೊಳ್ಳುವದು, ೫೯ ; ತೈ. ಬ್ರಹ್ಮರೂಪವಾದ ಆತ್ಮನ ನಿಜದ ಅರಿವು, ೮೯ ; ಐತ. ಆತ್ಮನನ್ನು ಅರಿತುಕೊಳ್ಳುವದು, ಆತ್ಮಜ್ಞಾನ ೧೯.

**ಆತ್ಮವಿವೇಕಃ** - ಮಾಂ. ಆತ್ಮನನ್ನು ವಿಂಗಡಿಸಿಕೊಂಡು ಅರಿಯುವದು ೨೦೬.

**ಆತ್ಮವಿಜ್ಞಾನಸ್ಮೃತಿಸಂತತಿಃ** - ಬೃಹ-೧. ವಾಕ್ಯದಿಂದಾದ ಅರಿವಿನ ನೆನಪನ್ನು ಬಿಡದೆ ಇಟ್ಟುಕೊಂಡಿರುವದು, ೧೩೮, ೧೪೨ ; ತೈ. ಆತ್ಮನನ್ನು ಬಿಡಿಸಿ ತಿಳಿದುಕೊಳ್ಳುವದು ೨೨.

**ಆತ್ಮವಿವೇಕಜ್ಞಾನಮ್, ಆತ್ಮವಿವೇಕಪ್ರಜ್ಞಾ -** ಭ.ಗೀ. ಆತ್ಮಸ್ವರೂಪವನ್ನು ವಿಂಗಡಿಸಿ ಅರಿತುಕೊಳ್ಳುವದು, ೧೦೪, ೧೧೯೪ ; **ಶಾಂ. ನಿ.** ಆತ್ಮಸ್ವರೂಪವನ್ನು ಅನಾತ್ಮದಿಂದ ವಿಂಗಡಿಸಿ ಅರಿತುಕೊಳ್ಳುವದು. ಗೀ. ಭಾ. ೨-೫೩, ३-३.. ಆತ್ಮನನ್ನೂ ಅನಾತ್ಮವನ್ನೂ ವಿಂಗಡಿಸಿ ತಿಳಿದುಕೊಳ್ಳುವದು. ಉದಾಹರಣೆಗೆ ದೇಹಾದಿಗಳು ಆತ್ಮನಲ್ಲವೆಂದು ತಿಳಿಯುವದು - **'ಆತ್ಮಾನಾತ್ಮ ವಿವೇಕ'** ಎಂದು ಈಗಿನ ವೇದಾಂತಿಗಳು ಹೇಳುವರು. ಆದರೆ ಆತ್ಮಸ್ವರೂಪವೊಂದೇ ಸತ್ಯವೆಂದು ಗೊತ್ತುಪಡಿಸಿಕೊಳ್ಳುವದು ಎಂಬರ್ಥವಲ್ಲದೆ ಬೇರೆ ರ್ಥದಲ್ಲಿ ಈ ಶಬ್ದಕ್ಕೆ ಭಾಷ್ಯದಲ್ಲಿ ಪ್ರಯೋಗವು ಕಂಡುಬರುವದಿಲ್ಲ.

**ಆತ್ಮವಿಶುದ್ಧಿಃ, ಆತ್ಮಶುದ್ಧಿಃ, ಆತ್ಮಸಂಸ್ಕಾರಃ -** ಭ.ಗೀ. ಅಂತಃಕರಣವು ರಾಗದ್ವೇಷಾದಿಗಳನ್ನು ನೀಗಿಕೊಂಡು ಆತ್ಮಜ್ಞಾನಕ್ಕೆ ತಕ್ಕದ್ದಾಗುವದು, ೨೫೫, ३४೬, ४೦೦, ೧೦೧೭ ; **ನೈ.** ಚಿತ್ತಶುದ್ಧಿ ಇದಕ್ಕೆ ನಿತ್ಯನೈಮಿತ್ತಿಕಕರ್ಮಗಳನ್ನು ಮಾಡಬೇಕು, ೧-೫೦.

**ಆತ್ಮಶಬ್ದಪ್ರಯೋಗಃ - ಬೃಹ-೧.** ಎಲ್ಲಾ ಉಪನಿಷತ್ತುಗಳಲ್ಲಿಯೂ ಬ್ರಹ್ಮದಲ್ಲಿ ಆತ್ಮ ಎಂಬ ಶಬ್ದವನ್ನು ಪ್ರಯೋಗಿಸಿರುವದು ; ३೧೧.

**ಆತ್ಮಸಂಸ್ಥಮ್ - ಮಾಂ.** ಆತ್ಮನಲ್ಲಿಯೇ ಅವನ ಸ್ವಭಾವವಾಗಿರುವ (ಜ್ಞಾನ), ೧೯೭.

**- ಸ್ವ - ಛಾಂ.** ತನ್ನ ಅನುಭವಕ್ಕೆ ಬರುವದು, ೬೧೨, ೬೧४, ೬೧೫.

**ಆತ್ಮಸ್ವರೂಪನಿಷ್ಠಾ, ಆತ್ಮಸ್ವರೂಪಾವಸ್ಥಾನಮ್ - ಈಶ.** ಆತ್ಮನ ಸ್ವರೂಪ ದಲ್ಲಿಯೇ ನೆಲೆನಿಲ್ಲುವದು, ೨೦.

**ಆತ್ಮಸ್ವರೂಪಾವಸ್ಥಾನಮ್, ಸ್ವರೂಪಾವಸ್ಥಾನಮ್ - ಭ.ಗೀ.** ಅನಾತ್ಮನಲ್ಲಿ ತಾನೆಂಬ ಅಭಿಮಾನವನ್ನು ಬಿಟ್ಟು ತನ್ನಲ್ಲಿ ತಾನು ಇರುವದು, ೧೦೨೦, ೧೧೨೮ ; **ಐತ.** ಆತ್ಮಜ್ಞಾನ, ೬೧, ೭೨.

**ಆತ್ಯಂತಿಕಪುರುಷಾರ್ಥಃ - ಬ್ರ.ಸೂ-೧.** ಕೊನೆಗಾಣದ ಪುರುಷಾರ್ಥ, ಧರ್ಮಾರ್ಥಸಾಧನಗಳಿಗಿಂತ ವಿಲಕ್ಷಣವಾದ ನಿತ್ಯವಾದ ಮೋಕ್ಷ, ೫೨ ; **ಬೃಹ-೧.** ಅತ್ಯಂತವಾಗಿ, ಮತ್ತೆ ತೋರಿಕೊಳ್ಳದಂತೆ ಅಡಗುವದು, ३೭೦ ; **ಛಾಂ.** ಮರಣವೇ ಇಲ್ಲದ ಸ್ವಭಾವದ ರೂಪದ ಮುಕ್ತಿ, ३, ೧೭೬ ; **ಕಠ.** ಪುನರಾವೃತ್ತಿಯಿಲ್ಲದ ಮುಕ್ತಿ, ३२ ; **ತೈ.** ಸಂಸಾರವು ಸ್ವಲ್ಪವೂ ಉಳಿಯದೆ ಹೋಗಿ ಬಿಡುವದು, ೯೧.

**ಆತ್ಮನಿತ್ಯೋ ಮೋಕ್ಷಃ** - ಬ್ರ.ಸೂ-೧. ಅಂತವಿಲ್ಲದ ಪರಮಾರ್ಥಮೋಕ್ಷ

**ಆತ್ಮಾ** - ಬ್ರ.ಸೂ-೧. ತಾನು, ಎಲ್ಲರ ಸ್ವರೂಪನಾಗಿರುವ ಪರಮಾತ್ಮ ೫, ೭, ೯, ೧೯, ೨೦, ೪೦, ೪೭, ೫೨, ೫೩, ೫೪, ೫೬, ೫೮, ೭೪ ; ಜೀವ, ವಿಜ್ಞಾನಾತ್ಮ, ೧೭೦, ೪೬೫ ; **ಬ್ರ.ಸೂ-೨.** ತನ್ನ ಸ್ವರೂಪ, ಆತ್ಮಾನಾತ್ಮಗಳ ಅನ್ಯೋನ್ಯಾಧ್ಯಾಸದಿಂದ ವ್ಯವಹಾರ, ೧-೧೫ ; ಅಸಂಸಾರಿಯಾದ ಆತ್ಮತತ್ತ್ವದ ಜ್ಞಾನವು ಕರ್ಮಕ್ಕೆ ಬೇಕಿಲ್ಲ ೧-೭ ; ಅಹಂಪ್ರತ್ಯಯಿಯನ್ನು ಪ್ರತ್ಯಗಾತ್ಮನಲ್ಲಿ ಅಧ್ಯಾಸಮಾಡುತ್ತಾರೆ, ೧-೮ : ಬ್ರಹ್ಮವು ನಮ್ಮಗಳ ಆತ್ಮ, ೧-೧೯ ; ಆತ್ಮವಿಶೇಷವು ಯಾವದೆಂಬ ಬಗ್ಗೆ ವಿರುದ್ಧಾಭಿಪ್ರಾಯಗಳು, ೧-೨೦ ; ದ್ರಷ್ಟವ್ಯಃ ಮುಂತಾದವು ಆತ್ಮಜ್ಞಾನದ ವಿಧಿಗಳಲ್ಲ, ೧-೫೨ ; ಎಲ್ಲರ ಆತ್ಮನಾದ ಪುರುಷನು ಕರ್ಮಕಾಂಡದಲ್ಲಿ ಅಥವಾ ತರ್ಕಶಾಸ್ತ್ರದಲ್ಲಿ ಪ್ರಸಿದ್ಧನಾಗಿಲ್ಲ , ೧-೫೪; ಸಚ್ಛಬ್ದವಾಚ್ಯವನ್ನು ಶ್ರುತಿಯು ಆತ್ಮನೆಂದಿರುವದರಿಂದ ಅದು ಚೇತನವೇ, ೧-೭೪, ೭೫ ; ಆತ್ಮನೇ ಸುಷುಪ್ತಿಸ್ಥಾನ, ೨-೨೬೭ ; ಬ್ರಹ್ಮವನ್ನು ತನ್ನ ಆತ್ಮನೆಂದೇ ಉಪಾಸನೆಮಾಡಬೇಕು, ೨-೫೧೦ ; ಪ್ರತೀಕಗಳಲ್ಲಿ ಆತ್ಮಬುದ್ಧಿಯನ್ನು ಮಾಡಬಾರದು, ೨-೫೧೨ ; ತನ್ನ ಆತ್ಮನು ಪರಮಾತ್ಮನೆಂದು ವ್ಯವಹರಿಸುವದು ಶಾಸ್ತ್ರದೃಷ್ಟಿಯಿಂದ, ೧-೧೪೦ ; ಜೀವನು ; ಅನ್ತಃಕರಣ, ೨-೧೮೩ ; ದೇಹ, ೧- ೪೯ ; **ಈಶ.** ತಾನು, ೪, ೫, ೧೪, ೧೫ ; ನಿಜವಾಗಿ ನಮ್ಮೆಲ್ಲರ ಸ್ವರೂಪವಾಗಿರುವ ಪರಮಾತ್ಮ, ೧, ೩, ೪, ೧೫, ೧೭, ೧೮ ; **ಕಠ.** ತಾನು, ಜೀವನ ನಿಜವಾದ ಸ್ವರೂಪವಾಗಿರುವ ಪರಮಾತ್ಮ, ೩೨ ; ೩೩, ೩೬, ೩೭, ೫೭, ೫೯, ೬೦, ೬೨, ೬೪, ೬೫, ೭೨, ೭೩, ೭೪, ೭೫, ೭೬, ೭೭, ೭೮, ೭೯, ೮೦, ೮೧, ೮೨, ೮೩, ೮೪, ೮೬, ೮೮, ೧೦೩, ೧೦೭, ೧೧೫, ೧೧೭, ೧೧೮, ೧೨೬, ೧೩೨, ೧೩೪, ೧೩೫, ೧೩೯, ೧೪೦, ೧೪೧, ೧೪೨, ೧೪೭, ೧೫೧, ೧೫೨, ೧೫೩, ೧೫೪, ೧೬೫, ೧೬೭, ೧೬೮, ೧೭೨, ೧೭೮, ೧೭೯, ೧೮೦, ೧೮೧ ; **ಪ್ರಶ್ನ.** ಲಿಂಗಾತ್ಮ ೪೩ ; ಸ್ಥಾವರಜಂಗಮಗಳ ಅಂತರಾತ್ಮನಾದ ಸೂರ್ಯ, ೧೪ ; ಭೋಕ್ತೃವಾದ ಜೀವ, ೪೭ ; ಪರಮಾತ್ಮ , ೬೫, ೬೬, ೮೦, ೮೪ ; **ಮುಂ.** ಪರಮಾತ್ಮ, ನಮ್ಮ ನಿಜವಾದ ಸ್ವರೂಪ, ೭೮, ೮೧, ೯೫, ೯೬, ೧೦೩, ೧೦೭, ೧೧೪, ೧೧೬, ೧೧೭ ; ಉಪಾಧಿಯಿಂದ ಜೀವನಾಗಿ ತೋರುತ್ತಿರುವ ಆತ್ಮ ,೭೬ ; **ಮಾಂ.** ನಮ್ಮೆಲ್ಲರ ನಿಜವಾದ ಸ್ವರೂಪ, ೬೮, ೯೪, ೧೦೩, ೧೦೫, ೧೦೮, ೧೧೩, ೧೧೫, ೧೧೭, ೧೨೦, ೧೨೬, ೧೩೩, ೧೩೪, ೧೩೬, ೧೪೯, ೧೫೧, ೧೫೪, ೧೫೯, ೧೮೬, ೨೮೦ ; **ತೈ.** ಸ್ವರೂಪ, ೧೦೫, ೧೦೬, ೧೧೪, ೧೨೭, ೧೩೧, ೧೬೬, ೨೩೦ ; ವ್ಯಾಪಿಸಿರುವ (ವ್ಯಾಹೃತಿ) ೩೩; ನಡುವೆ ಇರುವ ಅವಯುವ, ೧೧೭, ೧೨೪ ; ವಿರಾಟ್ಪುರುಷ, ೪೭ ; **ಐತ.** ಪರಮಾತ್ಮ,

೨೮, ೨೯, ೩೦, ೩೧, ೩೭, ೫೯, ೮೨, ೮೭. ಈ ಶಬ್ದವನ್ನು ಜೀವ, ಶರೀರ - ಮುಂತಾದ ಅರ್ಥಗಳಲ್ಲಿಯೂ ಉಪಯೋಗಿಸುವದುಂಟು ೭೪, ೭೫, ೭೬, ೭೭ ; ಬೃಹ-೧. ಕಾರ್ಯಕರಣಸಂಘಾತ, ೨೧೫, ೩೯೬ ; ಶರೀರಾಭಿಮಾನವುಳ್ಳ ಬ್ರಹ್ಮಚಾರಿ, ೧೧೫, ೧೯೭ ; ಪ್ರಾಣನು, ೭೫ ; ಪ್ರಜಾಪತಿಯು ೯೮ ; ಪರಮಾತ್ಮಾಭಿನ್ನನಾದ ಪ್ರತ್ಯಗಾತ್ಮನು, ೫೬, ೧೩೩ ; ತಾನು, ೧೬೦, ೧೬೨ ; ಬೃಹ-೨. ನಮ್ಮ ತೀರ ಒಳಗಿನ ಸ್ವರೂಪ, ೪೫, ೫೪ ; ಕಾರ್ಯಕರಣಸಂಘಾತ ೧೦೫, ೩೧೫ ; ಭ.ಗೀ. ಎಲ್ಲರ ಸ್ವರೂಪವೇ ಆಗಿರುವ ಬ್ರಹ್ಮ, ೩೧, ೩೩, ೩೪, ೩೫, ೩೭, ೩೮, ೪೩, ೪೪, ೪೫, ೪೭, ೫೩, ೫೪, ೫೫, ೫೭, ೬೨, ೬೩, ೧೦೫, ೨೨೭, ೫೫೭, ೬೨೭, ೭೬೬, ೭೭೧, ೭೯೫, ೮೧೭, ೮೨೨, ೮೩೭, ೧೦೨೧, ೧೦೩೨, ೧೦೩೬, ೧೦೪೩, ೧೦೯೭, ೧೦೯೮, ೧೧೦೨ ; ಜೀವ, ೮೩೩, ೮೩೪ ; ಅಂತಃಕರಣ ೧೨೩, ೧೬೫, ೨೨೭, ೩೬೩, ೩೯೨, ೩೯೩, ೪೦೩, ೪೧೫, ೫೯೧, ೫೯೭, ೮೨೨ ; ದೇಹೇಂದ್ರಿಯಗಳ ಗುಂಪು, ೨೭೬, ೩೯೨, ೩೯೩ ; ದೇಹ, ೩೯೬ ; ನೈ. ನಮ್ಮೆಲ್ಲರ ಸ್ವರೂಪವಾಗಿರುವ ತತ್ತ್ವ. ಅಜ್ಞಾನದಿಂದ ಆತ್ಮನಿಗೆ ದುಃಖವುಂಟಾಗಿದೆ, ಸ್ವರೂಪ ಸುಖವು ಮರೆಯಾಗಿದೆ, (ಅವ); ಅವಿದ್ಯೆಯು ಆತ್ಮಾನುಭವದಿಂದ ತಿಳಿಯ ಬರುತ್ತದೆ, ೧-೭; ವೇದಾಂತವಾಕ್ಯಜನ್ಯವಾದ ಆತ್ಮಜ್ಞಾನದಿಂದ ಅಜ್ಞಾನವು ಹೋಗುತ್ತದೆ, ೧-೮; ನಾನಾರಸಬ್ರಹ್ಮವು ಸಾಧಕನ ಆತ್ಮವಾದರೂ ಅನಾತ್ಮವಾದರೂ ಜ್ಞಾನಕರ್ಮಸಮುಚ್ಚಯವು ಬೇಕಾಗಿರುವದಿಲ್ಲ, ೧-೬೯; ಆತ್ಮನಿಗೆ ಅಹಂಕಾರವು ಧರ್ಮವಾದರೆ ಅದನ್ನು ಅರಿಯುವದಕ್ಕೆ ಆಗುತ್ತಿರಲಿಲ್ಲ , ೨-೨೩; ಆತ್ಮನು ಅಹಂಪ್ರತ್ಯಯಗ್ರಾಹ್ಯನಲ್ಲ, ೨-೨೪ ರಿಂದ ೪೩ ; ದ್ವೈತವು ಆತ್ಮನಿಗಿಂತ ಬೇರೆಯಾಗಿ ಆಗಲಿ ಅಥವಾ ತಾನೇ ಆಗಲಿ ಸಿದ್ಧವಾಗುವದಿಲ್ಲವಾಗಿ ಅದು ಕಲ್ಪಿತವೇ, ೨-೪೫; ಅಹಂಕಾರದಿಂದಲೇ ಆತ್ಮನಲ್ಲಿ ಅನೇಕತ್ವಭ್ರಾಂತಿಯಾಗಿದೆ, ೨-೪೭; ಆತ್ಮನು ಅನುಭವರೂಪನಾಗಿದ್ದರೂ ಅಹಂಕಾರಸಂಬಂಧದಿಂದ ಅವನಲ್ಲಿ ಭೋಕ್ತೃತ್ವವಾಗಬಹುದು, ೨-೬೦, ೬೩; ಆತ್ಮನಲ್ಲಿ ಜಗತ್ತು ಹುಸಿಯಾಗಿ ತೋರಿ ಅಡಗುತ್ತದೆ, ೨-೬೮; ಆತ್ಮನು ಕೂಟಸ್ಥನಾದ್ದರಿಂದ ದುಃಖಿಯಲ್ಲ, ೨-೭೧ ರಿಂದ ೭೭; ಆತ್ಮನಲ್ಲಿ ಯಾವ ವಿಶೇಷಣಕ್ಕೂ ಅನ್ವಯವಿಲ್ಲವಾದ್ದರಿಂದ ಅವನು ನಿರ್ವಿಶೇಷಣನು, ೨-೯೪; ಆತ್ಮನು ತನಗೆ ತಾನು ಏತರಿಂದಲೂ ಮರೆಯಾಗಿಲ್ಲ, ೨-೯೮; ಅವಿದ್ಯಾಮಾತ್ರದಿಂದ ವ್ಯವಹಿತನಾಗಿರುತ್ತಾನೆ, ೩-೧೧೩; ಆತ್ಮನಿಗೆ ಅಂತಃಕರಣದಂತೆ ಮತ್ತೊಂದರಿಂದ ಸಿದ್ಧಿಯ ಅಪೇಕ್ಷೆಯಿರುವದಿಲ್ಲ, ೨-೧೧೧; ಆತ್ಮನೇ ಅಜ್ಞಾನದೃಷ್ಟಿಯಿಂದ ಅಜ್ಞಾನಕ್ಕೆ ಆಶ್ರಯ, ವಿಷಯ, ೩-೧; ನಾನು ಈ ಗಂಧವನ್ನು ಮೂಸುತ್ತೇನೆ ಎಂದು ಗೃಹೀತ್ರಾದಿಗಳನ್ನು ಯಾವನು ಅರಿಯುತ್ತಾನೋ

ಅವನೇ ಆತ್ಮನೆಂದು ಶ್ರುತಿ, ೩-೩೯; ನಾನು ಸುಖಿ, ದುಃಖಿ ಎಂದು ಮುಂತಾಗಿರುವ ಅನಿತ್ಯವಾದ ಪ್ರತ್ಯಯವನ್ನು ಅವಗತಿ ಪರ್ಯಂತವಾಗಿ ಅರಿಯುವವನೇ ಆತ್ಮನು ಎಂಬುದೇ ವಾಕ್ಯಜ್ಞಾನವು, ೩-೪೬; ಅನಾತ್ಮವು ಆತ್ಮಪೂರ್ವಕವಾಗಿರುತ್ತದೆ, ೪-೩; ಬುದ್ಧ್ಯಾದಿದೇಹಗಳಲ್ಲಿ ಆತ್ಮನೊ, ಅನಾತ್ಮವೊ ಎಂಬ ಸಂಶಯವಿರುತ್ತದೆ, ಆದ್ದರಿಂದ ಅಸಾಧಾರಣಧರ್ಮಗಳಿಂದ ಅವು ಅನಾತ್ಮವೆಂದು ಅರಿತುಕೊಳ್ಳಬೇಕು, ೪-೪, ೫ ; **ಶಾಂ. ನಿ.** (೧) ಒಳಗಿನ ಸ್ವರೂಪ. ತಾನು. (೨) ಸರ್ವಸಂಸಾರಧರ್ಮವರ್ಜಿತನಾದ ಪರಮಾತ್ಮ. ಐ. ಭಾ. ಭಾ. ೨೮, ಕ. ಭಾ. ೨-೧-೧.

**ಆತ್ಮಾತ್ಮೀಯ** - ನೈ. ತಾನು ತನ್ನದು ಎಂಬ ಸಂಬಂಧ. ಇದು ಹೊರಗಿನ ವಿಷಯವು ಬೇಕಾದದ್ದು ಬೇಡ- ಎಂಬ ಕಾರಣದಿಂದ ಅಹಂಕಾರದಲ್ಲಿ ಆಗುವ ವಿಕಾರದಿಂದ ಈ ಜ್ಞಾನವಾಗುತ್ತದೆ, ೨-೬೦.

**ಆತ್ಮಾನಾತ್ಮವಿವೇಕಃ** - ಬ್ರ.ಸೂ-೧. ಅನಾತ್ಮವನ್ನೂ ಆತ್ಮನನ್ನೂ ವಿಂಗಡಿಸಿ ತಿಳಿದುಕೊಂಡಿರುವದು, ೫೯ ; ಭ.ಗೀ. ಆತ್ಮನು ಸದ್ರೂಪವು, ಅನಾತ್ಮವು ಹುಸಿ ಎಂಬ ಅರಿವು, ೪೩, ೧೦೪, ೧೦೯, ೧೨೯, ೧೫೬, ೬೫೨, ೧೦೨೦.

**ಆತ್ಮಾನಾತ್ಮಾನೌ** - ನೈ. ಆತ್ಮ, ಅನಾತ್ಮ- ಇವು. ಪ್ರತ್ಯಕ್ಷಾದಿಪ್ರಮಾಣಗಳಿಂದ ಸಿದ್ಧ, ೪-೩; ಆತ್ಮನು ಸ್ವತಃಸಿದ್ಧ, ವಾಕ್ಯೈಕಗಮ್ಯನಲ್ಲ , ೧-೮೯, ಇವೆರಡರ ಅಸಾಧಾರಣಧರ್ಮಗಳನ್ನು ತಿಳಿದುಕೊಂಡು ವಿಂಗಡಿಸಿಕೊಳ್ಳಬೇಕು, ೪-೫; ಇವೆರಡಕ್ಕೂ ಹಗ್ಗಹಾವುಗಳಂತೆ ಒಂದರಲ್ಲೊಂದರ ಅಧ್ಯಾಸವಾಗುತ್ತದೆ, ೪-೧೧೧, ೧೧೨; ಆತ್ಮಾನಾತ್ಮವಿವೇಕವು ಅಹಂಕಾರಾದಿಗಳಿಗಿಂತ ಆತ್ಮನು ಬೇರೆ ಎಂದಿಷ್ಟೇ ತಿಳಿಸುತ್ತದೆ, ೨-೬೩; ಆತ್ಮನಾತ್ಮವಿಭಾಗವೂ ಅವಿದ್ಯೆಯಿಂದಲೇ, ೨-೧೧೩., ೩-೯; ಆತ್ಮಾನಾತ್ಮ ವಿಭಾಗಜ್ಞಾನವನ್ನು ಅದ್ವಿತೀಯಜ್ಞಾತೃಜ್ಞಾನದಿಂದ ವಾಕ್ಯವು ಕಳೆಯುತ್ತದೆ,

**ಆತ್ಮೈಕತ್ವಮ್** - ಬ್ರ.ಸೂ-೧. ಆತ್ಮನು ಒಬ್ಬನೇ ಆಗಿರುವನೆಂಬುದು, ೯, ೨೬೯, ೪೦೬, ೪೩೪, ೪೩೮ ; ಬ್ರ.ಸೂ-೨. ಆತ್ಮನು ಒಬ್ಬನೇ ಎಂಬುದು. ಆತ್ಮೈಕತ್ವವನ್ನು ತಿಳಿಸುವದಕ್ಕೇ ವೇದಾಂತಗಳೆಲ್ಲ ಹೊರಟಿವೆ, ೧-೯ ; ಜೀವರೂಪವು ಪಾರಮಾರ್ಥಿಕವೆನ್ನುವವರ ತಪ್ಪು ತಿಳಿವಳಿಕೆಯನ್ನು ಕಳೆಯುವದಕ್ಕಾಗಿ ಶಾರೀರಕದಲ್ಲಿ ಆತ್ಮೈಕತ್ವವನ್ನು ತಿಳಿಸಿದೆ, ೧-೨೬೯ ; ಆತ್ಮೈಕತ್ವಜ್ಞಾನವೇ ಮೋಕ್ಷಕ್ಕೆ ಸಾಧನ, ೧-೪೦೭ ; ಭೋಕ್ತ್ರಾದಿಪ್ರಪಂಚವು ಬ್ರಹ್ಮಕ್ಕಿಂತ ವ್ಯತಿರಿಕ್ತವಲ್ಲವೆನ್ನುವದಕ್ಕೆ ಆತ್ಮೈಕತ್ವವನ್ನು ತಿಳಿಸುವ ಶ್ರುತಿ ಪ್ರಮಾಣ, ೧-೪೩೪ ; ಇದರ ಜ್ಞಾನವಾದಮೇಲೆ

ಆಕಾಂಕ್ಷೆಯೇನೂ ಉಳಿಯುವದಿಲ್ಲ, ೧-೪೩೮ ; **ಕಠ.** ಆತ್ಮನು ಒಬ್ಬನೇ ಎಂಬುದು, ೧೩.೧ ; **ಮಾಂ.** ಪರಮಾರ್ಥವಾಗಿ ಎಲ್ಲಕ್ಕೂ ಆತ್ಮನಾಗಿರುವದು, ಅದ್ವೈತವನ್ನು ಅರಿತುಕೊಳ್ಳುವದು, ೧೫೭, ೧೬೧, ೧೭೨ **ನೈ.** ಆತ್ಮನು ಒಬ್ಬನೇ ಆಗಿರುವನೆಂಬುದು, ಐಕಾತ್ಮ್ಯ. ಆತ್ಮೈಕತ್ವವನ್ನು ಅರಿತುಕೊಂಡವನಿಗೆ ತನ್ನ ದೇಹದಲ್ಲಿರುವ ದುಃಖವೂ ಸುಳ್ಳಾಗುವದು; ಮತ್ತೊಬ್ಬರ ದುಃಖವು ತನಗಾಗುವ ಸಂಭವವೇ ಇಲ್ಲ, ೨-೯೦.

**ಆತ್ಮೈಕತ್ವವಿಜ್ಞಾನಮ್ - ಮಾಂ.** ಆತ್ಮನು ಒಬ್ಬನೇ ಎಂಬ ಅರಿವು, ೫೮, ೧೪೬ ; **ತೈ.** ಆತ್ಮನು ಅದ್ವಿತೀಯನೆಂಬ ತಿಳಿವಳಿಕೆ, ೫೮, ೭೮, ೨೫೭ ; **ಈಶ.** ಆತ್ಮನು ಒಬ್ಬನೇ, ಎರಡನೆಯದಿಲ್ಲದವನು - ಎಂಬ ಅರಿವು, ೨, ೨೧.

**ಆತ್ಮೈಕತ್ವದರ್ಶನಮ್, ಆತ್ಮೈಕತ್ವಪ್ರತಿಪತ್ತಿಃ, ಆತ್ಮೈಕತ್ವಜ್ಞಾನಮ್ - ಬೃಹ-೧.** ಆತ್ಮನು ಒಬ್ಬನೇ ಎಂಬ ಅರಿವು, ೧೦೫, ೧೨೮.

**ಆತ್ಮೇಶ್ವರೈಕತ್ವದರ್ಶನಮ್ - ಭ.ಗೀ.** ಆತ್ಮನು ಒಬ್ಬನೇ, ಆತ್ಮನೆಂದರೂ ಈಶ್ವರನೆಂದರೂ ಒಬ್ಬನೇ ಎಂಬ ಜ್ಞಾನ, ೪೪, ೩೧೭, ೪೨೮, ೧೧೩೬ ; **ಶಾಂ. ನಿ.** ಆತ್ಮನು ತನಗೆರಡನೆಯದಿಲ್ಲದ ಒಬ್ಬನೇ ಎಂಬ ಜ್ಞಾನ. ಸಂಸಾರಕ್ಕೆ ಕಾರಣವಾಗಿರುವ ಅಜ್ಞಾನವನ್ನು ಕಳೆಯುವದಕ್ಕೆ ಇದೊಂದೇ ಕಾರಣ ; ಇದನ್ನು ತಿಳಿಸುವದಕ್ಕಾಗಿಯೇ ಉಪನಿಷತ್ತುಗಳೆಲ್ಲವೂ ಹೊರಟಿರುತ್ತವೆ.

**ಆತ್ಮೇಶ್ವರೈಕತ್ವಜ್ಞಾನಮ್ - ಶಾಂ. ನಿ.** ಪರಮೇಶ್ವರನು ನಮ್ಮೆಲ್ಲರ ಆತ್ಮನೇ ; ಆತ್ಮನಿಗೂ ಈಶ್ವರನಿಗೂ ಭೇದವಿಲ್ಲ ಎಂಬ ಜ್ಞಾನ. ಗೀ. ಭಾ. ೪-೪೧.

**ಆತ್ಮಸ್ವರೂಪಾವಸ್ಥಾನಮ್ - ಶಾಂ. ನಿ.** ತನ್ನ ಸ್ವರೂಪವೇ ಆಗಿರುವ ಪರಮಾತ್ಮನಲ್ಲಿ ಜ್ಞಾನದಿಂದ ನೆಲೆನಿಲ್ಲುವದು. ಗೀ. ಭಾ. ೧೮-೧೦. ಇದನ್ನು ಸ್ವಾತ್ಮನ್ಯೇವಾವಸ್ಥಾನಮ್ (ತೈ. ಭಾ.) ಸ್ವಾತ್ಮಪ್ರತಿಷ್ಠಾ (ಮುಂ. ಭಾ. ಭಾ. ೧-೧-೧) ಸ್ವರೂಪಾವಸ್ಥಾನಮ್ (ಗೀ. ಭಾ. ೧೮-೬೬, ಭಾ.ಭಾ. ೫೮೬) ಎಂದೂ ಕರೆಯುತ್ತಾರೆ.

**ಆತ್ಯಂತಿಕಸಂಸಾರೋಪರಮ - ಶಾಂ. ನಿ.** ಮತ್ತೆ ತೋರಿಕೊಳ್ಳದಂತೆ ಸಂಸಾರವು ನಾಶವಾಗುವದು ; ಜ್ಞಾನದಿಂದ ಮಾತ್ರವೇ ಇದು ಸಾಧ್ಯ.

**ಆದರ್ಶಃ - ಬ್ರ.ಸೂ-೧.** ತಿಕ್ಕಿದರೆ ಹೊಳೆಯುವ ಲೋಹದ ಕನ್ನಡಿ (ಸಂಸ್ಕಾರ್ಯಕ್ಕೆ ದೃಷ್ಟಾಂತ), ೪೯.

**ಆದಿಕರ್ತಾ** - ಬ್ರ.ಸೂ-೧. ಜೀವರೂಪಕರ್ತೃಗಳಲ್ಲದ ಇಡಿಯ ಜಗತ್ತಿಗೇ ಕರ್ತೃವಾದ (ಈಶ್ವರ), ೩೯೦ ; ಭ.ಗೀ. ಎಲ್ಲಕ್ಕೂ ಮೂಲಕರ್ತೃವಾಗಿರುವ ನಾರಾಯಣನು, ಪರಮಾತ್ಮ, ೧.

**ಆದಿಸರ್ಗಃ** - ಬ್ರ.ಸೂ-೧. ಮೊದಲನೆಯ ಸೃಷ್ಟಿ, ಈಶ್ವರನೇ ಮೊಟ್ಟಮೊದಲು ಮಾಡಿದ ಸೃಷ್ಟಿ, ೩೬೯.

**ಆದಿವಿಕ್ರಿಯಾ** - ಭ.ಗೀ. ವಸ್ತುವಿನ ಮೊದಲನೆಯ ಮಾರ್ಪಾಡು ಹುಟ್ಟು, ೩೯.

**ಆದಿತ್ಯಮಂಡಲಸ್ಥಂ ಬ್ರಹ್ಮ** - **ಈಶ.** ಸೂರ್ಯಮಂಡಲದಲ್ಲಿರುವ ಹಿರಣ್ಯಗರ್ಭ, ೩೫

**ಆಧ್ಯಾನಮ್** - ಬ್ರ.ಸೂ-೨. ಉಪಾಸನೆ, ನಿದಿಧ್ಯಾಸನ.

**ಆಧ್ಯಾತ್ಮಿಕ** - ತೈ. ನಮ್ಮ ಒಳಗಿರುವ ೧೨೬ ; **ಮಾಂ.** ಶರೀರಕ್ಕೆ ಸಂಬಂಧಪಟ್ಟ, ನಮ್ಮೊಳಗಿನ, ೧೨, ೧೦೧, ೧೨೬, ೧೩೨ ; ಭ.ಗೀ. ಶರೀರದೊಳಗಿನ, ೧೧೦, ೧೨೫,೨೯೨.

**ಆಧಿದೈವಿಕ** - **ಮಾಂ.** ದೇವತೆಗಳಿಗೆ ಸಂಬಂಧಪಟ್ಟ, ೧೨, ೧೭.

**ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ** - **ಬೃಹ-೧.** ಅಧ್ಯಾತ್ಮ, ಅಧಿಭೂತ, ಅಧಿದೈವ - ಇವುಗಳಿಗೆ ಸಂಬಂಧಪಟ್ಟದ್ದು ೨೧೫, ೨೧೭.

**ಆನನ್ದಃ** - ಬ್ರ.ಸೂ-೨. ಸುಖವು. ಜಗತ್ಕಾರಣವಾದ ಬ್ರಹ್ಮವು ಆನಂದವೆಂಬ ನಿರ್ಣಯ ೧-೨೮ ; ಆನಂದವೇ ಬ್ರಹ್ಮ , ಆನಂದಮಯವಲ್ಲ , ೧-೧೧೦ ; ಛಾಂದೋಗ್ಯದಲ್ಲಿ ಹೇಳಿರುವ ಅಕ್ಷಿಪುರುಷನು ಸುಖರೂಪವಾದ ಬ್ರಹ್ಮ, ೧-೧೮೦ ; ಆನಂದರೂಪಬ್ರಹ್ಮವು ಪುಚ್ಛವೆಂದರೆ ಲೌಕಿಕಾನಂದಕ್ಕೆಲ್ಲ ಆಶ್ರಯವೆಂದರ್ಥ, ೧-೧೦೯ ಆನಂದಬ್ರಹ್ಮವನ್ನು ತಿಳಿಸುವದಕ್ಕೆ ಆನಂದಮಯಾಂತವಾದ ಪಂಚಕೋಶಗಳನ್ನು ಹೇಳಿದೆ, ೧-೧೦೭ ; ಬ್ರಹ್ಮವೇ ಮುಖ್ಯಾರ್ಥದ ಆನಂದ, ೧-೧೩೯, ೨೮೧ ; ಆನಂದವೇ ಮುಂತಾದ ಬ್ರಹ್ಮಧರ್ಮಗಳನ್ನು ಎಲ್ಲಾ ಕಡೆಯಲ್ಲಿಯೂ ಉಪಸಂಹಾರಮಾಡಿಕೊಳ್ಳಬೇಕು, ೨-೩೩೬, ೩೩೯ ; **ಶಾಂ. ವಿ.** ಇಷ್ಟಲಾಭನಿಮಿತ್ತದಿಂದಾಗುವ ಹರ್ಷವೇ ಮುಂತಾದವುಗಳಲ್ಲಿ ಅನುಗತವಾಗಿರುವ ಸುಖಸಾಮಾನ್ಯ ; ಇದೇ ಆತ್ಮನ ಸ್ವರೂಪವು. ಪುಣ್ಯವಶದಿಂದ ಇಷ್ಟ ವಿಷಯಗಳ ಲಾಭದಿಂದ ಅಂತಃಕರಣವು ಪ್ರಸನ್ನವಾಗಿರುವಾಗ ಅಭಿವ್ಯಕ್ತವಾಗಿ ವಿಷಯಾನಂದವೆನಿಸುತ್ತದೆ. ತೈ. ಭಾ. ೨-೫. ಆತ್ಮನ ಸ್ವರೂಪವಾಗಿರುವ ಆನಂದವು

ವಿಷಯಾನಂದದಂತೆ ವಿಷಯೀಕರಿಸಿ ಅನುಭವಿಸುವ ಆನಂದವಲ್ಲ, ಬೃ. ಭಾ. ೩-೯-೨೮.

**ಆನನ್ದಮಯಃ** - **ಮಾಂ.** ಅನಾತ್ಯಂತಿಕವಾಗಿರುವ ಆನಂದರೂಪನಾದ ಸುಷುಪ್ತಾತ್ಮ, ೧೬ ; **ತೈ.** ಕರ್ಮ ಮತ್ತು ಉಪಾಸನೆ - ಇವುಗಳ ಫಲಭೋಕ್ತೃವಾದ ಆತ್ಮ, ೧೨೨, ೧೪೫, ೧೪೬, ೧೪೭, ೧೪೯, ೧೫೦, ೨೧೧.

**ಆನುಮಾನಿಕಮ್** - **ಬ್ರ.ಸೂ-೧.** ಅನುಮಾನದಿಂದ ಕಾರಣವೆಂದು ಸಿದ್ಧವಾಗಬೇಕಾಗಿರುವ (ಪ್ರಧಾನ), ೨೨೬, ೩೩೪, ೩೪೩.

**ಆಪ್ಯ** - **ಬ್ರ.ಸೂ-೧.** ಹೊಸದಾಗಿ ಗ್ರಾಮಾದಿಗಳಂತೆ ಪಡೆಯಬೇಕಾಗಿರುವ, (ನಾಲ್ಕು ವಿಧವಾದ ಕರ್ಮಫಲಗಳಲ್ಲಿ ಒಂದು), ४೮.

**ಆಪ್ಯಮ್** - **ಈಶ.** ಪಡೆಯತಕ್ಕದ್ದು ; ಕರ್ಮಫಲದ ನಾಲ್ಕು ರೂಪಗಳಲ್ಲಿ ಒಂದು, ೧ ; **ಮುಂ.** ಹೊಸದಾಗಿ ಪಡೆದುಕೊಳ್ಳತಕ್ಕದ್ದು, ಕರ್ಮದ ಕಾರ್ಯವಾಗಿರುವ ನಾಲ್ಕು ಬಗೆಗಳಲ್ಲಿ ಒಂದು, ४೬.

**ಆಪೇಕ್ಷಿಕಮ್ ಅಮೃತಮ್** - **ಈಶ.** ಹೋಲಿಕೆಯ ಮುಕ್ತಿ; ಇತರ ಫಲಗಳಿಗೆ ಹೋಲಿಸಿದರೆ ಬಹುಕಾಲ ಇರುವ ಅಪರಬ್ರಹ್ಮಪ್ರಾಪ್ತಿ, ४೨.

**ಆಪೇಕ್ಷಿಕಂ ಸತ್ಯಮ್** - **ಮುಂ.** ಮತ್ತೊಂದಕ್ಕೆ ಹೋಲಿಸಿದರೆ ಸತ್ಯವಾಗಿರುವ, ೫೦.

**ಆಪೇಕ್ಷಿಕಮ್ ಅಮೃತತ್ವಮ್** - **ಛಾಂ.** ಇತರ ಫಲಗಳಿಗೆ ಹೋಲಿಸಿದರೆ ಬಹುಕಾಲವಿರುವ ಅಮೃತತ್ವ, ಬ್ರಹ್ಮಲೋಕಪ್ರಾಪ್ತಿ, ೧೨೬.

**ಆಪೇಕ್ಷಿಕಮ್‌ನಿತ್ಯಮ್** - **ಕಠ.** ಒಂದಕ್ಕೆ ಹೋಲಿಸಿದರೆ ನಿತ್ಯವಾದ, ೬೨.

**ಆಬ್ರಹ್ಮಸ್ತಂಬಪರ್ಯನ್ತ** - **ನೈ.** ಬ್ರಹ್ಮನಿಂದ ಹಿಡಿದು ಮರದವರೆಗಿನ ಅಥವಾ ಹುಲ್ಲುಕಡ್ಡಿಯವರೆಗಿನ, ಈ ಎಲ್ಲಾ ಪ್ರಾಣಿಗಳಿಗೂ ದುಃಖನಿವೃತ್ತಿಯಲ್ಲಿಯೂ ಸುಖ ಪ್ರಾಪ್ತಿಯಲ್ಲಿಯೂ ಸ್ವಭಾವದಿಂದಲೇ ಪ್ರವೃತ್ತಿಯಿದೆ, (ಅವ); ಈ ಎಲ್ಲಾ ಪ್ರಾಣಿಗಳಲ್ಲಿಯೂ ಗ್ರಹೀತ್ರಾದಿರೂಪವಾದ ಸಂಸಾರವಿದೆ, ೨-೯೭; ಈ ಎಲ್ಲಾ ಪ್ರಾಣಿಗಳಲ್ಲಿಯೂ ಇರುವ ಪ್ರಮಾಣಪ್ರಮೇಯಾದಿವ್ಯವಹಾರವು ಮಿಥ್ಯಾಧ್ಯಾಸವೇ, ೩-೧.

**ಆಭಾಸಃ** - **ಈಶ.** ಅದರಂತೆ ತೋರುವದು, ನೆರಳು, ಮನಸ್ಸಿನಲ್ಲಿ ತೋರುವ ಆತ್ಮನ ಹೊಳಪು, ಇದನ್ನು ಚಿದಾಭಾಸವೆನ್ನುವರು, ೧೧ ; **ನೈ.** ಹಾಗೆ ತೋರುವದು,

ನಿಜವಾಗಿಲ್ಲದಿರುವದು. ಆತ್ಮನು ಅಹಂಪ್ರತ್ಯಯಗ್ರಾಹ್ಯನೆಂಬ ಪ್ರತ್ಯಕ್ಷವು ಆಭಾಸ, ೨-೨೬; ಪ್ರತ್ಯಕ್ಷ, ಆಗಮ-ಇವುಗಳೆರಡೂ ಒಂದೇ ವಿಷಯದಲ್ಲಿದ್ದರೆ ಎರಡರಲ್ಲಿ ಒಂದು ಆಭಾಸವು, ೩-೮೫; ಆತ್ಮನಲ್ಲಿ ತೋರುವ ಕ್ರಿಯಾಕಾರಕಫಲರೂಪವಾದ ಸಂಸಾರವು ಆಭಾಸವು, ೨-೫೧.

**ಆಭೂತಸಂಪ್ಲವಸ್ಥಾನ** - ಛಾಂ. ಭೂತಪ್ರಲಯವಾಗುವವರೆಗೆ ಇರುವ ಸ್ಥಾನ, ಬ್ರಹ್ಮಲೋಕಪ್ರಾಪ್ತಿ ೪೮೫.

**ಆಮ್ನಾಯಃ** - ನೈ. ವೇದ. ವೇದವು ಕ್ರಿಯಾರ್ಥವಾದ್ದರಿಂದ ಕ್ರಿಯೆಯನ್ನು ಹೇಳಿದ್ದು ವ್ಯರ್ಥ ಎಂಬ ಜೈಮಿನಿಯ ಅಭಿಪ್ರಾಯ, ೧-೧೭; ಈ ಅಭಿಪ್ರಾಯವು ಕರ್ಮಕಾಂಡಕ್ಕೆ ಮಾತ್ರ ಸೇರಿದ್ದು ಎಲ್ಲಾ ವೇದಕ್ಕೂ ಅನ್ವಯಿಸುವದಲ್ಲ, ೧-೯೧.

**ಆರಬ್ಧ** - ತೈ. ಫಲವನ್ನುಂಟುಮಾಡಿರುವ (ಕರ್ಮ) ೩, ೪, ೫, ೭೧.

**ಆರಬ್ಧಫಲ** - ನೈ. ಫಲವನ್ನು ಕೊಟ್ಟಾಗಿರುವ ಕರ್ಮ. ಆರಬ್ಧಕರ್ಮಕ್ಕೆ ಭೋಗದಿಂದಲೇ ಕ್ಷಯ, ೧-೧೨; ಇದು ಮೀಮಾಂಸಕರಂತೆ ವೇದಾಂತಿಗಳಿಗೂ ಒಪ್ಪು, ಆರಬ್ಧಫಲವುಳ್ಳ ಕರ್ಮಗಳು ಆಗಿಬಿಟ್ಟಿರುವದರಿಂದ ಅವನ್ನು ತ್ಯಾಗಮಾಡುವದು ಆಗಲಾರದು, ೧-೮೧.

**ಆರಭ್ಯ** - ತೈ. ಹೊಸದಾಗಿ ಉಂಟುಮಾಡಬಹುದಾದರ್ದು, ೭೩.

**ಆರಮ್ಭಃ** - ಶಾಂ. ನಿ. ಮಾಡುವದು, ಒಂದೇ ಜಾತಿಯ ಅನೇಕ ವಸ್ತುಗಳು ಸೇರಿ ಒಂದು ಕಾರ್ಯವನ್ನು ಮಾಡಿದರೆ ಅದಕ್ಕೆ ''ಆರಂಭ''ವೆಂಬ ಹೆಸರೆಂದು ವೈಶೇಷಿಕರು ಹೇಳುತ್ತಾರೆ. ಈ ಆರಂಭವಾದವು ಆಚಾರ್ಯರಿಗೆ ಇಷ್ಟವಿಲ್ಲ. **'ಆರಮ್ಭಕಮ್'** ಉಂಟುಮಾಡುವ ಕಾರಣ, **'ಆರಬ್ಧ'** ಉಂಟಾದ ಕಾರ್ಯ ಎಂಬ ಮಾತುಗಳನ್ನು ಭಾಷ್ಯದಲ್ಲಿ ಆರಂಭವಾದದ ಹಂಗಿಲ್ಲದೆ ಉಪಯೋಗಿಸಿದೆ. ಗೀ. ಭಾ. ೪-೧೪ ; ೧೩-೨೦.

**ಆರಮ್ಭಕ** - ತೈ. ಕಾರಣವಾಗಿರುವ ೭೪.

**ಆರಮ್ಭಕಮ್** - ಭ.ಗೀ. ಉಂಟುಮಾಡುವ ಕಾರಣ, ೨೫೩, ೩೦೦, ೮೧೦, ೮೨೦.

**ಆರೂಢಪತಿತಃ** - ನೈ. ತತ್ತ್ವಮಸ್ಯಾದಿವಾಕ್ಯಗಳಲ್ಲಿ ತ್ವಂಪದಾರ್ಥವಿವೇಕಕ್ಕಾಗಿ ಅನ್ವಯವ್ಯತಿರೇಕವನ್ನು ಮಾಡಿಕೊಂಡು ಆತ್ಮದರ್ಶನವನ್ನು ಮಾಡಿಕೊಳ್ಳುವದು ವಿಧಿ ಪರಿಪ್ರಾಪಿತವಾದ್ದರಿಂದ ಅದನ್ನು ನಡುವೆ ಮಾಡಿಬಿಟ್ಟವನು

ಆರೂಢಪತಿತನಾಗುವನು, ೩-೬; ಆದ್ದರಿಂದ ಪ್ರಸಂಖ್ಯಾನವಿಧಿಯಿಲ್ಲದಿದ್ದರೆ ಆರೂಢಪತಿತನಾಗದೆ ಹೋಗಬೇಕಾಗುವದೆಂಬ ವಾದವು ಸರಿಯಲ್ಲ, ೩-

**ಆಲಂಬನಮ್ - ಬ್ರ.ಸೂ-೧.** ವಿಷಯ. ಅದನ್ನೇ ಬ್ರಹ್ಮವೆಂದು ಉಪಾಸನೆ ಮಾಡುವದಕ್ಕಾಗಿ ಹೇಳಿದ್ದು (ಓಂಕಾರ), ೨೫೨ ; **ಕಠ.** ಯಾವದನ್ನು ಬ್ರಹ್ಮವೆಂದು ಧ್ಯಾನಿಸಬೇಕೋ ಅಂಥ ಓಂಕಾರವೇ ಮುಂತಾದದ್ದು ೭೦ ; **ಪ್ರಶ್ನ.** ವಾಚಕವಾಗಿ, ಅಥವಾ ಪ್ರತೀಕವಾಗಿ ಇರುವ ವಸ್ತು (ಓಂಕಾರ), ೮೦; **ಛಾಂ.** ಉಪಾಸನೆಗಾಗಿಟ್ಟು ಕೊಂಡಿರುವ ಪ್ರತೀಕ, ೬ ; **ಬೃಹ-೧.** ಪ್ರತಿಮೆ ಮುಂತಾದವುಗಳಂತೆ ಪ್ರತೀಕವಾಗಿರುವದು, ೫೦.

**ಆಲೋಚನಮ್ - ಕೇನ.** ಇಂದ್ರಿಯಗಳಿಗೂ ವಿಷಯಗಳಿಗೂ ಸಂಬಂಧವಾದ ಕೂಡಲೆ ಆಗುವ ಮೊದಲನೆಯ ಅರಿವು (sensation), ೧೬.

**ಆವರಣಮ್ - ಶಾಂ. ನಿ.** ಮುಸುಕು, ಅವಿದ್ಯೆ, ಧರ್ಮಾಧರ್ಮಗಳು, ಕಾಮ - ಎಂಬ ಅಡ್ಡಿಯಿಂದ ಜೀವರ ಜ್ಞಾನವು ಹೊರತೋರಿಕೊಳ್ಳಲಾರದೆ ಇರುವದೆಂದು ಭಾಷ್ಯಕಾರರು ಅಲ್ಲಲ್ಲಿ (ಸೂ. ಭಾ. ೧-೧-೫, ಗೀ. ಭಾ. ೩-೩೯, ೪-೫) ಬರೆದಿರುತ್ತಾರೆ. ಈಶ್ವರನಿಗೆ ಈ ಅಡ್ಡಿಯಿಲ್ಲದ್ದರಿಂದ ಅವನು ನಿರಾವರಣ ಜ್ಞಾನನೆಂದೂ ಬರೆದಿರುತ್ತಾರೆ. ಈ ಅಡ್ಡಿಗಿಂತ ಬೇರೆಯಾದ ಮೂಲಾವಿದ್ಯೆಯ ಆವರಣಶಕ್ತಿಯೊಂದು ಇದೆ ಎಂಬ ವ್ಯಾಖ್ಯಾನಕಾರರ ಅಭಿಪ್ರಾಯಕ್ಕೆ ಭಾಷ್ಯದಲ್ಲಿ ಆಧಾರವು ದೊರಕುವದಿಲ್ಲ.

**ಆವೃತ್ತಿಃ - ಶಾಂ. ನಿ.** (೧) ಕರ್ಮವನ್ನು ಮಾಡಿದವರು ಚಂದ್ರಲೋಕಕ್ಕೆ ಹೋಗಿ ಕರ್ಮದ ಫಲವು ಕ್ಷಯವಾಗಲು ಹಿಂತಿರುಗುವರು ; ಈ ಆವೃತ್ತಿಯು ದೇವಯಾನವೆಂಬ ಮಾರ್ಗದಿಂದ ಹೋದವರಿಗೆ ಆಗುವದಿಲ್ಲ (ಸೂ. ಭಾ. ೪-೪-೨) ; (೨) ಮತ್ತೆ ಮತ್ತೆ ಅಭ್ಯಾಸಮಾಡುವದು. ಶ್ರವಣವೇ ಮುಂತಾದವುಗಳನ್ನು ಆತ್ಮದರ್ಶನವಾಗುವವರೆಗೂ ಮತ್ತೆ ಮತ್ತೆ ಆವೃತ್ತಿ ಮಾಡಬೇಕು ; ಏಕೆಂದರೆ ದರ್ಶನಕ್ಕಾಗಿಯೇ ಅವುಗಳನ್ನು ವಿಧಿಸಿದೆ (ಸೂ. ಭಾ. ೪-೧-೧). ಆದರೆ ಒಂದುಸಲ ಶ್ರವಣ ಮಾಡಿದ್ದರಿಂದಲೇ ಯಾವನಿಗೆ ಜ್ಞಾನವುಂಟಾಗುವದೋ, ಅವನಿಗೆ ಈ ಆವೃತ್ತಿಯು ಅವಶ್ಯವಿಲ್ಲ (ಸೂ. ಭಾ. ೪-೧-೧). ಜ್ಞಾನವನ್ನು ಮತ್ತೆ ಮತ್ತೆ ಅಭ್ಯಾಸಮಾಡಿದಮೇಲೆಯೇ ವಿಶೇಷಾನುಭವರೂಪವಾದ ಸಾಕ್ಷಾತ್ಕಾರವುಂಟಾಗುವದೆಂಬ ಮತವನ್ನು ಅಲ್ಲಲ್ಲಿ ಆಚಾರ್ಯರು ಖಂಡಿಸಿರುತ್ತಾರೆ (ಸೂ. ಭಾ. ೪-೧-೧, ಬೃ. ಭಾ. ೧-೪-೭).

**ಆಶ್ರಮವಿಕಲ್ಪಃ - ಐತ.** ಆಶ್ರಮಗಳನ್ನು ಒಂದೊಂದಾಗಿ ಕ್ರಮದಿಂದ

ಎಲ್ಲವನ್ನೂ ಪಡೆಯುವದು, ಆಶ್ರಮಗಳನ್ನು ಒಂದನ್ನು ಬಿಟ್ಟು ಮತ್ತೆ ಯಾವದಾದರೂ ಒಂದನ್ನು ಪಡೆಯುವದು, ೨೩ ; ಭ.ಗೀ. ಬ್ರಹ್ಮಚಾರಿಯು ಗೃಹಸ್ಥನಾಗಿಯೂ ಆಗದೆಯೂ ಸಂನ್ಯಾಸಿಯಾಗಬಹುದೆಂಬುದು, ೧೪೬.

**ಆಶ್ರಮಾಃ** - ಬ್ರ.ಸೂ-೨. ಬ್ರಹ್ಮಚರ್ಯವೇ ಮುಂತಾದ ಆಶ್ರಮಗಳು. ಆಶ್ರಮಕರ್ಮ ಜ್ಞಾನೋತ್ಪತ್ತಿಗೆ ಸಾಧನ, ೨-೪೭೯, ೪೭೧, ೪೭೭ ; ಜ್ಞಾನಕ್ಕೆ ತನ್ನ ಫಲವನ್ನು ಕೊಡುವದಕ್ಕೆ ಕರ್ಮಗಳ ಸಹಾಯ ಬೇಡ, ೨-೪೭೮ ; ಮುಮುಕ್ಷುಗಳಲ್ಲದವರಿಗೂ ಅದೇ ಆಶ್ರಮಕರ್ಮಗಳು, ೨-೪೭೭ ; ಊರ್ಧ್ವರೇತಸ್ಕರ ಆಶ್ರಮದಲ್ಲಿ ವಿದ್ಯೆಯನ್ನು ಹೇಳಿದೆ, ೨-೪೫೪ ; ಗಾರ್ಹಸ್ಥ್ಯದಂತೆ ಆಶ್ರಮಾಂತರವೂ ಅನುಷ್ಠೇಯ, ೨-೪೫೭, ೪೫೮ ; ಆಶ್ರಮವಿಲ್ಲದ ವಿಧುರಾದಿಗಳಿಗೂ ವಿದ್ಯೆಯಲ್ಲಿ ಅಧಿಕಾರ, ೨-೪೮೦ ರಿಂದ ೪೮೨ ; ಅನಾಶ್ರಮಿಯಾಗಿರುವದಕ್ಕಿಂತ ಆಶ್ರಮಿಯಾಗಿರುವದೇ ಮೇಲು, ೨-೪೮೩ ; ಮೇಲಿನ ಆಶ್ರಮಕ್ಕೆ ಹೋದವರು ಕೆಳಕ್ಕೆ ಇಳಿಯಬಾರದು, ೨-೪೮೪ ; ಆಶ್ರಮಚ್ಯುತರಿಗೆ ಪ್ರಾಯಶ್ಚಿತ್ತ, ೨-೪೮೫, ೪೮೬.

**ಆರ್ಷಂ ಜ್ಞಾನಮ್, ಆರ್ಷಂ ದರ್ಶನಮ್** - ಬ್ರ.ಸೂ-೧. ಋಷಿಗಳಿಗೆ ಆಗುವ ಶಾಸ್ತ್ರದೃಷ್ಟಿಯ ಜ್ಞಾನ, ೧೪೦, ೪೦೦ ; ಬ್ರ.ಸೂ-೨. ಋಷಿಗಳ ತಿಳಿವಳಿಕೆ. ಧರ್ಮಾತಿಶಯದಿಂದ ಈ ಜ್ಞಾನವುಂಟಾಗುತ್ತದೆ, ೧-೧೪೦ ; ಕಪಿಲಾದಿಗಳಿಗೆ ಆರ್ಷಜ್ಞಾನವಿದೆಯೆಂದು ಸಾಂಖ್ಯಾದಿಗಳ ನಂಬಿಕೆ, ೧-೪೪೦ ; ತೈ. ತಾನೇ ಹೊಳೆಯುವ ಅಮೂಲ್ಯಜ್ಞಾನ ೫೮.

**ಆಸಂಜ್ಞಃ** - ಬೃಹ-೧. ಭೋಗಗಳಲ್ಲಿರುವ ಆಸಕ್ತಿ, ೬೦, ೬೧.

**ಆಸ್ಪದ** - ಛಾಂ. ವಿಕಲ್ಪಗಳಿಗೆ ಆಧಾರ, (ಕಲ್ಪಿತವಾದ ಹಾವಿಗೆ ಹಗ್ಗದಂತೆ ಇರುವ ನಿಮಿತ್ತ), ೬೧೧, ೬೭೦.

**ಆಸ್ಪದಮ್** - ಮಾಂ. ಆರೋಪಿತವಾಗಿರುವ ಹಾವು, ಬೆಳ್ಳಿ - ಮುಂತಾದವಕ್ಕೆ ಆಧಾರವಾಗಿರುವ ಹಗ್ಗ, ಕಪ್ಪೆಯ ಚಿಪ್ಪು ಮುಂತಾದದ್ದು, ೪, ೩೫, ೧೧೪, ೧೭೭.

**ಆಸುರಃಪಕ್ಷಃ** - ಕಠ. ಆತ್ಮನು ಇಲ್ಲವೆಂಬ, ದೇಹಾಭಿಮಾನಿಗಳಾದವರಿಗೆ ಮೆಚ್ಚಾದ ಪಕ್ಷ, ೧೭೯.

**ಆಹಾರಶುದ್ಧಿಃ** - ಛಾಂ. ಆಹಾರದ ಎಂದರೆ ಶಬ್ದಾದಿವಿಷಯಗಳ ಜ್ಞಾನದ ಶುದ್ಧಿ, ರಾಗದ್ವೇಷಾದಿಗಳಿಲ್ಲದೆ ವಿಷಯಾನುಭವ, ೬೦೪.

# ಇ

**ಇಂದ್ರಃ** - ಬ್ರ.ಸೂ-೧. ಪ್ರತರ್ದನನಿಗೆ ಆತ್ಮವಿದ್ಯೆಯನ್ನು ಉಪದೇಶಿಸಿದ ದೇವತೆ, ೧೩೮, ೧೪೦ ; ಯಾಗದಲ್ಲಿ ಭಾಗವನ್ನು ವಹಿಸುವ ದೇವತೆ, ೨೮೨ ; ಸೇನಾಪತಿ ಮುಂತಾದ ಶಬ್ದದಂತೆ ಒಂದು ಸ್ಥಾನಕ್ಕೆ ಬಂದವನ ಹೆಸರು ೨೮೬ ; **ಪ್ರಶ್ನ.** ಪರಮೇಶ್ವರನು, ೩೨ ; **ತೈ.** ಒಡೆಯ (ಸರ್ವಕಾಮಗಳನ್ನೂ ಕೊಡುವ ಓಂಕಾರ) ೨೨ ; ದೇವತೆಗಳ ಒಡೆಯ ೧೪೧, ೧೯೫, ೨೦೧ ; ಸಗುಣಬ್ರಹ್ಮ ೪೨ ; **ಐತ.** ತನ್ನ ಸ್ವರೂಪವನ್ನು ನೇರಾಗಿ ಅರಿತುಕೊಂಡ ಪರಮಾತ್ಮ , ೫೮, ೮೭ ; ದೇವತೆಗಳ ಒಡೆಯ, ೮೭.

**ಇಂದ್ರಜಾಲಮ್** - ಭ.ಗೀ. ಕಣ್ಣುಕಟ್ಟು , ಹುಸಿತೋರಿಕೆಗೆ ದೃಷ್ಟಾಂತ, ೧೦೨೫.

**ಇಂದ್ರಿಯಾಣಿ** - ಬ್ರ.ಸೂ-೧. ಪ್ರತ್ಯಕ್ಷಕ್ಕೆ ಬೇಕಾದ ಶ್ರೋತ್ರಾದಿಗಳು ೫, ೨೦, ೧೨೨ ; ಬ್ರ.ಸೂ-೨. ಮುಖ್ಯಪ್ರಾಣನನ್ನುಳಿದು ಮಿಕ್ಕ ಪ್ರಾಣಗಳು. ಇವು ಹನ್ನೊಂದು, ೨-೧೮೩, ೧೮೫, ೨೦೦ ; ಇವು ಮುಖ್ಯಪ್ರಾಣಕ್ಕಿಂತ ಬೇರೆಯ ತತ್ತ್ವ ೨.೨೦೧ ; ಮನಸ್ಸೂ ಇಂದ್ರಿಯವೇ, ೨-೨೦೧ ರಿಂದ ೨೦೩ ; ಪ್ರತ್ಯಕ್ಷಾದಿವ್ಯವಹಾರಕ್ಕೆ ಇವು ಬೇಕು, ೧-೫ ; ಇವೇ ಆತ್ಮನೆಂದು ಕೆಲವರು, ೧-೨೦ ; ಸುಷುಪ್ತಿಯಲ್ಲಿ ಇವುಗಳ ವೃತ್ತಿಗಳು ಲುಪ್ತವಾದರೂ ಪ್ರಾಣವೃತ್ತಿಯಿರುತ್ತದೆ, ೧-೧೨೨ ; ಭೂತಗಳಿಗೆ ಇವೇ ಸಾರ, ೧-೧೨೨ ; ವಿಷಯೇಂದ್ರಿಯಗಳ ವ್ಯವಹಾರಕ್ಕೆ ಮನಸ್ಸು ಮೂಲ ; ಇವನ್ನು ಬಿಗಿಹಿಡಿದರೆ ಮೋಕ್ಷ , ೧-೩೩೬ ; ವಿಷಯವಿಶೇಷವನ್ನು ಅರಿಯುವದಕ್ಕೆ ಇವು ಬೇಕು, ೨-೧೨೪ ; ಬ್ರಹ್ಮವು ಇಂದ್ರಿಯಗಳಿಗೆ ವಿಷಯವಲ್ಲ, ೧-೨೯ ; ಅತೀಂದ್ರಿಯ ವಿಷಯಗಳನ್ನು ಶ್ರುತಿಯಿಂದಲೇ ಅರಿತುಕೊಳ್ಳಬೇಕಾಗಿದೆ, ೨-೪೦೨, ೪೬೩ ; **ಭ.ಗೀ.** ಶ್ರೋತ್ರಾದಿಗಳು, ೧೨೯, ೨೧೦, ೨೨೩, ೨೨೪, ೨೨೫, ೨೨೬, ೨೯೧, ೩೪೯, ೩೭೩, ೪೨೦, ೬೩೦ ; **ಶಾಂ. ನಿ.** ಶಬ್ದಾದಿಗಳನ್ನು ಅರಿಯುವ ಬುದ್ಧೀಂದ್ರಿಯಗಳು ಐದು, ವಚನಾದಿಗಳನ್ನು ಮಾಡುವ ಕರ್ಮೇಂದ್ರಿಯಗಳು ಐದು, ಮನಸ್ಸು ಒಂದು - ಹೀಗೆ ಹನ್ನೊಂದು ಕರಣಗಳು. (ಸೂ. ಭಾ. ೨-೪-೬, ೧೭).

**ಇಂದ್ರಿಯಾವಿಷಯ** - ಬ್ರ.ಸೂ-೧. ಇಂದ್ರಿಯಗಳಿಗೆ ಗೋಚರವಾಗದ (ಬ್ರಹ್ಮ), ೨೯.

**ಇತರೇತರಾಧ್ಯಾಸಃ, ಇತರೇತರಾಧ್ಯಾಸರೂಪಃ** ಬ್ರ.ಸೂ-೧. ಆತ್ಮಾನಾತ್ಮಗಳನ್ನು ಒಂದನ್ನೊಂದೆಂದು ತಪ್ಪಾಗಿ ತಿಳಿಯುವದು, ೫ ; ಭ.ಗೀ. ಒಂದರಲ್ಲಿ ಇನ್ನೊಂದನ್ನು ಭ್ರಾಂತಿಯಿಂದ ಹುಟ್ಟುಗಟ್ಟುವದು, ೭೬೦, ೮೨೬ ; ನೈ. ಆತ್ಮ, ಅನಾತ್ಮ ಇವೆರಡನ್ನೂ ಒಂದನ್ನೊಂದರಲ್ಲಿ ಅಧ್ಯಾಸಮಾಡಿಕೊಂಡಿರುವದು ಅವಿದ್ಯೆಯಿಂದಲೇ, ೨-೧೦೦, ೧೦೧.

**ಇತರೇತರಸ್ವಭಾವಾಪೇಕ್ಷಸಿದ್ಧ-** ನೈ. ದ್ವೈತವು ಒಂದನ್ನಾಶ್ರಯಿಸಿ ಒಂದು ಸಿದ್ಧ, ೨-೧೧೨.

**ಇತರೇತರಾಶ್ರಯತ್ವಮ್ -** ಬ್ರ.ಸೂ-೧. ಎರಡರಲ್ಲಿ ಒಂದು ಸಿದ್ಧವಾದರೇ ಮತ್ತೊಂದು ಸಿದ್ಧವಾಗುವದೆಂಬ ಅನ್ಯೋನ್ಯಾಶ್ರಯದೋಷ, ೫೮.

**ಇತರೇತರಾಭಾವಃ -** ಬೃ-೧. ಘಟದ ಅಭಾವವು ಪಟವೇ ಎಂಬಂತೆ ಒಂದಕ್ಕೊಂದು ಅಭಾವವಾಗಿರುವ, ಭಾವ, ೨೫..

**ಇದಂ ಜ್ಞಾನಮ್-** ನೈ. ಇದು ಎಂಬ ವಿಷಯಜ್ಞಾನವು ಭೇದಜ್ಞಾನವು, ೩.-೬ [illegible]ಜ್ಞಾನವು ಜ್ಞಾತೃವಿಗೆ ಆಗುತ್ತದೆಯಾದ್ದರಿಂದ ಸುಷುಪ್ತಿಯಲ್ಲಿರುವದಿಲ್ಲ, ೬.-೫೯, ೬೨; ಜ್ಞಾತೃವಿಗೆ ಉಪಕಾರಾದಿಗಳನ್ನು ಮಾಡುವದಿಲ್ಲವಾದ್ದರಿಂದ ಅಹಂಕಾರವು 'ಇದು' ಎಂದು ಮಾತ್ರವೇ ತಿಳಿಯಬರುತ್ತದೆ, ನನ್ನದು ಎಂದು ತಿಳಿಯಬರುವದಿಲ್ಲ, ೩.-೬೧.

**ಇದಮರ್ಥಃ -** ನೈ. ವಿಷಯವಾದ ಅನಾತ್ಮ, ಇದನ್ನು ಅನ್ವಯವ್ಯತಿರೇಕ-ದಿಂದ ಬಿಟ್ಟರೆ ನನ್ನನ್ನೇ ಬಿಟ್ಟಂತೆ ಎಂದು ಅಜ್ಞನು ತಿಳಿಯುತ್ತಾನೆ, ೪-೯.

**ಇದಂಶಬ್ದಬುದ್ಧೀ -** ಛಾಂ. ವ್ಯವಹಾರದಲ್ಲಿ ಆತ್ಮನ ವಿಷಯಕ್ಕೆ ಆಗಿರುವ ಇದು ಎಂಬ ಶಬ್ದಬುದ್ಧಿಗಳು, ೪೫೫.

**ಇಷ್ಟಾದಿಕಾರಿಣಃ -** ಬ್ರ.ಸೂ-೨. ಇಷ್ಟ, ಪೂರ್ತ, ದತ್ತ ಎಂಬ ಕರ್ಮಗಳನ್ನು ಮಾಡುವವರು ದೇಹಬೀಜದಿಂದೊಡಗೂಡಿ ಪರಲೋಕಕ್ಕೆ ಹೋಗುತ್ತಾರೆ, ೨-೨೨೦ ; ಇವರಿಂದ ದೇವತೆಗಳಿಗೆ ಉಪಭೋಗ, ೨-೨೨೨ ; ಆತ್ಮಜ್ಞರಲ್ಲದ್ದರಿಂದ - ಪರಮಾತ್ಮನನ್ನು ಅರಿಯದ್ದರಿಂದ ಅಥವಾ ಜ್ಞಾನಕರ್ಮ ಸಮುಚ್ಚಯವನ್ನು ಅನುಷ್ಠಾನಮಾಡಿಲ್ಲವಾದ್ದರಿಂದ - ದೇವತೆಗಳನ್ನು ಆಶ್ರಯಿಸಿಯೇ ಕರ್ಮಫಲವನ್ನುಣ್ಣುತ್ತಾರೆ, ೨-೨೨೨, ೨೨೩ ; **ಧೂಮಮಾರ್ಗ**ದಿಂದ ಚಂದ್ರಮಂಡಲಕ್ಕೆ ಹೋಗಿ ಭೋಗವನ್ನನುಭವಿಸಿ **ಅನುಶಯ**ದಿಂದೊಡಗೂಡಿ ಇಳಿಯುತ್ತಾರೆ, ೨-೨೨೬ ; ಇಷ್ಟಾದಿಕಾರಿಗಳು ಕೆಳಕ್ಕೆ ಇಳಿಯುವಾಗ ಆಕಾಶಾದಿಗಳಿಗೆ

ಸಮರಾಗಿರುತ್ತಾರೆ, ೨-೨೪೬ ; ವ್ರೀಹ್ಯಾದಿಗಳಲ್ಲಿ ಸಂಬದ್ಧರಾಗಿದ್ದು ಕಾಲಕ್ರಮದಲ್ಲಿ ಶರೀರವನ್ನು ಪಡೆಯುವರು, ೨-೨೫೦, ೨೫೨, ೨೫೩.

**ಇಷ್ಟಾನಿಷ್ಟಪ್ರಾಪ್ತಿಪರಿಹಾರೌ - ಬೃ-೧.** ಬೇಕಾದದ್ದನ್ನು ಪಡೆದುಕೊಳ್ಳುವದು, ಬೇಡದ್ದನ್ನು ತೊಲಗಿಸಿಕೊಳ್ಳುವುದು, ೩.,೫, ೩.೨೪.

**ಇಷ್ಟಾಪೂರ್ತಮ್ - ಪ್ರಶ್ನ.** ಯಾಗ, ಭಾವಿಯೇ ಮುಂತಾದವುಗಳನ್ನು ಕಟ್ಟಿಸುವದು ಇವು, ೧೩, ೨೧ ; **ಮುಂ.** ಶ್ರೌತಸ್ಮಾರ್ತಕರ್ಮಗಳು, ೪೧.

**ಇಷ್ಟಾಪೂರ್ತೇ - ಛಾಂ.** ಅಗ್ನಿಹೋತ್ರಾದಿವೈದಿಕಕರ್ಮಗಳು, ವಾಪೀಕೂಪಾದಿಗಳನ್ನು ಮಾಡುವದು - ಇವು, ೪೦೭.

**ಇಹಾಮುತ್ರಾರ್ಥಭೋಗವಿರಾಗಃ - ಬ್ರ.ಸೂ-೧.** ಈ ಲೋಕದ ಮತ್ತು ಪರಲೋಕದ ವಿಷಯಗಳನ್ನು ಅನುಭವಿಸುವದರಲ್ಲಿ ವೈರಾಗ್ಯ, ೧೩..

**ಇಹಾಮುತ್ರಾರ್ಥಾಃ, ಇಹಾಮುತ್ರಫಲಾನಿ - ಭ.ಗೀ.** ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಕರ್ಮಫಲವಾಗಿ ದೊರಕುವ ವಸ್ತುಗಳು ೩.೮೭, ೭೪೭.

# ಈ

**ಈಶ್ವರಃ - ಬ್ರ.ಸೂ-೧.** (೧) ಆಳುವವನೂ ಸ್ವತಂತ್ರನೂ ಆದ (ಪರಮಾತ್ಮ), ೨೬, ೬೯, ೭೦, ೭೧, ೧೧೬, ೧೫೯, ೧೬೨, ೧೭೬, ೧೯೫, ೨೦೬, ೨೩೦, ೨೩೧, ೪೦೧, ೪೦೨ ; (೨) ಗಟ್ಟಿಗ, ೨೯೪, ೩೯೦ ; **ಬ್ರ.ಸೂ-೨.** ಆಳುವವನು. ಈಶಃ, ಈಶಿತಾ, ಪರಮೇಶ್ವರಃ - ಇವೆಲ್ಲ ಪರಮಾತ್ಮನ ಹೆಸರುಗಳು. ಈಶ್ವರನೆಂಬ ಹೆಸರು ಅಪರಬ್ರಹ್ಮಕ್ಕೆ ಮೀಸಲೆಂಬುವರ ಮತವು ಸರಿಯಲ್ಲ (ಪೀಠಿಕೆ). ಈಶ್ವರನೆಂದರೆ ಸ್ವತಂತ್ರವಾದ ಜಗತ್ಕಾರಣವಾದ ಪರಬ್ರಹ್ಮವೇ, ೧-೨೬, ೬೭, ೬೯ ; ಈಶ್ವರನು ಸರ್ವಜ್ಞ, ಸರ್ವಶಕ್ತ, ೧-೬೯ ; ಅನಾವರಣಜ್ಞಾನವುಳ್ಳವನಾದ್ದರಿಂದ ಶರೀರಾದಿಗಳ ಅಪೇಕ್ಷೆಯಿಲ್ಲದೆ ಅರಿಯಬಲ್ಲನು, ೧-೭೦ ; ಈಶ್ವರಜೀವಭೇದವು ಉಪಾಧಿಕೃತ, ೧-೭೧ ; ಆದಿತ್ಯಾದಿಜೀವರುಗಳಿಗಿಂತ ಅಂತರ್ಯಾಮಿ ಬೇರೆ, ೧-೧೧೬ ; ಸರ್ವಗತನಾದ ಈಶ್ವರನು ಹೃದಯದಲ್ಲಿ ಉಪಾಸನೆಮಾಡಿದವರಿಗೆ ಪ್ರಸನ್ನನಾಗುವನು, ೧-೧೫೯ ; ಜೀವನಿಗೆ ಅವಿದ್ಯೆಯಿಂದಾದ ಉಪಭೋಗವು ಈಶ್ವರನಿಗೆ ತಟ್ಟುವದಿಲ್ಲ, ೧-೧೬೨, ೨- ೧೬೧ ; ಒಂದೇ ದೇಹದಲ್ಲಿ ಶಾರೀರ, ಈಶ್ವರ - ಇಬ್ಬರು ಆತ್ಮರು ಇರುವದು ಹೇಗೆಂಬ ಶಂಕೆ ಸರಿಯಲ್ಲ, ೧-೧೯೫ ; ಕ್ಷೇತ್ರಜ್ಞನಾದ ಜೀವನನ್ನು ಅನುವಾದಮಾಡಿಕೊಂಡು ಲೋಕದಲ್ಲಿ ಅಪ್ರಸಿದ್ಧನಾದ ಈಶ್ವರನನ್ನು ಶ್ರುತಿ ಹೇಳುತ್ತದೆ, ೧-೨೩೧ ; ಈಶ್ವರನು ಜಗತ್ಕಾರಣನೆನ್ನುವ

ಸ್ಮೃತಿಗಳು, ೧-೪೦೫ ; ಅವ್ಯಾಕೃತವು ಈಶ್ವರನನ್ನು ಆಶ್ರಯಿಸಿಕೊಂಡು ಅವನಿಗೇ ಉಪಾಧಿಯಾಗಿದೆ, ೧-೨೦೧, ೩.೩೯ ; ಈಶಿತ್ರೀಶಿತವ್ಯಭಾವವು ಈಶ್ವರನಲ್ಲಿ ಕಲ್ಪಿತ, ೧-೪೪೦ ; ಈಶ್ವರನಿಗೆ ವಿಷಮಸೃಷ್ಟಿಯನ್ನು ಮಾಡಿದ ದೋಷವಿಲ್ಲ, ೧-೪೭೨ ; ಈಶ್ವರನಿಗೆ ಪ್ರವೃತ್ತಿ, ಅಪ್ರವೃತ್ತಿ, ಎರಡೂ - ಹೊಂದುತ್ತವೆ, ೨-೧೨, ೧೩. ; ಮೋಕ್ಷವೂ ಎಲ್ಲಾವೇದಾಂತಗಳೂ ಅದ್ವಿತೀಯವಾದ ಈಶ್ವರನೇ ಜಗತ್ಕಾರಣನೆನ್ನುತ್ತಿವೆ, ೧-೩೬೬ ; ಸರ್ವವೇದಾಂತಗಳಲ್ಲಿಯೂ ವೇದ್ಯನೆಂದಿರುವದು ಅಸಂಸಾರಿಯಾದ ಈಶ್ವರನನ್ನೇ, ೨-೪೪೫ ; ತಾರ್ಕಿಕರು ಕಲ್ಪಿಸಿರುವ ಈಶ್ವರನು ಜಗತ್ಕಾರಣನಾಗಲಾರನು, ೨-೭೫ ರಿಂದ ೮೧ ; **ಈಶ.** ಪರಮಾತ್ಮನು, ೧೯ ; **ಮಾಂ.** ಜಗತ್ಕಾರಣನಾದ ಪರಮಾತ್ಮ, ೩.೧ ; ಅಂತಃಕರಣಸಾಕ್ಷಿಯಾದ ಪರಮಾತ್ಮ, ೭೩. ; ನಾರಾಯಣನು, ೨೧೪ ; **ತೈ.** ಪರಮೇಶ್ವರನು ೪೧, ೨೧೭ ; ಸ್ವತಂತ್ರನಾದ ೧೯೫ ; **ಐತ.** ಎಲ್ಲವನ್ನೂ ಆಳುವದಕ್ಕೆ ಶಕ್ತನಾದ ಪರಮಾತ್ಮ, ೩.೨., ೩.೬, ೪೩., ೪೫, ೪೬, ೪೭, ೫೪, ೮, ೮೮ ; ಒಡೆಯ, ೪೬, ೪೭, ೮೬.

**ಈಶ್ವರಃ, ಈಶ್ವರಸಾಕ್ಷೀ - ಬೃ-೨.** (೧) ಆಳುವ ಅಂತರ್ಯಾಮಿ, ನಿತ್ಯನಿರತಿಶಯಜ್ಞಾನಶಕ್ತ್ಯುಪಾಧಿಯುಳ್ಳ ಆತ್ಮ, ೭೦, ೮೫, ; (೨) ಸಮರ್ಥ, ೮೬ ; **ಭ.ಗೀ.** ಜಗತ್ತನ್ನು ಸೃಷ್ಟಿಸಿ ಆಳುವ ಪರಮಾತ್ಮ, ೫, ೮೧, ೮೯, ೯೪, ೨೫೦, ೪೬೦, ೪೭೧, ೪೯೧, ೫೫೭, ೫೬೧, ೬೨೧, ೭೨೪, ೭೩೩., ೭೫೩., ೭೫೮, ೭೬೯, ೮೦೭, ೮೦೮, ೮೨೮, ೯೧೬, ೯೫೦, ೯೯೫, ೧೦೪೬ ; **ಶಾಂ. ನಿ.** ಜಗತ್ಕಾರಣವಾಗಿರುವ ಪರಬ್ರಹ್ಮ, ಪರಮಾತ್ಮ. ಮಾಯಾ ವಿಶಿಷ್ಟವಾದ ಚೈತನ್ಯವು, ಅಥವಾ ಮಾಯಾಪ್ರತಿಬಿಂಬಿತಚೈತನ್ಯವು, ಅಥವಾ ಸಮಷ್ಟಿಕಾರಣಶರೀರೋಪಹಿತವಾದ ಚೈತನ್ಯವು ಈಶ್ವರನು - ಎಂಬ ಈಚಿನ ವ್ಯಾಖ್ಯಾನಕಾರರ ಮತವು ಭಾಷ್ಯದಲ್ಲಿಲ್ಲ.

**ಈಶ್ವರಕಾರಣಿನಃ - ಶಾಂ. ನಿ.** ಸರ್ವಜ್ಞನಾದ ಜೀವಭಿನ್ನನಾದ ಈಶ್ವರನು ಜಗತ್ತಿಗೆ ನಿಮಿತ್ತಕಾರಣಮಾತ್ರವೆಂದು ಅನುಮಾನದಿಂದ ಸಾಧಿಸುವ ತಾರ್ಕಿಕರು. (ಸೂ. ಭಾ. ೧-೧-೨).

**ಈಶ್ವರಪ್ರಸಾದಃ - ಭ.ಗೀ.** ಈಶ್ವರನು ಅನುಗ್ರಹಿಸುವದು, ೮೧.

**ಈಶ್ವರಾರಾಧನಮ್ - ಭ.ಗೀ.** ಕರ್ಮವನ್ನು ಮಾಡಿ ಈಶ್ವರನನ್ನು ಪೂಜಿಸುವದು, ೮೧, ೯೫.

**ಈಶ್ವರಭಾವನಾ, ಈಶ್ವರಾತ್ಮಭಾವನಾ - ಈಶ.** ಇದೆಲ್ಲವೂ ಆತ್ಮನೇ ಎಂದು ಚಿಂತಿಸುವದು, ೩,೪.

**ಈಶ್ವರಗೀತಾಃ** - ಬ್ರ.ಸೂ-೧. ಭಗವದ್ಗೀತೆಯ ಶ್ಲೋಕಗಳು, ೪೪೫.

**ಈಶ್ವರಸಂಸಾರಿಭೇದಃ** - ಬ್ರ.ಸೂ-೧.ಇವನು ಈಶ್ವರನು, ಇವರು ಜೀವರು- ಎಂಬ ಭೇದ, ೭೧.

**ಈಶ್ವರಾರ್ಪಿತಕರ್ಮಾಣಿ-ನೈ.** ಈಶ್ವರನಿಗೆ ಅರ್ಪಣೆಮಾಡಿದ ಕರ್ಮಗಳಿಂದ ಚಿತ್ತಶುದ್ಧಿ ೧-೪೭.

**ಈಶ್ವರಾಶ್ರಯ** - ಬ್ರ.ಸೂ-೧. ಪರಮಾತ್ಮನನ್ನು ಆಶ್ರಯಿಸಿಕೊಂಡಿರುವ (ಶಕ್ತಿ, ಅವ್ಯಾಕೃತ), ೨೦೧.

**ಈಶಿತ್ರೀಶಿತವ್ಯೇ** - ಬ್ರ.ಸೂ-೧. ಆಳುವವನು, ಆಳಲ್ಪಡತಕ್ಕದ್ದು, ೪೪೦.

# ಉ

**ಉತ್ತರೋ ಮಾರ್ಗಃ** - ಭ.ಗೀ. ಓಂಕಾರಧ್ಯಾಯಿಗಳು ಬ್ರಹ್ಮಲೋಕಕ್ಕೆ ಹೋಗುವ ಮಾರ್ಗ, ೫೩೪.

**ಉತ್ತರಃ ಪಂಥಾಃ** - ಬ್ರ.ಸೂ-೧. ಉಪಾಸಕರು ಹೋಗುವ ಉತ್ತರ ಮಾರ್ಗ, ದೇವಯಾನ, ೪೨.

**ಉತ್ಕ್ರಾಂತಿಃ** - ಬ್ರ.ಸೂ-೨. ಪ್ರಾಣಗಳು ಶರೀರವನ್ನು ಬಿಟ್ಟು ಹೋಗುವದು, ಸ್ವತಃ ಜೀವನಿಗೆ ಉತ್ಕ್ರಾಂತಿಯಿಲ್ಲ, ಉಪಾಧಿಯಿಂದಲೇ ಉತ್ಕ್ರಾಂತಿ, ೨-೧೩೮, ೧೯೩ ; ಉಪಾಸಕರಿಗೆ ದೇವಯಾನಮಾರ್ಗವು ಪ್ರಾರಂಭಿಸುವವರೆಗೆ ಉತ್ಕ್ರಾಂತಿಯು ಎಲ್ಲರಿಗೂ ಸಮಾನ, ೨-೫೪೭ ; ಬ್ರಹ್ಮಜ್ಞಾನಿಗೆ ಉತ್ಕ್ರಾಂತಿಯಿಲ್ಲ, ೨-೫೪೭ ರಿಂದ ೫೪೯, ೫೫೪ ರಿಂದ ೫೫೬ ; ಉತ್ಕ್ರಾಂತಿಕ್ರಮ, ೨-೫೩೯ ರಿಂದ ೫೪೬, ೫೪೯ ರಿಂದ ೫೫೨.

**ಉತ್ಕೃಷ್ಟಬ್ರಹ್ಮವಿದ್ಯಾ** - **ಕಠ.** ಹೆಚ್ಚಿನ ಬ್ರಹ್ಮದ ; ಪರಬ್ರಹ್ಮದ ವಿದ್ಯೆ , ೧೮೩.

**ಉತ್ಪಾದ್ಯಮ್** - **ಈಶ.** ಹುಟ್ಟಿಸತಕ್ಕದ್ದು ಕರ್ಮಫಲದ ನಾಲ್ಕು ರೂಪಗಳಲ್ಲಿ ಒಂದು, ೧ ; **ಮುಂ.** ಹೊಸದಾಗಿ ಉಂಟುಮಾಡತಕ್ಕದ್ದು, ನಾಲ್ಕು ಬಗೆಯ ಕರ್ಮದ ಕಾರ್ಯಗಳಲ್ಲಿ ಒಂದು, ೪೬.

**ಉತ್ಪಾದ್ಯಃ** - ಬ್ರ.ಸೂ-೧. ಉಂಟುಮಾಡತಕ್ಕ (ಗಡಿಗೆ ಮುಂತಾದದ್ದು), ಕರ್ಮದ ಕಾರ್ಯಗಳು ನಾಲ್ಕರಲ್ಲಿ ಒಂದು, ೪೮.

**ಉತ್ಪತ್ತ್ಯಾದಿಃ** ತೈ. ಉತ್ಪತ್ತಿ (ಹುಟ್ಟುವದು), ಸಂಸ್ಕಾರ (ಗುಣವನ್ನುಂಟುಮಾಡುವದು), ವಿಕಾರ (ಮಾರ್ಪಡಿಸುವದು), ಆಪ್ತಿ (ಹೊಸದಾಗಿ ಪಡೆಯುವದು) - ಎಂಬ ಕರ್ಮದ ನಾಲ್ಕು ಬಗೆಯ ಫಲ ೭೪ ; ಈಶ. ಹುಟ್ಟಿಸತಕ್ಕದ್ದು ; ಕರ್ಮಫಲದ ನಾಲ್ಕು ರೂಪಗಳಲ್ಲಿ ಒಂದು, ೧.

**ಉತ್ಪತ್ತಿಃ - ಶಾಂ. ನಿ.** (೧) ಸೃಷ್ಟಿ, ಸೃಷ್ಟಿಯನ್ನು ಹೇಳುವ ಶ್ರುತಿಯು ಏಕತ್ವವನ್ನು ತಿಳಿಸುವದಕ್ಕೆ ಸಾಧನವು. ಸೃಷ್ಟಿಯು ಪರಮಾರ್ಥವೆನ್ನುವದಕ್ಕೆ ಬಂದಿಲ್ಲ, ಮಾಂ. ಕಾ. ಭಾ. ೨-೩೨, ೩.-೧೪ ; ಸೂ. ಭಾ. ೪-೩.-೧೪ ; (೨) ಕರ್ಮದ ಕಾರ್ಯದ ನಾಲ್ಕು ರೂಪಗಳಲ್ಲಿ ಒಂದು. ತೈ. ಭಾ. ೧-೧೧, ಮುಂ. ಭಾ. ೨-೧-೧೨, ಬೃ. ಭಾ. ೩.-೩-೧. ಮುಕ್ತಿಯು ಉತ್ಪಾದ್ಯವೇ ಮುಂತಾದ ನಾಲ್ಕು ರೂಪಗಳಿಲ್ಲದ್ದಾದ್ದರಿಂದ ಅದು ಕರ್ಮಕಾರ್ಯವಲ್ಲ ಎಂದು ಮೇಲೆ ಹೇಳಿದ ಉಪನಿಷತ್ತುಗಳಲ್ಲಿಯೂ ಸೂ. ಬಾ. ೧-೧-೪ ದಲ್ಲಿಯೂ ಭಾಷ್ಯಕಾರರು ಬರೆದಿರುತ್ತಾರೆ.

**ಉತ್ಪತ್ತಿಸ್ಥಿತಿಪ್ರಲಯಾದಿಕಲ್ಪನಾ - ಬೃಹ-೨.** ನಿರ್ವಿಶೇಷಾತ್ಮೈಕತ್ವವನ್ನು ತಿಳಿಸುವದಕ್ಕೆ ಕಲ್ಪಿಸಿರುವ ಸೃಷ್ಟ್ಯಾದಿಗಳು, ೩೨೧.

**ಉತ್ಪತ್ತ್ಯಾಪ್ತಿವಿಕಾರಸಂಸ್ಕಾರಾಃ - ಬೃಹ-೨.** ಹುಟ್ಟಿಸುವದು, ಪಡೆಯಿಸುವದು, ಮಾರ್ಪಡಿಸುವದು, ಶುದ್ಧಿಗೊಳಿಸುವದು - ಎಂಬ ಕರ್ಮದ ಕಾರ್ಯಗಳು, ೩೧,

**ಉತ್ತರಾಯಣಃ - ಪ್ರಶ್ನ.** ಉತ್ತರಾಯಣಮಾರ್ಗದಿಂದ ಹೋಗಿ ಪಡೆಯುವ (ಪ್ರಾಣಾತ್ಮಭಾವ), ೨೨.

**ಉತ್ತರಾಯಣಮ್ - ಮುಂ.** ಉಪಾಸಕರು ದೇವಲೋಕಕ್ಕೆ ಹೋಗುವ ಮಾರ್ಗ, ೪೨ ; **ಶಾಂ. ನಿ.** (೧) ಉತ್ತರದ ಕಡೆಗೆ ಸೂರ್ಯನು ತಿರುಗುವ ಅಯನ ; ಆಗ ಕರ್ಮ ಮತ್ತು ಉಪಾಸನೆಗಳ ಸಮುಚ್ಚಯವನ್ನು ಅನುಷ್ಠಾನ ಮಾಡಿದವರಿಗೆ ಫಲವನ್ನು ಸೂರ್ಯನು ಕೊಡುತ್ತಾನೆ. ಪ್ರ. ಭಾ. ೧-೯ ; (೨) ದೇವಯಾನವೆಂಬ ಮಾರ್ಗದಲ್ಲಿ ಉಪಾಸಕನಿಗೆ ದೊರಕುವ ದೇವತೆ, ಗೀ. ಭಾ. ೮-೨೩, ಸೂ. ಭಾ.

**ಉತ್ತರಃ ಪನ್ಥಾಃ, ಉತ್ತರೋ ಮಾರ್ಗಃ - ಶಾಂ. ನಿ.** ಉಪಾಸಕರು ಬ್ರಹ್ಮಲೋಕಕ್ಕೆ ಹೋಗುವ ಮಾರ್ಗ. ಛಾಂ. ಭಾ. ೫-೧-೮೨, ಗೀ. ಭಾ. ೮-೨೩.

**ಉದ್ಗಾತೃಪುರುಷಾಃ - ಛಾಂ.** ಉದ್ಗಾತೃವಿನ ಜೊತೆಯಲ್ಲಿರುವ ಗಾತೃಗಳು, ೧೧೪.

**ಉದ್ಗೀಥಃ - ಛಾಂ.** ಸಾಮದಲ್ಲಿ ಉದ್ಗಾತೃವು ಮಾಡುವ ಗಾನಭಾಗ, ೧೦೧ ; ಉದ್ಗೀಥದ ಅವಯವವಾದ ಓಂಕಾರ, ೭, ೯, ೧೧, ೨೯, ೩೬.

**ಉಪಕರಣಮ್ - ಬ್ರ.ಸೂ-೧.** ಉಪಕಾರವನ್ನು ಮಾಡುವ ಸಾಧನ, ೨೦ ; ಅಧೀನವಾಗಿರುವದು, ೪೧೧.

**ಉಪಕ್ರಮಃ - ಬ್ರ.ಸೂ-೧.** ವಾಕ್ಯದ ಮೊದಲಿರುವದು. (ತಾತ್ಪರ್ಯಕ್ಕೆ ಗುರುತು), ೧೨೦, ೨೫೮, ೩೭೨.

**ಉಪಕ್ರಮೋಪಸಂಹಾರೌ - ಬ್ರ.ಸೂ-೧.** ವಾಕ್ಯದ ಮೊದಲು, ಕೊನೆ. ಪ್ರಕರಣದ ಮೊದಲೂ ಕೊನೆಯಲ್ಲಿಯೂ ಅದೇ ವಿಷಯವಿರುವದೆಂಬುದೊಂದು ತಾತ್ಪರ್ಯಕ್ಕೆ ಗುರುತು. ೧೪೨, ೧೪೪, ೩೬೭, ೩೭೪, ೩೭೫ ; **ಬೃಹ-೧.** ತಾತ್ಪರ್ಯವನ್ನು ಗೊತ್ತುಪಡಿಸುವದಕ್ಕೆ ಗುರುತುಗಳಾಗಿರುವ ಪ್ರತಿಪಾದನೆಯ ಮೊದಲುಕೊನೆಗಳು, ೧೫೭, ೩೧೬.

**ಉಪಕುರ್ವಾಣಃ, ಉಪಕುರ್ವಾಣಕಃ - ಛಾಂ.** ಗುರುವಿನ ಬಳಿಯಲ್ಲಿ ಅಧ್ಯಯನಕ್ಕಾಗಿರುವ ಬ್ರಹ್ಮಚಾರಿ, ನೈಷ್ಠಿಕನಲ್ಲ, ೧೭೬, ೪೦೨, ೬೮೯.

**ಉಪಗಮನಕೀರ್ತನಮ್ - ಬೃಹ-೨.** ಸೇವಾದಿಗಳನ್ನು ಮಾಡದೆ, ಶಿಷ್ಯನಾಗಿದ್ದೇನೆಂದು (ಬ್ರಾಹ್ಮಣಾದಿಗಳು ಕೆಳಗಿನ ವರ್ಣದವರಿಗೆ) ಬಾಯಲ್ಲಿ ಹೇಳುವದು, ೪೩೭.

**ಉಪಚಾರಃ - ಬ್ರ.ಸೂ-೧.** ಗೌಣವಾಗಿ ಕರೆಯುವದು, ೭೩..

**ಉಪದೇಶಃ - ಶಾಂ. ನಿ.** ಶಾಸ್ತ್ರಾಚಾರ್ಯರ ಉಪದೇಶವು ಬ್ರಹ್ಮಾನುಭವಕ್ಕೆ ಕಾರಣವೆಂದು ಗೀ. ಭಾ. ೨-೨೧, ಕ. ಭಾ. ೨-೧-೧೧, ಮುಂ. ಭಾ. ೨-೨-೭ ಮುಂತಾದ ಕಡೆಗಳಲ್ಲಿ ಭಾಷ್ಯಕಾರರು ಒತ್ತಿ ಹೇಳಿರುತ್ತಾರೆ.

**ಉಪನಿಷತ್ - ಕೇನ.** ಬ್ರಹ್ಮವಿದ್ಯೆ, ೮೧, ೮೫, ೮೬ ; ಉಪಾಸನೆ ೬೪ ; ಬ್ರಹ್ಮವಿದ್ಯೆಯನ್ನು ಎಂದರೆ ಜ್ಞಾನೋಪಾಸನೆಗಳನ್ನು ತಿಳಿಸುವ ಗ್ರಂಥ, ೧ ; **ಕಠ.** ಬ್ರಹ್ಮಜ್ಞಾನ, ೨, ೩ ; ಅಗ್ನಿವಿದ್ಯೆ , ವಿರಾಡುಪಾಸನೆ, ೪ ; ಪರಾಪರಬ್ರಹ್ಮಜ್ಞಾನವನ್ನು ತಿಳಿಸುವ ಗ್ರಂಥ, ೫ ; **ಮುಂ.** ಬ್ರಹ್ಮವಿದ್ಯೆ , ೬ ; ಈ ವಿದ್ಯೆಯನ್ನು ತಿಳಿಸುವ ಗ್ರಂಥ, ೧, ೬, ೧೭ ; **ತೈ.** ರಹಸ್ಯವಾದ ಬ್ರಹ್ಮವಿದ್ಯೆ ೧೦, ೧೨, ೧೫, ೨೨೭, ೨೬೨ ; ಈ ವಿದ್ಯೆಯನ್ನು ತಿಳಿಸುವ ಗ್ರಂಥ ೧೨ ; **ಛಾಂ.** ಆತ್ಮನ ವಿಷಯದ (ತಪ್ಪು) ತಿಳಿವಳಿಕೆ,

೬೫೬, ೬೫೭ ; ಆತ್ಮಜ್ಞಾನವನ್ನು ತಿಳಿಸುವ ಗ್ರಂಥ, ೧ ; **ಬೃಹ-೧.** ಸಂಸಾರವನ್ನು ಕಳೆಯುವ ಬ್ರಹ್ಮ ವಿದ್ಯೆ, ೨ ; ಬ್ರಹ್ಮವಿದ್ಯೆಯನ್ನು ತಿಳಿಸುವ ಗ್ರಂಥ, ೨, ೫, ೧೪೯ ; ರಹಸ್ಯವಾದ ಹೆಸರು, ೩೦೪, ೩೦೫ ; **ಬೃಹ-೨.** ಶಾಸ್ತ್ರೀಯವಾದ ರಹಸ್ಯವಾದ ಹೆಸರು, ೧೪೩, ೧೪೭ ; **ಶಾಂ. ನಿ.** (೧) ವಿರಾಟ್ಪುರುಷನನ್ನು ತಿಳಿಸುವ ಅಗ್ನಿ ವಿದ್ಯೆ. ಈ ಲೋಕದಲ್ಲಿ ಉಂಟಾಗುವ ಗರ್ಭವಾಸಜನ್ಮಜರಾದಿಗಳನ್ನು ನಾಶ ಮಾಡುವದರಿಂದ ಇದು 'ಉಪನಿಷತ್ತು' ಎನಿಸಿದೆ ; (೨) ಯಾರು ಇದರ ಬಳಿಗೆ ಬಂದು (ಉಪ), ನಿಶ್ಚಯದಿಂದ (ನಿ) ಇದನ್ನು ಪರಿಶೀಲಿಸುವರೋ ಅವರ ಅವಿದ್ಯಾದಿಗಳನ್ನು ನಾಶಮಾಡುವದರಿಂದ ಬ್ರಹ್ಮಜ್ಞಾನವು ಅಥವಾ ಬ್ರಹ್ಮವಿದ್ಯೆಯು ಉಪನಿಷತ್ ಎನಿಸುವದು. ಕ. ಭಾ. ಮತ್ತು ಮುಂ. ಭಾ.ಗಳ ಅವತರಣಿಕೆಯನ್ನು ನೋಡಿ. ಈ ವಿದ್ಯೆಯನ್ನು ಹೇಳುವ ಗ್ರಂಥವನ್ನೂ ಉಪನಿಷತ್ತೆಂದು ಕರೆಯುವದು ಉಪಚಾರಕ್ಕೆ; (೩) ಅಭಿಧಾಯಕವಾದ ಶಬ್ದವು. ಬೃ. ಭಾ. ೨-೧-೨೦.

**ಉಪಪತ್ತಿಃ, (ಮಹಾನ್) ತರ್ಕಃ** ಬೃಹ-೨. ಆಗಮಕ್ಕೆ ಸಹಾಯಕವಾಗಿರುವ ಯುಕ್ತಿ. ೧, ೧೫೭.

**ಉಪಮಾನೋಪಮೇಯಭಾವಃ** - ಬ್ರ.ಸೂ-೧. ಒಂದಕ್ಕೊಂದು ಹೋಲಿಸುವದು, ೨೫೬.

**ಉಪರತಕರಣಃ** ಬೃಹ-೧. ಕರಣಗಳು ವ್ಯಾಪಾರಮಾಡದೆ ಇರುವ ಸುಷುಪ್ತಿ, ೨೮೧.

**ಉಪರತದರ್ಪಾದಿದೋಷಃ** - ಮುಂ. ಹೆಮ್ಮೆಯೇ ಮುಂತಾದ ದೋಷಗಳನ್ನು ಬಿಟ್ಟುಳಿದ ಶಿಷ್ಯ, ೪೮.

**ಉಪಲಬ್ಧಿಃ, ಉಪಲಮ್ಭಃ** - ಬ್ರ.ಸೂ-೨. ಅರಿಯುವಿಕೆ, ಜೀವನು ಅರಿಯುವ ಕರ್ತೃವಾದರೂ ಇಷ್ಟವನ್ನೂ ಅನಿಷ್ಟವನ್ನೂ ಅರಿಯುತ್ತಾನೆ, ೨-೧೪೮; ಅಂತಃಕರಣವೆಂಬ ಉಪಾಧಿಯನ್ನು ಅಂಗೀಕರಿಸದಿದ್ದರೆ ಯಾವಾಗಲೂ ಉಪಲಬ್ಧಿಯಾಗಬೇಕು, ಅಥವಾ ಆಗದೆ ಇರಬೇಕು, ೨-೧೮೩ ; ಅರ್ಥದ ಉಪಲಬ್ಧಿಯಾಗುತ್ತಿರುವದರಿಂದ ಅದು ವಿಜ್ಞಾನಕ್ಕಿಂತ ಬೇರೆಯಿಲ್ಲವೆಂಬುದು ಸರಿಯಲ್ಲ, ೨-೫೮ ; ವಿಷಯವು ಪ್ರತ್ಯಯಕ್ಕೆ ಉಪಾಯವಾಗಿರುವದರಿಂದ ಎರಡರ ಉಪಲಂಭವೂ ಜೊತೆಯಲ್ಲಿ ಆಗುತ್ತದೆ, ೨-೫೮; ವಾಸನಾವೈಚಿತ್ರ್ಯದಿಂದಲೇ ಜ್ಞಾನವೈಚಿತ್ರ್ಯವೆನ್ನುವವರ ಮತದಲ್ಲಿ ವಾಸನೆಯ ಉಪಲಬ್ಧಿಯೇ ಇಲ್ಲ, ೨-೬೨.

**ಉಪಲಕ್ಷಣಮ್** - ಕೇನ. ಒಂದು ಪದಾರ್ಥವನ್ನು ಇನ್ನೂ ಕೆಲವನ್ನೂ ಗ್ರಹಿಸಬೇಕೆಂಬುದಕ್ಕೆ ಗುರುತಾಗಿ ಹೆಸರಿಸಿರುವದು, ೬೯, ೮೭.

**ಉಪಸನ್ನಃ** - ಪ್ರಶ್ನ. ಶಿಷ್ಯವೃತ್ತಿಗಾಗಿ ಗುರುವಿನ ಬಳಿಗೆ ಬಂದವನು, ೨, ೮೮.

**ಉಪಸನ್ನ, ಉಪಗತ** - ತೈ. ಭಕ್ತಿಯಿಂದ ಸಮೀಪಿಸುವದು ೨೨೯, ೨೩೦.

**ಉಪಸಂಹೃತಕರಣಃ** - ಮುಂ. ಇಂದ್ರಿಯಗಳನ್ನು ಒಳಕ್ಕೆಳೆದುಕೊಂಡ ಮುಮುಕ್ಷು, ೧೦೫.

**ಉಪಸದನವಿಧಿಃ** - ಮುಂ. ಗುರುವಿನ ಬಳಿಗೆ ಪೂಜ್ಯಬುದ್ಧಿಯಿಂದ ವಿದ್ಯೆಗಾಗಿ ಬರುವ ಕ್ರಮವನ್ನು ತಿಳಿಸುವ ವೇದವಚನ, ೧೦.

**ಉಪಾದಾನಮ್** - ಬ್ರ.ಸೂ-೧. ಸುಖದುಃಖಕಾರಣ, ೪೨೬, ವಾಕ್ಯ-ತಾತ್ಪರ್ಯವೆಂದು ಸ್ವೀಕರಿಸತಕ್ಕದ್ದು, ೧೫೦.

**ಉಪಾದಾನಕಾರಣಮ್** - ಬ್ರ.ಸೂ-೧. ಯಾವದನ್ನು ತೆಗೆದುಕೊಂಡರೇ ಕಾರ್ಯವಾಗುವದೋ ಆ ಕಾರಣ, ೩೯೦, ೩೯೧, ೩೯೩, ೩೯೫, ೩೯೭ ; ಬ್ರ.ಸೂ-೨. ಕಾರ್ಯವಾಗುವದಕ್ಕೆ ಯಾವದನ್ನು ಅವಶ್ಯವಾಗಿ ತೆಗೆದುಕೊಳ್ಳಬೇಕಾಗುವದೋ ಆ ಕಾರಣ, ಇದಕ್ಕೆ ಪ್ರಕೃತಿಯೆಂದೂ ಹೆಸರು. ಸಾಂಖ್ಯರು ಪ್ರಧಾನವೇ ಜಗತ್ತಿಗೆ ಉಪಾದಾನಕಾರಣವೆನ್ನುವರು, ೧-೩೯ ; ವೈಶೇಷಿಕರು ಅಣುಗಳು ಸಮವಾಯಿಕಾರಣ ಎಂದರೆ ಉಪಾದಾನಕಾರಣ ಎನ್ನುವರು, ೧-೬೪ ; ಚೇತನವಾದ ಬ್ರಹ್ಮವೇ ಜಗತ್ತಿಗೆ ಉಪಾದಾನಕಾರಣವೆಂದು ವೇದಾಂತಿಗಳು, ೧-೩೯೧ ; ಬ್ರಹ್ಮೋಪಾದಾನಕಾರಣವಾದಿಗಳಿಗೆ ಶ್ರುತಿಯು ಪ್ರಮಾಣ, ೧-೩೯೧ ರಿಂದ ೩೯೬ ; ಭ.ಗೀ. ಯಾವ ಕಾರಣವು ಕಾರ್ಯದ ಆಕಾರವಾಗಿ ಪರಿಣಮಿಸುವದೋ ಅದು, ೮೯೪ ; ಶಾಂ. ನಿ. ಯಾವದನ್ನು ತೆಗೆದುಕೊಂಡರೇ ಕಾರ್ಯ ವಾಗುವದೋ ಅದು ; ಮಣ್ಣು, ಸುವರ್ಣ-ಮುಂತಾದವುಗಳು ಮಡಕೆ, ಒಡವೆಗಳು - ಇವುಗಳಿಗೆ ಉಪಾದಾನಕಾರಣವು. ಸೂ. ಭಾ. ೧-೪-೨೩, ೨-೧-೧, ಇಲ್ಲದಿರುವ ಮಡಕೆ, ಒಡವೆ-ಮುಂತಾದವು ಹೊಸದಾಗಿ ಹುಟ್ಟಿ ಕಾರಣದೊಡನೆ ಸಮವಾಯಸಂಬಂಧದಿಂದ ಸೇರಿಕೊಳ್ಳುವವೆಂದೂ ಮಣ್ಣು ಮುಂತಾದವು ಸಮವಾಯಿಕಾರಣಗಳೆಂದೂ ಹೇಳುವ ವೈಶೇಷಿಕರ ಮತವನ್ನು ಆಚಾರ್ಯರು ಖಂಡಿಸಿರುತ್ತಾರೆ. ಸೂ. ಭಾ.-೨-೧-೧೮ ; ಗೀ. ಭಾ. ೧೮-೪೮.

**ಉಪಾದೇಯಮ್** - ಕೇನ. ಬೇಕೆಂದು ತೆಗೆದುಕೊಳ್ಳತಕ್ಕದ್ದು, ವ್ಯಾಕೃತ, ೨೮, ೩೯.

**ಉಪಾಧ್ಯಾಯಃ** - ಬ್ರ.ಸೂ-೧. ಕಲಿಸುವವ, (ಉಪಾಧ್ಯಾಯನ ಪ್ರಕರಣದಲ್ಲಿ 'ಈತನು' ಎಂದರೆ ಉಪಾಧ್ಯಾಯನೆಂದಾಗುವಂತೆ, 'ಏಷಃ' ಎಂಬುದು ಪ್ರಕೃತಪರಾಮರ್ಶಕ), ೨೦೩..

**ಉಪಾಧ್ಯವಿವೇಕತಾ** - ಬ್ರ.ಸೂ-೧. ಉಪಾಧಿಯಿಂದ ವಿಂಗಡಿಸಿಕೊಳ್ಳದೆ ಇರುವಿಕೆ, ೪೫೬.

**ಉಪಾಧಿಃ** - ಬ್ರ.ಸೂ-೨. ವಸ್ತುವಿನ ಬಳಿಯಲ್ಲಿಯೇ ಇದ್ದು ಅದರ ಸ್ವರೂಪಕ್ಕೆ ಸೇರಿಕೊಳ್ಳದೆ ಅದರಲ್ಲಿ ಹೆಚ್ಚುಕಡಿಮೆಯನ್ನು ತೋರಿಸುವ ಸುತ್ತುಗಟ್ಟು. ನಾಮರೂಪಗಳೆಂಬ ಉಪಾಧಿಯಿಂದ ಈಶ್ವರ, ನಾಮರೂಪಕೃತಕಾರ್ಯಕರಣ ಸಂಘಾತವೆಂಬ ಉಪಾಧಿಯಿಂದ ಜೀವ-ಹೀಗೆ ಒಂದೇ ತತ್ತ್ವದಲ್ಲಿ ಎರಡು ಭೇದಗಳು ಕಾಣುವವು, ೧-೪೪೦ ; ಜೀವರಿಗೆ ಉಪಾಧಿಗಳೆರಡೂ ತೊಲಗಿದರೆ ತನ್ನ ಸ್ವರೂಪವಾದ ಆತ್ಮನಲ್ಲಿ ಲಯ, ೧-೮೫, ೨-೨೬೬, ೩೧೦, ೩೧೧ ; ಜೀವನು ಉಪಾಧಿತಂತ್ರನು, ೨-೧೬೭, ೨೦೭ ; ವೇದಾಂತವಾಕ್ಯಗಳು ಸೋಪಾಧಿಕವಾಗಿ ಉಪಾಸ್ಯಬ್ರಹ್ಮವನ್ನೂ ನಿರುಪಾಧಿಕವಾಗಿ ಜ್ಞೇಯಬ್ರಹ್ಮವನ್ನೂ ತಿಳಿಸುತ್ತವೆ, ೧-೯೦ ; ಉಪಾಧಿದ್ವಾರದಿಂದ ತಿಳಿಸುವಾಗಲೂ ಜ್ಞಾನವಾಕ್ಯಗಳಲ್ಲಿ ಉಪಾಧಿಗಳು ವಿವಕ್ಷಿತವಲ್ಲ, ೧-೯೨, ೯೩ ; ಉಪಾಧಿಕೃತವಿಶೇಷಗಳಿಂದ ಬ್ರಹ್ಮವೇ ಜೀವನೆನಿಸಿರುವದು, ೧-೧೪೩, ೨೫೦, ೨-೨೭೨; ಜ್ಞಾನಕ್ರಿಯಾಶಕ್ತಿಗಳ ಆಶ್ರಯವಾದ ಬುದ್ಧಿಪ್ರಾಣಗಳೆರಡೂ ಪ್ರತ್ಯಗಾತ್ಮನಿಗೆ ಉಪಾಧಿಗಳು, ೧-೧೪೩ ; ನಿರತಿಶಯೋಪಾಧಿಗಳಿಂದೊಡಗೂಡಿದ ಈಶ್ವರನು ನಿಹೀನೋಪಾಧಿಗಳ ಜೀವರನ್ನು ಆಳುತ್ತಾನೆ, ೨-೧೬೦ ; ಈಶ್ವರನಿಗೆ ಉಪಾಧಿಯಿಂದಲೂ ಸವಿಶೇಷತ್ವವಿಲ್ಲ, ಏಕೆಂದರೆ ಉಪಾಧಿಗಳು ಅವಿದ್ಯಾಕಲ್ಪಿತವಾಗಿವೆ, ೨-೨೭೭ ; ಉಪಾಧಿಗಳ ಸಂಬಂಧದಿಂದ ಈಶ್ವರನು ಬೇರೆ ಬೇರೆ ಆಕಾರವನ್ನು ಪಡೆದಂತೆ ತೋರುತ್ತಾನೆ, ಅದನ್ನಾಶ್ರಯಿಸಿ ಆಕಾರವಿಶೇಷಗಳನ್ನು ಉಪಾಸನೆಗಾಗಿ ಉಪದೇಶಿಸಿದೆ, ೨-೨೮೨ ಅವಿಕೃತವಾದ ಬ್ರಹ್ಮವು ಉಪಾಧಿಗಳನ್ನನುಸರಿಸಿ ಅವುಗಳ ಧರ್ಮವನ್ನು ಪಡೆದಿರುವಂತೆ ಕಾಣಿಸುತ್ತದೆ, ೨-೨೮೭ ; ಬ್ರಹ್ಮವು ಪರ, ಅಪರ - ಎಂದು ಎರಡು ವಿಧವಾಗಿರುವದು ಉಪಾಧಿಯಿಂದ, ೨-೫೮ ; **ಈಶ.** ತಾನು ವಸ್ತುವಿನ ಭಾಗವಾಗಿರದೆ ಅದರಲ್ಲಿಲ್ಲದ ಧರ್ಮವನ್ನು ತೋರುವಂತೆ ಮಾಡುವ ವಸ್ತು. ಆತ್ಮನಿಗೆ ಅವನಲ್ಲಿಲ್ಲದ ಧರ್ಮವನ್ನು ಗಂಟುಹಾಕಿ ತೋರಿಸುವ ಶರೀರ, ಇಂದ್ರಿಯ, ಪ್ರಾಣ, ಮನಸ್ಸು - ಇವುಗಳು ಅವನ ಉಪಾಧಿಯಾಗಿರುವವು, ೧೧ ; **ಕೇನ.** ವಸ್ತುವಿನಲ್ಲಿ ತಾನು ಸೇರಿಕೊಂಡಿರದೆ ಅದರಲ್ಲಿಲ್ಲದ ಧರ್ಮವನ್ನು

ಇರುವಂತೆ ತೋರಿಸಬಲ್ಲ ವಸ್ತು ; ಆತ್ಮನಲ್ಲಿಲ್ಲದ ಧರ್ಮವನ್ನು ತೋರಿಸುವ ಶರೀರಾದಿಗಳು, ೨೩, ೩೩, ೪೨, ೪೩, ೫೬, ೭೮ ; **ಪ್ರಶ್ನ.** ವಸ್ತುಸ್ವರೂಪಕ್ಕೆ ಸಂಬಂಧಪಡದೆ ಅದನ್ನು ಗುರುತಿಸುವದಕ್ಕೆ ಉಪಯೋಗವಾಗುವ ಸುತ್ತುಗಟ್ಟು, (ಉದಾಹರಣೆಗೆ ಆತ್ಮನಿಗೆ ದೇಹ ಪ್ರಾಣಗಳು), ೬೨, ೬೭, ೬೯, ೭೪ ; **ತೈ.** ವಸ್ತುಸ್ವರೂಪದಲ್ಲಿ ಸೇರದೆ ಅದನ್ನು ತಿಳಿಸಿಕೊಡುವ ವಸ್ತು ೯೦, ೧೦೯ ; **ಬೃಹ-೧.** ಆತ್ಮನನ್ನು ತಿಳಿಯುವದಕ್ಕೆ ಸಾಧನವಾಗಿರುವ ಸುತ್ತುಗಟ್ಟು ; ಶರೀರ, ಇಂದ್ರಿಯ, ಪ್ರಾಣ, ಬುದ್ಧಿ ಮುಂತಾದದ್ದು, ೧, ೩, ೧೨೫ ; **ಬೃಹ-೨.** ವಸ್ತುವನ್ನು ಬೇರೆಯೆಂದು ತೋರಿಸುವ ವಸ್ತ್ವಂತರ, ಆತ್ಮನನ್ನು ಬೇರೆಯಾಗಿ ತೋರಿಸುವ ಬಂಧಕವಾದ ದೇಹಾದಿರೂಪದ ಸುತ್ತುಗಟ್ಟು, ೫೪, ೧೩೯. ಉಪಾಸನೆಗಾಗಿ ಬ್ರಹ್ಮದಲ್ಲಿ ಹೇಳಿರುವ ಉಪಾಧಿ, ೩೭೭, ೩೮೯ ; **ಭ.ಗೀ.** ತಾನು ವಸ್ತುವಿನಲ್ಲಿ ಸೇರದೆ ಅದರ ತಿಳಿವಳಿಕೆಯನ್ನು ಮಾಡಿಕೊಡುವದಕ್ಕೆ ಸಾಧನವಾಗುವ ವಸ್ತು ೭೯೬, ೭೯೭, ೭೯೮, ೭೯೯, ೯೦೦, ೯೧೬ ; **ಕಠ.** ಆತ್ಮನಲ್ಲಿಲ್ಲದ ಧರ್ಮವನ್ನು ಇರುವಂತೆ ತೋರಿಸುವದಕ್ಕೆ ಕಾರಣವಾಗಿರುವ ದೇಹಾದಿಗಳು, ೭೭, ೮೭, ೮೯, ೧೨೫, ೧೨೮, ೧೩೧, ೧೫೨, ೧೮೦ ; **ಶಾಂ.** ನಿ. ಹತ್ತಿರವಿರುವದರಿಂದ ತನ್ನ ಸ್ವಭಾವವನ್ನು ಮತ್ತೊಂದರಲ್ಲಿ ತೋರಿಸುವ ಪದಾರ್ಥ. ಜೀವಾತ್ಮನಿಗೆ ದೇಹ, ಇಂದ್ರಿಯಗಳು, ಪ್ರಾಣ, ಮನಸ್ಸು- ಇವು ಉಪಾಧಿಗಳು. ಸೂ. ಭಾ. ೧-೧-೫, ೧-೧-೧೭, ೧-೧-೩೧, ೧-೩,೧೯. ಈ ಉಪಾಧಿಗಳು ಅವಿದ್ಯೆಯಿಂದ ಕಲ್ಪಿತವಾಗಿರುತ್ತವೆ. ಪರಮಾರ್ಥವಲ್ಲ, ಸೂ. ಭಾ. ೩-೨-೧೫.

**ಉಪಾಧಿಕೃತ - ಮಾಂ.** ಉಪಾಧಿಗಳಿಂದ ತೋರುವ, ೧೩೪, ೧೪೦.

**ಉಪಾಧಿಜನಿತವಿಶೇಷಃ - ಬ್ರ.ಸೂ-೧.** ತನ್ನಲ್ಲಿ ವಿಶೇಷವಿಲ್ಲದಿದ್ದು ಉಪಾಧಿಯಿಂದ ಆಗಿರುವ ವಿಶೇಷ, ೬೨೬.

**ಉಪಾಧಿದ್ವಯಮ್ - ಬ್ರ.ಸೂ-೧.** ಎಚ್ಚರದ ಮನೋವೃತ್ತಿಗಳು, ಅವುಗಳ ವಾಸನೆ - ಎಂಬ ಎರಡು ಜೀವನ ಉಪಾಧಿಗಳು, ೮೫ ; ಪ್ರಾಣಧರ್ಮ, ಪ್ರಜ್ಞಾಧರ್ಮ ಎಂದು ಬ್ರಹ್ಮದ ಎರಡು ಉಪಾಧಿಗಳು, ೧೪೪ ; **ಮುಂ.** ಆತ್ಮನಲ್ಲಿ ತಪ್ಪು ತಿಳಿವಳಿಕೆಯಿಂದ ಕಲ್ಪಿತವಾಗಿರುವ ಪ್ರಾಣ, ಮನಸ್ಸು - ಎಂಬ ಎರಡು ಉಪಾಧಿಗಳು, ೭೪.

**ಉಪಾಧಿನಿಮಿತ್ತ, ಉಪಾಧಿಕಲ್ಪಿತ - ಬ್ರ.ಸೂ-೧.** ಉಪಾಧಿಗಳಿಂದ ಆಗಿರುವ (ಭೇದ), ೩೫೭ ; (ವಿಭಾಗ) ೪೩೨, (ಜೀವರೂಪ), ೨೬೪.

**ಉಪಾಧಿಭೇದದೃಷ್ಟಯಃ** - ಮುಂ. ಉಪಾಧಿಗಳಿಂದಾಗಿರುವ ಭೇದವನ್ನೇ ಕಾಣುವ ಅಜ್ಞರು, ೫೪.

**ಉಪಾಧಿ ಪರಿಚ್ಛಿನ್ನ** - ಬ್ರ.ಸೂ-೧. ಉಪಾಧಿಗಳ ಕಟ್ಟಿಗೆ ಸಿಕ್ಕಿರುವ (ಜೀವ) ೨೫೭, (ಜೀವನ ಜ್ಞಾನ), ೧೯೮, ೨೨೭.

**ಉಪಾಧಿಲಕ್ಷಣ, ಉಪಾಧಿಕೃತ** - ಭ.ಗೀ. ಉಪಾಧಿಯಿಂದ ಹಾಗೆ ತೋರುವ, (ಕರ್ತೃ, ಭೋಕ್ತೃ) ೧೦೨೯, ೧೦೩೯, (ಶಕ್ತಿಗಳು) ೭೭೬, (ವಿಭೂತಿಗಳು) ೧೧೦೫.

**ಉಪಾಧಿವಿಶೇಷಸಂಬನ್ಧಃ** - ಬ್ರ.ಸೂ-೧. ಬ್ರಹ್ಮದಲ್ಲಿ ವಿಶೇಷವನ್ನು ಕಲ್ಪಿಸುವ ಒಂದೊಂದು ಉಪಾಧಿಯ ಸಂಬಂಧ, ೧೨೮.

**ಉಪಾಧ್ಯುಪಶಮಃ** - ಶಾಂ. ನಿ. ಸುಷುಪ್ತಿಮುಂತಾದ ಅವಸ್ಥೆಗಳಲ್ಲಿ ಉಪಾಧಿಗಳು ಇಲ್ಲವಾಗುವದು. ಆಗ ಜೀವಾತ್ಮನಿಗೆ ಪರಮಾತ್ಮನೊಡನೆ ಸ್ವರೂಪಸಂಬಂಧವಾಗುವದು. ಸೂ. ಭಾ. ೩-೨-೮, ೩-೨-೩೪, ೩೫.

**ಉಪಾಸನಮ್, ಉಪಾಸನಾ** - ಬ್ರ.ಸೂ-೨. ಶಾಸ್ತ್ರದಲ್ಲಿ ವಿಧಿಸಿರುವಂತೆ ಮಾಡುವ ಭಾವನೆ. ಧ್ಯಾನಮ್, ಆಧ್ಯಾನಮ್, ಚಿನ್ತನಮ್, ಅನುಚಿನ್ತನಮ್, ವಿಜ್ಞಾನಮ್, ಬುದ್ಧಿಃ, ಉಪಗಮನಮ್, ಅಪರವಿದ್ಯಾ, ಪ್ರತಿಪತ್ತಿಃ - ಇವೆಲ್ಲ ಉಪಾಸನೆಯ ಪರ್ಯಾಯಗಳು. ಉಪಾಸನೆಯು ಚೋದನಾತಂತ್ರವೂ ಪುರುಷತಂತ್ರವೂ ಆದ ಮಾನಸಕ್ರಿಯೆ, ೧-೫೧ ; ತಾನೇ ಒಂದನ್ನು ಮತ್ತೊಂದೆಂದು ತಿಳಿದುಕೊಂಡರೆ ಉಪಾಸನೆಯಲ್ಲ , ಭ್ರಾಂತಿ, ೨-೨೯೧ ; ಉಪಾಸ್ಯೋಪಾಸಕ ವ್ಯವಹಾರವು ಅವಿದ್ಯಾವಸ್ಥೆಯಲ್ಲಿ ೧-೯೧ ; ಉಪಾಸನೆಗೆ ಕರ್ಮದಂತೆಯೇ ದೃಷ್ಟಾದೃಷ್ಟಫಲಗಳುಂಟು, ೨-೩೧೮ ; ಕರ್ಮಸಮೃದ್ಧಿ, ದುರಿತಕ್ಷಯ, ಅಭ್ಯುದಯ, ಕ್ರಮಮುಕ್ತಿ - ಇವುಗಳು ಬೇರೆ ಬೇರೆಯ ಉಪಾಸನೆಗಳ ಫಲಗಳು, ೧-೯೧, ೨-೨೯೦ ; ಗುಣವಿಶೇಷಗಳಿಂದಲೂ ಪ್ರತೀಕವಿಶೇಷಗಳಿಂದಲೂ ಉಪಾಸನೆಗಳಲ್ಲಿಯೂ ಅವುಗಳ ಫಲದಲ್ಲಿಯೂ ತಾರತಮ್ಯ, ೧-೯೧, ೧೨೮ ; ಕರ್ಮಾಂಗಾವಬದ್ಧೋಪಾಸನೆಗಳು, ಪ್ರತೀಕೋಪಾಸನೆಗಳು, ಅಹಂಗ್ರಹೋಪಾಸನೆಗಳು - ಎಂದು ಉಪಾಸನೆಗಳು ಬಗೆಬಗೆಯಾಗಿರುವುವು. ಕರ್ಮಾಂಗಾವಬದ್ಧವಾಗಿರುವ ಉಪಾಸನೆಗಳು ಎಲ್ಲಾ ಶಾಖೆಗಳಿಗೂ ಅನ್ವಯಿಸುತ್ತವೆ, ೨-೪೨೨ ; ಈ ಉಪಾಸನೆಗಳಿಗೆ ಋತ್ವಿಜರೇ ಅಧಿಕಾರಿಗಳು, ೨-೪೮೯, ೪೯೦ ; ಇವು ಕರ್ಮಕ್ಕೇ ಕಟ್ಟುಬಿದ್ದಿರುವದಿಲ್ಲ, ಕರ್ಮಿಗಳು ಇವನ್ನು ಬೇಕಾದರೆ ಮಾಡಬಹುದು, ೨-೩೩೯ ; ಉದ್ಗೀಥಾದ್ಯುಪಾಸನೆಗಳಿಗೆ ಸೇರಿದ 'ರಸಾನಾಂ ರಸತಮಃ' ಮುಂತಾದವು ಉಪಾಸನಾವಿಧಿಗೇ ಸೇರಿವೆ, ೨-೪೬೨ - ೪೬೩. ಅಗ್ನಿರಹಸ್ಯದಲ್ಲಿರುವ

ಮನಶ್ಚಿದಾದಿಗಳು ಕರ್ಮಪ್ರಕರಣದಲ್ಲಿದ್ದರೂ ಸ್ವತಂತ್ರೋಪಾಸನೆಗಳು, ೨-೪೦೫, ೪೦೮ ರಿಂದ ೪೧೪ ; ಕರ್ಮಾಂಗವನ್ನೇ ಆಯಾ ದೃಷ್ಟಿಯಿಂದ ಉಪಾಸನೆ ಮಾಡಬೇಕು, ೨-೫೧೭, ೨-೫೧೮ ; ಪ್ರತೀಕೋಪಾಸನೆಗಳಲ್ಲಿ ಪ್ರತೀಕವನ್ನು ಬ್ರಹ್ಮವೆಂದು ಉಪಾಸನೆ ಮಾಡಬೇಕು, ೨-೫೧೫ ; ಪ್ರತೀಕವನ್ನು ತಾನೆಂದು ಚಿಂತಿಸಬಾರದು, ೨-೫೧೨ ; ಪರಮಾತ್ಮನನ್ನು ತಾನೆಂದೇ ಉಪಾಸನೆಮಾಡಬೇಕು, ೨-೫೦೯ ; ಮೂರನೆಯ ಅಧ್ಯಾಯದಲ್ಲಿರುವ ವಿಜ್ಞಾನಭೇದಾಭೇದವಿಚಾರವು ಸಗುಣಬ್ರಹ್ಮದ ಮತ್ತು ಪ್ರಾಣಾದಿಗಳ ಉಪಾಸನೆಯ ವಿಷಯ, ೨-೩೧೮ ; ಈಶ್ವರಪ್ರಾಣಾದಿಗಳ ಉಪಾಸನೆಯಲ್ಲಿ ಬೇರೆ ಬೇರೆಯ ಗುಣಗಳಿಂದ ಕೂಡಿ ಉಪಾಸನೆಮಾಡಬೇಕೆಂದು ವಿಧಿಸಿರುವದು ಬೇರೆ ಬೇರೆಯ ಉಪಾಸನೆ, ೨-೪೨೭; ಒಂದೇ ಬಗೆಯ ಗುಣಗಳನ್ನು ವಿಧಿಸಿರುವ ಕಡೆಗಳಲ್ಲಿ ಉಪಾಸ್ಯವು ಒಂದೇ ಆಗಿರುವದರಿಂದ ಉಪಾಸನೆಯೂ ಒಂದೇ, ೨-೩೨೦, ೩೨೨ ರಿಂದ ೩೨೪ ; ಒಂದೇ ವಿದ್ಯೆಯಲ್ಲಿ ಗುಣೋಪಸಂಹಾರವನ್ನು ಮಾಡಿಕೊಳ್ಳಬೇಕು, ೨-೩೨೫, ೩೩೫ ; ಒಂದೇ ಫಲವುಳ್ಳ ಬೇರೆ ಬೇರೆಯ ಉಪಾಸನೆಗಳಲ್ಲಿ ಯಾವದಾದರೂ ಒಂದನ್ನೇ ಆರಿಸಿಕೊಳ್ಳಬೇಕು, ೨-೪೨೯ ; ಕರ್ಮಾಂಗವಾದ ಮತ್ತು ಸಮ್ಯಗ್ದರ್ಶನಾರ್ಥವಾದ ಉಪಾಸನೆಗಳನ್ನುಳಿದು ಮಿಕ್ಕವುಗಳನ್ನು ಕುಳಿತುಕೊಂಡೇ ಮಾಡಬೇಕು, ೨-೫೨೦ ರಿಂದ ೫೨೩ ; ಉಪಾಸನೆಗೆ ದಿಗ್ದೇಶಕಾಲಾದಿಗಳ ನಿಯಮವಿಲ್ಲ, ಏಕಾಗ್ರತೆಯು ಮುಖ್ಯ, ೨-೫೨೪ ; ಸಗುಣಬ್ರಹ್ಮದ ಉಪಾಸನೆಗಳನ್ನು ಸಾಕ್ಷಾತ್ಕಾರವಾಗುವವರೆಗೂ ಮಾಡಬೇಕು, ಸಾಯುವಕಾಲದವರೆಗೂ ಮಾಡುತ್ತಿರಬೇಕು, ೨-೪೨೯, ೫೨೬ ; ನೈ. ವಾಕ್ಯಜ್ಞಾನವನ್ನು ಭಾವನೆಮಾಡುವದು. ದೀರ್ಘಕಾಲ ಮಾಡಿದ ಉಪಾಸನೆಯಿಂದ ಅಜ್ಞಾನವು ಸಂಪೂರ್ಣವಾಗಿ ಹೋಗುವದೆಂಬವರ ಪಕ್ಷ , ಮತ್ತು ಅದರ ಖಂಡನೆ, ೧-೬೭.

**ಉಪಾಸನಮ್** - ಕೇನ. ಧ್ಯಾನ, ೧, ೩೦, ೭೯ ; **ಛಾಂ.** ಧ್ಯಾನ, ೫, ೭, ೭೩, ೧೧೨, ೨೦೦ ; **ಭ.ಗೀ.** ಒಂದೇ ವಸ್ತುವನ್ನು ಎಡೆಬಿಡದೆ ಮನಸ್ಸಿನಲ್ಲಿ ಹೊರಳಿಸುತ್ತಿರುವದು, ೫೦೫, ೫೩೭, ೭೨೯.

**ಉಪಾಸನಮ್, ಉಪಾಸನಾ** - **ಬೃಹ-೧.** ಶಾಸ್ತ್ರದಲ್ಲಿ ಹೇಳಿರುವಂತೆ ಸತತವಾಗಿ ಧ್ಯಾನಿಸುವದು, ೪೯, ೬೭ ; ಜ್ಞಾನ , ೧೩೪, ೧೪೪ ; **ಶಾಂ. ನಿ.** ಒಂದಾನೊಂದು ವಸ್ತುವನ್ನು ಶಾಸ್ತ್ರದಲ್ಲಿ ಹೇಳಿರುವಂತೆ, ಮತ್ತೊಂದು ವಸ್ತುವಿನ ಚಿಂತೆಯು ನಡುವೆ ಬರದಂತೆ, ಅದನ್ನೇ ಎಡೆಬಿಡದೆ ಚಿಂತಿಸುತ್ತಿರುವದು. ತೈ. ಭಾ. ೧-೩, ಬೃ. ಭಾ. ೧-೪-೭, ಭಾವನಾರೂಪವಾಗಿಯೂ ಇರಬಹುದು.

ಗೀ. ಭಾ. ೧೨-೩, ಬೃ, ಭಾ. ೧-೪-೭, ಭಾವನಾರೂಪವಾದ ಉಪಾಸನೆಗಳಿಗೆ ಪ್ರಾಣಾದಿಗಳೂ ಸಗುಣಬ್ರಹ್ಮವೂ ವಿಷಯವಾಗಿರುವವು. ಅವುಗಳಿಗೆ ದೃಷ್ಟಫಲವೂ ಅದೃಷ್ಟಫಲವೂ ಉಂಟು. ಕೆಲವಕ್ಕೆ ಜ್ಞಾನೋತ್ಪತ್ತಿಮೂಲಕವಾಗಿ ಮುಕ್ತಿಯೂ ಆಗುವದು. ಸೂ. ಭಾ. ३-३-೧, ಗೀ.ಭಾ. ೮-೧೨, ಪ್ರ.ಭಾ. ೫-೧. ಉಪಾಸ್ಯೋಪಾಸಕವ್ಯವಹಾರವೆಲ್ಲ ಅವಿದ್ಯಾ ವಿಷಯವೇ. ಸೂ. ಭಾ. ೧-೧-೪.

**ಉಪಾಸನೆ** - ತೈ. ಎಡೆಬಿಡದೆ ಅದನ್ನೇ ಚಿಂತಿಸುತ್ತಿರುವದು, ೨೦, ೫೦, ೯೦.

**ಉಪಾಸನಾಕ್ರಿಯಾ** - ಬ್ರ.ಸೂ-೧. ಧ್ಯಾನಮಾಡುವದು, ಪ್ರಪಂಚ-ವಿಲಯನ - ಮುಂತಾದ ಕ್ರಿಯೆ, ೩೫.

**ಉಪಾಸನಾವಿಧಿಶೇಷತ್ವಮ್** - ಬ್ರ.ಸೂ-೧. ಉಪಾಸನೆಯನ್ನು ವಿಧಿಸುವ ವಾಕ್ಯದಲ್ಲಿ ಉಪಾಸನೆಗೆ ಅಂಗವಾಗಿರುವದು, ೩೮.

**ಉಭಯರೂಪಶರೀರಾಭಿಮಾನಃ** - ಬ್ರ.ಸೂ-೧. ಜಾಗ್ರದ್ದೇಹ, ವಾಸನಾದೇಹ - ಎಂಬ ಎರಡು ಬಗೆಯ ದೇಹದ ಅಭಿಮಾನ, ೨೭೦.

**ಉಲೂಕನಿಶಾ** - ನೈ. ಗೂಬೆಗಳು ರಾತ್ರೆಯೆಂದು ಕಾಣುವ ನಡುಹಗಲು. ಇದರಂತೆ ಅವಿದ್ಯಾಪ್ರಸಿದ್ಧಿಯಿಂದಲೇ ಆತ್ಮನಲ್ಲಿ ಅವಿದ್ಯೆಯಿರುತ್ತದೆ, ३-೧೧೧.

# ಊ

**ಊರ್ಧ್ವರೇತಸಃ** - ಭ.ಗೀ. ಗೃಹಸ್ಥರಲ್ಲದ ಆಶ್ರಮಿಗಳು, ವಿಶೇಷವಾಗಿ ಸಂನ್ಯಾಸಿಗಳು, ೧೪೫.

**ಊಷರದೇಶಃ** - ಮಾಂ. (ನೀರೆಂದು ಕಲ್ಪಿಸುವದಕ್ಕೆ ಆಧಾರವಾದ) ಮರುಭೂಮಿ, ೧೪೪ ; ಭ.ಗೀ. ಚೌಳುನೆಲ, ಬಿಸಿಲುಕುದುರೆಯ ನೀರು ತೋರುವ ಸ್ಥಲ, ೭೬೭.

**ಊಷರಾದೀನಿ** - ಬ್ರ.ಸೂ-೧. ಬಿಸಿಲುಕುದುರೆಯ ನೀರಿಗೆ ಆಸ್ಪದವಾಗಿರುವ ಮರಳುಕಾಡು, ಚೌಳುನೆಲ ಮುಂತಾದದ್ದು ; (ಆರೋಪಿತವಾದದ್ದು ಆಸ್ಪದಕ್ಕಿಂತ ಬೇರೆಯಲ್ಲವೆಂಬುದಕ್ಕೆ ದೃಷ್ಟಾಂತ), ೪೩೪.

# ಋ

**ಋಣತ್ರಯಮ್ - ಶಾಂ. ನಿ.** ದೇವಋಣ, ಋಷಿಋಣ, ಪಿತೃಋಣ - ಎಂಬ ಮೂರನ್ನು ತೀರಿಸಿದ ಬಳಿಕವೇ ಮೋಕ್ಷದಲ್ಲಿ ಮನಸ್ಸಿಡಬೇಕೆಂದು ಶ್ರುತಿಸ್ಮೃತಿಗಳಲ್ಲಿದೆ. ಇದು ಅವಿರಕ್ತರಾದ ಅಜ್ಞರ ವಿಷಯವೆಂದು ಆಚಾರ್ಯರ ಅಭಿಪ್ರಾಯ. ಐ. ಭಾ. ೨೦, ಬೃ. ೧-೪-೧೦, ೪-೫-೧೫.

**ಋಣಾನಿ - ಬೃಹ-೧.** ಆತ್ಮಜ್ಞಾನಿಗಳಲ್ಲದವರಿಗೆ ಶ್ರುತಿಯಲ್ಲಿ ಹೇಳಿರುವ ದೇವಋಣ, ಋಷಿಋಣ, ಪಿತೃಋಣ- ಎಂದು ಮೂರು ಋಣಗಳು, ೧೬೮, ೨೩೭.

**ಋತಮ್-ತೈ.** ಹೀಗೆ ಮಾಡಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡ ಶಾಸ್ತ್ರೀಯಕರ್ಮ ೧೪, ೫೪.

**ಋಷಯಃ - ಮುಂ.** ಕರ್ಮವನ್ನು ಕಂಡುಹಿಡಿದವರು, ೨೮ ; ಉಪಾಸನೆಯ ಸಾಕ್ಷಾತ್ಕಾರವುಳ್ಳವರು, ೧೦೧ ; ತತ್ತ್ವಜ್ಞಾನಿಗಳು, ೧೧೭, ೧೨೬.

**ಋಷಿಃ - ತೈ.** ವೇದ ೪೯ ; ತತ್ತ್ವವನ್ನು ಕಂಡುಹಿಡಿದಾತನು ೪೯, ೫೮ ; **ಪ್ರಶ್ನ.** ಸ್ವರ್ಗವನ್ನು ಬಲ್ಲವನು, ೧೩ ; ಪ್ರಾಣನ ತತ್ತ್ವವನ್ನು ಬಲ್ಲವನು, ೧೭ ; ಚಕ್ಷುರಾದಿ ಪ್ರಾಣಗಳು, ೩೧ ; ಪರತತ್ತ್ವವನ್ನು ಬಲ್ಲವನು, ೩ ; **ಶಾಂ. ನಿ.** ಬಲ್ಲವನು, ತತ್ತ್ವವನ್ನು ಅರಿತಿರುವವನು. ಈ ಮಾತನ್ನು ವೇದ, ಕರ್ಮತತ್ತ್ವವನ್ನು ಬಲ್ಲವನು, ಉಪಾಸನಾತತ್ತ್ವವನ್ನು ಬಲ್ಲವನು, ಪರಮಾರ್ಥ ತತ್ತ್ವವನ್ನು ಬಲ್ಲವನು - ಎಂಬರ್ಥದಲ್ಲಿ ಆಚಾರ್ಯರು ಉಪಯೋಗಿಸಿರುತ್ತಾರೆ. ಐ. ಭಾ. ೨-೫, ಪ್ರ. ಭಾ. ೧-೯, ಮುಂ. ಭಾ. ೩-೬.

# ಏ

**ಏಕಕಾಲಾನವಸ್ಥಿತಿಃ - ನೈ.** ಕರ್ಮಜ್ಞಾನಗಳಿಗೆ ಸಾಧ್ಯಸಾಧನಭಾವ ವಿರುವದರಿಂದ ಒಂದೇ ಕಾಲದಲ್ಲಿರುವಹಾಗಿಲ್ಲ , ೧-೫೪; ಹೀಗೆಯೇ ಅವು ಒಬ್ಬನಲ್ಲಿಯೇ ಇರುವದೂ ಇಲ್ಲ, ೧-೫೫.

**ಏಕತ್ವಮ್** - ಬ್ರ.ಸೂ-೨. ಆತ್ಮನು ಒಬ್ಬನೇ ಎಂಬ ಆತ್ಮೈಕತ್ವ. ಏಕತ್ವ ವಿಜ್ಞಾನದಿಂದ ಬಾಧಿತವಾದ ದ್ವೈತವು ಮತ್ತೆ ಸತ್ಯವಾಗದು, ೧-೩೮, ೨-೪೫೩ ; ಏಕತ್ವವನ್ನು ತಿಳಿಸುವದು ಅಂತ್ಯಪ್ರಮಾಣ, ೧-೪೩೮ ; ಏಕತ್ವವೇ ನಿಯತವಾಗಿದ್ದರೂ ಅವಿದ್ಯಾಪೇಕ್ಷೆಯಿಂದ ಈಶಿತ್ರೀಶಿತವ್ಯಭಾವ, ೧-೪೪೦ ; ಪಟಾದಿಗಳಿಂದ ಏಕಮಾತ್ರ ಬ್ರಹ್ಮವನ್ನು ಅನುಮಾನಿಸುವ ಕ್ರಮ, ೧-೪೪೩ ; ಒಂದೇ ಬ್ರಹ್ಮದಲ್ಲಿ ಕಾರ್ಯವೈಚಿತ್ರ್ಯ, ೧-೪೫೭ ; ಏಕಾದ್ವಿತೀಯ ಬ್ರಹ್ಮವು ಜಗತ್ಕಾರಣವೆಂಬಲ್ಲಿ ಆಕ್ಷೇಪಸಮಾಧಾನಗಳು, ೧-೪೬೨, ೪೬೩ ; ಆತ್ಮೈಕತ್ವವಾದದಲ್ಲಿ ಅನಿರ್ಮೋಕ್ಷಶಂಕೆಯಿಲ್ಲ , ೨-೨೦ ; ಆತ್ಮೈಕತ್ವದರ್ಶಿಗಳಿಗೆ ಮೋಕ್ಷಕ್ಕಾಗಿ ಗತಿ ಬೇಕಿಲ್ಲ, ೨-೩೭೬ ; ಕಠ. ಆತ್ಮನು ಒಬ್ಬನೇ ಆಗಿರುವದು, ೧೩.೨.

**ಏಕತ್ವಂ ನಾನಾತ್ವಂ ಚ** - ಬೃಹ-೧. ಒಟ್ಟಿನಲ್ಲಿ ಒಬ್ಬನೂ ಬಿಡಿಬಿಡಿಯಾಗಿ ಬೇರೆ ಬೇರೆಯೂ ಆಗಿರುವದು (ಹಿರಣ್ಯ ಗರ್ಭನ ಸ್ವಭಾವ), ೧೦೩.

**ಏಕತ್ವಮ್, ಪರಮಾತ್ಮೈಕತ್ವಮ್** - ಬೃಹ-೧. ವಿಜ್ಞಾನಾತ್ಮನು ಪರಮಾತ್ಮನೇ, ಬೇರೆಯಲ್ಲ - ಎಂಬ ಅರಿವು, ೩೧೬, ೩೧೯.

**ಏಕತ್ವದರ್ಶನಮ್** - ಪ್ರಶ್ನ. ತತ್ತ್ವವು ತನಗೆರಡನೆಯದಿಲ್ಲದೆ ಒಂದೇ ಆಗಿರುವದೆಂಬ ತಿಳಿವಳಿಕೆ, ೧೦೪ ; ಬೃಹ-೧. ಆತ್ಮನೊಬ್ಬನೇ ಪರಮಾರ್ಥವಾಗಿರುವನೆಂಬ ಅರಿವು, ೧೦೩, ೧೦೪.

**ಏಕತ್ವಪ್ರತ್ಯಯಃ, ಏಕತ್ವಜ್ಞಾನಮ್** - ಛಾಂ. ಆತ್ಮನೊಬ್ಬನೇ ಸತ್ಯವೆಂಬ ಅರಿವು, ೧೮೧, ೧೮೨, ೧೮೬.

**ಏಕತ್ವವಿಜ್ಞಾನಮ್** - ಬ್ರ.ಸೂ-೧. ಆತ್ಮನು ಒಬ್ಬನೇ ಎಂಬ ಅರಿವು, ೩೮ ; ಕಠ. ಆತ್ಮನು ಒಬ್ಬನೇ ಎಂಬುದನ್ನು ತಿಳಿದುಕೊಳ್ಳುವದು, ೧೨೬.

**ಏಕದೇಶವಿಜ್ಞಾನಮ್** - ಕಠ. ಒಂದಂಶವಾದ ಅರಿವು, ಬಿಡಿಯರಿವು, ೭೭.

**ಏಕದೇಶ ಪಕ್ಷಃ** - ಬೃಹ-೧. ಜೀವನು ಪರಮಾತ್ಮನ ಒಂದು ಭಾಗವು, ಅವಯವಮಾತ್ರ - ಎಂಬ ಪಕ್ಷ, ೩೧೫, ೩೧೭.

**ಏಕಮ್** - ಶಾಂ. ನಿ. ಬೇರೆಯಲ್ಲದೆ ಎಲ್ಲೆಲ್ಲಿಯೂ ಒಂದೇ ಆಗಿರುವ, ತನಗೆರಡನೆಯದಿಲ್ಲದ. ಆತ್ಮನು ಏಕನು ಎಂದರೆ ಎಲ್ಲರಿಗೂ ಒಬ್ಬನೇ ಎಂದರ್ಥ ;

ಅಥವಾ ತನಗಿಂತ ಬೇರೆಯಾದ ಎರಡನೆಯದಿಲ್ಲವನು ಎಂದರ್ಥ. ಏಕವೆಂಬ ಮಾತನ್ನು ಸಂಖ್ಯಾವಾಚಕವಾಗಿ ಉಪಯೋಗಿಸಿಲ್ಲ. ಈ. ಭಾ. ೪, ಛಾಂ. ಭಾ. ೬-೨-೧.

**ಏಕರಸಃ** - **ಬ್ರ.ಸೂ-೧.** ಒಂದೇ ವಿಧವಾದ, ಜಾತ್ಯಂತರವಿಲ್ಲದ, ಬಗೆಬಗೆಯಲ್ಲದ, ೨೨೩ ; **ಬೃಹ-೧.** ತನ್ನಲ್ಲಿ ವೈಚಿತ್ರ್ಯವಿಲ್ಲದೆ ಒಂದೇ ರೂಪವಾಗಿರುವ, ೧೫೭, ೩೧೬ ; **ಬೃಹ-೨.** ಅಖಂಡವಾಗಿ ಚೈತನ್ಯವೆಂಬ ಒಂದೇ ಜಾತಿಯದಾಗಿರುವ, ಭ. ಪ್ರ. ರು ಹೇಳುವಂತೆ ಅನೇಕರಸವಲ್ಲದ, ೯೮, ೨೬೮.

**ಏಕರಸಮ್ - ಕಠ.** ಒಂದೇ ಜಾತಿಯ, ಮತ್ತೊಂದರ ಬೆರಕೆಯಿಲ್ಲದ ಆತ್ಮ, ೧೨೫, ೧೩೧.

**ಏಕಲಃ, ಏಕಾಕೀ - ನೈ.** ಅದ್ವಿತೀಯನಾದ ಆತ್ಮ, ೨-೧೧೮, ೩-೬೫.

**ಏಕವಾಕ್ಯತಾ** - **ಬ್ರ.ಸೂ-೧.** ಎಲ್ಲವೂ ಒಂದೇ ವಿಷಯವನ್ನು ತಾತ್ಪರ್ಯದಿಂದ ತಿಳಿಸುವದು, ಬೇರೆಬೇರೆಯ ತಾತ್ಪರ್ಯವುಳ್ಳ ಎರಡು ವಾಕ್ಯಗಳಾಗದೆ ಇರುವದು, ೩೪೩, ೩೬೭ ; **ಬೃಹ-೧.** ಒಂದೇ ಅರ್ಥವನ್ನು ಹೇಳುವದರಿಂದ ಒಂದು ವಾಕ್ಯವಾಗಿರುವದು, ೩೨೨.

**ಏಕರ್ಷಿಃ - ಪ್ರಶ್ನ.** ಅಥರ್ವವೇದದಲ್ಲಿ ಹೇಳಿರುವ ಒಂದಾನೊಂದು ಅಗ್ನಿ, ೩೪.

**ಏಕಾಗ್ರತಾ - ಕಠ.** ಮನಸ್ಸನ್ನು ಒಕ್ಕಡೆಗೆ ನಿಲ್ಲುವಂತೆ ತಿದ್ದಿದ ವೃತ್ತಿ, ೧೦೨.

**ಏಕಾಗ್ರಮನಾಃ - ನೈ.** ಅನ್ವಯವ್ಯತಿರೇಕಗಳಿಂದ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳುವ ಮನಸ್ಸಿನ ಏಕಾಗ್ರತೆಯುಳ್ಳವನು. ೩-೪.

**ಏಕಾತ್ಮಕಃ** - **ಬ್ರ.ಸೂ-೧.** ಒಂದೇ ಆಗಿರುವ, ಸ್ವಗತವಾದ ಅವಯವಾದಿಗಳಿಲ್ಲದ, ೬೬.

**ಏಕಾತ್ಮವಿದಃ - ಪ್ರಶ್ನ.** ಅದ್ವಿತೀಯಾತ್ಮಜ್ಞಾನಿಗಳು, ೬೩.

**ಏಕಾತ್ಮಪ್ರತ್ಯಯಸಾರಮ್** - **ಮಾಂ.** ಒಬ್ಬನೇ ಆತ್ಮನು ಮೂರು ಅವಸ್ಥೆಗಳಲ್ಲಿಯೂ ಇರುವನೆಂಬ ಪ್ರತ್ಯಯದಿಂದ ಅನುಸರಿಸಿ ತಿಳಿಯಬೇಕಾದ ಆತ್ಮ, ೪೨.

**ಏಕಾರ್ಥವೃತ್ತಿತ್ವಮ್** - **ತೈ.** ಒಂದೇ ಪ್ರಯೋಜನಕ್ಕಾಗಿ ಕೆಲಸ ಮಾಡುತ್ತಿರುವದು ೧೮೭.

**ಏಕಾದಶೇನ್ದ್ರಿಯಾಣಿ** - **ಭ.ಗೀ.** ಮನಸ್ಸೂ ಸೇರಿ ಹನ್ನೊಂದು ಇಂದ್ರಿಯಗಳು

**ಏಧಿ** - **ನೈ.** ಆಗು. ತತ್ತ್ವಮಸಿ ಮುಂತಾದ ವಾಕ್ಯಗಳಲ್ಲಿರುವ ಇದ್ದೀಯೆ ಮುಂತಾದ ಕ್ರಿಯಾಪದಗಳಿಗೆ 'ಆಗು' ಎಂಬ ವಿಧ್ಯರ್ಥವನ್ನು ಕಲ್ಪಿಸಬಾರದು, ೧-೯೭.

**ಏಷಣಾ** - **ಕೇನ.** ಪುತ್ರ, ವಿತ್ತ, ಲೋಕಗಳ ಬಯಕೆ, ೨೩. ; **ಕಠ.** ಮಕ್ಕಳು, ಕರ್ಮ, ಲೋಕ - ಇವುಗಳ ಬಯಕೆ, ೧೧೩., ೧೩೪, ೧೫೪ ; **ಬೃಹ-೧.** ಸಾಧ್ಯಸಾಧನಗಳ ಬಯಕೆ, ೧೯೬ ; **ಭ.ಗೀ.** ಮಕ್ಕಳ, ಹಣದ, ಲೋಕದ - ಬಯಕೆ ೧೦೯, ೧೩೬, ೬೧೫, ೭೨೫, ೭೪೩, ೭೫೧.

**ಏಷಣಾತ್ರಯಮ್** - **ಈಶ.** ಪುತ್ರ, ವಿತ್ತ ಲೋಕ - ಇವುಗಳ ಬಯಕೆ, ೩, ೭, ೨೦, ೩೩.

**ಏಷಣಾದ್ವಯಮ್** - **ಮಾಂ.** ಸಾಧ್ಯ, ಸಾಧನ - ಇವುಗಳ ಬಯಕೆ, ೧೭೩.

**ಏಷಣಾತ್ಯಾಗಃ, ಏಷಣಾವ್ಯುತ್ಥಾನಮ್** - **ಬೃಹ-೨.** ಆತ್ಮಜ್ಞಾನಕ್ಕೆ ಅಂಗವಾಗಿ ಪುತ್ರೈಷಣೆ, ವಿತ್ತೈಷಣೆ, ಲೋಕೈಷಣೆ - ಎಂಬ ಮೂರು ಬಯಕೆಗಳನ್ನೂ ಬಿಡುವ ಪರಮಹಂಸ ಪಾರಿವ್ರಾಜ್ಯರೂಪವಾದ ಸಂನ್ಯಾಸ, ೫೬, ೫೭.

## ಐ

**ಐಂದ್ರಜಾಲಿಕಃ** - **ಭ.ಗೀ.** ಕಣ್ಣುಕಟ್ಟನ್ನು ಮಾಡುವವನು, ೪೯೬.

**ಐಶ್ವರ್ಯಮ್** - **ಬ್ರ.ಸೂ-೨.** ಈಶ್ವರಭಾವ, ಮಹಿಮೆ. ದೇವತೆಗಳು ಐಶ್ವರ್ಯದಿಂದ ಒಂದೇ ಕಾಲಕ್ಕೆ ಅನೇಕ ಶರೀರಗಳನ್ನು ಕಲ್ಪಿಸಿಕೊಳ್ಳುವರು, ೧-೨೮೫, ೩೦೨, ೪೬೧ ; ಉಪಾಸಕನು ಇಷ್ಟಕಾಮಗಳನ್ನು ಸಂಕಲ್ಪಮಾತ್ರದಿಂದ ಪಡೆದುಕೊಳ್ಳುವ ಐಶ್ವರ್ಯವನ್ನು ಪಡೆದುಕೊಳ್ಳುವನು, ೨-೫೯೮, ೬೮೦ ; ಸಗುಣವಿದ್ಯೆಯಿಂದ ಮುಕ್ತರಾದವರ ಐಶ್ವರ್ಯವು ಈಶ್ವರಾಧೀನ, ೨-೬೦೯ ; ಬ್ರಹ್ಮಜ್ಞಾನದಿಂದ ಮುಕ್ತರಾದವರಿಗೆ ವ್ಯಾವಹಾರಿಕದೃಷ್ಟಿಯಿಂದ ಐಶ್ವರ್ಯವೂ

ಇರಬಹುದು, ೨-೫೭೭ ; **ಶಾಂ. ನಿ.** ಎಲ್ಲವನ್ನೂ ಆಳುವ ಸ್ವಾತಂತ್ರ್ಯ. ಐಶ್ವರ್ಯವು ಮನುಷ್ಯನಿಂದ ಹಿಡಿದು ಹಿರಣ್ಯಗರ್ಭನವರೆಗೆ ಹೆಚ್ಚುತ್ತಾ ಹೋಗಿರುತ್ತದೆ. ಹಿರಣ್ಯಗರ್ಭನಲ್ಲಿ ಎಲ್ಲರಿಗಿಂತಲೂ ಹೆಚ್ಚಾಗಿದೆ. ನಿತ್ಯೈಶ್ವರ್ಯವು ಪರಮಾತ್ಮನಲ್ಲಿ ಮಾತ್ರ ಸ್ವಾಭಾವಿಕವಾಗಿದೆ, ಸೂ. ಭಾ. ೧-೩-೩೦, ಮುಂ. ಭಾ. ೧-೧-೧, ಗೀ. ಭಾ. ಅವತರಣಿಕೆ, ಸೂ. ಭಾ. ೪-೪-೧೭. ಯೋಗಮಹಿಮೆಯಿಂದಲೂ ಈಶ್ವರಾನುಗ್ರಹದಿಂದಲೂ ಐಶ್ವರ್ಯವು ಬರಬಹುದು. ಮಾಂ. ಭಾ. ೪-೯. ಆತ್ಮನಲ್ಲಿ ಈಶ್ವರ, ಈಶಿತವ್ಯ - ಎಂಬ ವಿಭಾಗವು ವ್ಯಾವಹಾರಿಕ. ಸೂ. ಭಾ. ೨-೧-೧೪, ೩-೨-೩೮.

**ಐಶ್ವರ್ಯಯೋಗಃ -ಬ್ರ.ಸೂ-೧.** ಹೆಚ್ಚಿನ ಸಾಮರ್ಥ್ಯವಿರುವದು, ೨೮೫, ೩೦೨, ೪೬೦.

**ಐಕಾಶ್ರಮ್ಯ - ಶಾಂ. ನಿ.** ಗಾರ್ಹಸ್ಥ್ಯವೆಂಬ ಒಂದು ಆಶ್ರಮವೇ ಶ್ರುತಿಗೆ ಇಷ್ಟವಾದದ್ದೆಂಬ ವಾದವನ್ನು ಆಚಾರ್ಯರು ಖಂಡಿಸಿರುತ್ತಾರೆ. ತೈ. ಭಾ. ೧-೧೧ ಉಪಸಂಹಾರ ; ಬೃ. ಭಾ. ೪-೫-೧೫ ಉಪಸಂಹಾರ.

**ಐಕಾಶ್ರಮ್ಯಮ್ - ತೈ.** ಗಾರ್ಹಸ್ಥ್ಯವೆಂಬ ಒಂದೇ ಆಶ್ರಮವನ್ನಿಟ್ಟುಕೊಳ್ಳುವದು ೮೨.

**ಐಕಾಗ್ರ್ಯಮ್ - ಛಾಂ.** ಮನಸ್ಸನ್ನು ಒಂದೇ ಕಡೆಯಲ್ಲಿ ನಿಲ್ಲಿಸಿಕೊಳ್ಳುವದು, ೭; **ನೈ. ಭಾವನೆ.** ಅಭ್ಯಾಸದಿಂದ ಬೆಳೆಯುವುದು ಪ್ರಮಿತಿಯಲ್ಲ, ಐಕಾಗ್ರವೇ, ೩.-೯೦.

**ಐಕಾತ್ಮ್ಯಮ್ - ನೈ.** ಆತ್ಮನು ಒಬ್ಬನೇ ಆಗಿರುವನೆಂಬುದು. ಐಕಾತ್ಮ್ಯವನ್ನು ಅರಿಯದಿರುವದೇ **ಅವಿದ್ಯೆ**, ೧-೭ ; ಐಕಾತ್ಮ್ಯವು ಅನುಭವಮಾತ್ರವಾಗಿರುವದರಿಂದ ಅದಕ್ಕೆ ಪ್ರಮಾಣವು ಬೇಕಿಲ್ಲ, ೧-೮೯; ಐಕಾತ್ಮ್ಯವಾಕ್ಯಗಳೂ ವಿಧಿವಾಕ್ಯಗಳಂತೆಯೇ **ಅಜ್ಞಾನಿಗೆ** ಪ್ರಮಾಣ, ೧-೯೧; ಐಕಾತ್ಮ್ಯಪಕ್ಷದಂತೆ ಕರ್ಮವಾದಿಗಳ ಪಕ್ಷದಲ್ಲಿಯೂ **ಅದೃಷ್ಟಾರ್ಥವಾದ**, ಸ್ವರ್ಗಾದಿಫಲವುಳ್ಳ , ಕರ್ಮಗಳಲ್ಲಿ ಅಜ್ಞನಿಗೇ ಅಧಿಕಾರ, ೧-೯೨ ರಿಂದ ೯೬; ಐಕಾತ್ಮ್ಯಜ್ಞಾನಿಗೆ ಕೋಪಾದಿಗಳಿಲ್ಲ, ೨-೧೮; **ಸಾಂಖ್ಯಪ್ರಕ್ರಿಯೆಯಿಂದಲೂ** ನಿರ್ವಿಕಾರವಾದ ಐಕಾತ್ಮ್ಯವು ಸಿದ್ಧವಾಗುತ್ತದೆ, ೨-೮೫.

**ಐತಿಹ್ಯಮ್ - ಬ್ರ.ಸೂ-೧.** ಹೀಗಂತೆ ಎಂದು ಜನರು ಹೇಳಿಕೊಳ್ಳುವದನ್ನು ತಿಳಿಸುವ (ಶಬ್ದ), ೪೦೯.

# ಓ

**ಓಂಶಬ್ದವಾಚ್ಯಮ್** - ಕಠ. ಓಂ ಎಂಬ ಶಬ್ದದಿಂದ ಹೇಳಲ್ಪಡುವ ಬ್ರಹ್ಮ, ೬೮.

**ಔದಾಸೀನ್ಯಮ್** - ಬ್ರ.ಸೂ-೧. ಮಾಡತಕ್ಕದ್ದಲ್ಲವೆಂಬ ಬುದ್ಧಿಯಿಂದ ಸುಮ್ಮನಾಗುವಿಕೆ, ೫೬.

**ಔಪಚಾರಿಕ** - ಬ್ರ.ಸೂ-೧. ಮುಖ್ಯಾರ್ಥವು ಹೊಂದದೆ ಇರುವಲ್ಲಿ ಗೌಣವಾಗಿ ಹೇಳಿರುವ ಶಬ್ದ, ೭೩., ೭೪, ೩.೭೯.

**ಔಪನಿಷದ** - ಬ್ರ.ಸೂ-೨. ಉಪನಿಷತ್ತನ್ನೇ ಪ್ರಮಾಣವೆಂದು ಒಪ್ಪಿರುವ, ೧-೧೯, ೨೦, ೧೦೨ ; ಉಪನಿಷತ್ತಿನಲ್ಲಿ ಮಾತ್ರವೇ ತಿಳಿಯಬರುವ ಸಾಕ್ಷಿಚೈತನ್ಯ ಸ್ವರೂಪನಾದ ಆತ್ಮ, ೧-೫೪, ೨೦೧ ; ಉಪನಿಷತ್ತಿನಲ್ಲಿ ಹೇಳಿರುವ ಆತ್ಮೈಕತ್ವಜ್ಞಾನ. ಇದೇ ಯುಕ್ತಿಸಮ್ಮತ ಸಮ್ಯಗ್ಜ್ಞಾನ, ೧-೪೨೫, ೪೨೯, ೨-೪೩೭, ೪೩೯.

**ಔಪನಿಷದಂ ದರ್ಶನಮ್, ಔಪನಿಷದಂ ಜ್ಞಾನಮ್** - ಬ್ರ.ಸೂ-೧. ಉಪನಿಷತ್ತಿನಲ್ಲಿ ಹೇಳಿರುವ ಆತ್ಮೈಕತ್ವಜ್ಞಾನ, ೪೨೫, ೪೨೯ ; ಭ.ಗೀ. ಉಪನಿಷತ್ತಿನಲ್ಲಿ ಮಾತ್ರವೇ ಹೇಳಿರುವ ಜ್ಞಾನ, ೮೩೯.

**ಔಪನಿಷದಃ ಪುರುಷಃ** - ಬ್ರ.ಸೂ-೧. ಉಪನಿಷತ್ತಿನಿಂದ ಮಾತ್ರವೇ ತಿಳಿಯಬರುವ ಸಾಕ್ಷಿರೂಪನಾದ ಪುರುಷ, ೫೪, ೨೦೧ ; ಬೃಹ-೨. ಉಪನಿಷತ್ತಿನಲ್ಲಿ ಮಾತ್ರ ತಿಳಿಯಬರುವ ನಿರ್ವಿಶೇಷಚಿದಾತ್ಮಕನಾದ ಪುರುಷ, ಪರಬ್ರಹ್ಮ, ೧೨೪, ೧೨೫.

**ಔಪದೇಶಿಕಂ ವೇದನಮ್** - ಭ.ಗೀ. ಶಾಸ್ತ್ರಾಚಾರ್ಯರ ಉಪದೇಶದಿಂದಾದ ಜ್ಞಾನ, ೭೫೫.

**ಔಪಾಧಿಕಮ್** - ಈಶ. ಉಪಾಧಿಯಿಂದಾಗಿರುವ ೩.

**ಕರ್ತವ್ಯಮ್, ಕರ್ತವ್ಯಮ್** - ಬ್ರ.ಸೂ-೧. ಮಾಡಬೇಕಾದದ್ದು, ಜ್ಞಾನವಾದ ಬಳಿಕವೂ ಮಾಡಬೇಕಾದದ್ದಿದೆ ಎಂಬ ವಾದಿಗಳ ಮತದಲ್ಲಿ ಉಳಿದಿರುವ ಕೆಲಸ, ೨೮, ೪೦, ೪೧, ೪೪, ೫೩ ; ಬ್ರ.ಸೂ-೨. ಮಾಡತಕ್ಕ ಕ್ರಿಯೆ. ಇದು ಪುರುಷತಂತ್ರ, ೧-೨೮. ಬ್ರಹ್ಮಜ್ಞಾನವಾದ ಮೇಲೆ ಉಳಿದಿರುವದೆಂದು ವಾದಿಗಳು ನಂಬಿರುವ ಕೆಲಸ, ಉಪಾಸನಾರೂಪಕಾರ್ಯವಿಧಿಪ್ರಯುಕ್ತವಾಗಿ ಬ್ರಹ್ಮವನ್ನು ಹೇಳಿದೆ - ಎಂಬವರ ಪಕ್ಷವೂ ಆದರ ಖಂಡನೆಯೂ, ೧-೪೦, ೪೧, ೪೩, ೪೪ : ಜ್ಞಾನಿಗೆ ಬೇಕೆಂದು ಕೆಲವರು ಕಲ್ಪಿಸಿರುವ ಪ್ರಪಂಚಪ್ರವಿಲಯರೂಪವಾದ ಕಾರ್ಯ, ೨-೨೯೧ ; ಜ್ಞಾನಾವೃತ್ತಿರೂಪವಾದ ಕಾರ್ಯ, ೨-೫೦೫ ; ಬ್ರಹ್ಮಜ್ಞಾನವು ಕರ್ತವ್ಯಪ್ರಧಾನವಲ್ಲದಿದ್ದರೂ ದೋಷವಿಲ್ಲ, ೧-೫೩.

**ಕರ್ತವ್ಯಶೇಷಃ** - ಬ್ರ.ಸೂ-೧. ಮಾಡಬೇಕಾದದ್ದಕ್ಕೆ ಅಂಗವಾದ ವಸ್ತು, ೪೩.

**ಕರ್ತವ್ಯವಿಧ್ಯನುಪ್ರವೇಶಃ** ಬ್ರ.ಸೂ-೧. ಮಾಡಬೇಕಾದದ್ದನ್ನು ವಿಧಿಸಿರುವದಕ್ಕೆ ಸೇರಿಕೊಂಡಿರುವ ವಸ್ತು, ೪೧, ೫೭.

**ಕರ್ತೃಭೋಕ್ತೃಸಂಯುಕ್ತಮ್** - ಬ್ರ.ಸೂ-೧. ಕರ್ತೃಗಳೂ ಭೋಕ್ತರೂ ಆಗಿರುವ ಜೀವರುಗಳಿಂದ ಕೂಡಿದ (ಜಗತ್ತು), ೨೪.

**ಕರ್ತೃತ್ವಭೋಕ್ತೃತ್ವ ಪ್ರವರ್ತಕಃ** - ಬ್ರ.ಸೂ-೧. ಇದನ್ನು ಮಾಡಿ ಇದನ್ನು ಅನುಭವಿಸುವೆನೆಂಬ ಜೀವನಧರ್ಮಗಳನ್ನುಂಟು ಮಾಡುವ (ಅಧ್ಯಾಸ), ೯.

**ಕರ್ತೃತ್ವಭೋಕ್ತೃತ್ವಾದಿ** - ಈಶ. ಮಾಡುವವನು, ಅನುಭವಿಸುವವನು - ಎಂದು ಮುಂತಾಗಿ ಆತ್ಮನಲ್ಲಿ ಈಗ ಕಾಣುವ ಸಂಸಾರಧರ್ಮಗಳು, ೧.

**ಕರ್ತೃತ್ವಭೋಕ್ತೃತ್ವೇ** - ಬ್ರ.ಸೂ-೨. ಇವನ್ನು ಮಾಡಿ ಇವನ್ನು ಅನುಭವಿಸುವದೆಂಬ ಧರ್ಮಗಳು. ಅವಿದ್ಯೆಯು ಇವನ್ನುಂಟುಮಾಡುವದು, ೧-೯: ದೇಹವ್ಯತಿರಿಕ್ತನಾದ ಕರ್ತೃಭೋಕ್ತೃರೂಪನಾದ ಆತ್ಮನಿದಾನೆಂದು ಕೆಲವರು, ಅವನು ಬರಿಯ ಭೋಕ್ತೃವೇ ಎಂದು ಕೆಲವರು ೧-೨೦, ಅನೇಕ ಕರ್ತೃಭೋಕ್ತೃಗಳಿಂದ ಒಡಗೂಡಿದ ಜಗತ್ತು ಬ್ರಹ್ಮದಿಂದಾಗಿದೆ, ೧-೨೪ : ಕರ್ತೃಭೋಕ್ತೃವಾದ ವಿಜ್ಞಾನಾತ್ಮನು ಅವಿದ್ಯಾಕಲ್ಪಿತ, ೧-೧೦೪ ಕರ್ತೃತ್ವವು ಸ್ವಾಭಾವಿಕವಲ್ಲ, ಕರಣಾಪೇಕ್ಷ, ಕರ್ತೃತ್ವಭೋಕ್ತೃತ್ವವೇ ಸಂಸಾರ ೨-೧೫೫ ಕೇನ. ಇದನ್ನು ಮಾಡಿ ಇದನ್ನು

ಅನುಭವಿಸುವೆನೆಂಬ ಅಭಿಮಾನಗಳು, ೬೪ ; ಶಾಂ. ನಿ. ಇದನ್ನು ಮಾಡಿ ಇದನ್ನು ಅನುಭವಿಸುವೆನೆಂಬ ಸ್ವಭಾವವು. ಇದು ಉಪಾಧಿಗಳಾದ ಶರೀರೇಂದ್ರಿಯಗಳ ಧರ್ಮವನ್ನು ಮೇಲೆ ಹಾಕಿಕೊಳ್ಳುವ ಅಧ್ಯಾಸದಿಂದಲೇ ಆತ್ಮನಿಗೆ ಉಂಟಾಗಿರುತ್ತವೆ. ಅಧ್ಯಾಸಭಾಷ್ಯ, ಸೂ. ಭಾ. ೨-೩-೪೦, ಗೀ. ಭಾ. ೧೮-೬೭.

**ಕರ್ತೃಭೋಕ್ತೃಸ್ವಭಾವವಿಜ್ಞಾನಮ್** - ಛಾಂ. ತಾನು ಕರ್ತೃಭೋಕ್ತೃ ಸ್ವಭಾವದವನೆಂಬ ತಿಳಿವಳಿಕೆ, ೪.

**ಕರ್ತೃತ್ವಾಭಿಮಾನಃ** - ಭ.ಗೀ. ನಾನು ಕರ್ತೃ ಎಂಬ ತಪ್ಪುತಿಳಿವು, ೫೫೭.

**ಕರ್ತೃತ್ವಮ್** - ಪ್ರಶ್ನ. ಕರ್ಮವನ್ನು ಮಾಡುವ ಸ್ವಭಾವ, ೧೦೧, ೧೦೪, ೧೦೫, ೧೧೦.

**ಕರ್ತಾ ಭೋಕ್ತಾ** - ಬ್ರ.ಸೂ-೧. ಮಾಡಿರುವವನೂ ಅನುಭವಿಸುವವನೂ ಆದ ಸಂಸಾರಿ, ೨೦.

**ಕರ್ತ್ರಾದಿ** - ನೈ. ಪ್ರತ್ಯಗಾತ್ಮ ವಿಷಯದಲ್ಲಿರುವ ಪ್ರಮೆಯು ಕರ್ತೃವೇ ಮುಂತಾದ ಕಾರಕಭೇದವನ್ನು ಅಲ್ಲಗಳೆದೇ ಹುಟ್ಟುತ್ತದೆ, ೩-೭೧; ಕನಸಿನಿಂದ ಎಚ್ಚತ್ತವನು ಸ್ವಪ್ನದ ಕರ್ತೃಕರ್ಮಕರಣಗಳನ್ನು ಕಾಣದಿರುವಂತೆ ಶ್ರುತಿಯ ಜ್ಞಾನವನ್ನು ಪಡೆದವನು ಗುರುಶಾಸ್ತ್ರಾದಿಗಳನ್ನು ಕಾಣುವದೇ ಇಲ್ಲ, ೩-೩೬, ೩೭.

**ಕಪಾಲಾದೀನಿ** - ಬ್ರ.ಸೂ-೧. ಗಡಿಗೆ ಮುಂತಾದ ಕಾರ್ಯಕ್ಕೆ ಕಾರಣವಾಗಿರುವ ಗಡಿಗೆಯ ಹೋಳು ಮುಂತಾದವು, (ಕಾರ್ಯವು ಮೊದಲು ಇಲ್ಲದಿದ್ದರೆ ಕಾರ್ಯವು ಹುಟ್ಟಿತೆಂದರೆ ಕಾರಣವು ಹುಟ್ಟಿತೆಂದೇ ಆಗುವದು), ೪೪೯.

**ಕರ್ಮ** - ಬ್ರ.ಸೂ-೧. ಶಾಸ್ತ್ರದಲ್ಲಿ ವಿಹಿತವಾಗಿರುವ ಕ್ರಿಯೆ, ೧೨, ೩೫, ೪೨, ೫೮; ಧರ್ಮಾಧರ್ಮ, ೩೭೧, ೩೭೩ ; ಕರ್ಮಕಾರಕ, ೧೬, ೧೭, (ಜಗತ್) ೩೭೩; ಚಲನವ್ಯಾಪಾರ, ೩೭೩ ; ಕ್ರಿಯಾಫಲ, ೩೭೩ ; ಬ್ರ.ಸೂ-೨. ಶಾಸ್ತ್ರದಲ್ಲಿ ಮಾಡಬೇಕೆಂದು ಅಥವಾ ಬಿಡಬೇಕೆಂದು ಹೇಳಿರುವ ಕ್ರಿಯೆ. ಕ್ರಿಯಾ, ಕರ್ತವ್ಯ, ಕಾರ್ಯ, ಅನುಷ್ಠೇಯ - ಇವೆಲ್ಲ ಕರ್ಮಪರ್ಯಾಯಗಳು. ವಿಹಿತಕರ್ಮವನ್ನು ಧರ್ಮವೆಂದೂ ಕರೆಯುವರು. ಕರ್ಮಜ್ಞಾನವಾದ ಮೇಲೆಯೇ ಬ್ರಹ್ಮಜಿಜ್ಞಾಸೆಯೆಂಬ ವೃತ್ತಿಕಾರಮತದ ಖಂಡನೆ, ೧-೧೨ ; ಶಾಸ್ತ್ರವೆಲ್ಲ ಕರ್ಮಪರವೆಂಬ ಮೀಮಾಂಸಕಮತವೂ ಆದರ ಖಂಡನೆಯೂ, ೨-೩೫, ೩೮, ೫೫; ಅನುಷ್ಠೇಯಕರ್ಮದ ಫಲಕ್ಕಿಂತ ಮೋಕ್ಷವು ವಿಲಕ್ಷಣ, ೧-೪೨ ; ಇಷ್ಟಾದಿಕರ್ಮವನ್ನು ಮಾಡಿದವರಿಗೆ ದಕ್ಷಿಣಮಾರ್ಗ, ಉಪಾಸನಾಸಹಿತವಾಗಿ

ಕರ್ಮವನ್ನು ಮಾಡಿದವರಿಗೆ ಉತ್ತರಾಯಣಮಾರ್ಗ, ೧-೪೨, ೨-೨೩೯ ; ಬ್ರಹ್ಮವು ಕರ್ತವ್ಯಶೇಷವೆಂದರೆ ಮೋಕ್ಷವು ಕರ್ಮಫಲಗಳಲ್ಲಿ ಒಂದೆಂದಾಗುವದು, ೧-೪೩ ; ಬ್ರಹ್ಮಜ್ಞಾನಕ್ಕೂ ಮೋಕ್ಷಕ್ಕೂ ನಡುವೆ ಕಾರ್ಯಾಂತರವಿಲ್ಲ , ೧-೪೪ ; ಕರ್ಮಕಾರ್ಯವು ಉತ್ಪಾದ್ಯಾದಿಚತುರ್ವಿಧ, ೧-೪೮, ೪೯, ಅಶರೀರತ್ವಕ್ಕೆ ಕರ್ಮವು ನಿಮಿತ್ತವಲ್ಲ; ೧-೫೮ ; ಕರ್ಮಗಳು ಜ್ಞಾನಕ್ಕೆ ಸಹಕಾರಿಕಾರಣ ಎಂದರೆ ಜ್ಞಾನೋತ್ಪತ್ತಿಗೆ ಬಹಿರಂಗಸಾಧನ, ೨-೪೬೪, ೪೭೦, ೪೭೭ ; ಜ್ಞಾನವುಂಟಾದ ಬಳಿಕ ಮೋಕ್ಷವನ್ನು ಕೊಡಲು ಕರ್ಮದ ಸಹಾಯವು ಬೇಡ, ೨-೪೬೮ ; ಜ್ಞಾನಿಯ ಕರ್ಮದ ವಿನಿಯೋಗ, ೨-೫೨೭, ೫೨೯, ೫೩೧, ೫೩೨, ೫೩೩, ೫೩೮ ; ಉಪಾಸನೆಯಿಂದ ಕರ್ಮಕ್ಕೆ ವೀರ್ಯವು ಹೆಚ್ಚುತ್ತದೆ, ೨-೫೬೫ ; ವಿದ್ಯಾಹೀನಕರ್ಮವೂ ಜ್ಞಾನೋತ್ಪತ್ತಿಗೆ ಅಂಗ ; ೨-೫೫೭. ಮೋಕ್ಷಕ್ಕೆ ಕ್ರಿಯಾನುಪ್ರವೇಶವಿಲ್ಲ, ೧-೫೨, ೬೪ ; ಕ್ರಿಯೆಗೆ ವಿಷಯವಾದದ್ದು, ಕರ್ಮಕಾರಕ. ಮೊದಲನೆಯ ಸೂತ್ರದಲ್ಲಿ ಬ್ರಹ್ಮಣಃ ಎಂಬುದು ಕರ್ಮಣಿಷಷ್ಠಿಯೇ ಹೊರತು ಶೇಷ ಷಷ್ಠಿಯಲ್ಲ, ೧-೧೬, ೧೭ ; ಚಲನವ್ಯಾಪಾರ, ೧-೩೭೩ ; ವೈಶೇಷಿಕಮತದಲ್ಲಿ ಅಣುಗಳ ಸಂಯೋಗವಿಯೋಗಗಳಿಗೆ ಕರ್ಮವು ಸಂಭವಿಸುವದಿಲ್ಲ, ೨-೨೭ ; ಬೇರೆಬೇರೆಯ ಕರ್ಮವನ್ನು ಮಾಡುವ ವಾಗಾದಿಗಳು ಕರ್ಮೇಂದ್ರಿಯಗಳು, ೨-೧೮೩ ; ಕ್ರಿಯೆಯ ಫಲ, ೧-೩೭೩ ; ಮಾಡಲ್ಪಟ್ಟ(ಜಗತ್ತು), ೧-೩೭೩ ; **ಈಶ.** ಅಗ್ನಿಹೋತ್ರವೇ ಮುಂತಾದ ಕರ್ಮಗಳು, ೧, ೬, ೪೧ ; ಲೌಕಿಕವಾದ ಕೆಲಸ, ೨೬; **ಕೇನ.** ಶಾಸ್ತ್ರದಲ್ಲಿ ವಿಧಿಸಿರುವ ಕೆಲಸಗಳು, ೧, ೨, ೫, ೬, ೩೦ ; **ಮುಂ.** ಶಾಸ್ತ್ರದಲ್ಲಿ ವಿಹಿತವಾಗಿರುವ ಅಗ್ನಿಹೋತ್ರವೇ ಮುಂತಾದದ್ದು, ೪, ೨೩, ೨೮, ೩೧, ೩೨, ೩೪, ೩೭, ೩೮, ೪೦, ೪೧, ೪೨, ೪೫, ೪೬, ೪೭, ೫೦, ೬೬, ೬೭, ೭೦, ೭೮, ೮೦, ೮೩, ೯೨, ೯೭, ೧೨೦ ; **ತೈ.** ಶಾಸ್ತ್ರದಲ್ಲಿ ಮಾಡಬೇಕೆಂದು ಅಥವಾ ಬಿಡಬೇಕೆಂದು ಹೇಳಿರುವ ಕರ್ಮ, ೧, ೩ ರಿಂದ ೫, ೮ರಿಂದ ೧೦, ೫೩, ೫೮, ೫೯, ೬೧, ೬೨, ೬೬, ೬೯ ರಿಂದ ೭೪, ೭೭ ರಿಂದ ೮೦ ; **ಬೃಹ-೨.** ಸ್ವಾಭಾವಿಕವಾದ ಕ್ರಿಯೆ, ೫, ೪೫೩ ; ಶಾಸ್ತ್ರೀಯಕರ್ಮ, ೧೬, ೩೧ ; ಕರ್ಮಸಾಮಾನ್ಯ, ೨೩, ೨೮ ; **ಭ.ಗೀ.** ಕ್ರಿಯಾಸಾಮಾನ್ಯ, ೪೩, ೧೬೩, ೨೫೮, ೨೬೧, ೨೬೨, ೨೭೨, ೨೬೪, ೨೬೫, ೨೭೭, ೨೮೩, ೨೮೪ ; ಶಾಸ್ತ್ರದಲ್ಲಿ ವಿಧಿಸಿರುವ ಅಗ್ನಿಹೋತ್ರಾದಿ, ೮, ೧೦, ೧೨, ೪೪, ೮೧, ೮೯, ೯೪, ೧೦೮, ೧೪೯, ೧೫೩, ೧೩೯, ೧೬೦, ೧೬೮, ೧೭೮, ೨೫೮, ೨೮೨, ೩೨೭, ೫೬೩, ೫೭೦, ೭೨೩, ೭೩೩, ೮೫೬, ೧೦೦೧, ೧೦೧೮, ೧೧೨೫, ೧೧೨೬, ೧೧೨೭, ೧೧೨೮, ೧೧೩೦, ೧೧೩೨, ೧೧೩೫, ೧೧೩೭, ಕರ್ತೃವು ಕ್ರಿಯೆಯಿಂದ ಪಡೆಯಬೇಕಾದದ್ದು, ೪೬, ೩೫೨ ; **ನೈ.** ಅಜ್ಞಾನದಿಂದಾಗುವ ಕರ್ಮವು ಅಜ್ಞಾನವನ್ನು ಕಳೆಯಲಾರದು, ಏಕೆಂದರೆ ಅವೆರಡಕ್ಕೂ ವಿರೋಧವಿಲ್ಲ, ೧-೮,

೩೫, ೩೭; ಕರ್ಮವಾದಿಗಳ ಪೂರ್ವಪಕ್ಷ, ೧-೯ ರಿಂದ ೨೧ ರವರೆಗೆ; ಪರಿಹೃತವಾಗಿರುವದರ ಪರಿಹಾರವೂ ಪ್ರಾಪ್ತವಾಗಿರುವದರ ಪ್ರಾಪ್ತಿಯೂ ಕರ್ಮದಿಂದ ಆಗಲಾರದು, ಏಕೆಂದರೆ ಅಜ್ಞಾನವೇ ಅದಕ್ಕೆ ಅಡ್ಡಿಯಾಗಿರುತ್ತದೆ, ೧-೩೪; ಕರ್ಮಕ್ಕೆ ಉತ್ಪಾದ್ಯ, ಆಪ್ಯ, ಸಂಸ್ಕಾರ್ಯ, ವಿಕಾರ್ಯ - ಈ ನಾಲ್ಕೇ ಕರ್ಮದ ಕಾರ್ಯವಾಗಿದೆಯಾದ್ದರಿಂದ ಅದು ಅಕಾರ್ಯವಾದ ಮುಕ್ತಿಗೆ ಕಾರಣವಲ್ಲ, ೧-೨೪, ೫೩; ಕರ್ತೃತ್ವಾದ್ಯಧಿಕಾರಕಾರಣಗಳು ತನಗಿರುವವೆಂಬ ಅಭಿಮಾನವಿರುವ ಅಜ್ಞನೇ ಕರ್ಮವನ್ನು ಮಾಡಿ ಅದರ ಫಲವನ್ನು ಪಡೆಯುತ್ತಾನೆ, ೧-೪೧, ೯೬; ಕರ್ಮಜ್ಞಾನಗಳಿಗೆ ಸಾಧ್ಯಸಾಧನಭಾವವಿರುವದರಿಂದಲೂ ವಿರೋಧವಿರುವದರಿಂದಲೂ ಸಮುಚ್ಚಯವಾಗಲಾರದು, ೧-೫೪ ರಿಂದ ೬೭; ನಾಸಾರಸಬ್ರಹ್ಮವಾದದಲ್ಲಿಯೂ ಇವಕ್ಕೆ ಸಮುಚ್ಚಯವಿಲ್ಲ, ೬೮ ರಿಂದ ೭೮; ಕರ್ಮದಲ್ಲಿ ಪ್ರವೃತ್ತಿಯು ಭ್ರಾಂತಿಯಿಂದಲೇ, ೧-೨೯; ಅವಿದ್ಯಾಕಾಮಕರ್ಮಗಳಿಂದ ಸಂಸಾರ, ೧-೪೨; ಕರ್ಮವು ಜ್ಞಾನಕ್ಕೆ ಪರಂಪರೆಯಿಂದ ಉಪಕಾರಕ, ೧-೪೭ ರಿಂದ ೫೨ ; **ಶಾಂ. ನಿ.** ಶಾಸ್ತ್ರದಲ್ಲಿ ಮಾಡೆಂದು ಅಥವಾ ಬಿಡೆಂದು ವಿಧಿಸಿರುವದು. ಸೂ. ಭಾ. ೧-೧-೪, ಗೀ. ಭಾ. ೧೮-೨೪. ಇದು ಪುರುಷತಂತ್ರವು, ಅಂದರೆ ಮಾಡುವದಕ್ಕೂ ಬಿಡುವದಕ್ಕೂ ಬರುವಂಥದ್ದು. ಸೂ. ಭಾ. ೧-೧-೪ ; ಅವಿದ್ಯಾಪೂರ್ವಕವಾದದ್ದು. ಗೀ. ಭಾ. ೧೮-೬೬. ಕರ್ಮವನ್ನು ಕ್ರಿಯಾಕಾರಕಫಲವಿಜ್ಞಾನಪೂರ್ವಕವಾಗಿ ಮಾಡತಕ್ಕದ್ದಿರುತ್ತದೆ. ಮುಂ. ಭಾ. ೧-೧-೬, ಗೀ. ಭಾ. ೨-೨೧, ಸೂ. ಭಾ. ೧-೧-೧. ಜ್ಞಾನವು ಈ ವಿಷಯದಲ್ಲಿ ಕರ್ಮಕ್ಕೆ ತೀರ ವಿರುದ್ಧವಾಗಿರುತ್ತದೆ.

**ಕರ್ಮಕರ್ತೃತ್ವಮ್** - **ತೈ.** ಅದೇ ಕ್ರಿಯೆಗೆ ತಾನೇ ಕರ್ತೃವೂ ಕರ್ಮವೂ ಆಗಿರುವದು ೨೧೧, ೨೧೯.

**ಕರ್ಮಕರ್ತೃಭಾವಃ** - **ನೈ.** ಒಬ್ಬನೇ ಆತ್ಮನು ಅಹಂಪ್ರತ್ಯಯಕ್ಕೆ ಕರ್ತೃವೂ ಕರ್ಮವೂ ಆಗಿರುವನೆಂಬ ಮೀಮಾಂಸಕರ ಪಕ್ಷವು ಸರಿಯಲ್ಲ, ೧-೨೪ ರಿಂದ ೨೭.

**ಕರ್ಮಕಾಂಡಮ್, ವಿಧಿಶಾಸ್ತ್ರಮ್** - **ಬೃಹ-೧.** ಕರ್ಮವನ್ನು ವಿಧಿಸುವ ವೇದಭಾಗ, ೫, ೩೧೯, ೩೨೦.

**ಕರ್ಮಕಾಂಡಮ್** - **ಮಾಂ.** ಕರ್ಮಗಳನ್ನು ವಿಧಿಸುವ ವೇದಭಾಗ, ೧೫೨ ; **ಬೃಹ-೨.** ವಿಧಿಪ್ರತಿಷೇಧಾತ್ಮಕವಾದ ವೇದಭಾಗ, ೩೦೪, ೩೦೭ ; **ಶಾಂ. ನಿ.**

ಕರ್ಮವನ್ನು ವಿಧಿಸುವ ಅಥವಾ ನಿಷೇಧಿಸಿರುವ ವೇದಭಾಗ. ಇಷ್ಟದ ಪ್ರಾಪ್ತಿಗೂ ಅನಿಷ್ಟದ ನಿವೃತ್ತಿಗೂ ಉಪಾಯವೇನೆಂಬುದನ್ನು ತಿಳಿಸುವದಕ್ಕೆ ಕರ್ಮಕಾಂಡವು ಹೊರಟಿರುತ್ತದೆ. ದೇಹವ್ಯತಿರಿಕ್ತನಾದ ಆತ್ಮನಿದ್ದಾನೆಂದು ತಿಳಿದವರಿಗೆ ಈ ಕಾಂಡವು ಕರ್ಮವೆಂಬ ಉಪಾಯವನ್ನು ತಿಳಿಸುತ್ತದೆ. ಬೃ. ಭಾ. ಅವತರಣಿಕೆ, ತೈ. ಭಾ. ಅವತರಣಿಕೆ.

**ಕರ್ಮಕಾರ್ಯಮ್** - ಮುಂ. ಕರ್ಮದಿಂದಾಗುವ ಫಲವು ; ಉತ್ಪಾದ್ಯ, ಆಪ್ಯ, ಸಂಸ್ಕಾರ್ಯ, ವಿಕಾರ್ಯ - ಎಂಬ ನಾಲ್ಕರಲ್ಲಿ ಒಂದು, ೪೬.

**ಕರ್ಮಜ್ಞಾನೇ, ಜ್ಞಾನಕರ್ಮಣೀ** - ಬೃಹ-೧. ವೇದವಿಹಿತವಾದ ಮತ್ತು ಸ್ವಾಭಾವಿಕವಾದ ಕರ್ಮ, ಉಪಾಸನೆ - ಇವು, ೪೩, ೪೬, ೯೯.

**ಕರ್ಮಜ್ಞಾನಾಧಿಕೃತಃ** - ಛಾಂ. ಕರ್ಮೋಪಾಸನೆಗಳನ್ನು ಮಾಡುವದಕ್ಕೆ ಅಧಿಕಾರಿಯಾದವ, ೨೧.

**ಕರ್ಮನಿಷ್ಠಾ** - ಈಶ. ಶಾಸ್ತ್ರೋಕ್ತಕರ್ಮಗಳಲ್ಲಿಯೇ ನೆಲೆನಿಲ್ಲುವದು, ೭, ೨೦; ಭ.ಗೀ. ಕರ್ಮವನ್ನೇ ಮಾಡತಕ್ಕದ್ದು ಎಂದು ಅದರಲ್ಲಿ ತತ್ಪರನಾಗಿರುವದು, ೧೫೪, ೧೫೮.

**ಕರ್ಮನಿರಪೇಕ್ಷಮ್** - ಛಾಂ. ಕರ್ಮದ ಹಂಗಿಲ್ಲದ, (ಅದ್ವೈತಜ್ಞಾನ) ೨.

**ಕರ್ಮಫಲವಿಭಾಗಜ್ಞಃ, ಕರ್ಮಫಲವಿಭಾಗಕರ್ತಾ** - ಬೃಹ-೨. ಈ ಕರ್ಮಕ್ಕೆ ಈ ಫಲವೆಂದು ವಿವೇಚಿಸಬಲ್ಲ (ಈಶ್ವರ), ೭೨, ೮೫.

**ಕರ್ಮಫಲವಿಭಾಗಜ್ಞಃ** - ಭ.ಗೀ. ಇಂಥ ಕರ್ಮಕ್ಕೆ ಇಂಥ ಫಲವೆಂದು ವಿಂಗಡಿಸಿ ಅರಿಯಬಲ್ಲವನು, ೪೮೫.

**ಕರ್ಮಬನ್ಧಃ** - ಭ.ಗೀ. ಪಾಪಪುಣ್ಯಗಳ ಕಟ್ಟು, ೮೧.

**ಕರ್ಮಯೋಗಃ** - ಭ.ಗೀ. ಸಂಗಫಲಾಶೆಗಳಿಲ್ಲದೆ ಈಶ್ವರನ ಆರಾಧನೆಗೆಂದು ಕರ್ಮವನ್ನು ಮಾಡುವದು, ೮೧, ೮೩, ೧೦೧, ೧೦೮, ೧೫೬, ೧೬೦, ೧೭೯.

**ಕರ್ಮವಿಪಾಕಃ** - ಬೃಹ-೧. ಪಾಪಪುಣ್ಯಗಳು ಪಕ್ವವಾಗಿ ಫಲವನ್ನು ಕೊಡುವದು, ೧೧೨ ; ಬೃಹ-೨. ಕರ್ಮವು ಮಾಗಿ ಫಲವನ್ನು ಕೊಡುವ ಬಗೆ, ೩೭, ೨೬೦.

**ಕರ್ಮಶೇಷತಾ** - ಈಶ. ಕರ್ಮಕ್ಕೆ ಅಂಗವಾಗಿರುವದು, ೧.

**ಕರ್ಮಸಂನ್ಯಾಸಃ** - ಭ.ಗೀ. ವಿಹಿತಕರ್ಮಗಳನ್ನು ಬಿಡುವದು, ೧೬೧, ೩೨೦, ೩೨೧, ೩೨೨, ೩೨೩, ೩೨೯, ೩೭೯, ೧೦೦೧, ೧೦೧೮.

**ಕರ್ಮಸಹಭಾವಿ** - ಛಾಂ. ಕರ್ಮದೊಡನೆ ಇರಬಹುದಾದ, ೪.

**ಕರ್ಮಸಮವಾಯಿತ್ವಮ್, ಕ್ರಿಯಾಸಮವಾಯಃ** - ಬ್ರ.ಸೂ-೧. ಕರ್ಮಕ್ಕೆ ಸಂಬಂಧಪಟ್ಟಿರುವದು, ೩೫, ೫೮.

**ಕರ್ಮಸಾಮರ್ಥ್ಯವಿಷಯಾಃ** - ಬೃಹ-೨. ಕರ್ಮವು ಏನೇನು ಮಾಡಬಲ್ಲದೆಂಬುದಕ್ಕೆ ವಿಷಯಗಳು, ಉತ್ಪತ್ತ್ಯಾಪ್ತಿವಿಕಾರಸಂಸ್ಕಾರಗಳು, ೩೧, ೩೩.

**ಕರ್ಮಸಮೃದ್ಧಿಃ** - ಬೃಹ-೨. ಮಾಡಿದ ಕರ್ಮವು ಹೆಚ್ಚಿನ ವೀರ್ಯವುಳ್ಳದ್ದಾಗುವದು, ೯೧.

**ಕರ್ಮಸಾಧನಮ್** - ಬೃಹ-೨. ಶಾಸ್ತ್ರೀಯಕರ್ಮಕ್ಕೆ ಬೇಕಾದ (ಯಜ್ಞೋಪವೀತಾದಿ), ೫೬, ೫೭.

**ಕರ್ಮಹೇತುಃ, ಕರ್ಮೋಪಾದಾನಹೇತುಃ** - ತೈ. ಕರ್ಮವನ್ನು ಮಾಡುವಂತೆ ಪ್ರೇರಿಸುವ ಕಾರಣ, ೨, ೬, ೧೧.

**ಕರ್ಮಾಂಗಸಂಸ್ಕಾರಃ** - ಬ್ರ.ಸೂ-೧. ಕರ್ಮಕ್ಕೆ ಬೇಕಾದ ವಸ್ತುವಿನಲ್ಲಿ ದೋಷವನ್ನು ತೆಗೆದುಹಾಕುವ, ಅಥವಾ ಗುಣವನ್ನುಂಟುಮಾಡುವ ಸಂಸ್ಕಾರ, ೪೬.

**ಕರ್ಮಾಂಗಸಾಮ** - ಕೇನ. ಕರ್ಮವನ್ನು ಮಾಡುವಾಗ ಹೇಳಬೇಕಾದ ಸಾಮವು. ಇದರ ಉಪಾಸನೆಯನ್ನು ಅಂಗಾವಬದ್ಧ ಉಪಾಸನೆಯೆನ್ನುವರು. ೧,

**ಕರ್ಮಾಙ್ಗಾವಬದ್ಧೋಪಾಸನಾ** - **ಶಾಂ.** ನಿ. ಕರ್ಮದ ಅಂಗಕ್ಕೆ (ಒಂದು ಭಾಗಕ್ಕೆ) ಸಂಬಂಧಪಟ್ಟದ್ದಾಗಿದ್ದು ಕರ್ಮಗಳನ್ನು ಮಾಡುವವರೇ ಮಾಡಬಹುದಾದ ಉಪಾಸನೆಗಳು. ಈ ಉಪಾಸನೆಗಳಿಗೆ ಅಲ್ಲಲ್ಲಿ ಹೇಳಿರುವ ಫಲಗಳೇ ಆಗುವವು. ಇವೂ ಜ್ಞಾನದಂತೆ ಮಾನಸವಾಗಿರುವದರಿಂದ ಜ್ಞಾನಪ್ರಕರಣದಲ್ಲಿಯೇ ಅವುಗಳನ್ನು ಹೇಳಿದೆ. ಛಾಂ. ಭಾ. ಅವತರಣಿಕೆ.

**ಕರ್ಮೇನ್ದ್ರಿಯಾಣಿ** - **ಪ್ರಶ್ನ.** ಬೇರೆಬೇರೆಯ ಕೆಲಸವನ್ನು ಮಾಡುವ ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ - ಎಂಬ ಇಂದ್ರಿಯಗಳು, ೨೪, ೨೫, ೭೨ ; **ಮುಂ.** ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ - ಎಂಬ ಕರ್ಮದಲ್ಲಿ ತೊಡಗಿಸುವ ಇಂದ್ರಿಯಗಳು, ೧೯, ೫೪ ; **ಶಾಂ. ನಿ.** ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ - ಎಂಬ, ಕ್ರಿಯೆಯನ್ನು ಮಾಡುವದಕ್ಕೆ ಸಾಧನವಾಗಿರುವ ಇಂದ್ರಿಯಗಳು. ಗೀ. ಭಾ. ೩-೬, ೧೩-೫.

**ಕರಣಾನಿ - ಬ್ರ.ಸೂ-೨.** ಇಂದ್ರಿಯಗಳು (ಅಲ್ಲಲ್ಲಿ ಪ್ರಯೋಗಿಸಲ್ಪಟ್ಟಿವೆ ; ಭಾಷ್ಯ ಭಾಗಗಳನ್ನು ನೋಡಿ.) ; **ಕೇನ.** ವಾಗಾದಿಕರ್ಮೇಂದ್ರಿಯಗಳು ಐದು, ಚಕ್ಷುರಾದಿಜ್ಞಾನೇಂದ್ರಿಯಗಳು ಐದು, ಮನಸ್ಸು , ಬುದ್ಧಿ - ಎಂಬ ಹನ್ನೆರಡು ಸಾಧನಗಳು, ೧೫, ೧೬, ೬೮ ; **ಭ.ಗೀ.** ಶರೀರದಲ್ಲಿರುವ (ಹದಿಮೂರು ಕರಣಗಳು) ೮೧೦ (ಹನ್ನೆರಡು) ೧೦೨೯ ; **ಬೃಹ-೨.** ಬುದ್ಧಿಗೆ ದ್ವಾರವಾಗಿರುವ ಇಂದ್ರಿಯಗಳು, ೧೭೧ ; **ಶಾಂ. ನಿ.** ಬುದ್ಧೀಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು, ಮನಸ್ಸು ಒಂದು - ಹೀಗೆ ಹನ್ನೊಂದು ಇಂದ್ರಿಯಗಳೂ ಆತ್ಮನಿಗೆ ಸಾಧನವಾಗಿರುವದರಿಂದ ಕರಣಗಳೆನಿಸುವವು. ಗೀ. ಭಾ. ೧೩-೫ ; ಮನಸ್ಸನ್ನು-ಮನಸ್ಸು ಬುದ್ಧಿ ಎಂದು ಒಡೆದು ಹನ್ನೆರಡು ಕರಣಗಳನ್ನೂ (ಗೀ. ಭಾ. ೧೮-೧೪), ಅಹಂಕಾರವನ್ನೂ ಬೇರ್ಪಡಿಸಿ ಹದಿಮೂರೆಂದೂ (ಗೀ. ಭಾ. ೧೩-೨೦), ಚಿತ್ತವನ್ನು ಬೇರ್ಪಡಿಸಿ ಹದಿನಾಲ್ಕೆಂದೂ (ಸೂ. ಭಾ. ೨-೪-೬) ಭಾವಿಸಬಹುದು. ಇವುಗಳಲ್ಲಿ ಹತ್ತು ಇಂದ್ರಿಯಗಳು ಬಾಹ್ಯಕರಣಗಳು, ಮನಸ್ಸು ಅಂತಃಕರಣವು. ಇವುಗಳಿಗೆ ಮುಖ್ಯಪ್ರಾಣವನ್ನೂ ಸೇರಿಸಿದರೆ **ಪ್ರಾಣಗಳು** ಎಂದು ಕರೆಯುವದುಂಟು. (ಸೂ. ಭಾ. ೨-೪-೬). ಆದರೆ ಮುಖ್ಯಪ್ರಾಣವು ಕರಣವಲ್ಲ (ಸೂ. ಭಾ. ೨-೪-೧೧). ಏಕೆಂದರೆ ಅದಕ್ಕೆ ವಿಷಯವಿಲ್ಲ. ಕರಣಗಳು ಸುಷುಪ್ತಿಯಲ್ಲಿ ಆತ್ಮನಲ್ಲಿ ಒಂದಾಗಿಬಿಡುವವು (ಪ್ರ. ಭಾ. ೪-೧), ಆತ್ಮನಿಗೆ ಜಾಗ್ರತ್ಸ್ವಪ್ನಗಳಲ್ಲಿ ಕರಣಗಳ ಅಪೇಕ್ಷೆಯಿಂದಲೇ ಕರ್ತೃತ್ವಭೋಕ್ತೃತ್ವವುಂಟಾಗಿರುತ್ತದೆ ; ಅವನು ಸ್ವತಃ ಕರ್ತೃವೂ ಅಲ್ಲ, ಭೋಕ್ತೃವೂ ಅಲ್ಲ (ಸೂ. ಭಾ. ೨-೩-೪೦).

**ಕರಣಸಂಘಾತಃ - ಬೃಹ-೨.** ಶರೀರದೊಳಗಿನ ಕರಣಸಮೂಹ, ೪೫.

**ಕರಣಸಂಹತಿಃ - ಐತ.** ಕರಣಗಳ ಒಟ್ಟುಗುಂಪಾದ ಪ್ರಾಣ, ೮೫.

**ಕರಣಾತ್ಮಕಃ - ಬೃಹ-೧.** ಕರಣರೂಪನಾಗಿರುವ ಪ್ರಾಣ, ೨೫೯.

**ಕ್ರಮಮುಕ್ತಿಃ - ಬ್ರ.ಸೂ-೧.** ಈಗಲೇ ಆಗುವದಲ್ಲದ, ಉಪಾಸನೆಯಿಂದ ಬ್ರಹ್ಮಲೋಕಕ್ಕೆ ಹೋದವರಿಗೆ ಜ್ಞಾನದಿಂದಾಗುವ ಮುಕ್ತಿ , ೯೧, ೨೫೨ ; **ಬ್ರ.ಸೂ-೨.** ಕಾಲಾಂತರದಲ್ಲಾಗುವ ಮುಕ್ತಿ. ಕೆಲವು ಉಪಾಸನೆಗಳಿಗೆ ಈ ಮುಕ್ತಿ, ೧-೯೧ ; ಓಂಕಾರಪ್ರತೀಕದ ಮೂಲಕ ಬ್ರಹ್ಮವನ್ನು ಉಪಾಸನೆಮಾಡುವವರಿಗೆ ಕ್ರಮಮುಕ್ತಿ, ೧-೨೫೨ ; ದೇವತೆಗಳಿಗೆ ಅಧಿಕಾರವೆಂದರೆ ಕ್ರಮಮುಕ್ತಿಶಾಸ್ತ್ರಗಳು ಸಾರ್ಥಕ, ೧-೩೦೫ ; ಉಪಾಸನೆಯಿಂದ ಬ್ರಹ್ಮಲೋಕಕ್ಕೆ ಈ ಮುಕ್ತಿಯಾಗುವ ರೀತಿ, ೨-೩೮೧, ೫೭೬, ೬೧೨.

**ಕಲಾಃ** - ಮುಂ. ದೇಹಕ್ಕೆ ಕಾರಣವಾಗಿರುವ ಪ್ರಾಣವೇ ಮುಂತಾದ ಹದಿನಾರು, ೧೨೦ ; ಪ್ರಶ್ನ. ಆತ್ಮನಿಗೆ ಉಪಾಧಿಗಳಾಗಿ ಅವನಿಂದ ಸೃಷ್ಟವಾಗಿರುವ ಪ್ರಾಣಾದಿನಾಮಾಂತವಾದ ತತ್ತ್ವಗಳು, ೮೯, ೯೦, ೯೬, ೯೯, ೧೧೩, ೧೧೪, ೧೧೬.

**ಕಲಾಪ್ರಲಯಃ** - ಪ್ರಶ್ನ. ಕಲೆಗಳು ಆತ್ಮನಿಗಿಂತ ಬೇರೆಯಾಗಿರುವದಿಲ್ಲವೆಂದು ಅರಿತುಕೊಂಡು ಆತ್ಮನಲ್ಲಿಯೇ ಅವುಗಳನ್ನು ಅಡಗಿಸುವದು, ೧೧೫ ; ಶಾಂ. ನಿ. ಪ್ರಾಣನೇ ಮುಂತಾದ ಹದಿನಾರು ಕಲೆಗಳನ್ನು ಜ್ಞಾನದಿಂದ ಹುಸಿಯೆಂದು ಅರಿತುಕೊಂಡು ಆತ್ಮನಲ್ಲಿಯೇ ಅಡಗಿಸುವದು. ಪ್ರ. ಭಾ. ೬-೫.

**ಕಲ್ಪನಾ** - ನೈ. ಅಧ್ಯಾಸ. ಕಲ್ಪನೆಯಿಂದಲೇ ಸ್ತ್ರೀದೇಹವನ್ನು ಮೋಹಿಸುತ್ತಾರೆ, ೨-೫೨; ಅಹಂಕಾರಾದಿದ್ವೈತವು ಆತ್ಮನಲ್ಲಿ ಕಲ್ಪಿತ, ೨-೪೫; ವಿರುದ್ಧ ಧರ್ಮಗಳೂ ಆತ್ಮನಲ್ಲಿ ಕಲ್ಪಿತವಾಗಿರಬಹುದು, ೨-೫೦.

**ಕಲ್ಪನಾಲಾಘವಮ್** - ಬ್ರ.ಸೂ-೧. ಕಲ್ಪಿಸುವದರಲ್ಲಿ ಹಗುರ, ಕಡಿಮೆಯಾಗಿ ಕಲ್ಪಿಸುವದು, ೨೯೦.

**ಕಲ್ಪಿತ** - ಬೃಹ-೧. ಅವಿದ್ಯೆಯಿಂದ ಕಲ್ಪಿಸಿಕೊಂಡಿರುವ (ಸಂಸಾರಿಯಾದ) ಆತ್ಮ, ದುಃಖಿ, ೫೮, ೧೦೬ ; ಶಾಂ. ನಿ. ಅಧ್ಯಸ್ತವಾಗಿರುವ, ತಪ್ಪುತಿಳಿವಳಿಕೆಯಿಂದ ಕಾಣುವ.

**ಕಷಾಯಃ** - ಛಾಂ. ರಾಗದ್ವೇಷಾದಿ ಚಿತ್ತದೋಷಗಳು, ೬೦೫ ; ಶಾಂ. ನಿ. ರಾಗದ್ವೇಷವೇ ಮುಂತಾದ ಅಂತಃಕರಣದೋಷವು. ಮರದ ಚಕ್ಕೆಯೇ ಮುಂತಾದವುಗಳಿಂದಾಗುವ ಬಣ್ಣದಂತೆ ಇರುವದರಿಂದ ಇದಕ್ಕೆ ಕಷಾಯವೆಂದು ಹೆಸರು. ಛಾಂ. ಭಾ. ೭-೨೬-೨.

**ಕಷ್ಟಾ ಗತಿಃ** - ಛಾಂ. ಕರ್ಮೋಪಾಸನೆಗಳಿಲ್ಲದ ಸಾಮಾನ್ಯರಿಗೆ ದೊರಕುವ ಕೀಳುಗತಿ, ಕೀಳುಪ್ರಾಣಿಗಳ ಜನ್ಮವೇ ಮುಂತಾದದ್ದು, ೨.

# ಕಾ

**ಕಾಣಾದಾಃ** - ಬ್ರ.ಸೂ-೧. ಕಣಾದರ ಅನುಯಾಯಿಗಳು, ವೈಶೇಷಿಕರು, ೬೪ ; ಐತ. ಕಣಾದರ ಅನುಯಾಯಿಗಳು, ವೈಶೇಷಿಕರು, ೨೯, ೬೬ ; ಬೃಹ-೧. ಕಣಾದರ ಅನುಯಾಯಿಗಳಾದ ವೈಶೇಷಿಕರು, ೧೬೧.

**ಕಾಪಿಲಕಾಣಾದಾದಯಃ** - ಶಾಂ. ನಿ. ಕಪಿಲರ ಅನುಯಾಯಿಗಳಾದ ಸಾಂಖ್ಯರು, ಕಣಾದರ ಅನುಯಾಯಿಗಳಾದ ವೈಶೇಷಿಕರು ಮುಂತಾದ ತಾರ್ಕಿಕರು. ಇವರ ತರ್ಕಕ್ಕೆ ಮೂಲಪ್ರಮಾಣವಿಲ್ಲ. ತೈ. ಭಾ. ೨೫೨.

**ಕಾಮಃ , ರಾಗಃ** - ಬ್ರ.ಸೂ-೨. ವಿಷಯಗಳ ಬಯಕೆ. ಅವಿದ್ಯಾಕಾಮಕರ್ಮಗಳನ್ನು ಅವಿದ್ಯಾದಿಗಳೆನ್ನುವರು. ಅವಿದ್ಯಾಕಾಮಕರ್ಮಗಳಿಂದ ಜೀವನಿಗೆ ಮರ್ತ್ಯತ್ವ, ೧-೧೮೫ ಬ್ರಹ್ಮಜ್ಞಾನದಿಂದ ಅವಿದ್ಯಾಕಾಮಕರ್ಮಗಳ ನಾಶ, ೧-೧೮ ; ಅವಿದ್ಯಾಕಾಮಾದಿದೋಷಗಳಿಂದ ಸುಖದುಃಖತಾರತಮ್ಯ, ೧-೪೨ ; ಅವಿದ್ಯಾದಿಗಳುಳ್ಳವನಿಗೆ ಶರೀರಾದ್ಯಪೇಕ್ಷವಾಗಿ ಜ್ಞಾನೋತ್ಪತ್ತಿ , ೧-೭೦ ; ಅವಿದ್ಯಾರಾಗಾದಿಮುಕ್ತರಿಗೇ ಬ್ರಹ್ಮವು ಪ್ರಾಪ್ಯ ೧-೨೨೫ ; ಬೃಹ-೨. ಕಾಮ್ಯವಸ್ತು, ೨೦೮ ; ಸಂಸಾರಕ್ಕೆ ಕಾರಣವಾದ ಇಚ್ಛೆ, ೨೧೮, ೨೨೦ ; ಭ.ಗೀ. ಇಚ್ಛೆ, ೮೬, ೧೦೯, ೧೨೦, ೧೩೭, ೧೩೮, ೨೧೭, ೨೨೦, ೨೨೧, ೨೨೨, ೨೨೪, ೨೨೫, ೨೨೬, ೨೨೭, ೨೭೨, ೯೨೯ ; ವಿಷಯಗಳು, ೮೬, ೧೩೭, ೧೭೧, , ೯೪೦ ; ನೈ. ಕಾಮದಿಂದಲೇ ಸಂಸಾರ, ೧-೪೨, ೪೩, ೪೪; ಕರ್ಮದಿಂದ ಚಿತ್ತಶುದ್ಧಿಯಾಗಿ ಕಾಮಗಳನ್ನೆಲ್ಲ ಬಿಟ್ಟಾಗ ಪ್ರತ್ಯಗಾತ್ಮನಕಡೆಗೆ ಮನಸ್ಸು ತಿರುಗುತ್ತದೆ, ೧-೪೮ ; ಶಾಂ. ನಿ. (೧) ಅವಿದ್ಯೆಯಿಂದುಂಟಾಗಿ ಕರ್ಮಕ್ಕೆ ಕಾರಣವಾಗಿರುವ ಇಚ್ಛೆ ; ಇದು ಹೃದಯಾಶ್ರಿತವಾಗಿರುವದು, ಆತ್ಮನ ಧರ್ಮವಲ್ಲ. ತೈ. ಭಾ. ಅವತರಣಿಕೆ ; ಕ. ಭಾ. ೨-೩-೧೪, (೨) ಇಚ್ಛೆಗೆ ವಿಷಯವಾಗಿರುವ ಶಬ್ದಾದಿಗಳು. ಕ. ಭಾ. ೧-೨-೩, ೨-೧-೨.

**ಕಾಮಕರ್ಮಬೀಜಮ್** - ಈಶ. ಕಾಮಕರ್ಮಗಳಿಗೆ ಕಾರಣವಾಗಿರುವ ಶೋಕಮೋಹಗಳು ೧೭ ; ಕಾಮಕರ್ಮಗಳಿಗೆ ಬೀಜವಾಗಿರುವ ಅವಿದ್ಯಾಕಲ್ಪಿತವಾದ ಅವ್ಯಾಕೃತ, ೨೮.

**ಕಾಮಕರ್ಮಪ್ರವೃತ್ತಿಕಾರಣಮ್** - ಕೇನ. ಕಾಮವೂ ಕರ್ಮವೂ ಉಂಟಾಗುವದಕ್ಕೆ ಕಾರಣವಾದ ಅಜ್ಞಾನ, ೪.

**ಕಾಮಕರ್ಮಣೀ** - ಬೃಹ-೨. ಸಂಸಾರಕ್ಕೆ ಕಾರಣವಾದ ಇಚ್ಛೆ ಮತ್ತು ಅದರಿಂದಾಗುವ ಪ್ರವೃತ್ತಿ, ೨೦೫, ೨೦೬.

**ಕಾಮ್ಯಕರ್ಮ** - ಶಾಂ. ನಿ. ಫಲಾರ್ಥಿಗಳಿಗಾಗಿ ಶಾಸ್ತ್ರದಲ್ಲಿ ವಿಧಿಸಿರುವ ಕರ್ಮ ; ಇವುಗಳನ್ನು ಬಿಟ್ಟು ಚಿತ್ತಶುದ್ಧಿಗಾಗಿ ನಿತ್ಯಕರ್ಮವನ್ನು ಮಾಡುವವನು ಮೋಕ್ಷಕ್ಕೆ ಅಧಿಕಾರಿ. ಗೀ. ಭಾ. ೨-೪೩, ೪೪.

**ಕಾಮ್ಯಕರ್ಮಾಣಿ** - ನೈ. ಕಾಮ್ಯನಿಷಿದ್ಧಕರ್ಮಗಳನ್ನು ಬಿಟ್ಟು ನಿತ್ಯನೈಮಿತ್ತಿಕ ಕರ್ಮಗಳನ್ನು ಮಾಡಿದಮಾತ್ರದಿಂದ ಮುಕ್ತಿಯಾಗುವದೆಂಬ ಪಕ್ಷವು ಸರಿಯಲ್ಲ. ಕಾಮ್ಯಾದಿಕರ್ಮಗಳಿಗೆ ಬೇರೆ ಬೇರೆಯ ಫಲವಿದೆ, ಮುಕ್ತಿಯು ಅದಕ್ಕೆ ಫಲವಲ್ಲ, ೧-೨೬, ೨೭; ಹಿಂದಿನ ಜನ್ಮದ ಕಾಮ್ಯನಿಷಿದ್ಧಕರ್ಮಗಳೂ ನಿತ್ಯಕರ್ಮದಿಂದ ಅಳಿಯಲಾರವು, ೧-೮೨, ೮೩, ೮೪; ಕಾಮ್ಯನಿಷಿದ್ಧಕರ್ಮಗಳನ್ನು ನಾನು ಮಾಡುವದೇ ಇಲ್ಲವೆಂದು ಯಾರಿಂದಲೂ ಪ್ರತಿಜ್ಞೆಮಾಡುವದಾಗಲಾರದು, ೧-೮೧.

**ಕಾಮ್ಯಂ ಕರ್ಮ** - ತೈ. ಫಲಕ್ಕಾಗಿ ಮಾಡುವ ಶಾಸ್ತ್ರೀಯಕರ್ಮ ೧, ೩, ೭೧.

**ಕಾರಕಮ್** - ಶಾಂ. ನಿ. ಕ್ರಿಯೆಯನ್ನುಂಟುಮಾಡುವ ಕರ್ತ್ರಾದಿಸಾಧನ. ಕಾರಕಾಪೇಕ್ಷವಾದದ್ದು ವಸ್ತುವಿನ ತತ್ತ್ವವಲ್ಲ ; ಆದ್ದರಿಂದ ಸುಷುಪ್ತಿಯಲ್ಲಿ ಯಾವ ಕಾರಕವನ್ನೂ ಬಯಸದೆ ಇರುವ ಆತ್ಮರೂಪವು ಸ್ವಾಭಾವಿಕವಾದದ್ದು, ಜಾಗ್ರತ್ ಸ್ವಪ್ನಗಳ ರೂಪವು ಆವಿದ್ಯಕ. ತೈ. ಭಾ. ೨-೮, ಶಾಸ್ತ್ರವು ಕಾರಕವಲ್ಲ, ಹೊಸದಾಗಿ ಯಾವದನ್ನೂ ಉಂಟುಮಾಡುವದಿಲ್ಲ. ಗೀ. ಭಾ. ೩ ಅವತರಣಿಕೆ (ಭಾ. ಭಾ. ೧೪೨)

**ಕಾರಕವ್ಯಾಪಾರಃ** - ಬ್ರ.ಸೂ-೧. ಕಾರ್ಯವನ್ನುಂಟುಮಾಡುವ ಸಾಮಗ್ರಿಯ ಕೆಲಸ, ೪೪೯, ೪೫೦.

**ಕಾರಣಮ್** - ಬ್ರ.ಸೂ-೧. ಕಾರ್ಯವನ್ನುಂಟುಮಾಡುವದಕ್ಕೆ ಬೇಕಾದ ಸಾಧನ, ೩೦, ೪೫೦, ೪೬೬ ; ಪ್ರಮಾಣ, ೩೩ ; ನಿಮಿತ್ತ ಕಾರಣ, ೪೦೧, ೪೧೬, ೪೨೯, ೪೭೭ ; ಬ್ರ.ಸೂ-೨. ಕಾರ್ಯವನ್ನುಂಟುಮಾಡುವ ಸಾಧನ. ಸಾಂಖ್ಯರು ಪ್ರಧಾನವು ಜಗತ್ತಿಗೆ ಉಪಾದಾನಕಾರಣ, ಅದೃಷ್ಟವೇ ಮುಂತಾದದ್ದು ನಿಮಿತ್ತಕಾರಣ ಎನ್ನುವರು ; ವೈಶೇಷಿಕರು ಈಶ್ವರನು ನಿಮಿತ್ತಕಾರಣನು. ಅಣುಗಳು ಸಮವಾಯಿಕಾರಣ, ಸಮವಾಯಿಗೆ ಸಂಬಂಧಪಟ್ಟಿದ್ದು ಅಸಮವಾಯಿಕಾರಣ ಎನ್ನುವರು, ೧-೬೪, ೨-೨೭, ೯೧ ; ಜಗತ್ತಿಗೆ ಬ್ರಹ್ಮವೇ ಮೂಲಕಾರಣ, ಆಕಾಶವು ಶ್ರುತಿಗಮ್ಯವೇ ಹೊರತು ಅನುಮೇಯವಲ್ಲ ಎಂಬುದು ವೇದಾಂತಿಗಳ ಮತ, ೧-೨, ೨೫, ೬೪ ; ಪ್ರಮಾಣ, ೧-೩೩ ; ನಿಮಿತ್ತಕಾರಣ, ೧-೪೦೧, ೪೧೬, ೪೨೯, ೪೭೭; **ಈಶ.** ಜಗತ್ತಿನ ಸೂಕ್ಷ್ಮಸ್ಥಿತಿ, ಅವ್ಯಾಕೃತ, ೨೮ ; **ಶಾಂ. ನಿ.** ಸಕಾರಣವಾದದ್ದು ಸತ್ತಲ್ಲ, ಗೀ. ಭಾ. ೨-೧೬, ಬ್ರಹ್ಮಕ್ಕಿಂತ ಬೇರೆ ಯಾವದೂ ನಿಜವಾಗಿ ಕಾರಣವೆನಿಸಲಾರದು. ಸೂ. ಭಾ. ೧-೨-೨೭. ಆದ್ದರಿಂದ ಸತ್ತಾದದ್ದು ಕಾರಣವಾದೀತೇ ಹೊರತು ಅಸತ್ತು ಕಾರಣವಲ್ಲ, ಮಾಂ. ಕಾ. ಭಾ. ೩-೨೭ ; ಸದ್ರೂಪವಾದ ಬ್ರಹ್ಮವು ಮಾಯಿಕವಾದ ಕಾರಣವು, ಪರಮಾರ್ಥ ಕಾರಣವಲ್ಲ, ಮಾಂ. ಕಾ. ಭಾ. ೩-೨೭.

**ಕಾರಣಬನ್ಧಃ - ಮಾಂ.** ಅರಿಯದಿರುವದೆಂಬ ಬಂಧ, ೪೮, ೪೯, ೫೦, ೫೨.

**ಕಾರಣಂ ಬ್ರಹ್ಮ - ತೈ.** ಜಗತ್ತಿಗೆ ಕಾರಣವಾಗಿರುವ ನಿರ್ವಿಶೇಷಬ್ರಹ್ಮ ೭೬, ೧೭೪, ೧೭೮.

**ಕಾರಣಶರೀರಮ್ - ಈಶ.** ಜೀವನಿಗೆ ಸಂಸಾರವಿದೆಯೆಂಬ ಭಾವನೆಗೆ ಕಾರಣವಾಗಿರುವ ಅವಿದ್ಯೆ, ೧೯ ; **ಶಾಂ. ನಿ.** ಅವಿದ್ಯೆಯಿಂದ ಕಲ್ಪಿತವಾದ ಶರೀರಬೀಜವು - ಎಂಬರ್ಥದಲ್ಲಿ ಈಶಾವಾಸ್ಯಭಾಷ್ಯ ೮ರಲ್ಲಿ ಕಾಣುತ್ತದೆ. ಈ ಶಬ್ದವನ್ನು ಮತ್ತೆಲ್ಲಿಯೂ ಭಾಷ್ಯದಲ್ಲಿ ಉಪಯೋಗಿಸಿಲ್ಲ. ಮೂಲಾವಿದ್ಯೆಯೇ ಕಾರಣಶರೀರವು ಎಂಬ ಈಚಿನ ವೇದಾಂತಿಗಳ ವಾದವು ಭಾಷ್ಯದಲ್ಲಿಲ್ಲ.

**ಕಾರಣಾತ್ಮಾಭಿಧಾನಮ್ - ಬೃಹ-೧.** ಜೀವರುಗಳಿಗೆ ಕಾರಣನಾದ ವಿರಾಡಾತ್ಮನ ನಾನು ಎಂಬ ಹೆಸರು, ೯೮.

**ಕಾರಕಮ್ - ಬೃಹ-೧.** ಇಲ್ಲದ್ದನ್ನುಂಟುಮಾಡುವದು ; ವಚನವು ಜ್ಞಾಪಕ, ಕಾರಕವಲ್ಲ, ೧೫೩ ; ಕ್ರಿಯೆಗೆ ಬೇಕಾದ ಸಾಮಗ್ರಿ, ಕ್ರಿಯಾಕಾರಕಫಲ, ಅನೇಕಕಾರಕ ಸಾಧ್ಯ - ಎಂಬ ಶಬ್ದಗಳನ್ನು ನೋಡಿ ; **ಭ.ಗೀ.** ಇಲ್ಲದ್ದನ್ನುಂಟುಮಾಡುವದು, ಜ್ಞಾಪಕವಲ್ಲ, ೧೪೮ ; ಕ್ರಿಯೆಗೆ ಬೇಕಾದ ಸಾಮಗ್ರಿ, ೨೮೫, ೭೭೩, ೭೭೪ ; **ನೈ.** ಕರ್ತ್ರಾದಿಗಳ ಸ್ವರೂಪ. ಅವಿದ್ಯೆಯಿಂದುಂಟಾಗಿರುವದರಿಂದ ಕಾರಕಗಳನ್ನೆಲ್ಲ ಜ್ಞಾನವು ಹುಟ್ಟಿದ ಮಾತ್ರದಿಂದ ನಾಶಮಾಡುತ್ತದೆ, ೧-೩೬; ಕ್ರಿಯೆಯು ಕಾರಕಗಳ ಸಹಾಯವಿಲ್ಲದೆ ಫಲವನ್ನು ಕೊಡುವದಕ್ಕೆ ತಾನು ಉಳಿದುಕೊಂಡಿರಲಾರದು, ೧-೩೬.

**ಕಾರಕೋಪಸಂಹಾರಃ - ಮುಂ.** ಕ್ರಿಯೆಯ ಸಾಧನೆಗಳನ್ನು ಕೂಡಿ ಹಾಕಿಕೊಳ್ಳುವದು, ೧೮.

**ಕಾರ್ಯಮ್ - ಬ್ರ.ಸೂ-೧.** ಕರ್ತವ್ಯವೆಂಬರ್ಥದಲ್ಲಿಯೇ ಈ ಶಬ್ದದ ಪ್ರಯೋಗ, ಮಾಡತಕ್ಕದ್ದು, ೪೪, ೪೭, ೪೮ ; ಕಾರಣದಿಂದಾಗುವ ಫಲ, ೨೯, ೧೨೬, ೨೨೩, ೪೫೭, ೪೬೭, ೪೬೬ ; **ಶಾಂ. ನಿ.** ಕಾರ್ಯವು ಕಾರಣವಾಗಿಯೇ ಮೊದಲು ಇತ್ತು ; ಕಾರ್ಯಾವಸ್ಥೆಯಲ್ಲಿಯೂ ಕಾರಣವನ್ನು ಬಿಟ್ಟು ಅದು ಬೇರೆಯಾಗಿರುವದಿಲ್ಲ, ಸೂ. ಭಾ. ೨-೧-೧೪, ೨-೧-೭.

**ಕಾರ್ಯಕರಣಾನಿ - ಬ್ರ.ಸೂ-೧.** ಶರೀರವೂ ಇಂದ್ರಿಯಗಳೂ, ೬೫, ೧೫೯, ೪೬೯ ; **ಬ್ರ.ಸೂ-೨.** ದೇಹೇಂದ್ರಿಯಗಳು. ಕಾರ್ಯಕರಣಗಳಿಗೆ ಜೀವನು ಒಡೆಯ, ೧-೧೪೧, ೧೪೭, ೨-೧೧೯ ; ಕಾರ್ಯಕರಣಗಳು ೭ ದಕ್ಕೊಂದು

ಹೊಂದಿಕೊಂಡು ಜೀವನಿಗಾಗಿ ಕೆಲಸಮಾಡುವದರಿಂದ ಅವುಗಳ ಒಟ್ಟಿಗೆ ಕಾರ್ಯಕರಣಸಂಘಾತವೆಂದು ಹೆಸರು, ೧-೧೯೩, ೪೪೦, ೪೫೬, ೨-೧೫೨ ; ಇವು ಅವಿದ್ಯಾಕಲ್ಪಿತ, ೧-೧೯೫, ೩೮೮, ೪೪೦, ೪೫೬, ೨-೧೬೧, ೧೬೫ ; ಕಾರ್ಯ ಕರಣಸಂಘಾತವಿಲ್ಲದ್ದರಿಂದ ಸುಷುಪ್ತಿಯಲ್ಲಿ ಜೀವನು ಸುಖಿ, ೨-೧೫೨, **ಅವಿದ್ಯಾವಸ್ಥೆಯಲ್ಲಿ** ಕಾರ್ಯಕರಣಸಂಘಾತದಿಂದ ಆತ್ಮನನ್ನು ವಿಂಗಡಿಸಿ ಕೊಂಡಿರುವದಿಲ್ಲ, ೨-೧೫೪ ಕಾರ್ಯಕರಣಸಂಘಾತಗಳಲ್ಲಿ ಒಳ ಹೊಕ್ಕಿರುವ ಜೀವರುಗಳೆಲ್ಲರೂ ನಿಜವಾಗಿ ಬ್ರಹ್ಮವೇ, ೨-೧೫೮ ; ದೇಹೇಂದ್ರಿಯಗಳಿಂದ ತನ್ನನ್ನು ವಿಂಗಡಿಸಿಕೊಳ್ಳದಿರುವದೇ ದುಃಖಕ್ಕೆ ನಿಮಿತ್ತ , ೨-೧೬೨ ; **ಕಠ.** ದೇಹೇಂದ್ರಿಯಗಳು, ೧೨೦, ೧೨೫ ; **ಪ್ರಶ್ನ.** ದೇಹವೂ ಇಂದ್ರಿಯಗಳೂ, ೨೪, ೨೫, ೫೩, ೫೮, ೬೯, ೭೨, ೮೭ ; **ಐತ.** ಶರೀರವೂ ಇಂದ್ರಿಯಗಳೂ, ೩೦, ೪೮ ; **ಬೃಹ-೧.** ದೇಹೇಂದ್ರಿಯಗಳು, ೭೯, ೮೦, ೮೧ ; **ಭ.ಗೀ.** ದೇಹೇಂದ್ರಿಯಗಳು, ೧೯೮, ೨೬೪, ೨೬೫, ೩೪೨, ೩೫೧, ೭೫೪, ೮೧೦, ೮೧೬, ೮೭೬, ೮೮೪, ೯೭೮.

**ಕಾರ್ಯಕರಣಾನಿ, ಕಾರ್ಯಕರಣಸಂಘಾತಃ, ಸ್ವಾವಯವಸಂಘಾತಃ** - **ಬೃಹ-೨.** ಶರೀರೇಂದ್ರಿಯಗಳ ಗುಂಪು, ೨೮, ೨೯.

**ಕಾರ್ಯಕರಣಜಾತಾನಿ** - **ಈಶ.** ದೇಹರಾಶಿಗಳು, ೧೨.

**ಕಾರ್ಯಕರಣವಿಕ್ರಿಯಾ** - **ಈಶ.** ಶರೀರೇಂದ್ರಿಯಗಳ ವ್ಯಾಪಾರ, ೧೨.

**ಕಾರ್ಯಕರಣಾಧ್ಯಕ್ಷಃ, ಕಾರ್ಯಕರಣಾಧಿಪಃ** - ಬ್ರ.ಸೂ-೧. ದೇಹೇಂದ್ರಿಯಗಳ ಒಡೆಯನಾದ (ಜೀವ), ೧೪೧, ೧೪೭ ;

**ಕಾರ್ಯಕರಣಸಂಘಾತಃ** - ಬ್ರ.ಸೂ-೧. ಒಟ್ಟಿಗೆ ಸೇರಿಕೊಂಡು ಜೀವನ ಪ್ರಯೋಜನಕ್ಕಾಗಿರುವ ದೇಹೇಂದ್ರಿಯಗಳು, ೧೩೯, ೧೪೦, ೧೫೬ ; **ಈಶ.** ಒಂದಕ್ಕೊಂದು ಸೇರಿಕೊಂಡು ಕೆಲಸ ಮಾಡುವ ಶರೀರೇಂದ್ರಿಯಗಳ ಒಟ್ಟು, ೧೫ ; **ಕೇನ.** ದೇಹ, ಇಂದ್ರಿಯಗಳು - ಇವುಗಳ ಸಮೂಹ, ೧೨ ; **ಪ್ರಶ್ನ.** ದೇಹೇಂದ್ರಿಯಗಳ ಒಟ್ಟು ಗುಂಪು, ೨೫, ೫೪, ೭೪ ; **ಮಾಂ.** ಶರೀರ, ಇಂದ್ರಿಯಗಳು - ಇವುಗಳ ಒಟ್ಟು, ೧೩೨, ೧೪೭ ; **ಐತ.** ಶರೀರೇಂದ್ರಿಯಗಳು ಒಟ್ಟುಗೂಡಿರುವ ಗುಂಪು ೫೧, ೫೨, ೫೩, ೫೪ ; **ತೈ.** ಶರೀರ ಮತ್ತು ಇಂದ್ರಿಯಾದಿಗಳು ಒಟ್ಟುಗೂಡಿ ಕೆಲಸಮಾಡುವ ಗುಂಪು ೨೩, ೧೬೩, ೧೯೯ ; **ಛಾಂ.** ದೇಹೇಂದ್ರಿಯಗಳು, ಒಟ್ಟುಗೂಡಿ ಕೆಲಸಮಾಡುವ ಗುಂಪು, ೨೩೨, ೪೭೪, ೫೪೫, ೬೦೦ ; **ಭ.ಗೀ.** ಆತ್ಮನಿಗಾಗಿ ಕೆಲಸಮಾಡುವ ದೇಹೇಂದ್ರಿಯಗಳ ಗುಂಪು, ೬೦, ೬೧, ೧೯೮, ೨೭೬, ೩೯೨, ೩೯೩, ೬೩೦, ೭೬೮, ೭೮೪ ; **ನೈ.** ಶರೀರೇಂದ್ರಿಯಗಳ

ಗುಂಪು. ಇದಕ್ಕಿಂತ ವ್ಯತಿರೇಕವಾಗಿ ಆತ್ಮನು ಇದ್ದಾನೆಂದು ತಿಳಿದವನಿಗೂ ತಿಳಿದುಕೊಳ್ಳದವನಿಗೂ ವ್ಯವಹಾರದಲ್ಲಿ ತಾರತಮ್ಯವಿದೆ, ೨-೨೦ ; ಶಾಂ. ನಿ. ಆತ್ಮನಿಗಾಗಿ ಭೋಗವನ್ನುಂಟುಮಾಡುವದಕ್ಕೆ ಒಂದರೊಡನೊಂದು ಸೇರಿಕೊಂಡು ವ್ಯಾಪಾರಮಾಡುತ್ತಿರುವ ಶರೀರೇಂದ್ರಿಯಗಳ ಗುಂಪು. ಐ. ಭಾ. (ಭಾ. ಭಾ. ೫೧), ತೈ. ಭಾ. ೧-೪ (ಭಾ. ಭಾ. ೨೩), ಪ್ರ. ಭಾ. ೨೫ (ಭಾ. ಭಾ. ೨೫), ಗೀ. ಭಾ. ೧೩-೨ (ಭಾ. ಭಾ. ೨೨೫). ಇದು ಅವಿದ್ಯಾಕಲ್ಪಿತ. ಸೂ. ಭಾ. ೨-೧-೧೪.

**ಕಾರ್ಯಕರಣಸಂಘಾತಃ, ಶರೀರೇನ್ದ್ರಿಯಸಂಘಾತಃ** - ಬೃಹ-೧. ದೇಹವೂ ಇಂದ್ರಿಯಗಳೂ ಒಟ್ಟುಸೇರಿದ, ಜೀವನಿಗಾಗಿ ಕೆಲಸ ಮಾಡುತ್ತಿರುವ ಗುಂಪು, ೩೦, ೩೨, ೬೫.

**ಕಾರ್ಯಕಾರಣಭಾವಃ, ಕಾರ್ಯಕಾರಣೇ** - ಬ್ರ.ಸೂ-೧. ಒಂದಕ್ಕೊಂದು ಕಾರ್ಯವೂ ಕಾರಣವೂ ಆಗಿರುವಿಕೆ, ೩೮೫, ೩೯೦, ೪೧೧, ೪೨೨.

**ಕಾರ್ಯಕಾರಣಾನನ್ಯತ್ವಮ್** - ಬ್ರ.ಸೂ-೧. ಕಾರ್ಯಕಾರಣಗಳು ಬೇರೆಯಲ್ಲದಿರುವದು, ಕಾರ್ಯವು ಕಾರಣಕ್ಕಿಂತ ಬೇರೆಯಲ್ಲದಿರುವದು, ೩೯೨, ೪೧೮, ೪೨೦, ೪೨೩.

**ಕಾರ್ಯಕಾರಣಾನಿ** - ಭ.ಗೀ. ಮಹತ್ತೇ ಮುಂತಾದ ಒಂದಕ್ಕೊಂದು ಕಾರಣವಾಗಿರುವ ತತ್ತ್ವಗಳು ೮೧೦, ೮೧೧, ೮೩೪.

**ಕಾರ್ಯಕಾರಣಬೀಜಮ್** - ಮುಂ. ಕಾರಣರೂಪವಾಗಿಯೂ ಕಾರ್ಯರೂಪವಾಗಿಯೂ ತೋರುತ್ತಿರುವ ಆಕಾಶಾದಿಗಳಿಗೂ ಕಾರಣವಾಗಿರುವ ಅವ್ಯಾಕೃತ, ೫೫.

**ಕಾರ್ಯಕಾರಣತ್ವಮ್** - ಛಾಂ. ಉಪಾದಾನಕಾರಣ, ಅದರ ಕಾರ್ಯ - ಇವುಗಳ ಸಂಬಂಧ, ೫೮೧.

**ಕಾರ್ಯಕಾರಣೇ** - ಬ್ರ.ಸೂ-೨. ಉಪಾದಾನಕಾರಣವೂ ಅದರ ಕಾರ್ಯವೂ ಆದ ಪ್ರಕೃತಿವಿಕಾರಗಳು. ವೇದಾಂತಿಗಳ ಕಾರ್ಯಕಾರಣವಾದವು ಪರಿಣಾಮವಾದ, ಆರಂಭವಾದ - ಇವೆರಡಕ್ಕಿಂತಲೂ ವಿಲಕ್ಷಣ. ಕಾರ್ಯವು ಕಾರಣಕ್ಕಿಂತ ವಿಲಕ್ಷಣವಾಗಿರಬೇಕೆಂಬುದು ಆ ಎರಡು ವಾದಗಳ ತಿರುಳು, ೧-೩೯೦, ೪೧೦, ೪೧೧, ೪೧೪ ; ಆ ಎರಡು ವಾದಗಳ ಖಂಡನೆ, ೧-೪೧೫, ೨-೨೨, ೨೪ ; ಕಾರ್ಯದಲ್ಲಿ ಅತಿಶಯವಿಲ್ಲದಿದ್ದರೆ ಕಾರ್ಯಕಾರಣಭಾವವೇ ಇರಲಾರದು, ೧-೪೧೫, ೨-೮೬, ೧೮೬ ; ಕಾರ್ಯಕ್ಕೆ ಅನೇಕ

ಕಾರಣಗಳಿರಬೇಕೆಂಬ ವೈಶೇಷಿಕರ ಮತವು ಸರಿಯಲ್ಲ, ೨-೧೦೦ ; ಕಾರ್ಯವು ಹುಟ್ಟುವ ಮುಂಚೆ ಕಾರಣದಲ್ಲಿರುವದೆಂಬುದನ್ನು ಸಾಂಖ್ಯರೂ ಒಪ್ಪುತ್ತಾರೆ, ೨-೩೪ ; ಕಾರ್ಯವು ಕಾರಣಕ್ಕಿಂತ ಅನ್ಯವಲ್ಲವೆಂಬುದೂ ಸಾಂಖ್ಯರಿಗೆ ಒಪ್ಪು, ೧-೩೯೭ ; ಆದರೆ ವೇದಾಂತಿಗಳ ಮತದಲ್ಲಿ ಕಾರ್ಯವು ಕಾಲತ್ರಯದಲ್ಲಿಯೂ ಕಾರಣಕ್ಕಿಂತ ಅನ್ಯವಾಗಿಲ್ಲ, ೧-೪೨೦, ೪೨೩, ೪೪೪, ೪೫೦ ; ಕಾರ್ಯವು ಕಾರಣಕ್ಕೆ ಅನನ್ಯವೆಂಬುದಕ್ಕೆ ಯುಕ್ತಿಗಳು, ೪೪೨ ರಿಂದ ೪೪೪, ೪೪೬, ೪೫೨, ೪೫೩ ; ಕಾರ್ಯಪ್ರಪಂಚವು ಆವಿದ್ಯಕ, ೧-೨೨೩ ; ಕಾರ್ಯವು ಸ್ವಪ್ನ ಮಾಯೆಗಳಂತೆ, ೧-೪೨೪ ; ಮೂಲಕಾರಣವಾದ ಬ್ರಹ್ಮವೇ ಎಲ್ಲಾ ಕಾರ್ಯಗಳ ರೂಪದಿಂದ ಹುಸಿಯಾಗಿ ತೋರಿಕೊಳ್ಳುತ್ತದೆ. ೧-೪೫೦, ಕಾರ್ಯವಿಷಯದಲ್ಲಿ ಶ್ರುತಿವಿಗಾನವಿದ್ದರೂ ದೋಷವಿಲ್ಲ, ೧-೩೬೬ ; ಕಾರ್ಯವಿಷಯದಲ್ಲಿಯೂ ವಿಗಾನವಿಲ್ಲವೆಂದು ಸೂತ್ರಕಾರರು ತೋರಿಸಿರುತ್ತಾರೆ, ೧-೩೬೭ ; ಕಾರಣವು ಅಸತ್ತಾಗಿತ್ತೆಂಬುದರ ಅರ್ಥ, ೧-೩೬೮ ; ಕಾರ್ಯಧರ್ಮವು ಪ್ರಲಯದಲ್ಲಿ ಕಾರಣಕ್ಕೆ ಅಂಟುವದೆಂಬ ಆಕ್ಷೇಪಕ್ಕೆ ಪರಿಹಾರ. ೧-೪೨೨ ಮಿಥ್ಯಾಜ್ಞಾನವಿರುವವರೆಗೆ ಕಾರ್ಯವು ನಿಯಮದಿಂದ ಉತ್ಪನ್ನವಾಗುತ್ತಿರುತ್ತದೆ, ೧-೪೨೫ ; ಕಾರ್ಯಕಾರಣಗಳು ಬೇರೆಬೇರೆ ಎಂಬ ವಾದದ ಖಂಡನೆ. ೧-೪೪೭ ರಿಂದ ೪೪೯ ; ಬ್ರಹ್ಮದಲ್ಲಿ ಎಲ್ಲಾ ಕಾರಣಧರ್ಮಗಳೂ ಇವೆ, ೧-೪೭೭.

**ಕಾರ್ಯಕಾರಣಪರಂಪರಾ - ಛಾಂ.** ಕಾರ್ಯದ ಕಾರಣ, ಅದರ ಕಾರಣ - ಹೀಗೆ ಒಂದರ ಹಿಂದೊಂದು ಬರುವ ಕಾರ್ಯಕಾರಣಗಳ ಸಾಲು, ೪೯೮.

**ಕಾರ್ಯಕಾರಣಬನ್ಧೌ - ಶಾಂ.** ನಿ. ಜ್ಞಾನಾಭಾವವೆಂಬ ಕಾರಣಬಂಧವು ಸುಷುಪ್ತಾತ್ಮನಿಗೂ, ಇದರ ಜೊತೆಗೆ ಅನ್ಯಥಾಜ್ಞಾನವೆಂಬ ಕಾರ್ಯಬಂಧವು ಜಾಗ್ರತ್ಸ್ವಪ್ನಾತ್ಮರಿಗೂ ಇರುವವು. ಮಾಂ. ಕಾ. ಭಾ. ೧-೧೧.

**ಕಾರ್ಯಕಾರಣಭಾವಃ - ನೈ.** ಕಾರ್ಯಕಾರಣರೂಪವಾದ ದ್ವೈತವಿಲ್ಲದ ಆತ್ಮನನ್ನು ವೇದಾಂತವಾಕ್ಯವು ಸಾಕ್ಷಾತ್ತಾಗಿ ತಿಳಿಸಿಕೊಡುತ್ತದೆ, ೩-೪೭; ಕಾರ್ಯ ಕಾರಣಗಳ ಆಗಮಾಪಾಯಗಳಿಗೆ ಆತ್ಮನು ಸಾಕ್ಷಿ ಎಂದು ತಿಳಿಯುವದರಿಂದ ಸಾಕ್ಷ್ಯನ್ವಯ ಸಾಕ್ಷ್ಯವ್ಯತಿರೇಕದ ಮೂಲಕ ಆತ್ಮರೂಪವು ತಿಳಿಯುತ್ತದೆ, ೩-೫೫ ; **ಶಾಂ.** ನಿ. ಸತ್ತಾದ ಆತ್ಮನಿಗೂ ಅಸತ್ತಾದ ಜಗತ್ತಿಗೂ ಮಾಯೆಯಿಂದ ಕಾರ್ಯಕಾರಣಭಾವವಿರುತ್ತದೆ, ನಿಜವಾಗಿಲ್ಲ, ಮಾಂ. ಕಾ. ಭಾ. ೩-೨೭; ಧರ್ಮಾಧರ್ಮಗಳಿಗೂ ಶರೀರಕ್ಕೂ ನಿಜವಾದ ಕಾರ್ಯಕಾರಣಭಾವವಿಲ್ಲ, ಮಾಂ. ಕಾ. ಭಾ. ೩-೧೭, ೨೦; ಎಚ್ಚರಕನಸುಗಳಿಗೂ ಒಂದಕ್ಕೊಂದಕ್ಕೆ ನಿಜವಾದ

ಕಾರ್ಯಕಾರಣಭಾವವಿಲ್ಲ, ಮಾಂ. ಕಾ. ಭಾ. ೪-೩೯. ಪರಮಾರ್ಥವಾಗಿ ಕಾರ್ಯಕಾರಣಭಾವವಿಲ್ಲವೇ ಇಲ್ಲ, ಮಾಂ. ಕಾ. ಭಾ. ೪-೪೦.

**ಕಾರ್ಯಪ್ರವಿಲಾಪನಮ್** - ಕಠ. ಕಾರ್ಯಗಳನ್ನೆಲ್ಲ ತಮ್ಮ ತಮ್ಮ ಕಾರಣಕ್ಕಿಂತ ಬೇರೆಯಲ್ಲವೆಂದು ಚಿಂತಿಸುವದು, ೧೭೮.

**ಕಾರ್ಯಬ್ರಹ್ಮ** - ಈಶ. ಸತ್ಯಲೋಕದಲ್ಲಿರುವ ಹಿರಣ್ಯಗರ್ಭ. ಅಪರಬ್ರಹ್ಮ, ೨೮, ೩೦.

**ಕಾರ್ಯಂ ಬ್ರಹ್ಮ** - ತೈ. ಹುಟ್ಟಿದ (ಹಿರಣ್ಯಗರ್ಭನೆಂಬ) ಬ್ರಹ್ಮ ೭೬.

**ಕಾರ್ಯಬನ್ಧಃ** - ಮಾಂ. ತಪ್ಪು ತಿಳಿವಳಿಕೆ ಎಂಬ ಬಂಧ, ೪೫, ೫೦, ೫೨.

**ಕಾರ್ಯಲಕ್ಷಣಂ ಬ್ರಹ್ಮ** - ಮುಂ. ಅವ್ಯಾಕೃತಾತ್ಮನಿಂದ ಉಂಟಾಗಿರುವ ಹಿರಣ್ಯಗರ್ಭ, ೨೫.

**ಕಾರ್ಯವಿಧಿಪ್ರಯುಕ್ತ** - ಬ್ರ.ಸೂ-೧. ಕರ್ತವ್ಯವೆಂದು ಹೇಳುವ ವಿಧಿಗೆ ಸೇರಿಕೊಂಡಿರುವ (ಬ್ರಹ್ಮ), ೪೦.

**ಕಾರ್ಯಾನುಪ್ರವೇಶಃ** - ಬ್ರ.ಸೂ-೧. ಕರ್ತವ್ಯಕ್ಕೆ ಸೇರಿಕೊಂಡೇ ಇರುವಿಕೆ, ೪೭.

**ಕಾರ್ಷಾಪಣಮ್** - ಮಾಂ. ಒಂದು ಕರ್ಷ (ಒಂದು ತೊಲ) ಚಿನ್ನದಿಂದ ಮಾಡಿದ ನಾಣ್ಯ, ೯.

**ಕಾಲಃ** - ಬ್ರ.ಸೂ-೨. ಜಗತ್ತಿನಲ್ಲಿ ಕಾಣುವ ಕ್ರಿಯಾಫಲಗಳಿಗೆ ಆಧಾರವಾಗಿರುವ ಕಾಲ, ೧-೨೪ ; ಕಾಲವೂ ಬ್ರಹ್ಮದ ಕಾರ್ಯವೇ, ೨-೯೮ ; ಬ್ರಹ್ಮದಲ್ಲಿ ಕಾಲತ್ರಯವಿಲ್ಲ , ಕಾಲತ್ರಯದಲ್ಲಿಯೂ ಧರ್ಮಾಧರ್ಮಗಳಿಲ್ಲ , ೧-೪೩; ಜ್ಞೇಯವು ಅತೀತ, ಅನಾಗತ, ವರ್ತಮಾನ - ಎಂಬ ಭಾವಗಳನ್ನು ಪಡೆಯುತ್ತಿದ್ದರೂ ಆತ್ಮನು ಬೇರೆಯಾಗುವದಿಲ್ಲ, ೧-೯೯, ಜಾಗ್ರತ್ತಿನಲ್ಲಿರುವಂತೆ ಗೊತ್ತಾದ ಕಾಲವು ಸ್ವಪ್ನದಲ್ಲಿ ಇರುವುದಿಲ್ಲ, ೨-೨೫೬ ; ಮೂರು ಕಾಲಗಳಲ್ಲಿಯೂ ಕರ್ತೃವಾದ ಬ್ರಹ್ಮವೇ ತಾನೆಂದು ಜ್ಞಾನಿಯ ಅರಿವು, ೨-೫೨೮ ; ಬ್ರಹ್ಮದಲ್ಲಿ ದೇಶಕಾಲಾದಿವಿಶೇಷಗಳನ್ನೂ ಸಂಬಂಧವನ್ನೂ ಕಲ್ಪಿಸುವದು ಆಗುವದಿಲ್ಲ, ಆದ್ದರಿಂದ ಅದು ಕಾಲಾಂತರದಲ್ಲಿ ಪಡೆಯುವ ವಾರ್ಧಕಾದಿಗಳಂತಲ್ಲ, ೨-೫೮೨.

**ಕಾಲತ್ರಯಮ್** - ಬ್ರ.ಸೂ-೧. (ಬ್ರಹ್ಮದಲ್ಲಿಲ್ಲದ) ಭೂತಭವಿಷ್ಯದ್ವರ್ತಮಾನಗಳು, ೪೩.

**ಕಾಲತ್ರಯಾಪರಿಚ್ಛಿತ್ತಿಃ** - ನೈ. ಅವಿದ್ಯೆಗೆ ಮೂರು ಕಾಲಪರಿಚ್ಛೇದವೂ ಇಲ್ಲ. ಜ್ಞಾನದೃಷ್ಟಿಯಿಂದ ನೋಡಿದಾಗ ಅದು ಮೂರು ಕಾಲದಲ್ಲಿಯೂ ಇಲ್ಲ, ೨-೫೩, ೩.-೧೧೭.

**ಕಾಲ್ಪನಿಕಭೇದಃ** - ಬ್ರ.ಸೂ-೧. ಅವಿದ್ಯಾಕಲ್ಪಿತವಾದ ಭೇದ, ೨೫೬.

**ಕಾಲಾನ್ತರಫಲದಾಯಿ** - ನೈ. ಕರ್ಮವು ಕಾಲಾಂತರದಲ್ಲಿ ಫಲವನ್ನು ಕೊಡತಕ್ಕದ್ದಾದ್ದರಿಂದ ಅದಕ್ಕೆ ವಿಧಿಯು ಅವಶ್ಯ , ಜ್ಞಾನಕ್ಕೆ ಬೇಕಿಲ್ಲ, ೧-೯೦.

**ಕಾಲಾಂತರಮುಕ್ತಿ, ಕಾಲಾನ್ತರೇ ಬ್ರಹ್ಮಪ್ರಾಪ್ತಿಃ** - ಭ.ಗೀ. ಉಪಾಸನೆಯ ಮೂಲಕವಾಗಿ ಶರೀರವು ಬಿದ್ದ ಬಳಿಕ ಪಡೆಯುವ ಕ್ರಮಮುಕ್ತಿ ೫೧೫, ೫೩೪, ೫೪೩.

# ಕಿ - ಕ್ಷೇ

**ಕಿಂಚಿಜ್ಞ** - ಬ್ರ.ಸೂ-೧. ಅಲ್ಪಜ್ಞನಾದ, ೬೮.

**ಕ್ರಿಯಾ** - ಬ್ರ.ಸೂ-೧. ಮಾನಸಿಕ, ವಾಚಿಕ, ಕಾಯಕ - ಎಂಬ ಭೇದವುಳ್ಳ ಶಾಸ್ತ್ರೀಯವ್ಯಾಪಾರ, ೩೫, ೪೭, ೪೯, ೫೦, ೫೪.

**ಕ್ರಿಯಾಕಾರಕಫಲಬುದ್ಧಿಃ** - **ಶಾಂ. ನಿ.** ಇಂಥಿಂಥ ಸಾಧನಗಳಿಂದ ಇಂಥಿಂಥ ಕರ್ಮವು ಆಗಿ ಇಂಥಿಂಥ ಫಲವು ಉಂಟಾಗುವದೆಂಬ ಬುದ್ಧಿಯು. ಇದು ಅವಿದ್ಯೆಯಿಂದ ತೋರಿಕೊಂಡಿರುತ್ತದೆ. ಈ ಬುದ್ಧಿಯು ಸುಷುಪ್ತಿ ಸಮಾಧಿ - ಮುಂತಾದ ಅವಸ್ಥೆಗಳಲ್ಲಿರುವದಿಲ್ಲ; ದೇಹ, ಇಂದ್ರಿಯ - ಮುಂತಾದವುಗಳೇ ನಾನು ಎಂಬ ಬುದ್ಧಿಯಿರುವಾಗಲೇ ಇದು ಇರುತ್ತದೆ. ಆದ್ದರಿಂದ ಇದು ಭ್ರಾಂತಿಯು - ಎಂದು ನಿಶ್ಚಯಿಸಿ 'ನಾನು ಕ್ರಿಯೆಯಾಗಲಿ ಕಾರಕಗಳಾಗಲಿ ಫಲವಾಗಲಿ ಇಲ್ಲದ ಕೇವಲಾತ್ಮನು' ಎಂದು ತಿಳಿಯುವ ವಿದ್ಯೆಯಿಂದ ಅವಿದ್ಯೆಯು ನಾಶವಾಗುವದು. ಗೀ. ಭಾ. ೧೮-೬೬.

**ಕ್ರಿಯಾಕಾರಕಫಲಾನಿ, ಕ್ರಿಯಾಕಾರಕಾದಿ** ಬ್ರ.ಸೂ-೧. ಕ್ರಿಯೆ, ಆದಾಗುವದಕ್ಕೆ ಸಾಮಗ್ರಿ, ಅದರ ಫಲ - ಇವು, ೩೮, ೨೮೮, ೪೩೫ ; **ಬ್ರ.ಸೂ-೨.** ಕರ್ಮ, ಅದರ ಸಾಮಗ್ರಿ, ಮತ್ತು ಫಲ, ಜಗತ್ತು ಇವಕ್ಕೆ ಆಶ್ರಯ, ೧-೨೪ ; ಶ್ರುತಿಯು ಇವನ್ನು ನಿರಾಕರಿಸಿದೆ, ೧-೩೮ ; ಬ್ರಹ್ಮಾತ್ಮ ಜ್ಞಾನಿಗೆ ಇವುಗಳ ವ್ಯವಹಾರವಿಲ್ಲ , ೧-೪೩೫ ; ಇವು ಅಭಿವ್ಯಕ್ತವಾಗುವದು ಬ್ರಹ್ಮ ಜ್ಯೋತಿಃಸತ್ತೆಯಿಂದ, ೧-೨೭೪ ; ಈ ರೂಪವಾದ ಪ್ರಪಂಚವು ವಿದ್ಯೆಯಿಂದ ನಾಶವಾಗುತ್ತದೆ, ೨-೪೫೩ ; **ಕಠ.** ಕ್ರಿಯೆ,

ಅದನ್ನುಂಟುಮಾಡುವದಕ್ಕೆ ಬೇಕಾದ ಸಾಮಗ್ರಿಗಳು, ಅದರ ಫಲ - ಈ ರೂಪವಾದ ಸಂಸಾರ, ೩೨, ೧೦೪, ೧೫೧ ; **ಬೃಹ-೧.** ಕೆಲಸ, ಅದಕ್ಕೆ ಬೇಕಾದ ಸಾಮಗ್ರಿಗಳು, ಅದರ ಫಲ - ಇವು; ಈ ರೀತಿಯಾಗಿ ತೋರುವ ಸಂಸಾರ, ೭, ೩೭, ೫೮ ; **ಭ.ಗೀ.** ಕೆಲಸ, ಕೆಲಸಕ್ಕೆ ಬೇಕಾಗುವ ಕರ್ತೃ ಕರ್ಮಾದಿಗಳು, ಕೆಲಸದ ಫಲ, ೨೮೫, ೭೭೩, ೭೭೪, ೧೦೪೦, ೧೦೬೯.

**ಕ್ರಿಯಾಕಾರಕಫಲಭೇದಬುದ್ಧಿಃ - ಕೇನ.** ನಾನು ಕರ್ತನು, ಇಂಥ ಸಾಧನಗಳಿಂದ ಈ ಕರ್ಮವನ್ನು ಮಾಡಿ ಇಂಥ ಫಲವನ್ನು ಪಡೆಯುವೆನು ಎಂದು ಕ್ರಿಯೆ, ಕಾರಕ, ಫಲ - ಇವುಗಳನ್ನು ಬೇರೆ ಬೇರೆಯಾಗಿ ಕಾಣುವ ಬುದ್ಧಿ, ೬, ೮೪.

**ಕ್ರಿಯಾಕಾರಕಫಲಮ್ - ಪ್ರಶ್ನ.** ಕರ್ಮ, ಅದರ ಸಾಮಗ್ರಿ, ಅದರ ಫಲ - ಇವುಗಳ ರೂಪದಲ್ಲಿರುವ ಸಂಸ್ಕಾರ, ೧೦೩.

**ಕ್ರಿಯಾಕಾರಕಫಲಭೇದಭಿನ್ನಮ್ - ಮುಂ.** ಕೆಲಸ, ಅದರ ಸಾಮಗ್ರಿ, ಅದರ ಫಲ - ಎಂದು ಬೇರೆ ಬೇರೆಯಾಗಿ ತೋರುವ (ದ್ವೈತ), ೪೩.

**ಕ್ರಿಯಾಕಾರಕಫಲಭೇದಃ - ಮಾಂ.** ಕರ್ಮ, ಕರ್ಮದ ಸಾಮಗ್ರಿ, ಕರ್ಮದಿಂದ ಪಡೆದುಕೊಳ್ಳುವ ಫಲ - ಎಂಬ ಭೇದ, ೧೦೧ ; **ಛಾಂ.** ಕ್ರಿಯೆ, ಅದರ ಸಾಮಗ್ರಿ ಮತ್ತು ಫಲ - ಎಂಬ ಭೇದ, ೫, ೫೮೧, ೫೯೫, ೬೨೬.

**ಕ್ರಿಯಾಕಾರಕಫಲರೂಪಃ - ಐತ.** ಕರ್ಮಗಳು, ಅವಕ್ಕೆ ಬೇಕಾದ ಸಾಮಗ್ರಿಗಳು ಮತ್ತು ಅವುಗಳ ಫಲಗಳು. ಈ ರೂಪದ ಸಂಸಾರ, ೧೯.

**ಕ್ರಿಯಾಕಾರಕಫಲವಿಪರೀತಸ್ವಭಾವಃ, ಕ್ರಿಯಾಕಾರಕಫಲಭೇದಶೂನ್ಯಃ - ಬೃಹ-೧.** ಕ್ರಿಯೆ, ಅದಕ್ಕೆ ಬೇಕಾದ ಸಾಮಗ್ರಿಗಳು ಆದರ ಫಲ - ಇವುಗಳ ಸಂಬಂಧವಿಲ್ಲದೆ, (ಆತ್ಮ), ೨೮೮, ೩೦೨.

**ಕ್ರಿಯಾಕಾರಕಫಲಾನಿ, ಕ್ರಿಯಾಸಾಧನಫಲಾನಿ - ಬೃಹ-೨.** ಕರ್ಮ, ಆದರ ಸಾಮಗ್ರಿ, ಅದರ ಫಲ - ಹೀಗೆ ತೋರುವ ಸಂಸಾರವ್ಯವಹಾರ, ೫೪, ೫೮ ; **ನೈ.** ಅಜ್ಞಾನವು ಕ್ರಿಯಾಕಾರಕ ರೂಪವಾಗಿರುವದರಿಂದ ಅದನ್ನು ಜ್ಞಾನವು ಒಂದೇ ಸಲಕ್ಕೆ ನಾಶಮಾಡಿಬಿಡುತ್ತದೆ, ೧-೬೭; ಕ್ರಿಯಾಕಾರಕಫಲರೂಪವಾದ ತೋರಿಕೆಯು ಆತ್ಮನನ್ನು ಸ್ವಲ್ಪವೂ ಸೋಂಕುವದಿಲ್ಲ, ೨-೫೧, ೧೦೮, ೧೧೬; ಕ್ರಿಯಾಕಾರಕರಹಿತನಾಗಿರುವ, ನಾಮಾದಿಗಳಿಗಿಂತ ಆಚೆಯಿರುವ ಆತ್ಮನೇ ನಿಜವಾದ ಆತ್ಮನು, ೨-೫೭, ೩-೧೦೨; ಅನುಮಾನದಿಂದ ಕ್ರಿಯಾಕಾರಕಫಲರಹಿತವಾದ ಆತ್ಮತತ್ವವು ಸಿಕ್ಕಲಾರದು, ೩-೧೧೫.

**ಕ್ರಿಯಾಕಾರಕಫಲಶೂನ್ಯ, ಕ್ರಿಯಾಕಾರಕಫಲವರ್ಜಿತ** ಬೃಹ-೨. ಕ್ರಿಯಾದಿಗಳ ಸೋಂಕಿಲ್ಲದ (ಆತ್ಮ, ಮುಕ್ತಿ), ೩೦, ೧೭೬.

**ಕ್ರಿಯಾಪದಮ್** - ನೈ. ವಾಕ್ಯಕ್ಕೆ ಕ್ರಿಯಾಪದವು ಬೇಕು, ಆದರೆ ವಿಧಿಯನ್ನು ಹೇಳುವ ಕ್ರಿಯಾಪದವೇ ಬೇಕೆಂಬುದಿಲ್ಲ; ಅಸಿ, ಅಸ್ಮಿ - ಮುಂತಾದವುಗಳಿದ್ದರೂ ಸಾಕು, ೧-೯೭.

**ಕ್ರಿಯಾಫಲಸಾಙ್ಕರ್ಯಮ್** - ಮಾಂ. ಒಬ್ಬರು ಮಾಡಿದ ಕರ್ಮಕ್ಕೆ ಎಲ್ಲಾ ಜೀವರೂ ಫಲವನ್ನನುಭವಿಸುವದು, ೧೩೪.

**ಕ್ರಿಯಾರ್ಥ** - ಬೃಹ-೧. ಕರ್ಮವನ್ನು ತಿಳಿಸುವ (ವಾಕ್ಯ), ೫೨, ೫೩.

**ಕ್ರಿಯಾನುಪ್ರವೇಶಃ, ಕ್ರಿಯಾಸಮವಾಯಃ** - ಬ್ರ.ಸೂ-೧. ಕ್ರಿಯೆಗೆ ಸೇರಿಕೊಂಡಿರುವಿಕೆ, ಕ್ರಿಯೆಗೆ ಸಂಬಂಧಪಟ್ಟಿರುವಿಕೆ, ೫೦, ೫೮.

**ಕ್ರಿಯಾಶಕ್ತಿಃ** - ಮುಂ. ಬ್ರಹ್ಮದಲ್ಲಿರುವ ಕ್ರಿಯೆಗಳನ್ನುಂಟುಮಾಡುವ ಶಕ್ತಿ, ೨೩.

**ಕೂಟಸ್ಥನಿತ್ಯ** - ಬ್ರ.ಸೂ-೧. ಯಾವಾಗಲೂ ಮಾರ್ಪಡದೆ ಇದ್ದಂತೆ ಇರುವ (ಬ್ರಹ್ಮ, ಮೋಕ್ಷ), ೪೩, ೫೪, ೫೫, ೯೧, ೨೬೫, ೨೬೯, ೨೯೪, ೩೮೬, ೪೩೯.

**ಕೂಟಸ್ಥ** - ಬ್ರ.ಸೂ-೧. ಮಾರ್ಪಾಡನ್ನು ಹೊಂದದೆ ಇದ್ದಂತೆ ಇರುವ (ಬ್ರಹ್ಮ), ೪೩೦-೪೪೦ ; ಬ್ರ.ಸೂ-೨. ಮಾರ್ಪಡದೆ ಇದ್ದಂತೆ ಇರುವ. ಬ್ರಹ್ಮವು ಕೂಟಸ್ಥ ನಿತ್ಯವಾದ್ದರಿಂದ ಕರ್ಮಶೇಷವಲ್ಲ, ಬ್ರಹ್ಮರೂಪವಾದ ಮೋಕ್ಷವು ಕರ್ಮಸಾಧ್ಯವೂ ಅಲ್ಲ, ೧-೪೩ ; ಕೂಟಸ್ಥನಾದ ಸಾಕ್ಷಿಯು ವೇದಾಂತೈಕವೇದ್ಯ, ೧-೫೪, ೫೫ ; ಕೂಟಸ್ಥ ನಿತ್ಯನಾದ ಆತ್ಮನು ಉಪಾಧಿವಿಶೇಷದಿಂದ ತಾರತಮ್ಯದ ಐಶ್ವರ್ಯವುಳ್ಳವನಾಗಬಹುದು ೧-೯೧ ; ಕೂಟಸ್ಥನಿತ್ಯದೃಕ್ಸ್ವರೂಪವಾದ ಬ್ರಹ್ಮವೇ ನಾನೆಂದು ತಿಳಿಯುವವರೆಗೇ ಜೀವತ್ವ, ೧-೨೬೪ ; ಈ ಸ್ವಭಾವದ ಆತ್ಮನೂ ಅವಿವೇಕದಿಂದ ಅನಾವಿರ್ಭೂತಸ್ವರೂಪನೂ ವಿವೇಕದಿಂದ ಆವಿರ್ಭೂತ-ಸ್ವರೂಪನೂ ಆಗಬಹುದು, ೧-೨೬೬ ; ಇಂಥ ಆತ್ಮನಿಗೆ ವಿಶೇಷಜ್ಞಾನವು ತೋರಿ ಹೋಗುವ ರೀತಿ, ೧-೩೮೬ ; ಕೂಟಸ್ಥನಿತ್ಯಚೈತನ್ಯವೂ ಅವಿದ್ಯೆಯಿಂದ ನಾನಾವಿಧವಾಗಿ ತೋರುತ್ತದೆ, ೧-೨೬೯ ; ಕೂಟಸ್ಥಬ್ರಹ್ಮಕ್ಕೆ ನಿಜವಾಗಿ ಅನೇಕಧರ್ಮಗಳು ಇರಲಾರವು, ೧-೪೩೯.

**ಕೂಟಸ್ಥಮ್** - ಕೇನ. ಯಾವ ವಿಕಾರವೂ ಇಲ್ಲದೆ ಇದ್ದಂತೆ ಇರುವ, ೧೨ ; ಕಠ. ಯಾವ ವಿಕಾರವೂ ಇಲ್ಲದ ಆತ್ಮತತ್ತ್ವ, ೧೨೯ ; ಮುಂ. ಯಾವ ವಿಕಾರವೂ ಇಲ್ಲದ ಬ್ರಹ್ಮ, ೪೬.

**ಕೂಟಸ್ಥಃ** - ಭ.ಗೀ. ಮಾಯಾಶಕ್ತಿ ೯೧೭, ಮಾಯಾಶಕ್ತಿಯಲ್ಲಿ ಅದಕ್ಕೆ ಸಾಕ್ಷಿಯಾಗಿರುವ ಪರಮಾತ್ಮ ೭೨೯, ಮನಸ್ಸಿನಲ್ಲಿ ವಿಕಾರವನ್ನು ಹೊಂದದ, ೩೯೩ ; ನೈ. **ಅವಿಕಾರಿಯಾದ ಆತ್ಮ**. ಅಂತಃಕರಣವು **ಪರಿಣಾಮಿಯಾಗಿರುವಂತೆ** ಆತ್ಮನು ಪರಿಣಾಮಿಯಲ್ಲ; ಅವನು ಇದ್ದಂತೆ ಇರುವ ಕೂಟಸ್ಥನು, ೨-೬೯, ೭೪, ೭೭, ೮೩, ೮೬, ೩-೧; ಇವನಿಗೆ ಕಲ್ಪಿತವಾದ ಪರಿಣಾಮವನ್ನು ಒಪ್ಪಿದರೂ ಬಾಧಕವಿಲ್ಲ, ೨-೮೫; ಸಾಮಾನ್ಯವಿಶೇಷಗಳನ್ನು ಬಿಟ್ಟು ಇದ್ದಂತೆ ಇರುವದೇ **ಕೂಟಸ್ಥತ್ವವು**, ೩-೧೭; ಕೂಟಸ್ಥನಾದ ಆತ್ಮನಿಗೂ ಪರಿಣಾಮಿಯಾದ ಅಂತಃಕರಣಕ್ಕೂ **ಆತ್ಮಾನವಬೋಧವೇ** ಸಂಬಂಧ, ೩-೨೦ ; **ಕೂಟಸ್ಥಾತ್ಮನಲ್ಲಿ ಹಾನೋಪಾದಾನಗಳಿಲ್ಲ**, ೩-೨೧, ಆತ್ಮನಿಗೆ ಕೂಟಸ್ಥಬೋಧವು ಸ್ವಾಭಾವಿಕವಾದದ್ದು, ಔಪಾಧಿಕವಲ್ಲ, ೩-೧, ೧೫, ೬೦, ೧೧೧; ಕೂಟಸ್ಥಬೋಧವಿಲ್ಲದೆ ಅಂತಃಕರಣಕ್ಕೆ ತೋರುವದು, ಮರೆಯಾಗುವದು ಮುಂತಾದವು ಸಿದ್ಧಿಯಾಗವು, ೨-೮೨; **ಆತ್ಮಜ್ಞಾನವಾದಾಗ** ಕೂಟಸ್ಥವಾದ ಅವಗತಿಮಾತ್ರವೇ ಉಳಿದುಕೊಳ್ಳುವದು, ೪-೩೮; ಕೂಟಸ್ಥಜ್ಞಾನರೂಪನಾದ ಆತ್ಮನು ಅವಸ್ಥಾತ್ರಯದಲ್ಲಿಯೂ ಅದ್ವಿತೀಯನೇ ಆಗಿರುತ್ತಾನೆ, ೪-೪೮.

**ಕುತರ್ಕಃ** - ಬೃಹ-೧. ಪ್ರಮಾಣದ ಆಧಾರವಿಲ್ಲದ ವೇದವಿರುದ್ಧವಾದ ತರ್ಕ, ೩೨೫.

**ಕುತಾರ್ಕಿಕಾಃ** - ಮಾಂ. ವೇದವಿರುದ್ಧವಾದ ತರ್ಕವನ್ನೇ ಹಿಡಿದು ವಾದಿಸುವವರು, ೧೫೧.

**ಕುತಾರ್ಕಿಕಭೇದದೃಷ್ಟಿಃ** - ಕಠ. ವೈದಿಕೋಪದೇಶಕ್ಕೆ ವಿರುದ್ಧವಾದ ಕೆಟ್ಟ ತರ್ಕದಿಂದ ಭೇದವನ್ನು ಕಾಣುವ ದೃಷ್ಟಿ, ೧೩೨.

**ಕುದೃಷ್ಟಿಃ** - ಕಠ. ಇರುವದನ್ನು ಇಲ್ಲವೆನ್ನುವ ವೇದವಿರುದ್ಧವಾದ ತಪ್ಪು ತಿಳಿವಳಿಕೆ, ೧೩೨ ; ಬೃಹ-೨. ತಾರ್ಕಿಕರ ತಪ್ಪು ದೃಷ್ಟಿ, ೨೮೨.

**ಕುಲಾಲಸುವರ್ಣಕಾರಾದಯಃ, ಕುಲಾಲಾದಯಃ** - ಬ್ರ.ಸೂ-೧. ಕುಂಬಾರ, ಅಕ್ಕಸಾಲೆ - ಮುಂತಾದ (ಮಡಕೆ, ಚಿನ್ನದೊಡವೆ - ಮುಂತಾದವುಗಳ) ನಿಮಿತ್ತ ಕಾರಣರು. ೩೮೯, ೩೯೦, ೩೯೧, ೩೯೬, ೪೫೮, ೪೬೦, ೪೬೧.

**ಕೇಚಿತ್** - ಬ್ರ.ಸೂ-೨. ಬೇರೆಯ ಅಭಿಪ್ರಾಯದ ವೃತ್ತಿಕಾರರು ಅಥವಾ ವಾದಿಗಳು. ಸರ್ವಜ್ಞೇಶ್ವರವಾದಿಗಳು, ೧-೨೦ ; ಪ್ರಾಣಾಧಿಕರಣಕ್ಕೆ ಬೇರೆಯ ವಿಷಯವಾಕ್ಯವನ್ನು ಉದಾಹರಿಸಿದವರು, ೧-೧೨೪ ; ಜೀವಸ್ವರೂಪವು ಸತ್ಯವೆಂಬವರು, ೧-೨೬೮, ೨೭೯ ; ಅನುಶಯದ ವಿಷಯಕ್ಕೆ ಮತಭೇದವುಳ್ಳವರು, ೨-೨೨೭ ; ಉಭಯಲಿಂಗಾಧಿಕರಣವನ್ನು ಎರಡಾಗಿ ಒಡೆದವರು, ೨-೨೮೯ ; ಸತ್ತ್ವಾಧಿಕರಣದ ವಿಷಯಕ್ಕೆ ಮತಾಂತರದವರು. ೨-೩೯೩ ; ವೈಶ್ವಾನರೋಪಾಸನೆಯ ವಿಷಯಕ್ಕೆ ಭಿನ್ನಾಭಿಪ್ರಾಯದವರು. ೨-೪೨೫ ; ಪರಬ್ರಹ್ಮಪ್ರಾಪ್ತಿಗೂ ಗತಿಯುಂಟೆಂಬುವರು. ೨-೫೮೨ ; ಈ ಭಾಷ್ಯಭಾಗಗಳಲ್ಲಿಯೂ ಮತಾಂತರಾನುವಾದವಿದೆ ; ೧-೩೪೨, ೩೭೮, ೨-೨೯೦ ; ಬೃಹ-೧. ಕೆಲವರು, ಆಚಾರ್ಯರಿಗೆ ಸಮ್ಮತವಲ್ಲದ ಪೂರ್ವಪಕ್ಷದವರು, ೧೪೦, ೧೫೦ ; ಬೃಹ-೨. ಪೂರ್ವಪಕ್ಷಿಗಳು, ೧೭, ೨೧.

**ಕೇವಲಜ್ಞಾನಮ್** - ನೈ. ಆತ್ಮವಿಷಯವಾದ ಜ್ಞಾನವೊಂದೇ ಸಂಸಾರಾನರ್ಥದ ನಿವೃತ್ತಿ, ೧-೨೯.

**ಕೇವಲತರ್ಕಃ** - ಕೇನ. ಅನುಭವದ ಆಧಾರವಿಲ್ಲದ ಅವೈದಿಕತರ್ಕ, ಬರಿಯ ಊಹೆ, ೮ ; ವೇದಕ್ಕೆ ಹೊಂದುವ ತರ್ಕವು ಅವಶ್ಯ, ೪೪.

**ಕೇವಲವಸ್ತುವಾದೀ** - ಬ್ರ.ಸೂ-೧. ಕ್ರಿಯೆಗೆ ಸಂಬಂಧಪಡದ ಬರಿಯ ವಸ್ತುವನ್ನು ತಿಳಿಸುವ (ವೇದವಚನ), ೫೩.

**ಕೇವಲಸ್ತರ್ಕಃ** - ಬ್ರ.ಸೂ-೧. ಪ್ರಮಾಣರಹಿತವಾದ, ಮತ್ತೊಬ್ಬರು ತಿಳಿಸದೆ ಊಹಿಸುವ ತರ್ಕ ೪೧೮, ೪೬೩.

**ಕೇವಲತರ್ಕಬುದ್ಧಿಃ** - ಬೃಹ-೧. ಆಗಮಬಲವಿಲ್ಲದ ಬರಿಯ ತರ್ಕದಿಂದಾದ ಜ್ಞಾನ, ೨೬೧.

**ಕೇವಲದೋಷನಿಮಿತ್ತ** - ಬೃಹ-೧. ಹಸಿವು ಮುಂತಾದ ಸ್ವಾಭಾವಿಕದೋಷಗಳಿಂದಾಗಿರುವ (ಕರ್ಮಗಳು), ಶಾಸ್ತ್ರಚೋದಿತವಾದವುಗಳಲ್ಲ, ೫೬.

- ಬೃಹ-೧. ದೋಷಸಂಬಂಧವಿಲ್ಲದೆ ಬರಿಯ ಶಾಸ್ತ್ರದಿಂದಾಗುವವೆಂದು ಪೂರ್ವಪಕ್ಷಿಗಳು ಭಾವಿಸಿರುವ (ನಿತ್ಯಕರ್ಮ), ೫೫.

**ಕೇವಲಶಾಸ್ತ್ರಾನುಸಾರಿಣಃ** - ಬೃಹ-೧. ವೇದವನ್ನೇ ತತ್ತ್ವನಿರ್ಣಯಕ್ಕೆ ಮುಖ್ಯವೆಂದು ಅನುಸರಿಸುವವರು, ೧೧೩.

**ಕೇವಲಾತ್ಮಾ** - ಬೃಹ-೧. ಅನಾತ್ಮವಾದ ಜಗತ್ತಿನ ಸಂಬಂಧವಿಲ್ಲದ ಬರಿಯ ಆತ್ಮ, ೧೨೧ ; ನೈ. ಉಪಾಧಿಯಿಲ್ಲದ ಬರಿಯ ಆತ್ಮ . ಕೇವಲಾತ್ಮನಲ್ಲಿ ಅನ್ವಯವ್ಯತಿರೇಕಗಳಿಲ್ಲವಾದ್ದರಿಂದ ಬುದ್ಧಿಕರ್ತೃತ್ವ, ಸಾಕ್ಷಿತ್ವ - ಎಂಬ ಉಪಾಧಿಗಳನ್ನು ಇಟ್ಟುಕೊಂಡೇ ಅನ್ವಯವ್ಯತಿರೇಕಗಳನ್ನು ಹೇಳಲಾಗುತ್ತದೆ, ೨-೫೮.

**ಕೇವಲಬ್ರಹ್ಮವಿದ್ಯಾ, ಕೇವಲವಿದ್ಯಾ** - ತೈ. ಕರ್ಮದ ಸಹಾಯವನ್ನು ಬಯಸದೆ ಮುಕ್ತಿಯನ್ನು ಕೊಡುವ ಆತ್ಮಜ್ಞಾನ, ೮೬.

**ಕೇವಲಾತ್ಮಜ್ಞಾನಮ್** - ಐತ. ಕರ್ಮಕ್ಕೆ ಸಂಬಂಧಪಡದ ಬರಿಯ ಆತ್ಮನ ಜ್ಞಾನ ; ಉಪಾಸನೆಯಲ್ಲ, ೨, ೩, ೪,

**ಕೇವಲೋಪಾಸ್ತಿಃ** - ಐತ. ಕರ್ಮದ ಸಂಬಂಧವಿಲ್ಲದೆ ಸ್ವತಂತ್ರವಾಗಿ ಬರಿಯ ಆತ್ಮೋಪಾಸನೆಯನ್ನೇ ಮಾಡುವದು, ೬.

**ಕೇವಲಾತ್ಮದರ್ಶೀ** - ಭ.ಗೀ. ಆತ್ಮನೊಬ್ಬನನ್ನೇ ಕಾಣುವ ಜ್ಞಾನಿ, ೩೬೨ ; **ಶಾಂ.** ನಿ. ಅದ್ವಿತೀಯನಾದ ಪರಮಾತ್ಮನನ್ನು ಅರಿತುಕೊಂಡ ಜ್ಞಾನಿ, ದೇಹವನ್ನೇ ಆತ್ಮನೆಂದು ತಿಳಿದಿರುವವನಲ್ಲ, ಗೀ. ಭಾ. ೫-೨೦.

**ಕೇಶಾಃ** - ಬ್ರ.ಸೂ-೧. ತಲೆಯ ಕೂದಲು, (ಅವೇ ಇವು ಎಂದು ಆಗುವ ಅರಿವಿಗೆ ವಿಷಯವೆಂಬುದಕ್ಕೆ ಉದಾಹರಣೆ), ೨೮೯.

**ಕೈವಲ್ಯಮ್** - ಭ.ಗೀ. ಆತ್ಮನೊಬ್ಬನೇ ಇರುವ ಸ್ಥಿತಿ, ಮುಕ್ತಿ, ೮, ೭೬೧, ೧೧೨೭, ೧೧೨೮, ೧೧೨೯, ೧೧೩೦ ; ನೈ. ಅದ್ವಿತೀಯಾತ್ಮನಾಗಿರುವಿಕೆ, **ಮೋಕ್ಷ**. ಅಹಂಕಾರಾದಿಗಳನ್ನು ಅಲ್ಲಗಳೆಯುವ ನೇತಿ ಎಂಬ ಶ್ರುತಿಯಿಂದ ಜ್ಞಾನವಾಗಿ ಕೈವಲ್ಯವಾಗುವದು, ೨-೧೧೬; ಅಹಂ ಬ್ರಹ್ಮ ಎಂಬ ವಾಕ್ಯಜ್ಞಾನವನ್ನು ಅಭ್ಯಾಸಮಾಡಿದ ಬಳಿಕ **ಅವಾಕ್ಯಾರ್ಥ**ರೂಪದ ಜ್ಞಾನವುಂಟಾದರೆ ಕೈವಲ್ಯವೆಂಬವರ ಪೂರ್ವಪಕ್ಷ, ೩-೯; ಸುಷುಪ್ತಿಮಾತ್ರದಿಂದ ಕೈವಲ್ಯವಿಲ್ಲ, ಏಕೆಂದರೆ ಮತ್ತೆ ಎಚ್ಚರದಲ್ಲಿ ಸಂಸಾರಕ್ಕೆ ಬರುತ್ತಾರೆ, ಆದ್ದರಿಂದ ಅಲ್ಲಿ ಅಜ್ಞಾನವಿದೆಯೆನ್ನಬೇಕು, ೩-೫೮ ; **ಶಾಂ.** ನಿ. ಅದ್ವಿತೀಯನಾದ ಆತ್ಮನೊಬ್ಬನೇ ಇರುವ ಸ್ಥಿತಿ, ಮುಕ್ತಿ. ಗೀ. ಭಾ. ೧೩-೨. ಜ್ಞಾನಿಯು ದೇಹವನ್ನು ಬಿಟ್ಟು ಕೈವಲ್ಯವನ್ನು ಹೊಂದಿದರೆ ಜನ್ಮಾಂತರವಿಲ್ಲ, ಸೂ. ಭಾ. ೩-೩-೩೨.

**ಕೈವಲ್ಯಸಂನಿಕೃಷ್ಟ ಫಲಮ್** - ಛಾಂ. ಮೋಕ್ಷಕ್ಕೆ ಹತ್ತಿರವಿರುವ ಫಲ, ಬ್ರಹ್ಮ ಲೋಕಪ್ರಾಪ್ತಿ, ೫.

**ಕೌಪೀನಮ್** - ಶಾಂ. ನಿ. ಪರಮಹಂಸಪರಿವ್ರಾಜಕನು ತಾನೇ ದೊರೆತ ಕೌಪೀನ ಮಾತ್ರ ಧಾರಣೆಯಿಂದಲೇ ತೃಪ್ತನಾಗಿರುವನು. ಮಾಂ. ಕಾ. ಭಾ. ೨-೩೭.

**ಕ್ಲೇಶಾಃ** - ಮುಂ. ಅವಿದ್ಯೆ , ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶ ಎಂಬಿವು, ೧೨೨ ; ಶಾಂ. ನಿ. ಅವಿದ್ಯೆ, ಅಸ್ಮಿತೆ ಮುಂತಾದ ಯೋಗಸೂತ್ರದಲ್ಲಿ ಹೇಳಿರುವ ದೋಷಗಳು ; ಇವುಗಳು ಜ್ಞಾನದಿಂದ ನಾಶವಾದರೆ ಕರ್ಮಾಶಯವು ಸಂಪೂರ್ಣವಾಗಿ ನಾಶವಾಗುವದು. ಸೂ. ಭಾ. ೩-೩-೩೨.

**ಕ್ಲೇಶಕರ್ಮಫಲಮಲಮ್** - ಮಾಂ. ಅವಿದ್ಯಾದಿಗಳು, ಕರ್ಮವನ್ನು ಮಾಡುವದು, ಫಲವನ್ನು ಅನುಭವಿಸುವದು - ಎಂಬ ಕಲ್ಮಷ, ೧೪೩, ೧೪೪.

**ಕ್ಲೇಶಮೂಲಕರ್ಮಾಶಯಃ** - ಭ.ಗೀ. ಅವಿದ್ಯಾದಿಗಳಿಂದ ಆಗುವ ಕರ್ಮಗಳ ಆಸರೆ, ೫೨೭.

**ಕೋಶಕಾರಃ** - ಭ.ಗೀ. ರೇಷ್ಮೆಯ ಹುಳು, ತನಗೆ ತಾನೇ ಬಂಧವನ್ನುಂಟು ಮಾಡಿಕೊಳ್ಳುವದಕ್ಕೆ ದೃಷ್ಟಾಂತ, ೫೫೭.

**ಕ್ರಮಮುಕ್ತಿಃ** - ಶಾಂ. ನಿ. ಅರ್ಚಿರಾದಿಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋದ ಉಪಾಸಕರು ಅಲ್ಲಿ ಜ್ಞಾನವನ್ನು ಹೊಂದಿ ಪಡೆಯುವ ಮುಕ್ತಿ. ಈ ಜನ್ಮದಲ್ಲಿ ಇಲ್ಲಿಯೇ ಜ್ಞಾನದಿಂದ ಪಡೆಯುವ ಸದ್ಯೋಮುಕ್ತಿಯಲ್ಲ, ಸೂ. ಭಾ. ೪-೩-೧೦.

**ಕೃತಾತ್ಮಾ** - ಮುಂ. ವಿದ್ಯೆಯಿಂದ ನಿಜವಾದ ಆತ್ಮರೂಪವನ್ನು ಪಡೆದುಕೊಂಡವನು, ೧೧೨, ೧೧೭.

**ಕೃತಾಕೃತಫಲಸಾಕ್ಷೀ** - ಐತ. ಮಾಡಿದ್ದು, ಮಾಡದ್ದು - ಎರಡನ್ನೂ ಅವುಗಳ ಫಲವನ್ನೂ ನೋಡುತ್ತಿರುವ ಆತ್ಮ, ೫೧.

**ಕೃತವಿಪ್ರಣಾಶಃ** - ಭ.ಗೀ. ಮಾಡಿದ್ದು ಫಲವನ್ನು ಕೊಡದೆ ನಾಶವಾಗುವದು, ೫೨೭, ೮೧೮.

**ಕೃತಾರ್ಥಲಕ್ಷಣಾನಿ** - ಭ.ಗೀ. ಪರಮಪುರುಷಾರ್ಥವನ್ನು ಪಡೆದು ಕೊಂಡಿರುವ ಜ್ಞಾನಿಗಳ ಲಕ್ಷಣಗಳು, ೧೦೮.

**ಕೃತ್ಸ್ನಃ** - ಬೃಹ-೧. ಪೂರ್ಣನಾದ, ಪರಿಚ್ಛಿನ್ನನಲ್ಲದ (ಆತ್ಮ), ೧೩೨.

**ಕ್ಷಣಪ್ರಧ್ವಂಸಿ, ಕ್ಷಣಭಙ್ಗಿ, ಕ್ಷಣಭಙ್ಗುರಮ್** - ನೈ. ಕ್ಷಣದಲ್ಲಿ ನಾಶವಾಗುವ ಕ್ಷಣಕ್ಷಣಕ್ಕೂ ಪರಿಣಾಮವಾಗುವ ಬುದ್ಧಿ, ೨-೬೯, ೭೪, ೮೨.

ಕ್ಷಣಭಙ್ಗವಾದಃ - ಬ್ರ.ಸೂ-೧. ವಸ್ತುವು ಒಂದೊಂದು ಕ್ಷಣಕ್ಕೂ ನಾಶವಾಗುವದೆಂಬ ಬೌದ್ಧರ ವಾದ, ೪೫೦ ; ಕಠ. ಒಂದೊಂದು ಕ್ಷಣಕ್ಕೂ ಜ್ಞಾನವು ನಾಶವಾಗಿ ಹುಟ್ಟುವದೆಂಬ ಬೌದ್ಧರ ವಾದ, ೧೨೯.

ಕ್ಷರಃ - ಭ.ಗೀ. ಹುಟ್ಟುವ ವಸ್ತು, ವ್ಯಾಕೃತ, ೫೦೩, ೯೧೬, ೯೧೭, ೯೧೮, ೯೨೧.

ಕ್ಷೀರಮ್ - ಬ್ರ.ಸೂ-೧. ಹಾಲು, (ಕಾರಕಗಳನ್ನು ಬಯಸದೆ ಕಾರ್ಯವಾಗುವ ವಸ್ತುವಿಗೆ ದೃಷ್ಟಾಂತ), ೪೫೯.

ಕ್ಷುದ್ರಬ್ರಹ್ಮವಿತ್ - ಮಾಂ. ಅಲ್ಪವಾದ ಬ್ರಹ್ಮವನ್ನು , ಅಪರಬ್ರಹ್ಮವವನ್ನು ಅರಿತವನು, ೧೨೮.

ಕ್ಷುರತೈಕ್ಷ್ಣ್ಯಮ್ - ಬ್ರ.ಸೂ-೧ ಕ್ಷೌರಕತ್ತಿಯಂತೆ ಹರಿತವಾದ ಅಲುಗು. ಕಲ್ಲಿನ ಮೇಲೆ ಪ್ರಯೋಗಿಸಿದರೆ ಅದನ್ನು ಕೆತ್ತಲಾರದೆ ಮೊಂಡಾಗುತ್ತದೆ. (ಲಿಙ್ಗಾದಿಗಳು ಜ್ಞಾನದ ವಿಷಯದಲ್ಲಿ ವ್ಯರ್ಥವೆಂಬುದಕ್ಕೆ ದೃಷ್ಟಾಂತ), ೫೧.

ಕ್ಷೇತ್ರಮ್ - ಭ.ಗೀ. ಅನಾತ್ಮರೂಪವಾದ ಮಹಾಭೂತಾದಿಗಳು, ೭೫೩, ೭೫೫, ೭೫೬, ೭೫೭, ೭೬೦, ೭೬೮, ೭೭೩, ೭೭೬, ೭೭೭, ೭೮೨, ೭೮೩, ೮೦೫, ೮೦೬, ೮೨೬, ೮೪೪, ೮೪೫.

ಕ್ಷೇತ್ರಜ್ಞಃ - ಬ್ರ.ಸೂ-೧. ಕ್ಷೇತ್ರವನ್ನು (ಶರೀರವನ್ನು) ಅರಿಯುವ ಜೀವ, ೧೬೮, ೧೬೯, ೧೭೪, ೨೩೦, ೨೩೧, ೨೩೨, ೩೫೬ ; ಬ್ರ.ಸೂ-೨. ಕ್ಷೇತ್ರವೆಂಬ ಶರೀರವನ್ನು ಅರಿಯುವ ಜೀವ. ೧-೧೭೫ ; ಪ್ರಶ್ನ. ಕ್ಷೇತ್ರವೆಂಬ ಅನಾತ್ಮವಾದ ದೇಹಾದಿಗಳ ಗುಂಪನ್ನು ಅರಿಯುವ ಆತ್ಮ, ಜೀವ, ೬೨, ೬೩ ; ಮಾಂ. ಶರೀರವನ್ನು ಅರಿಯುವ ಜೀವ, ೧೩೨ ; ಭ.ಗೀ. ಅನಾತ್ಮವಾದ ಕ್ಷೇತ್ರವನ್ನು ಅರಿಯುವ ಆತ್ಮ, ೭೫೩, ೭೫೫, ೭೬೭, ೭೬೮, ೭೬೯, ೭೭೧, ೭೭೨, ೭೭೬, ೭೭೭, ೭೮೩, ೮೦೬, ೮೨೩, ೮೨೪, ೮೨೬, ೮೩೪, ೮೪೫.

ಕ್ಷೇತ್ರಜ್ಞಪರಮಾತ್ಮೈಕ್ಯಮ್ - ಬ್ರ.ಸೂ-೧. ಜೀವೇಶ್ವರೈಕ್ಯ, ೪೮೮.

ಕ್ಷೇತ್ರಜ್ಞಪರಮಾತ್ಮೈಕತ್ವಜ್ಞಾನಮ್, ಕ್ಷೇತ್ರಜ್ಞೇಶ್ವರೈಕತ್ವಮ್ - ಭ.ಗೀ. ಜೀವಾತ್ಮನೂ ಪರಮಾತ್ಮನೂ ಒಬ್ಬನೇ ಎಂಬ ಅರಿವು, ೩೦೪, ೮೨೪, ೮೩೯, ೧೧೦೭.

ಕ್ಷೇತ್ರಕ್ಷೇತ್ರಜ್ಞಸಂಯೋಗಃ - ಭ.ಗೀ. ಆತ್ಮನನ್ನೂ ಅನಾತ್ಮವನ್ನೂ ಒಂದರಲ್ಲೊಂದನ್ನು ಹುಟ್ಟುಗಟ್ಟಿಕೊಂಡು ಬೆರಕೆಮಾಡಿರುವ ಅಧ್ಯಾಸ, ೮೨೬, ೮೨೭;

ಶಾಂ. ನಿ. ದೇಹವೇ ಮುಂತಾದ ಅನಾತ್ಮಕ್ಕೂ ಅದನ್ನು ಅರಿಯುತ್ತಿರುವ ಚೈತನ್ಯರೂಪನಾದ ಆತ್ಮನಿಗೂ ಇರುವ ಸ್ವರೂಪಭೇದವನ್ನು ವಿಂಗಡಿಸಿ ಅರಿಯದೆ ಇರುವದರಿಂದ ಆಗಿರುವ ಅನ್ಯೋನ್ಯಾಧ್ಯಾಸ, ಅವಿದ್ಯೆ. ಗೀ. ಭಾ. ೧೩-೨೬ ; ಸೂ. ಭಾ. ಉಪೋದ್ಘಾತ.

**ಕ್ಷೇಮಃ** - **ಶಾಂ.** ನಿ. ಜ್ಞಾನಿಯ ಶರೀರವು ಬಿದ್ದಬಳಿಕ ಅವಶ್ಯವಾಗಿ ದೊರಕುವ ಮುಕ್ತಿ ಅಥವಾ ಕೈವಲ್ಯ, ಸೂ. ಭಾ. ४-೧-೧೫.

# ಖ

**ಖಕುಸುಮಮ್** - **ಮಾಂ.** ಆಕಾಶದ ಹೂ, ಅತ್ಯಂತವಾಗಿ ಇಲ್ಲದ್ದು, ೨೮४.

**ಖಾನಿ** - **ಕಠ.** ಆಕಾಶದಿಂದ ಆಗಿರುವ ಶ್ರೋತ್ರವೇ ಮುಂತಾದ ಇಂದ್ರಿಯಗಳು, ೧೧೧.

**ಖ್ಯಾತ್ಯಾದಯಃ** - **ನೈ.** ಗ್ರಂಥರಚನೆಯನ್ನು ಮಾಡುವವರಿಗೆ ಖ್ಯಾತ್ಯಾದಿಗಳ ಆಸೆಯಿದ್ದರೆ ಗ್ರಂಥವು ಅಪ್ರಮಾಣವೆಂದಾಗುತ್ತದೆ, ೧-೬.

**ಗಂಧರ್ವನಗರಮ್** - **ಕಠ.** ಆಕಾಶದಲ್ಲಿ ಕಲ್ಪಿತವಾಗಿ ತೋರಿ ಹಾರುವ ನೋಟ, ೧೫೭ ; **ಮಾಂ.** ಆಕಾಶದಲ್ಲಿ ನಗರದಂತೆ ತಟ್ಟನೆ ತೋರುವ ಹುಸಿತೋರಿಕೆ, ೧೧೦ ; **ಭ.ಗೀ.** ಆಕಾಶದಲ್ಲಿ ಭ್ರಾಂತಿಯಿಂದ ನಗರದಂತೆ ತೋರುವ ನೋಟ, ೮೨೬ ; **ಶಾಂ.** ನಿ. ಆಕಾಶದಲ್ಲಿ ಅಕಸ್ಮಾತ್ತಾಗಿ ತೋರಿಹಾರುವ ನಗರ, ಮಾಂ. ಕಾ. ಭಾ. ೨-೩೧.

**ಗತಿಃ** - **ಬ್ರ.ಸೂ-೨.** ಕರ್ಮಫಲವನ್ನು ಅನುಭವಿಸುವದಕ್ಕೆ ಜೀವನು ಅನುಸರಿಸಬೇಕಾದ ಮಾರ್ಗವೂ ಪಡೆಯುವ ಫಲವೂ. ಇದು **ದೇವಯಾನ,** ಪಿತೃಯಾನ, ಕ್ಷುದ್ರಜಂತು - ಎಂದು ಮೂರು ವಿಧ. ೨-೨೩೭ ; ಉಪಾಧಿಯಾದ ಬುದ್ಧಿಯ ಉತ್ಕ್ರಾಂತಿಗತ್ಯಾದಿಗಳಿಂದ ಜೀವನಿಗೂ ಇವು ಆಗುವವು, ೨-೧೩೮ ; ಜೀವನಿಗೆ ಮುಖ್ಯಪ್ರಾಣ, ಇಂದ್ರಿಯ, ಮನಸ್ಸು, ವಿದ್ಯಾಕರ್ಮಪೂರ್ವಪ್ರಜ್ಞೆಗಳು - ಇವುಗಳೊಡನೆ ದೇಹಾಂತರಗತಿ, ೨-೨೧೨ ; ಇಷ್ಟಾದಿಕಾರಿಗಳ ಗತಿ, ೨-೨೨೨, ೨೨೩ ; ಉಪಾಸಕರಿಗೆ ಅರ್ಚಿರಾದಿಗತಿ, ೨-೫೫೫ ರಿಂದ ೫೭೩ ; ಪರಬ್ರಹ್ಮಪ್ರಾಪ್ತಿಗೆ

ಗತಿಬೇಡ, ೨-೫೮೧ ರಿಂದ ೫೮೫, **ಅವಗತಿ.** ಚೇತನವೇ ಜಗತ್ಕಾರಣವೆಂಬುದು ವೇದಾಂತಗಳಿಗೆಲ್ಲ ಸಮಾನ, ಈ ವಿಷಯಕ್ಕೆ ವಿಗಾನವಿಲ್ಲ, ೧-೮೭, ೩೯೮.

**ಗ್ರಂಥಯಃ - ಕಠ.** ಗಂಟುಹಾಕಿಕೊಂಡಂತೆ ಬಲವಾಗಿರುವ ಅವಿದ್ಯಾ ಪ್ರತ್ಯಯಗಳು, ೧೮೨ ; **ಛಾಂ.** ಹೃದಯವನ್ನು ಬಲವಾಗಿ ಆಶ್ರಯಿಸಿಕೊಂಡಿರುವ ಅವಿದ್ಯಾವಾಸನೆಗಳ ರಾಶಿ, ೬೦೪.

**ಗ್ರಹಣಾಗ್ರಹಣೇ - ಮಾಂ.** ಅರಿಯುವದು, ಅರಿಯದಿರುವದು - ಎಂಬ ವಿಕಾರಗಳು, ೧೯೩ ; **ಶಾಂ. ನಿ.** ಅರಿಯುವದು, ಅರಿಯದಿರುವದು - ಎಂಬೀ ಎರಡೂ ಸೂರ್ಯನಲ್ಲಿ ಬೆಳಕುಕತ್ತಲೆಗಳಂತೆ ಕಲ್ಪಿತವಾಗಿರುತ್ತವೆ, ಮಾಂ. ಕಾ. ಭಾ. ೩-೩೬.

**ಗ್ರಹಾತಿಗ್ರಹೌ - ಬೃಹ-೨.** ಅಜ್ಞಾನಾಸಂಗಕ್ಕೆ ವಿಷಯವಾಗಿರುವ ಇಂದ್ರಿಯ ವಿಷಯಗಳೆಂಬ ಮೃತ್ಯುರೂಪ, ೧೬, ೧೭.

**ಗ್ರಹೀತೃಗ್ರಹಣಗ್ರಾಹ್ಯಗೃಹೀತಯಃ - ನೈ.** ಗ್ರಹೀತೃವೆಂದರೆ ಗ್ರಹಿಸುವವನು, ಅರಿಯುವ ದ್ರಷ್ಟೃ, ಪ್ರಮಾತೃ ; ಗ್ರಹಣವೆಂದರೆ ಅರಿವು; ಗ್ರಾಹ್ಯವೆಂದರೆ ಅರಿಯಲ್ಪಡುವ ದೃಶ್ಯ, ಪ್ರಮೇಯ; ಗೃಹೀತಿ ಎಂದರೆ ಅರಿತದ್ದರ ಫಲವು, ಪ್ರಮಿತಿ, ಇದೆಲ್ಲವೂ ಆತ್ಮನ ಅವಿದ್ಯೆಯಿಂದ ತೋರುವ ಅನಾತ್ಮವು, ೨-೯೭; ಹೊರಗೆ ಆಕಾರವುಳ್ಳದ್ದಾಗಿರುವದು ಗ್ರಾಹ್ಯವೆಂದೂ ನಿಶ್ಚಯವೇ ಮುಂತಾದ ವೃತ್ತಿಯುಳ್ಳದ್ದು ಗ್ರಹಣವೆಂದೂ ಅವುಗಳಲ್ಲಿ ಅನ್ವಯಿಯಾಗಿ ಸೇರಿಕೊಂಡು ಬಂದಿರುವದು ನಾನೆಂಬ ಗ್ರಹೀತೃವೆಂದೂ ಇವೆಲ್ಲವನ್ನೂ ಅರಿಯುತ್ತಿರುವ ಆತ್ಮನೇ ಸಾಕ್ಷಿಯೆಂದೂ ವಿಂಗಡಿಸಿಕೊಳ್ಳಬೇಕು, ೨-೧೦೭; ಆತ್ಮನು ಗ್ರಾಹಕನೆಂದರೆ ಗ್ರಾಹ್ಯವಾದ ಅಹಂಕಾರವು ಬೇರೆ ಎಂದು ಒಪ್ಪಬೇಕು, ೨-೨೭, ೩-೫೯; ಗ್ರಾಹಕಾದಿಗಳೇ ತಮ್ಮ ಭಾವಾಭಾವಗಳನ್ನು ಅರಿಯಲಾರವು, ೨-೧೦೯; ಅವಿದ್ಯಾಮಾತ್ರಸಿದ್ಧ ವಾಗಿರುವದರಿಂದ ಗ್ರಾಹಕಾದಿಗಳು ಆತ್ಮನಿಗಿಂತ ಬೇರೆಯಾಗಿಲ್ಲವೇ ಇಲ್ಲ, ೨-೧೧೪.

**ಗ್ರಾಹ್ಯಗ್ರಹಣಮ್ - ಮಾಂ.** ಅರಿಯತಕ್ಕ ವಿಷಯವನ್ನು ಅರಿಯುವದು, ೩೪೬, ೩೪೭.

**ಗ್ರಾಹ್ಯಗ್ರಾಹಕೇ - ಮಾಂ.** ಅರಿಯತಕ್ಕ ವಿಷಯ, ಅರಿಯುವ ಪ್ರತ್ಯಯ ಎಂಬ ಭೇದ, ೧೯೨, ೨೭೮ ; **ಶಾಂ. ನಿ.** ಅರಿಯುವ ಇಂದ್ರಿಯಾದಿಗಳು, ಅರಿಯಲ್ಪಡುವ ವಿಷಯಗಳು ಎಂಬ ರೂಪಭೇದಗಳು ; ಇವು ಎಚ್ಚರದಲ್ಲಿಯೂ ಕನಸಿನಲ್ಲಿಯೂ ಸಮಾನವಾಗಿರುವವು, ಮಾಂ. ಕಾ. ಭಾ. ೪-೩೭.

**ಗ್ರಾಹ್ಯಗ್ರಾಹಕತ್ವಮ್** - ಬೃಹ-೧. ತಾನೇ ಗ್ರಹಿಸುವದೂ ಗ್ರಹಿಸಲ್ಪಡತಕ್ಕದ್ದೂ ಆಗಿರುವದು, ೧೨೬.

**ಗ್ರಾಹ್ಯಗ್ರಾಹಕತಾ, ವಿಷಯವಿಷಯ್ಯಾಭಾಸತ್ವಮ್** - ಬೃಹ-೨. ತಾನೇ ಗ್ರಾಹ್ಯವೂ ಗ್ರಾಹಕವೂ ಆಗಿರುವದು (ಎಂಬ ಕ್ಷಣಿಕವಿಜ್ಞಾನದ ಧರ್ಮ), ೧೭೭, ೧೭೮.

**ಗ್ರಾಹ್ಯವಿಜ್ಞಾನಮ್** - ಬೃಹ-೨. ವಿಷಯವಾಗಿರುವ ಅರಿವು, ವೃತ್ತಿಜ್ಞಾನ, ೧೭೯.

**ಗ್ರಾಹಕವಿಜ್ಞಾನಮ್** - ಬೃಹ-೨. ಅರಿಯುವ ಅರಿವು, ಚೈತನ್ಯರೂಪಾತ್ಮಾ, ೧೭೯.

**ಗೀತಾಃ** - **ಈಶ.** ಭಗವದ್ಗೀತೆಯ ಶ್ಲೋಕಗಳು, ೧ ; **ಭ.ಗೀ.** ಭಗವದ್ಗೀತೆಯ ಏಳುನೂರು ಶ್ಲೋಕಗಳು, ೨, ೧೪, ೧೫೦, ೧೫೭.

**ಗೀತಾಶಾಸ್ತ್ರಮ್** - **ಭ.ಗೀ.** ಭಗವದ್ಗೀತೆಯಲ್ಲಿರುವ ವೇದಾಂತಶಾಸ್ತ್ರ, ೩, ೪, ೬, ೧೨, ೩೬, ೪೭, ೧೪೩, ೧೪೪, ೧೭೯, ೭೨೨, ೮೪೮, ೯೨೫, ೯೯೮, ೧೦೩೭, ೧೦೬೯, ೧೦೨೫, ೧೧೨೫, ೧೧೩೬, ೧೧೪೩.

**ಗೀರ್ಮನಸೋಃ ಸೃತಿಃ** - **ನೈ.** ವಾಕ್ಕು ಮನಸ್ಸು ಇವುಗಳಿಗೆ ವಿಷಯ. ತತ್ತ್ವಮಸ್ಯಾದಿವಾಕ್ಯದಿಂದ ಜ್ಞಾನವಾದಾಗ ವಾಙ್ಮನಸ್ಸುಗಳಿಗೆ ಅವಿಷಯನಾಗುತ್ತಾನೆ, ೩-೧.

**ಗುಣಃ** - **ನೈ.** (೧) ಅಂಗವಾದದ್ದು. ಜ್ಞಾನವು ಕರ್ಮಕ್ಕೆ ಗುಣವಲ್ಲ, ಏಕೆಂದರೆ ಅದು ಕರ್ಮವನ್ನೇ ತಿಂದುಹಾಕಿಬಿಡುತ್ತದೆ, ೧-೬೩; ಕರ್ಮಕಾಂಡದಲ್ಲಿರುವ ಜ್ಞಾನವು ಅದಕ್ಕೆ ಅನುಗುಣವಾಗಬಹುದು, ವಸ್ತುಮಾತ್ರಬೋಧಕವಾದ ಆತ್ಮಜ್ಞಾನವು ಅದಕ್ಕೆ ಗುಣವಾಗಲಾರದು, ೧-೫೪, ೬೩. (೨) ಗುಣವೃತ್ತಿ. ಯಾವದಾದರೊಂದು ಗುಣಸಾದೃಶ್ಯದಿಂದ ಅರ್ಥವನ್ನು ಹೇಳುವ ಶಬ್ದದ ವೃತ್ತಿ, ೨-೫೪; ಅಹಂಕಾರವು ಆತ್ಮನಿಗೆ ಗುಣಲೇಶದಿಂದ ಎಂದರೆ ಸ್ವಲ್ಪಗುಣಸಾದೃಶ್ಯವಿರುವದರಿಂದ, ಲಕ್ಷಣವಾಗಿರುತ್ತದೆ, ೩-೯೮, ೯೯, ೧೦೨, ೧೦೪; ಪ್ರತ್ಯಕ್ಷಕ್ಕೂ ವಾಕ್ಯಕ್ಕೂ ವಿರೋಧವಾದರೆ ಪ್ರತ್ಯಕ್ಷವು ಗೌಣವು ಎನ್ನಬೇಕು, ೩-೩೭.

**ಗುಣಪ್ರಧಾನಭಾವಃ** - ಬ್ರ.ಸೂ-೧. ಎರಡರೊಳಗೆ ಒಂದು ಅಧೀನವಾಗಿಯೂ ಇನ್ನೊಂದು ಮುಖ್ಯವಾಗಿಯೂ ಇರುವದು, ೪೧೧ ; **ಛಾಂ.** ಒಂದು

ಹೆಚ್ಚಾಗಿ ಪ್ರಧಾನವಾಗಿರುವದು, ಮಿಕ್ಕದ್ದು ಅದಕ್ಕೆ ಅಧೀನವಾಗಿರುವದು - ಹೀಗಿರುವಿಕೆ, ೪೬೭.

**ಗುಣಸಾಮ್ಯಮ್** - ಪ್ರಶ್ನ. ಸತ್ತ್ವ, ರಜಸ್ಸು, ತಮಸ್ಸು - ಎಂಬ ಮೂರು ಗುಣಗಳು ಸಮಪ್ರಧಾನವಾಗಿರುವ ಪ್ರಕೃತಿ, ಪ್ರಧಾನ, ೧೦೧.

**ಗುಣಫಲಮ್** - ಐತ. ಅಧೀನವಾಗಿರುವ ಕರ್ಮದ ಫಲವು. ಮುಖ್ಯ ಫಲವಲ್ಲ, ಅಂಗಫಲ, ೧೯.

**ಗುಣಭೂತ** - ಬೃ-೧. ಕರ್ಮಕ್ಕೆ ಅಂಗವಾಗಿರುವ ದೇವತೆ, ೬೬.

**ಗುಣವಾದಃ** - ಬ್ರ.ಸೂ-೧. ಪ್ರಮಾಣಾಂತರಕ್ಕೆ ವಿರುದ್ಧವಾಗಿರುವ ತಾತ್ಪರ್ಯವುಳ್ಳದ್ದಾದರೆ ಅರ್ಥವಾದವನ್ನು ಗೌಣವಾಗಿ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯ, ೩೦೩.

**ಗುಣವಿಶೇಷಸಂಬನ್ಧಮ್** - ಬ್ರ.ಸೂ-೧. ಒಂದಾನೊಂದು ಗೊತ್ತಾದ ಗುಣದ ಸಂಬಂಧವುಳ್ಳ (ಬ್ರಹ್ಮ), ೧೨೮.

**ಗುಣಾಃ** - ಬ್ರ.ಸೂ-೧. ಉಪಾಸನೆಗಾಗಿ ಪರಮಾತ್ಮನಲ್ಲಿ ಆರೋಪಿಸಿರುವ ನಾಮರೂಪಗಳ ಧರ್ಮಗಳು, ೯೧, ೧೫೧, ೧೭೮, ೧೭೯, ೧೮೧ ; ಸಾಂಖ್ಯರು ಒಪ್ಪಿರುವ ಸತ್ತ್ವರಜಸ್ತಮೋಗುಣಗಳು, ೪೩, ೩೪೪, ೩೫೬ ; ಒಳ್ಳೆಯ ಧರ್ಮಗಳು, ದೋಷವಲ್ಲ, ೪೯ ; ಬ್ರ.ಸೂ-೨. ಉಪಾಸನೆಗಾಗಿ ಪರಮಾತ್ಮನಲ್ಲಿ ಆರೋಪಿಸಿರುವ ನಾಮರೂಪಧರ್ಮಗಳು, ೧-೯೧, ೧೫೧, ೧೭೮, ೧೭೯, ೧-೧೮೧, ೨-೨೮೨ ; ಒಂದೇ ವಿದ್ಯೆಗೆ ಸಂಬಂಧಪಟ್ಟ ಗುಣಗಳನ್ನು ಬೇರೆಬೇರೆ ಶ್ರುತಿಗಳಿಂದ ಉಪಸಂಹಾರಮಾಡಿಕೊಂಡು ಉಪಾಸನೆಮಾಡಬೇಕು, ೨-೩.೨೫ ; ಸಾಂಖ್ಯರು ಒಪ್ಪಿರುವ ಸತ್ತ್ವರಜಸ್ತಮೋಗುಣಗಳು, ೧-೪೩, ೩೪೪, ೩೫೬, ೨-೧೨ ; ಗುಣವಾದ. ಮುಖ್ಯಾರ್ಥವನ್ನು ಬಿಟ್ಟು ಗೌಣಾರ್ಥವನ್ನು ಕಲ್ಪಿಸಬೇಕಾದ ಅರ್ಥವಾದ ; ಭ.ಗೀ. ಸತ್ತ್ವರಜಸ್ತಮೋಗುಣಗಳು, ೧೬೩, ೧೯೮, ೧೯೯, ೨೦೧, ೮೫೩, ೮೭೪, ೮೭೫, ೮೭೬, ೮೭೮, ೮೭೯, ೮೮೨, ೯೦೮.

**ಗುಣಾತೀತಃ** - ಭ.ಗೀ. ಮೂರು ಗುಣಗಳ ಕಾರ್ಯಕ್ಕೂ ನಿಲುಕದ ೮೮೧, ೮೮೨, ೮೮೪, ೮೯೦.

**ಗುಣೋಪಸಂಹಾರಃ** - ಶಾಂ. ನಿ. ಬೇರೆಬೇರೆ ಕಡೆಯಲ್ಲಿ ಶ್ರುತಿಯಲ್ಲಿ ಕಂಡುಬರುವ ಒಂದೇ ಉಪಾಸನೆಯಲ್ಲಿ ಉಪಾಸ್ಯವಾದ ಬ್ರಹ್ಮದ ಗುಣಗಳನ್ನೆಲ್ಲ ಸೇರಿಸಿಕೊಂಡು ಉಪಾಸನೆಮಾಡುವದು, ಸೂ. ಭಾ. ೩-೩-೧೯.

**ಗುರುಃ - ಮುಂ.** ತತ್ತ್ವವನ್ನು ಹೇಳಬಲ್ಲ ಆಚಾರ್ಯ, ೨, ೪೭ ; **ನೈ.** ಅವಿದ್ಯೆಯನ್ನು ಹೋಗಲಾಡಿಸುವ ಗುರು, ೧-೨; ಗುರುಗಳ ಅಪ್ಪಣೆಯಿಂದ ಈ ಪ್ರಕರಣವನ್ನು ಬರೆದಿದೆ, ೧-೫; ಜ್ಞಾನವಾದಬಳಿಕ ಗುರುಶಾಸ್ತ್ರಾದಿ ಭೇದ-ವಿರುವದಿಲ್ಲ, ೪-೩೭.

**ಗುರುಸಂಪ್ರದಾಯಃ - ಭ.ಗೀ.** ಗುರುಗಳು ಕೊಡುವ ಸರಿಯಾದ ಜ್ಞಾನದ ಉಪದೇಶ, ೧೯೮ ; **ಶಾಂ. ನಿ.** ಪರಂಪರೆಯಿಂದ ಗುರುಗಳು ಶಿಷ್ಯನಿಗೆ ಕೊಡುವ ಸರಿಯಾದ ಜ್ಞಾನದ ಉಪದೇಶ, ಗೀ. ಭಾ. ೧೮-೫೦.

**ಗುರೂಪಸದನಮ್ - ಐತ.** ಸೇವೆಗಾಗಿ ಗುರುಗಳ ಬಳಿಗೆ ಬರುವದು, ಗುರುಸೇವೆ, ೨೬ ; **ಭ.ಗೀ.** ಗುರುವನ್ನು ವಿಧಿವತ್ತಾಗಿ ಶರಣು ಹೋಗುವದು, ೩೧೨; **ಶಾಂ. ನಿ.** ಗುರುವಿನ ಬಳಿಗೆ ಶಾಸ್ತ್ರದಲ್ಲಿ ವಿಧಿಸಿರುವ ರೀತಿಯಿಂದ ಶಿಷ್ಯನಾಗಿ ಬರುವದು. ಗೀ. ಭಾ. ೪-೩೯.

**ಗುರ್ವಭಿಗಮನಮ್ - ಮುಂ.** ತತ್ತ್ವೋಪದೇಶಕ್ಕಾಗಿ ಗುರುವಿನ ಬಳಿಗೆ ಪೂಜ್ಯಬುದ್ಧಿಯಿಂದ ಹೋಗುವದು, ೧೭, ೪೭.

**ಗುಹಾ - ಬ್ರ.ಸೂ-೧.** ಬ್ರಹ್ಮವು ಒಳಹೊಕ್ಕಿರುವ ಶರೀರ ಅಥವಾ ಹೃದಯ, ೧೬೯, ೧೭೧ ; **ಕಠ.** ಹೃದಯ, ಬುದ್ಧಿ, ೨೫, ೬೪, ೮೫, ೧೨೦ ; **ಮುಂ.** ಹೃದಯ, ಅಂತಃಕರಣ, ೬೭, ೭೦, ೭೨, ೧೦೩ ; **ತೈ.** ಅವ್ಯಾಕೃತಾಕಾಶ ೧೦೮ ; ಹೃದಯಾಕಾಶ, ೧೦೮, ೧೮೨, ೨೦೬, ೨೨೦ ; ಬುದ್ಧಿ, ೧೦೮, ೧೭೭, ೧೭೮ ; **ಶಾಂ. ನಿ.** ಹೃದಯ, ಬುದ್ಧಿ ಬ್ರಹ್ಮವು ಬುದ್ಧಿರೂಪವಾದ ಗುಹೆಯಲ್ಲಿ ತಿಳಿಯಬರುವದರಿಂದ ಅಲ್ಲಿದೆ ಎಂದು ಶ್ರುತಿ ಹೇಳುತ್ತದೆ. ತೈ. ಭಾ. ೨-೧.

**ಗುಹಾಗ್ರಂಥಯಃ - ಮುಂ.** ಹೃದಯಗ್ರಂಥಿ, ಅವಿದ್ಯಾಗ್ರಂಥಿ - ಎಂದು ಕರೆಯಿಸಿಕೊಳ್ಳುವ ಅವಿದ್ಯಾಕೃತವಾದ ಕಾಮಗಳು, ೧೨೩ ; **ಶಾಂ. ನಿ.** ಹೃದಯದಲ್ಲಿರುವ ಅವಿದ್ಯಾಗ್ರಂಥಿಗಳು, ಗಂಟಿನಂತೆ ಗಟ್ಟಿಯಾಗಿ ಸೇರಿಕೊಂಡಿರುವ ಅವಿದ್ಯಾಕಾಮಗಳು. ಮುಂ. ೩-೨-೯.

**ಗೋರ್ದ್ವಿತೀಯಃ - ಬ್ರ.ಸೂ-೧.** ಎತ್ತಿಗೆ ಎರಡನೆಯದು, ಜೊತೆ ಎತ್ತು, (ಸಂಖ್ಯೆಯು ಸಮಾನಸ್ವಭಾವದವುಗಳಿಗೆ ಹೊಂದುತ್ತದೆ ಎಂಬುದಕ್ಕೆ ಉದಾಹರಣೆ), ೧೭೦.

**ಗೌಣಮ್** - ಭ.ಗೀ. ಮುಖ್ಯವಲ್ಲ, ಯಾವದಾದರೂ ಗುಣಸಾದೃಶ್ಯದಿಂದ ಹಾಗೆಂದು ಹೇಳಿದ್ದು, ೨೬೬, ೨೬೮, ೩೮೨, ೧೧೩೮ ; ಮೂರು ಗುಣಗಳಿಗೆ ಸಂಬಂಧಪಟ್ಟ, ೮೬೭, ೧೦೪೧.

**ಗೌಣತ್ವಮ್** - ಬ್ರ.ಸೂ-೧. ಗುಣಸಾದೃಶ್ಯದಿಂದ ಉಪಚಾರಕ್ಕಾಗಿ ಉಪಯೋಗಿಸಿರುವಿಕೆ, ೫೯, ೭೬, ೮೦.

**ಗೌಣೀ ಮುಕ್ತಿಃ** - ಬೃಹ-೨. ನಡುವೆ ಆಗುವ ಅಪೇಕ್ಷಿಕಮುಕ್ತಿ , ಪರಮಮುಕ್ತಿಯಲ್ಲ(ಪೂ.ಪ.), ೧೭.

**ಗೌಣಜ್ಞಾನಮ್, ಗೌಣಪ್ರತ್ಯಯಃ** - ಭ.ಗೀ. ಗುಣದ ಸಾದೃಶ್ಯದಿಂದ ಆಗುವ ಅಮುಖ್ಯಜ್ಞಾನ, ೨೬೮, ೧೧೩೮, ೧೧೩೯.

**ಗೌಣಯೋಗೀ** - ಭ.ಗೀ. ಯೋಗಾಂಗವಾಗಿ ಕರ್ಮವನ್ನು ಮಾಡುವದರಿಂದಲೂ ಫಲಸಂಕಲ್ಪವನ್ನು ಬಿಟ್ಟು ಚಿತ್ತವಿಕ್ಷೇಪವನ್ನು ಕಳೆದುಕೊಳ್ಳುವದರಿಂದಲೂ ಯೋಗಿಯೆನಿಸುವ ಕರ್ಮಯೋಗಿ, ೩೮೨.

**ಗೌಣವೃತ್ತಿಃ** - ಭ.ಗೀ. ಗುಣಸಂಬಂಧದಿಂದ ತೋರುವ ಅರ್ಥ, ಮುಖ್ಯಾರ್ಥವಲ್ಲ, ೨೬೬, ೩೮೨.

**ಗೌಣಸಂನ್ಯಾಸೀ** - ಭ.ಗೀ. ಕರ್ಮಫಲದ ಸಂಕಲ್ಪವನ್ನು ಸಂನ್ಯಾಸ ಮಾಡಿದ್ದರಿಂದ ಸಂನ್ಯಾಸಿಯೆನಿಸಿದವ, ಮುಖ್ಯಸಂನ್ಯಾಸಿಯಲ್ಲ, ೩೮೨.

# ಘ

**ಘಟಃ , ಕುಮ್ಭಃ** - ನೈ. ಗಡಿಗೆ. ಅಹಂಕಾರವು ಜ್ಞಾತೃವಿಗೆ ಘಟದಂತೆ ದೃಶ್ಯ, ೨-೩೭; ಬುದ್ಧಿದೇಹಘಟಾದಿಗಳು ಆತ್ಮನನ್ನು ಬಿಟ್ಟರೆ ಇಲ್ಲವೇ ಇಲ್ಲ, ೨-೧೧೪; ದೇಹಾದಿಬುದ್ಧ್ಯಂತಗಳೆಲ್ಲವೂ ಘಟದಂತೆ ದೃಶ್ಯವಾಗಿರುವದರಿಂದ ಅನಾತ್ಮ , ೩-೫೪; ಘಟಾದಿಗಳು ಅಹಂಕಾರಕ್ಕೆ ಪರಂಪರೆಯಿಂದ ಲಿಂಗವಾಗಿರುವಂತೆ ಅಹಂಕಾರವೂ ದ್ರಷ್ಟೃವಿಗೆ ಲಿಂಗ, ೩-೫೬; ಘಟವು ಘಟಪ್ರತ್ಯಯಕ್ಕೆ ದೃಶ್ಯವಾಗಿರುವದರಿಂದ ಅದರ ದ್ರಷ್ಟೃವಾಗಲಾರದು; ಹೀಗೆಯೇ ಆತ್ಮನು ಅಹಂಪ್ರತ್ಯಯಕ್ಕೆ ದೃಶ್ಯನಾಗಿರುವದಾದರೆ ಆತ್ಮನು ದ್ರಷ್ಟೃವಾಗಬಾರದಾಗುವದು, ೨-೨೪; ಘಟಾದಿಗಳು ಹತ್ತಿರವಿದ್ದರೂ ಇಲ್ಲದಿದ್ದರೂ ರತ್ನವು ಬೆಳಗುತ್ತಲೇ ಇರುವಂತೆ ಆತ್ಮನು ಬುದ್ಧಿವೃತ್ತಿಗಳು ಇದ್ದರೂ ಇಲ್ಲದಿದ್ದರೂ ಬೆಳಗುತ್ತಿರುವನು,

೨-೬೫, ೬೭; ಗಡಿಗೆಯ ಉತ್ಪತ್ತಿಸ್ಥಿತಿನಾಶಗಳಿಂದ ಆಕಾಶಕ್ಕೆ ಆ ಉತ್ಪತ್ತ್ಯಾದಿಗಳಾಗದಿರುವಂತೆ ಬುದ್ಧಿವೃತ್ತಿಗಳ ಉತ್ಪತ್ತ್ಯಾದಿಗಳಿಂದ ಆತ್ಮನಿಗೂ ಉತ್ಪತ್ತ್ಯಾದಿಗಳು ಆಗುವದಿಲ್ಲ, ೨-೭೯, ಗಡಿಗೆ ಮುಂತಾದವುಗಳಂತೆ ಅಹಂಕಾರಾದಿಗಳು ಆತ್ಮನು ಹಾಗೇ ಇದ್ದರೂ ಬಂದುಹೋಗುತ್ತಿರುವವು, ೨-೯೫; ಘಟಾದಿಗಳು ಆತ್ಮನಿಗೆ ಮರೆಯಾಗಿರುವಂತೆ ಆತ್ಮನು ಆತ್ಮನಿಗೆ ಮರೆಯಾಗಿಲ್ಲ, ೨-೯೮; ಘಟ, ಘಟಬುದ್ಧಿ - ಇವೆರಡಕ್ಕಿಂತಲೂ ದ್ರಷ್ಟೃವು ಬೇರೆಯಾಗಿರುವಂತೆ ಅಹಂಬುದ್ಧಿ , ಅಹಂಬುದ್ಧಿಗಮ್ಯನಾದ ದುಃಖಿ - ಇವರಿಗಿಂತ ಆತ್ಮನು ಬೇರೆ, ೨-೧೦೦; ಘಟಾಕಾಶ, ಆಕಾಶ- ಎಂಬ ಸಾಮಾನ್ಯವಿಶೇಷಗಳ ಹಂಗಿಲ್ಲದೆ ಆಕಾಶವು ಅವಿಕಾರಿಯಾಗಿರುವಂತೆ ಆತ್ಮನೂ ಅವಿಕಾರಿ ೩-೧೭; ಅಜ್ಞಾನವು ಸುಷುಪ್ತಿಯಲ್ಲಿದ್ದರೆ ಘಟವನ್ನರಿಯೆನು ಎಂಬಂತೆ ಪ್ರತ್ಯಕ್ಷವಾಗಿ ಅನುಭವಕ್ಕೆ ಬರಬೇಕೆಂಬ ಆಕ್ಷೇಪವು ಸರಿಯಲ್ಲ, ೩-೫೮; ಘಟಾಕಾಶ, ಮಹಾಕಾಶ - ಇವುಗಳಂತೆ ತತ್ತ್ವಂಪದಾರ್ಥಗಳಿಗೆ ವಿಶೇಷಣವಿಶೇಷ್ಯಭಾವದಿಂದ ವಿರುದ್ಧ ಧರ್ಮಗಳು ತೊಲಗುತ್ತವೆ, ೩-೯; ಘಟಾದಿಗಳು ಸದಸತ್ತುಗಳಿಗಿಂತ ಭಿನ್ನವಾದರೂ ಅನುಮಾನಕ್ಕೆ ಲಿಂಗವಾಗಿಯೂ ಲಿಂಗವಲ್ಲದೆಯೂ ಇರುವದರಿಂದ ಅಸತ್ತು ಲಿಂಗವಾಗಲಾರದೆಂಬ ಯುಕ್ತಿಯೂ ಸರಿಯಲ್ಲ, ೩-೧೦೯.

**ಘಟಾಕಾಶಃ** - ಬ್ರ.ಸೂ-೧. ಗಡಿಗೆಯ ಆಕಾಶ, (ಉಪಾಧಿಯಿಂದ ಪರಿಚ್ಛೇದವಾಗುವದಕ್ಕೆ ದೃಷ್ಟಾಂತ), ೧೦೪, ೧೯೫ ; **ಮುಂ.** ಗಡಿಗೆಯಲ್ಲಿ ಕಟ್ಟುವಡೆದಿರುವಂತೆ ತೋರುವ ಆಕಾಶ, ಉಪಾಧಿಪರಿಚ್ಛಿನ್ನಾತ್ಮನಿಗೆ ಉಪಮಾನ, ೧೧೭, ೧೧೮, ೧೨೦ ; **ಮಾಂ.** ಗಡಿಗೆ ಎಂಬ ಉಪಾಧಿಯಿಂದ ಬೇರೆಯಾಗಿ ತೋರುವ ಆಕಾಶ, ೧೩೨ ; ೧೩೩, ೧೩೫, ೧೪೦, ೧೪೨, ೧೪೩, ೧೪೬, ೧೫೫.

**ಘಟಾದ್ಯಾಕಾಶಃ** - ಭ.ಗೀ. ಗಡಿಗೆಯೇ ಮುಂತಾದವುಗಳ ಆಳತೆಗೆ ಸಿಕ್ಕಿದಂತೆ ತೋರುವ ಆಕಾಶ, ೯೦೨, ೯೧೦.

**ಘಟಕರಕಗುಹಾದ್ಯುಪಾಧಿಃ** - ಬ್ರ.ಸೂ-೧. ಗಡಿಗೆ, ಕುಡಿಕೆ, ಗವಿ - ಮುಂತಾದ ಉಪಾಧಿಗಳುಳ್ಳ (ಆಕಾಶ), ೭೧.

**ಘಟಕರಕಾದ್ಯಾಕಾಶಃ** - ಬ್ರ.ಸೂ-೧. ಗಡಿಗೆ, ಕುಡಿಕೆ, ಮುಂತಾದವು ಗಳಲ್ಲಿರುವ ಆಕಾಶ, ೧೫೮.

**ಘಟರುಚಕಾದಯಃ** - ಬ್ರ.ಸೂ-೧. ಗಡಿಗೆ, ಅಸಲಿ, ಮುಂತಾದ (ಕಾರ್ಯ ದ್ರವ್ಯಗಳು), ೩೮೯, ೩೯೮.

**ಘಟಾದಿಚ್ಛಿದ್ರಾಣಿ** - ಬ್ರ.ಸೂ-೧. ಗಡಿಗೆ ಮುಂತಾದವುಗಳ ರಂಧ್ರಗಳು, (ಆಕಾಶದಲ್ಲಿ ಕಲ್ಪಿತಭೇದವಿರುವದಕ್ಕೆ ಉದಾಹರಣೆ), ೨೩.೨.

**ಘಟಕರಕಾಪವರಕಾದ್ಯಾಕಾಶಾಃ** - **ಮಾಂ.** ಗಡಿಗೆ, ಕುಡಿಕೆ, ಕೋಣೆ ಮುಂತಾದ ಉಪಾಧಿಗಳಿಂದ ಬೇರೆಬೇರೆಯಾಗಿ ತೋರುವ ಆಕಾಶಗಳು, ೧೪೦ ; **ಶಾಂ. ನಿ.** ಗಡಿಗೆಯ ಆಕಾಶ, ಕುಡಿಕೆಯ ಆಕಾಶ, ಕೋಣೆಯ ಆಕಾಶ - ಮುಂತಾಗಿ ಉಪಾಧಿಯಿಂದಾಗಿರುವ ಆಕಾಶಭೇದಗಳು, ಮಾಂ. ೩-೬.

**ಘಟಾಕಾಶಾಕಾಶೈಕತ್ವಮ್** - ತೈ. ಗಡಿಗೆಯೊಳಗಿನ ಆಕಾಶವೂ ಬರಿಯ ಆಕಾಶವೂ ಒಂದಾಗಿರುವದು, ೨೦೬.

**ಘಟಾಕಾಶಕರಕಾಕಾಶೌ** - ಬೃಹ-೧. ಗಡಿಗೆಯ ಆಕಾಶ, ಕುಡಿಕೆಯ ಆಕಾಶ- ಎಂಬ ಆಕಾಶದ ತೋರಿಕೆಯ ಭೇದಗಳು, ೩೧೭.

# ಚ

**ಚಂದನಕಿಮ್ಪಾಕಾದಯಃ** - ಬ್ರ.ಸೂ-೧. ಚಂದನ, ಕಿಂಪಾಕ - ಮುಂತಾದ ವೃಕ್ಷಗಳು. (ಒಂದೇ ಕಾರಣದಿಂದ ವಿಚಿತ್ರಕಾರ್ಯವಾಗಬಹುದೆಂಬುದಕ್ಕೆ ದೃಷ್ಟಾಂತ), ೪೫೭.

**ಚಂದ್ರಃ** - ಬ್ರ.ಸೂ-೧. (ದೃಷ್ಟಿದೋಷದಿಂದ ಎರಡಾಗಿ ಕಾಣುವ) ಚಂದ್ರ, (ಅಧ್ಯಾಸಕ್ಕೆ ಉದಾಹರಣೆ), ೨.

**ಚಂದ್ರಮಾಃ** - ಐತ. ಚಂದ್ರಮಂಡಲದ್ವಾರವಾಗಿ ಪಡೆಯುವ ಪಿತೃಲೋಕ, ೭೪.

**ಚಂದ್ರಲೋಕಪ್ರತಿಪತ್ತಿಃ** - ಛಾಂ. ಕರ್ಮಿಗಳು ಧೂಮಾದಿಮಾರ್ಗದಿಂದ ಪಡೆಯುವ ಗತಿ, ೨.

**ಚತುರ್ಥಃ** - **ಮಾಂ.** ಎಚ್ಚರ, ಕನಸು, ತನಿನಿದ್ರೆ - ಎಂಬ ಮೂರು ಅವಸ್ಥೆಗಳ ಹಂಗಿಲ್ಲದ ನಾಲ್ಕನೆಯ ಪರಮಾರ್ಥತತ್ತ್ವ, ೩೮, ೪೨ ; **ಶಾಂ. ನಿ.** ನಾಲ್ಕನೆಯವ ; ವಿಶ್ವ, ತೈಜಸ, ಪ್ರಾಜ್ಞ - ಎಂಬ ಅವಸ್ಥಾತ್ರಯ ಪರಿಚ್ಛಿನ್ನರೂಪದಿಂದ ತೋರುವವನಲ್ಲದ. ಶುದ್ಧಾತ್ಮ, ಮಾಂ. ಭಾ. ೭.

**ಚತುರ್ವಿಧ** - ನೈ. ನಾಲ್ಕು ಬಗೆಯ ಕರ್ಮಕಾರ್ಯಗಳು. ಉತ್ಪಾದ್ಯ, ಆಪ್ಯ, ಸಂಸ್ಕಾರ್ಯ, ವಿಕಾರ್ಯ ಎಂಬಿವು; ಮೋಕ್ಷವು ಇವುಗಳಲ್ಲಿ ಒಂದೂ ಅಲ್ಲ, ೧-೨೪.

**ಚತುರ್ವಿಧಾಭಾವಾಃ** - ಬೃಹ-೧. ಭಾವರೂಪವೇ ಎಂದು ಮೀಮಾಂಸಕರೂ ವ್ಯವಹಾರದೃಷ್ಟಿಯಿಂದ ವೇದಾಂತಿಗಳೂ ಹೇಳುವ ಪ್ರಾಗಭಾವ, ಪ್ರಧ್ವಂಸಾಭಾವ ಇತರೇತರಾಭಾವ, ಅತ್ಯಂತಾಭಾವ - ಎಂಬ ನಾಲ್ಕು ಅಭಾವಗಳು,

**ಚತುರ್ವಿಂಶತಿತತ್ತ್ವಾನಿ** - ಭ.ಗೀ. ಸಾಂಖ್ಯರು ಹೇಳುವ ಅವ್ಯಕ್ತ, ಮಹತ್ತು ಅಹಂಕಾರ, ತನ್ಮಾತ್ರೆಗಳು, ಇಂದ್ರಿಯಗಳು, ಭೂತಗಳು - ಎಂಬ ಇಪ್ಪತ್ತು ನಾಲ್ಕು ತತ್ತ್ವಗಳು, ೭೮೦.

**ಚತುಷ್ಪಾತ್** - **ಮಾಂ.** ನಾಲ್ಕು ಪಾದಗಳುಳ್ಳ ; ಎಚ್ಚರ, ಕನಸು, ತನಿನಿದ್ರೆ - ಎಂಬ ಅವಸ್ಥೆಗಳಲ್ಲಿರುವ ಆತ್ಮ , ಅವಸ್ಥೆಯ ಹಂಗಿಲ್ಲದ ಶುದ್ಧಾತ್ಮ ಎಂಬ ನಾಲ್ಕು ರೂಪಗಳುಳ್ಳ (ಆತ್ಮ), ೮, ೯, ೧೨, ೩೮, ೫೮ ; **ಶಾಂ. ನಿ.** ನಾಲ್ಕು ಪಾದಗಳುಳ್ಳವ ; ಆತ್ಮಪ್ರಾಪ್ತಿಗೆ ಸಾಧನವಾಗಿರುವ ವಿಶ್ವ, ತೈಜಸ, ಪ್ರಾಜ್ಞ- ಎಂಬ ಮೂರು ಪಾದಗಳೂ ಪ್ರಾಪ್ಯವಾದ ತುರೀಯನೆಂಬ ನಾಲ್ಕನೆಯ ಪಾದವುಳ್ಳ ಆತ್ಮನು. ಮಾಂ. ಭಾ. ೨.

**ಚರಾಚರಬೀಜಮ್** - ಬ್ರ.ಸೂ-೧. ಸ್ಥಾವರಜಂಗಮಗಳಿಗೆ ಕಾರಣವಾದ (ಬ್ರಹ್ಮ), ೧೨೬.

**ಚಿಚ್ಛಕ್ತಿ ಸ್ವರೂಪಮಾತ್ರಃ** - **ಕೇನ.** ಜ್ಞಾನಶಕ್ತಿಯೇ ತನ್ನಸ್ವರೂಪವಾಗಿ ಉಳ್ಳ ಆತ್ಮನು, ಜ್ಞಾನವುಳ್ಳವನಲ್ಲ, ೫೨ ; **ಶಾಂ. ನಿ.** ಜ್ಞಾನಶಕ್ತಿಯೇ ಸ್ವರೂಪವಾಗಿ ಉಳ್ಳ ಆತ್ಮನು, ಕೇ. ೨-೪.

**ಚಿತಿಃ, ಚೈತನ್ಯಮ್** - **ನೈ.** ಆತ್ಮಸ್ವರೂಪವಾದ ಜ್ಞಾನ. ಚಿದ್ರೂಪನಾದ ಆತ್ಮನಿಗೆ ಅಂತಃಕರಣಸಂಬಂಧದಿಂದ ಭೇದ, ೨-೪೮; ಆತ್ಮನ ಚೈತನ್ಯವನ್ನು ಅಹಂಕಾರದಲ್ಲಿದೆಯೆಂದು ತಿಳಿಯುವದು ಭ್ರಾಂತಿ, ೨-೧೦೨. ೩.-೩.೦.

**ಚಿತ್ತಮ್** - **ಪ್ರಶ್ನ.** ಸಾಮಾನ್ಯವಾಗಿ ಅರಿಯುವ ವ್ಯಾಪಾರ, ಅಂತಃಕರಣದ ಒಂದು ವೃತ್ತಿ, ೭೨ ; **ಮಾಂ.** ಅರಿಯುವ ಅಂತಃಕರಣ, ೧೧, ೯೬, ೯೭, ೨೦೬, ೨೦೭, ೨೦೮, ೨೬೬, ೩.೧೬, ೩.೧೭, ೩.೧೮, ೩.೨೧, ೩೩೩ ; **ನೈ.** ಅಂತಃಕರಣ. ಈಶ್ವರಾರ್ಪಿತಕರ್ಮಗಳಿಂದ ಚಿತ್ತಶುದ್ಧಿ , ೧-೪೭, ೪೮; **ಯೋಗಾಭ್ಯಾಸದಿಂದ** ಚಿತ್ತವು ಪ್ರತ್ಯಕ್ಪ್ರವಣವಾಗುತ್ತದೆ, ೧-೫೨ ; **ಶಾಂ. ನಿ.** ಸಾಮಾನ್ಯವಾದ ಅರಿವು, ಅರಿವುಳ್ಳ ಅಂತಃಕರಣ, ಸೂ. ಭಾ. ೨-೩-೩.೨.

**ಚಿತ್ತಕಾಲ, ಚಿತ್ತಪರಿಚ್ಛೇದ್ಯ** - **ಮಾಂ.** ಚಿತ್ತದಲ್ಲಿ ಕಲ್ಪನೆಯಾದಾಗ ಮಾತ್ರ ಕಾಣುವ ವಸ್ತು, ೯೩, ೯೭ ; **ಶಾಂ. ನಿ.** ಮನಸ್ಸಿನ ಅರಿವಿನ ಕಾಲಕ್ಕೆ ಇರುವ ಮನೋರಥವೇ ಮುಂತಾದವುಗಳು. ಮಾಂ. ಕಾ. ಭಾ. ೨-೧೪.

**ಚಿತ್ತಭೂಮಿಃ** - **ಭ.ಗೀ.** ಅಂತಃಕರಣದ ಅರಿವಿನ ಮಟ್ಟ, ೪೩.೫ ; **ಶಾಂ. ನಿ.** ಅಧ್ಯಾತ್ಮಯೋಗದ ಚಿತ್ತದ ಅರಿವಿನ ಮಟ್ಟ; ವಾಕ್ಕು, ಮನಸ್ಸು - ಮುಂತಾದವುಗಳು, ಗೀ. ಭಾ. ೬-೩೫.

**ಚಿತ್ತಸಮಾಧಾನಮ್** - **ಬ್ರ.ಸೂ-೧.** ಚಿತ್ತವನ್ನು ನಿಲ್ಲಿಸಿಕೊಳ್ಳುವದು, ಉಪಾಸನೆ, ೧೩.೧.

**ಚಿತ್ತಸ್ಪಂದನಮ್, ಚಿತ್ತಸ್ಪಂದಿತಮ್** - **ಮಾಂ.** ಅಂತಃಕರಣದ ವ್ಯಾಪಾರದ ಫಲವಾಗಿರುವ ದ್ವೈತ, ೧೬೩, ೩೨೧ ; **ಶಾಂ. ನಿ.** ಅಂತಃಕರಣದ ವ್ಯಾಪಾರದ ಫಲವಾಗಿರುವ ದ್ವೈತ, ಮಾಂ. ಕಾ. ಭಾ. ೩-೧೮, ೪-೭೨.

**ಚಿತ್ತವಿಕ್ಷೇಪಃ** - **ಭ.ಗೀ.** ಅಂತಃಕರಣವು ಹೊರಕ್ಕೆ ಹರಿದುಬರುವದು, ೩೮೨, ೩೮೩, ೪೩೫ ; **ಶಾಂ. ನಿ.** ಚಿತ್ತದ ಹರಿದಾಟ, ಗೀ. ಭಾ. ೬-೧.

**ಚಿತ್ತವೃತ್ತಿನಿರೋಧಃ** - **ಬೃಹ-೧.** ಚಿತ್ತದ ವೃತ್ತಿಗಳನ್ನೆಲ್ಲ ನಾಶಮಾಡಿ ಕೊಳ್ಳುವದು; ಮೋಕ್ಷಸಾಧನವೆಂದು ಯೋಗಶಾಸ್ತ್ರದಲ್ಲಿ ಒಪ್ಪಿರುವ ಉಪಾಯ, ೧೩೯.

**ಚಿದಾತ್ಮಕ, ಚಿದ್ರೂಪ** - **ಬ್ರ.ಸೂ-೧.** ಜ್ಞಾನಸ್ವರೂಪವಾಗಿರುವ (ಪರಮಾತ್ಮ), ೧-೧೬೦ ; **ಬ್ರ.ಸೂ-೨.** ಅರಿವಿನ ಸ್ವರೂಪವಾಗಿರುವ, (ಪರಮಾತ್ಮ), ೧-೧, ೧೬೦.

**ಚಿನ್ನಿಭ** - **ನೈ.** ಚಿದ್ರೂಪನಾದ ಆತ್ಮನಂತೆ ತೋರುವ, ಅಹಂಕಾರ. ಇದನ್ನು ವಿವೇಕಿಗಳು ಕೂಡ ಆತ್ಮನೆಂದು ತಿಳಿಯುತ್ತಾರೆ, ೩-೭೨, ೧೦೦; ಬುದ್ಧಿವೃತ್ತಿಗಳೆಲ್ಲ ಚಿನ್ನಿಭವಾಗಿರುವದರಿಂದ ವೃತ್ತಿಭೇದದಿಂದ ಅವಗತಿರೂಪನಾದ ಆತ್ಮನಿಗೆ ಭೇದವಾಗುವದಿಲ್ಲ೨-೮೬.

**ಚಿನ್ಮಾತ್ರಃ** - **ಪ್ರಶ್ನ.** ಬರಿಯ ಜ್ಞಾನವಾಗಿರುವ (ಆತ್ಮ), ೧೦೨, ೧೦೫, ೧೦೬ ; **ಶಾಂ. ನಿ.** ಬರಿಯ ಜ್ಞಾನವಲ್ಲದೆ ಮತ್ತೆ ಯಾವದರ ಸ್ವರೂಪವೂ ಅಲ್ಲದ, ಪ್ರ. ಭಾ. ೪-೩, ಕ. ಭಾ. ೧-೩-೧೧, ಗೀ. ಭಾ. ೧೮-೫೫.

**ಚಿನ್ಮಾತ್ರಘನಃ** - ಕಠ. ಬರಿಯರಿವಿನ ಗಟ್ಟಿ, ೯೯ ; **ಶಾಂ. ನಿ.** ಬರಿಯ ಜ್ಞಾನವಲ್ಲದೆ ಮತ್ತೆ ಯಾವದರ ಸ್ವರೂಪವೂ ಅಲ್ಲದ, ಪ್ರ. ಭಾ. ೪-೩, ಕ. ಭಾ. ೧-೩-೧೧, ಗೀ. ಭಾ. ೧೮-೫೫.

**ಚಿನ್ಮಾತ್ರಜ್ಯೋತಿಃ** - ಕೇನ. ಬರಿಯ ಜ್ಞಾನವೆಂಬ ಬೆಳಕಿನ ಸ್ವರೂಪದ ಆತ್ಮ, ೨೯ ; **ಶಾಂ. ನಿ.** ಬರಿಯ ಜ್ಞಾನವೆಂಬ ಬೆಳಕಿನ ಸ್ವರೂಪದ ಆತ್ಮ, ಕೇ. ಭಾ. ೧-೪.

**ಚಿನ್ಮಾತ್ರಸ್ವರೂಪಮ್** - ಕಠ. ಬರಿಯರಿವಿನ ರೂಪದ ಆತ್ಮತತ್ತ್ವ, ೧೬೭.

**ಚಿತ್ತೋಪಾಧಿವಿಶೇಷ ತಾರತಮ್ಯಮ್** - ಬ್ರ.ಸೂ-೧. ಆಯಾ ಚಿತ್ತದ ಮತ್ತು ಆಯಾ ಉಪಾಧಿಗಳ ತಾರತಮ್ಯ (ಆತ್ಮಪ್ರಾಕಟ್ಯಕ್ಕೆ ಕಾರಣ), ೯೧.

**ಚಿರನ್ತನೀ ಭ್ರಾನ್ತಿಃ** - ನೈ. ಅನಾದಿಯಾದ ಅವಿದ್ಯೆ . ಇದು ತತ್ತ್ವಜ್ಞಾನದಿಂದಲೇ ಹೋಗುತ್ತದೆ, ೨-೧೦೩.

**ಚೇತನ** - ಬ್ರ.ಸೂ-೧. ಅರಿವುಳ್ಳ, ೬೯, ೧೬೦, ೨೨೬, ೩೦೨, ೪೧೦, ೪೧೪, ೪೧೯, ೪೫೮, ೪೬೧, ೪೬೨ ; ಬ್ರ.ಸೂ-೨. ಅರಿವುಳ್ಳ. ಆದಿತ್ಯಾದಿಗಳು ಚೇತನರು, ೧-೩೦೨ ; ಚೇತನವಾದ ಅದ್ವಿತೀಯಬ್ರಹ್ಮವೇ ಜಗತ್ಕಾರಣವೆಂಬುದು ವೇದಾಂತವಾದ, ೧-೪೧೦, ೪೧೯, ೪೫೪, ೪೫೮, ೪೬೨, ೪೭೭ ; ವೇದಾಂತದಲ್ಲಿ ಚೇತನಾಚೇತನವಿಭಾಗವು ಹೊಂದುವ ಬಗೆ, ೧-೪೧೨, ೪೧೯ ; ಚೇತನವೇ ಜಗತ್ತಿಗೆ ಕರ್ತೃವೆಂಬಲ್ಲಿ ಆಕ್ಷೇಪಸಮಾಧಾನಗಳು, ೧-೪೭೦ ರಿಂದ ೪೭೩ ; ಚೇತನ ಕಾರಣವಾದವು ಎಲ್ಲಾ ಶ್ರುತಿಗಳಲ್ಲಿಯೂ ಇದೆ, ೧-೮೭, ೮೯ ; ಅಚೇತನವೆಂಬ ಚೇತನವಿರೋಧಿಧರ್ಮವು ಬೇರೆಯಿಲ್ಲ, ೧-೨೩.

**ಚೇತನಕಾರಣವಾದಃ** - ಬ್ರ.ಸೂ-೧. ಚೇತನವೇ ಜಗತ್ತಿಗೆ ಕಾರಣವೆಂಬ ವಾದ, (ವೇದಾಂತವಾದ), ೪೫೪.

**ಚೇತನಕಾರಣವಾದಿನಃ** - ಬ್ರ.ಸೂ-೧. ಚೇತನವೇ ಜಗತ್ಕಾರಣವೆಂದು ಹೇಳುವ (ಉಪನಿಷತ್ತುಗಳು), ೮೯.

**ಚೇತನಕಾರಣಾವಗತಿಃ** - ಬ್ರ.ಸೂ-೧. ಚೇತನವೇ ಜಗತ್ಕಾರಣವೆಂಬ ನಿಶ್ಚಯ, ೮೭.

**ಚೇತನಾವಾನ್** - ಬ್ರ.ಸೂ-೧. ಚೇತನವುಳ್ಳ (ದೇವತೆ), ೩೦೨.

**ಚೇತನಾಚೇತನವಿಭಾಗಃ ಚೇತನಾಚೇತನಪ್ರವಿಭಾಗಃ** - ಬ್ರ.ಸೂ-೧. ಅರಿವುಳ್ಳದ್ದು ಇಲ್ಲದ್ದು ಎಂಬ ವಿಂಗಡ, ೪೧೧, ೪೧೨, ೪೧೪, ೪೧೯.

**ಚೇತನಾಧಿಷ್ಠಿತ** - ಬ್ರ.ಸೂ-೧. ಚೇತನಕ್ಕೆ ವಶವಾಗಿರುವ (ಅಚೇತನ), ೨೯೭.

**ಚೇತನಾಚೇತನರೂಪ** - ಬೃಹ-೧. ಅರಿಯುವ, ಅರಿಯಲಾರದ (ಸಾಮಾನ್ಯ - ವಿಶೇಷಗಳು), ೩೬೩.

**ಚೇತಯಿತಾ - ಈಶ.** ಅರಿಯುವ ಆತ್ಮ, ೧೫.

**ಚೇತೋಂಶವಃ - ಮಾಂ.** ಚೈತನ್ಯದ ಕಿರಣಗಳು, ಬೇರೆಬೇರೆಯಾಗಿ ತೋರುವ ವಿಶ್ವ, ತೈಜಸ, ಪ್ರಾಜ್ಞ- ಇವರು, ೩೦.

**ಚೋದನಾ** - ಬ್ರ.ಸೂ-೧. ಕ್ರಿಯೆಯಲ್ಲಿ ಪ್ರವರ್ತಿಸುವ ವೇದವಚನ, ೧೨; ಬೋಧಕವಾದ ವೇದವಾಕ್ಯ, ೧೨.

**ಚೋದನಾತನ್ತ್ರಮ್** - ಬ್ರ.ಸೂ-೧. ವಿಧಿಗೆ ಅಧೀನವಾಗಿರುವ, ೫೧.

**ಚೋದನಾಲಕ್ಷಣೌ** - ಬ್ರ.ಸೂ-೧. ವಿಧಿಯೇ ಪ್ರಮಾಣವಾಗಿರುವ (ಧರ್ಮಾಧರ್ಮಗಳು), ೪೨.

**ಚೋದ್ಯಮ್ - ನೈ.** (೧) ಆಕ್ಷೇಪ, ೩-೧೧೦, ೧೧೬, (೨) ಚೋದನೆಗೆ ತಕ್ಕ ವಿಧಿ. ಅಕಾರಕಬ್ರಹ್ಮಾತ್ಮಸ್ವರೂಪವನ್ನು ಅರಿತುಕೊಂಡವನು, ಯಾವ ಚೋದನೆಗೂ ತಕ್ಕವನಲ್ಲ, ೧-೫೮.

**ಚೈತನ್ಯಮ್** - ಬ್ರ.ಸೂ-೨. ಅರಿವು. ಆತ್ಮಚೈತನ್ಯಜ್ಯೋತಿಯು ನಿತ್ಯ, ೧-೨೬೫; ಕಟ್ಟಿಗೆ, ಮಣ್ಣುಹೆಂಟೆ - ಮುಂತಾದವುಗಳಲ್ಲಿ ಚೈತನ್ಯವು ತೋರದೆ ಇದೆ, ೧-೪೧೨; ಚೈತನ್ಯದ ಅನ್ವಯವಿಲ್ಲದ್ದರಿಂದ ಬ್ರಹ್ಮವು ಜಗತ್ಕಾರಣವೆಂಬುದು ಸರಿಯಲ್ಲ , ೧-೪೧೬ ; ಜೀವನು ನಿತ್ಯಚೈತನ್ಯಸ್ವರೂಪನು, ೨-೧೨೪ ; ದುಃಖವಿಮುಕ್ತವಾದ ಚೈತನ್ಯಸ್ವರೂಪವೇ ನಾನೆಂಬುದೇ ಆತ್ಮಾನುಭವ, ೨-೫೦೭ ; ಮುಕ್ತಿಯಲ್ಲಿ ಚೈತನ್ಯಮಾತ್ರಸ್ವರೂಪನಾಗುತ್ತಾನೆ, ೨-೫೯೬.

**ಚೈತನ್ಯಾಭಾಸಃ - ಈಶ.** ಅರಿವಿನ ತೋರಿಕೆ, ಚಿದಾಭಾಸ, ೧೧ ; **ಶಾಂ. ನಿ.** ಅಂತಃಕರಣದಲ್ಲಿ ತೋರುವ ಆತ್ಮನ ಅರಿವಿನ ಹೊಳಪು, ಈ. ಭಾ. ೪.

**ಚೈತನ್ಯಾತ್ಮಜ್ಯೋತಿಃ - ಕೇನ.** ಚೈತನ್ಯಸ್ವರೂಪದ ಬೆಳಕು, ಆತ್ಮನ ಜ್ಞಾನಸ್ವರೂಪ, ೩೬, ೩೮.

**ಚೈತನ್ಯಮಾತ್ರಸತ್ತಾಕಮ್** - ಕೇನ. ಜ್ಞಾನವೊಂದೇ ಇರವಾಗಿ ಉಳ್ಳ ಆತ್ಮ, ವಾಗಾದಿಗಳ ನಿಜವಾದ ಸ್ವರೂಪವು ಇದೇ, ೩.೧ ; ಶಾಂ. ನಿ. ಜ್ಞಾನವೆಂಬುದೊಂದೇ ಇರವಾಗಿ ಉಳ್ಳ ಆತ್ಮ, ಕೇ. ಭಾ. ೧-೫.

**ಚೈತನ್ಯಜ್ಯೋತಿಃ, ಚೈತನ್ಯಾತ್ಮಜ್ಯೋತಿಃ, ಚಿತ್ಸ್ವಭಾವಜ್ಯೋತಿಃ** - ಬೃಹ-೨. ಚೈತನ್ಯರೂಪವಾದ ಆತ್ಮನ ಬೆಳಕು, ೧೭೮, ೧೮೮.

**ಚೈತನ್ಯಜ್ಯೋತಿಃಪ್ರತಿಚ್ಛಾಯಾ** - ಬೃಹ-೨. ಚೈತನ್ಯದಂತೆ ಕಾಣುವ, ೪೬, ೧೭೩.

**ಚೈತನ್ಯಮಾತ್ರೈಕರಸಮ್** - ಭ.ಗೀ. ಜ್ಞಾನಸ್ವರೂಪವೇ ಆಗಿ ಬೇರೊಂದು ಬಗೆಯಲ್ಲದ, ೧೧೦೫.

# ಛ

**ಛತ್ರಿಣಃ** - ಬ್ರ.ಸೂ-೧. ಕೊಡೆಯುಳ್ಳವರು, ಒಬ್ಬನು ಕೊಡೆಯನ್ನು ಹಿಡಿದಿದ್ದರೂ ಜನರ ಒಟ್ಟು ಗುಂಪಿನವರನ್ನು ಕೊಡೆಯವರು ಎಂದು ಹೇಳಬಹುದು, (ಒಬ್ಬನಿಗಿದ್ದೂ ಪ್ರಯೋಗದಲ್ಲಿ ಅನೇಕರಿಗೆ ಸಮಾನಧರ್ಮವಾಗಬಹುದೆಂಬುದಕ್ಕೆ ದೃಷ್ಟಾಂತ), ೧೬೮, ೧೭೧.

**ಛಾಯಾತ್ಮಾ** - ಬ್ರ.ಸೂ-೧. ಕಣ್ಣಿನಲ್ಲಿ ಉಪಾಸನೆಗೆ ಹೇಳಿದೆ - ಎಂದು ಪೂರ್ವಪಕ್ಷಿಯು ಕಲ್ಪಿಸಿರುವ ಪುರುಷ ಪ್ರತಿಬಿಂಬ, ೧೭೬, ೧೮೪.

# ಜ

**ಜಗತ್** - ಬ್ರ.ಸೂ-೧. ಬ್ರಹ್ಮದಿಂದ ಬಂದು ಅದರಲ್ಲಿಯೇ ತೋರಿ ಅದರಲ್ಲಿಯೇ ಅಡಗುವ ಪ್ರಪಂಚ ೨೪.

**ಜಗತ್ಕಾರಣಮ್** - ಬ್ರ.ಸೂ-೨. ಜಗತ್ತಿನ ಕಾರಣ. ಜಗತ್ಕಾರಣವಾದ ಬ್ರಹ್ಮವು ಸರ್ವಜ್ಞ, ಸರ್ವಶಕ್ತಿ, ೧-೩೧, ೬೪ ; ಇದಕ್ಕೆ ಶಾಸ್ತ್ರವೇ ಪ್ರಮಾಣ, ೧-೩೩; ಸರ್ವೇಶ್ವರನು ಜಗತ್ಕಾರಣನೆಂದು ವೇದಾಂತವಾಕ್ಯಗಳು, ೧-೩೮ ; ಅದ್ವಿತೀಯಬ್ರಹ್ಮವು ಜಗತ್ಕಾರಣವೆಂಬುದು ತರ್ಕವಿರುದ್ಧವಲ್ಲ, ೧-೪೫೮ ರಿಂದ ೪೬೨ ; ಅಸಂಸಾರಿಬ್ರಹ್ಮವೇ ಜಗತ್ಕಾರಣವು, ಅದೇ ಜೀವನ ನಿಜವಾದ ಸ್ವರೂಪ, ೨-೪೫೯ ; ಅಚೇತನವಾದ ಪ್ರಧಾನವು ಜಗತ್ಕಾರಣವೆಂಬುದು ವೇದವಿರುದ್ಧ,

೧-೬೭, ೭೩, ೭೪ ; ಪ್ರಧಾನಜಗತ್ಕಾರಣವಾದವು ಸ್ಮೃತಿಗಳಿಗೂ ವಿರುದ್ಧ, ೧-೪೦೧; ಪರಮಾಣುಕಾರಣವಾದವೂ ಶ್ರುತಿತರ್ಕವಿರುದ್ಧ, ೨-೩. **ಕಾರ್ಯಕಾರಣೇ** ಎಂಬ ಪದವನ್ನು ನೋಡಿ ; **ಶಾಂ. ನಿ.** ನಾಮರೂಪಗಳಿಂದ ಕೂಡಿದ ಜಗತ್ತಿಗೆ ಕಾರಣವಾದ ಬ್ರಹ್ಮ. ಸೂ. ಭಾ. ೧-೧-೨ ; ಕಾರ್ಯವಾದ ಜಗತ್ತು ಕಾರಣವಾದ ಬ್ರಹ್ಮಕ್ಕಿಂತ ಬೇರೆಯಿಲ್ಲವೆಂದೂ ಜಗತ್ತಿಗೆ ಬ್ರಹ್ಮವು ಕಾರಣವೆಂಬುದು ಅವಿದ್ಯಾಕಲ್ಪಿತವಾದ ನಾಮರೂಪಗಳ ವ್ಯಾಕರಣದಿಂದ ಮಾತ್ರವೇ ಎಂದೂ ಆಚಾರ್ಯರ ಅಭಿಪ್ರಾಯ. ಸೂ. ಭಾ. ೨-೧-೧೪.

**ಜಗದಾತ್ಮಾ - ಮುಂ.** ಜಗತ್ತಿಗೆ ಆತ್ಮನಾಗಿರುವ ಹಿರಣ್ಯಗರ್ಭ, ೨೩.

**ಜಗದಾತ್ಮಾ , ಸರ್ವಾತ್ಮಾ - ಬೃಹ-೨.** ಸಮಷ್ಟಿವ್ಯಷ್ಟ್ಯಾತ್ಮಕನಾದ (ಪ್ರಾಣ, ಸೂತ್ರ), ೨೬, ೧೪೦ ; **ಶಾಂ. ನಿ.** ಜಗತ್ತಿಗೆಲ್ಲ ಆತ್ಮನಾಗಿರುವ ಹಿರಣ್ಯಗರ್ಭ, ಮುಂ. ಭಾ. ೧-೧-೮.

**ಜನ್ಮಮರಣಪ್ರಬಂಧಃ - ಐತ.** ಹುಟ್ಟುಸಾವುಗಳ ಸಾಲು, ೭೯.

**ಜನ್ಮಸ್ಥಿತಿಭಂಗಮ್ - ಬ್ರ.ಸೂ-೧.** ಹುಟ್ಟಿ ಇದ್ದು ನಾಶವಾಗುವದು, ಬ್ರಹ್ಮದಿಂದ ಜಗತ್ತು ಪಡೆಯುವ ಸೃಷ್ಟಿ ಸ್ಥಿತಿಲಯಗಳು, ೨೪.

**ಜನ್ಮಾಂತರಕೃತ - ತೈ.** ಹಿಂದಿನ ಜನ್ಮದಲ್ಲಿ ಮಾಡಿದ (ಕರ್ಮ) ೮೩.

**ಜಲಸೂರ್ಯಕಾದಿ ಪ್ರತಿಬಿಂಬಃ - ಬೃಹ-೧.** ನೀರಿನಲ್ಲಿ ಕಾಣುವ ಸೂರ್ಯನದೇ ಮುಂತಾದ ನೆರಳು, ೧೨೬.

**ಜಲಸೂರ್ಯಕಃ - ಭ.ಗೀ.** ನೀರಿನಲ್ಲಿ ಹೊಳೆದಿರುವ ಸೂರ್ಯನ ಪ್ರತಿಬಿಂಬ, ಜೀವನು ಪರಮಾತ್ಮನ ಅಂಶನೆಂಬುದಕ್ಕೆ ದೃಷ್ಟಾಂತ, ೯೦೨ ; **ಪ್ರಶ್ನ** ನೀರಿನಲ್ಲಿ ಕಾಣುವ ಸೂರ್ಯಪ್ರತಿಬಿಂಬ, (ಜೀವರಿಗೆ ಉಪಮಾನ), ೭೩ ; **ಶಾಂ. ನಿ.** ನೀರಿನಲ್ಲಿ ಕಾಣುವ ಸೂರ್ಯಪ್ರತಿಬಿಂಬ, ಪರಮಾತ್ಮನಲ್ಲಿ ಕಲ್ಪಿತವಾಗಿರುವ ಜೀವನಿಗೆ ಉಪಮಾನ, ಪ್ರ. ಭಾ. ೪-೯ ; ಸೂ. ಭಾ. ೩-೨-೧೮ ; ಗೀ. ಭಾ. ೧೫-೭.

**ಜಾಗರಿತಮ್ - ಮಾಂ.** ಎಚ್ಚರವೆಂಬ ಅವಸ್ಥೆ, ೧೧, ೨೦, ೫೨, ೬೦ ; ೩೧೭, ೩೪೬, ೩೫೦ ; **ಬೃಹ-೧.** ಎಚ್ಚರದ ಅವಸ್ಥೆ, ೧೯೩, ೨೯೫, ೨೯೬ ; **ಶಾಂ. ನಿ.** ಎಚ್ಚರದವಸ್ಥೆ. ಈ ಅವಸ್ಥೆಯಲ್ಲಿರುವ ಆತ್ಮನು ನಿಜವಾಗಿ ವೈಶ್ವಾನರನೇ, ಮಾಂ. ಭಾ. ೩.

**ಜಾಗರಿತವ್ಯವಹಾರಃ - ಬೃಹ-೨.** ಎಚ್ಚರದ ಲೌಕಿಕಶಾಸ್ತ್ರೀಯವ್ಯವಹಾರ, ೧೭೬, ೧೮೭.

**ಜಾಗ್ರತ್ಪ್ರತಿಬಿಂಬಭೂತ** - ಬೃಹ-೧. ಎಚ್ಚರದ ಲೋಕಕ್ಕೆ ಪಡಿನೆರಳಿನಂತಿರುವ (ಲೋಕ), ೨೯೪.

**ಜಾಗ್ರತ್ಸ್ವಪ್ನಸುಷುಪ್ತತುರೀಯಾಣಿ** - ಬೃಹ-೨. ಎಚ್ಚರ, ಕನಸು, ತನಿನಿದ್ರೆ, ಎಂಬ ಅವಸ್ಥೆಗಳ ಮತ್ತು ಅವುಗಳನ್ನು ಮೀರಿದ ಆತ್ಮ, ೧೫೭.

**ಜಾಗ್ರತ್ಸ್ವಪ್ನಸುಷುಪ್ತಸ್ಥಾನಾನಿ** - ಬೃಹ-೨. ಎಚ್ಚರಕನಸುನಿದ್ರೆಗಳೆಂಬ ಅವಸ್ಥೆಗಳು, ೨೦೭.

**ಜಾಗ್ರದ್ವಸ್ತು** - ಬೃಹ-೨. ಎಚ್ಚರದಲ್ಲಿ ಕಾಣುವ ವಸ್ತು, ೧೮೦.

**ಜಾತಿಗುಣಕ್ರಿಯಾವಿಶೇಷಣಾನಿ** - ಕೇನ. ವಾಕ್ಕಿನಿಂದ ಹೇಳುವದಕ್ಕೆ ವಸ್ತುವಿನಲ್ಲಿ ನಿಮಿತ್ತವಾಗಿರಬೇಕಾದ ವಿಕಲ್ಪಗಳು, ೨೫.

**ಜಾತಿಗುಣಕ್ರಿಯಾಸಂಬನ್ಧಾಃ** - ಶಾಂ. ನಿ. ಶಬ್ದವು ಅರ್ಥವನ್ನು ಹೇಳಬೇಕಾದರೆ ಗೋತ್ವಾದಿಜಾತಿಯನ್ನೋ, ನೀಲತ್ವಾದಿಗುಣಗಳನ್ನೋ, ಪಾಕಾದಿಕ್ರಿಯೆಗಳನ್ನೋ, ಆಯಾ ವಸ್ತುಗಳನ್ನುಳ್ಳವನೆಂಬ ಸಂಬಂಧವನ್ನೋ, ತಿಳಿಸಬೇಕು. ಆತ್ಮನಲ್ಲಿ ಇವು ಯಾವವೂ ಇಲ್ಲದ್ದರಿಂದ ಆತ್ಮನನ್ನು ಶಬ್ದದಿಂದ ಹೇಳುವದಕ್ಕೆ ಬರುವದಿಲ್ಲ. ಗೀ. ಭಾ. ೧೩-೧೨ ; ಬೃ. ಭಾ. ೨-೩-೬.

**ಜಾಯಾದ್ಯೇಷಣಾತ್ರಯ** - ಈಶ. ಹೆಂಡತಿಯೇ ಮುಂತಾದ ಮೂರರ ಬಯಕೆ, ೨೦.

**ಜಾಮಿತಾ** - ಈಶ. ಮಾಡಿದ್ದನ್ನೇ ಮಾಡುವದು, ಪುನರುಕ್ತಿ, ೧೩, ೨೩.

**ಜಿಜ್ಞಾಸಾ** - ಬ್ರ.ಸೂ-೧. (ಬ್ರಹ್ಮವನ್ನು) ವಿಚಾರಮಾಡಿ ತಿಳಿಯಬೇಕೆಂಬ ಇಚ್ಛೆ. ೧೫, ೧೬, ೧೮, ೨೦.

**ಜಿಜ್ಞಾಸ್ಯಮ್** - ಬ್ರ.ಸೂ-೧. ವಿಚಾರಮಾಡಿ ತಿಳಿಯಬೇಕಾಗಿರುವ ಧರ್ಮ, ಬ್ರಹ್ಮ, ೧೨, ೪೦.

**ಜೀವ** - ಬ್ರ.ಸೂ-೧. ಪ್ರಾಣಗಳನ್ನು ಧಾರಣೆಮಾಡಿಕೊಂಡಿರುವ ವಿಜ್ಞಾನಾತ್ಮ, ೭೪, ೧೦೨, ೧೦೬, ೧೧೬, ೧೩೫, ೧೪೧, ೧೪೮, ೧೫೪, ೧೬೩, ೧೭೪, ೨೫೬, ೩೪೭, ೩೫೦, ೩೭೧, ೪೪೦, ೪೭೬.

**ಜೀವಃ** - ಬ್ರ.ಸೂ-೨. ಪ್ರಾಣಧಾರಣೆಮಾಡಿಕೊಂಡಿರುವ ಆತ್ಮನು. ಕರ್ತಾ, ಭೋಕ್ತಾ, ಕ್ಷೇತ್ರಜ್ಞಃ, ಪ್ರಾಣಭೃತ್, ಶಾರೀರಃ, ವಿಜ್ಞಾನಮಯಃ, ಸಂಸಾರೀ - ಇವೆಲ್ಲ

ಜೀವನ ಹೆಸರುಗಳು. ಜಗತ್ತಿನಲ್ಲಿ ಅನೇಕ ಜೀವರಿರುವರು. ೧-೨೪ ; ಈಶ್ವರನಿಗಿಂತ ಬೇರೆಯಾದ ಜೀವನೇ ನಿಜವಾಗಿಲ್ಲವಾದರೂ ದೇಹಾದ್ಯುಪಾಧಿಗಳ ಸಂಬಂಧದಿಂದ ಈಶ್ವರಸಂಸಾರಿಭೇದಬುದ್ಧಿಯುಂಟಾಗಿದೆ. ೧-೭೧ ; ಸದ್ಬ್ರಹ್ಮವೇ ಜೀವನ ಸ್ವರೂಪವು. ೧-೭೫ ; ಜೀವನೂ ಈಶ್ವರನೂ ಶರೀರದಲ್ಲಿರುವವರಾದರೂ ಜೀವನು ಮಾತ್ರ ಶರೀರದಲ್ಲಿ ಭೋಗವನ್ನನುಭವಿಸುವದರಿಂದ ಶಾರೀರನೆನಿಸಿದಾನೆ. ೧-೧೫೪, ಶಾರೀರಪರಮಾತ್ಮಭೇದವು ಉಪಾಧಿಯಿಂದ. ೧-೧೫೮, ೨-೨೬೨ ; ಮಿಥ್ಯಾಜ್ಞಾನದಿಂದಾಗಿರುವ ಶಾರೀರನ ಉಪಭೋಗವು ಬ್ರಹ್ಮಕ್ಕಿಲ್ಲ. ೧-೧೬೨ ; ಕ್ಷೇತ್ರಜ್ಞನಿಗೆ ನಿಜವಾಗಿ ಭೋಕ್ತೃತ್ವವಿಲ್ಲವೆಂಬುದನ್ನು ತಿಳಿಸುವದಕ್ಕಾಗಿ ಶ್ರುತಿಯು ಅಂತಃಕರಣಕ್ಕೇ ಅದನ್ನು ಹೇಳುತ್ತದೆ, ೧-೧೭೫ ; ವಿಜ್ಞಾನಾತ್ಮನು ಪರಮಾತ್ಮನಿಗಿಂತ ಭಿನ್ನನಲ್ಲವಾದರೂ ಅವಿದ್ಯೆಯಿಂದ ಅವನಲ್ಲಿ ಮರ್ತ್ಯತ್ವವು ಅಧ್ಯಾರೋಪಿತವಾಗಿದೆ. ೧-೧೮೫ ಒಂದು ಶರೀರದಲ್ಲಿ ಇಬ್ಬರು ಆತ್ಮರು ಇರಲಾರರಾದರೂ ಉಪಾಧಿಯಿಂದ ಶಾರೀರಾಂತರ್ಯಾಮಿಭೇದ ವುಂಟಾಗಿದೆ, ೧-೧೯೫ ; ಪ್ರಾಣಭೃತ್ತು ನಿಜವಾಗಿ ಪರಮಾತ್ಮನೇ ಆದರೂ ಉಪಾಧಿನಿಮಿತ್ತದಿಂದ ಪ್ರತಿಶರೀರಕ್ಕೂ ಬೇರೆಬೇರೆಯಾಗಿ ಕಾಣಿಸುತ್ತಾನೆ. ೧-೨೩೨ ; ಜೀವನು ತನ್ನ ಸ್ವರೂಪದಲ್ಲಿಯೇ ಇರುತ್ತಿದ್ದರೂ ಅವಿದ್ಯೆಯಿಂದ ಬೇರೆಯಾಗಿದ್ದು ವಿವೇಕದಿಂದ ಸ್ವರೂಪವನ್ನು ಪಡೆದುಕೊಳ್ಳುತ್ತಾನೆ, ೧-೨೬೬ ; ಜೀವಸ್ವರೂಪವು ಆಕಾಶದಲ್ಲಿ ತಲಮಲಾದಿಗಳಂತೆ ಪರಮಾತ್ಮನಲ್ಲಿ ಕಲ್ಪಿತ, ಪರಮಾತ್ಮನು ಅದಕ್ಕಿಂತ ಅನ್ಯ, ೧-೨೬೯ ; ಜೀವನು ನಾಮರೂಪವ್ಯಾಕರಣವನ್ನು ಮಾಡುವದು ಪರಮಾತ್ಮನಿಗಿಂತ ಅಭಿನ್ನನಾಗಿರುವದ-ರಿಂದಲೇ, ೧-೩೨೬, ೨-೨೦೭ ; ಸುಷುಪ್ತ್ಯುತ್ಕ್ರಾಂತಿಗಳಲ್ಲಿ ಶಾರೀರನಿಗಿಂತ ಪ್ರಾಜ್ಞನನ್ನು ಬೇರೆಯೆಂದು ಶ್ರುತಿಯಲ್ಲಿ ಹೇಳಿರುವದು ಜೀವನು ನಿಜವಾಗಿ ಅವಸ್ಥಾರಹಿತನೇ ಅಸಂಸಾರಿಯೇ ಎಂದು ತಿಳಿಸುವದಕ್ಕೆ, ೧-೩೩೦, ೩೩೧ ; ಅವಿದ್ಯೆಯೂ ಆದರಿಂದಾಗಿರುವ ಶರೀರವೂ ಜೀವನ ವ್ಯವಹಾರಕ್ಕೆಲ್ಲ ಕಾರಣವಾಗಿರುವದರಿಂದ ಅದನ್ನು ಶ್ರುತಿಯಲ್ಲಿ ಅವ್ಯಕ್ತವೆಂದಿದೆ, ೧-೩೩೮, ೩೪೦ ; 'ಆತ್ಮಾ ವಾ ಅರೇ ದ್ರಷ್ಟವ್ಯಃ' ಎಂಬಲ್ಲಿ ವಿಜ್ಞಾನಾತ್ಮನನ್ನು ಹೇಳಿರುವದೇಕೆಂಬ ಬಗ್ಗೆ ಮತಭೇದಗಳು : ಜೀವನಿಗೂ ಪರಮಾತ್ಮನಿಗೂ ಕಾರ್ಯಕಾರಣಭಾವ-ವಿರುವದರಿಂದ ಎಂದು ಆಶ್ಮರಥ್ಯರು. ಈಗ ಭೇದವೂ ಮುಕ್ತಿಯಲ್ಲಿ ಅಭೇದವೂ ಇರುವದರಿಂದ ಎಂದು ಔಡುಲೋಮಿಗಳು, ಪರಮೇಶ್ವರನು ತಾನಿದ್ದಂತಿದ್ದು ಜೀವನಾಗಿ ತೋರುತ್ತಿರುವದರಿಂದ ಎಂದು ಕಾಶಕೃತ್ಸ್ನರು ; ಮೂರನೆಯ ಮತವೇ ಸಿದ್ಧಾಂತ, ೧-೩೮೫ ; ಇದೇ ಶ್ರುತಿಯಲ್ಲಿ ಆತ್ಮನು ಭೂತಗಳನ್ನು ಬಿಟ್ಟೇಳುವನೆಂದಿರುವ ವಚನಕ್ಕೆ ಕಾಶಕೃತ್ಸ್ನರ ವ್ಯಾಖ್ಯಾನವೇ ಸಿದ್ಧಾಂತ, ೧-೩೮೬ ;

ವಿಜ್ಞಾನಾತ್ಮಪರಮಾತ್ಮರಿಗೆ ಉಪಾಧಿನಿಮಿತ್ತವಾದ ಭೇದ, ೧-೩೩೮ ದೇಹದ ಜನ್ಮಮರಣಗಳಿಂದ ಜೀವನಿಗೆ ಜನ್ಮಮರಣಗಳಿಲ್ಲ , ೨-೧೧೮; ಜೀವನಿಗೆ ಬ್ರಹ್ಮದಿಂದ ಉತ್ಪತ್ತಿಯಿಲ್ಲ, ೨-೧೧೯ ; ಜೀವನು ನಿತ್ಯಚೈತನ್ಯಸ್ವರೂಪನು, ೨-೧೨೪; ಜೀವನ ಅಣುತ್ವವು ಉಪಾಧಿಕೃತ, ೨-೧೩೮ ; ಬುಧ್ಯುಪಾಧಿಯು ಸಂಸಾರಿತ್ವವಿರುವವರೆಗೂ ಇರುವದು, ೨-೧೪೦ ರಿಂದ ೧೪೨ ; ಜೀವನ ಕರ್ತೃತ್ವವೂ ಔಪಾಧಿಕ, ೨-೧೫, ೧೫೨ ; ಇವನ ಕರ್ತೃತ್ವಭೋಕ್ತೃತ್ವಗಳು ಈಶ್ವರಾಧೀನ. ೨-೧೫೫, ೧೫೬ ; ಇವನ ಜ್ಞಾನೈಶ್ವರ್ಯಗಳು ಈಶ್ವರಾನು - ಗ್ರಹದಿಂದಲೇ ಹೊರತೋರಿಕೊಳ್ಳುವವು, ೨-೨೬೦, ೨೬೧ ; ಜೀವನು ಬ್ರಹ್ಮದ ಅಂಶವಿದ್ದಂತೆ, ೨-೧೫೮ ರಿಂದ ೧೬೦ ; ಜೀವನ ದುಃಖವು ಪರಮಾತ್ಮನಿಗಿಲ್ಲ, ೨-೧೬೧ ರಿಂದ ೧೬೩ ; ಪರಮಾತ್ಮನೇ ಆಗಿರುವ ಜೀವನಿಗೆ ಅನುಜ್ಞಾಪರಿಹಾರಗಳು ದೇಹಾದಿಸಂಬಂಧದಿಂದ, ೨-೧೬೫ : ಜೀವನು ಸೂರ್ಯಪ್ರತಿಬಿಂಬಾದಿಗಳಂತೆ ಪರಮಾತ್ಮನ ಆಭಾಸ, ೨-೧೬೮, ೨೮೫ ರಿಂದ ೨೮೭ ; ಐಕಾತ್ಮ್ಯವಾದದಲ್ಲಿ ಕರ್ಮಫಲಸಾಂಕರ್ಯವಿಲ್ಲ, ೨-೧೬೭, ಅದೇ ಜೀವನೊ ಅಥವಾ ಬೇರೆಯೊ ಎಂಬುದಕ್ಕೆ ಉಪಾಧಿಯೇ ನಿರ್ಣಾಯಕ, ೨-೨೩೨ ; ಜೀವೋಪಕರಣಗಳಾದ ಇಂದ್ರಿಯಾದಿಗಳು ಬ್ರಹ್ಮದಿಂದ ಹುಟ್ಟುತ್ತವೆ, ೨-೨೧೧ ; ಇವನ ಸಂಸಾರಗತಿ ೨-೨೧೨ ರಿಂದ ೨೫೨ ; ಅವಸ್ಥೆಗಳು, ೨-೨೫೪ ರಿಂದ ೨೭೫; ಜೀವನು ಸುಷುಪ್ತಿಯಲ್ಲಿ ಬ್ರಹ್ಮವನ್ನೇ ಸೇರುತ್ತಾನೆ, ೨-೨೬೬ ; ಅವನಿಗೆ ಜಾಗ್ರತ್ಸ್ವಪ್ನವ್ಯವಹಾರದ ಸಂಬಂಧವಿಲ್ಲ, ೨-೨೬೭ ; ಸುಷುಪ್ತನಾದ ಜೀವನೇ ಎಚ್ಚರುತ್ತಾನೆ, ೨-೨೭೦ ; ಉಪಾಸಕರಿಗೆ ಆಗುವ ಮುಕ್ತಿ ೨-೨೬೭, ೨-೫೯೮ ರಿಂದ ೬೧೨ ; ಕರ್ಮಶೇಷನಾದ ಜೀವನಿಗಿಂತ ವಿಲಕ್ಷಣನಾದ ಈಶ್ವರನನ್ನೇ ಶ್ರುತಿಯಲ್ಲಿ ತಾತ್ಪರ್ಯದಿಂದ ಹೇಳಿದೆ, ೧-೪೫೫, ೪೫೬, ೨-೪೪೫ ; ಜೀವನು ಜೀವನೆನಿಸಿ ಕೊಂಡಿರುವದು ಬ್ರಹ್ಮಜ್ಞಾನವಾಗುವವರೆಗೇ, ೧-೨೬೪ ; ಅವಿದ್ಯೆ ಹೋಗು ವವರೆಗೇ, ೧-೩೫೧ ; ವಾಕ್ಯಜ್ಞಾನವಾಗುವವರೆಗೇ, ೧-೪೫೬ ; ಬುದ್ಧ್ಯುಪಾಧಿ ಸಂಬಂಧವಿರುವವರೆಗೇ, ೨-೧೪೦ ; ಸುಷುಪ್ತ್ಯಾದಿಗಳಲ್ಲಿ ಉಪಾಧಿನಾಶದಿಂದ ಜೀವನು ಈಶ್ವರನಲ್ಲಿ ಒಂದಾಗುವನು, ೨-೫೯೧ ರಿಂದ '೪ ; ಜೀವನು ಬ್ರಹ್ಮದ ಅವಯವವಲ್ಲ, ವಿಕಾರವಲ್ಲ, ಬ್ರಹ್ಮಕ್ಕಿಂತ ಬೇರೆಯೂ ಅಲ್ಲ, ೨-೫೮೪ ; **ತ್ರೈ.** ಸಂಸಾರಿಯಾಗಿ ತೋರುವ ಪ್ರಾಣಧಾರಿಯಾದ ಆತ್ಮ೧೭೨, ೧೭೩, ೧೭೪, ೨೫೨ ; **ಐತ.** ಸಂಸಾರಿಯಾದ ಆತ್ಮ, ೫೬, ೫೭, ೬೩ ; **ಭ.ಗೀ.** ಪ್ರಾಣಧಾರಣೆ ಮಾಡಿರುವ ಕರ್ತೃಭೋಕ್ತೃ, ೮೧೦ ; ೯೦೩.

**ಜೀವಾಃ** - ಮಾಂ. ಕರ್ತೃಭೋಕ್ತೃರೂಪರಾಗಿ ತೋರುವ ಪ್ರಾಣಿಗಳು, ೧೦೧, ೧೦೨, ೧೦೩, ೧೧೨, ೧೩೨, ೧೩೫, ೧೫೧, ೧೫೪, ೧೫೫, ೧೭೪, ೩೧೬, ೩೧೭ ; **ಶಾಂ. ನಿ.** ಅವಿದ್ಯೆಯಿಂದ ತಮ್ಮ ಸ್ವರೂಪವನ್ನು ತಿಳಿಯದವರು, ಸೂ. ಭಾ. ೧-೪-೩; ಅವಿದ್ಯೆಯಿಂದ ಕಲ್ಪಿತವಾದ ಕಾರ್ಯಕರಣಸಂಘಾತಗಳುಳ್ಳವರು, ಸಂಸಾರಿಗಳು. ಅವಿದ್ಯಾಕೃತವಾದ ನಾಮರೂಪಗಳೆಂಬ ಉಪಾಧಿಯುಳ್ಳವನು ಈಶ್ವರನು, ಆ ನಾಮರೂಪಗಳಿಂದಾಗಿರುವ ಶರೀರಾದಿಗಳುಳ್ಳವರು ಜೀವರು - ಎಂದು ಒಬ್ಬ ಆತ್ಮನಲ್ಲಿಯೇ ಜೀವೇಶ್ವರವಿಭಾಗವು ಅವಿದ್ಯೆಯಿಂದ ಕಲ್ಪಿತವಾಗಿರುತ್ತದೆ. ಸೂ. ಭಾ. ೨-೧-೧೪, ೧-೪-೭.

**ಜೀವಘನಃ** - ಪ್ರಶ್ನ. ಎಲ್ಲ ಜೀವರುಗಳೂ ಒಟ್ಟುಗೂಡಿರುವ ಹಿರಣ್ಯಗರ್ಭ, ೮೩.

**ಜೀವಪ್ರಾಜ್ಞಪೃಥಕ್ತ್ವಮ್** - ಬ್ರ.ಸೂ-೧. ಜೀವೇಶ್ವರರ ವಿಭಾಗ, ೪೫೭.

**ಜೀವಾವಿಷ್ಟಾನಿ ಭೂತಾನಿ** - ಬ್ರ.ಸೂ-೧. ಭೂತಗಳು, ಜೀವರಿಂದೊಡಗೂಡಿರುವ ಶರೀರಗಳು. ಮಹಾಭೂತಗಳಲ್ಲ, ೧೨೩.

**ಜೀವನಸಾಧನಮ್** - ಬೃಹ-೨. ಜೀವಿಸಿದ್ದವನು ಮಾಡಬೇಕಾದ ಮೋಕ್ಷಸಾಧನವಲ್ಲದ, (ತ್ರಿದಂಡಿಸಂನ್ಯಾಸಾಶ್ರಮ), ೫೬.

**ಜೀವನ್ಮುಕ್ತಃ** - ಭ.ಗೀ. ಬದುಕಿರುವಾಗಲೇ ಬಂಧದಿಂದ ಬಿಡುಗಡೆಯನ್ನು ಹೊಂದಿರುವಾತನು, ಬ್ರಹ್ಮ ಸ್ವರೂಪವನ್ನು ಪಡೆದವನು, ೧೦೦, ४೨೩, ೮೭೮ ; **ಶಾಂ. ನಿ.** ಬದುಕಿರುವಾಗಲೇ ಮುಕ್ತನಾದವನು, ಇದೆಲ್ಲವೂ ನಾನೂ ಬ್ರಹ್ಮವೇ ಎಂದು ತಿಳಿದುಕೊಂಡಿರುವಾತನು, ಗೀ. ಭಾ. ೬-೨೭. ಜೀವನ್ಮುಕ್ತನಿಗೂ ಅವಿದ್ಯಾಲೇಶವುಂಟೆಂಬ ಪಕ್ಷವು ಭಾಷ್ಯದಲ್ಲಿ ಸಿಕ್ಕುವದಿಲ್ಲ.

**ಜ್ಯೇಷ್ಠಮ್** - ತೈ. ಪ್ರಾಣಿಗಳಿಗೆಲ್ಲ ಹಿರಿಯದಾದ (ಅನ್ನ) ೧೨೦ ; ಎಲ್ಲರಿಗೂ ಮೊದಲು ಹುಟ್ಟಿದ ಹಿರಣ್ಯಗರ್ಭ, ಅಥವಾ ಪ್ರವೃತ್ತಿಗಳಿಗಿಂತ ಮೊದಲು ಉಂಟಾಗುವ ನಿಶ್ಚಯ ೧೪೧.

**ಜ್ಯೋತಿಃ** - ನೈ. ಬೆಳಕು. ಅಂತಃಕರಣವೇ ಮುಂತಾದದ್ದೆಲ್ಲವನ್ನೂ ಬೆಳಗುವ ಚೈತನ್ಯಜ್ಯೋತಿಯು ಆತ್ಮನು, ೨-೮೮, ೮೯, ೯೭.

**ಜೈಮಿನಿಃ** - ನೈ. (೧) ಕರ್ಮಕಾಂಡದ ಧರ್ಮವನ್ನು ವಿಚಾರಿಸುವದಕ್ಕಾಗಿ ಧರ್ಮ ಜಿಜ್ಞಾಸೆಯನ್ನು ಮಾಡುವ ಸೂತ್ರಗಳನ್ನು ಬರೆದಿರುವ ಋಷಿಗಳು, ೧-೧೭;

ಅವರಿಗೆ ವೇದವೆಲ್ಲ ಕ್ರಿಯಾರ್ಥವೆಂಬ ಅಭಿಪ್ರಾಯವಿತ್ತೆಂಬುದು ತಪ್ಪು, ೧-೮೯. (೨) ಜೈಮಿನಿಯ ಅನುಯಾಯಿಯಾದ ಕರ್ಮವಾದಿ. ಕರ್ಮವಾದಿಗಳ ಮತದಲ್ಲಿಯೂ ಅಜ್ಞನಿಗೇ ಕರ್ಮವಿಧಿ, ೧-೯೨ ರಿಂದ ೯೬ ವರೆಗೆ.

# ಜ್ಞಾ

**ಜ್ಞಾನಮ್** - ಬ್ರ.ಸೂ-೧. ಅರಿತುಕೊಳ್ಳುವದಕ್ಕೆ ಬೇಕಾದ ಪ್ರಮಾಣ ೧೮, ಪ್ರಮಾಣಜನ್ಯವಾದ ಅರಿವು, ವಿಧಿಸುವ ಮಾನಸಕ್ರಿಯೆಯಲ್ಲ, ೮೯ ; **ಬ್ರ.ಸೂ-೨.** ಅರಿವು, ಬ್ರಹ್ಮವನ್ನೇ ತನ್ನ ಆತ್ಮನೆಂದರಿತುಕೊಳ್ಳುವದು. ವಿಜ್ಞಾನಮ್, ವೇದನಮ್, ವಿದ್ಯಾ, ಅವಗತಿಃ, ತತ್ತ್ವಜ್ಞಾನಮ್ , ಸಮ್ಯಗ್ಜ್ಞಾನಮ್, ಸಮ್ಯಗ್ದರ್ಶನಮ್, ಪ್ರತಿಪತ್ತಿಃ, ಪ್ರಬೋಧಃ - ಇವೆಲ್ಲ ಜ್ಞಾನಪರ್ಯಾಯಗಳು. ಇದ್ದದ್ದು ಇದ್ದಂತೆ ಅರಿತುಕೊಳ್ಳುವದೇ ತತ್ತ್ವಜ್ಞಾನವು, ೧-೨೮ ; ಬ್ರಹ್ಮಜ್ಞಾನಕ್ಕೆ ಮೋಕ್ಷವೇ ಫಲ, ಅನುಷ್ಠಾನದ ಅಪೇಕ್ಷೆಯಿಲ್ಲ, ಭೂತವಸ್ತುವು ವಿಷಯ, ೧-೧೨ ; ಜ್ಞಾನವು ಚೋದನಾಜನ್ಯವಲ್ಲವಾದ್ದರಿಂದ ಅದರಲ್ಲಿ ಪುರುಷನು ನಿಯುಕ್ತನಾಗುವದಿಲ್ಲ , ೧-೧೨ ; ಏಕತ್ವಜ್ಞಾನದಿಂದ ದ್ವೈತವು ಸ್ವಲ್ಪವೂ ಉಳಿಯದಂತೆ ಬಾಧಿತವಾಗುವದು, ೧-೩೮ ; ಬ್ರಹ್ಮವಿದ್ಯೆಯುಂಟಾದರೆ ಮೋಕ್ಷವಾಗಿಯೇ ಬಿಡುವದರಿಂದ ಇನ್ನು ಕಾರ್ಯವೇನೂ ಇರುವದಿಲ್ಲ, ೧-೪೪ ; ಜ್ಞಾನಕ್ಕೆ ಮೋಕ್ಷಪ್ರತಿಬಂಧವನ್ನು ತೊಲಗಿಸುವದೇ ಫಲ, ೧-೪೫ ; ಬ್ರಹ್ಮಾತ್ಮೈಕತ್ವಜ್ಞಾನವು ಸಂಪತ್ತು, ಅಧ್ಯಾಸ, ಕ್ರಿಯಾಸಂಬಂಧನಿಮಿತ್ತವಾದ ಉಪಾಸನೆ, ಕರ್ಮಾಂಗಸಂಸ್ಕಾರ - ಇವುಗಳಲ್ಲಿ ಯಾವದೊಂದೂ ಅಲ್ಲ, ೧-೪೬ ; ಇದು ವಸ್ತುತಂತ್ರವಾದ್ದರಿಂದ ಪುರುಷತಂತ್ರವಲ್ಲ, ಚೋದನಾತಂತ್ರವೂ ಅಲ್ಲ, ಆದ್ದರಿಂದ ವಿಧೇಯವಾದ ಧ್ಯಾನವಲ್ಲ, ೧-೫೧ ; ೨-೩೧೮ ; ಜ್ಞಾನವಾದಮೇಲೆ ಕರ್ತವ್ಯವಿಲ್ಲ ೧-೫೩ ; ಇದರಿಂದ **ಸದ್ಯೋಮುಕ್ತಿ**, ೧-೯೨ ; **ಮಿಥ್ಯಾಜ್ಞಾನದಿಂದಾಗಿರುವ** ಉಪಭೋಗವು ಸಮ್ಯಗ್ಜ್ಞಾನದಿಂದ ತಿಳಿಯಬರುವ ಬ್ರಹ್ಮಕ್ಕಿಲ್ಲ, ೧-೧೬೨ ; ಓಂಕಾರವನ್ನು ಬ್ರಹ್ಮವೆಂದು ಉಪಾಸನೆಮಾಡುವವರಿಗೆ **ಬ್ರಹ್ಮಲೋಕದಲ್ಲಿ** ಸಮ್ಯಗ್ದರ್ಶನ, ೧-೨೫೨ ; ಹಿಂದಿನ ಜನ್ಮದ ಕರ್ಮದ ಸಂಸ್ಕಾರದಿಂದಲೂ ಜ್ಞಾನೋತ್ಪತ್ತಿಯಾಗಿ ಮೋಕ್ಷವಾಗಬಹುದು, ೧-೩೧೩; ಬ್ರಹ್ಮವೂ ಒಂದೇ ಅದರ ವಿಜ್ಞಾನವೂ ಒಂದೇ, ೨-೩೧೮ ; ಸಗುಣಬ್ರಹ್ಮದ ಮತ್ತು ಪ್ರಾಣಾದಿಗಳ ಉಪಾಸನಾವಿಷಯದಲ್ಲಿಯೇ ಭೇದಾಭೇದವಿಚಾರ, ೨-೩೧೮, ಸಮ್ಯಗ್ಜ್ಞಾನವು ಏಕರೂಪ, ೧-೪೨೯ ; ಬ್ರಹ್ಮವಿದ್ಯೆಯು ವಿಧೇಯವಲ್ಲ, ಅದರ ಫಲವು ಸಾಧ್ಯವೂ ಅಲ್ಲ, ೨-೪೭೭ ; ವಿದ್ಯೆಗೆ ದೃಷ್ಟಪ್ರಯೋಜನವಿರುವದರಿಂದ

ಪ್ರತಿಷೇಧಿಸದೆ ಇರುವ ವಿಧುರಾದಿಗಳಿಗೂ ಅದರಲ್ಲಿ ಅಧಿಕಾರ, ೨-೪೮೨ ; ವಿದ್ಯೆ ಯಾವಾಗ ಉಂಟಾಗುವದೆಂಬುದು ಸಾಧನವನ್ನವಲಂಬಿಸಿರುತ್ತದೆ, ೨-೪೯೮ ; ಉತ್ಕೃಷ್ಟವಾದದ್ದೇ ವಿದ್ಯೆಯಾದ್ದರಿಂದ ಅದರಲ್ಲಿ ತಾರತಮ್ಯವಿಲ್ಲ , ೨-೪೯೯ ; ಸಮ್ಯಗ್ದರ್ಶನದಿಂದ ಮುಕ್ತರಾದವರಿಗೆ ಅನಾವೃತ್ತಿಯು ಸ್ವತಃಸಿದ್ಧ , ೨-೬೧೨ ; ಜೀವನಿಗೆ ಅವಿದ್ಯೆಯೇ - ಮುಂತಾದ ಅಡ್ಡಿಗಳಿರುವದರಿಂದ ಜ್ಞಾನವುಂಟಾಗಲು ಶರೀರಾದಿಗಳು ಬೇಕು, ಈಶ್ವರನಿಗೆ ಅವುಗಳಿಲ್ಲದೆ ಜ್ಞಾನವಾಗುತ್ತದೆ, ೧-೭೦, ೨-೨೬೧ ; ಜೀವನಿಗೆ ಜ್ಞಾನವು ಈಶ್ವರನ ಅನುಗ್ರದಿಂದ ವ್ಯಕ್ತವಾಗುವದು, ೨-೨೬೦ ; **ಈಶ.** ಉಪಾಸನೆ, ೨೨, ೨೪ ; ಅರಿವು, ಆತ್ಮನನ್ನು ಅರಿಯುವದು, ೫, ೭, ೨೦, ೨೧, ೩೩ ; **ಕೇನ.** ಉಪಾಸನೆ, ೨, ೫ ; ಆತ್ಮನನ್ನು ಅರಿತುಕೊಳ್ಳುವದು, ೪, ೬, ೨೩, ೬೪; **ಪ್ರಶ್ನ.** ಉಪಾಸನೆ, ೧೩, ೧೪, ಅರಿಯುವಿಕೆ, ೫, ೮೧, ೮೪ ಜ್ಞಾನದ ತಿರುಳು, ೯೧, ೯೨, ೯೩, ೯೫ ; **ಮುಂ.** ಉಪಾಸನೆ, ೩೭, ೩೮, ೪೭ ಆತ್ಮನ ತಿಳಿವಳಿಕೆ, ೨೩, ೪೧, ೪೭, ೮೩,. ೯೭, ೧೦೮, ೧೧೬ **ತೈ.** ತಿಳಿದುಕೊಳ್ಳುವದು, ೧೫, ೧೮, ೫೫, ೭೨, ೯೯, ೧೦೧, ೧೦೨, ೧೦೬, ೧೧೬ ; ಬ್ರಹ್ಮವನ್ನು ಉಪಾಸನೆಮಾಡುವದು, ಅರಿತುಕೊಳ್ಳುವದು, ೨೨, ೨೩., ೨೪ ; ಬ್ರಹ್ಮದ ಅರಿವು, ೬೦, ೨೩೮ ; **ಬೃಹ-೨.** ಉಪಾಸನೆ, ೧೬, ೩೦ ; ಆತ್ಮವಸ್ತು ಜ್ಞಾನ, ೩೨, ೩೭ ; **ನೈ.** (೧) ಅರಿವು. ನಿದ್ರೆಯಿಂದೆಚ್ಚತ್ತವನಿಗೆ ನಾನೇನೂ ಅರಿಯಲಿಲ್ಲ ಎಂಬ ಅರಿವು ಆಗುವದರಿಂದ ನಿದ್ರೆಯಲ್ಲಿ ಇದು, ನನ್ನದು ಎಂಬ ಜ್ಞಾನವಿಲ್ಲವೆಂದಾಯಿತು, ೩-೬೨; (೨) ಕರ್ತ್ರಾತ್ಮಜ್ಞಾನವೆಂಬರ್ಥದಲ್ಲಿ ಮೀಮಾಂಸಕರು ಈ ಶಬ್ದವನ್ನುಪಯೋಗಿಸಿ ಕರ್ಮದಿಂದಲೇ ಮೋಕ್ಷವೆಂದೂ ಜ್ಞಾನಕರ್ಮಗಳಿಗೆ ಅಂಗಾಂಗಿಭಾವವೆಂದೂ ವಾದಿಸುತ್ತಾರೆ, ೧-೧೦ ರಿಂದ ೨೦ ರವರೆಗೆ. (೩) ಉಪಾಸನೆ ಎಂಬರ್ಥದಲ್ಲಿ ಕೆಲವರು ಈ ಶಬ್ದವನ್ನು ಉಪಯೋಗಿಸಿ ಜ್ಞಾನಕರ್ಮಸಮುಚ್ಚಯವನ್ನು ಮೋಕ್ಷಸಾಧನವೆನ್ನುತ್ತಾರೆ. (೪) ಸಾಕ್ಷಾತ್ಕಾರ ರೂಪವಾದ **ಅವಾಕ್ಯಾರ್ಥಜ್ಞಾನವೆಂಬ ಸಂಸರ್ಗರಹಿತ**ಜ್ಞಾನರೂಪವಾದ ಅನುಭವವು, ವಾಕ್ಯಜ್ಞಾನದ ಅಭ್ಯಾಸದಿಂದಾಗುವದೆಂದು ಕೆಲವರು ವಾದಿಸುತ್ತಿದ್ದರು, ೧-೬೭. (೫) ಈ ಎಲ್ಲಾ ಮತಗಳನ್ನೂ ಖಂಡಿಸಿ ವಾಕ್ಯಾರ್ಥಜ್ಞಾನವೇ ವೇದಾಂತೋಕ್ತಜ್ಞಾನವು, ಅದರಿಂದಲೇ ಮೋಕ್ಷ ಎಂದು ಈ ಪ್ರಕರಣದಲ್ಲಿ ತೋರಿಸಿದೆ. **ಮಿಥ್ಯಾಜ್ಞಾನ, ಭ್ರಾನ್ತಿಜ್ಞಾನ** - ಎಂದು ಮುಂತಾಗಿ ಉಪಪದಗಳನ್ನುಪಯೋಗಿಸಿದ ಹೊರತು ಜ್ಞಾನವೆಂದರೆ ಸಮ್ಯಗ್ಜ್ಞಾನ - ಸರಿಯಾದ ಆತ್ಮಜ್ಞಾನ - ಎಂದೇ ಈ ಪ್ರಕರಣದಲ್ಲಿ ಸಾಮಾನ್ಯವಾಗಿ ತಿಳಿಯಬೇಕು. ಈ ಜ್ಞಾನವೇ ಅಜ್ಞಾನವನ್ನು ಕಳೆಯುವದು. ಬೋಧ, ಅವಬೋಧ, ಪ್ರಬೋಧ, ತತ್ತ್ವದರ್ಶನ,

ವಿದ್ಯಾ , ಸಮ್ಯಗ್ಜ್ಞಾನ - ಇವೆಲ್ಲ ಪರ್ಯಾಯಗಳು, ೧-೩೪, ೩೭, ೩೮, ೫೨, ೫೪, ೬೪, ೬೫, ೬೮ ; **ಶಾಂ.** ನಿ. ತಿಳಿವಳಿಕೆ. ಆತ್ಮನು ಅದ್ವಿತೀಯನು, ನಿತ್ಯಶುದ್ಧಬುದ್ಧಮುಕ್ತನು - ಎಂದು ತಿಳಿಯುವ ಸರಿಯಾದ ತಿಳಿವಳಿಕೆ. ಆತ್ಮಾದಿಗಳ ಶಾಸ್ತ್ರೀಯವಾದ ತಿಳಿವಳಿಕೆಯನ್ನು ಜ್ಞಾನವೆಂದೂ ಅದನ್ನು ಅನುಭವಕ್ಕೆ ತಂದುಕೊಳ್ಳುವದನ್ನು ವಿಜ್ಞಾನವೆಂದೂ ವಿಂಗಡಿಸುವದುಂಟು. ಗೀ. ಭಾ. ೯-೧. ಅಮಾನಿತ್ವಾದಿಜ್ಞಾನ ಸಾಧನ ೧೩-೧೭. ಉಪಾಸನೆಯನ್ನೇ ಜ್ಞಾನವೆಂದೂ ಅದರ ಸಾಕ್ಷಾತ್ಕಾರವನ್ನು ವಿಜ್ಞಾನವೆಂದೂ ಕರೆಯುವದುಂಟು. ತೈ. ೧-೯ ಭಾ. ಭಾ. ೫೩.

(ವಿಶೇಷ ಜ್ಞಾನಶಬ್ದದ ಪರ್ಯಾಯಗಳನ್ನು ಉಪಾಸನೆಗೂ ಭಾಷ್ಯಕಾರರು ಉಪಯೋಗಿಸಿರುತ್ತಾರೆ ; ಪ್ರಕರಣದಿಂದಲೇ ಅದು ವಸ್ತುತಂತ್ರ ಜ್ಞಾನವೊ, ಉಪಾಸನೆಯೊ - ಎಂಬುದನ್ನು ನಿಶ್ಚಯಿಸಬೇಕಾಗುವದು)

**ಜ್ಞಾನಮ್, ವಿಜ್ಞಾನಮ್** - **ಐತ.** ಉಪಾಸನೆ, ೧ ಬೃಹ-೧. ಸಂಸಾರಹೇತುವಾದ ಅಜ್ಞಾನವನ್ನು ಕಳೆಯುವ ಆತ್ಮಜ್ಞಾನ, ಬ್ರಹ್ಮವಿದ್ಯೆ, ೫, ೫೬, ೫೭; ಉಪಾಸನೆ, ೫, ೬, ೮ ; ವಾಕ್ಯಜ್ಞಾನದಿಂದುಂಟಾಗುವದೆಂದು ಕೆಲವರು ಹೇಳುವ ಸಾಕ್ಷಾತ್ಕಾರರೂಪವಾದ ಜ್ಞಾನ, ೧೩೬ ; **ನೈ.** ಚೈತನ್ಯಸ್ವರೂಪ. ಆತ್ಮನು ಜ್ಞಾನಸ್ವರೂಪನೇ, ೩-೧; ಆತ್ಮಜ್ಞಾನವಿಲ್ಲದೆ ಯಾವ ವಿಷಯವೂ ಇರುವದಿಲ್ಲ, ೨-೯೭.

**ಜ್ಞಾನಮ್, ಬುದ್ಧಿಃ** - **ಭ.ಗೀ.** ಆತ್ಮನನ್ನು ಸರಿಯಾಗಿ ಅರಿತುಕೊಳ್ಳುವದು, ವೃತ್ತಿಕಾರರ ಮತದಲ್ಲಿ ಜ್ಞಾನವೆಂದರೆ ಉಪಾಸನೆ. ೮,೯, ೧೦, ೧೧, ೧೨, ೧೩, ೪೫, ೮೧, ೧೪೩, ೧೫೨, ೧೫೩, ೨೨೧, ೩೫೩, ೩೫೪, ೩೫೬, ೪೯೪, ೫೬೮, ೭೫೭, ೭೫೯, ೭೮೮, ೮೧೮, ೮೯೦, ೧೦೪೩, ೧೧೨೫, ೧೧೨೬, ೧೧೨೭ ; ಶಾಸ್ತ್ರಾರ್ಥ ಪಾಂಡಿತ್ಯ , ೩೦, ೪೫೪, ೫೩೯, ೫೪೪, ೭೪೧ ; ಜ್ಞಾನಸಾಧನ, ಅಮಾನಿತ್ವಾದಿಗಳು, ೭೮೩, ೭೮೫, ೭೮೬, ೭೮೭, ೭೮೮, ೭೮೯ ; ಅರಿವು, ೧೦೩೯.

**ಜ್ಞಾನಕರ್ಮಸಮುಚ್ಚಯಃ - ಕಠ.** ಉಪಾಸನೆಯನ್ನೂ ಕರ್ಮವನ್ನೂ ಕೂಡಿಸಿ ಅನುಷ್ಠಾನಮಾಡುವದು, ೨೮ ; **ಐತ.** ಕರ್ಮವನ್ನೂ ಉಪಾಸನೆಯನ್ನೂ ಒಟ್ಟು ಗೂಡಿಸಿಕೊಂಡು ಅನುಷ್ಠಾನಮಾಡುವದು, ೨, ೩೭ ; **ಶಾಂ.** ನಿ. ಉಪಾಸನೆ ಮತ್ತು ಶಾಸ್ತ್ರೋಕ್ತಕರ್ಮ - ಇವುಗಳನ್ನು ಸೇರಿಸಿ ಅನುಷ್ಠಾನಮಾಡುವದು, ಬೃ. ಭಾ. ೧-೪-೧.

**ಜ್ಞಾನಕರ್ಮಸಮುಚ್ಚಯಃ, ಜ್ಞಾನಸಹಿತಂ ಕರ್ಮ, ವಿದ್ಯಾಸಹಿತಂ ಕರ್ಮ** - ಬೃಹ-೨. ಉಪಾಸನೆಯನ್ನೂ ಕರ್ಮವನ್ನೂ ಕೂಡಿಸಿ ಅನುಷ್ಠಾನಮಾಡುವದು, ಉಪಾಸನೆಯೊಡಗೂಡಿದ ಕರ್ಮ, ೩೦, ೩೧.

**ಜ್ಞಾನಕರ್ಮಣೀ** - ಬೃಹ-೧. ಉಪಾಸನೆ ಮತ್ತು ಕರ್ಮ - ಇವು, ೩೮, ೪೮, ೯೫.

**ಜ್ಞಾನಕರ್ಮಣೀ, ಬುದ್ಧಿಕರ್ಮಣೀ** - ಭ.ಗೀ. ಜ್ಞಾನ ಮತ್ತು ಕರ್ಮ ಎಂಬ ಸಾಧನಗಳು, ೯, ೧೦, ೧೧. ೧೫೩.

**ಜ್ಞಾನಕರ್ಮನಿಷ್ಠೇ, ಜ್ಞಾನಕರ್ಮಸಮುಚ್ಚಯಃ** - ಭ.ಗೀ. ಜ್ಞಾನ, ಕರ್ಮ ಎರಡನ್ನೂ ಒಟ್ಟುಗೂಡಿಸಿಕೊಂಡು ಮೋಕ್ಷಕ್ಕಾಗಿ ಅನುಷ್ಠಾನಮಾಡುವದು ೧೪೪, ೧೪೮, ೧೪೯, ೧೫೧.

**ಜ್ಞಾನಕಾಂಡಮ್** - ಮಾಂ. ಆತ್ಮಜ್ಞಾನವನ್ನು ತಿಳಿಸುವ ವೇದಭಾಗ, ಉಪನಿಷತ್ತು, ೧೫೨ ; **ಶಾಂ.** ನಿ. ವಸ್ತುರೂಪವಾದ ಆತ್ಮತತ್ತ್ವವನ್ನು ತಿಳಿಸುವ ವೇದಭಾಗ, ಉಪನಿಷತ್ತು.

**ಜ್ಞಾನಕಾರೀ, ಜ್ಞಾನಪ್ರಕೃತಿಃ** - ನೈ. ಅಂತಃಕರಣದಲ್ಲಿ ಜ್ಞಾನವನ್ನುಂಟು ಮಾಡುವ ಆತ್ಮ ೩-೧.

**ಜ್ಞಾನಕ್ರಿಯಾಶಕ್ತೀ** - ಬ್ರ.ಸೂ-೧. ಅರಿಯುವ ಮತ್ತು ಕೆಲಸಮಾಡುವ ಶಕ್ತಿಗಳು, ಆತ್ಮನಿಗೆ ಉಪಾಧಿಗಳು, ೧೪೩.

**ಜ್ಞಾನಜ್ಞೇಯಜ್ಞಾತೃಪದಾರ್ಥಾಃ** - ತೈ. ತಿಳಿವು, ವಿಷಯ, ತಿಳಿಯುವವನು - ಎಂಬಿವು ೧೦೮.

**ಜ್ಞಾನದಾಹ್ಯಬೀಜಮ್** - ಮಾಂ. ಜ್ಞಾನದಿಂದ ನಾಶವಾಗುವ ಅಜ್ಞಾನ ರೂಪವಾದ ಸಂಸಾರಕಾರಣ, ೨೪ ; **ಶಾಂ.** ನಿ. ಬ್ರಹ್ಮವು ಜಗತ್ತಿಗೆ ಕಾರಣವೆಂದು ತಿಳಿಯುವ ಅಜ್ಞಾನ, ಅಥವಾ ಅವ್ಯಾಕೃತನಾಮರೂಪ, ಮಾಂ. ಕಾ. ಭಾ. ೧-೨ (ಭಾ. ಭಾ. ೨೪).

**ಜ್ಞಾನನಿಷ್ಠಾ** - ಈಶ. ಜ್ಞಾನದಲ್ಲಿಯೇ ನೆಲೆನಿಲ್ಲುವದು, ೭, ೩೩.

**ಜ್ಞಾನನಿಷ್ಠಃ** - ಭ.ಗೀ. ಜ್ಞಾನಸಾಧನದಲ್ಲಿ ನೆಲೆನಿಂತಿರುವ ಜ್ಞಾನಿ, ೧೧೨, ೨೭೫, ೩೦೨, ೧೧೦೨, ೧೧೦೪.

**ಜ್ಞಾನನಿಷ್ಠಾ , ಜ್ಞಾನಯೋಗನಿಷ್ಠಾ** - ಭ.ಗೀ. ಜ್ಞಾನವನ್ನು ಪಡೆದು ಜ್ಞಾನ ಸಾಧನಗಳಲ್ಲಿ ನೆಲೆ ನಿಂತಿರುವದು ೧೩., ೯೦, ೧೦೮, ೧೩.೪, ೧೫೧, ೧೫೭, ೧೫೮, ೧೬೧, ೧೭೯, ೨೪೪, ೩.೪೭, ೮೯೦, ೧೦೨೧, ೧೮೯೨, ೧೮೯೪, ೧೧೦೭, ೧೧೨೭ ; **ಶಾಂ. ನಿ.** ಜ್ಞಾನವು ನೆಲೆನಿಲ್ಲುವದು ; ಆತ್ಮೈಕತ್ವಜ್ಞಾನವು ಅಮಾನಿತ್ವಾದಿ ಸಾಧನಗಳ ಬಲದಿಂದ ಅನುಭವರೂಪದಿಂದ ನಿಲ್ಲುವದು, ಗೀ. ಭಾ. ೧೮-೫೫.

**ಜ್ಞಾನನಿಷ್ಠಾಯೋಗ್ಯತಾ** - ಭ.ಗೀ. ಜ್ಞಾನನಿಷ್ಠನಾಗುವದಕ್ಕೆ ತಕ್ಕವನಾಗುವದು ೫, ೧೭೯, ೧೦೭೮, ೧೮೯೨, ೧೮೯೪, ೧೧೦೯.

**ಜ್ಞಾನಪ್ರತಿಬಂಧಕಾರಣಮ್** - ಬ್ರ.ಸೂ-೧. ಜ್ಞಾನಕ್ಕೆ ಅಡ್ಡಿಯಾಗಿರುವ ಧರ್ಮಾಧರ್ಮವಶತೆ, ಅವಿದ್ಯೆ ಮುಂತಾದದ್ದು, ೭೦, ೭೧ ; **ಶಾಂ. ನಿ.** ಪದಾರ್ಥ ವಿವೇಕಕ್ಕೆ ಅಡ್ಡಿಯಾಗಿರುವ ಅಜ್ಞಾನ ಸಂಶಯವಿಪರ್ಯಯಗಳು, ಸೂ. ಭಾ. ೪-೧-೨.

**ಜ್ಞಾನಪ್ರಾಪ್ತಿಃ** - ಭ.ಗೀ. ಸತ್ತ್ವಶುದ್ಧಿಯಾದ ಬಳಿಕ ಜ್ಞಾನವನ್ನು ಪಡೆಯುವದು, ೮೧, ೯೮, ೧೭೨, ೩೪೭, ೩.೭೨, ೭೩.೮.

**ಜ್ಞಾನಯೋಗಃ** - ಭ.ಗೀ. ಜ್ಞಾನವೆಂಬ ಯೋಗ ೮೦, ೧೫೭, ೧೬೧ ; **ಶಾಂ. ನಿ.** ಸಾಂಖ್ಯರಿಗೆ ಉಚಿತವಾದ ಆತ್ಮಾನಾತ್ಮಜ್ಞಾನ, ಆತ್ಮನನ್ನು ಅರಿತು ಅದರಲ್ಲಿಯೇ ನಿಲ್ಲುವದು, ಗೀ. ಭಾ. ೩-೩..

**ಜ್ಞಾನಯೋಗೌ** - ಭ.ಗೀ. ಶಾಸ್ತ್ರದಿಂದ ಅರಿತುಕೊಳ್ಳುವದು, ಮತ್ತು ಅದನ್ನು ಅನುಭವಕ್ಕೆ ತಂದುಕೊಳ್ಳುವದು, ೯೨೭.

**ಜ್ಞಾನಲಕ್ಷಣಾ ಭಕ್ತಿಃ, ಜ್ಞಾನನಿಷ್ಠಾಲಕ್ಷಣಾ ಭಕ್ತಿಃ** - ಭ.ಗೀ. ಆತ್ಮನನ್ನು ಅರಿತು ಅವನಲ್ಲಿಯೇ ನಿಲ್ಲುವ ಭಕ್ತಿ, ೫೩೩, ೭೫೨, ೧೧೦೭ ; **ಶಾಂ. ನಿ.** ಪರಮಾತ್ಮನನ್ನು ಅರಿತುಕೊಂಡು ಮಾಡುವ ಪ್ರೇಮವಾದ ನಾಲ್ಕನೆಯ ಭಕ್ತಿ. ಗೀ. ಭಾ. ೧೮-೫೪.

**ಜ್ಞಾನಶಕ್ತಿಃ** - **ಮುಂ.** ಬ್ರಹ್ಮದಲ್ಲಿರುವ ಎಲ್ಲವನ್ನೂ ಅರಿಯುವ ಶಕ್ತಿ ೨೩, ೫೪; **ಶಾಂ. ನಿ.** ಹಿರಣ್ಯಗರ್ಭನ ಮಿಗಿಲಿಲ್ಲದಿರುವ ಜ್ಞಾನದ ಶಕ್ತಿ ; ಇವನು ಜ್ಞಾನಶಕ್ತಿಯಿಂದ ಹಿರಣ್ಯಗರ್ಭನೆಂದೂ ಕ್ರಿಯಾಶಕ್ತಿಯಿಂದ ಪ್ರಾಣ ಅಥವಾ ವಾಯುವೆಂದೂ ಎನಿಸುತ್ತಾನೆ. ಮುಂ. ಭಾ. ೧-೨-೨.

**ಜ್ಞಾನಾಙ್ಗಮ್** - ಭ.ಗೀ. ಜ್ಞಾನವುಂಟಾಗುವದಕ್ಕೆ ಅವಶ್ಯವಾಗಿ ಬೇಕಾದದ್ದು (ಸಂನ್ಯಾಸ), ೧೪೬ ; **ಶಾಂ. ನಿ.** ಜ್ಞಾನಕ್ಕಾಗಿ ಅವಶ್ಯವಾಗಿ ಮಾಡಬೇಕಾದದ್ದು,

ಪರಮಹಂಸಪಾರಿವ್ರಾಜ್ಯವೆಂಬ ಸಂನ್ಯಾಸವೂ ಆತ್ಮಧ್ಯಾನವೂ ಜ್ಞಾನಕ್ಕೆ ಅಂಗವೆಂದು ಆಚಾರ್ಯರ ಅಭಿಪ್ರಾಯವಿದೆ. ಗೀ. ಭಾ. ೩-೧ ಅವತರಣಿಕೆ; ೫-೨೭ ; ಬೃ. ಭಾ. ೨-೪, ಅವತರಣಿಕೆ ; ಛಾಂ. ಭಾ. ೭-೭-೧ ; ಸೂ. ಭಾ. ೩-೪-೨೦.

**ಜ್ಞಾನಾಭಾಸಃ** - **ತೈ.** ಚೈತನ್ಯದಂತೆ ತೋರುವ ಬುದ್ಧಿವೃತ್ತಿ, ೧೦೭.

**ಜ್ಞಾನಾಭ್ಯಾಸಃ** - **ಮಾಂ.** ವಸ್ತುತತ್ತ್ವವನ್ನು ಮತ್ತೆ ಮತ್ತೆ ಮನದಂದು ಕೊಳ್ಳುವದು, ೨೦೬ ; **ಶಾಂ. ನಿ.** ಅಮಾನಿತ್ವವೇ ಮುಂತಾದ ಜ್ಞಾನಕಾರಣಗಳ ಅಭ್ಯಾಸ. ಸಂನ್ಯಾಸಿಗೆ ಪ್ರಧಾನಸಾಧನ. ಇದರ ಭಾವನೆಯು ಪರಿಪಕ್ವವಾದರೆ ಜ್ಞಾನವುಂಟಾಗುವದು. ಗೀ. ಭಾ. ೧೩-೧೧ ; ಸೂ. ಭಾ. ೩-೪-೫೦.

**ಜ್ಞಾನೀ** - **ನೈ.** (೧) ಜ್ಞಾನವುಳ್ಳವನು (೨) ಜ್ಞಾನವಾದಿ, ೧-೧೨, ೧೯.

**ಜ್ಞಾನೈಶ್ವರ್ಯಶಕ್ತಿಬಲವೀರ್ಯತೇಜಾಂಸಿ** - **ಭ.ಗೀ.** ಭಗವಂತನ ಗುಣಗಳು ೧, ೪೫೩, ೬೧೩, ೬೨೧, ೬೫೪ ; **ಶಾಂ. ನಿ.** ಭಗವಂತನಾದ ವಾಸುದೇವನಲ್ಲಿ ನಿತ್ಯವಾಗಿರುವ ಷಡ್ಗುಣಗಳು. ಗೀ. ಭಾ. ಅವತರಣಿಕೆ.

**ಜ್ಞಾಪಕಮ್** - **ತೈ.** ಇದ್ದದ್ದನ್ನು ಇದ್ದಂತೆ ತಿಳಿಸುವ (ಶಾಸ್ತ್ರವಚನ) ೭೩ ; **ಬೃಹ-೧.** ಇದ್ದದ್ದನ್ನು ಇದ್ದಂತೆ ತಿಳಿಸುವ (ಶಾಸ್ತ್ರ), ೧೫೬, ೩೧೫ ; **ಬೃಹ-೨.** ಇದ್ದದ್ದನ್ನೇ ತಿಳಿಸುವ (ಶಾಸ್ತ್ರವಚನ), ೧೩೭, ೨೨೫ ; **ಭ.ಗೀ.** ಇದ್ದದ್ದನ್ನು ತಿಳಿಸುವ ಶಾಸ್ತ್ರವಚನ, ೮, ೧೪೮ ; **ಶಾಂ. ನಿ.** ತಿಳಿಸುವದು. ಶಾಸ್ತ್ರವು ಮಿಕ್ಕ ಪ್ರಮಾಣಗಳಂತೆ ಇದ್ದದ್ದನ್ನು ತಿಳಿಸುವದೇ ಹೊರತು ಕಾರಕವಲ್ಲ, ಇಲ್ಲದ್ದನ್ನು ಹೊಸದಾಗಿ ಉಂಟುಮಾಡುವದಲ್ಲ. ಗೀ. ಭಾ. ೩ ಅವತರಣಿಕೆ ; ತೈ. ಭಾ. ೧-೧೧ ; ಬೃ. ಭಾ. ೨-೧-೨೦.

**ಜ್ಞೇಯಜ್ಞಾತೃಕತಾ** - **ನೈ.** ಅರಿಯಲ್ಪಡುವದು, ಅರಿಯುವದು- ಎಂಬ ಸಂಬಂಧ. ಅಂತಃಕರಣದಲ್ಲಿರುವ ಅಹಂಕಾರಕ್ಕೂ ಜ್ಞಾತೃವಿಗೂ ಗ್ರಾಹ್ಯ-ಗ್ರಾಹಕತ್ವವಿದೆ, ೩-೫೯.

**ಜ್ಞೇಯಮ್** - **ಭ.ಗೀ.** ಪರಮಾರ್ಥವಾಗಿ ತಿಳಿಯಬೇಕಾದ ಬ್ರಹ್ಮ, ೭೮೯, ೭೯೨, ೭೯೩, ೭೯೬, ೭೯೮, ೭೯೯, ೮೦೦, ೮೦೨, ೮೦೩, ೮೯೨ ; ಅರಿಯಲ್ಪಡತಕ್ಕದ್ದು , ೧೧೦೫ ; **ಶಾಂ. ನಿ.** ಅರಿಯಲ್ಪಡತಕ್ಕದ್ದು. ಪರಮಾರ್ಥತತ್ತ್ವವು ವಿಷಯವಲ್ಲದಿದ್ದರೂ ಅಜ್ಞಾನದಿಂದ ಅದೇ ಜ್ಞೇಯವಾಗಿರುತ್ತದೆ. ವಿಶೇಷಗಳನ್ನು ಅಲ್ಲಗಳೆಯುವದರಿಂದಲೇ ಅದನ್ನು ಅರಿತುಕೊಳ್ಳಬೇಕು. ಗೀ. ಭಾ. ೧೩-೧೨ (ಭಾ. ಭಾ. ೨೪೯).

# ತ

**ತರ್ಕಃ - ಬ್ರ.ಸೂ-೧.** ಶ್ರುತಿಗೆ ಸಹಾಯಕವಾದ ತರ್ಕ, ೨೦, ೨೮, ೪೦೮; ಸ್ವತಂತ್ರವಾದ ತರ್ಕ, ೭೨, ೪೦೦, ೪೦೮, ೪೧೯, ೪೨೮, ೪೩೦, ೪೩೧; **ಬ್ರ.ಸೂ-೨.** ಅನುಮಾನ, ಯುಕ್ತಿ. ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕು ಎಂದು ಹೇಳುವಲ್ಲಿ ವೇದಾಂತವಾಕ್ಯಗಳ ವಿಚಾರವನ್ನು ಅದಕ್ಕೆ ಅವಿರೋಧಿಯಾದ ತರ್ಕ ರೂಪವಾದ ಉಪಕರಣದೊಡನೆ ಪ್ರಾರಂಭಿಸಿದೆ, ೧-೨೦; ಶ್ರುತಿಗೂ ತರ್ಕದ ಸಹಾಯವು ಬೇಕು, ೧-೨೮; ಜನ್ಮಾದಿಸೂತ್ರದಲ್ಲಿ ಕೇವಲಾನುಮಾನದಿಂದ ಜಗತ್ಕಾರಣವನ್ನು ತರ್ಕಿಸಿಲ್ಲ, ೧-೨೭, ೨೯; ಬ್ರಹ್ಮವೇ ಜಗತ್ಕಾರಣವೆಂಬುದನ್ನು ತರ್ಕದಿಂದಲೂ ಎರಡನೆಯ ಅಧ್ಯಾಯದಲ್ಲಿ ತೋರಿಸಿದೆ, ೧-೭೨; ವೇದಾಂತದಲ್ಲಿ ತಾರ್ಕಿಕರಂತೆ ಜಗತ್ಕಾರಣವನ್ನು ಬೇರೆ ಬೇರೆಯಾಗಿ ಹೇಳಿಲ್ಲ, ೧-೮೭; ಸಾಂಖ್ಯಾದಿ ತಾರ್ಕಿಕರ ಆಕ್ಷೇಪಕ್ಕೂ ತರ್ಕಸಮ್ಮತವಾದ ಪರಿಹಾರವನ್ನು ಹೇಳಬೇಕು, ೧-೪೦೦; ತರ್ಕಸ್ಮೃತಿಗಳೂ ತರ್ಕೋಪಪತ್ತಿಗಳಿಂದ ತತ್ತ್ವಜ್ಞಾನಕ್ಕೆ ಉಪಕಾರಕವಾಗಬಹುದು, ತತ್ತ್ವಜ್ಞಾನವೇನೋ ವೇದಾಂತವಾಕ್ಯದಿಂದಲೇ, ೧-೪೦೮; ಶ್ರುತಿಯು ಮನನ ರೂಪವಾದ ತರ್ಕವನ್ನು ಬೇಕೆಂದರೂ ಒಣತರ್ಕವನ್ನು ಉಪಯೋಗಿಸಲಾಗದು, ೧-೪೧೮; ಅನುಭವಾಂಗವಾದ ಶ್ರುತ್ಯನುಗೃಹೀತತರ್ಕಗಳ ಜಾತಿ, ೧-೪೧೮; ಕೇವಲತರ್ಕವು ನಿಲುಗಡೆಯಿಲ್ಲದ್ದಾದ್ದರಿಂದ ಮೋಸಪಡಿಸುತ್ತದೆ, ೧-೪೧೮, ೪೨೭; ನಿಲುಗಡೆಯುಳ್ಳ ತರ್ಕವಿರಬಹುದಾದರೂ ಬ್ರಹ್ಮವು ಕೇವಲತರ್ಕಕ್ಕೆ ವಿಷಯವಲ್ಲ, ೧-೪೨೮; ತಾರ್ಕಿಕರೆಲ್ಲ ಒಟ್ಟುಗೂಡಿ ಜಗತ್ಕಾರಣವನ್ನು ನಿಶ್ಚಯಿಸುವದಾಗದು, ೧-೪೨೯; ಆಗಮದಿಂದಲೂ ಆಗಮಾನುಸಾರಿತರ್ಕದಿಂದಲೂ ಚೇತನವಾದ ಬ್ರಹ್ಮವೇ ಕಾರಣವೆಂದು ಸಿದ್ಧವಾಗುತ್ತದೆ, ೧-೪೨೯; ಚೇತನಕಾರಣವಾದದಲ್ಲಿ ತರ್ಕನಿಮಿತ್ತವಾದ ಕೆಲವು ಆಕ್ಷೇಪಗಳಿಗೆ ಪರಿಹಾರಗಳು, ೧-೪೩೧ ರಿಂದ ೪೭೭; ಸಾಂಖ್ಯಾದಿಗಳ ಯುಕ್ತಿಗಳ ಖಂಡನೆ, ೨-೧ ರಿಂದ ೭೨; ತಾರ್ಕಿಕರ ನಿಮಿತ್ತ-ಕಾರಣೇಶ್ವರವಾದದ ಖಂಡನೆ, ೧-೭೩ ರಿಂದ ೮೧; ಭಾಗವತರ ಜೀವೋತ್ಪತ್ತಿ ವಾದದ ಖಂಡನೆ, ೨-೮೪ ರಿಂದ ೮೬; ಭಾಗಮತಮತದಲ್ಲಿ ಇತರ ವಿರೋಧಗಳು, ೨-೮೭; ಆಕಾಶಾದಿಗಳ ಮತ್ತು ಪ್ರಾಣಾದಿಗಳ ಉತ್ಪತ್ತಿಯ ವಿಷಯದಲ್ಲಿ ಯಾವ ಪ್ರತಿ ರೋಧವಾಗಲಿ ತರ್ಕವಿರೋಧವಾಗಲಿ ಇಲ್ಲ, ೨-೮೮ ರಿಂದ ೨೧೦; **ಕೇನ.** ಸುಮ್ಮನೆ ಊಹಿಸುವದು, ೮; **ಕಠ.** ತನ್ನ ಬುದ್ಧಿಯಿಂದಲೇ ಊಹಿಸುವದು, ೫೯, ೬೦; **ಬೃಹ-೧.** ಯುಕ್ತಿ, ೩೪೪, ೩೫೯; **ಬೃಹ-೨.** ಶ್ರುತಿಸಮ್ಮತವಾದ ತರ್ಕ, ಉಪಪತ್ತಿ, ೧೫೭, ೩೨೨; **ಶಾಂ. ನಿ.** ಪ್ರಮಾಣಕ್ಕೆ ಅನುಗ್ರಾಹಕವಾದ ಯುಕ್ತಿ.

ಪ್ರಮಾಣವಿಲ್ಲದ ಶುಷ್ಕತರ್ಕವು ನಿಲುಗಡೆಗೆ ಬರುವದಿಲ್ಲ, ಸೂ. ಅನುಮಾನ ಪ್ರಮಾಣವನ್ನೂ ತರ್ಕವೆಂದೇ ಭಾಷ್ಯದಲ್ಲಿ ಎಣಿಸಿರುವದು ಕಂಡುಬರುತ್ತದೆ. ೧-೧-೨.

**ತರ್ಕಸ್ಮರಣಾನಿ** - ಬ್ರ.ಸೂ-೧. ತರ್ಕಪ್ರಧಾನವಾಗಿರುವ ಪೌರುಷೇಯ ಶಾಸ್ತ್ರಗಳು, ೪೦೮.

**ತರ್ಕೋಪಪತ್ತೀ** - ಬ್ರ.ಸೂ-೧. ಅನುಮಾನವೂ ಯುಕ್ತಿಯೂ, ೪೦೮.

**ತತ್ಪದಾರ್ಥಃ** - ನೈ. ತತ್ತ್ವಮಸಿ ಎಂಬ ವಾಕ್ಯದಲ್ಲಿ ತತ್ಪದಕ್ಕೆ ವಿವಕ್ಷಿತವಾದ ಅರ್ಥವು ಅದ್ವಿತೀಯತ್ವವು, ಪಾರೋಕ್ಷ್ಯವು ಅವಿವಕ್ಷಿತವು, ಏಕೆಂದರೆ ಆತ್ಮನಿಗೆ ಪಾರೋಕ್ಷ್ಯವು ಹೊಂದುವದಿಲ್ಲ, ೩-೭೯.

**ತತ್ತ್ವಜ್ಞಾನಮ್** - ಬ್ರ.ಸೂ-೧. ವಸ್ತುವಿದ್ದಂತೆ ತಿಳಿಯುವದು, ೨೮.

**ತತ್ತ್ವಜ್ಞಾನಮ್, ತತ್ತ್ವದರ್ಶನಮ್** - ಭ.ಗೀ. ಪರಮಾರ್ಥವನ್ನು ಅರಿಯುವದು, ೧೪, ೩೦೨, ೭೫೩, ೭೮೮.

**ತತ್ತ್ವವಿತ್, ತತ್ತ್ವಜ್ಞಾನೀ** - ಭ.ಗೀ. ಪರಮಾರ್ಥವನ್ನು ಬಲ್ಲವನು, ೧೩, ೪೪, ೨೦೦, ೨೫೫, ೩೪೨, ೪೭೫, ೪೭೬, ೭೫೩, ೮೦೫.

**ತತ್ತ್ವಮ್** - ಶಾಂ. ನಿ. ಸರ್ವಾತ್ಮಕವಾಗಿರುವ ಬ್ರಹ್ಮವು. ಗೀ. ಭಾ. ೨-೧೬.

**ತತ್ತ್ವಮಸಿ** - ಬ್ರ.ಸೂ-೨. ಆ ಬ್ರಹ್ಮವೇ ನೀನು ಎಂಬ ವೇದಾಂತವಾಕ್ಯ. ಈ ವಾಕ್ಯವು ಹೇಳುವ ಬ್ರಹ್ಮಾತ್ಮಭಾವವು ಮತ್ತೇತರಿಂದಲೂ ತಿಳಿಯುವದಕ್ಕಾಗಲಾರದು, ೧-೩೮ ; ನಿತ್ಯದೃಗ್ರೂಪನಾದ ಆತ್ಮನೇ ನಾನೆಂದು ವಾಕ್ಯದಿಂದ ಅರಿತುಕೊಂಡವನು ಶರೀರಾದ್ಯಭಿಮಾನವನ್ನು ಬಿಟ್ಟು ಆ ಸ್ವರೂಪದವನೇ ಆಗುವನು, ೧-೨೬೪ ; ಅವಿದ್ಯಾನಿವೃತ್ತಿಯಾದರೆ ಪ್ರಾಜ್ಞನನ್ನೇ ತತ್ತ್ವಮಸಿ ಎಂದು ತಿಳಿಸಲಾಗುತ್ತದೆ, ೧-೩೫೧; ವಾಕ್ಯಜ್ಞಾನದಿಂದ ತಾನು ಅಸಂಸಾರಿಯೆಂಬ ಅರಿವು ಪ್ರತ್ಯಕ್ಷವಾಗಿ ಉಂಟಾಗುವದು, ೧-೩೬೭ ; ವಾಕ್ಯಜ್ಞಾನದಿಂದ ದೊರೆಯುವ ಬ್ರಹ್ಮಾತ್ಮಭಾವವು ಒಂದಾನೊಂದು ಅವಸ್ಥೆಯದಲ್ಲ , ೧-೪೩೫ ; ವಾಕ್ಯಜ್ಞಾನವಾದಮೇಲೆ ಆಕಾಂಕ್ಷೆಯೇನೂ ಇರುವದಿಲ್ಲ , ೧-೪೩೮ ; ಈ ಜ್ಞಾನವಾದರೆ ಜೀವನ ಸಂಸಾರಿತ್ವವೂ ಬ್ರಹ್ಮದ ಸ್ರಷ್ಟೃತ್ವವೂ ಹೋಗಿಬಿಡುತ್ತದೆ, ೧-೪೫೬ ; ತತ್ತ್ವಮಸಿ ವಾಕ್ಯವು ಜೀವೇಶ್ವರತಾದಾತ್ಮ್ಯವನ್ನು ಹೇಳುತ್ತದೆ, ತಾದಾತ್ಮ್ಯಸಂಪತ್ತಿಯನ್ನಲ್ಲ, ೨-೩೪೯ ; ಈ ವಾಕ್ಯಕ್ಕೆ 'ನೀನು ಸತ್ತ ಬಳಿಕ ಅದಾಗುವೆ' ಎಂದು ಅರ್ಥವನ್ನು

ಮಾಡುವದಕ್ಕೆ ಬರುವದಿಲ್ಲ ೨-೩೮೧ ಜೀವನಿಗೆ ಪರಮೇಶ್ವರರೂಪವೇ ನಿಜವಾದುದು, ೨-೪೪೫ ; ಯಾರಿಗೆ ಪದಾರ್ಥಜ್ಞಾನವಿರುವದಿಲ್ಲವೋ ಅವರಿಗೆ ಈ ವಾಕ್ಯವು ಸರಿಯಾದ ತಿಳಿವಳಿಕೆಯನ್ನುಂಟುಮಾಡಲಾರದು, ೨-೫೦೬ ; ವಾಕ್ಯಾರ್ಥದ ಅನುಭವವು ಕೂಡಲೆ ಆಗದಿರುವವರಿಗೆ ಪದಾರ್ಥಜ್ಞಾನಕ್ಕಾಗಿ ಆವೃತ್ತಿಯನ್ನು ಮಾಡಿಸಬೇಕು, ೨-೫೦೮.

**ತತ್ತ್ವಮಸ್ಯಾದಿವಾಕ್ಯಮ್** - **ನೈ.** ಜೀವಬ್ರಹ್ಮರಿಗೆ ಐಕ್ಯವನ್ನು ಹೇಳುವ 'ತತ್ತ್ವಮಸಿ', 'ಅಹಂಬ್ರಹ್ಮಾಸ್ಮಿ'- ಮುಂತಾದ ವಾಕ್ಯಗಳು. ಇವನ್ನು ಈಗಿನ ವೇದಾಂತಿಗಳು ಮಹಾವಾಕ್ಯಗಳೆನ್ನುವರು. ಚಿತ್ತವು ಪ್ರತ್ಯಕ್ಪ್ರವಣವಾದ ಬಳಿಕ ವಾಕ್ಯಜ್ಞಾನವಾಗಿ ಅವಿದ್ಯೆಯ ನಾಶವಾಗುವದು, ೧-೫೨; ಇಂಥ ವಾಕ್ಯಗಳು ವಿಧಿಯನ್ನು ಹೇಳುವದಿಲ್ಲವಾದ್ದರಿಂದ **ಕರ್ಮಾರ್ಥ**ವಲ್ಲ, ೧-೯೧; ಇವು **ಸ್ವತಃಸಿದ್ಧ**ವಾದ ಅರ್ಥವನ್ನು ಎಂದಿಗೂ ತಿಳಿಸುವವೇ ಹೊರತು ಪ್ರಸಂಖ್ಯಾನವೇ ಮುಂತಾದ ಬೇರೆಯ ಅರ್ಥವನ್ನು ಎಂದಿಗೂ ತಿಳಿಸಲಾರವು, ೧-೯೮, ೩-೮೨; ಅಜ್ಞಾನವನ್ನು ಕಳೆಯುವ ಜ್ಞಾನವು ತತ್ತ್ವಮಸ್ಯಾದಿವಾಕ್ಯದಿಂದಲೇ ಆಗುವದು, ೨-೧, ೩-೧; ವಾಕ್ಯಶ್ರವಣವಾದ ಬಳಿಕವೂ **ತ್ವಂಪದಾರ್ಥ**ದ ಜ್ಞಾನವಿಲ್ಲದ್ದರಿಂದ ವಾಕ್ಯಾರ್ಥಜ್ಞಾನವಾಗುವದಿಲ್ಲ, ೨-೧; ಪದಪದಾರ್ಥಗಳಿಗೆ **ಅನ್ವಯವ್ಯತಿರೇಕ**ವನ್ನು ಮಾಡಿಕೊಂಡರೆ ಜ್ಞಾನವಾಗುತ್ತದೆ; ಆತ್ಮಾನಾತ್ಮವಿಭಾಗ ಜ್ಞಾನವೂ ಅವಿದ್ಯೆಯ ಕಾರ್ಯವೇ , ಅದನ್ನು ವಾಕ್ಯವು ಪರಿಗಣಿಸುತ್ತದೆ, ೩-೬; ತತ್ತ್ವಮಸಿವಾಕ್ಯವು ಪ್ರಮಾಣಾಂತರವಿಷಯವಲ್ಲದ ನಿರ್ದುಃಖ್ಯಾತ್ಮನನ್ನು ಸ್ಪಷ್ಟವಾಗಿ ತಿಳಿಸುತ್ತದೆಯಾದ್ದರಿಂದ ಪ್ರಮಾಣ, ೩-೩೫; **ಅಭಿಧಾಶ್ರುತಿ**ಯಾದರೂ ತತ್ತ್ವಮಸಿ ವಾಕ್ಯವು **ಅಪ್ರಮೇಯ**ನಾದ ಆತ್ಮನನ್ನು ತಿಳಿಸುತ್ತದೆ, ೩-೪೭; ಅದ್ವಿತೀಯನೇ ಆಗಿದ್ದರೂ ಅಜ್ಞಾನದಿಂದ ತನ್ನ ಸ್ವರೂಪವನ್ನು ಅರಿಯದೆ ಇರುತ್ತಾನೆ. ವಾಕ್ಯದಿಂದಲೇ ಅರಿತುಕೊಳ್ಳುತ್ತಾನೆ, ೩-೬೫; ವಾಕ್ಯವು ಕರ್ತೃತ್ವಾದಿಗಳನ್ನು ಅನುವಾದಮಾಡಿಕೊಂಡು ಇದಲ್ಲ ಎಂದು ಬೋಧಿಸುತ್ತದೆ, ೩-೭೩; ಸ್ಫುಟವಾದ ಜ್ಞಾನವನ್ನು ಮಾಡಿಕೊಡುವದರಿಂದ ತತ್ತ್ವಮಸಿವಾಕ್ಯವನ್ನು ಅನಾದರಿಸತಕ್ಕದ್ದಲ್ಲ, ೩-೧೧೭; ಇದರಿಂದ ಅನುಭವವೇ ಆಗಿಬಿಡುವದರಿಂದ ಬೇರೆ ಅರ್ಥವನ್ನು ಕಲ್ಪಿಸಬಾರದು, ೩-೧೧೯.

**ತತ್ತ್ವದರ್ಶನಮ್** - **ಶಾಂ. ನಿ.** ಬ್ರಹ್ಮಸ್ವರೂಪವನ್ನು ಅನುಭವಕ್ಕೆ ತಂದುಕೊಳ್ಳುವದು ; ನಿತ್ಯವೂ ಪರಮಾತ್ಮನ ಅನುಸಂಧಾನದಲ್ಲಿರುವವರು ತತ್ತ್ವದರ್ಶಿಗಳು. ಗೀ. ಭಾ. ೨-೧೬, ೪-೩೪.

**ತತ್ತ್ವಾನವಬೋಧಃ** - ಬ್ರ.ಸೂ-೧. ನಿಜವನ್ನು ಅರಿತುಕೊಳ್ಳದಿರುವದು, ೧೦೪.

**ತತ್ತ್ವಾನ್ಯತ್ವನಿರೂಪಣಮ್** - ಬ್ರ.ಸೂ-೧. ಪರಮಾತ್ಮನೆಂದಾಗಲಿ, ಅವನಿಗಿಂತ ಬೇರೆಯೆಂದಾಗಲಿ ಗೊತ್ತುಪಡಿಸುವಿಕೆ (ಮಾಯೆಯು ಹೀಗೆ ಗೊತ್ತು ಪಡಿಸಲಾಗದ್ದು), ೩೩೯.

**ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯ** - ಬ್ರ.ಸೂ-೧. ಅದೇ ಬ್ರಹ್ಮವೆಂದಾಗಲಿ, ಅದಕ್ಕಿಂತ ಬೇರೆಯೆಂದಾಗಲಿ ಗೊತ್ತುಪಡಿಸಿ ಹೇಳಲಾಗದ (ನಾಮರೂಪಗಳು), ೬೯, ೪೪೦.

**ತತ್ತ್ವಾಗ್ರಹಣಮ್, ತತ್ತ್ವಾಪ್ರತಿಬೋಧಃ** - **ಮಾಂ.** ನಿಜವನ್ನು ಅರಿಯದಿರುವದು, ೧೫, ೪೫, ೫೩ ; **ಶಾಂ. ನಿ.** ಪರಮಾರ್ಥವನ್ನು ತಿಳಿಯದೆ ಇರುವ ಕಾರಣಾಜ್ಞಾನ ; ಇದು ಅನ್ಯಥಾಗ್ರಹಣರೂಪವಾದ ಕಾರ್ಯಜ್ಞಾನಕ್ಕೆ ಬೀಜ. ಮಾಂ. ಕಾ. ಭಾ. ೧-೧೧. ಇವೆರಡಕ್ಕಿಂತ ಬೇರೆಯಾಗಿರುವ **ಮೂಲಾಜ್ಞಾನ**ವೆಂಬ ತತ್ತ್ವವನ್ನು ಈಗಿನ ಅದ್ವೈತಿಗಳು ಒಪ್ಪಿರುತ್ತಾರೆ. ಇದಕ್ಕೆ ಭಾಷ್ಯದ ಆಧಾರವು ಕಾಣುವದಿಲ್ಲ.

**ತತ್ತ್ವಾನ್ಯತ್ವೇನಾನಿರ್ವಕ್ತವ್ಯೇ** - ಬೃಹ-೧. ಆತ್ಮನ ಸ್ವರೂಪವೇ ಎಂದಾಗಲಿ, ಇತರವೆಂದಾಗಲಿ ಗೊತ್ತುಪಡಿಸಿ ಹೇಳಲಾಗದ, ೩೬೫.

**ತದ್ಭಾವಾಪತ್ತಿಃ** - ಬ್ರ.ಸೂ.-೧. ಆ ರೂಪವನ್ನೇ ಪಡೆದುಕೊಳ್ಳುವದು, ೪೬, ೧೦೬.

**ತದ್ವಿದ್ಯಸಂವಾದಃ** - **ಛಾಂ.** ಆ ವಿದ್ಯೆಯನ್ನು ಬಲ್ಲವರೊಡನೆ ವಾದ ಮಾಡುವದು, ೭೪.

**ತದ್ವಿದ್ಯಸಂಯೋಗಃ** - ಬೃಹ-೨. ಆ ವಿದ್ಯೆಯನ್ನು ಬಲ್ಲವರ ಸಮಾಗಮ, ೨

**ತನ್ತ್ರಮ್** - ಬ್ರ.ಸೂ-೧. ತಂತ್ರವೆಂಬ ಹೆಸರಿನ ಸಾಂಖ್ಯಶಾಸ್ತ್ರ ೩೯, ೪೦೩.

**ತನ್ಮಾತ್ರಾಣಿ** - ಪ್ರಶ್ನ. ಶಬ್ದವೇ ಮುಂತಾದ ಗುಣಗಳು ಒಂದೊಂದೇ ಇರುವ ರೂಪ, ೭೨.

**ತನ್ಮಾತ್ರಮ್** - ಭ.ಗೀ. ಒಂದೊಂದೇ ಇರುವ, ಮತ್ತೊಂದರೊಡನೆ ಬೆರೆಯದಿರುವ, ಸೂಕ್ಷ್ಮಭೂತ, ೪೫೮, ೮೯೨.

**ತನ್ತ್ರೇಣಾನುಷ್ಠಾನಮ್ - ಭ.ಗೀ.** ಒಂದು ಸಾಧನವನ್ನು ಮಾಡಿದ್ದರಿಂದಲೇ ಇನ್ನೊಂದನ್ನು ಮಾಡಿದಂತೆ ಆಗುವದು, ೧೧೩.೪.

**ತಪಃ - ಪ್ರಶ್ನ.** ಇಂದ್ರಿಯಸಂಯಮ, ೧, ೩, ೧೪ ; ಆಲೋಚನೆ, ೫ ; **ಮುಂ.** ಕೃಚ್ಛ್ರ, ಚಾಂದ್ರಾಯಣ - ಮುಂತಾದ ದೇಹಾಯಾಸರೂಪವಾದ ತಪಸ್ಸು, ೨೫, ೧೦೫ ; ಆಶ್ರಮಕರ್ಮ, ೪೨, ಇಂದ್ರಿಯಗಳನ್ನೂ ಮನಸ್ಸನ್ನೂ ಏಕಾಗ್ರವಾಗಿಸುವದು, ೯೯ ; ಜ್ಞಾನ, ೨೩, ೨೫, ೧೧೬ ; **ತೈ.** ಕೃಚ್ಛ್ರವೇ ಮುಂತಾದದ್ದು, ೫೪, ೫೫ ; ಇಂದ್ರಿಯಗಳ ಮತ್ತು ಮನಸ್ಸಿನ ಏಕಾಗ್ರತೆ ೮೨, ೮೩, ೮೫, ೨೩೦, ೨೩೨, ೨೩೭ ; **ಛಾಂ.** ಧ್ಯಾನ, ೧೮೭ ; ಕೃಚ್ಛ್ರ ಚಾಂದ್ರಾಯಣಾದಿಗಳು, ವಾನಪ್ರಸ್ಥ, ೧೭೬ ; **ಶಾಂ. ನಿ.** ಕೃಚ್ಛ್ರಚಾಂದ್ರಾಯಣಗಳೇ ಅಲ್ಲದೆ ದೇಹೇಂದ್ರಿಯಮನಸ್ಸುಗಳನ್ನು ವಿಕ್ಷೇಪವಿಲ್ಲದೆ ಇಟ್ಟುಕೊಳ್ಳುವದು (ಕೇ. ಭಾ. ೪-೮, ಭಾ. ಭಾ. ೮೬, ತೈ. ಭಾ. ೩-೧, ಭಾ. ಭಾ. ೨೩೦), ಜ್ಞಾನವು (ಮುಂ. ೧-೧-೮) ಎಂಬರ್ಥಗಳಲ್ಲಿಯೂ ಈ ಶಬ್ದಕ್ಕೆ ಪ್ರಯೋಗವಿದೆ.

**ತಮಃ - ಬ್ರ.ಸೂ-೧.** ಅವಿದ್ಯೆ, ೨೪೦ ; **ಈಶ.** ಕತ್ತಲೆ, ಅಜ್ಞಾನ, ೨೨, ೨೮ ; **ನೈ.** ಅಜ್ಞಾನ, ೧-೨೪. ಜ್ಞಾನಜ್ಞಾತೃಜ್ಞೇಯಗಳನ್ನು ಅವಿಕಾರನಾಗಿ ಅರಿಯುವ ಆತ್ಮನಿಗೆ ತಮಸ್ಸು ಹೊರಚ್ಚಾಗಿಯೇ ಇದೆ, ಅದು ಅನಾತ್ಮಧರ್ಮವೇ, ೪-೪೫ ; **ಶಾಂ. ನಿ.** ಅಜ್ಞಾನ, ಮಿಥ್ಯಾಪ್ರತ್ಯಯ, ತಪ್ಪುತಿಳಿವಳಿಕೆ ಗೀ. ಭಾ. ೧೦-೧೪.

**ತ್ವಂಪದಾರ್ಥಃ - ನೈ.** ತ್ವಂಪದಾರ್ಥದ ವಿವೇಕವಿಲ್ಲದ್ದರಿಂದ ತತ್ತ್ವಮಸಿ ವಾಕ್ಯಾರ್ಥದ ಜ್ಞಾನವಾಗುವದಿಲ್ಲ, ಅದನ್ನು ಎರಡನೆಯ ಅಧ್ಯಾಯದಲ್ಲಿ ಹೇಳಿರುವ ಅನ್ವಯವ್ಯತಿರೇಕನ್ಯಾಯದಿಂದ ಸಂಪಾದಿಸಿಕೊಳ್ಳಬೇಕು, ೪-೭; ತ್ವಂಪದಕ್ಕೆ ಪ್ರತ್ಯಗಾತ್ಮನೆಂಬುದೇ ಅರ್ಥವು; **ತತ್ಪದಸಾಮಾನಾಧಿಕರಣ್ಯದಿಂದ** ಅದಕ್ಕೆ ಸದ್ವಿತೀಯತ್ವವೆಂಬ ಅರ್ಥವು ತ್ಯಾಜ್ಯವಾಗುತ್ತದೆ, ಏಕೆಂದರೆ ಆ ಪದದ ಅದ್ವಿತೀಯತ್ವಕ್ಕೆ ಇದು ವಿರುದ್ಧವಾಗಿರುತ್ತದೆ, ೩-೨, ೭೮, ೭೯.

**ತಮೋರೂಪಮ್ - ಮಾಂ.** ವಿಂಗಡಿಸಿ ಅರಿಯದ ಅಜ್ಞಾನರೂಪ, ೧೯೨.

**ತಲಮಲಿನತಾ - ಬ್ರ.ಸೂ-೧.** (ಆಕಾಶದ) ತಲವು ಮಲಿನವಾಗಿರುವದು, ೩, ೧೬೨.

**ತ್ರಯೀ ವಿದ್ಯಾ - ಛಾಂ.** ವೇದವಿದ್ಯೆ, ೧೮೭, ೩೫೧, ೩೫೨.

**ತ್ಯಕ್ತೈಷಣಃ - ಈಶ.** ಏಷಣಾತ್ರಯವನ್ನು ಬಿಟ್ಟ ಜ್ಞಾನಿ, ೪ ; **ಐತ.** ಮಕ್ಕಳು, ಕರ್ಮ, ಲೋಕ - ಇವುಗಳ ಬಯಕೆಯನ್ನು ಬಿಟ್ಟವನು, ೨೬ ; **ಶಾಂ. ನಿ.** ಪುತ್ರ, ವಿತ್ತ

ಲೋಕ - ಇವುಗಳ ಬಯಕೆಯನ್ನು ಬಿಟ್ಟವನು. ಪುತ್ರನಿಂದ ಈ ಲೋಕವೂ ಮಾನುಷವಿತ್ತರೂಪವಾದ ಕರ್ಮದಿಂದ ಪಿತೃಲೋಕವೂ ದೈವವಿತ್ತವಾದ ಉಪಾಸನೆಯಿಂದ ದೇವಲೋಕವೂ ದೊರಕುವವೆಂದು ಶ್ರುತಿ. ಈ ಮೂರು ಬಯಕೆಯನ್ನೂ ಬಿಟ್ಟವನು ಸದ್ಯೋಮುಕ್ತಿಯನ್ನು ಕೊಡುವ ಆತ್ಮಜ್ಞಾನಕ್ಕೆ ಅಧಿಕಾರಿ. ಈ .ಭಾ. ೫.

**ತ್ರ್ಯಂಶಾ ಭಾವನಾ** - ಬೃಹ-೧. ಏನನ್ನು ? ಏತರಿಂದ ? ಹೇಗೆ ? - ಎಂಬ ಮೂರಂಶವುಳ್ಳ (ಕರ್ಮದ) ಭಾವನೆ, ೫೩.

**ತ್ರ್ಯನ್ನಾತ್ಮಾ** - ಬೃಹ-೧. ವಾಙ್ಮನಃಪ್ರಾಣಗಳೆಂಬ ಮೂರನ್ನಗಳ ಶರೀರವುಳ್ಳ (ಪ್ರಜಾಪತಿ), ೨೨೬.

**ತೃತೀಯಾ ದ್ಯೌಃ** - ಪ್ರಶ್ನ. ಸುವರ್ಲೋಕ, ३೬.

**ತೃಣಜಲೂಕಾ** - ಐತ. ಒಂದು ಎಲೆಯಿಂದ ಇನ್ನೊಂದು ಎಲೆಯನ್ನು ಸೇರುವಾಗ ಮುಂದಿನ ಎಲೆಯನ್ನು ಹಿಡಿದೇ ಹಿಂದಿನದನ್ನು ಬಿಡುವ ಜಿಗಣೆಯ ಜಾತಿಯ ಹುಳು ೭೭.

**ತಾರ್ಕಿಕಃ** - ಪ್ರಶ್ನ. ಶ್ರುತಿಯನ್ನು ಹಿಡಿಯದೆ ಸ್ವತಂತ್ರತರ್ಕವನ್ನು ನಂಬಿರುವವನು, ೬೬, ೧೦೩, ೧೦೪.

**ತಾರ್ಕಿಕಾಃ** - ಮಾಂ. ಬರಿಯ ತರ್ಕವನ್ನೇ ನಂಬಿರುವವರು, ವೇದಾಂತಿಗಳಲ್ಲದ ವಾದಿಗಳು, ೧೨೧, ೧೩೧, ೧೪೯, ೧೫೦; ಐತ. ತರ್ಕವೇ ಪ್ರಧಾನವಾಗಿರುವ ವೇದಾಂತಿಗಳಲ್ಲದ ವಾದಿಗಳು, ೭೧, ೮೮; ಬೃಹ-೧. ಆಗಮವನ್ನೊಪ್ಪದೇ ತರ್ಕವನ್ನೇ ಮುಖ್ಯವಾಗಿ ಎಣಿಸುವವರು, ೪, ೧೧೩, ೧೨೬ ; ಬೃಹ-೨. ಲೌಕಿಕತರ್ಕವನ್ನು ನಂಬಿರುವ ದರ್ಶನಕಾರರು, ೭೯, ೨೮೨ ; ಕೇನ. ಬರಿಯ ತರ್ಕವನ್ನೇ ನಂಬಿರುವ ವಾದಿಗಳು, ३೦.

**ತಾರ್ಕಿಕಾಃ, ತರ್ಕವಿದಃ** - ಬ್ರ.ಸೂ-೧. ತರ್ಕವೇ ಮುಖ್ಯವೆಂದಿಟ್ಟುಕೊಂಡಿರುವ ಸಾಂಖ್ಯವೈಶೇಷಿಕಾದಿಗಳು, ೪೨೯ ; ಶಾಂ. ನಿ. ಶ್ರುತಿಗಿಂತಲೂ ತರ್ಕಕ್ಕೇ ಹೆಚ್ಚಿನ ಪ್ರಾಧಾನ್ಯವನ್ನು ಕೊಟ್ಟಿರುವ ಸಾಂಖ್ಯ, ವೈಶೇಷಿಕರೇ - ಮುಂತಾದವರು. ಸೂ. ಭಾ. ೧-೧-೧೦, ಮಾಂ. ಕಾ. ಭಾ. ೨-೩೫.

**ತಾರ್ಕಿಕಸಮಯಃ** - ಬ್ರ.ಸೂ-೧. ತರ್ಕಶಾಸ್ತ್ರ, ೮೭.

**ತಾತ್ಪರ್ಯಮ್** - ಶಾಂ. ನಿ. ಗುರೂಪಸತ್ತಿಯೇ ಮುಂತಾದವುಗಳಲ್ಲಿ ತತ್ಪರನಾಗಿರುವದು. ಬೃ. ಭಾ. ೪-೪-೨.

**ತಾದಾತ್ಮ್ಯಮ್** - ಬ್ರ.ಸೂ-೧. ಅದರ ಸ್ವರೂಪವೇ ಆಗಿರುವದು, (ಪರಮಾತ್ಮೈಕ್ಯ) ೧೦೬, (ಕಾರ್ಯವು ಕಾರಣರೂಪವೇ, ದ್ರವ್ಯಗುಣಗಳು ದ್ರವ್ಯರೂಪವೇ), ೪೪೭ ; **ಶಾಂ.** ನಿ. ಅದೇ ಆಗಿರುವದು. ಜಗತ್ತಿಗೂ ಬ್ರಹ್ಮಕ್ಕೂ ತಾದಾತ್ಮ್ಯ ಸಂಬಂಧವಿದೆ ಎಂದರೆ ಜಗತ್ತು ನಿಜವಾಗಿ ಪರಮಾತ್ಮನೇ ಎಂದರ್ಥ. ಭೇದಸಹಿತಾ- ಭೇದವೆಂಬ ಮೀಮಾಂಸಕರ ಅಭಿಪ್ರಾಯವಿಲ್ಲಿಲ್ಲ. ಸೂ. ಭಾ. ೨-೧-೧೮, ೨-೨-೩೮.

**ತ್ಯಾಗಃ** - **ಶಾಂ.** ನಿ. ಬಿಡುವದು, ಕರ್ಮಫಲತ್ಯಾಗ, ಗೀ. ಭಾ. ೧೮-೯ ; ಸರ್ವಕರ್ಮ ಸಂನ್ಯಾಸ, ಗೀ. ಭಾ. ೧೮-೧೧ ; ಎಲ್ಲಾ ಕರ್ಮಗಳನ್ನೂ ಬಿಡುವದು, ಜ್ಞಾನನಿಷ್ಠೆ ಗೀ. ಭಾ. ೧೨-೧೨, ೧೮-೧೨.

**ತಿಮಿರದೃಷ್ಟಿಃ, ತೈಮಿರಿಕಃ** - ಭ.ಗೀ. ಕಣ್ಣುಪರೆಯಿರುವವನು, ಮಿಥ್ಯಾಜ್ಞಾನಿಗೆ ದೃಷ್ಟಾಂತ, ೭೬೧, ೧೦೩೨, ೧೯೯೧ ; **ಶಾಂ.** ನಿ. ಕಣ್ಣುಪರೆ ; ಕಣ್ಣುಪರೆ ಬಂದವನು. ಅವನಿಗೆ ಕಾಣುವ ಚಂದ್ರಾನೇಕತ್ವವು ಪರಮಾರ್ಥವಲ್ಲ, ಗೀ. ಭಾ. ೧೮-೧೬, ಕ. ಭಾ. ೨-೧-೧೧.

**ತ್ರಿಕಾಲಾತೀತಮ್** - **ಮಾಂ.** ಮೂರು ಕಾಲವನ್ನೂ ಮೀರಿರುವ ಅವ್ಯಾಕೃತವೇ ಮುಂತಾದದ್ದು, ೬ ; **ಶಾಂ.** ನಿ. ನಾಮರೂಪಪ್ರಪಂಚದ ಅವ್ಯಾಕೃತಸ್ಥಿತಿ, ಮಾಂ. ಭಾ. ೧.

**ತ್ರಿಗುಣಮ್** - ಬ್ರ.ಸೂ-೧. ಸತ್ತ್ವರಜಸ್ತಮಗಳೆಂಬ ಮೂರು ಗುಣಗಳುಳ್ಳ ಪ್ರಧಾನ, ೬೫, ೩೩೫.

**ತ್ರಿಗುಣಾತ್ಮಿಕಾ ಮಾಯಾ, ತ್ರಿಗುಣಾತ್ಮಿಕಾ ಪ್ರಕೃತಿಃ** - ಭ.ಗೀ. ಮೂರು ಗುಣಗಳಿಂದ ಆಗಿರುವ ಅವಿದ್ಯಾಕಲ್ಪಿತವಾದ ಪ್ರಕೃತಿ, ೨, ೪೭೦, ೭೫೪ ; **ಶಾಂ.** ನಿ. ಮೂರು ಗುಣಗಳಿಂದಾಗಿರುವ, ಅವಿದ್ಯಾ ಕಲ್ಪಿತವಾದ ಪ್ರಕೃತಿ. ಗೀ. ಭಾ. ಅವತರಣಿಕೆ ಭಾ. ಭಾ. ೨.

**ತ್ರಿಣಾಚಿಕೇತಾಃ** - **ಕಠ.** ನಾಚಿಕೇತಾಗ್ನಿಯನ್ನು ಮೂರುಸಲ ಚಯನ ಮಾಡಿದವರು, ಅಥವಾ ಅದನ್ನು ಅರಿತು ಅಧ್ಯಯನಮಾಡಿ ಅನುಷ್ಠಾನ ಮಾಡಿರುವವರು, ೨೮, ೮೫.

**ತ್ರಿವಿಧಮ್ ಆನನ್ತ್ಯಮ್** - **ತೈ.** ದೇಶದಿಂದ, ಕಾಲದಿಂದ, ವಸ್ತುವಿನಿಂದ- ಎಂದು ಮೂರು ಬಗೆಯಿಂದಲೂ ಅಂತವಿಲ್ಲದಿರುವದು ೧೧೧ , **ಶಾಂ.** ನಿ. ದೇಶದಿಂದಲಾಗಲಿ, ಕಾಲದಿಂದಲಾಗಲಿ, ಮತ್ತೊಂದು ವಸ್ತುವಿನಿಂದಲಾಗಲಿ ಅಂತವಿಲ್ಲದೆ ಇರುವದು, ತೈ. ಭಾ. ೨-೧.

**ತ್ರಿವೃತ್ಕರಣಮ್** - ಶಾಂ. ನಿ. ತೇಜಸ್ಸು, ಅಪ್ಪು, ಅನ್ನ - ಎಂಬ ಸೂಕ್ಷ್ಮಭೂತಗಳಲ್ಲಿ ಒಂದೊಂದರಲ್ಲಿಯೂ ಇನ್ನೆರಡನ್ನು ಬೆರಯಿಸಿ ಒಂದೊಂದೂ ಭೂತತ್ರಯ ರೂಪವಾಗಿರುವಂತೆ ಮಾಡುವದು, ಛಾಂ. ೬-೩-೩.

**ತೀರ್ಥಮ್** - ಛಾಂ. ವಿದ್ಯಾದಾನಕ್ಕೆ ಪಾತ್ರ, ೨೨೮ ; ಶಾಸ್ತ್ರದಲ್ಲಿ ಆಗ ಬಹುದೆಂದಿರುವ ಯೋಗ್ಯಸಂದರ್ಭ, ೬೮೯.

**ತೀರ್ಥಕರಾಃ** - ಬ್ರ.ಸೂ-೧. ಶಾಸ್ತ್ರಕಾರರು, ೪೨೭.

**ತುರೀಯ, ತುರ್ಯ** - ಮಾಂ. ನಾಲ್ಕನೆಯ, ಎಚ್ಚರಕನಸುನಿದ್ರೆಗಳಲ್ಲಿರುವ ಆತ್ಮರೂಪಕ್ಕಿಂತ ವಿಲಕ್ಷಣವಾದ ಆತ್ಮ, ೯, ೩೧, ೩೪, ೩೬, ೩೮, ೩೯, ೪೩, ೪೭, ೪೯, ೫೩.

**ತುರೀಯಮ್** - ಶಾಂ. ನಿ. ಎಚ್ಚರ, ಕನಸು, ತನಿನಿದ್ರೆ - ಎಂಬ ಅವಸ್ಥೆಗಳ ಅಪೇಕ್ಷೆಯಿಂದ ಬೇರೆ ಬೇರೆ ರೂಪದಲ್ಲಿ ಕಾಣುವ ಆತ್ಮತತ್ತ್ವವು ಅವಸ್ಥೆಗಳೆಂಬ ಉಪಾಧಿಗಳ ಹಂಗಿಲ್ಲದೆ ಇರುವ ಸ್ವರೂಪ, ಪರಮಾರ್ಥಾತ್ಮ. ಮಾಂ. ಭಾ. ೭. ತುರೀಯಾವಸ್ಥೆ ತುರೀಯಾತೀತಾವಸ್ಥೆ ಎಂದು ಕೆಲವರು ವೇದಾಂತಿಗಳು ವ್ಯವಹರಿಸುವ ಅವಸ್ಥೆಗಳ ವಿಚಾರವು ಭಾಷ್ಯದಲ್ಲಿಲ್ಲ.

**ತುರೀಯಃ** - ಬೃಹ-೨. ಅವಸ್ಥಾತೀತನಾದ ಆತ್ಮ, ೧೩೭, ೧೫೬.

**ತೈಜಸಃ** - ಮಾಂ. ಕನಸೆಂಬ ಅವಸ್ಥೆಯ ಉಪಾಧಿಯುಳ್ಳ ಆತ್ಮ, ೧೪, ೨೦, ೨೮, ೩೯, ೪೩, ೪೮, ೬೧ ; ಬೃಹ-೨. ಸ್ವಪ್ನೋಪಾಧಿಕನಾದ ಆತ್ಮ೧೫೬.

**ತೈತ್ತಿರೀಯಕಮ್** - ಈಶ. ಯಜುರ್ವೇದದ ತೈತ್ತಿರೀಯಶ್ರುತಿ, ೭.

**ತೈಮಿರಿಕಾನೇಕಚನ್ದ್ರಾಃ** - ಮಾಂ. ಪರೆಗಣ್ಣಿನವರಿಗೆ ಕಾಣುವ ಅನೇಕ ಚಂದ್ರರು (ಹುಸಿಯಾದ ದ್ವೈತಕ್ಕೆ ದೃಷ್ಟಾಂತ), ೧೬೫.

**ತೈಮಿರಿಕದ್ವಿಚಂದ್ರಪ್ರತ್ಯಯಃ** - ಛಾಂ. ಕಣ್ಣು ಪರೆಬಂದವನಿಗೆ ಆಗುವ ಇಬ್ಬರು ಚಂದ್ರರ ಅರಿವು, ೧೭೯.

**ತ್ರೈಲೋಕ್ಯದೇಹೋಪಾಧಿಃ** - ಮುಂ. ಮೂರುಲೋಕಗಳನ್ನೂ ತನ್ನ ದೇಹವಾಗಿ ಮಾಡಿಕೊಂಡಿರುವ ವಿರಾಟ್‌ಪುರುಷ, ೬೧ ; ಶಾಂ. ನಿ. ಮೂರು ಲೋಕಗಳ ರೂಪವಾಗಿರುವ ದೇಹವೆಂಬ ಉಪಾಧಿಯುಳ್ಳವನು, ವಿರಾಟ್ಪುರುಷ, ಪ್ರಜಾಪತಿ, ಮುಂ. ಭಾ. ೨-೧-೪.

**ತ್ರೈಲೋಕ್ಯಶರೀರಃ** - ಬ್ರ.ಸೂ-೧. ಸ್ವರ್ಗಮರ್ತ್ಯಪಾತಾಳಗಳೆಂಬ ಮೂರು ಲೋಕಗಳೂ ಶರೀರವಾಗಿರುವ ಪ್ರಜಾಪತಿ, ೨೦೪.

**ತ್ರೈಲೋಕ್ಯಶರೀರಮ್** - ಬೃಹ-೧. ಮೂರು ಲೋಕವೂ ಸೇರಿರುವ (ಪ್ರಜಾಪತಿಯ) ಶರೀರ, ೮೫.

**ದಕ್ಷಿಣಮಾರ್ಗಃ** - ಈಶ. ಕರ್ಮಿಗಳು ಪಿತೃಲೋಕವನ್ನು ಪಡೆಯುವದಕ್ಕೆ ಹೋಗಬೇಕಾದ ಮಾರ್ಗ, ೩೯ ; ಕೇನ. ಸಕಾಮಿಗಳು ಕರ್ಮವನ್ನು ಮಾಡಿ ಫಲವನ್ನು ಪಡೆಯುವದಕ್ಕೆ ಹೋಗುವ ಧೂಮಾದಿಮಾರ್ಗ. ಇದರಲ್ಲಿ ಹೋದವರು ಸಂಸಾರಕ್ಕೆ ಮರಳುವರು, ೨.

**ದಕ್ಷಿಣಾಯನಃ, ಪಿತೃಯಾಣಃ** - ಪ್ರಶ್ನ. ಕರ್ಮಿಗಳು ಫಲವನ್ನು ಪಡೆಯುವದಕ್ಕೆ ಹೋಗಬೇಕಾಗಿರುವ ಮಾರ್ಗ, ೧೩.

**ದಕ್ಷಿಣಾಯನೋತ್ತರಾಯಣಮಾರ್ಗೌ, ದಕ್ಷಿಣೋತ್ತರಮಾರ್ಗೌ** - ಮುಂ. ಕರ್ಮಿಗಳು ಪಿತೃಲೋಕಕ್ಕೂ ಉಪಾಸಕರು ದೇವಲೋಕಕ್ಕೂ ಸತ್ತ ಬಳಿಕ ಹೋಗುವ ಮಾರ್ಗಗಳು, ೪೫, ೬೫.

**ದತ್ತಮ್** - ಛಾಂ. ಯಜ್ಞಸಂದರ್ಭದಲ್ಲಲ್ಲದೆ ಕೊಡುವ ದಾನ ೪೦೭.

**ದಮಃ** - ತೈ. ಹೊರಗಿನ ಇಂದ್ರಿಯಗಳನ್ನು ಬಿಗಿಹಿಡಿಯುವದು ೮೨, ೨೩೮; ಭ.ಗೀ. ಹೊರಗಿನ ಇಂದ್ರಿಯಾದಿಗಳನ್ನು ಬಿಗಿಹಿಡಿಯುವದು, ೪೫, ೯೨೭, ೧೦೭೩ ; ಶಾಂ. ನಿ. ಹೊರಗಿನ ಕರಣಗಳನ್ನು ಬಿಗಿಹಿಡಿಯುವದು, ಭ. ಗೀ. ೧೬-೧.

**ದಮಾದಿಸಾಧನತ್ರಯಮ್** - ಬೃಹ-೨. ದಮ, ದಯೆ, ದಾನ-ಎಂಬ ಜ್ಞಾನ ಸಾಧನಗಳು, ೩೬೦, ೩೬೪.

**ದರ್ಶನಮ್** - ತೈ. ಉಪಾಸನೆ ೧೯ ; ತಾನೇ ಆಗುವ ಆತ್ಮಾದಿವಿಷಯದ ಜ್ಞಾನ, ೫೮ ; ಬೃಹ-೨. ಉಪಾಸನೆ, ೫, ೧೦ ; ಆತ್ಮವಸ್ತುಜ್ಞಾನ, ೨೩, ೨೬ ; ಶಾಂ. ನಿ. ಜ್ಞಾನ, ಉಪಾಸನೆ, ತೈ. ಭಾ. ೧-೧೦, ತೈ. ಭಾ. ೧-೩.

**ದರ್ಶನಮ್ (ಆರ್ಷ)** - ಶಾಂ. ನಿ. ಜ್ಞಾನ ; ಆರ್ಷದರ್ಶನವೆಂದರೆ ಧರ್ಮಾನುಷ್ಠಾನ ದಿಂದಾಗುವ ಸಿದ್ಧಿರೂಪವಾದ ಅತೀಂದ್ರಿಯಜ್ಞಾನ.

**ದರ್ಶನವೃತ್ತಿಃ** - ಬೃಹ-೨. ಎರಡನೆಯ ವಸ್ತುವನ್ನು ಕಾಣುವ ವೃತ್ತಿ, ಕನಸಿನ ನಿದ್ರೆ, ೨೦೪.

**ದರ್ಶನವೃತ್ತಿಃ ಸ್ವಪ್ನಃ** - ಬೃಹ-೧. ವಸ್ತುಗಳನ್ನು ನೋಡುವ ನಿದ್ರೆಯಿಂದಾದ ಕನಸು, ೨೯೭.

**ದರ್ಶನಶ್ರವಣಮನನ ವಿಜ್ಞಾನಾದಿಲಿಙ್ಗಃ** - ಕಠ. ನೋಡುವದು, ಕೇಳುವದು, ಯೋಚಿಸುವದು, ಅರಿಯುವದು ಎಂಬ ವೃತ್ತಿಗಳಿಂದ ಊಹಿಸಿ ತಿಳಿದುಕೊಳ್ಳಬೇಕಾಗಿರುವ ಆತ್ಮ, ೭೫.

**ದರ್ಶನಾದರ್ಶನವೃತ್ತೀ** - ಮಾಂ. ಮತ್ತೊಂದನ್ನು ಕಾಣುವ ಕನಸಿನ ನಿದ್ರೆ, ಮತ್ತೊಂದನ್ನು ಕಾಣದ ನಿದ್ರೆ - ಎಂಬ ಎರಡು ಬಗೆಯ ನಿದ್ರೆಗಳು, ೧೫ ; **ಶಾಂ. ನಿ.** ಎರಡನೆಯ ವಸ್ತುವನ್ನು ಕಾಣುವ ದರ್ಶನವೃತ್ತಿ (ಎಚ್ಚರ, ಕನಸು), ಕಾಣದ ಅದರ್ಶನವೃತ್ತಿ(ತನಿನಿದ್ರೆ) - ಎಂಬ ಎರಡು ರೂಪದ ನಿದ್ರೆಗಳು, ಮಾಂ. ಭಾ. ೫.

**ದ್ವಯಕಾಲಾಃ** - ಮಾಂ. ಒಂದರ ಕಾಲದವರೆಗೆ ಇನ್ನೊಂದಿರುವ ಹೊರಗಿನ ವಸ್ತುಗಳು, ೯೮.

**ದ್ವಂದ್ವಾನಿ** - ಭ.ಗೀ. ಸುಖದುಃಖಕ್ಕೆ ಕಾರಣವಾದ ಪರಸ್ಪರವಿರುದ್ಧವಾದ ಪದಾರ್ಥಗಳು, ಇಚ್ಛಾದ್ವೇಷಗಳು, ೨೪, ೨೯, ೮೧, ೮೮, ೨೭೯, ೩೩೧, ೪೯೪, ೪೯೫, ೪೯೬ ; **ಶಾಂ. ನಿ.** ಸುಖದುಃಖಕ್ಕೆ ಕಾರಣವಾಗಿ ಪರಸ್ಪರವಿರುದ್ಧವಾದ ಪದಾರ್ಥಗಳು, ಗೀ. ಭಾ. ೧೬. (ಜೋಡಿಯಾದ ಪದಾರ್ಥಗಳು)

**ದೃಕ್, ದೃಶಿಃ** - ನೈ. ಚೈತನ್ಯರೂಪ. ಆತ್ಮಚೈತನ್ಯವೊಂದೇ ದೃಶ್ಯಭೇದಗಳಿಂದ ಅನೇಕವಾಗಿರುವಂತೆ ಕಾಣುತ್ತಿರುತ್ತದೆ, ೨-೪೭,೮೮; ದೇಹವು ದೃಶಿರೂಪದೊಡನೆ ಅನ್ವಯವಾಗದಿರುವದರಿಂದ ಅನಾತ್ಮವು, ೨-೧೯; ಅಹಂಕಾರವೂ ಘಟಾದಿಗಳಂತೆ ದೃಶಿರೂಪಕ್ಕೆ ವಿಷಯವು, ೨-೩೭; ದ್ರಷ್ಟೃವಾದ ಆತ್ಮನನ್ನು ನೋಡುವ ದೃಶಿರೂಪವಿಲ್ಲ, ೨-೩೯.

**ದೃಶ್ಯಮ್** - ನೈ. ಅರಿಯಲ್ಪಡತಕ್ಕದ್ದು, ಅನಾತ್ಮವು. ದೇಹವೂ ಅಹಂಕಾರವೂ ದೃಶ್ಯವಾದ್ದರಿಂದ ಅನಾತ್ಮ, ೨-೧೯; ಒಂದೇ ವಸ್ತು ದ್ರಷ್ಟೃವೂ ದೃಶ್ಯವೂ ಆಗಿರಲಾರದು, ೨-೩೯; ದ್ರಷ್ಟೃವೂ ದೃಶ್ಯನೆಂದರೆ ದೋಷ, ೨-೪೦, ೪-೩೦; ದೃಶ್ಯಗಳಿಂದ ದೃಕ್ಕಿಗೆ ಅನೇಕತ್ವವಿರುವಂತೆ ತೋರುತ್ತದೆ, ೨-೪೭.

**ದೃಷ್ಟ** - ಬ್ರ.ಸೂ-೨. ಈ ಲೋಕದಲ್ಲಿ ಕಾಣುವ (ಫಲ). ಬ್ರಹ್ಮಜ್ಞಾನಕ್ಕೆ ದೃಷ್ಟಫಲ, ಕಾಲಾಂತರದಲ್ಲಿ ಕಾಣುವ ಅದೃಷ್ಟಫಲವಲ್ಲ, ೧-೪೦೯ ; ಪ್ರತ್ಯಕ್ಷವಾಗಿ

ದೃಷ್ಟಾಂತ. ತರ್ಕವು ದೃಷ್ಟದಿಂದ ಅದೃಷ್ಟವನ್ನು ಎಂದರೆ ಪರೋಕ್ಷವಾಗಿರುವದನ್ನು ಸಾಧಿಸುತ್ತದೆ, ೧-೪೦೯, ೨-೭ ; ದೃಷ್ಟಕ್ಕೆ ವಿಪರೀತವಾಗಿ ಕಲ್ಪಿಸಬಾರದು, ೧-೩೬೯ ; ಕಂಡದ್ದನ್ನು ಬಿಟ್ಟು ಕಾಣದೆ ಇರುವದನ್ನು ಕಲ್ಪಿಸುವದು ತರ್ಕದೋಷ ೧-೨೯೧ ; ದೃಷ್ಟಾಂತಬಲದಿಂದ ಪ್ರಧಾನವನ್ನು ಅನುಮಾನಿಸುವದಕ್ಕಾಗಲಾರದು, ೨-೫ ; ರೂಪಾದಿಗಳಿರುವದರಿಂದ ಪರಮಾಣುವು ಸ್ಥೂಲವೂ ಅನಿತ್ಯವೂ ಆಗಿರಬೇಕಾಗುವದೆಂದು ದೃಷ್ಟಬಲದಿಂದ ಸಿದ್ಧವಾಗುತ್ತದೆ, ೨-೩೧ ; ಇವೆಲ್ಲ ದೃಷ್ಟವಿರುದ್ಧ ; ಗುಣಾದಿಗಳು ದ್ರವ್ಯಾಧೀನವೆಂಬುದು ; ೨-೩೫ ; ಅದೇ ಇದು, ಅವನೇ ನಾನು ಎಂಬ ಅರಿವು ಸಾದೃಶ್ಯದಿಂದಾದ ಭ್ರಮೆ ಎಂಬ ಬೌದ್ಧರ ವಾದವು, ೨-೫೨ ; ಅಭಾವದಿಂದ ಭಾವೋತ್ಪತ್ತಿ ಎಂಬುದು, ೨-೫೬ ; ವಿಜ್ಞಾನಕ್ಕಿಂತ ಬೇರೆಯ ಹೊರಗಿನ ಅರ್ಥವಿಲ್ಲವೆನ್ನುವದು, ೨-೫೮, ೫೯ ; ಉತ್ಪನ್ನವಿಧ್ವಂಸಿಯಾದ ವಿಜ್ಞಾನವು ತಾನೇ ತೋರುತ್ತದೆ ಎಂಬುದು, ೨-೬೨ ; ಶೂನ್ಯವಾದವು, ೨-೬೪ ; ಜೈನರು ಒಂದೇ ಧರ್ಮಿಯಲ್ಲಿ ವಿರುದ್ಧಧರ್ಮಗಳನ್ನು ಒಪ್ಪಿರುವರು, ೨-೬೭ ; ಬೇರೆ ಬೇರೆ ಪರಿಮಾಣಗಳುಳ್ಳ ಜೀವನು ನಿತ್ಯನೆಂಬುದು, ೨-೬೯ ರಿಂದ ೭೨ ; ಈಶ್ವರನು ಜಗತ್ತಿಗೆ ಕೇವಲ ನಿಮಿತ್ತಕಾರಣನೆಂಬುದು, ೨-೭೪ ರಿಂದ ೮೧ ; ಸಂಕರ್ಷಣಾದಿಗಳು ವಾಸುದೇವಕಾರ್ಯವೆಂಬುದು, ೨-೮೩ ರಿಂದ ೮೭ ; ಆಗಮಬಲವುಳ್ಳ ವೇದಾಂತಿಗಳು ಬ್ರಹ್ಮದ ವಿಷಯಕ್ಕೆ ಲೋಕವಿರುದ್ಧವಾಗಿ ಅಂಗೀಕರಿಸಿದರೂ ದೋಷವಿಲ್ಲ , ೧-೩೬, ೨-೭೬, ೫೮ ; ತಾರ್ಕಿಕರು ದೃಷ್ಟಾಂತವನ್ನೇ ಮುಖ್ಯವಾಗಿಟ್ಟುಕೊಂಡಿರುವದರಿಂದ ದೃಷ್ಟವಿರೋಧದೋಷವು ಅವರಿಗೆ ತಟ್ಟುತ್ತದೆ, ೧-೩೯೬, ೨-೭೬ ; **ಶಾಂ. ನಿ.** (೧) ಈ ಲೋಕದಲ್ಲಿ ಕಾಣುವ ಫಲ, ಪ್ರ. ೧-೧೫ ; (೨) ಇಲ್ಲಿಯೇ ಅನುಭವಕ್ಕೆ ಬರುವ ಫಲವುಳ್ಳ ಜ್ಞಾನ, ಸೂ. ಭಾ. ೨-೧-೪ ; (೩) ಪ್ರತ್ಯಕ್ಷವಾಗಿ ಕಂಡದ್ದು ಸೂ. ಭಾ. ೨-೧-೪.

**ದೃಷ್ಟಾನ್ತಃ** – ಬ್ರ.ಸೂ-೧. ಯಾವದಕ್ಕೆ ಹೋಲಿಸಿದೆಯೋ ಅದು. ೧೯೭, ೨೦೦, ೪೨೨, ೪೨೫, ೪೩೫ ; ಬ್ರ.ಸೂ-೨. ಯಾವದಕ್ಕೆ ಹೋಲಿಸಿದೆಯೋ ಅದು ಆತ್ಮಾನಾತ್ಮಗಳ ಅಧ್ಯಾಸಕ್ಕೆ ದೃಷ್ಟಾಂತ, ೧-೨ ; ಜಗತ್ಕಾರಣಕ್ಕೆ ಪೃಥಿವ್ಯಾದಿದೃಷ್ಟಾಂತ, ೧-೧೯೭ ; ಕೆಲವು ದೃಷ್ಟಾಂತಗಳು ; ಉಪಾದಾನಕಾರಣಕ್ಕೆ ಮೃತ್ಸುವರ್ಣಾದಿಗಳು, ಸ್ಥಿತಿಕಾರಣಕ್ಕೆ ಮಾಯಾವಿ, ಉಪಸಂಹಾರಕ್ಕೆ ಭೂಮಿ, ೧-೩೯೮ ; ಲಯವಾದ ಕಾರ್ಯದ ಧರ್ಮಗಳು ಕಾರಣಕ್ಕೆ ಅಂಟದಿರುವದಕ್ಕೆ ಪೃಥಿವೀರುಚಕಭೂತ ಗ್ರಾಮಗಳು, ೧-೪೨೨ ; ಸಂಸಾರದ ಸೋಂಕು ಆತ್ಮನಿಗಿಲ್ಲವೆಂಬುದಕ್ಕೆ ಮಾಯಾ ಸ್ವಪ್ನಗಳು, ೧-೪೨೪ ; ಪ್ರಲಯದಲ್ಲಿ ಅವಿಭಾಗವಾಗಿ ಸೃಷ್ಟಿಯಲ್ಲಿ ಮತ್ತೆ

ವಿಭಾಗವಾಗುವದಕ್ಕೆ ಸುಷುಪ್ತಿಸಮಾಧ್ಯಾದಿಗಳು, ೧-೪೨೫ ; ಕಾರಣವು ಒಂದೇ ಆದರೂ ಕಾರ್ಯಗಳು ಒಂದು ಮತ್ತೊಂದಾಗದಿರುವದಕ್ಕೆ - ಸಮುದ್ರ, ೧-೪೩೨ ; ಕಾರ್ಯವು ಕಾರಣವನ್ನು ಬಿಟ್ಟಿಲ್ಲವೆಂಬುದಕ್ಕೆ ಮೃದಾದಿಗಳು, ೨-೧೫೨ ; ಜೀವನ ದುಃಖವು ಪರಮಾತ್ಮನಿಗಿಲ್ಲವೆಂಬುದಕ್ಕೆ ಪ್ರಕಾಶಾದಿಗಳು, ೨-೧೬೨ ; ಜೀವನು ಪರಮಾತ್ಮನ ಆಭಾಸವೆಂಬುದಕ್ಕೆ ಜಲಸೂರ್ಯಕ, ೨-೧೬೮ ; ಉಪಾಧಿಯಿಂದ ಪರಮಾತ್ಮನಿಗೆ ಸವಿಶೇಷತ್ವವಾಗಿರುವದಕ್ಕೆ ಜಲಸೂರ್ಯಕ, ೨-೧೬೮ ; ಸಗುಣ ಮುಕ್ತಿಯಲ್ಲಿ ಒಬ್ಬನ ಅನೇಕ ಶರೀರಗಳು ಸಾತ್ಮವಾಗಿರುವದಕ್ಕೆ ದೀಪ, ೨-೬೦೫ ; ದೃಷ್ಟಾಂತದಾರ್ಷ್ಟಾಂತಿಕಗಳಿಗೆ ಸರ್ವಸಾಮ್ಯವಿರುವದಿಲ್ಲ, ೧-೨೦೦, ೨೮೭ ; ನೈ. ಹೋಲಿಕೆಗಾಗಿ ಹೇಳಿದ್ದು. ಈ ಪ್ರಕರಣದಲ್ಲಿರುವ ಕೆಲವು ಮುಖ್ಯದೃಷ್ಟಾಂತಗಳನ್ನು ಇಲ್ಲಿ ಕೊಡುತ್ತೇವೆ. (೧) ಅತ್ತೆ ಭಿಕ್ಷವಿಲ್ಲವೆಂದು ಹೇಳಿದಂತೆ, (ನಿಷಿದ್ಧಕರ್ಮವನ್ನು ಬಿಡಬೇಕೆಂಬುದು), ೧-೨೮ ; (೨) ಆಕಾಶದ ನೀಲತ್ವವನ್ನು ಅಲ್ಲಗಳೆದಂತೆ (ಸೂಕ್ಷ್ಮದೇಹನಿರಾಕರಣೆ), ೨-೨೧; ಆಕಾಶಕ್ಕೆ ಮೋಡಕವಿದು ಹೋಗುವಂತೆ (ಆತ್ಮನಲ್ಲಿ ಜಗತ್ತು ), ೨-೬೮; ಗಡಿಗೆಯ ಹುಟ್ಟುಹೊಂದುಗಳಿಂದ ಆಕಾಶಕ್ಕೆ ಹುಟ್ಟುಹೊಂದುಗಳಾಗದಂತೆ (ಅಂತಃಕರಣದಿಂದ ಆತ್ಮನಿಗೆ ಏನೂ ಆಗದು), ೨-೭೯; ಆಕಾಶದಲ್ಲಿ ಹೊಗೆ ಮಂಜು ಮುಂತಾದವನ್ನು ಕಲ್ಪಿಸುವಂತೆ (ಆತ್ಮನಲ್ಲಿ ಸಂಸಾರಕಲ್ಪನೆ). ೩-೯೯; ಘಟಾಕಾಶಮಹಾಕಾಶಗಳಂತೆ (ಸಾಮಾನಾಧಿಕರಣ್ಯದಿಂದ ಅವಾಕ್ಯಾರ್ಥ), ೩-೯; (೩) ಕೊರಳಿನಲ್ಲಿ ಹಾರವಿದ್ದರೂ ಪಡೆದುಕೊಳ್ಳ-ಬೇಕೆನ್ನುವಂತೆ, ರಾಕ್ಷಸನಿಲ್ಲದಿದ್ದರೂ ತೊಲಗಿಸಿಕೊಳ್ಳಬೇಕೆನ್ನುವಂತೆ (ಇರುವದರ ಪ್ರಾಪ್ತೀಚ್ಛೆ, ಇಲ್ಲದ್ದರ ಪರಿಹಾರೇಚ್ಛೆ), ೧-೩೧,೩೨; (೪) ದಾನಾರ್ಥದಲ್ಲಿ ಧಾವೇತ್ (ಓಡಬೇಕು) ಎಂಬ ಪದವನ್ನುಪಯೋಗಿಸುವಂತೆ , (ಸ್ವತಃಸಿದ್ಧಾತ್ಮನನ್ನು ಆಗು ಎಂದು ಹೇಳುವದು), ೧-೯೭;(೫) ದಂಡವು (ಕೋಲು) ದಂಡಿಸಂನ್ಯಾಸಿಯಲ್ಲಿದ್ದು ಅವನನ್ನು ಪೂಜೆಮಾಡುವವನಿಗೆ ಕಾಣುತ್ತಿರುವಂತೆ (ಸಾಕ್ಷಿಗೆ ಬುದ್ಧಿ ಕಾಣುವದು), ೨-೮೦; ಕೋಲು ನೀರಿನಲ್ಲಿ ವಕ್ರವಾಗಿ ಕಾಣುವಂತೆ (ಆತ್ಮನಿಗೆ ಕಲ್ಪಿತಪರಿಣಾಮ), ೨-೮೫; (೬) ದಶಮನು (ಹತ್ತನೆಯವನು) ತಾನೇ ಅದರೂ ಹಾಗೆಂದು ಅರಿಯದಿರುವಂತೆ (ಅದ್ವಿತೀಯಾತ್ಮನನ್ನು ಅರಿತುಕೊಳ್ಳ ದಿರುವದು), ೩-೬೪, ೬೫; (೭) ನೀಲೋತ್ಪಲ ನೈದಿಲೆ ಕಪ್ಪು ಎಂಬ ವಾಕ್ಯದಲ್ಲಿ ವಿಶೇಷಣವಿಶೇಷ್ಯಭಾವದಿಂದ ಅವಿವಕ್ಷಿತವಾದ ಅರ್ಥವು ತೊಲಗುವಂತೆ (ತತ್ತ್ವಮಸಿವಾಕ್ಯದಲ್ಲಿ ಅವಿವಕ್ಷಿತವಾದ ಪದಾರ್ಥಗಳ ತ್ಯಾಗ), ೩-೨; (೮) ಬುದ್ಧಿಯಲ್ಲಿ ಹೋಮಮಾಡಿದಂತೆ (ವಿಧಿಯಿಲ್ಲದೆ ಕರ್ಮವನ್ನು ಮಾಡುವದು), ೧-೧೬; (೯) ಬೆಂಕಿಯು ತಂಪಿಗೆ ಅಂಗವಾಗದಂತೆ (ಜ್ಞಾನವು ಕರ್ಮಕ್ಕೆ ಅಂಗವಲ್ಲ), ೧-೭೯; ಬೆಂಕಿ ತನ್ನನ್ನು ತಾನೇ ಸುಡದಿರುವಂತೆ, (ಆತ್ಮನು ತನ್ನನ್ನು ತಾನು

ಅರಿಯಲಾರನು), ೨-೨೩; ಸುಡುವ ಬೆಂಕಿಯೂ ಸುಡಲ್ಪಡುವ ಕಟ್ಟಿಗೆಯೂ ಒಂದೇ ಕಡೆಯಿರುವಂತೆ (ಜ್ಞಾತೃಹಂಗಳಿಗೆ ಜ್ಞಾತೃಜ್ಞೇಯಭಾವ), ೩-೫೯; (೧೦) **ಮೃಗತೃಷ್ಣಿಕೆಯ** (ಬಿಸಿಲುಕುದುರೆಯ) ನೀರನ್ನು ಕುಡಿಯಲೆಳಸುವವನಂತೆ (ಭ್ರಾಂತಿಯಿಂದ ಕರ್ಮದಲ್ಲಿ ತೊಡಗುವವನು), ೧-೨೯; (೧೧) ಮೂಗಿನ ತುದಿಯಲ್ಲಿರುವದರ ಫಲದಂತೆ (ಅದಿರಾಡುತ್ತಿರುವ ಅವಿದ್ಯೆ), ೩-೧೧೦ ; (೧೨) ಮೊಲವು ಕಣ್ಣುಮುಚ್ಚಿದಂತೆ, (ಆತ್ಮಾನಾತ್ಮವಿಭಾಗಮಾತ್ರದಿಂದ ಮುಕ್ತಿಯನ್ನು ಬಯಸುವದು), ೪-೧೬; (೧೩) ಮೋಟುಮರವನ್ನು ಕಳ್ಳನೆಂದುಕೊಂಡು ಓಡುವಂತೆ (ಅಧ್ಯಾರೋಪದಿಂದ ಕರ್ಮಪ್ರವೃತ್ತಿ ), ೧-೬೦; ಮನುಷ್ಯನೆಂಬ ಬುದ್ಧಿಯಿಂದ ಮರವೆಂಬ ಬುದ್ಧಿ ತೊಲಗುವಂತೆ (ಬ್ರಹ್ಮಬುದ್ಧಿಯಿಂದ ಅಹಂಬುದ್ಧಿ ತೊಲಗುತ್ತದೆ ), ೨-೨೯; (೧೪) ಮಣ್ಣಿನಾನೆಯನ್ನು ಹುಡುಗರು ಆನೆಯೆಂದು ತಿಳಿಯುವಂತೆ (ದೇಹಾದಿಗಳನ್ನು ಆತ್ಮನೆಂದು ತಿಳಿಯುವದು), ೧-೫೯; (೧೫) **ರತ್ನವು** ಇದ್ದಂತಿದ್ದು ಪದಾರ್ಥಗಳನ್ನು ಬೆಳಗಿತೋರುವಂತೆ (ಆತ್ಮನು ಬುದ್ಧಿವೃತ್ತಿಗಳನ್ನು ಬೆಳಗುವದು), ೨-೬೪; (೧೬) **ಸುಪ್ತಪುರುಷನನ್ನು** ಎಬ್ಬಿಸುವ ವಾಕ್ಯದಂತೆ (ಅನಭಿಧೇಯನಾದ ಆತ್ಮನನ್ನು ಶಬ್ದವು ತಿಳಿಸುವದು), ೩-೧೦೫; ಕನಸಿನ ನಿಮಿತ್ತದಿಂದ ಎಚ್ಚರುವಂತೆ (ಶ್ರುತಿಯಿಂದ ಜ್ಞಾನ), ೪-೩೬; (೧೭) **ಸೂರ್ಯನು** ಕತ್ತಲೆಗೆ ಅಂಗವಲ್ಲದಿರುವಂತೆ (ಜ್ಞಾನವು ಕರ್ಮಕ್ಕೆ ಅಂಗವಲ್ಲ ), ೧-೭೯; ಸೂರ್ಯನು ನೀರಿನ ಪಾತ್ರೆಗಳಲ್ಲಿ ಅನೇಕವಾಗಿ ತೋರುವಂತೆ (ದೃಗ್ರೂಪನಾದ ಆತ್ಮನು ದೃಶ್ಯಗಳಿಂದ ಅನೇಕವಾಗಿ ನೋಡುತ್ತಿರುವದು), ೨-೪೭; (೧೮) **ಸೋಮಶರ್ಮನ ತಂದೆಯಂತೆ**, ಹುಟ್ಟದೆ ಇದ್ದ ಮಗನನ್ನು ಕಲ್ಪಿಸಿದ, ಆ ಬ್ರಾಹ್ಮಣನಂತೆ (ಕ್ರಿಯಾಕಾರಕಫಲಗಳನ್ನು ಆತ್ಮನಲ್ಲಿ ಕಲ್ಪಿಸುವದು), ೨-೫೧; (೧೯) **ಹಡಗಿನಚಲನೆಯಿಂದ** ದಡದ ಮರಗಳಿಗೆ ಚಲನೆಯನ್ನು ಕಲ್ಪಿಸುವಂತೆ (ಅಹಂಕಾರದ ವ್ಯಾಪಾರವನ್ನು ಆತ್ಮನಲ್ಲಿ ಕಲ್ಪಿಸುವದು) ೨-೬೩; (೨೦) ಹಾವು ಹಗ್ಗಕ್ಕೆ ಲಕ್ಷಣವಾಗುವಂತೆ (ಅಹಂಕಾರವು ತನ್ನ ಬಾಧದಿಂದಲೇ ಆತ್ಮನಿಗೆ ಲಕ್ಷಣ), ೩-೨೭; ಅಜ್ಞಾನವು ಹೋದ ಬಳಿಕ ಹಗ್ಗದ ಹಾವು ಹೋಗಿಬಿಡುವಂತೆ (ಅಹಂಕಾರವು ಹೋದರೆ ಮಮಕಾರವು ಹೋಗುವದು), ೨-೩೦; ಕೋಲಿನ ಹಾವು ಕೋಲಿನಲ್ಲಿ ಕೊನೆಗಾಣುವಂತೆ (ಸಂಸಾರವೆಲ್ಲವೂ ಜ್ಞಾನದಿಂದ ಆತ್ಮನೇ ಆಗುವುದು), ೪-೩೮; ಕಲ್ಪಿತವಾದ ಹಾವು ಹೋದರೂ ನಡುಕವುಳಿಯುವಂತೆ (ಜ್ಞಾನಿಗೂ ನಿವೃತ್ತಕರ್ಮವು ಉಳಿಯುವದು), ೪-೬೧; (೨೧) **ಹುಟ್ಟುಕುರುಡರು ಆನೆಯ ವಿಷಯದಲ್ಲಿ ಬೇರೆ ಬೇರೆ ಅಭಿಪ್ರಾಯಪಟ್ಟಂತೆ** (ಅದ್ವಿತೀಯಬ್ರಹ್ಮದಲ್ಲಿ ವಾದಿಗಳು ಬಗೆಬಗೆಯಾಗಿ ಕಲ್ಪಿಸುವದು), ೨-೯೩; (೨೨) **ಹೂಗಂಧಗಳು** ಮೈಗೇ ಸೇರಿದವೆಂದು ಭಾವಿಸುವಂತೆ (ದೇಹವು ಆತ್ಮನಾಗಿ ತೋರುವದು), ೨-೧೨;

(೨೩) ಒಬ್ಬ ಹೆಂಗಸಿನಲ್ಲಿ ಬೇರೆ ಬೇರೆ ದೃಷ್ಟಿಯಿಂದ ಬೇರೆ ಬೇರೆ ಕಲ್ಪನೆಗಳಾಗುವಂತೆ (ಒಬ್ಬ ಆತ್ಮನಲ್ಲಿ ವಿರುದ್ಧವಾದ ಕಲ್ಪನೆಗಳಾಗುವದು), ೨-೫೦.

**ದೃಷ್ಟಂ ಫಲಮ್ - ಈಶ.** ಕರ್ಮಕ್ಕೆ ಈ ಲೋಕದಲ್ಲಿಯೇ ಕಾಣಬರುವ ಬ್ರಹ್ಮವರ್ಚಸ್ಸೇ ಮುಂತಾದ ಫಲ, ೧ ; **ಪ್ರಶ್ನ.** ಈ ಲೋಕದಲ್ಲಿ ಕಾಣಬರುವ ಫಲ, ೨೧ ; **ಛಾಂ.** ಈ ಲೋಕದಲ್ಲಾಗುವ ಕರ್ಮಫಲ ಅಥವಾ ಉಪಾಸನೆ, ೩೩.

**ದೃಷ್ಟನಷ್ಟ- ಭ.ಗೀ.** ಕಂಡ ಸ್ವಲ್ಪ ಹೊತ್ತಿನಲ್ಲಿಯೇ ನಾಶವಾಗುವ ಹುಸಿಯಾದ ೬೧, ೮೯೫ ; **ಶಾಂ. ನಿ.** ತೋರಿಹಾರುವ, ಅಸತ್ಯವಾದ, ಗೀ. ಭಾ. ೧೫-೩ (ಭಾ. ಭಾ. ೩೫೩) ; ಸೂ. ಭಾ. ೨-೧-೧೪.

**ದೃಷ್ಟಹಾನಿರದೃಷ್ಟಕಲ್ಪನಾ ಚ - ಬ್ರ.ಸೂ-೧.** ಕಂಡಿರುವದನ್ನು ಬಿಡುವದು, ಕಾಣದೆ ಇರುವದನ್ನು ಕಲ್ಪಿಸುವದು, ೨೯೧, ೨೯೫.

**ದೃಷ್ಟವಿಪರೀತಕಲ್ಪನಾ - ಬ್ರ.ಸೂ-೧.** ಪ್ರತ್ಯಕ್ಷವಾಗಿ ಕಂಡಿರುವದಕ್ಕೆ ವಿರುದ್ಧವಾಗಿ ಕಲ್ಪಿಸುವದು, ೩೬೯.

**ದೃಷ್ಟಸಾಮಾನ್ಯಮ್ - ಬ್ರ.ಸೂ-೧.** ಕಂಡುಬಂದಿರುವದಕ್ಕೆ ಸಮನಾಗಿರುವದು, ೪೦೯.

**ದೃಷ್ಟಾನುಶ್ರವಿಕ - ಬ್ರ.ಸೂ-೧.** ಈ ಲೋಕದಲ್ಲಿ ಕಂಡಿರುವ ಪರಲೋಕದಲ್ಲಾಗುವದೆಂದು ಕೇಳಿರುವ (ಸುಖದುಃಖಗಳು), ೪೨೨, ೪೨೪.

**ದೃಷ್ಟಾನ್ತದಾರ್ಷ್ಟಾನ್ತಿಕೌ - ಬ್ರ.ಸೂ-೧.** ಯಾವದನ್ನು ಹೋಲಿಸಿದೆಯೋ ಯಾವದಕ್ಕೆ ಹೋಲಿಸಿದೆಯೋ ಅವು, ೨೦೦.

**ದೃಷ್ಟಾದೃಷ್ಟಾನಿ - ಕೇನ.** ಈ ಲೋಕದಲ್ಲಿ ಕಾಣುವ, ಮತ್ತು ಪರ ಲೋಕದ್ದಾದ್ದರಿಂದ ಕಾಣದಿರುವ ಶಾಸ್ತ್ರಮಾತ್ರದಿಂದ ತಿಳಿಯಬರುವ ಫಲಗಳು, ೭.

**ದೃಷ್ಟಾದೃಷ್ಟವಿಷಯಾಃ - ಕಠ.** ಈ ಲೋಕದ ಮತ್ತು ಪರಲೋಕದ ವಿಷಯಗಳು, ೭೫ ; ಇವನ್ನು 'ದೃಷ್ಟಾನುಶ್ರವಿಕವಿಷಯಾಃ' ಎಂದೂ ಕರೆಯುವದುಂಟು ; ೨.

**ದೃಷ್ಟಾದೃಷ್ಟೇಷ್ಟವಿಷಯಾಃ - ಮುಂ.** ಈ ಲೋಕದಲ್ಲಿಯೂ ಪರ ಲೋಕದಲ್ಲಿಯೂ ಬೇಕಾಗುವ ವಿಷಯಗಳು, ೧೧೨ ; **ಶಾಂ. ನಿ.** ಈ ಲೋಕದಲ್ಲಿ ಅನುಭವಿಸಬಹುದಾದ, ಮತ್ತು ಪರಲೋಕದಲ್ಲಿ ಅನುಭವಿಸಬೇಕಾಗಿರುವ, ಇಷ್ಟವಿಷಯಗಳು, ಮುಂ. ಭಾ. ೩-೨-೨.

**ದೃಷ್ಟಾದೃಷ್ಟ** - ಬೃಹ-೧. ಈ ಲೋಕದಲ್ಲಿ ಕಾಣುವ ಫಲವನ್ನೂ ಪರಲೋಕದಲ್ಲಿ ಪರೋಕ್ಷವಾಗಿ ಆಗುವ ಫಲವನ್ನೂ ಕೊಡುವ (ಧರ್ಮ), ೩೯೬ ; ಭ.ಗೀ. ಕಾಣುವ ಈ ಲೋಕದ ಮತ್ತು ಕಾಣದ ಪರಲೋಕದ, ೨೭೪, ೨೭೫, ೨೭೭, ೪೧೧, ೮೫೬, ೮೮೬, ೯೦೮.

**ದೃಷ್ಟಾದೃಷ್ಟಾನಿ** - ಕೇ. ಈ ಲೋಕದಲ್ಲಿ ಕಾಣುವ ಮತ್ತು ಪರಲೋಕದ್ದಾದ್ದರಿಂದ ಕಾಣದಿರುವ ಶಾಸ್ತ್ರಮಾತ್ರದಿಂದ ತಿಳಿಯಬರುವ ಫಲಗಳು, ೭.

**ದೃಷ್ಟಾರ್ಥಃ** - ಮಾಂ. ಇಹಲೋಕದ ಕರ್ಮಫಲ, ೬೯.

**ದೃಷ್ಟಾರ್ಥಕರ್ಮ** - ತೈ. ಈ ಲೋಕದಲ್ಲಿ ಆಗಬೇಕಾದ ಫಲಕ್ಕಾಗಿ ಮಾಡುವ ಶಾಸ್ತ್ರೀಯಕರ್ಮ ೧೯೨.

**ದೃಷ್ಟಾದೃಷ್ಟಾರ್ಥಕಮ್** - ಬೃಹ-೨. ಈ ಲೋಕದ ಮತ್ತು ಪರಲೋಕದ ಫಲಕ್ಕಾಗಿ ಮಾಡುವ ಕರ್ಮ, ೬೨.

**ದೃಷ್ಟಿಃ** - ಬ್ರಹ-೨. ಚಕ್ಷುರ್ದ್ವಾರಕವಾಗಿ ವ್ಯಾಪಾರಮಾಡುವ ಅಂತಃಕರಣ ವೃತ್ತಿ, ೪೬ ; ನಿತ್ಯಚೈತನ್ಯರೂಪದೃಷ್ಟಿ, ೪೬, ೨೨೫ ; ನೈ. ಅಂತಃಕರಣವೃತ್ತಿ ಶಬ್ದಾದಿರೂಪವಾದ ದೃಷ್ಟಿಯು ಆತ್ಮನಿಗೆ ಭಾಸ್ಯವಾಗಿದೆ, ೨-೯೧; ಆತ್ಮನು ದೃಷ್ಟಿಗೂ ದ್ರಷ್ಟೃವಾದ್ದರಿಂದ ಅವನನ್ನು ಅದು ನೋಡಲಾರದು, ೨-೯೨, ೩-೫೦; ದೃಷ್ಟಿಯು ಆತ್ಮನನ್ನು ಕಾಣಲಾರದೆಂಬುದಕ್ಕೆ ಕಾರಣ, ೩-೪೯.

**ದೃಷ್ಟಿವಿಧಿಃ** - ನೈ. ಹೀಗೆಂದು ಉಪಾಸನೆಮಾಡಬೇಕೆಂಬ ವಿಧಿವಾಕ್ಯವು. ಪ್ರತ್ಯಕ್ಷವಿರುದ್ಧವಾದದ್ದನ್ನು ಹೇಳಿದರೆ ಅಲ್ಲಿ ದೃಷ್ಟಿವಿಧಿಯನ್ನು ಕಲ್ಪಿಸಬೇಕು, ೩-೮೧.

**ದೃಷ್ಟಿವಿಶೇಷಃ** - ಛಾಂ. ಕರ್ಮಾಂಗಗಳಿಗೆ, ಸಂಸ್ಕಾರವನ್ನು ಮಾಡುವ ಒಂದೊಂದು ಭಾವನೆ, ೧೬೭.

**ದೃಷ್ಟಿಶ್ರುತಿಮತಿವಿಜ್ಞಾತಯಃ** - ಶಾಂ. ನಿ. ಜೀವನ ನೋಡುವಿಕೆ, ಕೇಳುವಿಕೆ, ಮನನ ಮಾಡುವಿಕೆ ಮುಂತಾದ ಧರ್ಮಗಳು ; ಅಂತಃಕರಣದ ವೃತ್ತಿಯಲ್ಲದೆ ಆತ್ಮನ ನಿತ್ಯಸ್ವರೂಪವೇ ಆಗಿರುವ ದೃಷ್ಟ್ಯಾದಿಗಳೂ ಇವೆ. ಬೃ. ಭಾ. ೧-೪-೧೦.

**ದೃಷ್ಟೇರ್ದ್ರಷ್ಟಾ** - ಬೃಹ-೨. ಲೌಕಿಕದೃಷ್ಟಿವೃತ್ತಿಯನ್ನು ವ್ಯಾಪಿಸಿಕೊಂಡಿರುವ ನಿತ್ಯಚೈತನ್ಯರೂಪನಾದ ಆತ್ಮ, ೪೬.

**ದ್ರವ್ಯಮ್** - ಕೇನ. ಗುಣಕ್ಕೂ ಕ್ರಿಯೆಗೂ ಆಧಾರವಾಗಿರುವ ವಸ್ತುರೂಪ,

**ದ್ರಷ್ಟಾ**- ಬ್ರ.ಸೂ-೧. ನೋಡುವವನು, ಚೇತನವಾದ ಆತ್ಮ, ಜೀವ, ೧೯೫, ೧೯೭, ೨೬೭ ; ಶಾಂ. ನಿ. ನೋಡುವ ಸಾಕ್ಷಿ ; ಒಂದು ದೇಹದಲ್ಲಿ ಇಬ್ಬರು ದ್ರಷ್ಟೃಗಳು ಇರಲಾರರು. ಸೂ.ಭಾ. ೧-೨-೨.

**ದ್ರಷ್ಟವ್ಯವಿಧಿಃ** - ಬೃಹ-೧. ಕೆಲವರು ಒಪ್ಪಿರುವ 'ಆತ್ಮಾ ದ್ರಷ್ಟವ್ಯಃ' ಎಂಬ ಉಪಾಸನಾವಿಧಿ, ೧೩೭.

**ದ್ರಷ್ಟೃದರ್ಶನದೃಶ್ಯಾನಿ** - ನೈ. ಗ್ರಾಹಕಗ್ರಹಣಗ್ರಾಹ್ಯಗಳು. ದ್ರಷ್ಟ್ರಾದಿಗಳು ತಮ್ಮನ್ನು ತಾವಾಗಲಿ ಒಂದನ್ನೊಂದಾಗಲಿ ಅರಿಯಲಾರವು, ಅವನ್ನು ಮತ್ತೊಂದೇ ಅರಿಯಬೇಕು, ೨-೧೦೬; ಅವಸ್ಥಾತ್ರಯದಲ್ಲಿ ಇವು ಆಗಮಾಪಾಯಿಗಳೆಂದು ತಿಳಿಯುವ ಸಾಕ್ಷಿಯೇ ಆತ್ಮವೆಂದು ತಿಳಿಯುವದು ಲಿಂಗಮಾತ್ರದಿಂದಾದ ಪರೋಕ್ಷಜ್ಞಾನವು, ೩-೫೭; ಅಹಂಕಾರವು ದ್ರಷ್ಟೃವನ್ನು ನೋಡಲಾರದು, ೨-೨೪; ದ್ರಷ್ಟೃವಿನ ಧರ್ಮವಾದದ್ದು ದ್ರಷ್ಟೃವಿನ ಬೋಧದಂತೆ ಅವನಿಗೆ ವಿಷಯವಾಗಲಾರದು, ೨-೨೫; ದ್ರಷ್ಟೃವು ಎಂದಿಗೂ ದೃಶ್ಯವಾಗಲಾರನು, ೨-೨೭; ದ್ರಷ್ಟೃವೂ ದೃಶ್ಯನಾಗುವನೆಂದರೆ ದೋಷ, ೨-೪೦; ಒಬ್ಬನೇ ಒಮ್ಮೆಗೆ ದ್ರಷ್ಟೃವೂ ದೃಶ್ಯವೂ ಆಗಿರಲಾರನು, ೨-೩೯; ಅಹಂಕಾರವು ದ್ರಷ್ಟೃದೃಶ್ಯಗಳೆರಡರ ಸಂಬಂಧವೂ ಉಳ್ಳದ್ದಾದ್ದರಿಂದ ದ್ರಷ್ಟೃವಾಗಿಯೂ ದೃಶ್ಯವಾಗಿಯೂ ತೋರುತ್ತದೆ, ೨-೪೬,೫೩; ಚಂಡಾಲಬುದ್ಧಿಗೂ ಬ್ರಾಹ್ಮಣಬುದ್ಧಿಗೂ ದ್ರಷ್ಟೃವಾಗಿರುವ ಚೈತನ್ಯವು ಒಂದೇ, ಎಲ್ಲಾ ಬುದ್ಧಿಗಳನ್ನೂ ನೋಡುತ್ತಿರುವದು ಅದೇ, ೨-೮೮, ೮೯; ಘಟಾದಿಗಳಿಗಿಂತ ದ್ರಷ್ಟೃ ಬೇರೆಯಾಗಿರುವಂತೆ ಅಹಂಬುದ್ಧಿಗಿಂತಲೂ ಅಹಂಗಮ್ಯದುಃಖಿಗಿಂತಲೂ ಆತ್ಮನು ಬೇರೆ, ೨-೧೦೦.

**ದಾರ್ಷ್ಟಾನ್ತಿಕಮ್** - ನೈ. ಏತಕ್ಕೆ ದೃಷ್ಟಾಂತವನ್ನು ಕೊಟ್ಟಿದೆಯೊ, ಅದು, ೧-೫೭, ೩-೬೫.

**ದಾರ್ಷ್ಟಾನ್ತಿಕಃ** - ಬ್ರ.ಸೂ-೧. ಯಾವದಕ್ಕೆ ಹೋಲಿಸಿದೆಯೋ ಅದು, ೪೩೩, ೪೩೫.

**ದ್ವಯಪಾರೋಕ್ಷ್ಯೇ** - ನೈ. ತತ್ತ್ವಂಪದಗಳಿಗೆ ದ್ವೈತಪರೋಕ್ಷತ್ವಗಳಿಲ್ಲದ ಆತ್ಮನೇ ತಾತ್ಪರ್ಯ, ೩-೭೬.

**ದ್ವಾದಶಕರಣಾನಿ** - ಭ.ಗೀ. ಹತ್ತು ಇಂದ್ರಿಯಗಳು, ಮನಸ್ಸು, ಬುದ್ಧಿ, ೧೦೨೯ ; ಶಾಂ. ನಿ. ಜ್ಞಾನೇಂದ್ರಿಯ ಐದು, ಕರ್ಮೇಂದ್ರಿಯ ಐದು, ಹೀಗೆ ಹತ್ತು ಇಂದ್ರಿಯಗಳು, ಮನಸ್ಸು ಬುದ್ಧಿ - ಎಂಬ ಹನ್ನೆರಡು ಕರಣಗಳು, ಗೀ. ಭಾ. ೧೮-೪೮.

**ದ್ವಾದಶವಿಧಂ ಕರಣಮ್** - ಬೃಹ-೨. ಲಿಂಗರೂಪವಾಗಿರುವ ಬುದ್ಧ್ಯಾದಿಯಾದ ಹನ್ನೆರಡು ಕರಣಗಳು, ೨೨೬.

**ದ್ವೈತಮ್** - ನೈ. ನಾನಾತ್ವರೂಪವಾದ ಅನಾತ್ಮ. ಅಹಂಬುದ್ಧಿಯು ತೊಲಗಿದರೆ ದ್ವೈತವು ಉಳಿಯುವದಿಲ್ಲ, ೨-೩೦; ದ್ವೈತವು ಕಲ್ಪಿತ, ೨-೪೪,೪೫; ಕೂಟಸ್ಥನಾದ ಆತ್ಮನು ಒಂದಿಷ್ಟೂ ದ್ವೈತವನ್ನು ಸೋಂಕುವದಿಲ್ಲ, ೨-೬೯; **ಅನಾತ್ಮವಾದ** ದ್ವೈತೇಂದ್ರಜಾಲವು ಅಜ್ಞಾನದಿಂದುಂಟಾಗಿ ಇತರೇತರಸ್ವಭಾವಾ-ಪೇಕ್ಷಸಿದ್ಧವಾಗಿದೆ, ಸ್ವತಃಸಿದ್ಧವಲ್ಲ, ೨-೧೧೨, ೧೧೪; **ಅಜ್ಞಾನವು** ಹೋದರೆ ದ್ವೈತಾನರ್ಥವಿರುವದಿಲ್ಲ, ೩-೧; ದ್ವೈತಪ್ರಪಂಚವಿಲ್ಲದ ಆತ್ಮನನ್ನು ತತ್ತ್ವಮಸ್ಯಾದಿ ವಾಕ್ಯವು ಅಪರೋಕ್ಷವಾಗಿ ತಿಳಿಸುತ್ತದೆ, ೩.-೪೭.

**ದ್ವೈತಿನಃ** - ನೈ. ಸಾಧಕನು ಬೇರೆ, ಪರಮೇಶ್ವರನು ಬೇರೆ ಎಂಬ ವಾದಿಗಳು. ಮುಕ್ತಿಯಲ್ಲಿ ಪರಮಾತ್ಮನನ್ನು ಪಡೆಯುವದಕ್ಕೆ ಅವರಿಗೂ ಜ್ಞಾನಾಭ್ಯಾಸವು ಸಾಧನವಾದೀತೇ ಹೊರತು ಕರ್ಮವು ಸಾಧಕವಾಗಲಾರದು, ೧-೭೨.

**ದ್ವಿಚನ್ದ್ರಾದಿಃ , ಅನೇಕಶ್ಚನ್ದ್ರಃ** - ಭ.ಗೀ. ಇಬ್ಬರು ಚಂದ್ರರೇ ಮುಂತಾದ ಹುಸಿತೋರಿಕೆ, ೮೨೯, ೧೦೩೨, ೧೯೯೧ ; **ಶಾಂ.** ನಿ. ದೋಷದಿಂದ ಕಾಣುವ ಇಬ್ಬರು ಚಂದ್ರರೇ ಮುಂತಾದ ಹುಸಿತೋರಿಕೆ, ಗೀ.ಭಾ.೧೮-೪೮ (ಭಾ. ಭಾ. ೫೫೦).

**ದ್ವಿರೂಪ** - ಬ್ರ.ಸೂ-೧. ಸೋಪಾಧಿಕ, ನಿರುಪಾಧಿಕ - ಎಂಬ ಎರಡು ರೂಪದ (ಬ್ರಹ್ಮ), ೯೦.

**ದುಃಖಮ್** - ನೈ. ಆತ್ಮಾನವಬೋಧದಿಂದಲೇ ದುಃಖ (ಅವ); ಆತ್ಮನು ದುಃಖಿ ಎಂದರೆ ಅವನಿಗೆ ಮತ್ತೊಬ್ಬನು ಸಾಕ್ಷಿಯಿಲ್ಲ; ಸಾಕ್ಷಿಗೆ ದುಃಖವು ಸಲ್ಲದು, ೨-೭೬; ತತ್ತ್ವಮಸಿವಾಕ್ಯದಲ್ಲಿ ತತ್ತ್ವಂಪದಗಳ ಸಾಮಾನಾಧಿಕರಣ್ಯದಿಂದ ಆತ್ಮನನ್ನು ಅರಿತುಕೊಳ್ಳುವಾಗ ಆ ಪದಗಳಿಂದ ಆತ್ಮನಲ್ಲಿ ದುಃಖಿತ್ವವೂ ಅನಾತ್ಮತ್ವವೂ ತೊಲಗುವವು, ೩-೨.

**ದೇವಃ** - **ಕಠ.** ದೇವತೆ, ೪೦, ೧೧೩, ೧೨೦ ವಿರಾಟ್ಪುರುಷ, ೨೮; ಪರಮಾತ್ಮ, ೬೪, ೭೭; **ಬೃಹ-೨.** ಸರ್ವದೇವಾತ್ಮನಾದ (ಪ್ರಾಣ), ೧೦೪.

**ದೇವತಾತ್ಮಾ** - ಬ್ರ.ಸೂ-೧. ದೇವತೆಯ ರೂಪನಾದ ಆತ್ಮ, ದೇವತೆ, ೧೩೫, ೧೩೬, ೧೩೮, ೧೪೧, ೧೭೬, ೧೭೭, ೧೮೬, ೧೮೮, ೧೯೦, ೨೮೩.

**ದೇವತಾತ್ಮಗಮನಮ್ - ಈಶ.** ದೇವತೆಯ ಸ್ವರೂಪವನ್ನೇ ಪಡೆಯುವದು ೨೬ ; **ಶಾಂ. ನಿ.** ದೇವತೆಯೇ ತಾನಾಗಿ ಬಿಡುವದು, ಈ. ಭಾ. ೧೧.

**ದೇವತಾತ್ಮಭಾವಃ - ಬೃಹ-೧.** ದೇವತೆಗಳ ಸ್ವರೂಪವನ್ನು ಪಡೆಯುವದು, ೨೧೦.

**ದೇವತಾಪ್ಯಯಃ - ಐತ.** ದೇವತೆಗಳಲ್ಲಿ ಒಂದಾಗಿ ಹೋಗುವದು ೧೯, ೩೭ ; **ಶಾಂ. ನಿ.** ದೇವತೆಗಳಲ್ಲಿ ಒಂದಾಗಿಬಿಡುವದು, ಐ. ಭಾ. ೧-೧ (ಭಾ. ಭಾ. ೩೭).

**ದೇವತಾನಾಮೇಕತ್ವಂ ನಾನಾತ್ವಂ ಚ - ಬೃಹ-೨.** ದೇವತೆಗಳು ತಮ್ಮ ತಮ್ಮ ರೂಪದಿಂದ ಅನೇಕರು, ಪ್ರಾಣರೂಪದಿಂದ ಒಬ್ಬನೂ ಆಗಿರುವದು, ೧೦೪.

**ದೇವತಾರೂಪಮ್ - ಛಾಂ.** ಜೀವನ ಪರಮಾತ್ಮಸ್ವರೂಪ, ೪೯೫, ೪೯೬, ೬೨೨.

**ದೇವಯಾನಃ - ಮುಂ.** ದೇವಲೋಕಕ್ಕೆ ಹೋಗುವ ಮಾರ್ಗ, ಉತ್ತರಾಯಣ, ೧೦೧.

**ದೇವಯಾನಪಿತೃಯಾಣೌ - ಬ್ರ.ಸೂ-೨.** ಉಪಾಸಕರು ಅನುಸರಿಸುವ ಅರ್ಚಿರಾದಿಮಾರ್ಗ ಅಥವಾ ಉತ್ತರಮಾರ್ಗ, ಕೇವಲಕರ್ಮಿಗಳಿಗೆ ಆಗುವ ಧೂಮಮಾರ್ಗ ಅಥವಾ ದಕ್ಷಿಣ ಮಾರ್ಗ ಎಂಬ ಗತಿಗಳು. ಇವುಗಳಿಗೂ ಗೀತೋಕ್ತ ಮಾರ್ಗಗಳಿಗೂ ವಿರೋಧಪರಿಹಾರ, ೨-೫೬೩.

**ದೇವಯಜ್ಞಃ - ಭ.ಗೀ.** ಗೃಹಸ್ಥನು ಮಾಡಬೇಕಾದ ಪಂಚಮಹಾಯಜ್ಞಗಳಲ್ಲಿ ಒಂದು, ೧೭೪.

**ದೇವಲೋಕಃ - ಬೃಹ-೧.** ಉಪಾಸನೆಯಿಂದ ಸಿಕ್ಕುವ ದೇವತೆಗಳ ಲೋಕ, ಬ್ರಹ್ಮಲೋಕ, ೨೩೧, ೨೬೭ ; **ಬೃಹ-೨.** ಉಪಾಸನೆಯಿಂದ ದೊರೆಯುವ ಬ್ರಹ್ಮಾಂತಲೋಕ, ೩೨, ೫೬.

**ದೇವಾಸುರಾಃ - ಬೃಹ-೧.** ದೇವತೆಗಳೂ ಅಸುರರೂ, ಸ್ವಾಭಾವಿಕಕರ್ಮ ಜ್ಞಾನವಾಸನೆಗಳಿಂದಲೂ ಶಾಸ್ತ್ರೀಯಕರ್ಮಜ್ಞಾನಗಳಿಂದಲೂ ಆದ ಭಾವನೆಯುಳ್ಳ ವಾಗಾದಿಕರಣಗಳು, ೪೫.

**ದೇವಾದಿಸ್ಥಾನಮ್ - ಭ.ಗೀ.** ಪ್ರವೃತ್ತಿಧರ್ಮದಿಂದ ಪಡೆಯುವ ದೇವತಾ ಸಾಯುಜ್ಯವೇ ಮುಂತಾದದ್ದು, ೫.

**ದೇಶಕಾಲನಿಮಿತ್ತಾನ್ತರಿತ - ಬೃಹ-೧.** ದೇಶ, ಕಾಲ, ನಿಮಿತ್ತ - ಇವುಗಳ ವ್ಯವಧಾನವಿಲ್ಲದ (ಬ್ರಹ್ಮಪ್ರಾಪ್ತಿ), ೧೭೦.

**ದೇಶಕಾಲನಿಮಿತ್ತಾದ್ಯನೃತಾಭಿಸಂಧಿಃ - ಛಾಂ.** ಕರ್ಮಕ್ಕೆ ಫಲವಾಗುವದಕ್ಕೆ ದೇಶಕಾಲಾದಿಗಳು ಬೇಕೆಂಬ ಮಿಥ್ಯಾವಸ್ತುವಿನ ಭಾವನೆ, ೫೩೪.

**ದೇಹಃ, ಶರೀರಮ್ - ಬ್ರ.ಸೂ-೨.** ಇಂದ್ರಿಯವ್ಯವಹಾರಕ್ಕೆ ಆಶ್ರಯವಾದ, ಕೈಕಾಲು, ದೇಹವು ಆತ್ಮನೆಂದು ಅಧ್ಯಾಸವಾದರೇ ಇಂದ್ರಿಯಗಳ ವ್ಯಾಪಾರ, ೧-೫ ; ಅಶರೀರತ್ವವೇ ಮೋಕ್ಷವು, ೧-೪೩ ; ಸಶರೀರತ್ವವು ಮಿಥ್ಯಾಜ್ಞಾನಕೃತ, ೧-೫೮ ; ದೇಹಸಂಬಂಧದಿಂದ ಜ್ಞಾನವು ಮರೆಯಾಗಿದೆ, ೨-೨೬೧ ; ದೇಹಾದಿಗಳೇ ತಾವೆಂಬ ತಪ್ಪುತಿಳಿವೇ ದೇಹಸಂಬಂಧ, ೨-೧೬೫ ; ದೇಹಾದಿಗಳಲ್ಲಿ ಆತ್ಮಾಭಿಮಾನವು ಗೌಣವಲ್ಲ, ಮಿಥ್ಯೆ, ೧-೫೯ ; ಅವಿವೇಕಾವಸ್ಥೆಯಲ್ಲಿ ಶರೀರಾದಿಗಳೆಂಬ ಉಪಾಧಿಗಳಿಂದ ಆತ್ಮನು ವಿವಿಕ್ತನಾಗಿ ತೋರುವದಿಲ್ಲ, ೧-೨೬೬; ಜೀವನು ಶರೀರದಲ್ಲಿಯೇ ಇರುವದರಿಂದ ಶಾರೀರನು, ಈಶ್ವರನು ದೇಹದಲ್ಲಿದ್ದರೂ ಸರ್ವವ್ಯಾಪಿ, ೧-೧೫೪ ; ಪರಮಾತ್ಮನೇ ದೇಹಾದ್ಯುಪಾಧಿ ಪರಿಚ್ಛಿನ್ನನಾದಾಗ ಶಾರೀರನೆನಿಸುವನು, ೧-೧೫೮ ; ಜೀವನು ದೇಹಬೀಜವನ್ನು ತೆಗೆದುಕೊಂಡೇ ದೇಹಾಂತರವನ್ನು ಹೊಂದುತ್ತಾನೆ, ೨-೨೧೪ ; ನೈ. ದೇಹವನ್ನು ಸ್ವೀಕರಿಸುವದಕ್ಕೆ ಧರ್ಮಾಧರ್ಮಗಳೇ ಕಾರಣ (ಅವ) ; ಅನ್ನಕಾರ್ಯವಾಗಿರುವದರಿಂದ ದೇಹವು ಅನಾತ್ಮ , ೨-೧೧; ಭ್ರಾಂತಿಯಿಂದ ಆತ್ಮವಾಗಿ ತೋರಿದರೂ ದೇಹವು ಸರ್ವಸಾಧಾರಣವಾದ್ದರಿಂದ ಅದನ್ನು ಅನಾತ್ಮವೆಂದು ತಿಳಿಯಬೇಕು, ೨-೧೨ ರಿಂದ ೧೪; ಸೂಕ್ಷ್ಮದೇಹವು ವಿಷಯವಾಗಿರುವದೇ ಮುಂತಾದ ಕಾರಣಗಳಿಂದ ಅನಾತ್ಮ , ೨-೨೧, ೨೨; ದೇಹಾದಿಬುದ್ಧ್ಯಂತವಾಗಿರುವದು ಆತ್ಮವೊ, ಅನಾತ್ಮವೊ - ಎಂಬ ಸಂಶಯವಿದೆ, ೪-೪ ರಿಂದ ೬; ದೇಹಾದಿಯು ಅನಾತ್ಮ, ೨-೧೯, ೨೦.

**ದೇಹಪಾತಃ, ಶರೀರಪಾತಃ - ಛಾಂ.** ದೇಹವು ಬಿದ್ದುಹೋಗುವದು, ಸಾವು, ೫೨೭, ೫೨೮, ೫೩೯.

**ದೇಹಮಾತ್ರಾತ್ಮವಾದಃ - ಬ್ರ.ಸೂ-೧.** ದೇಹವೇ ಆತ್ಮನೆಂಬ ವಾದ, ೪೨.೭.

**ದೇಹಾದಿಸಂಘಾತಃ, ದೇಹೇನ್ದ್ರಿಯಮನೋಬುದ್ಧಿಸಂಘಾತಃ - ಬ್ರ.ಸೂ-೧.** ದೇಹೇಂದ್ರಿಯಗಳ ಗುಂಪು, ೭೧, ೨೬೪ ; **ಶಾಂ. ನಿ.** ಶರೀರ, ಇಂದ್ರಿಯಗಳು - ಇವೆರಡೂ ಒಂದರೊಡನೊಂದು ಸೇರಿಕೊಂಡು ಆತ್ಮನಿಗಾಗಿ ಕೆಲಸಮಾಡುವ ಗುಂಪು, ಮಾಂ. ಕಾ. ಭಾ. ೩-೪.

**ದೇಹಾದಿಸಙ್ಘಾತಃ - ಕಠ.** ದೇಹ, ಇಂದ್ರಿಯಗಳು, ಪ್ರಾಣ, ಮನಸ್ಸು ಇವುಗಳು ಒಟ್ಟುಗೂಡಿ ಕೆಲಸ ಮಾಡುವ ಗುಂಪು, ೧೧೦, ೧೧೫.

**ದೇಹಾದಿಸಙ್ಘಾತಾಃ - ಮಾಂ.** ದೇಹ, ಇಂದ್ರಿಯಗಳು - ಇವು ಒಟ್ಟುಗೂಡಿ ಆಗಿರುವ ಗುಂಪುಗಳು, ೧೩೩, ೧೪೭.

**ದೇಹೇನ್ದ್ರಿಯಮನೋಬುದ್ಧ್ಯುಪಾಧಯಃ - ಶಾಂ. ನಿ.** ಆತ್ಮನನ್ನು ಅರಿಯುವದಕ್ಕೆ ಸಾಧಕವಾಗಿರುವ, ಆತ್ಮನಸ್ವರೂಪದಲ್ಲಿ ಸೇರದೆ ಇರುವ ಸುತ್ತುಗಟ್ಟುಗಳು, ಇವುಗಳಿಂದ ಆತ್ಮನು ಪರಿಚ್ಛಿನ್ನನಾಗಿರುವಂತೆ ಕಾಣುತ್ತಾನೆ, ಸೂ. ಭಾ. ೧-೨-೬.

**ದೇಹೇನ್ದ್ರಿಯಸಂಘಾತಃ, ದೇಹಾದಿಸಂಘಾತಃ - ಭ.ಗೀ.** ದೇಹವೂ ಇಂದ್ರಿಯಗಳೂ ಒಟ್ಟುಗೂಡಿ ಆತ್ಮನಿಗಾಗಿ ಕೆಲಸಮಾಡುವ ಗುಂಪಾಗಿರುವದು ೩.೫೦, ೩.೬೦, ೧೧೩೮, ೧೧೩೯, ೧೧೪೦, ೧೧೪೧.

**ದೇಹಾತ್ಮಭಾವಃ - ಮುಂ.** ದೇಹವೇ ತಾನೆಂಬ ಅರಿವು, ೯೨ ; **ಶಾಂ. ನಿ.** ದೇಹವೇ ತಾನೆಂಬ ಅರಿವು, ಮುಂ. ಭಾ. ೨-೧-೨.

**ದೇಹಾದ್ಯುಪಾಧಿಭೇದಾಃ - ಮುಂ.** ದೇಹ, ಪ್ರಾಣ, ಮನಸ್ಸು - ಮುಂತಾದ ಆತ್ಮನ ಉಪಾಧಿಗಳು, ೫೪.

**ದೇಹಾನ್ತರಸಂಬನ್ಧಃ - ಭ.ಗೀ.** ಜೀವನಿಗೆ ಆಗುವ ಮತ್ತೊಂದು ದೇಹದ ಸಂಬಂಧ, ೪೫.

**ದೇಹಾತ್ಮದರ್ಶನಮ್, ಶರೀರಾತ್ಮಭಾವಃ - ಛಾಂ.** ದೇಹವೇ ತಾನೆಂಬ ತಿಳಿವಳಿಕೆ, ೬೫೯, ೬೭೬.

**ದೋಷಾಃ - ಬ್ರ.ಸೂ-೧.** ಅವಿದ್ಯಾರಾಗಾದಿಗಳು, ೨೨೫ ; ತರ್ಕ ದೋಷಾದಿಗಳು, ೪೨೬, ೪೬೨, ೪೬೩, ೪೬೬.

**ದೈವಂ ವಿತ್ತಮ್ - ಈಶ.** ಉಪಾಸನೆ, ೨೦, ೩೩ ; **ಬೃಹ-೧.** ಉಪಾಸನೆ, ೧೯೮, ೨೬೦ ; **ಬೃಹ-೨.** ಹಿರಣ್ಯಗರ್ಭಾಂತವಾದ ದೇವತೆಗಳ ವಿದ್ಯೆ, ೫೩ ; **ಶಾಂ. ನಿ.** ಉಪಾಸನೆ, ದೇವತ್ವವನ್ನು ಕೊಡುವ ಸಾಧನ, ಈ. ೧೩.

**ದ್ವೈತಪ್ರಪಂಚಃ - ಮಾಂ.** ನಾನಾರೂಪದಲ್ಲಿ ಹರಡಿಕೊಂಡಿರುವ ಅನಾತ್ಮ, ೨, ೩.

**ದ್ವೈತರೂಪಮ್ - ಈಶ.** ಬಗೆಬಗೆಯಾಗಿ ಭಿನ್ನವಾಗಿರುವ ಜಗತ್ತು, ೩.

**ದ್ವೈತಲಕ್ಷಣ - ಬ್ರ.ಸೂ-೧.** ದ್ವೈತವನ್ನು ತೋರಿಸುವ (ಅವಿದ್ಯೆ), ೨೬೪.

**ದ್ವೈತಲಕ್ಷಣಾ ಅವಿದ್ಯಾ - ಶಾಂ. ನಿ.** ದ್ವೈತವನ್ನು ತಿಳಿಸುವ ತಪ್ಪು ತಿಳಿವಳಿಕೆ. ಸೂ. ಭಾ. ೧-೩-೧೯.

**ದ್ವೈತವಿಜ್ಞಾನೋಪಮರ್ದಃ, ದ್ವೈತವಿಜ್ಞಾನೋನ್ಮಥನಮ್ - ಬ್ರ.ಸೂ-೧.** (ವಿದ್ಯೆಯಿಂದ) ದ್ವೈತದ ತಿಳಿವಳಿಕೆಯನ್ನು ನಾಶಗೊಳಿಸುವಿಕೆ, ೩೮.

**ದ್ವೈತಿನಃ - ಬ್ರ.ಸೂ-೧.** ದ್ವೈತವು ಸತ್ಯವೆಂಬ ವಾದಿಗಳು (ಸಾಂಖ್ಯರು, ಯೋಗದರ್ಶನದವರು ಮುಂತಾದವರು), ೪೦೭ ; **ಮಾಂ.** ನಾನಾತ್ವವೇ ಪರಮಾರ್ಥವೆನ್ನುವ ವಾದಿಗಳು, (ಕಪಿಲ, ಕಣಾದ, ಬುದ್ಧ , ಜಿನ - ಇವರ ಅನುಯಾಯಿಗಳು), ೧೩೪, ೧೬೦, ೧೬೧, ೧೬೩, ೨೧೨.

**ದ್ವೈತೋಪಶಮಃ - ಮಾಂ.** ದ್ವೈತವು ಜ್ಞಾನದಿಂದ ಇಲ್ಲವಾಗುವದು, ೧೩., ೭೪.

**ದ್ವೈತೈಕತ್ವಮ್ - ಬೃಹ-೨.** ಎಲ್ಲಾ ದ್ವೈತದೊಡನೆ ಒಂದಾಗಿರುವ ಹಿರಣ್ಯಗರ್ಭನ ಸ್ಥಿತಿ, ೨೬, ೩೯.

# ಧ

**ಧರ್ಮಃ - ಕಠ.** ಆತ್ಮ, ೩೫, ೩೭, ೧೩೦ ; **ಬೃಹ-೧.** ಅನುಷ್ಠಾನ ಮಾಡುವ ಶಾಸ್ತ್ರಾರ್ಥ, ೧೮೪, ೩೬೭ ; **ಮಾಂ.** ಪುಣ್ಯಕರ್ಮ, ೨೩೪ ; **ಶಾಂ. ನಿ.** (೧) ಪುಣ್ಯ (೨) ವಸ್ತುವಿನ ವಿಶೇಷಣ (೩) ಜೀವ, ಕ. ಭಾ. ೧-೧-೨೧ (ಭಾ. ಭಾ. ೩೫).

**ಧರ್ಮಜ್ಞಾನವೈರಾಗ್ಯೈಶ್ವರ್ಯಾಣಿ - ಮುಂ.** ಹಿರಣ್ಯಗರ್ಭನಲ್ಲಿರುವ ಮಿಗಿಲಿಲ್ಲದ ಧರ್ಮಾದಿಗಳು, ೭ ; **ಶಾಂ. ನಿ.** ಹಿರಣ್ಯಗರ್ಭನಲ್ಲಿ ಎಲ್ಲರಿಗಿಂತಲೂ ಮಿಗಿಲಾಗಿರುವ ಧರ್ಮಾದಿಗಳು, ಮುಂ. ಭಾ. ೧-೧-೧.

**ಧರ್ಮಜಿಜ್ಞಾಸಾ - ಬ್ರ.ಸೂ-೧.** ಧರ್ಮದ ವಿಚಾರ, ೧೧, ೧೨, ೧೩, ೨೮, ೫೫.

**ಧರ್ಮತಾರತಮ್ಯಮ್ - ಬ್ರ.ಸೂ-೧.** ಸುಖಕ್ಕೆ ಕಾರಣವಾಗಿರುವ ಧರ್ಮದ ತಾರತಮ್ಯ , ೪೨.

**ಧರ್ಮಧರ್ಮಿತ್ವೇ** - ನೈ. ಬುದ್ಧಿಯ ಬೋದ್ಧೃತ್ವ, ಅಹಂತ್ವ- ಇವುಗಳಿಗೆ ಧರ್ಮ ಧರ್ಮಿಭಾವವುಂಟು. ಆತ್ಮನಲ್ಲಿ ಈ ಭೇದವಿಲ್ಲ, ೩-೧೩.

**ಧರ್ಮದ್ವಯಮ್** - ಭ.ಗೀ. ಪ್ರವೃತ್ತಿ, ನಿವೃತ್ತಿ- ಎಂಬ ಎರಡು ವೇದೋಕ್ತ ಧರ್ಮಗಳು, ೨.

**ಧರ್ಮಸ್ಕನ್ಧಾಃ** - ಛಾಂ. ಧರ್ಮವನ್ನು ಮಾಡುವ ಆಶ್ರಮಗಳು, ೧೭೬.

**ಧರ್ಮಾಃ** - ಮಾಂ. ಜೀವರು, ೧೨೮, ೨೧೩, ೨೧೪, ೨೨೭, ೨೯೭, ೩೦೨, ೩.೫೧, ೩೫೨, ೩೫೩, ೩೫೫, ೩೬೧, ೩೬೩, ೩೬೪.

**ಧರ್ಮಾಧರ್ಮೌ** - ಬ್ರ.ಸೂ-೧. ಮಾಡಬೇಕೆಂದು ವಿಧಿಸಿರುವ, ಧರ್ಮ, ಮಾಡಬಾರದೆಂದಿರುವ ಅಧರ್ಮ, ೫೮, ೧೬೧, ೧೯೭ ; ಭ.ಗೀ. ಪಾಪಪುಣ್ಯಗಳು, ೭, ೯, ೪೫, ೮೧, ೨೩೬, ೨೩೭, ೨೭೭, ೫೫೬, ೮೯೨, ೮೯೪, ೯೩೭, ೧೦೨೫, ೧೦೩೦, ೧೧೨೪, ೧೧೩೦ ; ನೈ. ಧರ್ಮಾಧರ್ಮಗಳಿಂದ ದೇಹಸ್ವೀಕಾರವಾಗುತ್ತದೆ. (ಅವ), ಅವುಗಳನ್ನು ಅನುಭವಿಸಿ ಮುಗಿಸಬೇಕು, ೧-೧೨.

**ಧರ್ಮಾಧರ್ಮಾದಿಪಾಪಮ್** - ಈಶ. ಪುಣ್ಯಪಾಪಗಳೆಂಬ ಪಾಪ ; ಆತ್ಮಜ್ಞಾನದ ದೃಷ್ಟಿಯಿಂದ ಧರ್ಮವೂ ಪಾಪವೇ, ೧೯.

**ಧರ್ಮಾಧರ್ಮಸಾಧನತತ್ಫಲಲಕ್ಷಣ** - ಬೃಹ-೧. ಪುಣ್ಯಪಾಪಗಳೆಂಬ ಸಾಧನಗಳು, ಅವುಗಳ ಫಲಗಳು - ಎಂಬ ರೂಪದ ಸಂಸಾರ, ೧೪೯.

**ಧಾತುಸಾಮ್ಯಮ್** - ಬ್ರ.ಸೂ-೧. ಚಿಕಿತ್ಸೆಯಿಂದಾದ ವಾತಪಿತ್ತಶ್ಲೇಷ್ಮಗಳ ಸಾಮ್ಯ, (ಶರೀರದಿಂದೊಡಗೂಡಿದ ಜೀವನಿಗೇ ಸಂಸ್ಕಾರವೆಂಬುದಕ್ಕೆ ದೃಷ್ಟಾಂತ), ೪೯.

**ಧಾಮಾನಿ** - ಮಾಂ. ಎಚ್ಚರ, ಕನಸು, ನಿದ್ರೆ - ಎಂಬ ಅವಸ್ಥೆಗಳು, ೨೮ ; ಶಾಂ. ನಿ. ಅವಸ್ಥೆಗಳು, ಮಾಂ. ಕಾ. ಭಾ. ೧-೫.

**ಧಾರಣಮ್** - ತೈ. ಮನಸ್ಸನ್ನು ಉತ್ತಮಧ್ಯೇಯದಲ್ಲಿ ನಿಲ್ಲಿಸಿಕೊಳ್ಳುವದು, ೮೨.

**ಧಾರಣಾಯೋಗಃ** - ಭ.ಗೀ. ಪ್ರಾಣವನ್ನು ಮೂರ್ಧಪ್ರದೇಶದಲ್ಲಿ ಧಾರಣೆ ಮಾಡುವ ಯೋಗ, ೫೪೩ ; ಶಾಂ. ನಿ. ಸಗುಣಬ್ರಹ್ಮವನ್ನು ಉಪಾಸನೆಮಾಡುವದು, ಸ್ಥಾನ ವಿಶೇಷದಲ್ಲಿ ಪ್ರಾಣಧಾರಣೆಯನ್ನು ಮಾಡುವದು, ಗೀ. ಭಾ. ೯ರ ಅವತರಣಿಕೆ.

**ಧ್ಯಾನಮ್** - ಬ್ರ.ಸೂ-೧. ಪ್ರತ್ಯಯವನ್ನು ಮತ್ತೆ ಮತ್ತೆ ಆವೃತ್ತಿ ಮಾಡುವ ಮಾನಸಕ್ರಿಯೆ, ೪೯ ; ತೈ. ಈಶ್ವರಾದಿಗಳನ್ನು ಚಿಂತಿಸುವದು, ೮೨ ; **ಶಾಂ. ನಿ.** (೧) ಭಾವನೆ, ಉಪಾಸನೆ (೨) ತತ್ತ್ವದರ್ಶನಕ್ಕೆ ಉಪಾಯವಾದ ಏಕಾಗ್ರತೆಯಿಂದ ಕೂಡಿದ ಚಿಂತನ, ನಿದಿಧ್ಯಾಸನ.

**ಧ್ಯಾನಮ್, ಧ್ಯಾನಯೋಗಃ** - ಭ.ಗೀ. ಜ್ಞಾನಕ್ಕೆ ಬೇಕಾದ ನಿದಿಧ್ಯಾಸನ, ೩.೭೨, ೩.೭೬, ೩.೭೭, ೩.೮೦, ೩.೮೪, ೬.೧೭, ೭.೪೧, ೮.೨೧, ೮.೨೨, ೧೧೦೨.

**ಧ್ಯಾನಾಹಾರಾಃ** - **ಛಾಂ.** ಧ್ಯಾನವೇ ಆಹಾರವಾಗಿ, ಮತ್ತೆ ಯಾವ ಆಹಾರವೂ ಇಲ್ಲದಿರುವವರು, ೪೮೭.೦

**ಧ್ವಾನ್ತಮ್** - ನೈ. ಅಜ್ಞಾನ. ಬುದ್ಧಿಸಾಕ್ಷಿಯೇ ಪರಮಾತ್ಮನೆಂದು ಅರಿತು ಕೊಂಡರೆ ಅಜ್ಞಾನನಾಶ, ೧-೧; ಅಂತಃಕರಣದಿಂದಲೇ ಅಜ್ಞಾನವು ಸ್ಫುಟವಾಗಿ ತೋರುವದು, ೩-೫೮.

**ಧೀಃ** - ನೈ. ಬುದ್ಧಿ.

**ಧೀಸಾದೃಶ್ಯಮ್** - ಬೃಹ-೨. ಆತ್ಮನು ಅಂತಃಕರಣದಿಂದ ವಿವಿಕ್ತನಾಗದೆ ಇರುವ ಅಧ್ಯಾರೋಪ, ೧೭೫, ೧೭೬.

**ಧೂಮಾದಿಃ** - ಬ್ರ.ಸೂ-೧. ಹೊಗೆ ಮುಂತಾದ ಅನುಮಾನದ ಲಿಂಗ, (ತಾನು ಜ್ಞಾತವಾಗಿಯೇ ಮತ್ತೊಂದನ್ನು ತಿಳಿಸುವದೆಂಬುದಕ್ಕೆ ದೃಷ್ಟಾಂತ), ೨೮೮.

**ಧೂಮಾದಿಕ್ರಮಃ** - ಐ. ಸಕಾಮಿಗಳು ಫಲವನ್ನು ಪಡೆಯುವದಕ್ಕೆ ಸತ್ತ ಬಳಿಕ ಹೋಗುವ ಮಾರ್ಗದ ಕ್ರಮ, ದಕ್ಷಿಣಮಾರ್ಗದ ಕ್ರಮ, ೭೪ ; **ಶಾಂ. ನಿ.** ಸಕಾಮರಾದವರು ಕರ್ಮಫಲವನ್ನು ಪಡೆಯುವದಕ್ಕೆ ಸತ್ತಬಳಿಕ ಹೋಗುವ ದಕ್ಷಿಣಮಾರ್ಗದ ಕ್ರಮ ಐ. ಭಾ. ೨-೧ (ಭಾ. ಭಾ. ೭೪).

**ಧೂಮಾದಿಮಾರ್ಗಃ** - **ಛಾಂ.** ಕರ್ಮಿಗಳು ಫಲಾನುಭವಕ್ಕೆ ಹೋಗುವ ದಕ್ಷಿಣಮಾರ್ಗ, ೨.

**ಧೃತಿಃ** - **ಶಾಂ. ನಿ.** ಕುಸಿದುಬೀಳುವ ಶರೀರೇಂದ್ರಿಯಗಳನ್ನು ಹಿಡಿದೆತ್ತುವ ಮನಸ್ಸಿನ ಶಕ್ತಿವಿಶೇಷ, ಗೀ. ಭಾ. ೧೩-೬.

# ನ

**ನ ಜಾನಾಮಿ - ನೈ.** ಅರಿಯೆನು. ಗಡಿಗೆಯನ್ನು ಅರಿಯೆನು - ಎಂಬಂತೆ ಸುಷುಪ್ತಿಯಲ್ಲಿ ಅಜ್ಞಾನವನ್ನು ಅರಿಯೆನು ಎಂದು ಅನುಭವವೇಕಿಲ್ಲ ? ಎಂಬ ಆಕ್ಷೇಪವು ಸರಿಯಲ್ಲ, ೩-೫೮.

**ನಕ್ಷತ್ರಾದಯಃ - ಬ್ರ.ಸೂ-೧.** ಹಗಲುಕಾಂತಿಯು ಮಂಕಾಗಿ ರಾತ್ರೆ ತೋರಿಕೊಳ್ಳುವ ನಕ್ಷತ್ರವೇ ಮುಂತಾದವುಗಳು, (ಆತ್ಮನ ಸ್ವರೂಪಾಪತ್ತಿಯು ಹೀಗಲ್ಲವೆಂಬುದಕ್ಕೆ ದೃಷ್ಟಾಂತ), ೨೬೫.

**ನದ್ಯಾಃ ಕೂಲಮ್ - ಬ್ರ.ಸೂ-೧.** ನದಿಯದಡ; ('ಪಿಪತಿಷತಿ' ಬೀಳುವೆನೆನ್ನುತ್ತದೆ ಎಂದು ಚೇತನದಂತೆ ಪ್ರಯೋಗಿಸುವದುಂಟೆಂದು ಗೌಣ ಪ್ರಯೋಗಕ್ಕೆ ಉದಾಹರಣೆ), ೭೩.

**ನಮಸ್ಕಾರ ಬಲ್ಯುಪಹಾರ ಸ್ವಾಧ್ಯಾಯ ಧ್ಯಾನಯೋಗಾದಯಃ, ಯಾಗ-ಬಲ್ಯುಪಹಾರ ಪ್ರಣಿಧಾನಧ್ಯಾನಾದಯಃ - ಬೃಹ-೧.** ಸ್ತುತಿ ನಮಸ್ಕಾರಾದಿಗಳು ಮೋಕ್ಷವನ್ನು ಪಡೆಯುವದಕ್ಕೆ ಮಾಡಬೇಕಾದ ಆರಾಧನಾಪ್ರಕಾರಗಳೆಂದು ಆತ್ಮವ್ಯತಿರಿಕ್ತೇಶ್ವರ ವಾದಿಗಳು ಒಪ್ಪಿರುವರು, ೧೭೬, ೩೧೦.

**ನರಕಃ - ಪ್ರಶ್ನ.** ತಿರ್ಯಗ್ಜಂತುಗಳ ಜನ್ಮವೇ ಮುಂತಾದ ದುಃಖಸ್ಥಾನ, ೪೪.

**ನರಕತಿರ್ಯಕ್ಪ್ರೇತಾದಯಃ, ಪ್ರೇತತಿರ್ಯಕ್ಸ್ಥಾವರಾದಯಃ - ಬೃಹ-೨.** ವಿಹಿತವನ್ನು ಮಾಡದೆ ಪ್ರತಿಷಿದ್ಧವನ್ನು ಮಾಡಿದ್ದರಿಂದ ಆಗುವ ಕರ್ಮವಿಪಾಕದ ಫಲಗಳು, ೩೦, ೩೭.

**ನಾಜ್ಞಾಸಿಷಮ್ - ನೈ.** 'ನಿದ್ರೆಯಲ್ಲಿ ಏನನ್ನೂ ನಾನು ಅರಿಯಲಿಲ್ಲ' ಎಂಬ ಪರಾಮರ್ಶದಿಂದ ಅಹಂಕಾರವು ಆತ್ಮನಿಗೆ ಲಕ್ಷಣವೆಂದಾಗುತ್ತದೆ, ೨-೫೪.

**ನಾಡೀ - ಭ.ಗೀ.** ಕ್ರಮಮುಕ್ತಿಯನ್ನು ಪಡೆಯುವದಕ್ಕೆ ಹೋಗುವ ದ್ವಾರವಾದ ಸುಷುಮ್ನಾನಾಡಿ, ೫೧೨, ೫೧೬, ೫೪೩.

**ನಾದ್ರಾಕ್ಷಮ್ - ನೈ.** 'ನಿದ್ರೆಯಲ್ಲಿ ಏನೂ ಕಾಣುವದಿಲ್ಲ' ಎಂಬ ಪರಾಮರ್ಶವು ತನ್ನ ದೃಷ್ಟಿಯು ಇರಲಿಲ್ಲವೆನ್ನುವದಿಲ್ಲ, ಪ್ರತ್ಯಯವನ್ನು ಮಾತ್ರ ಅಲ್ಲಗಳೆಯುತ್ತದೆ, ೪-೩೨.

**ನಾನಾಬ್ರಹ್ಮವಾದಃ** - ನೈ. ಬ್ರಹ್ಮದಲ್ಲಿ ನಾನಾತ್ವವಿದೆ ಎಂಬ ವಾದ. ಈ ವಾದದಲ್ಲಿಯೂ ಜ್ಞಾನಕರ್ಮಸಮುಚ್ಚಯಸಿದ್ಧಿಯಿಲ್ಲ, ೧-೬೮.

**ನಾನಾರಸ** - ಬ್ರ.ಸೂ-೧. ಸ್ವಗತಭೇದವಿರುವ ಅನೇಕಾತ್ಮಕವಾದ, ೨೨೩ ; **ಶಾಂ. ನಿ.** ಮರ, ಸಮುದ್ರ, ಮುಂತಾದವುಗಳಂತೆ ಸ್ವಗತಭೇದವುಳ್ಳ ; 'ಏಕರಸ' ವೆಂಬುದಕ್ಕೆ ವಿರುದ್ಧ. ಬ್ರಹ್ಮವು ಅನೇಕಾತ್ಮಕವೆಂಬ ಭರ್ತೃಪ್ರಪಂಚಾದಿಗಳ ಮತವನ್ನು ವರ್ಣಿಸುವದಕ್ಕೆ ಭಾಷ್ಯಕಾರರು ಉಪಯೋಗಿಸಿದ ಶಬ್ದವಿದು, ಸೂ. ಭಾ. ೧-೩-೧,

**ನಾನಾರಸಬ್ರಹ್ಮ, ಅನೇಕಾತ್ಮಕಬ್ರಹ್ಮ** - ಬ್ರ.ಸೂ-೨. ಬ್ರಹ್ಮವು ವೃಕ್ಷಸಮುದ್ರಾದಿಗಳಂತೆ ವೈಚಿತ್ರ್ಯವುಳ್ಳದ್ದಾಗಿರುವದೆಂಬ ದರ್ಶನವೂ ಅದರ ಖಂಡನೆಯೂ, ೧-೪೩೫ ರಿಂದ ೪೩೮ ; ಕಾರ್ಯಪ್ರಪಂಚವನ್ನು ವಿದ್ಯೆಯಿಂದ ಲಯಮಾಡಿಕೊಂಡು ನಾನಾರಸವಿಲ್ಲದ ಏಕರಸಾತ್ಮನನ್ನೇ ಅರಿತುಕೊಳ್ಳಬೇಕೆಂದು ಶ್ರುತಿ, ೧-೨೨೩.

**ನಾಮರೂಪಕರ್ಮಪ್ರಪಞ್ಚಃ** - ಬ್ರ.ಸೂ-೧. ನಾಮ, ರೂಪ, ಕರ್ಮ - ಎಂಬ ಮೂರುರೂಪದಲ್ಲಿ ವಿಂಗಡವಾಗಿ ತೋರುವ ಪ್ರಪಂಚ, ೩೮೦, ೩೮೬.

**ನಾಮರೂಪಕರ್ಮತ್ರಯಮ್** - ಕಠ. ನಾಮ, ರೂಪ, ಕರ್ಮ - ಎಂಬ ಮೂರುರೂಪದಲ್ಲಿ ತೋರಿಕೊಳ್ಳುವ ಜಗತ್ತು, ೧೦೪.

**ನಾಮರೂಪಕರ್ಮಾಖ್ಯಮ್** - **ಈಶ.** ಹೆಸರು, ಆಕಾರ, ಕೆಲಸ - ಎಂಬ ಮೂರುರೂಪಗಳುಳ್ಳ, ೩.

**ನಾಮರೂಪಕ್ರಿಯಾತ್ಮಕಮ್** - **ಈಶ.** ನಾಮ, ರೂಪ, ಕರ್ಮ - ಎಂಬ ರೂಪದಲ್ಲಿ ವಿಂಗಡವಾಗಿ ತೋರುತ್ತಿರುವ ಜಗತ್ತು, ೧೪.

**ನಾಮರೂಪಕೃತದೇಹೋಪಾಧಿಃ** - **ಮುಂ.** ನಾಮರೂಪಗಳಿಂದಾಗಿರುವ ದೇಹವೆಂಬ ಉಪಾಧಿ, ೫೧.

**ನಾಮರೂಪಕೃತಕಾರ್ಯಕರಣಸಂಘಾತೋಪಾಧಿಸಂಪರ್ಕಜನಿತಭ್ರಾನ್ತಿಃ** - **ಬೃಹ-೨.** ನಾಮರೂಪಗಳಿಂದಾಗಿರುವ ದೇಹೇಂದ್ರಿಯಗಳೆಂಬ ಉಪಾಧಿಯಿಂದಾದ ಭ್ರಾಂತಿ (ಸುಖಿತ್ವ, ದುಃಖಿತ್ವ), ೧೩೯.

**ನಾಮರೂಪಕರ್ಮಾಣಿ** - **ಐತ.** ನಾಮ, ರೂಪ, ಕರ್ಮ ಎಂದು ವಿಂಗಡಿಸಿಕೊಂಡಿರುವ ವ್ಯಾಕೃತಪ್ರಪಂಚ, ೧೯, ೨೮ ; **ಶಾಂ. ನಿ.** ಜಗತ್ತು ತೋರುವ

ಮೂರು ಬಗೆಗಳು, ಐ. ಭಾ. (ಭಾ. ಭಾ. ೨೮). ಆತ್ಮನು ನಾಮರೂಪಕರ್ಮಗಳ ಸಂಬಂಧವಿಲ್ಲದವನೆಂದು ತಿಳಿಸುವದಕ್ಕೆ ವ್ಯಾಕೃತಾವ್ಯಾಕೃತಪ್ರಪಂಚವನ್ನು ನಾಮರೂಪಕರ್ಮಗಳೆಂದು ವಿಂಗಡಿಸುವರು.

**ನಾಮರೂಪಕರ್ಮಾತ್ಮಕಮ್** - ಬೃಹ-೨. ಸರ್ವಜಗದಾತ್ಮಕವಾದ (ಹೃದಯ) ೧೨೦, ೧೨೧.

**ನಾಮರೂಪಬೀಜಶಕ್ತಿಃ** - ಬ್ರ.ಸೂ-೧. ನಾಮರೂಪಗಳೆಂಬ ಪ್ರಪಂಚಕ್ಕೆ ಕಾರಣವಾಗಿರುವ ಶಕ್ತಿ, ಅವ್ಯಾಕೃತ, ೨೦೧.

**ನಾಮರೂಪಬೀಜೋಪಲಕ್ಷಿತ** - **ಮುಂ.** ಅವ್ಯಾಕೃತದಿಂದ ಗುರುತಿಸಿ ತಿಳಿಯಬೇಕಾಗಿರುವ ಕಾರಣಬ್ರಹ್ಮ, ೫೨, ೫೭ ; **ಶಾಂ. ನಿ.** ಅವ್ಯಾಕೃತದಿಂದ ಕಾರಣವೆಂದು ತಿಳಿಯ ಬೇಕಾಗಿರುವ ಬ್ರಹ್ಮ, ಮುಂ. ಭಾ. ೨-೧-೩. (ಭಾ. ಭಾ. ೫೭).

**ನಾಮರೂಪಬೀಜಭೂತಮ್** - **ಮುಂ.** ನಾಮರೂಪಗಳ ಕಾರಣವಾದ ಸೂಕ್ಷ್ಮಸ್ಥಿತಿ, ಅವ್ಯಾಕೃತ, ೫೨, ೫೫ ; **ಶಾಂ. ನಿ.** ನಾಮರೂಪಗಳ ಕಾರಣವಾದ ಅವ್ಯಾಕೃತ, ಮುಂ. ಭಾ. ೨-೧-೨ (ಭಾ. ಭಾ. ೫೨), ವ್ಯಾಕೃತಾವ್ಯಾಕೃತಗಳೆರಡೂ ಅವಿದ್ಯಾಕೃತ, ಸೂ. ಭಾ. ೨-೧-೨೭.

**ನಾಮರೂಪವ್ಯಾಕರಣಮ್** - **ಬ್ರ.ಸೂ-೧.** ನಾಮ, ರೂಪ - ಇವುಗಳನ್ನು ವಿಂಗಡಿಸಿ ಹೊರತೋರುವದು, ೪೪೫.

**ನಾಮರೂಪವ್ಯಾಕೃತ** - ಬ್ರ.ಸೂ-೧. ನಾಮ, ರೂಪ - ಎಂದು ವಿಂಗಡವಾಗಿರುವ (ವಸ್ತು, ಜಗತ್ತು), ೬೭, ೪೪೫.

**ನಾಮರೂಪವಿಲಕ್ಷಣಃ** - ಬೃಹ-೧. ನಾಮರೂಪಗಳಾಗಿ ಕಾಣುವ ಅನಾತ್ಮಕ್ಕಿಂತ ಬೇರೆಯ ಸ್ವಭಾವದ (ಆತ್ಮನು), ೭, ೧೨೦.

**ನಾಮರೂಪೇ** - **ಬ್ರ.ಸೂ-೨.** ಜಗತ್ತಿನ ನಾಮರೂಪಗಳು. ನಾಮ ರೂಪಗಳಾಗಿ ವ್ಯಾಕೃತವಾಗಿರುವ ಜಗತ್ತು ಬ್ರಹ್ಮದಿಂದಾಗಿದೆ, ೧-೨೪ ; ಈಶ್ವರನ ಸ್ವರೂಪವೆಂದಾಗಲಿ ಅದಕ್ಕೆ ಬೇರೆಯೆಂದಾಗಲಿ ಹೇಳಲಾಗದ ಅವ್ಯಾಕೃತ ನಾಮರೂಪಗಳು ಸೃಷ್ಟಿಗಿಂತ ಮುಂಚೆ ಈಶ್ವರನ ಜ್ಞಾನಕ್ಕೆ ವಿಷಯವಾಗಿರುತ್ತವೆ, ೧-೬೯ ; ಅವಿದ್ಯಾಕಲ್ಪಿತನಾಮರೂಪಗಳೇ ಈಶ್ವರನ ಉಪಾಧಿಯಾದ ಮಾಯೆ, ೧-೪೪೦ ; ನಾಮರೂಪಕೃತಕಾರ್ಯಕರಣಸಂಘಾತವೆಂಬ ಉಪಾಧಿಯುಳ್ಳವರು

ಜೀವರು, ೧-೪೪೦ ; ಅವಿದ್ಯಾಕಲ್ಪಿತವ್ಯಾಕೃತನಾಮರೂಪಗಳಿಂದ ಬ್ರಹ್ಮಕ್ಕೆ ಪರಿಣಾಮಿ-ಎಂಬ ವ್ಯವಹಾರ, ೧-೪೬೪. **ಮಾಯಾ** ಎಂಬ ಶಬ್ದವನ್ನು ನೋಡಿರಿ ; **ಪ್ರಶ್ನ.** ಪ್ರಪಂಚವು ತೋರಿಕೊಳ್ಳುವ ಎರಡು ಬಗೆಗಳು, ೭೨, ೭೬, ೯೧, ೧೦೩, ೧೧೩, ೧೧೪ ; **ಮುಂ.** ಹೆಸರು, ರೂಪ - ಎಂದು ವಿಂಗಡವಾಗಿರುವ ಅನಾತ್ಮದ ತೋರಿಕೆಗಳು, ೨೯, ೧೯೩ ; **ತೈ.** ಪ್ರಪಂಚವು ತೋರಿಕೊಳ್ಳುವ ಬಗೆ, ಹೆಸರು, ರೂಪ, ೧೬೦, ೧೬೫, ೧೭೩, ೧೮೧, ೨೧೮ ; **ಬೃಹ-೧.** ಪ್ರಪಂಚವು ಬಿಡಿಬಿಡಿಯಾಗಿ ತೋರುವ ಹೆಸರು, ರೂಪ - ಎಂಬ ಎರಡು ಬಗೆಗಳು, ೧೧೯, ೧೨೦, ೧೩೧ ; **ಶಾಂ. ನಿ.** ನಾಮರೂಪಕರ್ಮಗಳನ್ನು ಸಂಕ್ಷೇಪವಾಗಿ ನಾಮರೂಪ ಗಳೆಂದು ಹೇಳಿರುವದುಂಟು ; ಆಗ ರೂಪದಲ್ಲಿಯೇ ಕರ್ಮವೂ ಅಡಕವಾಗಿರುವದು. ಇವು ಈಶ್ವರನ ಸ್ವರೂಪವೆಂದಾಗಲಿ ಭಿನ್ನವೆಂದಾಗಲಿ ನಿರ್ವಚನ ಮಾಡುವದಕ್ಕಾಗದ ಅಸತ್ಪದಾರ್ಥ. ಸೂ. ಭಾ. ೨-೧-೧೪. ಇವೂ ಅವಿದ್ಯಾಕಲ್ಪಿತ, ಸೂ. ಭಾ. ೨-೧-೧೪.

**ನಾಮರೂಪೋಪಾಧಿಃ - ಬೃಹ-೨.** ನಾಮರೂಪಗಳಾಗಿ ತೋರುವ ಉಪಾಧಿ, ೫೪, ೧೭೬.

**ನಾಮರೂಪೋಪಾಧ್ಯನುರೋಧೀ - ಶಾಂ. ನಿ.** ನಾಮರೂಪಗಳೆಂಬ ಉಪಾಧಿಯನ್ನು ಅನುಸರಿಸುವ ಬ್ರಹ್ಮ. ಈಶ್ವರತ್ವವು ಈ ಉಪಾಧಿಯಿಂದ. ಸೂ. ಭಾ. ೨-೧-೪.

**ನಾರಕಸ್ಥಾವರಾನ್ತಾಃ - ಬ್ರ.ಸೂ-೧.** ನರಕದಲ್ಲಿರುವ, ಮತ್ತು ಸ್ಥಾವರರೂಪವಾದ, ಪ್ರಾಣಿಗಳವರೆಗೆ ಅಥವಾ ನರಕದುಃಖವನ್ನನುಭವಿಸುವ ಸ್ಥಾವರಪ್ರಾಣಿಗಳವರೆಗೆ ಇರುವ ಪ್ರಾಣಿಗಳು, ೪೭.

**ನಾರಾಯಣಃ - ಶಾಂ. ನಿ.** ಅವ್ಯಕ್ತಕ್ಕಿಂತಲೂ ಪರನಾದ ಭಗವಂತ, ಗೀ. ಭಾ. (ಅವ) ಶ್ಲೋಕ, ಸೂ. ಭಾ. ೨-೨-೪೨ ; ಸೂತ್ರಾತ್ಮನನ್ನು ನಿಯಮನಮಾಡಿ-ಕೊಂಡಿರುವ ಅಂತರ್ಯಾಮಿ, ಬೃ. ೩-೭-೩.

**ನ್ಯಾಯಾಗಮೌ - ಛಾಂ.** ಯುಕ್ತಿ, ಸಾಂಪ್ರದಾಯಿಕೋಪದೇಶ - ಎಂಬ ಜ್ಞಾನಸಾಧನಗಳು, ೫೧೭.

**ನ್ಯಾಯಾಭಾಸೋಪಬೃಂಹಿತ - ಬ್ರ.ಸೂ-೧.** ಹುಸಿಯುಕ್ತಿಯ ಬೆಂಬಲವುಳ್ಳ (ಸಾಂಖ್ಯಾದಿ ಸ್ಮೃತಿ), ೩೯೮.

**ನ್ಯಾಯೋಪಬೃಂಹಿತ** - ಬ್ರ.ಸೂ-೧. ಯುಕ್ತಿಯ ಬೆಂಬಲವುಳ್ಳ (ಸೂತ್ರ, ಗ್ರಂಥ), ೪೫.

**ನಿತ್ಯಕರ್ಮ, ನಿಯತಂ ಕರ್ಮ** - ಭ.ಗೀ. ಶಾಸ್ತ್ರದಲ್ಲಿ ಮಾಡಲೇಬೇಕೆಂದು ವಿಧಿಸಿರುವ ಅಗ್ನಿಹೋತ್ರಾದಿ, ೧೬೭, ೨೬೬, ೨೬೭, ೨೬೯, ೩೮೧, ೧೦೦೧, ೧೦೦೨, ೧೦೧೨, ೧೦೧೪, ೧೦೧೭, ೧೦೧೯, ೧೦೨೮, ೧೧೩೧, ೧೧೩೨, ೧೧೩೫.

**ನಿತ್ಯಕರ್ಮಾಣಿ** - ತೈ. ಅವಶ್ಯವಾಗಿ ಮಾಡಬೇಕಾದ ಶಾಸ್ತ್ರೀಯಕರ್ಮಗಳು, ೧, ೫, ೭, ೭೧ ; ಬೃಹ-೨. ಮಾಡಲೇಬೇಕೆಂದು ವಿಧಿಸಿರುವ ಶಾಸ್ತ್ರೀಯಕರ್ಮಗಳು, ೩೧, ೩೨.

**ನಿತ್ಯಚೈತನ್ಯಸ್ವರೂಪಮ್** - **ಈಶ.** ಯಾವಾಗಲೂ ಇರುವ ಅರಿವಿನ ರೂಪವಾದ ಆತ್ಮತತ್ತ್ವ, ೧೨.

**ನಿತ್ಯಜ್ಞಾನಮ್** - ಬ್ರ.ಸೂ-೧. ಯಾವಾಗಲೂ ಸ್ವಭಾವವಾಗಿರುವ ಈಶ್ವರಜ್ಞಾನ, ೬೯.

**ನಿತ್ಯದೃಕ್ಸ್ವರೂಪಃ** - ಶಾಂ. ನಿ. ಯಾವಾಗಲೂ ಇರುವ ಚೈತನ್ಯಸ್ವರೂಪನಾದ ಪರಮಾತ್ಮ, ಸೂ. ಭಾ. ೧-೩-೧೯.

**ನಿತ್ಯದೃಗ್ರೂಪಃ** - ಬೃಹ-೧. ಯಾವಾಗಲೂ ನೋಡುವವನೇ ಆಗಿರುವ ಸ್ವರೂಪದ (ಆತ್ಮ), ೧೬೨.

**ನಿತ್ಯಮುಕ್ತ** - ಬ್ರ.ಸೂ-೧. ಯಾವಾಗಲೂ ಮುಕ್ತನಾಗಿಯೇ ಇರುವ, ಬಂಧವಿದ್ದು, ಮುಕ್ತನಾಗಬೇಕಿಲ್ಲದ, (ಪರಮಾತ್ಮ, ಮೋಕ್ಷರೂಪ), ೪೯.

**ನಿತ್ಯಮುಕ್ತಃ** - **ಈಶ.** ಎಂದೆಂದಿಗೂ ಮುಕ್ತನಾಗಿಯೇ ಇರುವ ಈಶ್ವರ, ೧೯ ; ಭ.ಗೀ. ಯಾವಾಗಲೂ ಮುಕ್ತನು, ಬದ್ಧನಾಗಿ ಮುಕ್ತನಾಗುವ ಸಂಸಾರಿಯಲ್ಲ, ೨೫೧.

**ನಿತ್ಯವಿಜ್ಞಪ್ತಿಸ್ವರೂಪಮ್** - **ಕಠ.** ಯಾವಾಗಲೂ ಇರುವ ಅರಿವಿನ ಸ್ವರೂಪವಾದ ಬ್ರಹ್ಮ, ೧೦೭.

**ನಿತ್ಯವಿಜ್ಞಪ್ತಿಸ್ವರೂಪಃ, ನಿತ್ಯವಿಜ್ಞಾನರೂಪಃ, ನಿತ್ಯಾವಗತಿಸ್ವರೂಪಃ** - ಶಾಂ. ನಿ. ನಿತ್ಯವಾದ ಚೈತನ್ಯಸ್ವರೂಪನಾದ ಆತ್ಮ, ಉಪ. ಪ. ೧೩-೫, ೧೮-೧.

**ನಿತ್ಯವಿಜ್ಞಾನಘನಸ್ವಭಾವಮ್** - **ಕಠ.** ನಿತ್ಯವಾದ ಅರಿವಿನ ಗಟ್ಟಿಯ ಸ್ವರೂಪವಾದ ಬ್ರಹ್ಮ, ೧೨೫.

**ನಿತ್ಯಂಕರ್ಮ, ನಿತ್ಯೇಹಾ** - ನೈ. ನಿತ್ಯಕರ್ಮದಿಂದ ದುರಿತಕ್ಷಯವಾಗಿ ಚಿತ್ತಶುದ್ಧಿಯಾಗಿ ವೈರಾಗ್ಯವುಂಟಾಗುವದು, ೧-೨೬, ೪೫; ಆದ್ದರಿಂದ ಮುಮುಕ್ಷುಗಳು ಇದನ್ನು ಮಾಡಬೇಕು, ೪-೫೮ ನಿತ್ಯಕರ್ಮದಿಂದ ಹಿಂದಿನ ಜನ್ಮಗಳ ಕ್ಷಯವಿಲ್ಲ, ೧-೮೨,೮೩.

**ನಿತ್ಯಶುದ್ಧ** - ಬ್ರ.ಸೂ-೧. ಯಾವಾಗಲೂ ಶುದ್ಧವಾಗಿಯೇ ಇರುವ, ಸಂಸ್ಕಾರದಿಂದ ಶುದ್ಧಿಯಾಗಬೇಕಾದದ್ದಿಲ್ಲದ, (ಮೋಕ್ಷ, ಬ್ರಹ್ಮ), ೪೯.

**ನಿತ್ಯಶುದ್ಧಬುದ್ಧಮುಕ್ತಸ್ವಭಾವ** - ಬ್ರ.ಸೂ-೧. ಸ್ವಭಾವದಿಂದಲೇ ಯಾವಾಗಲೂ ಶುದ್ಧವಾಗಿ ಜ್ಞಾನರೂಪವಾಗಿ ಮುಕ್ತವಾಗಿರುವ (ಬ್ರಹ್ಮ), ೧೯, ೩೦, ೪೦, ೫೪, ೨೬೯, ೪೫೫ ; ಬ್ರ.ಸೂ-೨. ಯಾವಾಗಲೂ ಶುದ್ಧವಾಗಿ ಚೈತನ್ಯ ಸ್ವರೂಪವಾಗಿ ಮುಕ್ತವೇ ಆಗಿರುವ ಸ್ವಭಾವದ (ಬ್ರಹ್ಮ). ಬ್ರಹ್ಮಶಬ್ದದ ವ್ಯುತ್ಪತ್ತಿಯಿಂದಲೇ ಈ ಸ್ವಭಾವದ ಬ್ರಹ್ಮದ ಅಸ್ತಿತ್ವವು ಸಿದ್ಧವಾಗುತ್ತದೆ. ೧-೧೯; ಇಂಥ ಬ್ರಹ್ಮವೇ ಜಗತ್ಕಾರಣ, ೧-೩೦ ; ಈ ರೂಪದ ಬ್ರಹ್ಮವು ಉಪಾಸನಾವಿಧಿಗೆ ಶೇಷವೆಂಬ ವಾದವೂ ಅದರ ಖಂಡನೆಯೂ, ೧-೪೦ ರಿಂದ ೫೪ ; ಇಂಥ ಬ್ರಹ್ಮದಲ್ಲಿ ಜೀವರೂಪವು ಕಲ್ಪಿತ, ೧-೨೬೯ ; ಇಂಥ ಬ್ರಹ್ಮವೇ ಸ್ರಷ್ಟೃವೇ ಹೊರತು ಶಾರೀರನಲ್ಲ, ೧-೪೫೫ ; ಈ ಸ್ವಭಾವದ ಬ್ರಹ್ಮವನ್ನು ಅರಿತುಕೊಳ್ಳುವದರಿಂದಲೇ ಮೋಕ್ಷಸಿದ್ಧಿ, ೨-೧೫೧ ; ಬ್ರಹ್ಮವು ವಾಙ್ಮನಸಾತೀತವಾಗಿರುವದರಿಂದ ಈ ಸ್ವಭಾವದ್ದು, ೨-೨೯೫ ; ಇಂಥ ಬ್ರಹ್ಮವನ್ನು ತಿಳಿಸಿಕೊಡುವ ನಿದಿಧ್ಯಾಸನದ ಆವೃತ್ತಿಯೇಕೆಂಬ ಬಗ್ಗೆ ಚರ್ಚೆ, ೨-೫೦೫, ೫೦೬ ; **ಮಾಂ.** ಯಾವಾಗಲೂ ಶುದ್ಧನಾಗಿರುವ, ಚೈತನ್ಯ ಸ್ವರೂಪನಾಗಿರುವ, ಮುಕ್ತನಾಗಿರುವ ಸ್ವಭಾವವುಳ್ಳ , ೧೫೮, ೧೯೩, ೩೬೪ ; **ಬೃಹ-೧.** ಯಾವಾಗಲೂ ನಿಷ್ಕಲ್ಮಷನೂ ಜ್ಞಾನಸ್ವರೂಪನೂ ಬಂಧರಹಿತನೂ ಆಗಿರುವ ಸ್ವಭಾವದ (ಆತ್ಮ), ೭, ೧೭೦ ; **ಬೃಹ-೨.** ಯಾವಾಗಲೂ ಶುದ್ಧ ಚಿತ್ಸ್ವರೂಪನೂ ಮುಕ್ತನೂ ಆಗಿರುವ (ಆತ್ಮ), ೨೦೭, ೨೮೯ ; **ಭ.ಗೀ.** ಯಾವಾಗಲೂ ಕರ್ಮದ ಸೋಂಕಿಲ್ಲದ, ಚೈತನ್ಯಸ್ವರೂಪನಾದ, ಯಾವಾಗಲೂ ಮುಕ್ತನೇ ಆಗಿರುವ, ೨, ೨೩೬, ೪೬೮, ೫೬೦, ೯೧೮ ; **ಶಾಂ. ನಿ.** ಅನಾತ್ಮ ಸಂಬಂಧವು ಎಂದಿಗೂ ಇಲ್ಲದ, ನಿತ್ಯಚೈತನ್ಯನಾದ, ನಿತ್ಯಮುಕ್ತನಾದ ಪರಮಾತ್ಮ, ಮುಂ. ಭಾ. ೩-೧-೧, ಮಾಂ. ಕಾ. ಭಾ. ೩-೧೫, ಗೀ. ಭಾ. ೧೫-೧೭.

**ನಿತ್ಯಸಾಕ್ಷಿತ್ವಮ್** - **ಮುಂ.** ಯಾವಾಗಲೂ ಒಂದೇ ರೂಪದಲ್ಲಿದ್ದುಕೊಂಡು ಎಲ್ಲವನ್ನೂ ನೋಡುತ್ತಿರುವದು, ೯೧.

**ನಿತ್ಯಸಾಕ್ಷೀ** - ಶಾಂ. ನಿ. ಯಾವಾಗಲೂ ಒಂದೇ ರೂಪದಲ್ಲಿದ್ದುಕೊಂಡು ಎಲ್ಲವನ್ನೂ ನೋಡುತ್ತಿರುವ, ಮನಸ್ಸಿನಂತೆ ವಿಷಯಾಕಾರವಾಗಿ ಪರಿಣಮಿಸದೆ ಅರಿಯುತ್ತಿರುವ ಚೈತನ್ಯ, ಮುಂ. ಭಾ. ೩-೧-೧.

**ನಿತ್ಯಸಿದ್ಧ** - ಬ್ರ.ಸೂ-೧. ತಪಸ್ಸು ಮುಂತಾದವುಗಳಿಂದ ಸಿದ್ಧಿಯನ್ನು ಬಯಸದೆ ಯಾವಾಗಲೂ ಸಿದ್ಧನೇ ಆಗಿರುವ, (ಪರಮೇಶ್ವರ), ೬೯.

**ನಿತ್ಯಾನಿತ್ಯವಸ್ತುವಿವೇಕಃ** - ಬ್ರ.ಸೂ-೧. ಕರ್ಮದ ಫಲವೆಲ್ಲವೂ ಅನಿತ್ಯವಾದದ್ದು, ಮೋಕ್ಷವು ನಿತ್ಯ - ಎಂಬ ವಿವೇಚನೆ, ೧೩.

**ನಿತ್ಯಾನುಮೇಯ** - ಬ್ರ.ಸೂ-೧. ಯಾವಾಗಲೂ ಅನುಮಾನದಿಂದಲೇ ನಿಶ್ಚಯಿಸಬೇಕಾಗುವ, ೬೪.

**ನಿತ್ಯಾವಗತಿಃ** - ನೈ. ಯಾವಾಗಲೂ ಅರಿವಿನ ರೂಪವಾಗಿಯೇ ಇರುವ ಆತ್ಮ. ಇವನು ಪ್ರಮೇಯನಲ್ಲ, ೩-೪೭; ಇವನಿಗೆ ಕಾರಕಾದಿಗಳಿಲ್ಲ, ೩-೧೦೩.

**ನಿತ್ಯಾಪ್ತ** - ಬ್ರ.ಸೂ-೧. ಎಂದೆಂದಿಗೂ ಪಡೆದೇ ಇರುವ, (ಆತ್ಮ ಸ್ವರೂಪವಾದ ಬ್ರಹ್ಮ, ಮೋಕ್ಷ), ೪೮.

ಃ - ಭ.ಗೀ. ಯಾವಾಗಲೂ ಸ್ವತಂತ್ರನಾಗಿ ಎಲ್ಲರನ್ನೂ ಆಳುವವನು, ೨೩೭.

**ನಿದಿಧ್ಯಾಸನಮ್** - ಬ್ರ.ಸೂ-೨. ಆತ್ಮತತ್ತ್ವವನ್ನು ಕಂಡುಕೊಳ್ಳುವದಕ್ಕೆ ಮಾಡಬೇಕಾದ ಧ್ಯಾನ. ವಿಜ್ಞಾನ, ಆಧ್ಯಾನ, **ಉಪಾಸನ, ಯೋಗ** - ಇವೆಲ್ಲ ನಿದಿಧ್ಯಾಸನದ ಪರ್ಯಾಯಗಳು. ಶ್ರವಣವೂ ಮನನವೂ ನಿದಿಧ್ಯಾಸನವೂ ವಿಹಿತವಾಗಿರುವಂತೆ ತೋರುವದು ವಿಷಯಾಭಿಮುಖದಿಂದ ಹಿಮ್ಮೆಟ್ಟಿಸುವದಕ್ಕೆ, ೧-೫೨ ; ಇದು ಬ್ರಹ್ಮಾವಗತಿಯಾದ ಬಳಿಕ ಮಾಡತಕ್ಕದ್ದೆಂದು ವಿಧಿಸಿಲ್ಲ, ಅವಗತಿಗಾಗಿಯೇ ಮಾಡತಕ್ಕದ್ದು, ೧-೬೧ ; ಉಪಾಸನ, ನಿದಿಧ್ಯಾಸನ - ಎಂಬ ಶಬ್ದಗಳು ಆವೃತ್ತಿಗುಣದಿಂದೊಡಗೂಡಿದ ಕ್ರಿಯೆಯನ್ನೇ ಹೇಳುತ್ತವೆ, ೨-೫೦೩ ; ದರ್ಶನದಲ್ಲಿ ಕೊನೆಗಾಣಬೇಕಾದ ಈ ಉಪಾಸನೆಯನ್ನು ದರ್ಶನವಾಗುವವರೆಗೂ ಆವೃತ್ತಿ ಮಾಡಬೇಕು, ಆ ಬಳಿಕ ಮಾಡಬೇಕಾದದ್ದಿಲ್ಲ, ೨-೫೨೫ ; ಕಾಠಕೋಪನಿಷತ್ತಿನಲ್ಲಿ ಹೇಳಿರುವ ಇಂದ್ರಿಯಾರ್ಥಾದಿಗಳು ಆಧ್ಯಾನಕ್ಕಾಗಿ ಎಂದರೆ ಸಮ್ಯಗ್ದರ್ಶನಕ್ಕಾಗಿ ಮಾಡುವ ನಿದಿಧ್ಯಾಸನಕ್ಕಾಗಿ, ೨-೩೪೧ ; ಈ ಉಪಾಸನೆಗೆ ಆಸನವು ಬೇಕು, ವಸ್ತುತಂತ್ರವಾದ ಸಮ್ಯಗ್ದರ್ಶನಕ್ಕೆ ಬೇಡ, ೨-೫೨೦ ರಿಂದ ೫೨೩ ; ಇದಕ್ಕೆ

ದಿಗ್ದೇಶಕಾಲಾದಿಗಳ ನಿಯಮವಿಲ್ಲ, ೨-೫೨೪ ; ಶಾಂ. ನಿ. ಏಕಾಗ್ರಚಿತ್ತದಿಂದ ಚಿಂತಿಸಿ ತಿಳಿಯುವದು. ಧ್ಯಾನಶಬ್ದದಿಂದಲೂ ಇದನ್ನು ಕರೆಯುವದುಂಟು ; ಆದರೆ ಇದು ಭಾವನಾ ರೂಪವಾದ ಉಪಾಸನೆಯಲ್ಲ. ಉಪಾಸನೆಗೆ ಪರೋಕ್ಷಫಲ, ನಿದಿಧ್ಯಾಸನಕ್ಕೆ ದೃಷ್ಟವಾದ ಜ್ಞಾನವೇ ಫಲ. ನಿದಿಧ್ಯಾಸನವನ್ನು ಉಪಾಸನೆ ಎಂದೂ ಕರೆದಿರುವದುಂಟು, ಸೂ. ಭಾ. ೧-೧-೪, ೪-೧-೧, ೪-೧-೧೨.

**ನಿಮಿತ್ತಮ್, ನಿಮಿತ್ತಕಾರಣಮ್ - ಬ್ರ.ಸೂ-೧.** ಕುಂಬಾರನು ಗಡಿಗೆಗೆ ಹೇಗೋ ಹಾಗೆ ಕಾರಣವಾಗಿರುವ, ಮಣ್ಣು ಗಡಿಗೆಗೆ ಆಗಿರುವಂತೆ ಉಪಾದಾನವಲ್ಲ, ೬೪, ೧೯೭, ೨.೮೯, ೩.೯೧, ೨.೯೪, ೩.೯೭, ೪೦೯ ; **ಶಾಂ. ನಿ.** ಉಪಾದಾನವಲ್ಲದ ಕಾರಣ, ಮಣ್ಣಿಗೆ ಕುಂಬಾರನಂತೆ ಅಧಿಷ್ಠಾತೃವಾಗಿರುವ ಕರ್ತೃ ; ಪರಮಾತ್ಮನು ಜಗತ್ತಿಗೆ ನಿಮಿತ್ತವೂ ಉಪಾದಾನವೂ ಆಗಿರುತ್ತಾನೆ - ಎಂಬುದೇ ವೇದಾಂತ ಸಿದ್ಧಾಂತವು. ಸೂ. ಭಾ. ೧-೪-೨೩..

**ನಿಮಿತ್ತನೈಮಿತ್ತಿಕಭಾವಃ - ಬ್ರ.ಸೂ-೧.** ನಿಮಿತ್ತಕಾರಣ, ಅದರಿಂದ ಆಗುವ ಕಾರ್ಯ - ಎಂಬ ಸಂಬಂಧ, ೪೪೨.

**ನಿಮಿತ್ತನೈಮಿತ್ತಿಕತ್ವಮ್ - ಭಾಂ.** ಈ ನಿಮಿತ್ತಕಾರಣದಿಂದ ಇಂಥ ಕಾರ್ಯವಾಗುವದು - ಎಂಬ ಸಂಬಂಧ, ೪೫೪ ; **ಶಾಂ. ನಿ.** ನಿರಂತರವಾಗಿ ಒಂದಿದ್ದರೆ ಮತ್ತೊಂದಾಗುವದು, ಕಾರ್ಯಕಾರಣಭಾವವಿಲ್ಲದ ನೈರಂತರ್ಯ,

**ನಿಯಮವಿಧಿಃ - ಬೃಹ-೧.** ಒಂದು ಪಕ್ಷದಲ್ಲಿ ತಪ್ಪಿಹೋಗಬಹುದಾದ್ದನ್ನು ನಿಯಮದಿಂದ ಮಾಡಬೇಕೆಂದು ಹೇಳುವ ವಾಕ್ಯ, ೧೪೨ ; **ನೈ.** 'ಆತ್ಮೇತ್ಯೇವೋಪಾಸೀತ' ಎಂಬುದು **ಅಪೂರ್ವ ವಿಧಿ**ಯಲ್ಲ; ಅದನ್ನು ವಿಧಿ ಯೆಂದರೂ ಆತ್ಮನೆಂದೇ ಉಪಾಸನೆಮಾಡಬೇಕು ಎಂಬ **ನಿಯಮವಿಧಿ** ಯಾಗಬಹುದು, ೧-೮೮.

**ನಿಯುಂಜಾನ - ಬ್ರ.ಸೂ-೧.** ಕಟ್ಟುಮಾಡುವ. ಪ್ರೇರಿಸುವ (ವಿಧಿ), ೧೨.

**ನಿಯೋಗಃ - ಬ್ರ.ಸೂ-೨.** ಹೀಗೆ ಮಾಡೆಂದು ಕಟ್ಟುಮಾಡುವದು. ಧರ್ಮಚೋದನೆಯಂತೆ ಬ್ರಹ್ಮವಾಕ್ಯವು ನಿಯೋಜಕವಲ್ಲ , ಕೇವಲಬೋಧಕ, ೧-೧೨ ; ದ್ರಷ್ಟವ್ಯಃ ಮುಂತಾದ ವಿಧಿವಿಭಕ್ತಿಗಳು ನಿಯೋಗವನ್ನು ಹೇಳುವದಿಲ್ಲ , ಏಕೆಂದರೆ ಇಲ್ಲಿ ನಿಯೋಗಕ್ಕೆ ನಿಯೋಜ್ಯನಾಗಲಿ ವಿಷಯವಾಗಲಿ ಇಲ್ಲ, ೧-೫೧ ; ಬ್ರಹ್ಮವಾಕ್ಯಗಳಲ್ಲಿ ನಿಯೋಗವಿರುವದಿಲ್ಲವಾದ್ದರಿಂದಲೂ ಬ್ರಹ್ಮವು ನಿಯೋಜ್ಯ

ವಲ್ಲದಿರುವದರಿಂದಲೂ ನಿಯೋಗಕ್ಕೆ ವಿಷಯವೂ ಸಂಭವಿಸುವದಿಲ್ಲವಾದ್ದರಿಂದಲೂ ವೇದಾಂತಗಳಲ್ಲಿ ದ್ವೈತಪ್ರಪಂಚಪ್ರವಿಲಯವನ್ನು ವಿಧಿಸಿದೆ - ಎಂಬುದು ಹೊಂದುವದಿಲ್ಲ, ೨-೨೯೧ ; ಸಮ್ಯಗ್ದರ್ಶಿಯು ನಿಯೋಜ್ಯನಲ್ಲವಾದ್ದರಿಂದ ಅವನ ವಿಷಯಕ್ಕೆ ಅನುಜ್ಞಾಪರಿಹಾರಗಳು ಬೇಕಿಲ್ಲ, ೨-೧೬೫ ; ಐತ. ಈ ಕರ್ಮವನ್ನು ಮಾಡೆಂದು ವೇದವು ಮಾಡಿರುವ ಅಪ್ಪಣೆ, ೯, ೧೬ ; ನೈ. ಕಟ್ಟುಮಾಡುವದು. ತತ್ತ್ವಮಸ್ಯಾದಿವಾಕ್ಯಗಳಿಗೆ ಹೀಗೆಂದು ನಿದಿಧ್ಯಾಸನಮಾಡತಕ್ಕದ್ದು ಎಂಬ ನಿಯೋಗದ ಮೂಲಕವೇ ಪ್ರಾಮಾಣ್ಯವನ್ನು ಹೇಳಬೇಕು-ಎಂಬವರ ವಾದವು ಸರಿಯಲ್ಲ, ೩-೪೭; 'ದ್ರಷ್ಟವ್ಯಃ' ಎಂಬಲ್ಲಿ ದರ್ಶನಕ್ರಿಯೆಯಲ್ಲಿ ನಿಯೋಗವಿದೆ - ಎಂಬುದು ಸರಿಯಲ್ಲ, ೧-೮೮; ಅದ್ವೇಷ್ಟೃತ್ವಾದಿಗುಣಗಳು ಆತ್ಮಜ್ಞಾನಿಗೆ ನಿಯೋಗದಿಂದ ಇರುವದಿಲ್ಲ ; ಅಯತ್ನದಿಂದ ಇರುತ್ತವೆ, ೪-೬೯ ; ಶಾಂ. ನಿ. ಶಾಸ್ತ್ರವು ಹೀಗೆ ಮಾಡೆಂದು ಪುರುಷನನ್ನು ಕಟ್ಟುಮಾಡುವದು. ಬ್ರಹ್ಮಜ್ಞಾನವು ನಿಯೋಗ ವಿಷಯವಲ್ಲ, ಸುಮ್ಮನೆ ವಸ್ತುವನ್ನು ಉಪದೇಶಿಸುತ್ತದೆ - ಎಂಬುದು ಆಚಾರ್ಯರ ಮತ, ಸೂ. ಭಾ. ೧-೧-೪, ೩-೨-೨೧.

**ನಿರಪೇಕ್ಷಂ ಪ್ರಾಮಾಣ್ಯಮ್** - ಬ್ರ.ಸೂ-೧. ಮತ್ತೊಂದು ಪ್ರಮಾಣವನ್ನು ಬಯಸದೆ ತಿಳಿಸುವ ಪ್ರಮಾಣಸ್ವರೂಪ, ಪೌರುಷೇಯಶಬ್ದದಂತೆ ಅಲ್ಲ (ವೇದದ ಪ್ರಾಮಾಣ್ಯ), ೪೦೨.

**ನಿರಪೇಕ್ಷಃ** - ನೈ. ಗ್ರಾಹಕಾದಿಗಳು ಸಾಕ್ಷಿಪೂರ್ವಕವಾಗಿ ಸಿದ್ಧವಾಗುವ-ದಾದರೂ ಸಾಕ್ಷಿಗೂ ಮತ್ತೊಂದರ ಅಪೇಕ್ಷೆಯಿಂದ ಸಿದ್ಧಿಯೆಂಬುದಿಲ್ಲ, ಏಕೆಂದರೆ ಆತ್ಮನು ನಿರಪೇಕ್ಷನು, ಅವಿಕ್ರಿಯನಾದ್ದರಿಂದ ಮತ್ತೊಂದನ್ನು ಬಯಸುವದಿಲ್ಲ, ೨-೭೫, ೧೧೦.

**ನಿರಸ್ತಸರ್ವವಿಶೇಷ, ನಿರ್ವಿಶೇಷ** - ಬ್ರ.ಸೂ-೧. ಯಾವ ವಿಶೇಷವೂ ಇಲ್ಲದ (ಬ್ರಹ್ಮ), ೧೦೯, ೧೧೫, ೧೨೮.

**ನಿರಂಜನಃ** - ತೈ. ಯಾವದರ ಅಂಟೂ ಇಲ್ಲದ ಆತ್ಮ, ೨೫೮.

**ನಿರಂಜನಜ್ಞಾನಸ್ವರೂಪಃ** - ಶಾಂ. ನಿ. ಯಾವದರ ಅಂಟೂ ಇಲ್ಲದ ಜ್ಞಾನಸ್ವರೂಪನಾದ ವಾಸುದೇವ, ೨-೨-೪೨.

**ನಿರತಿಶಯೋಪಾಧಿಸಂಪನ್ನಃ** - ಶಾಂ. ನಿ. ಎಲ್ಲಕ್ಕೂ ಹೆಚ್ಚಿನ ಉತ್ತಮವಾದ ಉಪಾಧಿಯಿಂದ ಕೂಡಿದ ಈಶ್ವರನು, ಜೀವರನ್ನು ಆಳುವವನು, ಸೂ. ಭಾ. ೨-೩-೪೫.

**ನಿರಧಿಷ್ಠಾನ** - ಶಾಂ. ನಿ. ಶರೀರವಿಲ್ಲದ ಈಶ್ವರ ; ಅಧ್ಯಾರೋಪಕ್ಕೆ ಆಸ್ಪದವಾದದ್ದನ್ನು ಅಧಿಷ್ಠಾನವೆಂದು ಭಾಷ್ಯದಲ್ಲಿ ವ್ಯವಹರಿಸಿಲ್ಲ. ಸೂ. ೨-೨-೪೦.

**ನಿರಸ್ತಸರ್ವೋಪಾಧಿಭೇದಃ, ನಿರುಪಾಧಿಕಃ** - ಭ.ಗೀ. ಯಾವದೊಂದು ಉಪಾಧಿಯೂ ಇಲ್ಲದ, ೨೮೯, ೭೨೫, ೭೫೭, ೯೧೬.

**ನಿರಸ್ತೈಷಣಃ, ನಿರಸ್ತಸರ್ವಕರ್ಮಾ** - ನೈ. ಏಷಣಾತ್ರಯವನ್ನು ಬಿಟ್ಟು ಸರ್ವಕರ್ಮಗಳನ್ನೂ ಸಂನ್ಯಾಸಮಾಡಿರುವವನೇ ಅದ್ವೈತಜ್ಞಾನಕ್ಕೆ ಅಧಿಕಾರಿ, ೪-೭೧,೭೩..

**ನಿರನ್ವಯನಾಶ** - ಶಾಂ. ನಿ. ವಸ್ತು ಮತ್ತೊಂದು ರೂಪದಲ್ಲಿ ಅನುಗತವಾಗದ ನಾಶ ; ಬೌದ್ಧಾದಿಗಳು ಒಪ್ಪುವ ನಾಶವಿದು. ಮಡಕೆಯು ನಾಶವಾದರೂ ಮಣ್ಣಿನ ರೂಪದಿಂದ ಅನುಗತವಾಗಿಯೇ ಇರುತ್ತದೆ ; ಇದರಂತೆ ನಾಶವೆಂದರೆ ಯಾವದಾದರೊಂದು ರೂಪದಿಂದ ಅವಸ್ಥಾಂತರದಲ್ಲಿ ಅನುಗತವಾಗಿರುವದು ಎಂಬುದು ವೇದಾಂತಿಗಳ ಮತವು. ಸೂ. ಭಾ. ೨-೨-೨೨.

**ನಿರನ್ವಯಂ ಪ್ರವಿಲೀಯತೇ** - ಕಠ. ಕಾರಣಸಹಿತವಾಗಿ ನಾಶವಾಗುತ್ತದೆ ಎಂಬ ನಾಸ್ತಿಕರ ಮತ, ೧೭೮.

**ನಿರಸ್ತೋಪಾಧಿಸಂಬನ್ಧ, ನಿರುಪಾಧಿಕ** - ಶಾಂ. ನಿ. ಯಾವ ಉಪಾಧಿಯ ಹಂಗೂ ಇಲ್ಲದ ಬ್ರಹ್ಮ ; ಇದೇ ಬ್ರಹ್ಮದ ಪರಮಾರ್ಥರೂಪವು, ಸೂ. ಭಾ.

**ನಿರಾಗಮಸ್ತರ್ಕಃ** - ಬ್ರ.ಸೂ-೧. ಶಾಸ್ತ್ರಬಲವಿಲ್ಲದ ಬರಿಯ ತರ್ಕ, ೪೨೭.

**ನಿರಾಬಾಧ, ಅನಾಬಾಧ** - ಶಾಂ. ನಿ. ಬಾಧಿತವಾಗದ, ಸಹಜವಾಗಿರುವ ಸ್ವರೂಪ ಸುಖ, ಪ್ರ. ಭಾ. ೪-೧, ೪-೬.

**ನಿರಾತ್ಮವಾದಃ** - ಮಾಂ. ಆತ್ಮನೇ ಇಲ್ಲವೆಂಬ ಶೂನ್ಯವಾದ, ೯೩. ; **ಶಾಂ. ನಿ.** ಜಗತ್ತಿಗಾಗಲಿ ಜೀವರಿಗಾಗಲಿ ಯಾವ ಶಾಶ್ವತವಾದ ತಿರುಳೂ ಇಲ್ಲವೆಂದು ಬೌದ್ಧರ ವಾದ, ಉಪ. ಪದ್ಯ, ೧೬-೬೮, ಮಾಂ.ಕಾ.ಭಾ. ೩-೧೦.

**ನಿರಾಬಾಧಮ್, ಅನಾಬಾಧಮ್** - ಪ್ರಶ್ನ. ಬಾಧಿತವಾಗದ, ಸಹಜವಾಗಿರುವ ಸುಖ, ಸ್ವರೂಪಸುಖ, ೫೩., ೬೮.

**ನಿರಾಸ್ಪದ** - ಪ್ರಶ್ನ. ಯಾವದೊಂದು ಆಧಾರವೂ ಇಲ್ಲದ (ಭ್ರಾಂತಿ)- ೨೯, ೯೪, ೧೧೪, ೧೧೭, ೧೧೮ ; **ಶಾಂ. ನಿ.** ಆಶ್ರಯವಿಲ್ಲದ ಕಲ್ಪನೆ, ಹಗ್ಗವು ಹಾವಿಗೂ

ಕಪ್ಪೆಯಚಿಪ್ಪು ಬೆಳ್ಳಿಗೂ ಆಸ್ಪದವು ; ಈಗಿನವರು ಇದನ್ನು 'ನಿರಧಿಷ್ಠಾನ'ವೆನ್ನುವರು, ಮುಂ. ಭಾ. ೨-೩.೨, ಮುಂ. ಭಾ. ೪.

**ನಿರಾಸ್ಪದಾಃ** - ಭ.ಗೀ. ಯಾವ ಸತ್ಯವಾದ ಆಧಾರವೂ ಇಲ್ಲದ ಹುಸಿ ತೋರಿಕೆಗಳು, ೭೯೯.

**ನಿರ್ಗುಣಃ** - **ಈಶ.** ಯಾವ ಧರ್ಮವೂ ಇಲ್ಲದ (ಆತ್ಮ), ೧೫ ; **ಭ.ಗೀ.** ಯಾವ ಗುಣವೂ ಇಲ್ಲದ, ಗುಣಗುಣಿಭಾವವಿಲ್ಲದೆ ಚಿನ್ಮಾತ್ರನಾಗಿರುವ, ೪೬೮, ೮೩೪, ೮೩೮.

**ನಿರ್ಗುಣಃ ಪುರುಷಃ** - ಬ್ರ.ಸೂ-೧. ಯಾವ ಧರ್ಮವೂ ಇಲ್ಲದ ಆತ್ಮ, ೪೦೭.

**ನಿರ್ಗುಣಂ ಬ್ರಹ್ಮ** - ಬ್ರ.ಸೂ-೧. ಯಾವ ಧರ್ಮವೂ ಇಲ್ಲದ ಬ್ರಹ್ಮ, ೧೭೯.

**ನಿರ್ದುಃಖಿತ್ವಮ್** - ನೈ. ದುಃಖವಿಲ್ಲದವನಾಗಿರುವದು. ಆತ್ಮನಿಗೆ ನಿರ್ದುಃಖಿತ್ವವು ತಾನೇ ಸಿದ್ಧ ಪ್ರಮಾಣಸಿದ್ಧವಲ್ಲ, ೩-೯೪; ತದರ್ಥವಿಶೇಷದಿಂದ ತ್ವಮರ್ಥವು ನಿರ್ದುಃಖಿ ಎಂದಾಗುತ್ತದೆ, ೩-೧೦.

**ನಿರ್ದ್ವಯಮ್** - ನೈ. **ಅದ್ವಿತೀಯ.** ಅದ್ವಿತೀಯಾತ್ಮನನ್ನು ಲಕ್ಷ್ಯವಿಟ್ಟು ಕರ್ಮವನ್ನು ಶಾಸ್ತ್ರದಲ್ಲಿ ವಿಧಿಸಿಲ್ಲ, ಮನುಷ್ಯತ್ವಾಭಿಮಾನಿಯಾದವನಿಗೆ ವಿಧಿಸಿದೆ, ೧-೯೬.

**ನಿರ್ನಿಮಿತ್ತತ್ವಮ್** - **ಮಾಂ.** ಕಲ್ಪನೆಗೆ ಯಾವ ಆಸ್ಪದವೂ ಇಲ್ಲದಿರುವಿಕೆ, ೩೫.

**ನಿರ್ದೋಷಂ ಶಾಸ್ತ್ರಮ್** - ಬ್ರ.ಸೂ-೧. ಪುರುಷರ ವಚನವಲ್ಲದ್ದರಿಂದ ಪುರುಷರ ದೋಷವಿಲ್ಲದ ವೇದ, ೭೮.

**ನಿರುದ್ಧ** - **ಮಾಂ.** ಜ್ಞಾನದಿಂದ ಬಾಧಿತವಾದ, ೧೯೦, ೧೯೨, ೧೯೩.

**ನಿರುಪಾಧಿಕಮ್** - **ಈಶ.** ಉಪಾಧಿಯಿಲ್ಲದ (ಆತ್ಮ) ರೂಪ, ೧೧ ; **ಕೇನ.** ಯಾವ ಉಪಾಧಿಯೂ ಇಲ್ಲದ, ೭೮ ; **ಕಠ.** ಉಪಾಧಿಯಿಲ್ಲದ ಬರಿಯ ಆತ್ಮ, ೧೭೬, ೧೮೦.

**ನಿರುಪಾಧಿಕಃ** - **ಮುಂ.** ಯಾವ ಉಪಾಧಿಯ ಹಂಗೂ ಇಲ್ಲದ ಶುದ್ಧಾತ್ಮ, ೫೫.

**ನಿರುಪಾಧಿಕ** - **ಮಾಂ.** ಯಾವ ಉಪಾಧಿಯೂ ಇಲ್ಲದ (ಆತ್ಮ) ೩೫ ; **ಬೃಹ-೨.** ಯಾವ ಉಪಾಧಿಯೂ ಇಲ್ಲದ (ಆತ್ಮ), ೪೪, ೫೬.

**ನಿರುಪಾಧಿ, ನಿರುಪಾಧಿಕ** - **ಬೃಹ-೧.** ಯಾವ ಉಪಾಧಿಯೂ ಇಲ್ಲದ (ಬ್ರಹ್ಮ, ಪರಮಾತ್ಮ), ೨೮೬ ; ೩.೯೮.

**ನಿರುಪಾಖ್ಯ** - **ಬೃಹ-೧.** ಹೀಗೆಂದು ಸ್ಪಷ್ಟವಾಗಿ ಹೇಳಲಾಗದ, ೨೮೬, ೩.೯೮ ; **ಶಾಂ. ನಿ.** ಯಾವದೊಂದು ಗೊತ್ತಾದ ರೂಪದಿಂದಲೂ ತಿಳಿಸಲಾಗದ ಸೋಪಾಖ್ಯವಲ್ಲದ ಬ್ರಹ್ಮ, ಬೃ. ಭಾ. ೨-೩-೧ ; ಅವಸ್ತುತ್ವ, ಸೂ. ಭಾ. ೨-೨-೨೪.

**ನಿರುಪಾಖ್ಯಃ** - **ಬೃಹ-೨.** ಇಂಥವನೆಂದು ಹೇಳುವದಕ್ಕೆ ಬಾರದ, (ಔಪನಿಷದ ಪುರುಷ), ೯೪, ೧೫೭.

**ನಿರೇಷಣಾಃ**- **ತೈ.** ಮಕ್ಕಳು, ಕರ್ಮ, ಉಪಾಸನೆಗಳು - ಇವುಗಳ ಫಲವನ್ನು ಬಯಸದವರು ೧೮೬ ; **ಶಾಂ. ನಿ.** ಪುತ್ರಾದಿಗಳ ಬಯಕೆಯಿಲ್ಲದ, ವಿರಕ್ತವಾದ, ತೈ. ಭಾ. ೨-೯.

**ನಿರೋಧ** - **ಶಾಂ. ನಿ.** ನಾಶ, ಪ್ರಲಯ, ಗೌ. ಕಾ. ಭಾ. ೨-೩೨.

**ನಿವೃತ್ತಿನಿಷ್ಠತ್ವಮ್** - **ಬ್ರ.ಸೂ-೧.** ಸಂನ್ಯಾಸನಿಷ್ಠನಾಗಿರುವದು. ೪೦೭.

**ನಿವೃತ್ತ್ಯುಪದೇಶಃ, ನಿಷೇಧಃ** - **ಬ್ರ.ಸೂ-೧.** ಮಾಡಬೇಡವೆಂದು ಕರ್ಮವನ್ನು ಬಿಡುವಂತೆ ಹೇಳುವದು, (ವೇದವಾಕ್ಯ), ೫೬.

**ನಿವೃತ್ತಿಃ** - **ಕಠ.** ಕರ್ಮಗಳನ್ನು ಬಿಡುವದು, ಜ್ಞಾನಮಾರ್ಗ, ೯೦.

**ನಿವೃತ್ತಿ ಮಾರ್ಗಃ** - **ಈಶ.** ಎಲ್ಲವನ್ನೂ ಬಿಟ್ಟು ಆತ್ಮನ ಕಡೆಗೆ ಹಿಂತಿರುಗುವ ಮಾರ್ಗ, ೭, ೩೩.

**ನಿವೃತ್ತಿಕಾರಣಮ್** - **ಬೃಹ-೨.** ಕರ್ಮದಿಂದ ಹಿಂತಿರುಗುವದಕ್ಕೆ ಕಾರಣ, ೧೬, ೧೭.

**ನಿವೃತ್ತಿಲಕ್ಷಣ** - **ಭ.ಗೀ.** ಜ್ಞಾನವೈರಾಗ್ಯ ರೂಪವಾದ ಧರ್ಮ, ಸಂನ್ಯಾಸ, ೧, ೨೨೮ ; **ಶಾಂ. ನಿ.** ಜ್ಞಾನ, ವೈರಾಗ್ಯಸ್ವರೂಪವಾದ (ಧರ್ಮ), ಗೀ. ಭಾ. ಭಾ. ೧.

**ನಿಃಶ್ರೇಯಸಮ್** - **ಬ್ರ.ಸೂ-೧.** ಎಲ್ಲಕ್ಕೂ ಉತ್ತಮವಾದ ಪುರುಷಾರ್ಥ, (ಮೋಕ್ಷ), ೨೦, ೩೫೦, ೩೮೯, ೪೦೭ ; **ಬ್ರ.ಸೂ-೨.** ಉತ್ತಮಪುರುಷಾರ್ಥ, ಮೋಕ್ಷ, ಬ್ರಹ್ಮವು ಆತ್ಮಸ್ವರೂಪವಾಗಿರುವದರಿಂದ ಆತ್ಮನ ಸ್ವರೂಪವನ್ನು ಗೊತ್ತುಪಡಿಸುವದರಿಂದಲೇ ನಿಃಶ್ರೇಯಸ, ೧-೨೦ ; ನಿಃಶ್ರೇಯಸಕ್ಕಾಗಿ ಬ್ರಹ್ಮಜಿಜ್ಞಾಸೆ, ೧-೩೮೯ ; ಧರ್ಮಜ್ಞಾನಬ್ರಹ್ಮಜ್ಞಾನಗಳಿಂದ ವಿದ್ಯಾವಿದ್ಯೆಗಳಿಂದ ಅಭ್ಯುದಯ ನಿಃಶ್ರೇಯಸಗಳು, ೧-೧೨, ೩೫೦ ; ಆತ್ಮೈಕತ್ವ ವಿಜ್ಞಾನಕ್ಕೆ ಬೇರೊಂದು ನಿಃಶ್ರೇಯಸ

ಸಾಧನವಿಲ್ಲವೆಂದು ಶ್ರುತಿ, ೧-೪೦೭ ; **ಕಠ.** ಎಲ್ಲಕ್ಕೂ ಹೆಚ್ಚಿನ ಹಿತ, ಮುಕ್ತಿ, ೩.೨, ೩.೭, ೪೮ ; **ಬೃಹ-೧.** ಹೆಚ್ಚಿನ ಶ್ರೇಯಸ್ಸಾದ (ಮೋಕ್ಷ), ೧೬೯, ೧೭೮ ; **ಭ.ಗೀ.** ಹೆಚ್ಚಿನ ಶ್ರೇಯಸ್ಸು, ಮುಕ್ತಿ, ೧, ೪, ೬, ೧೫೬, ೨೪೦, ೩.೨೨, ೩.೨೯, ೩.೩೩, ೬.೨೪, ೧೨೨೫,

**ನಿರ್ವಿಕಲ್ಪ - ಮಾಂ.** ಯಾವ ವಿಕಲ್ಪವೂ ಇಲ್ಲದ (ಆತ್ಮ) , ೧೦೮, ೧೨೧, ೧೯೦ ; **ತೈ.** ದ್ರವ್ಯ, ಗುಣ, ಕ್ರಿಯೆ-ಮುಂತಾದ ವಿಕಲ್ಪಗಳಿಲ್ಲದ ೧೭೭, ೨೨೧, ೨೨೨ ; **ಶಾಂ. ನಿ.** ಅದು, ಇದು - ಎಂದು ವಿಕಲ್ಪಿಸಲಾಗದ (ಬ್ರಹ್ಮ).

**ನಿರ್ವಿಕಲ್ಪ, ನಿರ್ವಿಶೇಷ - ಭ.ಗೀ.** ಇಂಥದ್ದೆಂಬ ವಿಶೇಷವಿಲ್ಲದ ಆತ್ಮವಸ್ತು, ೮೨೮, ೮೩೪, ೮೯೦ ; **ಶಾಂ. ನಿ.** ಇಂಥದ್ದು, ಅಂಥದ್ದು - ಎಂಬ ವಿಶೇಷವಿಲ್ಲದ (ಬ್ರಹ್ಮ).

**ನಿರ್ವಿಶೇಷ - ಬ್ರ.ಸೂ-೨.** ಯಾವ ವಿಶೇಷವೂ ಇಲ್ಲದ (ಪರಬ್ರಹ್ಮ) ೩.೧೭; **ಮಾಂ.** ಇಂಥದ್ದು ಅಂಥದ್ದು - ಎಂದು ಗೊತ್ತುಮಾಡಿ ಹೇಳುವ ವಿಶೇಷವಿಲ್ಲದ, ೧೩, ೧೧೫.

**ನಿರ್ವಿಶೇಷಃ - ಈಶ.** ಇಂಥದ್ದೆಂಬ ವಿಶೇಷವಿಲ್ಲದ, ೧೫ ; **ಮುಂ.** ಯಾವ ವಿಶೇಷಗಳೂ ಇಲ್ಲದ ಆತ್ಮ, ೫೯.

**ನಿರ್ವಿಶೇಷಮ್ - ಕೇನ.** ಇಂಥದ್ದೆಂದು ಹೇಳುವದಕ್ಕೆ ಬರುವ ವಿಶೇಷಗಳು ಯಾವವೂ ಇಲ್ಲದ, ೩.೨, ೫೩, ೫೫ ; **ಪ್ರಶ್ನ.** ಇಂಥದ್ದು, ಅಂಥದ್ದು - ಎಂಬ ವಿಶೇಷವು ಯಾವದೂ ಇಲ್ಲದ, ೯೦ ; **ತೈ.** ಯಾವ ವಿಶೇಷವೂ ಇಲ್ಲದ (ಅಭಾವ) ೯ ; ಬ್ರಹ್ಮ ೧೦೮ ; **ಐತ.** ಇಂಥದ್ದು, ಅಂಥದ್ದು ಎಂದು ಹೇಳುವದಕ್ಕೆ ಇರಬೇಕಾದ ವಿಶೇಷಗಳು ಯಾವವೂ ಇಲ್ಲದಿರುವದು, ೭೧.

**ನಿರ್ವಿಶೇಷಣ, ನಿರ್ಗುಣ - ನೈ.** ಯಾವ ಧರ್ಮವೂ ಇಲ್ಲದ. ಯಾವಯಾವದನ್ನು ಆತ್ಮನ ವಿಶೇಷಣವೆನ್ನುವರೋ ಅದು ಯಾವದೂ ಆತ್ಮನೊಡನೆ ಅನ್ವಯಿಸಿರುವದಿಲ್ಲವಾದ್ದರಿಂದ ಆತ್ಮನು ನಿರ್ವಿಶೇಷಣನು, ೨-೯೪; ನೇತಿ ನೇತಿ ಎಂದು ಮತ್ತೆ ಮತ್ತೆ ಶ್ರುತಿ ಹೇಳುವದರಿಂದ ಆತ್ಮನು ನಿರ್ಗುಣನು, ೨-೪೨.

**ನಿರ್ಬೀಜರೂಪಮ್ - ಮಾಂ.** ಕಾರಣತ್ವವಿಲ್ಲದ (ಆತ್ಮನ) ಶುದ್ಧರೂಪ, ೨೪.

**ನಿರ್ವಾಣಮ್ - ಮಾಂ.** ಕೈವಲ್ಯ, ೨೦೯ ; **ಐತ.** ದೀಪವು ಆರಿ ನಿರ್ವಿಶೇಷವಾಗುವಂತೆ ಇಲ್ಲಿಯೇ ಪಡೆಯುವ ಮುಕ್ತಿ, ೮೦.

**ನಿಷ್ಪ್ರದೇಶ** - ಬ್ರ.ಸೂ-೧. ಯಾವದೊಂದು ಗೊತ್ತಾದ ಪ್ರದೇಶವಿಲ್ಲದ, ದೇಶದ ಆಧಾರವಿಲ್ಲದ, (ಬ್ರಹ್ಮ), ೧೯೬.

**ನಿಷ್ಪ್ರಪಞ್ಚಸದಾತ್ಮತ್ವಮ್** - ಬ್ರ.ಸೂ-೧. ಯಾವ ಭೇದವೂ ಇಲ್ಲದ ಸದ್ರೂಪವಾಗಿರುವ ಆತ್ಮನಾಗಿರುವದು, ೪೧೮.

**ನಿಷ್ಕಲಮ್** - **ಮುಂ.** ಅವಯವಗಳಿಲ್ಲದ ಬ್ರಹ್ಮ, ೮೫, ೧೦೫.

**ನಿಷ್ಕ್ರಿಯಬ್ರಹ್ಮಾತ್ಮದರ್ಶನಮ್, ನಿಷ್ಕ್ರಿಯಾತ್ಮದರ್ಶನಮ್** - ಭ.ಗೀ. ಯಾವ ಕ್ರಿಯೆಯೂ ಇಲ್ಲದ ಆತ್ಮನನ್ನು ಅರಿತುಕೊಳ್ಳುವದು, ೨೭೪, ೨೮೦.

**ನಿಷ್ಕ್ರಿಯಾತ್ಮ** - **ಶಾಂ.** ನಿ. ಯಾವ ಕ್ರಿಯೆಯೂ ಇಲ್ಲದ ಆತ್ಮ, ಗೀ. ಭಾ. ೫, ಅವ.

**ನಿಷ್ಕ್ರಿಯಾತ್ಮಸ್ವರೂಪಾವಸ್ಥಾನಮ್** - ಭ.ಗೀ. ಯಾವ ಕ್ರಿಯೆಯೂ ಇಲ್ಲದೆ ಆತ್ಮನ ಸ್ವರೂಪದಲ್ಲಿ ನೆಲೆನಿಲ್ಲುವದು, ೩೨೩, ೩೨೫.

**ನಿಷೇಕಾದಿಶ್ಮಶಾನಾನ್ತಮ್** - **ಈಶ.** ಗರ್ಭಾಧಾನದಿಂದ ಹಿಡಿದು ಅಂತ್ಯೇಷ್ಟಿಯವರೆಗಿನ ಕರ್ಮ, ೩೩.

**ನಿಃಸಂಬೋಧಸ್ವಚ್ಛತಾರೂಪ** - ಬ್ರ.ಸೂ-೧. ಯಾವ ವಿಶೇಷಜ್ಞಾನವೂ ಇಲ್ಲದ ಶುದ್ಧ ಚೈತನ್ಯರೂಪ, ೩೭೬.

**ನೇತಿ ನೇತಿ** - **ನೈ.** ಇದಲ್ಲ, ಇದಲ್ಲ. ಶ್ರುತಿಯಲ್ಲಿ ಬ್ರಹ್ಮವು ನಿರ್ಗುಣವೆಂದು ತಿಳಿಸುವದಕ್ಕೆ ''ನೇತಿ ನೇತಿ'' ಎಂದು ಮತ್ತೆ ಮತ್ತೆ ಹೇಳಿದೆ, ೨-೪೨; ಈ ಶ್ರುತಿಯ ಅರ್ಥವನ್ನು ಅರಿತುಕೊಂಡವನು ವಿದೇಹನಾದ್ದರಿಂದ ಕರ್ಮವನ್ನು ಕಣ್ಣೆತ್ತಿಯೂ ನೋಡನು, ೧-೫೮.

**ನೈಸರ್ಗಿಕ** - ಬ್ರ.ಸೂ-೧. ಮನುಷ್ಯಸ್ವಭಾವಕ್ಕೆ ಅಂಟಿಕೊಂಡಿರುವ, ಶಾಸ್ತ್ರೀಯವಲ್ಲದ (ವ್ಯವಹಾರ) ; ೧, (ಅಧ್ಯಾಸ) ೯ ; **ಶಾಂ.** ನಿ. ಮನುಷ್ಯನ ಸ್ವಭಾವದಿಂದಲೇ ಇದ್ದುಕೊಂಡಿರುವ ಅವಿದ್ಯಕ ವ್ಯವಹಾರವೇ ಮುಂತಾದದ್ದು ; ಆಗಂತುಕವಲ್ಲ.

**ನೈಯಾಯಿಕಾಃ** - ಬೃಹ-೧. ನ್ಯಾಯಶಾಸ್ತ್ರವನ್ನು ಅವಲಂಬಿಸಿದವರು, ೩೪೩, ೩೭೯.

**ನೈಷ್ಕರ್ಮ್ಯಪ್ರವಣ** - ನೈ. ನಿಷ್ಕರ್ಮಭಾವದ ಜ್ಞಾನದ ಕಡೆಗೇ ಒಲಿಯುವ ಶ್ರುತಿಗಳು. ''ಪರೀಕ್ಷ್ಯ ಲೋಕಾನ್'' (ಮುಂ. ೧-೨-೧) ಮುಂತಾದ ಶ್ರುತಿಗಳು ನೈಷ್ಕರ್ಮ್ಯವನ್ನೇ ಒತ್ತಿಹೇಳುತ್ತವೆ, ೧-೮೭.

**ನೈಷ್ಕರ್ಮ್ಯಮ್** - ಭ.ಗೀ. ಕರ್ಮವಿಲ್ಲದ ಆತ್ಮಜ್ಞಾನದಲ್ಲಿ ನಿಷ್ಠೆ, ೧೬೦, ೧೬೧, ೧೬೨, ೧೬೩, ೧೯೩.

**ನೈಷ್ಠಿಕಃ** - ಛಾಂ. ಜೀವಮಾನವೆಲ್ಲ ಗುರುಕುಲದಲ್ಲಿಯೇ ಇದ್ದುಕೊಂಡಿರುವ ಬ್ರಹ್ಮಚಾರಿ, ೧೭೬, ೪೦೬.

# ಪ

**ಪಂಚಕೋಶಃ** - ತೈ. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ - ಎಂಬ (ಆತ್ಮನ) ಮುಸುಕುಗಳು ೧೪೯ ; ಶಾಂ. ನಿ. ತೈತ್ತಿರೀಯದಲ್ಲಿ ಹೇಳಿರುವ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ - ಎಂಬ ಐದು ಕೋಶಗಳು. ಆನಂದಮಯವೆಂಬ ಐದನೆಯದನ್ನು ಕೋಶವೆಂದು ಆಚಾರ್ಯರ ಹಿಂದಿನ ವೃತ್ತಿಕಾರರು ಒಪ್ಪಿರಲಿಲ್ಲ, ತೈ. ಭಾ. ೨-೪ ಮತ್ತು ಸೂ. ಭಾ. ೧-೧-೨ನ್ನು ನೋಡಿ.

**ಪಂಚಭೂತಾತ್ಮಕ, ಪಂಚಭೂತಜನಿತ** - ಬೃಹ-೧. ಐದುಭೂತಗಳ ಕಾರ್ಯವಾದ, ೩೫, ೩೨೮.

**ಪಂಚಮಹಾಯಜ್ಞಪ್ರಕರಣಮ್** - ಬೃಹ-೧. ಭೂತಯಜ್ಞ, ಮನುಷ್ಯಯಜ್ಞ, ಪಿತೃಯಜ್ಞ, ದೇವಯಜ್ಞ, ಬ್ರಹ್ಮಯಜ್ಞ - ಎಂಬ ಐದುಯಜ್ಞಗಳನ್ನು ವಿಧಿಸಿ, ಹೊಗಳಿರುವ ಪ್ರಕರಣ, ಶತ. ಬ್ರಾ. ೧೧-೫-೬-೧ ರಿಂದ ೯.

**ಪಂಚವೃತ್ತಿಃ** - ಬ್ರ.ಸೂ-೧. ಪ್ರಾಣಾಪಾನಾದಿಯಾದ ಐದುವೃತ್ತಿಗಳುಳ್ಳ (ಪ್ರಾಣ), ೧೨೨, ೨೩೭, ೩೧೫.

**ಪಂಚಸೂನಾಃ** - ಭ.ಗೀ. ಗೃಹಸ್ಥರಿಗೆ ಅನಿವಾರ್ಯವಾದ ಐದು ಹಿಂಸೆಗಳು, ೧೭೪.

**ಪಂಚಭೂತಾನಿ** - ಐತ. ಜಗತ್ತಿಗೆ ಕಾರಣವಾಗಿರುವ ಪೃಥ್ವಿ, ಅಪ್ಪು, ತೇಜಸ್ಸು ವಾಯು, ಆಕಾಶ - ಎಂಬ ಐದುಭೂತಗಳು, ೮೭.

**ಪಂಚಾಗ್ನಯಃ** - ಕಠ. ಛಾಂದೋಗ್ಯದಲ್ಲಿ ಹೇಳಿರುವ ಪಂಚಾಗ್ನಿವಿದ್ಯೆಯನ್ನು

ಬಲ್ಲವರು, ೪೫ ; ಮುಂ. ದ್ಯುಲೋಕ, ಪರ್ಜನ್ಯ, ಪೃಥ್ವಿ, ಪುರುಷ, ಸ್ತ್ರೀ - ಎಂದು ಛಾಂದೋಗ್ಯದಲ್ಲಿ ಉಪಾಸನೆಗೆ ಹೇಳಿರುವ ಐದುಕಲ್ಪಿತಾಗ್ನಿಗಳು, ೬೨.

**ಪಂಚಾಗ್ನಿದರ್ಶನಮ್, ಪಂಚಾಗ್ನಿವಿದ್ಯಾ - ಬೃಹ-೨.** ದ್ಯುಲೋಕವೇ ಮುಂತಾದ ಐದರಲ್ಲಿ ಅಗ್ನಿ ಬುದ್ಧಿಯನ್ನು ಮಾಡುವ ಉಪಾಸನೆ ೪೨೬, ೪೪೬, ೪೪೮.

**ಪಂಚೀಕರಣಮ್ - ಶಾಂ. ನಿ.** ಐದು ಭೂತಗಳನ್ನು ಒಂದೊಂದರಲ್ಲಿ ಮಿಕ್ಕ ನಾಲ್ಕನ್ನೂ ಬೆರೆಯಿಸಿ ಸ್ಥೂಲಭೂತಗಳಾಗಿ ಮಾಡುವದು. ಛಾಂದೋಗ್ಯದಲ್ಲಿ ಹೇಳಿರುವ ತ್ರಿವೃತ್ಕರಣವು ಇದಕ್ಕೆ ಉಪಲಕ್ಷಣವೆಂದು ಭಾಷ್ಯಕಾರರ ಮತ, ಛಾಂ. ಭಾ. ೬-೪-೪.

**ಪಂಚೇಂದ್ರಿಯಾಣಿ - ಮುಂ.** ಚಕ್ಷುಸ್ಸು , ಶ್ರೋತ್ರ ಮುಂತಾದ ಐದು ಜ್ಞಾನೇಂದ್ರಿಯಗಳು, ೧೯ ; **ಐತ.** ಚಕ್ಷುರಿಂದ್ರಿಯ, ಶ್ರೋತ್ರೇಂದ್ರಿಯ, ಸ್ಪರ್ಶೇಂದ್ರಿಯ, ಜಿಹ್ವೇಂದ್ರಿಯ, ಘ್ರಾಣೇಂದ್ರಿಯ - ಎಂಬ ಅರಿಯುವದಕ್ಕೆ ಸಾಧನ ವಾಗಿರುವ ಇಂದ್ರಿಯಗಳು, ೩೬.

**ಪಣ್ಡಿತಃ - ಶಾಂ. ನಿ.** ತಿಳಿದವನು, ಆತ್ಮಜ್ಞಾನಿ, ಗೀ. ಭಾ. ೨-೧೧.

**ಪಣ್ಡಿತಾಃ - ಬ್ರ.ಸೂ-೧.** ಬಲ್ಲವರು, ತತ್ತ್ವವನ್ನು ತಿಳಿದಿರುವವರು, ೪ ; ಆತ್ಮಾನಾತ್ಮವಿವೇಕಿಗಳು, ೫೯.

**ಪಡ್ವೀಶಶಂಕುನಿದರ್ಶನಮ್ - ಬೃಹ-೧.** ಕಾಲುಗೂಟಗಳನ್ನು ಕಿತ್ತುಕೊಂಡು ಹೋಗುವ ಕುದುರೆಯ ದೃಷ್ಟಾಂತ (೬-೧-೧೩), ೩೩೦.

**ಪಟಲಮ್ - ನೈ.** ಕಣ್ಣುಪರೆ. ಅವಿದ್ಯಾಪಟಲಮ್ ೧-೪೧, ೩-೩೩, ೪-೩೬ ಅನವಬೋಧಪಟಲಮ್ ೨-೫೨ ಎಂದು ಮುಂತಾಗಿ ಅಜ್ಞಾನವನ್ನು ಕಣ್ಣುಪರೆಗೆ ಈ ಪ್ರಕರಣದಲ್ಲಿ ಹೋಲಿಸಿರುತ್ತದೆ. ಇದರಿಂದ ಅದು ಭಾವರೂಪವಾಗಿರುವದೆಂದು ಕೆಲವರು ಊಹಿಸಿರುತ್ತಾರೆ; ಆದರೆ ಜ್ಞಾನಾಭಾವಕ್ಕಿಂತ ಬೇರೆಯ ಅವಿದ್ಯೆಯನ್ನು ಪ್ರಕರಣಕಾರರು ಒಪ್ಪಿರುವದಿಲ್ಲ, ಪೀಠಿಕೆಯನ್ನು ನೋಡಿ.

**ಪದಪದಾರ್ಥೌ- ನೈ.** ವಾಕ್ಯವಿಲ್ಲದೆ ಪದಪದಾರ್ಥಗಳ ವಿಚಾರವಾಗುವದಿಲ್ಲ, ೨-೮ ಪದಪದಾರ್ಥಗಳನ್ನು ಅರಿತಿರುವವನಿಗೆ ವಾಕ್ಯದಿಂದ **ಅಜ್ಞಾನದ** ನಿವೃತ್ತಿ ೩-೧; ಪದಪದಾರ್ಥವಿವೇಕವು 'ಅಹಮ್' (ನಾನು) ಎಂಬಲ್ಲಿ ಆತ್ಮತತ್ತ್ವನಿರ್ಧಾರಣೆಗೆ ಯುಕ್ತಿ, ೪-೨೨.

**ಪದವಾಕ್ಯಪ್ರಮಾಣಜ್ಞಃ - ಬ್ರ.ಸೂ-೧.** ಪದಗಳ, ವಾಕ್ಯಗಳ, ಮತ್ತು ಪ್ರಮಾಣಗಳ ತತ್ತ್ವವನ್ನು ಬಲ್ಲ(ಬಾದರಾಯಣಾಚಾರ್ಯರು), ೬೪.

**ಪದಸಮನ್ವಯಃ** - ಶಾಂ. ನಿ. ವಾಕ್ಯದಲ್ಲಿರುವ ಪದಗಳ ಸಂಬಂಧವು ವಿಹಿತ ಕ್ರಿಯಾವಾಚಕಪದದಲ್ಲಿಯೇ ಇರಬೇಕೆಂಬ ಮೀಮಾಂಸಕರ ಪಕ್ಷವನ್ನು ಖಂಡಿಸಿ ಬ್ರಹ್ಮಸ್ವರೂಪವನ್ನೂ ವಸ್ತುಮಾತ್ರವನ್ನೂ ತಿಳಿಸುವದರಲ್ಲಿಯೂ ವೇದಾಂತ ವಾಕ್ಯಗಳು ಸಮನ್ವಿತವಾಗಿರುವವೆಂದು ಆಚಾರ್ಯರು ತೋರಿಸಿರುತ್ತಾರೆ, ಸೂ. ಭಾ. ೧-೧-೪.

**ಪದಾರ್ಥಃ** - ಶಾಂ. ನಿ. ವಾಕ್ಯದಲ್ಲಿ ಪದಗಳ ಅರ್ಥದ ಜ್ಞಾನವು ವಾಕ್ಯಾರ್ಥ ಜ್ಞಾನಕ್ಕೆ ಹೇತುವಾಗಿರುವದರಿಂದ 'ತತ್ತ್ವಮಸಿ' ಮುಂತಾದ ವಾಕ್ಯಗಳ ಜ್ಞಾನವಾಗದೆ ಇರುವದಕ್ಕೆ ತತ್, ತ್ವಂ - ಎಂಬ ಪದಗಳ ಅರ್ಥದ ಜ್ಞಾನವಾಗದೆ ಇರುವದೇ ಕಾರಣವೆಂದು ಆಚಾರ್ಯರ ಮತ, ಸೂ. ಭಾ. ೪-೧-೨.

**ಪದಾರ್ಥದ್ವಯಮ್** - ನೈ. ಆತ್ಮ, ಅನಾತ್ಮ ಎಂಬೆರಡು ಪದಾರ್ಥಗಳಲ್ಲಿ ಅಜ್ಞಾನಾಶ್ರಯತ್ವ ವಿಷಯತ್ವವು ಆತ್ಮನಿಗೆ ಹೊಂದುತ್ತದೆ ; ಅನಾತ್ಮಕ್ಕಲ್ಲ, ೩-೧.

**ಪದಾನಾಂ ಸಂಹತಿಃ** - ಬೃಹ-೧. ಪದಗಳು ಒಟ್ಟುಗೂಡಿ ವಾಕ್ಯವಾಗುವದು, ೫೩.

**ಪರಃ** - ಬ್ರ.ಸೂ-೧. ಎಲ್ಲಕ್ಕೂ ಹೆಚ್ಚಿನ (ಈಶ್ವರ, ಪರಮಾತ್ಮ), ೯೦, ೯೨, ೧೬೦, ೨೫೪, ೨೬೯ ; ಬ್ರ.ಸೂ-೨. ಹೆಚ್ಚಿನವನು, ಪರಮಾತ್ಮ.

**ಪರತಃ ಸಿದ್ಧ, ಭಿನ್ನಸಾಧನ** - ನೈ. ಮತ್ತೊಂದರಿಂದ ಸಿದ್ಧ. ಅನಾತ್ಮವು ಆತ್ಮನಿಂದಲೇ ಸಿದ್ಧವಾಗತಕ್ಕದ್ದು, ಪ್ರಮಾಣದಿಂದಲೇ ಸಿದ್ಧವಾಗತಕ್ಕದ್ದು, ೨-೯, ೧೦೧.

**ಪರಃ ಪುರುಷಃ** - ಬ್ರ.ಸೂ-೧. ಎಲ್ಲರಿಗಿಂತಲೂ ಹೆಚ್ಚಿನ ಪುರುಷ, (ಪರಬ್ರಹ್ಮ), ೨೪೮, ೨೪೯, ೨೫೦, ೨೫೧ ; **ಮುಂ.** ಹೆಚ್ಚಿನ ಪುರುಷ, ಪರಮಾತ್ಮ, ೧೨೧.

**ಪರಃ ಪುರುಷಾರ್ಥಃ** - ಐತ. ಪುರುಷಾರ್ಥಗಳಲ್ಲೆಲ್ಲ ಹೆಚ್ಚಿನದಾದ ಮೋಕ್ಷವು; ಕಠ. ಪುರುಷನು ಬಯಸುವ ಮಹಾಫಲಗಳಲ್ಲಿ ಮುಖ್ಯವಾದ ಮೋಕ್ಷ, ೩೩, ೪೫.

**ಪರಃ ಪುರುಷಾರ್ಥಃ, ಪರಮಪುರುಷಾರ್ಥಃ** - ಮುಂ. ಜನರು ಬಯಸುವ ಹೆಚ್ಚಿನ ಫಲ, ಮೋಕ್ಷ, ೧, ೧೧೪.

**ಪರಃ ಪುರುಷಾರ್ಥಃ, ಪರಂ ನಿಃ ಶ್ರೇಯಸಮ್, ಪರಮನಿಃ ಶ್ರೇಯಸಮ್** - ಭ.ಗೀ. ಎಲ್ಲಕ್ಕೂ ಹೆಚ್ಚಿನ ಪುರುಷಾರ್ಥ, ೪, ೮೬, ೧೧೨೫ ; **ಶಾಂ. ನಿ.** ಎಲ್ಲಕ್ಕೂ ಹೆಚ್ಚಿನ ಪುರುಷಾರ್ಥ, ಮೋಕ್ಷ ಗೀ. ಭಾ. ಭಾ. ೪, ೨-೪೩, ೧೮-೬೬ (ಸೂ. ಭಾ. ಭಾ. ೫೮೪).

**ಪರ ಆತ್ಮಾ, ಪರಮಾತ್ಮಾ** - **ಬ್ರ.ಸೂ-೧.** ಎಲ್ಲಕ್ಕೂ ಹೆಚ್ಚಿನ ಆತ್ಮ, ಸರ್ವರಿಗೂ ನಿಜವಾಗಿ ಆತ್ಮನಾಗಿರುವ (ಈಶ್ವರ), ೧೫೮, ೧೬೩, ೧೬೬, ೧೭೦, ೧೭೩, ೧೮೯, ೨೦೧, ೨೨೨, ೨೩೨, ೨೩೮, ೨೪೦, ೨೫೦, ೨೭೬, ೨೭೯, ೩೩೬, ೩೪೭, ೩೭೧, ೩೭೮, ೩೮೦, ೩೮೪, ೪೨೫, ೪೭೦ ; **ಬ್ರ.ಸೂ-೨.** ಹೆಚ್ಚಿನ ಆತ್ಮ, ಪರಮಾತ್ಮಾ, ಪರಃ ಪುರುಷಃ, ಪರಮೇಶ್ವರಃ - ಇವೆಲ್ಲ ಪರಬ್ರಹ್ಮಕ್ಕೇ ಹೆಸರುಗಳು. ಈ ಹೆಸರುಗಳನ್ನು ಉಪಾಸ್ಯಬ್ರಹ್ಮಕ್ಕೂ ಜ್ಞೇಯಬ್ರಹ್ಮಕ್ಕೂ ಸಮವಾಗಿಯೇ ಭಾಷ್ಯದಲ್ಲಿ ಉಪಯೋಗಿಸಿದೆ. ಒಂದನೆಯ ಸಂಪುಟದ ಶಬ್ದಾನುಕ್ರಮಣಿಕೆಯನ್ನೂ ಈ ಸಂಪುಟದ ಪೀಠಿಕೆಯನ್ನೂ ನೋಡಿ ; **ಪ್ರಶ್ನ.** ಎಲ್ಲರಿಗೂ ಆತ್ಮನಾಗಿರುವ ಬ್ರಹ್ಮ, ನಿಜವಾದ ಆತ್ಮ, ೫೧, ೭೦, ೭೪, ೮೩ ; **ಮಾಂ.** ಎಲ್ಲರಿಗೂ ಆತ್ಮನಾಗಿರುವ ನಿಜವಾದ ಆತ್ಮ, ೧೩೨, ೧೫೬, ೧೫೮, ೧೭೩ ; **ಬೃಹ-೧.** ಎಲ್ಲರಿಗೂ ನಿಜವಾಗಿ ಆತ್ಮನಾಗಿರುವ ಅಸಂಸಾರ್ಯಾತ್ಮ, ೫೨, ೫೬, ೧೪೯ ; ಜೀವನಿಗಿಂತ ಭಿನ್ನನಾದ ಈಶ್ವರ, ೩೦೯.

**ಪರಪ್ರಾಪ್ತಿಃ** - **ಮುಂ.** ಹೆಚ್ಚಿನ ಬ್ರಹ್ಮವನ್ನು ಪಡೆಯುವದು, ಮೋಕ್ಷ, ೧, ೧೧೪ ; **ತೈ.** ಹೆಚ್ಚಿನ ಪುರುಷಾರ್ಥವನ್ನು ಪಡೆಯುವದು, ಬ್ರಹ್ಮವನ್ನು ಪಡೆಯುವದು ೨.

**ಪರಂ ಬ್ರಹ್ಮ** - ಬ್ರ.ಸೂ-೧. ಪರಮಾತ್ಮನೇ, (ಜೀವಪ್ರಧಾನಾದಿಗಳಲ್ಲ), ೯೪, ೧೧೭, ೧೨೩, ೧೩೫, ೧೩೮, ೧೪೯, ೧೫೨, ೨೨೦, ೨೨೩, ೨೨೫, ೨೪೪, ೨೪೮, ೨೭೦, ೩೨೦, ೩೨೫, ಶುದ್ಧಬ್ರಹ್ಮವೇ, (ಅಪರಬ್ರಹ್ಮವಲ್ಲ), ೨೪೮, ೨೪೯, ೨೫೦ ; **ಬ್ರ.ಸೂ-೨.** ಹೆಚ್ಚಿನ ಬ್ರಹ್ಮ . ಮುಖ್ಯಬ್ರಹ್ಮ , ಕಾರಣಬ್ರಹ್ಮ , ಅವಿಕೃತಬ್ರಹ್ಮ , ನಿರ್ಗುಣಬ್ರಹ್ಮ, ಶುದ್ಧಬ್ರಹ್ಮ, ನಿರ್ವಿಶೇಷಬ್ರಹ್ಮ, ನಿಷ್ಪ್ರಪಂಚಬ್ರಹ್ಮ, ನಿರಾಕಾರಬ್ರಹ್ಮ, ನಿರುಪಾಧಿಕಬ್ರಹ್ಮ - ಇವೆಲ್ಲ ಪರಬ್ರಹ್ಮಕ್ಕೇ ಹೆಸರುಗಳು. ಒಂದೇ ಬ್ರಹ್ಮವನ್ನು ಉಪಾಸ್ಯವಾಗಿ ಅಪರಬ್ರಹ್ಮವೆಂದೂ ಜ್ಞೇಯವಾಗಿ ಪರಬ್ರಹ್ಮವೆಂದೂ ಶ್ರುತಿಯಲ್ಲಿ ಕರೆದಿದೆ, ೨-೫೮೬; ಉಪಾಸ್ಯವಾಗಿ ಹೇಳಿರುವಾಗ ಪರಬ್ರಹ್ಮವೆಂದು ಕರೆದಮಾತ್ರಕ್ಕೆ ಅದು ಜ್ಞೇಯದ ವಾಕ್ಯವಾಗಲಾರದು, ಮತ್ತೊಂದರ ಅಪೇಕ್ಷೆಯಿಂದ ಕಾರ್ಯ ಬ್ರಹ್ಮವನ್ನೂ ಪರವೆನ್ನಬಹುದು, ೧-೨೪೯ ; ಉಪಾಸನಾವಾಕ್ಯಗಳು ವಿಧಿಪ್ರಧಾನ ವಾಗಿರುವದರಿಂದ ಅವುಗಳಲ್ಲಿ ಹೇಳಿರುವದೆಲ್ಲ ಬ್ರಹ್ಮಸ್ವರೂಪಕ್ಕೇ ಸೇರಿದ್ದೆಂದು ತಿಳಿಯಬಾರದು, ೨-೨೮೧ ; ಬ್ರಹ್ಮಕ್ಕೆ ರೂಪ, ಆಧಾರ, ಐಶ್ವರ್ಯಮರ್ಯಾದೆ, ಪ್ರದೇಶವಿಶೇಷ, ಆಧಾರಬಹುತ್ವ, ಅಲ್ಪಫಲ - ಮುಂತಾದವನ್ನು ಹೇಳಿರುವದು ಉಪಾಸನೆಗಾಗಿ, ಪೀಠಿಕೆಯನ್ನು (ಪು. xiv) ನೋಡಿ. ಪರಬ್ರಹ್ಮವು ಗಂತವ್ಯವಲ್ಲ, ೨-೫೮೨ ರಿಂದ ೫೮೪ ; **ಕಠ.** ವೇದಾಂತದಲ್ಲಿ ತಿಳಿದುಕೊಳ್ಳಬೇಕೆಂದು ಹೇಳಿರುವ ಬ್ರಹ್ಮ, ೩, ೮೫, ೮೬, ೧೫೭, ೧೬೦ ; **ಪ್ರಶ್ನ.** ಹೆಚ್ಚಿನ ಬ್ರಹ್ಮ, ನಮ್ಮ ಆತ್ಮವೇ ಎಂದು

ಅರಿತುಕೊಳ್ಳಬೇಕಾಗಿರುವ ಬ್ರಹ್ಮ, ೨, ೮೦ ; ಮಾಂ. ಎಲ್ಲಕ್ಕೂ ಹೆಚ್ಚಿನ ತತ್ತ್ವವಾದ ಬ್ರಹ್ಮ, ೭೧, ೧೩೦ ; ತೈ. ಹೆಚ್ಚಿನ ನಿರುಪಾಧಿಕವಾದ ಬ್ರಹ್ಮ, ೬, ೧೪೮.

**ಪರಮಂ ಬ್ರಹ್ಮ, ಪರಬ್ರಹ್ಮ - ಮುಂ.** ಶುದ್ಧವಾದ, ಎಲ್ಲಕ್ಕೂ ಹೆಚ್ಚಿನ ಬ್ರಹ್ಮ, ೬, ೧೨೫, ೧೨೯.

**ಪರಬ್ರಹ್ಮ - ಐತ.** ತೀರ ಹೆಚ್ಚಿನ ಬ್ರಹ್ಮ; ಸಗುಣವಾದ ಹಿರಣ್ಯಗರ್ಭನಲ್ಲ, ೮, ೧೪, ೩೭, ೫೫.

**ಪರಂ ಬ್ರಹ್ಮ, ಪರಮಾತ್ಮಾ - ಬೃಹ-೨.** ಹೆಚ್ಚಿನ ಬ್ರಹ್ಮ, ನಿರ್ವಿಶೇಷನಾದ ಆತ್ಮ, ೨೨, ೨೫.

**ಪರಂ ಬ್ರಹ್ಮ, ಪರಮಂ ಬ್ರಹ್ಮ - ಭ.ಗೀ.** ಹೆಚ್ಚಿನ ಬ್ರಹ್ಮ, ಪರಮಾತ್ಮ, ೬, ೧೦೭, ೨೮೯, ೩೫೬, ೫೦೨, ೫೧೫, ೫೩೦, ೬೧೯ ; **ಶಾಂ. ನಿ.** ಎಲ್ಲಕ್ಕೂ ಹೆಚ್ಚಿನ ಪರಮಾರ್ಥ ; ಪರಮಾತ್ಮ. ಹಿರಣ್ಯಗರ್ಭನೆಂಬ ಅಪರಬ್ರಹ್ಮದ ಅಪೇಕ್ಷೆಯಿಂದ ಇದನ್ನು ಪರ, ಮುಖ್ಯ, ಕಾರಣ ಎಂಬ ವಿಶೇಷಣಗಳಿಂದ ಕರೆಯುವರು. ಸೂ. ಭಾ. ೪-೩-೭.

**ಪರಂ ಶ್ರೇಯಃ - ಪ್ರಶ್ನ.** ಹೆಚ್ಚಿನ ಒಳ್ಳೆಯದು, ಮೋಕ್ಷ, ೮೭ ; ತೈ. ಹೆಚ್ಚಿನ ಶ್ರೇಯಸ್ಸು, ಮುಕ್ತಿ, ೬೯, ೮೧, ೮೬, ೮೯.

**ಪರವಿದ್ಯಾ - ಛಾಂ.** ಕರ್ಮವಿಷಯವಲ್ಲದ, ಪರಮಾತ್ಮವಿಷಯಕವಾದ ಜ್ಞಾನ, ೫೪೭.

**ಪರಮರ್ಷಯಃ - ಬ್ರ.ಸೂ-೧.** ದೊಡ್ಡ ಋಷಿಗಳಾದ (ಕಪಿಲಾದಿಗಳು),

**ಪರಮಕಾರಣಮ್, ಮೂಲಕಾರಣಮ್ - ಬ್ರ.ಸೂ-೧.** ಇಡಿಯ ಜಗತ್ತಿನ ಜನ್ಮಕ್ಕೆ ಕಾರಣವಾದ, ಕಾರಣಬುದ್ಧಿಗೂ ಮೂಲವಾದ (ಬ್ರಹ್ಮ), ೨೫, ೨೦೭, ೩೮೦, ೪೩೨, ೪೩೫, ೪೫೦.

**ಪರಮಕಾರಣಮ್, ಮೂಲಕಾರಣಮ್, ಮೂಲಪ್ರಕೃತಿಃ - ಬ್ರ.ಸೂ-೨.** ಮೊದಲನೆಯ ಕಾರಣ. ಜನ್ಮಾದಿಸೂತ್ರದಲ್ಲಿ ಮೂಲಕಾರಣವಾದ ಬ್ರಹ್ಮದಿಂದಾಗುವ ಜಗಜ್ಜನ್ಮಾದಿಗಳನ್ನೇ ಹೇಳಿದೆ, ೧-೨೫ ; ಸರ್ವಲೋಕಾಶ್ರಿತಫಲವು ಪರಮಕಾರಣ ದಿಂದಲೇ, ೧-೨೦೭ ; ಆತ್ಮವಿಜ್ಞಾನದಿಂದ ಸರ್ವವಿಜ್ಞಾನವೆಂಬುದು ಪರಮ

ಕಾರಣಕ್ಕೇ ಹೊಂದುತ್ತದೆ, ೧-೩೮೦ ; ಪ್ರಪಂಚವು ಪರಮಕಾರಣಕ್ಕಿಂತ ಬೇರೆಯಲ್ಲವಾದರೂ ಅದರಲ್ಲಿ ಭೋಕ್ತ್ರಾದಿವಿಭಾಗವಿರಬಹುದು, ೧-೪೨೨ ; ಶ್ರುತಿಯಲ್ಲಿ ಪರಮಕಾರಣವೊಂದೇ ಸತ್ಯವೆಂದಿದೆ, ೧-೪೩೫ ; ಮೂಲಕಾರಣವೊಂದೇ ಕೊನೆಯವರೆಗೂ ನಟನಂತೆ ಬೇರೆ ಬೇರೆಯ ಕಾರ್ಯದ ರೂಪವನ್ನು ಹೊಂದಿರುತ್ತದೆ, ೧-೪೫೦ ; ಮೂಲಪ್ರಕೃತಿಯನ್ನು ಒಪ್ಪದಿದ್ದರೆ ಅನವಸ್ಥಾದೋಷ, ೨-೧೦೬ ; ಉತ್ಪತ್ತಿಗೆ ವಿಪರೀತಕ್ರಮದಲ್ಲಿ ಲಯವಾಗಿ ಎಲ್ಲವೂ ಪರಮಕಾರಣವಾದ ಬ್ರಹ್ಮದಲ್ಲಿ ಸೇರಿಹೋಗುವದು, ೨-೧೧೫ ; ಮೂಲಪ್ರಕೃತಿಯಾದ ಬ್ರಹ್ಮದಲ್ಲಿ ಪ್ರಾಣಾದಿಗಳು ಇರುವದಿಲ್ಲ, ೨-೧೭೬ ; ಮೂಲಕಾರಣವನ್ನೂ ಬರಿಯ ಉಪಾದಾನಕಾರಣವನ್ನಾಶ್ರಯಿಸಿಯೇ ನಿಶ್ಚಯಿಸಬೇಕೆಂಬ ನಿರ್ಬಂಧವು ಕೂಡದು, ೨-೫.

**ಪರಮಕಾರುಣಿಕ** - ಬೃಹ-೧. ದಯಾಲುವಾದ (ಆಚಾರ್ಯ), ೩೧೬.

**ಪರಮಕಾರುಣಿಕಃ** - ಬೃಹ-೨. ಅತ್ಯಂತಕರುಣೆಯುಳ್ಳ (ಆಚಾರ್ಯ), ೧೮೨

**ಪರಮಗುರುಃ** - ಭ.ಗೀ. ಎಲ್ಲರಿಗೂ ಆದಿಗುರುವಾದ ವಾಸುದೇವ ೨೦೫, ೧೧೪೬ ; **ಶಾಂ. ನಿ.** ಎಲ್ಲರಿಗೂ ಗುರುವಾದ ವಾಸುದೇವ, ಗೀ. ಭಾ. ೧೮-೬೮.

**ಪರಮಪುರುಷಾರ್ಥಃ** - ಬೃಹ-೧. ಎಲ್ಲಕ್ಕೂ ಹೆಚ್ಚಿನ ಪುರುಷಾರ್ಥವಾದ (ಮೋಕ್ಷ), ೧೩.೧.

**ಪರಮಂ ಸಾಮ್ಯಮ್** - ಮುಂ. ಬ್ರಹ್ಮವೇ ತಾನಾಗುವ ಅದ್ವೈತಪ್ರಾಪ್ತಿ, ೯೪.

**ಪರಮಹಂಸಪರಿವ್ರಾಜಕಃ** - **ಶಾಂ. ನಿ.** ಸರ್ವಕರ್ಮಸಂನ್ಯಾಸವನ್ನು ಮಾಡಿದ ತುರೀಯಾಶ್ರಮದವನು, ಗೀ. ಭಾ. ೩-೩.

**ಪರಮಹಂಸಪರಿವ್ರಾಜಕಾಃ** - ಭ.ಗೀ. ಕರ್ಮಸಂನ್ಯಾಸವನ್ನು ಮಾಡಿರುವ ಜ್ಞಾನಿಗಳು, ೧೫೬, ೮೩೯, ೧೦೨೫.

**ಪರಮಹಂಸಪಾರಿವ್ರಾಜ್ಯಮ್** - **ಮಾಂ.** ಮುಮುಕ್ಷುಗಳೂ ಜ್ಞಾನಿಗಳೂ ಮಾಡುವ ಸರ್ವಕರ್ಮಸಂನ್ಯಾಸ, ೧೨೫.

**ಪರಮಾ ಗತಿಃ, ಪರಾ ಗತಿಃ, ಪರಾ ಸಿದ್ಧಿಃ** - ಭ.ಗೀ. ಹೆಚ್ಚಿನ ಗತಿ, ಮೋಕ್ಷ, ೪೪೯, ೫೧೭, ೫೯೮, ೮೩೧, ೮೪೬.

**ಪರಮಾಣವಃ - ಪ್ರಶ್ನ.** ಜಗತ್ತಿಗೆ ಕಾರಣವೆಂದು ವೈಶೇಷಿಕರು ಹೇಳುವ ಪೃಥ್ವಿಯೇ ಮುಂತಾದವುಗಳ ತೀರ ಸೂಕ್ಷ್ಮವಾದ ಅಂಶಗಳು, ೧೦೧.

**ಪರಮಾಣುಕಾರಣವಾದಃ - ಬ್ರ.ಸೂ-೨.** ಅಣುಗಳೇ ಜಗತ್ಕಾರಣವೆಂಬ ವೈಶೇಷಿಕರ ವಾದ, ೨-೨೧ ; ಅದರ ಖಂಡನೆ, ೨-೨೧ ರಿಂದ ೪೦.

**ಪರಮಾತ್ಮಾ - ಈಶ.** ಎಲ್ಲಕ್ಕೂ ಹೆಚ್ಚಿನ ನಿಜವಾದ ಆತ್ಮನು, ೩ ; **ಕಠ.** ಆತ್ಮನೆಂದು ನಾವು ತಿಳಿದುಕೊಂಡಿರುವವುಗಳೆಲ್ಲಕ್ಕೂ ಆತ್ಮನು, ೯೬ ; **ಐತ** ಎಲ್ಲಕ್ಕೂ ಹೆಚ್ಚಿನ ನಿಜವಾದ ಆತ್ಮ, ೧೯, ೮೧ ; **ಛಾಂ.** ಬ್ರಹ್ಮ, ೭ ; **ಭ.ಗೀ.** ಎಲ್ಲಕ್ಕೂ ಹೆಚ್ಚಿನ ಮುಖ್ಯಾತ್ಮ, ೧೭೭, ೩೩೯, ೩೯೩, ೬೧೯, ೮೧೬, ೮೩೮, ೮೩೯, ೮೯೦, ೮೯೫, ೯೦೨, ೯೦೩, ೯೧೫, ೧೦೯೫ ; **ಕೇನ.** ನಿಜವಾಗಿಯೂ ಆತ್ಮನಾಗಿರುವವನು, ಅವಿದ್ಯೆಯಿಂದ ಕಲ್ಪಿತವಾಗಿರುವ ಆತ್ಮಗಳಿಗೆಲ್ಲಕ್ಕೂ ಹೆಚ್ಚಿನವನು, ೮೨ ; **ಶಾಂ. ನಿ.** ಎಲ್ಲಕ್ಕೂ ಹೆಚ್ಚಿನ ಮುಖ್ಯಾತ್ಮ, ಎಲ್ಲರಿಗೂ ಆತ್ಮ, ಗೀ. ಭಾ. ೧೩-೨೨.

**ಪರಮಾತ್ಮಾ, ಪರ ಆತ್ಮಾ - ಮುಂ.** ನಮ್ಮೆಲ್ಲರ ಆತ್ಮ ಬ್ರಹ್ಮ, ೧೪೫, ೨೦೭, ೨೧೧ ; **ತೈ.** ನಿಜವಾಗಿ ನಮ್ಮ ಸ್ವರೂಪನಾಗಿರುವ ಆತ್ಮ ೧೪೫, ೨೦೭, ೨೧೧ ; **ನೈ.** ನಿಜವಾಗಿಯೂ ಎಲ್ಲರಿಗೂ ಆತ್ಮನಾಗಿರುವ ಬ್ರಹ್ಮ . ದ್ವೈತಿಗಳು ಜ್ಞಾನಾಭ್ಯಾಸದಿಂದ ಪರಮಾತ್ಮನನ್ನು ಪಡೆದುಕೊಂಡರೂ ಪಡೆದುಕೊಂಡಾರು, ವಿರುದ್ಧವಾದ ಕರ್ಮದಿಂದಲ್ಲ , ೧-೭೨; ಅನಾತ್ಮದ ಚಿಂತನೆಯನ್ನು ಬಿಡುವದರಿಂದಲೇ ಪರಮಾತ್ಮನ ಉಪಾಸನೆಮಾಡಬೇಕು ಎಂಬುದು ದ್ರಷ್ಟವ್ಯಃ ಮುಂತಾದ ವಿಧಿಗಳ ಅರ್ಥ, ೧-೮೮; ಅಹಂಕಾರವು ಪರಮಾತ್ಮನಿಗೆ ಲಕ್ಷಣವಾಗಿರುತ್ತದೆ, ೨-೫೪ ರಿಂದ ೫೬; ಅವಿದ್ಯೆಯು ಅವಸ್ತುವಾದರೂ ಪರಮಾತ್ಮನಂತೆ ವಸ್ತುವಾಗಿ ಕಾಣುತ್ತಿರುತ್ತದೆ, ೩-೧೧೧; ಪರಮಾತ್ಮ, ಅಪರಮಾತ್ಮ - ಈ ಎರಡನ್ನೂ ವಿಂಗಡಿಸಿಕೊಳ್ಳದೆ ಇರುವವನಿಗೆ ಶ್ರುತಿಯು ಉಪದೇಶಮಾಡಿದೆ, ೪-೨೦.

**ಪರಮಾತ್ಮ ತತ್ತ್ವಮ್ - ಮುಂ.** ನಿಜವಾಗಿರುವ ತತ್ತ್ವವು, ಬ್ರಹ್ಮಸ್ವರೂಪ, ೧೦೧, ೧೧೨.

**ಪರಮಾರ್ಥತತ್ತ್ವಮ್, ಪರಮಾರ್ಥಃ, ಪರಮಾರ್ಥವಸ್ತು, ಪರವಸ್ತು - ಭ.ಗೀ.** ನಿಜವಾಗಿರುವ ಬ್ರಹ್ಮ, ೬, ೯, ೧೨, ೬೬, ೯೦, ೧೧೪, ೧೩೩, ೩೫೩, ೬೧೨, ೭೬೭, ೮೪೪, ೮೪೬, ೯೨೫.

**ಪರಮಾತ್ಮಭಾವಃ - ಈಶ.** ಪರಮಾತ್ಮಸ್ವರೂಪ, ೯ ; **ತೈ.** ಪರಮಾತ್ಮನ ಸ್ವರೂಪ ೨೧೨, ೨೨೭.

**ಪರಮಾತ್ಮೈಕತ್ವಮ್** - ಬೃಹ-೧. ಪರಮಾತ್ಮನು ಒಬ್ಬನೇ ನಿಜವಾಗಿರುವ-ನೆಂಬುದು, (ಆತ್ಮೈಕತ್ವ), ೩೧೬, ೩೧೯.

**ಪರಮಾತ್ಮೈಕದೇಶಃ** - ಬೃಹ-೧. ಪರಮಾತ್ಮನ ಒಂದು ದೇಶ, ಒಂದು ಅವಯವ, ೩೧೫, ೩೧೭.

**ಪರಮಾತ್ಮಾಕಾಶಮ್ ಆಕಾಶಃ** - ಬೃಹ-೨. ಆಕಾಶದಂತೆ ಸರ್ವಗತವಾದ ಪರಮಾತ್ಮ ೩೦೨, ೩೫೭.

**ಪರಮಾತ್ಮವಿದ್ಯಾ , ಪರಮಾತ್ಮಜ್ಞಾನಮ್** - **ಈಶ.** ಪರಮಾತ್ಮನನ್ನು ಅರಿತುಕೊಳ್ಳುವದು, ೨೨, ४೧, ४೨ ; **ಮುಂ.** ಪರಮಾತ್ಮನನ್ನು ಇದ್ದಂತೆ ಅರಿತುಕೊಳ್ಳುವದು, ಬ್ರಹ್ಮವಿದ್ಯೆ , ೮, ೧೩, ೮೨.

**ಪರಮಾತ್ಮಲೋಕಃ** - ಬೃಹ-೧. ಪರಮಾತ್ಮನೆಂಬ ಲೋಕ (ದೇವಾದಿ ಲೋಕಗಳಲ್ಲ), ೧೮೭.

**ಪರಮಾತ್ಮವಿಕಾರಃ** - ಛಾಂ. ಪರಮಾತ್ಮನ ಕಾರ್ಯ, (ಮಿಥ್ಯಾ ಪ್ರಪಂಚ) ೧೮೮.

**ಪರಮಾರ್ಥಃ** - ಬ್ರ.ಸೂ-೧. ಒಂದೇ ರೂಪವಾಗಿರುವ ವಸ್ತು , ೩೬೨. ४೨೯ ; **ಬ್ರ.ಸೂ-೨.** ನಿಜವಾಗಿರುವ ವಸ್ತು ಒಂದೇ ರೂಪದಲ್ಲಿಲ್ಲದ್ದು ಪರಮಾರ್ಥವಲ್ಲ , ಆದರ ಜ್ಞಾನವು ಸಮ್ಯಗ್ಜ್ಞಾನವೂ ಅಲ್ಲ , ೧-४೨೯ ; ಪರಮಾರ್ಥವಾಗಿ ಆತ್ಮನಲ್ಲಿ ಈಶಿತ್ರೀಶಿತವ್ಯಾದಿವ್ಯವಹಾರವಿಲ್ಲ, ೧-४४೦ ; ಉಪಾಧಿ ಕಲ್ಪಿತರೂಪಕ್ಕಿಂತ ಬೇರೆಯಾಗಿ ಜೀವನು ಪರಮಾರ್ಥವಾಗಿಲ್ಲ , ೧-೨೬೯, ೨-೧४೦ ; ಸ್ವಪ್ನದಲ್ಲಾಗುವ ಜೀವನ ವ್ಯವಹಾರವು ಪಾರಮಾರ್ಥಿಕವಲ್ಲ , ವಾಸನಾಮಯ, ೨-೧೫೬ ; ಸ್ವಪ್ನವು ಪರಮಾರ್ಥವಲ್ಲ, ೨-೨೫೬ ; ಜೀವನಿಗೆ ಅಣುತ್ವವು ಔಪಾಧಿಕ, ಆನಂತ್ಯವು ಪಾರಮಾರ್ಥಿಕ, ೨-೧೩೮ ; ವಿಜ್ಞಾನಾತ್ಮ ಪರ ಮಾತ್ಮಭೇದವು ಪರಮಾರ್ಥವಲ್ಲ , ೧-೩೮೮ ; ಜೀವನ ದುಃಖವೂ ಪರ ಮಾರ್ಥವಲ್ಲ ೧-೧೬೨ ; ಪರಮಾರ್ಥಾವಸ್ಥೆಯಲ್ಲಿ ಯಾವ ವ್ಯವಹಾರವೂ ಇಲ್ಲ, ೧-४४೧ ; ಶಾರೀರನಿಗೆ ಪರಮೇಶ್ವರರೂಪವೇ ಪಾರಮಾರ್ಥಿಕ, ೨-४४೫ ; **ನೈ.** ನಿಜವಾಗಿಯೂ ಇರುವದು. ಆತ್ಮವಸ್ತು , ೧-೩೬; ಕ್ರಿಯಾಕಾರಕಫಲರೂಪವಾದ ತೋರಿಕೆಯು ಪರಮಾರ್ಥವಸ್ತುವಿಗೆ ಸೋಂಕುವದಿಲ್ಲ, ೨-೫೧; ಪರಮಾರ್ಥ-ದಿಂದ ಆತ್ಮನಿಗೆ ಅವಿದ್ಯೆಯ ಅಥವಾ ಅದರ ಕಾರ್ಯದ ಸಂಬಂಧವು ಮೂರು ಕಾಲದಲ್ಲಿಯೂ ಇಲ್ಲ , ೨-೫೩; ಪರಮಾರ್ಥತತ್ತ್ವವನ್ನು ತಿಳಿದವನು ಕರ್ಮಕ್ಕೆ

ಶೇಷವಾಗಲಾರನು, ೪-೫೬; ಪರಮಾರ್ಥವನ್ನರಿತವರಿಗೆ ದುಃಖವೇ ಇಲ್ಲ, ೨-೯೦; ಈ ಪ್ರಕರಣದಲ್ಲಿ ಪರಮಾರ್ಥವಾದ ಆತ್ಮಜ್ಞಾನವನ್ನು ಹೇಳಿದೆ, ೪-೫೨ ; **ಶಾಂ. ನಿ.** ಒಂದೇ ರೂಪವಾಗಿ, ತನ್ನ ಸ್ವರೂಪವನ್ನು ಮಾರ್ಪಡಿಸದೆ ಇರುವ ವಸ್ತು, ಹುಸಿತೋರಿಕೆಯಲ್ಲ, ಸೂ. ಭಾ. ೨-೧-೧೧.

**ಪರಮಾರ್ಥವಸ್ತು, ಪರಮಾರ್ಥಃ - ಮುಂ.** ನಿಜವಾಗಿರುವ ವಸ್ತು, ಬ್ರಹ್ಮ, ೪೮, ೯೦.

**ಪರಮಾರ್ಥಃ, ಪರಮಾರ್ಥತತ್ತ್ವ - ಮಾಂ.** ನಿಜವು, ನಿಜವಾಗಿರುವ ವಸ್ತು, ೩೧, ೫೨, ೧೪೦, ೧೬೧, ೧೬೩, ೧೯೦, ೨೧೪.

**ಪರಮಾರ್ಥಃ, ಪರಮಾರ್ಥಸತ್ಯಮ್ - ಬೃಹ-೨.** ನಿಜವಾಗಿರುವದು, ಕಲ್ಪಿತವಲ್ಲ, ೫೪, ೩೪೯.

**ಪರಮಾರ್ಥಕೃತ - ಮಾಂ.** ನಿಜವಾಗಿರುವ, ೧೪೦.

**ಪರಮಾರ್ಥಚಿನ್ತಕಾಃ - ಮಾಂ.** ನಿಜವನ್ನು ಕುರಿತು ವಿಚಾರಮಾಡುವವರು, ೩೧.

**ಪರಮಾರ್ಥತಃ - ಭ.ಗೀ.** ನಿಜವಾದ ದೃಷ್ಟಿಯಿಂದ, ೨೫೧, ೨೫೨, ೨೬೨, ೨೭೨, ೨೭೪, ೨೮೪, ೨೮೯, ೩೫೩, ೭೬೩, ೮೩೯.

**ಪರಮಾರ್ಥದರ್ಶೀ - ಮಾಂ.** ತತ್ತ್ವವನ್ನೇ ಪರಿಶೀಲಿಸುತ್ತಿರುವವನು, ೬೮ ; **ಭ.ಗೀ.** ತತ್ತ್ವವನ್ನು ಅರಿತಿರುವ ಜ್ಞಾನಿ, ೨೮೪, ೩೪೮, ೫೭೮, ೭೩೧, ೮೩೮, ೧೦೦೫, ೧೦೦೭, ೧೦೨೫.

**ಪರಮಾರ್ಥದರ್ಶಿನಃ - ಮುಂ.** ಪರಮಾರ್ಥವನ್ನೇ ಕಾಣುವವರು, ೧೩.

**ಪರಮಾರ್ಥದರ್ಶನಮ್, ಪರಮಾರ್ಥಜ್ಞಾನಮ್, ಪರಮಾರ್ಥವಸ್ತು-ವಿವೇಕಃ - ಭ.ಗೀ.** ನಿಜವಾಗಿರುವ ತತ್ತ್ವದ ಜ್ಞಾನ, ೮೦, ೮೧,೯೬, ೧೦೧, ೧೦೯, ೩೧೭, ೫೬೮, ೭೬೨ ; **ಶಾಂ. ನಿ.** ನಿಜವಾದ ತಿಳಿವಳಿಕೆ. ಇದನ್ನೇ ಪರಮಾರ್ಥ ಜ್ಞಾನ, ಪರಮಾರ್ಥವಸ್ತು ವಿವೇಕ, ಸಮ್ಯಗ್ಜ್ಞಾನ - ಎಂದು ಕರೆಯುವದು. ಅದ್ವೈತಜ್ಞಾನವು ಮಾತ್ರಪರಮಾರ್ಥದರ್ಶನವೆಂದೂ ಮಿಕ್ಕದ್ದೆಲ್ಲ ಭ್ರಾಂತವೆಂದೂ ಆಚಾರ್ಯರ ಅಭಿಪ್ರಾಯ.

**ಪರಮಾರ್ಥದೃಷ್ಟಿಃ - ಬೃಹ-೨.** ನಿಜವಾಗಿರುವದನ್ನೇ ಹಿಡಿದಿರುವ, ತೋರಿಕೆಯ ನಾಮರೂಪೋಪಾಧಿಯನ್ನು ಹಿಡಿಯದ ದೃಷ್ಟಿ, ೫೪.

**ಪರಮಾರ್ಥಪ್ರತಿಪತ್ತ್ಯುಪಾಯಃ - ಮಾಂ.** ನಿಜವನ್ನು ಅರಿತುಕೊಳ್ಳುವದಕ್ಕೆ ಸಾಧನ, ೩.೨೩.

**ಪರಮಾರ್ಥಬ್ರಹ್ಮ - ತೈ.** ನಿಜವಾಗಿಯೂ ಬ್ರಹ್ಮವಾಗಿರುವ ಆತ್ಮ, ೧೪೯.

**ಪರಮಾರ್ಥವಸ್ತು - ಈಶ.** ನಿಜವಾದ ವಸ್ತು, ೧೭ ; **ಪ್ರಶ್ನ.** ನಿಜವಾಗಿಯೂ ಇರುವ ಆತ್ಮತತ್ತ್ವ, ೧೦೯ ; **ಐತ.** ನಿಜವಾಗಿಯೂ ವಸ್ತುವಾಗಿರುವ ಆತ್ಮ, ತೋರಿಕೆಯ ವಸ್ತುವಲ್ಲ, ೧೯.

**ಪರಮಾರ್ಥಯೋಗಃ - ಭ.ಗೀ.** ನಿಜವಾದ ಯೋಗ, ತತ್ತ್ವಜ್ಞಾನ, ೧೦೪, ೩.೩.೭ ; **ಶಾಂ. ನಿ.** ನಿಜವಾದ ಯೋಗ, ಜ್ಞಾನ. ಕರ್ಮಯೋಗ, ಧ್ಯಾನಯೋಗ - ಮುಂತಾದವುಗಳೆಲ್ಲ ಗೌಣಯೋಗಗಳು ; ಏಕೆಂದರೆ ಅವುಗಳಲ್ಲಿ ಚಿತ್ತಸಮಾಧಾನವೆಂಬ ಗುಣವಿರುತ್ತದೆ. ಗೀ. ಭಾ. ೪ರ ಅವತರಣಿಕೆಯನ್ನು ನೋಡಿ.

**ಪರಮಾರ್ಥನಿರಹಂಕಾರಃ - ಭ.ಗೀ.** ನಿಜವಾಗಿಯೂ ನಾನೆಂಬ ಬುದ್ಧಿಯೇ ಇಲ್ಲದವ, ಜ್ಞಾನಿ, ೧೦೪೯ ; **ಶಾಂ. ನಿ.** ನಿಜವಾಗಿಯೂ ಅಹಂಕಾರವಿಲ್ಲದವನು, ಸಾತ್ತ್ವಿಕನಾಗಿರುವ ನಿಗರ್ವಿಯಲ್ಲ ; ಯಾವ ಕರ್ಮವೂ ಅಹಂಕಾರವೆಂಬ ಕಾರಣವಿಲ್ಲದೆ ಆಗುವದಿಲ್ಲ. ಗೀ. ಭಾ. ೧೮-೨೪.

**ಪರಮಾರ್ಥಸತ್ಯಮ್ - ಈಶ.** ನಿಜವಾಗಿಯೂ ಸತ್ಯವಾಗಿರುವ ಆತ್ಮ, ೩ ; **ಕಠ.** ನಿಜವಾಗಿಯೂ ಸತ್ಯವಾಗಿರುವದು ಬ್ರಹ್ಮ, ೧೫೮ ; **ತೈ.** ನಿಜವಾಗಿಯೂ ಸತ್ಯವಾಗಿರುವ ಬ್ರಹ್ಮ, ೯೨, ೧೧೩, ೧೮೦.

**ಪರಮಾರ್ಥಸತ್, ಪರಮಾರ್ಥಸತ್ಯಮ್ - ಮುಂ.** ನಿಜವಾಗಿಯೂ ಇರುವದು, ವ್ಯವಹಾರದಲ್ಲಿ ಸತ್ಯವೆಂದು ಹೇಳಿಸಿಕೊಳ್ಳುವದು ಮಾತ್ರವಲ್ಲ, ೫೦, ೯ ; **ಛಾಂ.** ನಿಜವಾಗಿರುವದು, ಸತ್ಯವಾಗಿ ತೋರುವದು ಮಾತ್ರವಲ್ಲ, ನಿಜವಾಗಿಯೂ ಸತ್ಯವಾಗಿರುವದು, ೫೦೫, ೫೮೫, ೫೮೭, ೬೦೬.

**ಪರಮಾರ್ಥಸತ್, ಪರಮಾರ್ಥಸತ್ಯ - ಮಾಂ.** ನಿಜವಾಗಿರುವ, ಹುಸಿ ತೋರಿಕೆಯಲ್ಲದ, ೧೧೯, ೧೪೨, ೧೬೫, ೧೭೩, ೧೭೭, ೧೮೨, ೧೮೮, ೨೮೦, ೩೪೮, ೩೫೦.

**ಪರಮಾರ್ಥಸದಾಪನ್ನಃ - ತೈ.** ನಿಜವಾಗಿರುವ ಬ್ರಹ್ಮದ ರೂಪವನ್ನು ಪಡೆದುಕೊಂಡವನು ೧೫೧.

**ಪರಮಾರ್ಥಸುಖಮ್** - **ಮಾಂ.** ಜ್ಞಾನದಿಂದ ಸಿಕ್ಕುವ ನಿಜವಾದ ಸುಖ,

**ಪರಮಾರ್ಥಸಂನ್ಯಾಸಃ, ಪಾರಮಾರ್ಥಿಕಃ ಸಂನ್ಯಾಸಃ** - **ಭ.ಗೀ.** ಮುಖ್ಯಸಂನ್ಯಾಸ, ಫಲತ್ಯಾಗರೂಪವಾದ ಗೌಣಸಂನ್ಯಾಸವಲ್ಲ, ೩.೩೯, ೩.೮೩, ೩.೮೪ ; **ಶಾಂ. ನಿ.** ನಿಜವಾದ ಸರ್ವಕರ್ಮಸಂನ್ಯಾಸ, ಫಲತ್ಯಾಗ ರೂಪವಾದ ಸಂನ್ಯಾಸವಲ್ಲ

**ಪರಮಾರ್ಥಸಂನ್ಯಾಸೀ** - **ಭ.ಗೀ.** ಮುಖ್ಯಸಂನ್ಯಾಸಿ, ಫಲತ್ಯಾಗಿಯಲ್ಲ, ೩.೮೦, ೩.೮೩, ೧೦೦೪.

**ಪರಮಾರ್ಥಸಾಙ್ಖ್ಯದರ್ಶನಮ್** - **ಭ.ಗೀ.** ನಿಜವಾದ ಸಾಂಖ್ಯ, ವೇದಾಂತ ಜ್ಞಾನ, ೮೩೯ ; **ಶಾಂ. ನಿ.** ನಿಜವಾಗಿರುವ ಸಾಂಖ್ಯಜ್ಞಾನ, ವೇದಾಂತ, ಗೀ. ಭಾ. ೧೩-೩.೧.

**ಪರಮಾರ್ಥಾತ್ಮಾ** - **ಈಶ.** ನಿಜವಾಗಿಯೂ ಆತ್ಮನಾಗಿರುವ ಆತ್ಮನು, ೧೭ ; **ಐತ.** ನಿಜವಾಗಿ ಆತ್ಮನಾಗಿರುವ ಪರಮಾತ್ಮ ; ಅವಿದ್ಯೆಗೆ ಆತ್ಮನೆಂದು ತೋರುವ ದೇಹಾದ್ಯಾತ್ಮರಲ್ಲ, ೮ ; **ಬೃಹ-೨.** ನಿಜವಾಗಿಯೂ ಆತ್ಮನು, ಕಲ್ಪಿತಾತ್ಮನಲ್ಲ, ೫೫ ; **ಭ.ಗೀ.** ನಿಜವಾಗಿಯೂ ಆತ್ಮನಾದವನು, ದೇಹಾದಿಗಳಂತೆ ತೋರಿಕೆಯ ಆತ್ಮನಲ್ಲ, ೮೩.೨, ೧೧೩೯ ; **ಶಾಂ. ನಿ.** ನಿಜವಾಗಿಯೂ ಆತ್ಮ, ಅವಿದ್ಯೆಯಿಂದ ಕಲ್ಪಿತನಾದ ಆತ್ಮನಲ್ಲ, ಗೀ. ಭಾ. ೧೩-೨೮.

**ಪರಮಾರ್ಥಾಕಾಶಃ, ಮಹಾಕಾಶಃ** - **ಮಾಂ.** ಉಪಾಧಿಯ ಕಟ್ಟಿಲ್ಲದ ಬರಿಯ ಆಕಾಶ, ೧೪೨, ೧೫೩.

**ಪರಮಾರ್ಥಾಭಿಪ್ರಾಯಃ** - **ಬ್ರ.ಸೂ-೧.** ನಿಜವಾಗಿರುವ ತತ್ತ್ವವನ್ನು ಮನಸ್ಸಿನಲ್ಲಿಟ್ಟುಕೊಂಡಿರುವದು, ೪೪೧.

**ಪರಮಾರ್ಥಾವಸ್ಥಾ** - **ಬ್ರ.ಸೂ-೧.** ನಿಜವಾದ ತತ್ತ್ವವನ್ನು ತಿಳಿದಿರುವ ಸ್ಥಿತಿ, ೪೪೧ ; **ಶಾಂ. ನಿ.** ಅವಿದ್ಯಾಕಲ್ಪಿತವಲ್ಲದ ನಿಜವಾದ ಸ್ಥಿತಿ, ವ್ಯವಹಾರಾವಸ್ಥೆಯಲ್ಲ, ಸೂ. ಭಾ. ೨-೧-೧೪.

**ಪರಮಾರ್ಥಾತ್ಮವಿಜ್ಞಾನಮ್** - **ಐತ.** ನಿಜವಾಗಿರುವ ವಸ್ತುವಾದ ಆತ್ಮನ ಅರಿವು, ಜ್ಞಾನ, ೮.

**ಪರಮಾನಂದಃ** - **ತೈ.** ಮಿಗಿಲಿಲ್ಲದ ಆನಂದ, ಬ್ರಹ್ಮ ೧೯೭, ೨೦೦, ೨೦೬, ೨೦೮, ೨೨೨.

**ಪರಮಾನಂದಃ, ಬ್ರಹ್ಮಾನಂದಃ - ಬೃಹ-೨.** ಎಲ್ಲಕ್ಕೂ ಹೆಚ್ಚಿನ ಆನಂದ, ಆತ್ಮನ ಸ್ವರೂಪವಾದ ಸುಖ, ೧೩೮, ೨೩೩.

**ಪರಮೇಶ್ವರಃ - ಬ್ರ.ಸೂ-೧.** ಎಲ್ಲರಿಗೂ ಒಡೆಯನಾದ ಪರಮಾತ್ಮ, ೧೦೪, ೧೧೨, ೧೧೩, ೧೧೬, ೧೬೧, ೧೭೦, ೧೭೮, ೨೪೩, ೨೪೬, ೨೫೮, ೨೫೯, ೨೬೦, ೨೬೧, ೨೭೦, ೨೭೮, ೨೯೬, ೩೨೯, ೩೩೯ ; **ಬ್ರ.ಸೂ-೨.** ಬ್ರಹ್ಮ. ಉಪಾಸ್ಯ ಬ್ರಹ್ಮವಲ್ಲದ ಜ್ಞೇಯಬ್ರಹ್ಮವನ್ನು ಪರಮೇಶ್ವರನೆಂದು ಕರೆದಿದೆ, ೧-೧೯೨, ೧೯೮, ೨೪೬, ೨೬೭, ೨೭೮, ೩೨೯, ೨-೧೧೨, ೩೪೩, ೫೧೧, ೬೦೯ ; **ಈಶ.** ಹೆಚ್ಚಿನ ಈಶ್ವರನು, ಎಲ್ಲವನ್ನೂ ಆಳುವ ಆತ್ಮನು, ೩ ; **ಬೃಹ-೨.** ಎಲ್ಲವನ್ನೂ ಆಳುವ ಪರಮಾತ್ಮ, ೩೦೩, ವಿರಾಡ್ರೂಪನಾದ ಅಗ್ನಿ, ೪೨.

**ಪರಮೇಶ್ವರವಾದೀ - ಬ್ರ.ಸೂ-೧.** ಬ್ರಹ್ಮವೇ ಜಗತ್ಕಾರಣವೆಂಬ (ವೇದಾಂತಿ), ೨೭೦.

**ಪರಮೋ ಲೋಕಃ - ಬೃಹ-೨.** ವಿದ್ಯೆಯಿಂದ ಸಿಕ್ಕುವ ಸರ್ವಾತ್ಮಭಾವ, ೨೧೦, ಸುಷುಪ್ತಿಯಲ್ಲಿರುವ ಸ್ವಾಭಾವಿಕಾತ್ಮಸ್ಥಿತಿ, ೨೩೩.

**ಪರಾಕ್, ಪರಾಚೀನ - ನೈ.** ಬಾಹ್ಯವಾದ, ಹೊರಗಿನ ಅನಾತ್ಮವಿಷಯವಾದ. ಸುಖದುಃಖಾದಿಗಳು ಪರಾಗ್ರೂಪ, ಆತ್ಮನು ಪ್ರತ್ಯಗ್ರೂಪನಾದ್ದರಿಂದ ಅವುಗಳ ಸಂಬಂಧವು ಆವನಿಗೆ ಇಲ್ಲ, ೧-೯೪; ಪರಾಗ್ವಿಷಯವಾದ ಪ್ರತ್ಯಕ್ಷಾದಿಗಳಿಗೆ ಆತ್ಮನಲ್ಲಿ ವ್ಯಾಪಾರವಿಲ್ಲ, ೩-೪೫; ಅನುಮಾನವು ಪ್ರತ್ಯಕ್ಷಾನುಸಾರಿಯಾದ್ದರಿಂದ ಅದಕ್ಕೂ ಆತ್ಮನು ವಿಷಯನಲ್ಲ, ಪರಾಗ್ವಿಷಯಗಳಲ್ಲಿಯೇ ಅದರ ವ್ಯಾಪಾರ, ೩-೫೧; ಅಂತಃಕರಣವು ಪರಾಗ್ರೂಪವಾಗಿದೆ, ಆತ್ಮನು ಅದನ್ನು ಅರಿಯುತ್ತಾನೆ, ೨-೭೫; ಪ್ರಮಾಣವ್ಯವಹಾರವೆಲ್ಲ ಪರಾಗ್ವಿಷಯಕವಾದದ್ದು, ೩-೫೨ ; ಜ್ಞಾತೃಜ್ಞಾನಜ್ಞೇಯಗಳನ್ನು ಅವಿಕಾರನಾಗಿ ಕಾಣುತ್ತಿರುವ ಆತ್ಮನಿಗೆ ಅಜ್ಞಾನವು ಧರ್ಮವಲ್ಲ, ಅದು ಪರಾಗ್ವಿಷಯವೇ ಆಗಿರುತ್ತದೆ, ೪-೪೫.

**ಪರಾ ಗತಿಃ - ಐತ.** ಸಾಧಕನು ಮುಟ್ಟಬಹುದಾದ ಹೆಚ್ಚಿನ ಬ್ರಹ್ಮಲೋಕವು, ೧.

**ಪರಾ ದೇವತಾ - ಛಾಂ.** ಪರಮಾತ್ಮ, ೫೦೪, ೫೩೨, ೫೪೦, ೫೮೧.

**ಪರಾರ್ಥಃ - ಕೇನ.** ಮತ್ತೊಂದರ ಪ್ರಯೋಜನಕ್ಕಾಗಿರತಕ್ಕದ್ದು, ೧೬ ; **ಕಠ.** ಮತ್ತೊಬ್ಬನ ಪ್ರಯೋಜನಕ್ಕಾಗಿರುವ ಅಧೀನದ ವಸ್ತು, ೧೪೧ ; **ತೈ.** ಮತ್ತೊಂದಕ್ಕಾಗಿರುವ (ವಿಶೇಷಣ), ೯೭.

**ಪರಾರ್ಥಮ್ -** ಐತ. ಸ್ವತಂತ್ರವಾಗಿರುವದಕ್ಕಾಗಿ ಕೆಲಸಮಾಡುತ್ತಿರುವ ಅಧೀನವಸ್ತು, ೫೧, ೫೨.

**ಪರಾರ್ಥತ್ವಮ್ -** ಬೃಹ-೨. ಮತ್ತೊಂದಕ್ಕೋಸ್ಕರ ಇರುವ ಆಶ್ರಿತವಸ್ತು, ೧೭೪.

**ಪರಾರ್ಥಕರ್ತವ್ಯತಾಸ್ವಭಾವ -** ಬೃಹ-೨. ಮತ್ತೊಬ್ಬನ ಪ್ರಯೋಜನವನ್ನು ಮಾಡುವ ಸ್ವಭಾವದ (ಅಂತರ್ಯಾಮಿ), ೭೦.

**ಪರಾ ಪ್ರಕೃತಿಃ -** ಭ.ಗೀ. ಈಶ್ವರನ ಜೀವರೂಪವಾಗುವ ಹೆಚ್ಚಿನ ಪ್ರಕೃತಿ, ೪೫೯, ೪೬೦, ೭೫೩.

**ಪರಾ ಭಕ್ತಿಃ -** ಭ.ಗೀ. ಜ್ಞಾನರೂಪವಾದ ಹೆಚ್ಚಿನ ಭಕ್ತಿ, ೭೫೨, ೧೧೦೪ ; **ಶಾಂ. ನಿ.** ಪರಮಾತ್ಮಜ್ಞಾನವು ಆತ್ಮನ ನಿರತಿಶಯಪ್ರೇಮದಲ್ಲಿ ಕೊನೆಗಾಣುವದರಿಂದ ಅದನ್ನು ಪರ ಎಂದರೆ ಹೆಚ್ಚಿನ ಭಕ್ತಿ ಎಂದು ಗೀತೆಯಲ್ಲಿ ಕರೆದಿದೆ. ಇದೇ ಜ್ಞಾನನಿಷ್ಠೆ ಗೀ. ಭಾ. ೧೫-೫೪, ೫೫.

**ಪರಾಪರಬ್ರಹ್ಮಣೀ -** ಪ್ರಶ್ನ. ಹೆಚ್ಚಿನ ಬ್ರಹ್ಮವಾದ ಪರಮಾತ್ಮ ; ಮತ್ತು ಕಡಿಮೆಯ ಬ್ರಹ್ಮವಾದ ಹಿರಣ್ಯಗರ್ಭ, ೭೮.

**ಪರಾವರ -** ಮುಂ. ಒಬ್ಬರಿಂದೊಬ್ಬರಿಗೆ ಪರಂಪರೆಯಾಗಿ ಬಂದಿರುವ ವಿದ್ಯೆ, ಅಥವಾ ಪರಬ್ರಹ್ಮ, ಅಪರಬ್ರಹ್ಮ, ಎರಡೂ ಬ್ರಹ್ಮಗಳ ವಿಷಯದ ವಿದ್ಯೆ ; ಕಾರ್ಯಕಾರಣರೂಪವಾಗಿ ತೋರುವ ಬ್ರಹ್ಮ, ೮೩.

**ಪರಾ ವಿದ್ಯಾ -** ಪ್ರಶ್ನ. ಹೆಚ್ಚಿನ ವಿದ್ಯೆ, ಬ್ರಹ್ಮವಿದ್ಯೆ, ೫೧ ; **ಮುಂ.** ಎಲ್ಲಕ್ಕೂ ಹೆಚ್ಚಿನ ಬ್ರಹ್ಮವನ್ನು ಅರಿಯುವ ವಿದ್ಯೆ, ೧೩, ೧೬, ೧೭, ೧೮, ೧೯, ೨೬, ೨೭, ೫೦, ೫೯, ೬೦.

**ಪರಾಂತಕಾಲಃ -** ಮುಂ. ತೀರ ಕೊನೆಯ ಕಾಲ, ಜ್ಞಾನಿಗಳು ದೇಹವನ್ನು ಬಿಟ್ಟು ವಿದೇಹಮುಕ್ತರಾಗುವ ಕಾಲ, ೧೧೮.

**ಪರಿಚ್ಛಿನ್ನಾಭಿಮಾನಃ -** ಮಾಂ. ಅಳತೆಯ ವಸ್ತುವನ್ನೇ ತಾನೆಂದು ತಿಳಿಯುವದು, ೨೩.

**ಪರಿಣಾಮಃ -** ಬ್ರ.ಸೂ-೧. ಒಂದು ವಸ್ತು ಮತ್ತೊಂದು ರೂಪಕ್ಕೆ ಮಾರ್ಪಡುವದು, ೬೬, ೩೯೪, ೪೦೪, ೪೩೩, ೪೬೨, ೪೬೪ ; ಬ್ರ.ಸೂ-೨. ಮಾರ್ಪಡುವದು. ಪ್ರಧಾನವು ಅನೇಕಾತ್ಮಕವಾಗಿರುವದರಿಂದ ಜಗತ್ತಾಗಿ

ಪರಿಣಮಿಸಬಹುದೆಂಬ ಸಾಂಖ್ಯರ ಕಲ್ಪನೆ, ೧-೬೬ ; ಪ್ರಧಾನಪರಿಣಾಮವಾದಕ್ಕೆ ವೇದಾಧಾರವಿಲ್ಲ , ೧-೪೦೪ ; ಕೂಟಸ್ಥಬ್ರಹ್ಮವನ್ನು ಬೋಧಿಸುವ ಶ್ರುತಿಯು ಪರಿಣಾಮಪರವಾಗಲಾರದು, ೧-೪೩೯ ; ಬ್ರಹ್ಮಕ್ಕೆ ಅವಿದ್ಯೆಯಿಂದ ಪರಿಣಾಮ ವ್ಯವಹಾರ, ೧-೪೬೪ ; ಉಪಾಸನೆಗಾಗಿ ಪರಿಣಾಮಪ್ರಕ್ರಿಯೆಯನ್ನು ಸೂತ್ರಕಾರರು ಆಶ್ರಯಿಸಿರುತ್ತಾರೆ, ೧-೪೪೧ ; ನೈ. ವಿಕಾರ. ಆತ್ಮನಿಗೆ ಅಂತಃಕರಣದಂತೆ ಕರ್ತೃತ್ವಾದಿ ಪರಿಣಾಮವಿಲ್ಲ , ೨-೫೮; ಕಲ್ಪಿತಪರಿಣಾಮವಿರಬಹುದು, ೨-೮೫; ಬುದ್ಧಿಯು ವಿಷಯಗಳನ್ನು ಒಂದೊಂದಾಗಿ ಅರಿಯುವದರಿಂದ ಪರಿಣಾಮಿ, ೨-೭೦; ಕೂಟಸ್ಥನಾದ ಆತ್ಮನಿಗೂ ಪರಿಣಾಮಿಯಾದ ಅಂತಃಕರಣಕ್ಕೂ ತಾರತಮ್ಯ, ೨-೮೬,೮೭, ೩-೧೬, ೧೭; ಇವೆರಡಕ್ಕೂ ಅಜ್ಞಾನಸಂಬಂಧ, ೩-೨೨.

**ಪರಿಣಾಮಿನಿತ್ಯ** - ಬ್ರ.ಸೂ-೧. ಮಾರ್ಪಟ್ಟರೂ ಅದೇ ಇದು ಎಂಬ ಬುದ್ಧಿ ಹೋಗದೆ ಇರುವ (ಪೃಥಿವ್ಯಾದಿ), ೪೩.

**ಪರಿಣಾಮಪ್ರಕ್ರಿಯಾ** - ಬ್ರ.ಸೂ-೧. ಬ್ರಹ್ಮವು ಜಗತ್ತಾಗಿ ಪರಿಣಮಿಸಿದೆ ಎಂಬ ಪ್ರಕ್ರಿಯೆ, ೪೪೧ ; **ಶಾಂ. ನಿ.** ವಸ್ತುವು ವಿಕಾರವನ್ನು ಹೊಂದಿ ರೂಪಾಂತರ ವಾಗುವದೆಂದು ಪ್ರತಿಪಾದಿಸುವ ಪ್ರಕಾರ. ಬ್ರಹ್ಮವು ಪ್ರಧಾನದಂತೆ ಪರಿಣಾಮವನ್ನು ಹೊಂದುವದಿಲ್ಲವಾದರೂ ಉಪಾಧಿಯ ವಶದಿಂದ ಆಗುವ ಅವಿದ್ಯಕ ಪರಿಣಾಮವನ್ನೇ ಉಪಾಸನೆಗೋಸ್ಕರ ಒಪ್ಪಿರುತ್ತದೆ. ಸೂ. ಭಾ. ೧-೪-೨೬, ೨-೧-೧೪.

**ಪರಿನಿಷ್ಠಿತ, ಪರಿನಿಷ್ಪನ್ನ, ಭೂತ** - ಬ್ರ.ಸೂ-೨. ಸಾಧ್ಯವಾದದ್ದಲ್ಲ, ಈಗಲೆ ಇದ್ದುಕೊಂಡಿರುವ (ಬ್ರಹ್ಮವಸ್ತು). ಬ್ರಹ್ಮಜಿಜ್ಞಾಸೆಯಲ್ಲಿ ಭೂತವಾದ ಬ್ರಹ್ಮವು ಜಿಜ್ಞಾಸ್ಯ, ೧-೧೨ ; ಭೂತವಸ್ತುವಿಚಾರದಲ್ಲಿ ತರ್ಕವೂ ಬೇಕು, ೧-೨೮ ; ಭೂತ ವಸ್ತುಪರವಾದ ವೇದಭಾಗವಿಲ್ಲವೆಂಬುದು ಸಾಹಸ, ೧-೫೪ ; ಪರಿನಿಷ್ಠಿತವಸ್ತು ಪ್ರತ್ಯಕ್ಷಗಮ್ಯವಾಗಿರಬೇಕೆಂಬ ಮೀಮಾಂಸಕಮತವೂ ಖಂಡನೆಯೂ, ೧-೩೫, ೩೮; ಪರಿನಿಷ್ಠಿತವಸ್ತುವು ಪ್ರಮಾಣಾಂತರಗಮ್ಯವೂ ಆಗಿರಬಹುದೆಂಬ ಸಾಂಖ್ಯರ ಮತವೂ ಅದರ ಖಂಡನೆಯೂ, ೧-೬೪ ; ಪರಿನಿಷ್ಪನ್ನವಸ್ತುವಾದ ಬ್ರಹ್ಮಕ್ಕೆ ಅನುಮಾನಪ್ರಮಾಣರೂಪವಾದ ತರ್ಕವನ್ನು ಹತ್ತಿಸಬಹುದೆಂಬ ಆಕ್ಷೇಪವೂ ಅದರ ಖಂಡನೆಯೂ, ೧-೪೦೯, ೪೧೭.

**ಪರಿನಿಷ್ಠಿತಂ ವಸ್ತು, ಪರಿನಿಷ್ಪನ್ನರೂಪಂ ವಸ್ತು** - ಬ್ರ.ಸೂ-೧. ಸಿದ್ಧವಾಗಿರುವ ವಸ್ತು, (ಮುಂದೆ ಕ್ರಿಯೆಯಿಂದ ಆಗತಕ್ಕದ್ದಲ್ಲ) ೩೫, ೩೮, ೬೪, ೪೦೯, ೪೧೭ ; **ಶಾಂ. ನಿ.** ಸಿದ್ಧವಾದ, ಕ್ರಿಯೆಯಿಂದ ಸಾಧ್ಯವಲ್ಲದ. ಸೂ. ಭಾ. ೧-೧-೫, ೨-೧-೪.

**ಪರಿಪಾಕಃ** - ಬೃಹ-೨. ಮಾಗಿ ಜ್ಞಾನರೂಪದಲ್ಲಿ ನಿಲ್ಲುವದು, ೨೮೧.

**ಪರಿಪೂರ್ಣಶಕ್ತಿಕ** - ಶಾಂ. ನಿ. ಎಲ್ಲಾ ಕಾರ್ಯಗಳನ್ನೂ ಉಂಟುಮಾಡುವದಕ್ಕೆ ತಕ್ಕ ಎಲ್ಲಾ ಶಕ್ತಿಗಳುಳ್ಳ (ಬ್ರಹ್ಮ). ಸೂ. ಭಾ. ೨-೧-೨೪.

**ಪರಿವ್ರಾಟ್** - ಈಶ. ಸಂಚರಿಸುತ್ತಿರುವ ಪರಮಹಂಸಸಂನ್ಯಾಸಿ, ೧೫.

**ಪರಿವ್ರಾಜಕಃ, ಪರಿವ್ರಾಟ್** - ಛಾಂ. ಪರಮಹಂಸಸಂನ್ಯಾಸಿ, ೧೭೬, ೧೭೮, ೧೭೯.

**ಪರಿಶೇಷಃ** - ಬ್ರ.ಸೂ-೧. ವಿಚಾರಣೀಯವಾದವುಗಳಲ್ಲಿ ಮಿಕ್ಕೆಲ್ಲವನ್ನೂ ಕಳೆದುಳಿಸಿಕೊಳ್ಳುವಿಕೆ, ೨೨೮, ೩೩೬, ೩೩೮.

**ಪರಿಸಂಖ್ಯಾನ** - ಕೇನ. ಅಲ್ಲಗಳೆಯುವದು ; ೩೩.

**ಪರಿಸಂಖ್ಯಾನಮ್** - ಬೃಹ-೨. ಧ್ಯಾನ, ೨೫೯.

**ಪರಿಸಂಖ್ಯಾವಿಧಿಃ** - ನೈ. ಇನ್ನೊಂದನ್ನು ಮಾಡಕೂಡದೆಂದು ಹೇಳುವ ವಿಧಿ. 'ಆತ್ಮಾ ವಾ ಅರೇ ದ್ರಷ್ಟವ್ಯಃ' (ಆತ್ಮನನ್ನೇ ನೋಡಬೇಕು), ಎಂಬುದು ಅನಾತ್ಮವನ್ನು ನೋಡಬಾರದೆಂದು ವಿಧಿಸುತ್ತದೆಯಾದ್ದರಿಂದ ಪರಿಸಂಖ್ಯಾವಿಧಿ, ೧-೮೮.

**ಪರೋಪಾಧಿನಿಮಿತ್ತ , ಪರೋಪಾಧಿಕೃತ** - ಬೃಹ-೨. ಮತ್ತೊಂದು ಉಪಾಧಿಯ ಕಾರಣದಿಂದಾದ, ೧೫೭, ೨೦೯.

**ಪಶ್ವಾದಯಃ** - ಬ್ರ.ಸೂ-೧. ಪಶುಪಕ್ಷಿಮೃಗಾದಿಗಳು, (ಅವಿವೇಕದಿಂದಲೇ ವ್ಯವಹರಿಸುವದಕ್ಕೆ ದೃಷ್ಟಾಂತ), ೬, ೨೯೩, (ಜಾತಿವ್ಯಕ್ತಿವಿವೇಚನೆಗಾಗಿ ಉದಾಹರಣೆ) ; ನೈ. ಶಾಸ್ತ್ರವು ಪ್ರವರ್ತಕವಲ್ಲ, ಪ್ರವೃತ್ತಿನಿವೃತ್ತಿಗಳು ಸ್ವಾಭಾವಿಕವೆಂಬುದಕ್ಕೆ ಪಶ್ವಾದಿಗಳೇ ನಿದರ್ಶನ, ೧-೩೦.

**ಪಾಙ್ಕ್ತಲಕ್ಷಣಮ್** - ಐತ. ಕರ್ಮಕ್ಕೆ ಬೇಕಾಗಿರುವ ಐದು ಉಪಕರಣಗಳು, ೧೩.

**ಪಾಕ್ಷಿಕೀ** - ಬೃಹ-೧. ಒಂದು ಪಕ್ಷದಲ್ಲಿ ಮಾತ್ರ ಇರುವ (ಉಪಾಸನಾಪ್ರಾಪ್ತಿ), ೧೩೫, ೧೪೨.

**ಪಾಂಚಭೌತಿಕಃ ಪಿಣ್ಡಃ** - ಬೃಹ-೨. ಪೃಥಿವ್ಯಾದಿಭೂತಗಳ ವಿಕಾರವಾದ ಶರೀರ, ೪೫, ೧೫೪.

**ಪಾಣ್ಡಿತ್ಯಮ್** - ಬೃಹ-೨. ಏಷಣತ್ಯಾಗದಲ್ಲಿ ಕೊನೆಗಾಣುವ ಆತ್ಮಜ್ಞಾನ, ೬೨, ೬೩.

**ಪಾಣ್ಡಿತ್ಯಬಾಲ್ಯಮೌನಾನಿ** - ಮಾಂ. ಆತ್ಮಜ್ಞಾನವನ್ನು ಸಂಪಾದಿಸುವದು, ಆತ್ಮ ಬಲವನ್ನು ಸಂಪಾದಿಸಿಕೊಳ್ಳುವದು, ಆತ್ಮಾನುಸಂಧಾನವು - ಎಂಬ ಸಾಧನಗಳು, ೩೫೦.

**ಪಾಪಮ್** - ಭ.ಗೀ. ಅಧರ್ಮ, ೩೦೬, ೩೫೩, ಪಾಪಪುಣ್ಯಗಳು, ೧೧೨೪.

**ಪಾಪ್ಮಾ** - ಛಾಂ. ಧರ್ಮಾಧರ್ಮರೂಪವಾದ ಕಲ್ಮಷ, ೬೧೨ ; ಅಧರ್ಮದಲ್ಲಿ ಆಸಕ್ತಿ, ೨೨, ೨೩.

**ಪಾಪಕಮ್, ಪಾಪ್ಮಾ** - ಬೃಹ-೨. ಪುಣ್ಯಪಾಪಗಳು, ೩೧೪, ೩೧೬, ಪುಣ್ಯಾಪುಣ್ಯಗಳಿಗೆ ಆಶ್ರಯವಾದ ಕಾರ್ಯಕರಣಗಳು, ೧೮೩. ಪಾಪಪುಣ್ಯಗಳ ಫಲಗಳು, ೧೮೫.

**ಪಾರಮಾರ್ಥಿಕ** - ಬ್ರ.ಸೂ-೧. ಪರಮಾರ್ಥಕ್ಕೆ ಸಂಬಂಧಪಟ್ಟ, ನಿಜವಾದ, ೪೩, ೧೯೫, ೨೬೪, ೩೫೭, ೩೮೮ ; ಬೃಹ-೧. ನಿಜವಾಗಿರುವ (ವಸ್ತು), ೧೫೧ ; **ಶಾಂ.** ನಿ. ನಿಜವಾಗಿರುವ ವಸ್ತುವಿಗೆ ಸಂಬಂಧಪಟ್ಟ, ಬರಿಯ ವ್ಯವಹಾರಕ್ಕೆ ಸಂಬಂಧಪಟ್ಟದ್ದಲ್ಲ.

**ಪಾರಮಾರ್ಥದೃಷ್ಟಿಃ** - ಭ.ಗೀ. ಸರಿಯಾದ ದೃಷ್ಟಿ, ಶಾಸ್ತ್ರದಲ್ಲಿ ತಿಳಿಸಿರುವ ದೃಷ್ಟಿ, ೧೦೩೫

**ಪಾರಾರ್ಥ್ಯಮ್** - ಬೃಹ-೧. ಮತ್ತೊಂದಕ್ಕಾಗಿ ಕೆಲಸಮಾಡುವದು, ೨೮೫ ; ಭ.ಗೀ. ಒಂದಕ್ಕೊಂದು ಸೇರಿಕೊಂಡು ಮತ್ತೊಬ್ಬರಿಗಾಗಿ ಕೆಲಸಮಾಡುವದು, ೮೧೬.

**ಪಾರಿಪ್ಲವಾಃ** - ಛಾಂ. ಅಶ್ವಮೇಧದಲ್ಲಿ ಕೆಲವು ಕಥೆಗಳನ್ನು ಹೇಳಬೇಕಾದ ರಾತ್ರೆಗಳು, ೨೦೮.

**ಪಾರಿವ್ರಾಜ್ಯಮ್ , ಪ್ರವ್ರಜ್ಯಾ** - ಬ್ರ.ಸೂ-೨. ಪರಮಹಂಸಸಂನ್ಯಾಸ, ಬ್ರಹ್ಮಾತ್ಮಾವಗತಿಯಾದವನಿಗೆ ಸಂಸಾರಿತ್ವವಿಲ್ಲವೆಂಬುದಕ್ಕೆ ಪ್ರವ್ರಜಿತನಾದವನ ದೃಷ್ಟಾಂತ, ೧-೫೭ ; ಅಭಿಮಾನವಿಲ್ಲದವನಿಗೆ ದುಃಖವಿಲ್ಲವೆಂಬುದಕ್ಕೆ ಪರಿವ್ರಾಜಕನ ದೃಷ್ಟಾಂತ, ೨-೧೬೧ ; ಯೋಗಿಗಳು ಶ್ರುತಿಸಿದ್ಧವಾಗಿರುವ ಪ್ರವ್ರಜ್ಯವನ್ನೇ ಉಪದೇಶಿಸಿರುತ್ತಾರೆ, ೧-೪೦೭ ; ಗಾರ್ಹಸ್ಥ್ಯವನ್ನು ಹೊಂದಿರಲಿ, ಹೊಂದದಿರಲಿ

ಋಣತ್ರಯವನ್ನು ತೀರಿಸಿರಲಿ, ತೀರಿಸದಿರಲಿ, ಸಂನ್ಯಾಸವನ್ನು ಮಾಡಬಹುದು, ೨-೪೫೪ ; ಪ್ರಾರಿವ್ರಾಜ್ಯವು ಶ್ರುತಿವಿಹಿತವಲ್ಲವೆಂಬ ಮತವೂ ಅದರ ಖಂಡನೆಯೂ, ೨-೪೫೫ ರಿಂದ ೪೫೯ ; ಭಿಕ್ಷುವಿನ ಇಂದ್ರಿಯಸಂಯಮಾದಿಗಳು ಮುಖ್ಯಾರ್ಥದಲ್ಲಿ ತಪಸ್ಸಲ್ಲ, ೧-೪೫೯ ; ಬ್ರಹ್ಮಸಂಸ್ಥನೆಂಬ ಹೆಸರು ಪರಿವ್ರಾಜಕನಿಗೇ ಸಲ್ಲುತ್ತದೆ, ೨-೪೬೦ ; ಶಮದಮಾದಿಗಳಿಂದೊಡಗೂಡಿದ ಬ್ರಹ್ಮನಿಷ್ಠೆಯೇ ಸಂನ್ಯಾಸಾಶ್ರಮ-ಕರ್ಮ, ೨-೪೬೦, ಆಶ್ರಮಮಾತ್ರದಿಂದ ಪರಿವ್ರಾಜಕನಿಗೆ ಮೋಕ್ಷವಿಲ್ಲ, ೨-೪೬೦ ; ಪಾರಿವ್ರಾಜ್ಯವು ಶ್ರುತಿವಿಹಿತ, ಜ್ಞಾನಪರಿಪಾಕಕ್ಕೆ ಅಂಗ, ೨-೪೬೧ ಸಂನ್ಯಾಸ ಮಾಡಿದವನು ಹಿಂದಕ್ಕೆ ಬರಬಾರದು, ೨-೪೮೪ ಹಿಂದಕ್ಕೆ ಬಂದ ಸಂನ್ಯಾಸಿಗೆ ಪ್ರಾಯಶ್ಚಿತ್ತ, ೨-೪೮೬ ; ಹಿಂತಿರುಗಿದ ಸಂನ್ಯಾಸಿಗೆ ಬಹಿಷ್ಕಾರ, ೨-೪೮೭ ; ಸಂನ್ಯಾಸಿಗೆ ಪಾಂಡಿತ್ಯಾದಿರೂಪವಾದ ಜ್ಞಾನಾತಿಶಯಸಹಕಾರಿಸಾಧನಗಳು, ೨-೪೯೦ ರಿಂದ ೪೯೬ ; ಜ್ಞಾನಾಭ್ಯಾಸವು ಎಂದರೆ ಜ್ಞಾನಸಾಧನಗಳ ಅನುಷ್ಠಾನವು ಯತಿಗಳಿಗೆ ಮುಖ್ಯ ೨-೪೯೬ ; ಕೇನ. ಜ್ಞಾನಕ್ಕಾಗಿ ಸಂಪೂರ್ಣವಾಗಿ ಕರ್ಮವನ್ನು ಬಿಡುವ ಸಂನ್ಯಾಸ, ೫ ; ಐತ. ಗೃಹಸ್ಥಾಶ್ರಮವನ್ನೂ ಅದರ ಕರ್ಮವನ್ನೂ ತ್ಯಾಗಮಾಡಿ ಪಡೆಯುವ ಸಂನ್ಯಾಸ, ೧೮, ೨೧ ; ಬೃಹ-೧. ಸಂನ್ಯಾಸ, ೩೫೩, ೩೫೪ ; ಬೃಹ-೨. ಏಷಣಾತ್ಯಾಗರೂಪವಾದ ಪರಮಹಂಸಸಂನ್ಯಾ; ವಿದ್ವತ್ಸಂನ್ಯಾಸ ೫೬, ೫೭ ಜ್ಞಾನಾಂಗವಾಗಿ ಜ್ಞಾನಪರಿಪಾಕಕ್ಕಾಗಿ ಮಾಡುವ ವಿವಿದಿಷಾಸಂನ್ಯಾಸ, ೩೦೯, ೩೧೧; ಪಾರಿವ್ರಾಜ್ಯಾಶ್ರಮ, ಬ್ರಹ್ಮಲೋಕಪ್ರಾಪ್ತಿಗಾಗಿ ಉಪಾಸನೆಮಾಡುವವರ ತ್ರಿದಂಡಿ ಸಂನ್ಯಾಸ, ೫೬, ೫೭ ; ಶಾಂ. ನಿ. ಸಂನ್ಯಾಸ. ಸ್ಮೃತಿಯಲ್ಲಿ ಹೇಳಿದ ದಂಡಾದಿಸಹಿತ ಸಂನ್ಯಾಸ, ಶ್ರುತ್ಯುಕ್ತವಾದ ಪರಮಹಂಸಪಾರಿವ್ರಾಜ್ಯ - ಎಂಬ ಎರಡು ಬಗೆಯ ಸಂನ್ಯಾಸ, ಬೃ. ಭಾ. ೩-೫-೧.

**ಪಾರಿಶೇಷ್ಯಮ್ - ಬ್ರ.ಸೂ-೧.** ಪರಿಶೇಷವಾಗುವಿಕೆ, ೩೭೩, ೩೯೦ ; **ತೈ.** ಮಿಕ್ಕವುಗಳು ಆಗದೆ ಇರುವದರಿಂದ ಇದು ಒಂದೇ ಉಳಿಯುವದೆಂಬ ನ್ಯಾಯ ೨೨೦ ; **ಐತ.** ಕೊನೆಯಲ್ಲಿ ಉಳಿಯುವದು ಇದೇ ಎಂದು ನಿರ್ಧರಿಸುವ ನ್ಯಾಯ, ೫೪, ೮೫ ; **ಛಾಂ.** ಮಿಕ್ಕದ್ದೆಲ್ಲವೂ ಹೊಂದುವದಿಲ್ಲವಾಗಿ ಇದೊಂದೇ ಉಳಿದಿದೆ ಯಾದ್ದರಿಂದ ಎಂಬ ಯುಕ್ತಿ, ೪೦೨ ; **ನೈ.** ಉಳಿದದ್ದನ್ನು ತೆಗೆದುಕೊಳ್ಳಬೇಕೆಂಬ ನ್ಯಾಯ. ಕರ್ಮಗಳಿಗೆಲ್ಲ ಒಂದೊಂದು ಸಾಧ್ಯವಿದ್ದೇ ಇರುವದರಿಂದ ಪಾರಿಶೇಷ್ಯನ್ಯಾಯದಿಂದ ಇಂಥ ಕರ್ಮದಿಂದ ಮುಕ್ತಿಯೆನ್ನುವದಕ್ಕಿಲ್ಲ, ೧-೨೬; ಆತ್ಮ, ಅನಾತ್ಮ - ಇವೆರಡರೊಳಗೆ ಅನಾತ್ಮಕ್ಕೆ ಅಜ್ಞಾನಾಶ್ರಯತ್ವವಿಷಯತ್ವಗಳು ಹೊಂದುವದಿಲ್ಲವಾಗಿ ಪಾರಿಶೇಷ್ಯದಿಂದ ಆತ್ಮನೇ ಅಜ್ಞಾನಕ್ಕೆ ಆಶ್ರಯಿ, ವಿಷಯಿ ಎಂದು ನಿಶ್ಚಯಿಸಬೇಕು, ೩-೧.

**ಪಾರಿಶೇಷ್ಯನ್ಯಾಯಃ** - ಬೃಹ-೨. ಅನೇಕವಿಕಲ್ಪಗಳಲ್ಲಿ ಮಿಕ್ಕೆಲ್ಲವನ್ನೂ ತಪ್ಪಿಸಿ ಕೊನೆಗೆ ಉಳಿದದ್ದೇ ಸಿದ್ಧವಾಗುವದೆಂದು ತೋರಿಸುವ ಯುಕ್ತಿ, ೩೩.

**ಪಾಷಣ್ಡಃ** - ಕಠ. ಅಥವಾ 'ಪಾಖಣ್ಡಃ'; ಅವೈದಿಕಮತದವನು, ೧೫೭.

**ಪಿಣ್ಡಃ** - ಬ್ರ.ಸೂ-೧. ಸಮಷ್ಟಿಶರೀರವುಳ್ಳ ವಿರಾಟ್ಪುರುಷ, ೨೪೯ ; ತೈ. ಶರೀರ ೧೨೩, ೧೮೭, ೨೧೦.

**ಪಿಣ್ಡಾತ್ಮಾ** - ಮಾಂ. ಶಾರೀರಾತ್ಮ, ೧೨.

**ಪಿಣ್ಡಗ್ರಹಣಮ್** - ಬೃಹ-೧. ಶರೀರವನ್ನು ಧರಿಸುವದು, ಹುಟ್ಟುವದು, ೧೮೮.

**ಪಿತೃಲೋಕಃ** - ಬೃಹ-೧. ಕರ್ಮದ ಫಲವಾದ ಲೋಕ, ೨೩೧, ೨೩೭.

**ಪುತ್ರಕರ್ಮಾ, ಅಪರಬ್ರಹ್ಮವಿದ್ಯಾಃ** - ಬೃಹ-೨. ಮನುಷ್ಯಾದಿಲೋಕತ್ರಯಕ್ಕೆ ಸಾಧನವಾದ ಪುತ್ರಾದಿಗಳು, ಏಷಣಾತ್ರಯ, ೫೬, ೩೦೯.

**ಪುತ್ರಕರ್ಮಾಪರವಿದ್ಯಾಃ** - ಬೃಹ-೧. ಮಗನು, ಕರ್ಮ, ಉಪಾಸನೆ - ಎಂಬ ಸಾಧನಗಳು, ೬, ೧೯೪.

**ಪುತ್ರಾದ್ಯೇಷಣಾತ್ರಯಮ್** - ಈಶ. ಮಗನೇ ಮುಂತಾದ ಮೂರರ ಬಯಕೆ, ಜ್ಞಾನಕ್ಕೆ ಅಡ್ಡಿ, ೩, ೫.

**ಪುನರ್ಮೃತ್ಯುಃ** - ಬೃಹ-೧. ಒಂದು ಸಲ ಸತ್ತಮೇಲೂ ಮತ್ತೆ ಹುಟ್ಟಿ ಸಾಯುವದು, ೪೨.

**ಪುಣ್ಯಪಾಪೇ** - ಬೃಹ-೨. ಶಾಸ್ತ್ರೀಯವಾದ ಒಳ್ಳೆಯ - ಕೆಟ್ಟಕರ್ಮಗಳು, ೨೯, ೩೦.

**ಪುಣ್ಯಲೋಕಃ** - ಛಾಂ. ಧರ್ಮದ ಫಲವಾಗಿ ಉಪಕುರ್ವಾಣ, ಬ್ರಹ್ಮಚಾರಿ, ಗೃಹಸ್ಥ ವಾನಪ್ರಸ್ಥರಿಗೆ ದೊರಕುವ ಫಲ, ೧೭೮, ೧೮೩.

**ಪುರಾ ಕಲ್ಪಃ** - ಬೃಹ-೧. ಹಿಂದೆ ಆದಂತೆ ತಿಳಿಸುವ ಅರ್ಥವಾದ ೪೮, ೬೩.

**ಪುರುಷಃ** - ಬ್ರ.ಸೂ-೧. ಸಾಂಖ್ಯರು ಒಪ್ಪಿರುವ ಆತ್ಮ, ೬೪, ೭೭, ೩೩೪, ೩೪೪, ೩೫೪, ೩೫೮, ೪೦೩ ; ಪರಮೇಶ್ವರ, ೫೪, ೬೫, ೧೮೬, ೩೩೬, ೩೫೩ ; ಮನುಷ್ಯ, ೬, ೧೨, ೩೯, ೬೫, ೧೮೪, ೪೧೫ ; ಬ್ರ.ಸೂ-೨. ಸಾಂಖ್ಯರು ಒಪ್ಪಿರುವ ಆತ್ಮ, ೨೪ ; ಪ್ರಧಾನವು ಪುರುಷನಿಗಾಗಿ ಪ್ರವರ್ತಿಸುತ್ತದೆ ಎಂಬುದರ ಖಂಡನೆ,

೨-೧೨ ರಿಂದ ೧೭ ; ಸಾಂಖ್ಯ ಮತದಲ್ಲಿಯೂ ಪುರುಷಪ್ರಧಾನಗಳಿಗೆ ನಿಜವಾದ ತಪ್ಯ ತಾಪಕಭಾವವು ಸಿದ್ಧಿಸುವದಿಲ್ಲ, ಅದು ಪರಮಾರ್ಥವಲ್ಲವೆಂಬ ವೇದಾಂತಮತವೇ ಸರಿ, ೨-೨೦ ; ಪ್ರಧಾನಪುರುಷೇಶ್ವರರು ಅನ್ಯೋನ್ಯವಿಲಕ್ಷಣರೆಂಬ ಮತದ ಖಂಡನೆ, ೨-೭೫ ರಿಂದ ೮೧. ಔಪನಿಷದಪುರುಷ, ಪರಮಾತ್ಮ ೧-೫೪, ೬೫, ೩೩೬, ೩೫೩, ४೦೧ ; ಮನುಷ್ಯಕ್ರಿಯೆಯು ಪುರುಷತಂತ್ರ, ೧-४೭, ४೯, ೫೧, ४೬४ ; **ಈಶ.** ಮನುಷ್ಯ , ೨೬, ಪ್ರಾಣಬುದ್ಧ್ಯಾತ್ಮನಾದ ಹಿರಣ್ಯಗರ್ಭ, ೩೬ ; **ಕಠ.** ಮನುಷ್ಯ , ೧೮, ४೮ ; ಎಲ್ಲವನ್ನೂ ತುಂಬಿಕೊಂಡಿರುವ ಪರಮಾತ್ಮ , ೯೯, ೧೦೧, ೧೨೮, ೧೨೯ ; **ಪ್ರಶ್ನ.** ಶರೀರ, ೩೯, ೫೩ ; ಶರೀರವನ್ನು ತುಂಬಿಕೊಂಡಿರುವ ಜೀವ, ೭४ ; ಆತ್ಮ , ೩೯, ೬४, ೮೩, ೮೮, ೯೬, ೧೦೦, ೧೦೩, ೧೦४, ೧೦೬, ೧೦೭, ೧೦೮, ೧೧೧, ೧೧೨, ೧೧೩, ೧೧४, ೧೧೬ ; **ಮುಂ.** ಪೂರ್ಣನಾದ, ಪುರದಲ್ಲಿ ಎಂದರೆ ಹೃದಯದಲ್ಲಿ ತಿಳಿಯಬರುವ ಪರಮಾತ್ಮ , ४೭, ४೮, ೫೩, ೬೦, ೬೨, ೬೩, ೬೫, ೬೬, ೬೭, ೧೨೧, ೧೨೬ ; ಜೀವ, ೯೨ ; ಮನುಷ್ಯ , ೨೧, ೧೧೦ ; **ತೈ.** ತಲೆ ಕೈ ಮುಂತಾದವುಗಳುಳ್ಳ ಶರೀರ, ಮನುಷ್ಯ , ೧೧४, ೧೧೫, ೧೧೬ ; ಶರೀರಗಳಲ್ಲಿರುವ ಅಥವಾ ಭೂರಾದಿಲೋಕಗಳನ್ನು ವ್ಯಾಪಿಸಿರುವ ಹಿರಣ್ಯಗರ್ಭ ४೦ ; **ಐತ.** ಆತ್ಮ , ೫೭, ೬೨ ; ವಿರಾಟ್, ೩४, ೩೮, ೬೦ ; ಮನುಷ್ಯ , ४೧, ೭४; **ಛಾಂ.** ಶರೀರೇಂದ್ರಿಯಗಳ ಗುಂಪು, ಶರೀರವು, ೨೩೨, ೨೩೩, ೨೬४ ; ಎಲ್ಲವನ್ನೂ ತುಂಬಿಕೊಂಡಿರುವ ಪರಮಾತ್ಮ , ೨೩೫ ; **ಬೃಹ-೧.** ಅಸಂಗಾಜ್ಞಾನಗಳನ್ನು ಸುಟ್ಟುಹಾಕಿದ ಪ್ರಜಾಪತಿ, ೯೯. ಆದಿತ್ಯಾದಿಗಳಲ್ಲಿ ವಿಂಗಡವಾಗಿರುವ ಪುರುಷ (ಹಿರಣ್ಯಗರ್ಭ), ೨೬೩, ೨೬४. ಮನುಷ್ಯ , ೨೭೮, ೨೮೦, ಪರಮಾತ್ಮ, ४೦೫ ; **ಬೃಹ-೨.** ಶಿರಃಪಾಣ್ಯಾದಿಗಳುಳ್ಳ (ಶರೀರ) ೨೭, ೧೫೯ ; ಮುಕ್ತಪುರುಷ, ೨೨, ೨೩; ಮನುಷ್ಯ , ೩೩, ೩೫೦ ; ಪ್ರಾಣಭೇದಗಳಾದ ಪುರುಷರು, ೧೦೫, ೧೦೬ ; ನಿರ್ವಿಶೇಷನಾದ ಔಪನಿಷದಪುರುಷ, ಆತ್ಮ , ೧೨४ ; ಆತ್ಮ ೧೮೮, ೧೯४ ; **ಭ.ಗೀ.** ಕ್ಷರ, ಅಕ್ಷರ, ಪುರುಷೋತ್ತಮ - ಎಂಬ ಮೂರು ರಾಶಿಯ ಜ್ಞೇಯಗಳು, ೯೧೭, ೯೧೮, ೯೧೯ ; ಈಶ್ವರನ ಉತ್ತಮಪ್ರಕೃತಿಯಾದ ಜೀವ, ೮೦೭, ೮೦೮, ೮೧೦, ೮೧೧, ೮೧೨, ೮೧೩ ; ಎಲ್ಲೆಲ್ಲಿಯೂ ಪೂರ್ಣನಾಗಿರುವ ಪರಮಪುರುಷ, ಪರಮಾತ್ಮ , ೫೧೨, ೫೩೩, ೭೦೨, ೮೧೬, ೮೯೬ ; ಎಲ್ಲಾ ಪ್ರಾಣಿಗಳ ಕರಣಗಳಿಗೂ ಅನುಗ್ರಾಹಕನಾದ ಆದಿತ್ಯಾಂತರ್ಗತ ಹಿರಣ್ಯಗರ್ಭ, ೫೦೩, ೫೦೯.

**ಪುರುಷತಂತ್ರ, ಪುರುಷಾಯಾಸಮಾತ್ರಜನಿತ** - **ನೈ.** ವಸ್ತುತಂತ್ರವಲ್ಲದ ಮನುಷ್ಯನು ಮಾಡುವದಕ್ಕೂ ಬಿಡುವದಕ್ಕೂ ಆಗುವ ಕರ್ಮ, ಉಪಾಸನೆ. ಅಜ್ಞಾನವನ್ನು ಕಳೆಯುವ ಆತ್ಮಜ್ಞಾನವು ಪುರುಷತಂತ್ರವಲ್ಲ ೧-೮೮; ಪ್ರಸಂಖ್ಯಾನವು

ಪುರುಷಾಯಾಸಮಾತ್ರದಿಂದಾಗುವದರಿಂದ ಪ್ರಮಾಣವಲ್ಲ, ಅದು ಐಕಾಗ್ರ್ಯ ರೂಪವಾದ ಧ್ಯಾನವೇ, ೩-೯೦.

**ಪುರುಷತನ್ತ್ರಮ್** - ಕೇನ. ಕರ್ತೃವಿಗೆ ಅಧೀನವಾಗಿರುವದು, ೬.

**ಪುರುಷನಿಃಶ್ವಾಸಃ** - ಬ್ರ.ಸೂ-೧. ಮನುಷ್ಯನ ಉಸಿರುಬಿಡುವಿಕೆ, (ಲೀಲಾ ಮಾತ್ರದಿಂದ ಸೃಷ್ಟಿ ಎಂಬುದಕ್ಕೆ ದೃಷ್ಟಾಂತ), ೩೨.

**ಪುರುಷಪರಿಕಲ್ಪನಾ, ಪುರುಷಮೋಹಃ** - ನೈ. ಪ್ರಮಾಣವಿಲ್ಲದೆ ಮನುಷ್ಯನು ಕಲ್ಪಿಸಿಕೊಂಡದ್ದು. ವೇದವಾಕ್ಯವು ಸಾಪೇಕ್ಷವೆಂಬುದು ಬರಿಯ ಕಲ್ಪನೆ, ೩-೯೪; ವಾಕ್ಯಪ್ರತ್ಯಕ್ಷಗಳಿಗೆ ವಿರೋಧವೆಂಬುದು ಮೋಹಮಾತ್ರ, ೩-೯೬.

**ಪುರುಷಬುದ್ಧಿಃ** - ಬ್ರ.ಸೂ-೧. ಮನುಷ್ಯನ ಮನನಶಕ್ತಿ, ೨೮.

**ಪುರುಷಬುದ್ಧ್ಯಪೇಕ್ಷ** - ಬ್ರ.ಸೂ-೧. ಹೀಗಾದರೂ ಇರಬಹುದು, ಹೀಗೂ ಇರಬಹುದು - ಎಂಬ ವಿಕಲ್ಪನೆಯಂತೆ ಮನುಷ್ಯನ ಬುದ್ಧಿಯನ್ನವಲಂಬಿಸಿರುವ, ೨೮.

**ಪುರುಷಬುದ್ಧಿಪ್ರಮಾಣಗಮ್ಯ** - ಮಾಂ. ಶಾಸ್ತ್ರವಿಲ್ಲದ ಬರಿಯ ಮನುಷ್ಯ ಬುದ್ಧಿಯಿಂದ ತಿಳಿದುಬರುವ, ೧೪೯.

**ಪುರುಷಮತಿವೈರೂಪ್ಯಮ್** - ಬ್ರ.ಸೂ-೧. ಜನರ ಮನಸ್ಸು ಬೇರೆ ಬೇರೆ ವಿಧವಾಗಿರುವದು, ೪೨೭.

**ಪುರುಷಮತಿಕೌಶಲಮ್** - ಬೃಹ-೧. ಮನುಷ್ಯನ ಜಾಣತನ, ೩೮.

**ಪುರುಷವ್ಯಾಪಾರತನ್ತ್ರ, ಪುರುಷತನ್ತ್ರ, ಪುರುಷಾಧೀನ** - ಬ್ರ.ಸೂ-೧. ಮನುಷ್ಯನು ಮಾಡುವದಕ್ಕೆ ಅನುಸಾರವಾಗಿರುವ (ಕ್ರಿಯೆ), ೧೨, ೨೮, ೪೭, ೪೯, ೫೧, ೬೪, ೩೪೩.

**ಪುರುಷವಿಧಃ** - ತೈ. ಪುರುಷನ ಆಕಾರವಾದ ೧೨೩, ೧೨೪ ; **ಐತ.** ಮನುಷ್ಯನಂತೆ ತಲೆ, ಕೈ, ಮುಂತಾದವುಗಳನ್ನುಳ್ಳವ, ೩೫ ; **ಬೃಹ-೧.** ಶರೀರಾವಯವಗಳುಳ್ಳ (ಪ್ರಜಾಪತಿ), ೯೪.

**ಪುರುಷಾಗ್ನಿಃ** - ಐತ. ಛಾಂದೋಗ್ಯದಲ್ಲಿ ಹೇಳಿರುವ ಉಪಾಸನೆಯ ಐದು ಅಗ್ನಿಗಳಲ್ಲಿ ಪುರುಷನು, ೭೪.

**ಪುರುಷಾರ್ಥಃ, ಪರಮಪುರುಷಾರ್ಥಃ** - ಬ್ರ.ಸೂ-೧. ಪುರುಷಾರ್ಥಗಳಲ್ಲೆಲ್ಲ ಹೆಚ್ಚಿನದು, ಮೋಕ್ಷ, ೧೩೭, ೪೦೭.

**ಪುರುಷಾರ್ಥಃ** - ಬ್ರ.ಸೂ-೧. ಪುರುಷನು ಬಯಸತಕ್ಕ ಫಲ (ಸ್ವರ್ಗಾದಿ), ೩೫, ೫೭, ೩೬೭ ; (ಮೋಕ್ಷ), ೧೮, ೫೨, ೭೯ ; ಬ್ರ.ಸೂ-೨. ಕರ್ಮಶೇಷವಲ್ಲದ, ಪುರುಷನಿಗೆ ಫಲವನ್ನು ಮಾತ್ರ ತಿಳಿಸುವ, ೧-೬೨ ; ವಿದ್ಯೆಯು ಸ್ವತಂತ್ರವಾಗಿಯೇ ಪುರುಷಾರ್ಥ, ಕರ್ಮಶೇಷವಲ್ಲ, ೨-೪೩೭, ೪೩೮ ; ಸ್ವರ್ಗಾದಿಗಳು. ಆತ್ಮಪ್ರತಿಪಾದನೆಯಿಂದ ಪುರುಷಾರ್ಥವಿಲ್ಲವೆಂಬ ಪೂರ್ವಪಕ್ಷವೂ, ಅದರ ಖಂಡನೆಯೂ, ೧-೩೫, ೩೮ ; ಸೃಷ್ಟ್ಯಾದಿಗಳ ಜ್ಞಾನದಿಂದ ಯಾವ ಪುರುಷಾರ್ಥವೂ ಇಲ್ಲ, ೧-೩೬೭ ; ಮೋಕ್ಷ, ಬ್ರಹ್ಮಾವಗತಿಯು ಪುರುಷಾರ್ಥಸಾಧನ, ೧-೧೮ ; ಬಹಿರ್ಮುಖನಿಗೆ ಆತ್ಯಂತಿಕ ಪುರುಷಾರ್ಥವಿಲ್ಲ, ೧-೫೨ ; ಅಚೇತನವನ್ನು ಆತ್ಮನೆಂದವನಿಗೆ ಪುರುಷಾರ್ಥವಿಲ್ಲ, ೧-೭೯, ಕರ್ತೃತ್ವವು ಹೋದಲ್ಲದೆ ಪುರುಷಾರ್ಥಸಿದ್ಧಿಯಿಲ್ಲ, ೨-೧೫೧ ; **ಈಶ.** ಪುರುಷನು ಬಯಸುವ ಗತಿ, ೨೬, ೩೧; **ಕಠ.** ಮನುಷ್ಯನು ಬಯಸುವದು, ೪೫, ೪೮ ; **ಪ್ರಶ್ನ.** ಮನುಷ್ಯನು ಬಯಸುವ ಭೋಗ, ಮೋಕ್ಷ, ೧೦೧ ; **ಮುಂ.** ಜನರು ಬಯಸುವ ಹೆಚ್ಚಿನ ಪ್ರಯೋಜನ, ಮುಕ್ತಿ, ೧, ೪೧, ೬೬, ೧೦೧ ; **ತೈ.** ಪುರುಷನು ಪಡೆಯಲು ಬಯಸುವ ಫಲ, ೫೩, ೭೮, ೧೫೧ ; **ಬೃಹ-೨.** ಧರ್ಮಾರ್ಥಕಾಮಮೋಕ್ಷಗಳು, ೩೦ ; ಬೌದ್ಧರ ನಿರ್ವಾಣ, ೧೮೨; **ಭ.ಗೀ.** ಪುರುಷನು ಬಯಸುವ ಪರಮಗತಿ, ಮೋಕ್ಷ, ೬, ೧೨, ೮೬, ೧೨೧, ೧೫೭, ೧೫೮, ೨೭೪, ೪೫೪, ೫೯, ೬೨೪, ೧೦೬೯, ಧರ್ಮಾದಿ ಪುರುಷಾರ್ಥಗಳು, ೨೯, ೪೫೩, ೬೨೪, ೯೫೨ ; **ನೈ.** ಅನರ್ಥನಿವೃತ್ತಿ, ಅರ್ಥಪ್ರಾಪ್ತಿ. ಅವಿದ್ಯಾನಿವೃತ್ತಿಯೇ ಪುರುಷಾರ್ಥ, ವೇದಾಂತಜ್ಞಾನವೇ ಅದಕ್ಕೆ ಹೇತು, ೧-೭,೮; ಜ್ಞಾನವು ಪುರುಷಾರ್ಥಸಿದ್ಧಿಗೆ ಮತ್ತೇನನ್ನೂ ಬಯಸದು. ೧-೩೬, ೪-೬೯; ಅದ್ವಿತೀಯಪ್ರತ್ಯಗಾತ್ಮಜ್ಞಾನವನ್ನು ಹೇಳುವ ತತ್ತ್ವಂಪದಗಳ ಅರ್ಥವು ಅಜ್ಞಾತಪುರುಷಾರ್ಥವನ್ನು ತಿಳಿಸುವದರಿಂದ ಬಾಧಿತವಾಗುವದಿಲ್ಲ, ೩-೮೦.

**ಪುರುಷಾರ್ಥಸಮಾಪ್ತಿಃ** - ಬೃಹ-೧. ಪುರುಷಾರ್ಥವು ದೊರಕುವದು, ೧೧೭.

**ಪುರುಷಾರ್ಥಸಾಧನಮ್** - ಬೃಹ-೧. ಹೆಚ್ಚಿನ ಪುರುಷಾರ್ಥಕ್ಕೆ ಸಾಧನವಾದ (ಜ್ಞಾನ), ೪೦೦ ; ಬೃಹ-೨. ಪುರುಷಾರ್ಥಕ್ಕಾಗಿ ಮಾಡಬೇಕಾದ (ಕರ್ಮ), ೨೪೪.

**ಪುರುಷಾರ್ಥಸಿದ್ಧಿಃ** - ಛಾಂ. ಪುರುಷನು ಬಯಸುವ (ಮೋಕ್ಷದ ಸಿದ್ಧಿ), ೨.

**ಪುರುಷೋತ್ಪ್ರೇಕ್ಷಾನಿಬನ್ಧನ, ಪುರುಷೋತ್ಪ್ರೇಕ್ಷಾಮಾತ್ರಾನಿಬನ್ಧನ** - ಬ್ರ.ಸೂ-೧. ಮನುಷ್ಯನು ಊಹಿಸಿದ ನಿಮಿತ್ತದಿಂದ ಮಾತ್ರವೇ ಆಗಿರುವ (ತರ್ಕ), ೪೨೭ ; **ಶಾಂ.** ನಿ. ಮನುಷ್ಯನು ಊಹಿಸಿದ ಮಾತ್ರದಿಂದ ಉಂಟಾಗಿರುವ (ತರ್ಕ), ಸೂ. ಭಾ. ೨-೧-೧೧.

**ಪೂರ್ತಮ್** - ಬ್ರ.ಸೂ-೧. ವಾಪೀಕೂಪಾದಿಗಳನ್ನು ಏರ್ಪಡಿಸುವ ಕರ್ಮ, ೪೦೭.

**ಪೂರ್ಣಮ್** - ಬೃಹ-೨. ಆಕಾಶದಂತೆ ವ್ಯಾಪಿ ೩೪೭, ೩೪೮ ; ಭ.ಪ್ರ. ಪರಮಾರ್ಥಸತ್ಯ, ೩೪೯

**ಪೂರ್ವಃ ಪಕ್ಷಃ** - ಬ್ರ.ಸೂ-೧. ತಟ್ಟನೆ ಮೊದಲು ತೋರುವ ತಪ್ಪು ಅಭಿಪ್ರಾಯದ ಪಕ್ಷ, ೩೭, ೧೭೪, ೩೯೯ ; **ಮುಂ.** ತಟ್ಟನೆ ನೋಡಿದರೆ ಮೊದಲು ತೋರುವ ತಪ್ಪು ಪಕ್ಷ, ೧೪.

**ಪೂರ್ವಪ್ರಕೃತಾಪೇಕ್ಷಾ** - ಬ್ರ.ಸೂ-೧. ಹಿಂದೆ ಪ್ರಕೃತವಾದದ್ದಕ್ಕಿಂತ (ಆಮೇಲೆ ಎಂಬ ಅಥಶಬ್ದಾರ್ಥ), ೧೧.

**ಪೃಥಕ್ಶಾಸ್ತ್ರಾರಂಭಃ** - ಬ್ರ.ಸೂ-೧. ಕರ್ಮಶಾಸ್ತ್ರವಲ್ಲದ ಮತ್ತೊಂದಾದ ಬ್ರಹ್ಮಶಾಸ್ತ್ರವನ್ನು ಆರಂಭಿಸಿರುವದು, ೬೨.

**ಪೃಥಿವೀ** - ಬ್ರ.ಸೂ-೧. ಭೂಮಿ (ಪರಿಣಾಮಿನಿತ್ಯಕ್ಕೆ ದೃಷ್ಟಾಂತ), ೪೩ ; (ಉಪಾದಾನಕಾರಣಕ್ಕೆ ದೃಷ್ಟಾಂತ), ೩೯೩, ೪೨೨ ; ಬೃಹ-೧. ಹಿರಣ್ಯಗರ್ಭನಿಂದ ಹುಟ್ಟಿದ ಅಂಡ, ೨೮ ; ಪಂಚಭೂತಗಳಲ್ಲಿ ಒಂದು, ೩೩೩ ; ಭೂಮಿ, ೨೨೧.

**ಪೌರಾಣಿಕಾಃ - ಈಶ.** ಪುರಾಣವನ್ನು ಬರೆದಿರುವವರು ಅಥವಾ ಬಲ್ಲವರು, ೩೧.

**ಪೌರುಷೇಯ** - ಬ್ರ.ಸೂ-೧. ಪುರುಷರು ರಚಿಸಿರುವ (ಗ್ರಂಥ, ವೇದವಲ್ಲ), ೨೯೯.

**ಪ್ರಕರಣಮ್** - ಬ್ರ.ಸೂ-೧. ಯಾವದನ್ನು ಕುರಿತ ಗ್ರಂಥವು ಮೊದಲಾಗಿದೆಯೋ ಅದರ ಗ್ರಂಥ, ೩೫, ೫೪, ೮೧, ೧೨೪, ೧೨೮, ೩೩೬, ೩೪೬; **ಮಾಂ.** ಶಾಸ್ತ್ರದ ಒಂದಾನೊಂದು ಭಾಗವನ್ನು ವಿಸ್ತರಿಸುವ ಗ್ರಂಥ, ೧, ೩, ೭೫.

**ಪ್ರಕೃತಸಂಖ್ಯಾಪೂರಣ ಭ್ರಮಾಪೋಹಃ** - ಬೃಹ-೧. ತಾನು ಪ್ರಕೃತ ಸಂಖ್ಯೆಯ ಪೂರಣತ್ವವುಳ್ಳ ಹತ್ತನೆಯವನಲ್ಲವೆಂಬ ಭ್ರಮೆಯನ್ನು ಕಳೆಯುವದು, ೧೨೬, ೧೮೮.

**ಪ್ರಕೃತಹಾನಾಪ್ರಕೃತಪ್ರಕ್ರಿಯೇ** - ಬ್ರ.ಸೂ-೧. ಪ್ರಕರಣದ ವಿಷಯವನ್ನು ಬಿಟ್ಟು ಮತ್ತೊಂದರ ವಿಷಯವನ್ನು ಪ್ರಾರಂಭಿಸುವದು, ೧೦೧, ೧೦೭, ೧೨೭, ೧೪೯, ೩೩೬, ೩೪೩.

**ಪ್ರಕೃತಿಃ** - ಬ್ರ.ಸೂ-೧. ಉಪಾದಾನಕಾರಣ, ೯೯, ೩೮೯, ೩೯೧, ೩೯೨, ೩೯೩, ೩೯೫, ೪೦೯, ೪೧೨, ೪೨೯, ೪೩೫, ೪೭೭ ; ಸಾಂಖ್ಯರು ಒಪ್ಪಿರುವ ಮೂಲ ಪ್ರಕೃತಿ, ೩೫೮ ; ಈಶ್ವರನ ಶಕ್ತಿ (ಯಾದ ನಾಮರೂಪ), ೪೪೦ ; ಬ್ರ.ಸೂ-೨. ಉಪಾದಾನಕಾರಣ. ಬ್ರಹ್ಮವು ಜಗತ್ತಿಗೆ ಪ್ರಕೃತಿಯೂ ನಿಮಿತ್ತವೂ ಆಗಿದೆ, ೧-೩೮೯ ರಿಂದ ೩೯೬, ೪೧೫, ೪೧೬ ; ಪ್ರಕೃತಿವಿಕಾರಭಾವವಿರುವದಕ್ಕೆ ವಿಕಾರದಲ್ಲಿ ಅತಿಶಯವಿರಬೇಕು, ೧, ೪೧೫, ೪೧೬, ೨-೧೦೬, ವ್ಯಾಕೃತಾವಸ್ಥೆಗಳಲ್ಲಿಯೂ ಪ್ರಕೃತಿ-ವಿಕೃತಿಭಾವವುಂಟು, ೨-೧೭೬ ; ಸಾಂಖ್ಯರು ಜಗತ್ಕಾರಣವೆಂದು ಅನುಮಾನಿಸಿರುವ ಪ್ರಧಾನವನ್ನು ಅವರು ಮೂಲಪ್ರಕೃತಿಯೆನ್ನುವರು, ೧-೩೫೮ ; ನಿಜವಾಗಿ ಬ್ರಹ್ಮವೇ ಮೂಲಪ್ರಕೃತಿ ೨-೧೦೬, ೧೭೬ ; ಸಂಸಾರಕ್ಕೆ ಬೀಜವಾಗಿರುವ ನಾಮರೂಪಗಳನ್ನು ಪ್ರಕೃತಿಯೆನ್ನುವದುಂಟು, ೧-೪೪೦ ; **ಈಶ.** ಜಗತ್ತಿಗೆ ಸೂಕ್ಷ್ಮಕಾರಣ, ಅವ್ಯಾಕೃತ, ಅವ್ಯಕ್ತ, ೨೮ ; ಭ.ಗೀ. ಸ್ವಭಾವ, ಪೂರ್ವಜನ್ಮಸಂಸ್ಕಾರ, ೨೦೮, ೨೧೧, ೪೮೨, ೫೫೫, ೫೬೩, ೫೬೫, ೧೦೭೦ ; ಪ್ರಧಾನ, ಪರಮಾತ್ಮನ ಶಕ್ತಿ, ತ್ರಿಗುಣಾತ್ಮಕಮಾಯೆ, ಅವ್ಯಾಕೃತ, ೨, ೧೬೩, ೧೯೮, ೨೦೧, ೨೩೮, ೫೫೪, ೭೫೪, ೮೦೬, ೮೦೯, ೮೧೧, ೮೧೩, ೮೩೪, ೮೪೪, ೮೫೦ ; ಜೀವ, (ಪುರುಷ), ಮತ್ತು ತ್ರಿಗುಣಾತ್ಮಕಪ್ರಕೃತಿ ಎಂಬ ಪರಮಾತ್ಮನ ಪ್ರಕೃತಿಗಳಲ್ಲಿ ಒಂದು ೭೫೩, ೮೦೬, ೮೦೭, ೮೩೪; ದೈವ, ಅಸುರ - ಎಂಬ ಜೀವರ ಎರಡು ಸ್ವಭಾವಗಳು, ೫೬೩, ೫೬೫, ೯೨೬ ; **ಶಾಂ. ನಿ.** (೧) ಉಪಾದಾನಕಾರಣ, ಸೂ. ಭಾ. ೧-೪-೨೩ ; (೨) ಪೂರ್ವಜನ್ಮಸಂಸ್ಕಾರ, ಗೀ. ಭಾ. ೩-೩೩ ; (೩) ಪರಮಾತ್ಮನ ತ್ರಿಗುಣಾತ್ಮಕ ಮಾಯೆ, ಅವ್ಯಾಕೃತ, ಗೀ. ಭಾ. ೯-೮, ಗೀ. ಭಾ. ಭಾ. ೨೧೧ ; (೪) ಪುರುಷ, ಪ್ರಕೃತಿ - ಎಂಬ ಪರಮಾತ್ಮನ ಎರಡು ಪ್ರಕೃತಿಗಳಲ್ಲಿ ಒಂದು, ಗೀ. ಭಾ. ಭಾ. ೨೧೦ ; (೫) ದೈವ, ಆಸುರ - ಎಂಬ ಜೀವಸ್ವಭಾವಗಳಲ್ಲಿ ಒಂದು, ಗೀ. ಭಾ. ಭಾ.

**ಪ್ರಕೃತಿಲಯಃ** - ಭ.ಗೀ. ಅವ್ಯಕ್ತಾತ್ಮನು ಅಡಗುವ ಉತ್ತಮಸ್ಥಿತಿ ೩೦, ೩೧, ೩೨, ೩೩.

**ಪ್ರಕೃತಿವಿಕಾರಭಾವಃ** - ಬ್ರ.ಸೂ-೧. ಉಪಾದಾನಕಾರಣವೂ ಅದರ ಕಾರ್ಯವೂ ಆಗಿರುವ ಸಂಬಂಧ, ೪೧೦, ೪೧೫.

**ಪ್ರಕೃತಿವಿಕೃತಿಭಾವಃ** - ಬೃಹ-೨. ಸಕಲಾಂಗಗಳಿಂದಲೂ ಕೂಡಿರುವ ಕರ್ಮವು ಪ್ರಕೃತಿ, ವಿಕಲಾಂಗವಾದುದು ವಿಕೃತಿ - ಎಂದು ಶ್ರುತ್ಯುಕ್ತಕರ್ಮಗಳಿಗೆ ಇರುವ ಸಂಬಂಧ ; ವಿಕೃತಿಯಲ್ಲಿ ಪ್ರಕೃತಿಯ ಧರ್ಮಗಳನ್ನೆಲ್ಲ ಉಪಸಂಹಾರ-ಮಾಡಿಕೊಳ್ಳಬೇಕಾಗುವದು, ೪೫೮.

**ಪ್ರಕೃತಿವಿಕಾರೌ** - ಬ್ರ.ಸೂ-೧. ಉಪಾದಾನಕಾರಣ ಮತ್ತು ಅದರ ಕಾರ್ಯ-ಇವು, ೪೧೬, ೪೬೩.

**ಪ್ರಕೃತಿವಿಕೃತಯಃ** - ಬ್ರ.ಸೂ-೧. ಸಾಂಖ್ಯರು ಒಪ್ಪಿರುವ ವಿಕಾರಭೂತವಾದ ಏಳು ಪ್ರಕೃತಿಗಳು, ೩೫೮ ; ಭ.ಗೀ. ಮಹತ್ತೇ ಮುಂತಾದ ಏಳು ಸಾಂಖ್ಯರ ತತ್ತ್ವಗಳು, ೮೧೦.

**ಪ್ರಕೃತಿಸ್ಥತ್ವಮ್** - ಭ.ಗೀ. ಪ್ರಕೃತಿಯ ಧರ್ಮಗಳನ್ನು ತನ್ನವೆಂದು ತಿಳಿಯುವ ಅವಿದ್ಯೆ, ೮೧೪, ೮೪೫, ೮೭೫.

**ಪ್ರಚಾರಃ** - **ಮಾಂ.** ಮನಸ್ಸಿನ ವೃತ್ತಿ, ೧೯೦, ೧೯೧, ೧೯೨ ; **ಭ.ಗೀ.** ಅಂತಃಕರಣದ ವೃತ್ತಿ, ೪೧೩, ೪೧೫, ೪೩೫ ; **ಶಾಂ. ನಿ.** ಮನಸ್ಸಿನ ವೃತ್ತಿ ಅಧ್ಯಾಸಭಾಷ್ಯ ; ಮಾಂ. ಕಾ. ಭಾ. ૩-૩೪.

**ಪ್ರಜಾ** - **ಪ್ರಶ್ನ.** ಶರೀರ, ೪, ೫, ೨೩.

**ಪ್ರಜಾಪತಿಃ** - ಬ್ರ.ಸೂ-೧. ವಿರಾಟ್ಪುರುಷ, ೨೦೪ ; **ಪ್ರಶ್ನ.** ಸೃಷ್ಟಿಯಾಗುವ ಪ್ರಜೆಗಳ ಒಡೆಯ, ಹಿರಣ್ಯಗರ್ಭ, ೫ ; **ತೈ.** ಹಿರಣ್ಯಗರ್ಭ ೨೨ ; ವಿರಾಟ್ಪುರುಷ ೪೬, ೪೯, ೨೦೧ ; **ಐತ.** ವಿರಾಟ್ಪುರುಷ, ೮೭ ; **ಛಾಂ.** ವಿರಾಟ್ಪುರುಷ, ಕಶ್ಯಪ, ೧೦೮, ೬೪೭, ೬೫೨, ೬೫೯, ೬೭೧ ; **ಬೃಹ-೧.** ಹಿರಣ್ಯಗರ್ಭ, ೨೭, ೩೫, ೪೬ ; ಹಿರಣ್ಯಗರ್ಭನಿಂದುಂಟಾದ ವಿರಾಟ್ಪುರುಷ, ೩೦, ೩೧ ; ವಿರಾಟ್ಪುರುಷನಿಂದಾದ ಮನು, ೧೦೭, ೧೦೯ ; **ಬೃಹ-೨.** ವಿರಾಟ್ ಅಥವಾ ಹಿರಣ್ಯಗರ್ಭ, ೧೫೧, ೩೬೦; **ಭ.ಗೀ.** ಕಲ್ಪಕ್ಕೆ ಒಡೆಯನಾದ ಬ್ರಹ್ಮ, ೫೨೪, ೫೨೫, ೫೨೬ ; ಮರೀಚ್ಯಾದಿಗಳಲ್ಲಿ ಅಥವಾ ಸನಕಾದಿಗಳಲ್ಲಿ ಒಬ್ಬನು, ೧ ; **ಶಾಂ. ನಿ.** ತ್ರೈಲೋಕ್ಯಶರೀರಿಯಾದ ವಿರಾಟ್ಪುರುಷ. ಮುಂ. ಭಾ. ೨-೧-೪ ; ಹಿರಣ್ಯಗರ್ಭ. ಪ್ರ. ಭಾ. ೧-೪.

**ಪ್ರಜಾಪತಯಃ** - **ಈಶ.** ಜೀವರನ್ನು ಸೃಷ್ಟಿಸುವ ಬ್ರಹ್ಮರು, ೧೯.

**ಪ್ರಜಾಪತಿತ್ವಕರಣಮ್** - ಬೃಹ-೧. ಭಾವನೆಯಿಂದ ಪ್ರಜಾಪತಿಯಾಗಿ ಮಾಡುವದು, ೯.

**ಪ್ರಜ್ಞಾ** - ಭ.ಗೀ. ಆತ್ಮಸ್ವರೂಪಜ್ಞಾನ ೧೦೭, ೧೦೯, ೧೧೧, ೧೧೨, ೧೧೪, ೧೧೫, ೧೧೮, ೧೨೯, ೧೩೨ ; **ಶಾಂ. ನಿ.** (೧) ಮನಸ್ಸಿನ ಜ್ಞಾನಶಕ್ತಿ, ಸೂ. ಭಾ. ೧-೧-೩೧ ; (೨) ಚೈತನ್ಯಸ್ವರೂಪ, ಐ. ಭಾ. ೩-೧-೩.

**ಪ್ರಜ್ಞಾತ್ಮಾ - ಐತ.** ಜ್ಞಾನಶಕ್ತಿಪ್ರಧಾನನಾದ ಹಿರಣ್ಯಗರ್ಭ, ೮೭.

**ಪ್ರಜ್ಞಃ ಆತ್ಮಾ - ಐತ.** ಚೈತನ್ಯರೂಪನಾದ ಪರಮಾತ್ಮ, ೮೯.

**ಪ್ರಜ್ಞಾಕರಣಸಾಧನಾನಿ - ಬೃಹ-೨.** ಆತ್ಮಜ್ಞಾನವನ್ನುಂಟುಮಾಡಿಕೊಳ್ಳುವದಕ್ಕೆ ಸಾಧನಗಳು (ಶಾಂತ್ಯಾದಿಗಳು), ೩೦೦.

**ಪ್ರಜ್ಞಾನಘನ - ಬೃಹ-೧.** ಅರಿವಿನ ಗಟ್ಟಿ, ಚೈತನ್ಯವೊಂದೇ ಆಗಿರುವ (ಆತ್ಮ), ೩೬೬, ೩೬೭.

**ಪ್ರಜ್ಞಾನೈಕರಸಘನ, ಪ್ರಜ್ಞಾನಘನ - ಬೃಹ-೨.** ಚೈತನ್ಯದ ಗಟ್ಟಿ, ಚಿದೇಕರಸ (ಆತ್ಮ), ೨೬೮, ೩೫೧.

**ಪ್ರಣವಃ - ಮಾಂ.** ಓಂಕಾರದಿಂದ ತಿಳಿಯಬರುವ ಆತ್ಮ, ೭೦, ೭೧, ೭೨, ೭೩ ; **ಛಾಂ.** ಓಂಕಾರ, ಬ್ರಹ್ಮ, ೧೭೭, ೧೭೮.

**ಪ್ರತಿಚ್ಛಾಯಾ - ಬೃಹ-೨.** ಬುದ್ಧ್ಯಾದಿಗಳಲ್ಲಿ ತೋರುವ ಚೈತನ್ಯದ ಪ್ರತಿಬಿಂಬ, ಚಿದಾಭಾಸ, ೪೬, ೧೭೩.

**ಪ್ರತಿದ್ವಂದ್ವಿಶಬ್ದಾ - ಬ್ರ.ಸೂ-೧.** ಒಂದಕ್ಕೊಂದು ವಿರುದ್ಧವಾಗಿರುವ ವಸ್ತುಗಳನ್ನು ಹೇಳುವ ಮಾತುಗಳು, ೧೨೬.

**ಪ್ರತಿದೇವತಾಃ - ಮುಂ.** ಆದಿತ್ಯಾದಿದೇವತೆಗಳು ; ಮುಕ್ತಿಯಾಗುವಾಗ ಕರಣಗಳಲ್ಲಿದ್ದ ದೇವತೆಗಳು ಈ ದೇವತೆಗಳಲ್ಲಿ ಸೇರಿಹೋಗುವದು, ೧೨೦.

**ಪ್ರತಿಪಕ್ಷಭಾವನಾ - ಭ.ಗೀ.** ರಾಗಾದಿಗಳಿಗೆ ವಿರುದ್ಧವಾದ ಭಾವನೆಗಳನ್ನು ಅಭ್ಯಾಸಮಾಡುವದು, ೨೧೦, ೭೮೪.

**ಪ್ರತಿಪತ್ತಿಃ - ನೈ.** (೧) ಅರಿವು. ಐಕಾತ್ಮ್ಯದ ಪ್ರತಿಪತ್ತಿಯಿಲ್ಲದಿರುವದೇ ೧-೭; **ವಾಕ್ಯಾರ್ಥದ** ಪ್ರತಿಪತ್ತಿಯಿಲ್ಲದಿರುವದಕ್ಕೆ ಬುದ್ಧ್ಯಾದಿ ದೇಹಾದಿಗಳನ್ನು ತಾನೆಂದುಕೊಂಡು ತ್ವಂಪದಾರ್ಥವನ್ನು ತಿಳಿದುಕೊಳ್ಳದಿರುವದೇ ಕಾರಣ, ೨-೧,೧೮; ದೇಹವ್ಯತಿರಿಕ್ತಾತ್ಮನ ಪ್ರತಿಪತ್ತಿಯಾದರೆ **ರಾಗದ್ವೇಷ**-ಗಳಿರುವದಿಲ್ಲ , ೨-೧೬, ೧೭; **ಅವಾಕ್ಯಾರ್ಥದ** ಪ್ರತಿಪತ್ತಿಗಾಗಿ ವಿಶೇಷಣ-

ವಿಶೇಷ್ಯಭಾವವನ್ನು ಅರಿತು ಕೊಳ್ಳಬೇಕು, ೩-೧೦; ದೇಹಾದಿಗಳು ಅನಾತ್ಮವೆಂಬ ಪ್ರತಿಪತ್ತಿಯಾದರೇ ಪ್ರತ್ಯಗಾತ್ಮನು ತತ್ಪದಾರ್ಥದೊಡನೆ ಐಕ್ಯವನ್ನು ಹೊಂದುತ್ತಾನೆ, ೩-೨೯; ಪದವು ಸಾಮಾನ್ಯವೃತ್ತಿಯಾದರೂ ಶ್ರುತ್ಯಾದಿಗಳ ನಿಮಿತ್ತದಿಂದ ವಾಕ್ಯಾರ್ಥವನ್ನು ಹೇಳುವದು, ೩-೩೨; ಆತ್ಮನು ನಿತ್ಯಪ್ರತಿಪನ್ನನು, ಅವನನ್ನು ಮತ್ತೆ ಅರಿಯಬೇಕೆನ್ನುವದು ಹೊಂದಲಾರದು ೨-೧೧೮.

**ಪ್ರತಿಪತ್ತಿಕರ್ಮ** - ನೈ. ತಾನೇ ಪ್ರಾಪ್ತವಾಗಿರುವ ಕರ್ಮವನ್ನು ವಿಧಿಸುವದು, ೧-೮೦.

**ಪ್ರತಿಪತ್ತಿವಿಧಿಃ** - ಬ್ರ.ಸೂ-೧. ಜ್ಞಾನವನ್ನು ವಿಧಿಸುವದು, ೨೯, ೪೧, ೬೨.

**ಪ್ರತಿಪಾದನಮ್** - ಬ್ರ.ಸೂ-೧. ತಾತ್ಪರ್ಯದಿಂದ ತಿಳಿಸುವದು, ೩೫, ೩೨೭, ೩೩೧, ೩.೩೨, ೩೮೬.

**ಪ್ರತಿಬಿಂಬಃ** - ಬೃಹ-೧. ನೀರಿನಲ್ಲಿ ಹೊಕ್ಕಿರುವ ಸೂರ್ಯಾದಿಗಳ ನೆರಳು, (ಆತ್ಮಪ್ರವೇಶಕ್ಕೆ ಉದಾಹರಣೆ), ೧೨೨, ೧೨೬, ೧೨೭.

**ಪ್ರತಿಬಿಂಬಾತ್ಮಾ** - ಬ್ರ.ಸೂ-೧. ಕಣ್ಣಿನಲ್ಲಿ ತೋರುವ ನೆರಳು, ೧೭೬.

**ಪ್ರತಿಮಾ** - ಛಾಂ. ವಿಷ್ಣುಮುಂತಾದ ದೇವತೆಗಳ ಮೂರ್ತಿ, ೫೫೨.

**ಪ್ರತಿಯೋಗಿ** - ಬ್ರ.ಸೂ-೧. ಯಾವದರ ಧರ್ಮವೋ ಅದು, ೧೧೯.

**ಪ್ರತಿಷಿದ್ಧ** - ಬೃಹ-೧. ಮಾಡಬಾರದೆಂದು ವೇದದಲ್ಲಿ ಹೇಳಿರುವ (ಕರ್ಮ), ೫೮.

**ಪ್ರತಿಷಿದ್ಧಕರ್ಮಾಣಿ** - ತೈ. ಮಾಡಕೂಡದೆಂದು ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳು ೩.

**ಪ್ರತಿಷಿದ್ಧಸೇವಾ** - ಛಾಂ. ಶಾಸ್ತ್ರದಲ್ಲಿ ಕೂಡದೆಂದು ಹೇಳಿದ ಕರ್ಮವನ್ನು ಮಾಡುವದು, ೧೮೨.

**ಪ್ರತಿಷೇಧಃ** - ಬ್ರ.ಸೂ-೨. ಮಾಡಬೇಡವೆಂದು ಶಾಸ್ತ್ರದಲ್ಲಿ ಹೇಳಿರುವದು. ವಿಧಿಪ್ರತಿಷೇಧಶಾಸ್ತ್ರಗಳು ಅವಿದ್ಯಾಪೂರ್ವಕ, ೧-೫ ; ನಿವೃತ್ತ್ಯುಪದೇಶಗಳ ಔದಾಸೀನ್ಯವೇ ಪ್ರತಿಷೇಧಾರ್ಥ, ೧-೫೬ ; ಪುರುಷತಂತ್ರವಾದ ಕ್ರಿಯೆಯ ವಿಷಯದಲ್ಲಿ ಪ್ರತಿಷೇಧವು ಸಾರ್ಥಕ, ೧-೨೮ ; ಬೇಡವೆನ್ನದಿರುವದೂ ಅಧಿಕಾರಕಾರಣ, ೧-೩೦೦, ೨-೪೮೨ ; ಉಪಾಧಿಕೃತವಾದ ಜೀವವ್ಯವಹಾರದಿಂದಲೇ

ವಿಧಿಪ್ರತಿಷೇಧಶಾಸ್ತ್ರವು ಹೊಂದುತ್ತದೆ, ೧-೧೯೫ ; ಅಲ್ಲ, ಇಲ್ಲ-ವೆಂದಿರುವದು ಕಾರ್ಯಪ್ರತಿಷೇಧಕ್ಕೆ ವಿಷಯವಲ್ಲ, ೧-೪೨೦ ; ಇದಲ್ಲವೆಂಬುದಕ್ಕಿಂತ ಬೇರೆ ಪ್ರಕಾರದಿಂದ ಬ್ರಹ್ಮವನ್ನು ಹೇಳಲಾಗುವದಿಲ್ಲ, ೨-೨೯೬ ; ಬ್ರಹ್ಮವನ್ನೂ ಅದರ ರೂಪವನ್ನೂ ಎರಡನ್ನೂ ಇಲ್ಲವೆನ್ನಲಾಗುವದಿಲ್ಲ, ೨-೨೯೬ ; ಬ್ರಹ್ಮಕ್ಕಿಂತ ಬೇರೊಂದು ವಸ್ತುವಿಲ್ಲವೆಂದು ಶಾಸ್ತ್ರ, ೨-೩೦೫, ೩೧೨ ; ಬ್ರಹ್ಮದ ಪ್ರತಿಷೇಧರೂಪ ಧರ್ಮಗಳನ್ನು ಒಟ್ಟುಗೂಡಿಸಿಕೊಂಡು ಚಿಂತಿಸಬೇಕು, ೨-೩೮೨ ; ಜ್ಞಾನಿಗೆ ಪ್ರಾಣೋತ್ಕ್ರಾಂತಿ ಇಲ್ಲವೆಂದಿರುವದು ದೇಹಾಪಾದಾನಕ, ೨-೫೫೪ ; ವಿಶೇಷಗಳನ್ನು ಇಲ್ಲವೆಂದು ಹೇಳುವದೇ ಪರಬ್ರಹ್ಮವು, ೨-೫೮೭.

**ಪ್ರತಿಷೇಧವಿಧಿಃ** - ಬೃಹ-೧. ಇದನ್ನು ಮಾಡಬಾರದು-ಎನ್ನುವ ವೇದವಾಕ್ಯ, ೫೮.

**ಪ್ರತಿಷೇಧವಿಜ್ಞಾನಮ್** - ಮಾಂ. ಅನಾತ್ಮವು ಆತ್ಮನಲ್ಲಿಲ್ಲವೆಂಬ ಅರಿವು, ೩೯.

**ಪ್ರತಿಸಂಧಾನಮ್** - ಮಾಂ. ಅದೇ ಇದೆಂಬ ಅರಿವು, ೧೯, ೨೮.

**ಪ್ರತಿಸಂಧಾನಮ್, ಪ್ರತ್ಯಭಿಜ್ಞಾನಮ್** - ಬೃಹ-೨. ಅದೇ ಇದು - ಎಂದು ಗುರುತಿಸುವ ಜ್ಞಾನ, ೧೬೮, ೧೮೧.

**ಪ್ರತೀಕಮ್** - ಬ್ರ.ಸೂ-೧. ಯಾವದನ್ನು ಬ್ರಹ್ಮವೆಂದು ಉಪಾಸನೆ ಮಾಡಬೇಕೋ ಅದು, ೧೨೮, ೧೮೯ ; **ಈಶ.** ಉಪಾಸ್ಯದೇವತೆಗೆ ಬದಲಾಗಿಟ್ಟು ಕೊಳ್ಳುವ ಓಂಕಾರವೇ ಮುಂತಾದ ಗುರುತು, ೩೭ ; **ಕಠ.** ಉಪಾಸನೆಗೆಂದು ಇಟ್ಟುಕೊಳ್ಳುವ ಗುರುತಿನ ವಸ್ತು ; ಉದಾಹರಣೆಗೆ ಓಂಕಾರವು ಬ್ರಹ್ಮಕ್ಕೆ ಪ್ರತೀಕವು, ೬೮, ೬೯ ; **ಪ್ರಶ್ನ.** ಉಪಾಸ್ಯಕ್ಕೆ ಬದಲಾಗಿಟ್ಟುಕೊಂಡು ಧ್ಯಾನಮಾಡುವ ಓಂಕಾರಾದಿ, ೮೦, ೮೩ ; **ಬೃಹ-೨.** ಯಾವದನ್ನು ಮತ್ತೊಂದೆಂದು ಧ್ಯಾನಿಸಬೇಕೋ ಅದು, ೩೫೬, ೩೭೯ ; **ಭ.ಗೀ.** ಉಪಾಸ್ಯವಾದದ್ದರ ಸ್ಥಾನದಲ್ಲಿಟ್ಟುಕೊಳ್ಳಬೇಕೆಂದು ಶಾಸ್ತ್ರದಲ್ಲಿ ವಿಧಿಸಿರುವ ವಸ್ತು, ೫೧೫.

**ಪ್ರತ್ಯಕ್ತ್ವ, ಪ್ರತ್ಯಗಾತ್ಮತ್ವ** - ನೈ. ಒಳಗಿನ ಸ್ವರೂಪ, '**ಪರಾಕ್**' ಅಲ್ಲದ್ದು, ಆತ್ಮನು ಪ್ರತ್ಯಗ್ರೂಪನು, ಪರಾಗ್ರೂಪವಾದ ಸುಖದುಃಖಗಳ ಸಂಬಂಧವು ಅವನಿಗಿಲ್ಲ, ೧-೯೪ ; ಒಳಗಿನ ಪಿತ್ತದಿಂದ ಹೊರಗಿನ ಪದಾರ್ಥವು ಹಳದಿಯಾಗಿ ಕಾಣುವ ಹಾಗೆ ಪ್ರತ್ಯಗಾತ್ಮನ ಚೈತನ್ಯವು ಹೊರಗಿನ ವಸ್ತುಗಳಲ್ಲಿಯೂ ಕಾಣುತ್ತದೆ, ೩-೩೦ ; ಅಹಂಕಾರವು ಮಿಕ್ಕವುಗಳಿಗಿಂತ ಪ್ರತ್ಯಕ್ತ್ವವುಳ್ಳದ್ದಾದ್ದರಿಂದ ಅದು ಪ್ರತ್ಯಗಾತ್ಮನಿಗೆ ಲಕ್ಷಣವಾಗಿರುತ್ತದೆ, ೨-೫೪, ೫೫ ; ಆತ್ಮನು ನಿಜವಾಗಿ ಪ್ರತ್ಯಗ್ರೂಪನು, ಬುದ್ಧಿಯು ಪರಾಗ್ರೂಪವೇ, ೨-೭೫ ; ಅಹಂಕಾರದ ಬೋದ್ಧೃತಾಪ್ರತ್ಯಕ್ತ್ವಗಳು ಕೂಟಸ್ಥನಾದ

ಆತ್ಮನ ಬೋಧಪ್ರತ್ಯಕ್ಷಗಳಿಂದಾಗಿರುವವು, ಅವುಗಳಿಗೆ ಪರಸ್ಪರ ಭೇದವುಂಟು, ೩-೧೨ ರಿಂದ ೧೫; ಬುದ್ಧಿಯ ಪ್ರತ್ಯಗಾತ್ಮತ್ವವು ಆತ್ಮಚೈತನ್ಯದ ಆಭಾಸದಿಂದ, ಆತ್ಮನಿಗೆ ಅದೇ ಸ್ವರೂಪವು, ೩-೭೧; ಪ್ರತ್ಯಕ್ಷಾದಿಪ್ರಮಾಣಗಳು ಪ್ರತ್ಯಗಾತ್ಮನನ್ನು ಅರಿಯಲಾರವು, ೩-೪೮.

**ಪ್ರತ್ಯಕ್ತ್ವಮ್** - ಬ್ರ.ಸೂ-೧. ಒಳಗಿರುವಿಕೆ, ಆತ್ಮತ್ವಕ್ಕೆ ಹೇತು, ೧೯೩.

**ಪ್ರತ್ಯಕ್ಪ್ರವಣ** - ನೈ. ಒಳಗಿನ ಆತ್ಮನೆಡೆಗೆ ತಿರುಗಿದ. ಕರ್ಮದಿಂದ ಚಿತ್ತವು ಶುದ್ಧವಾಗಿ ಯೋಗಾಭ್ಯಾಸದ ಮೂಲಕ ಪ್ರತ್ಯಕ್ಪ್ರವಣವಾಗುವದು, ೧-೪೯, ೫೨; ಪ್ರತ್ಯಕ್ಪ್ರವಣಬುದ್ಧಿಯುಳ್ಳವರಿಗೇ ಜ್ಞಾನವಾಗುತ್ತದೆ, ೪-೭೩.

**ಪ್ರತ್ಯಕ್ಷ** - ಬ್ರ.ಸೂ-೧. ಅನುಭವಸಿದ್ಧ, ೫೮, ೧೨೨, ೨೯೧, ೪೪೩ ; ಶ್ರುತಿ, ೨೮೭ ; ಇಂದ್ರಿಯರೂಪಪ್ರಮಾಣ, ೩, ೫, ೩೫, ೨೯೦, ೪೧೭, ೪೨೮ ; ಬ್ರ.ಸೂ-೨. ಅನುಭವಸಿದ್ಧವಾದ. ಅಧ್ಯಾಸವು ಎಲ್ಲರಿಗೂ ಪ್ರತ್ಯಕ್ಷ, ೧-೫೮ ; ಮಿಥ್ಯಾಜ್ಞಾನವು ಸಶರೀರತ್ವಕ್ಕೆ ಕಾರಣವೆಂಬುದು ಪ್ರತ್ಯಕ್ಷ, ೧-೫೮ ; ಕಾರ್ಯವು ಕಾರಣಕ್ಕಿಂತ ಅನ್ಯವಲ್ಲವೆಂಬುದು ಪ್ರತ್ಯಕ್ಷ, ೧-೪೪೩ ; ತತ್ತ್ವಮಸಿವಾಕ್ಯದ ಫಲವು ಪ್ರತ್ಯಕ್ಷ, ೧-೩೬೭ ; ಬೃಹ-೨. ನೇರಾಗಿ ನಾಮಗ್ರಹಣಮಾಡುವದು, ೧೫೩ ; ಇಂದ್ರಿಯ ಪ್ರಮಾಣ, ೧೬೭, ೧೭೭ ; ಅನುಭವ, ೧೩೭, ೧೯೬.

**ಪ್ರತ್ಯಕ್ಷಮ್** - ಐತ. ಇಂದ್ರಿಯಗಳಿಂದ ವಿಷಯಗಳನ್ನು ಅರಿಯುವದು, ೬೩, ೬೫ ; ಬೃಹ-೧. ಇಂದ್ರಿಯಜ್ಞಾನ, ೩, ೪, ೧೨೪ ; ಅನುಭವಗಮ್ಯ, ೩೨೧, ೩೨೩.

**ಪ್ರತ್ಯಕ್ಷಸಂನಿಹಿತ** - ಬ್ರ.ಸೂ-೧. ಅನುಭವದಿಂದ ಹತ್ತಿರ ಕಾಣುವ (ಜಗತ್ತು), ೩೭೩.

**ಪ್ರತ್ಯಕ್ಷಾದಯಃ** - ನೈ. ಪ್ರತ್ಯಕ್ಷ, ಅನುಮಾನ, ಉಪಮಾನ - ಮುಂತಾದ ಲೌಕಿಕ ಪ್ರಮಾಣಗಳು ಭೌತಿಕವಿಷಯಗಳನ್ನು ಮಾತ್ರ ನೋಡುವವು, ಅವಕ್ಕೆ ಪ್ರತ್ಯಗ್ರೂಪನಾದ ಆತ್ಮನು ವಿಷಯನಲ್ಲ, (ಅವ), ೨-೧; ೩-೧೩. ಆತ್ಮಾನಾತ್ಮವಿಭಾಗವು ಪ್ರತ್ಯಕ್ಷಾದಿಪ್ರಮಾಣವಿಷಯಕ. ೨-೧೦೩; ವೇದಾಂತವಾಕ್ಯವು ಪ್ರತ್ಯಕ್ಷಾದಿವಿರುದ್ಧವಲ್ಲ. ೩-೮೧; ಪ್ರತ್ಯಕ್ಷಾದಿವಿರುದ್ಧವಾದರೆ ದೃಷ್ಟಿವಿಧಿಪರವೆಂದು ಕಲ್ಪಿಸಬೇಕು, ೩-೮೦; ಅಥವಾ ಪ್ರಮಾಣಾಭಾಸವೆಂದಾದರೂ ಕಲ್ಪಿಸಬೇಕು, ೩-೮೫; ಆತ್ಮನು ದುಃಖಿಯೆಂದೇನೂ ಪ್ರತ್ಯಕ್ಷಾದಿಗಳು ಹೇಳುವದಿಲ್ಲ, ೩-೮೭; ಪ್ರತ್ಯಕ್ಷಾದಿಗಳಿಂದ ದುಃಖಿತ್ವವು ಕಂಡರೂ ಪ್ರತ್ಯಗಾತ್ಮದೃಷ್ಟಿಯಿಂದ ನಿರ್ದುಃಖಿತ್ವವು ಸ್ವತಃಸಿದ್ಧವಾಗಿರುತ್ತದೆಯಾದ್ದರಿಂದ ವಾಕ್ಯವೇ ಪ್ರಬಲ, ೩-೯೪; ಆತ್ಮಾನಾತ್ಮಗಳು

ಪ್ರತ್ಯಕ್ಷಾದಿಪ್ರಮಾಣದಿಂದ ಸಿದ್ಧವಾಗಿರುತ್ತವೆ, ೪-೩; ಆತ್ಮಜ್ಞಾನದಿಂದಾಗುವ ಫಲವು ಪ್ರತ್ಯಕ್ಷಾನುಭವಸಿದ್ಧ, ೧-೯೦.

**ಪ್ರತ್ಯಕ್ಷಾದೀನಿ - ಬ್ರ.ಸೂ-೧.** ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳು, ೫, ೬, ೨೯೯, ೩೦೪, ೪೨೬ ; **ಬ್ರ.ಸೂ-೨.** ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ, ಅನುಪಲಬ್ಧಿ- ಎಂಬ ಪ್ರಮಾಣಗಳು ; ಪ್ರಾಮಾಣ್ಯಕ್ಕೆ ಮತ್ತೊಂದನ್ನು ಬಯಸದ ಶ್ರುತಿಯು ಪ್ರತ್ಯಕ್ಷ, ಬಯಸುವ ಸ್ಮೃತಿಯು ಅನುಮಾನ, ೧-೨೮೭.

**ಪ್ರತ್ಯಕ್ಷಾದಿಪ್ರಮಾಣಾನಿ - ಛಾಂ.** ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ-ಮುಂತಾದ ಪ್ರಮಾಣಗಳು, ೨೫೯.

**ಪ್ರತ್ಯಕ್ಷಾವಗಮಃ - ಬ್ರ.ಸೂ-೧.** ತತ್ತ್ವಮಸಿ ಮುಂತಾದ ವಾಕ್ಯ ಶ್ರವಣವಾಗಲು ಅನುಭವಕ್ಕೇ ಗೋಚರವಾಗುವ ಫಲ, ೩೬೭.

**ಪ್ರತ್ಯಕ್ಷಾದಿಸಂನಿಧಾಪಿತ - ಬ್ರ.ಸೂ-೧.** ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಂದ ಹತ್ತಿರವಾಗಿರುವ (ಜಗತ್ತು), ೨೩.

**ಪ್ರತ್ಯಕ್ಷಾನುಮಾನೇ - ಬೃಹ-೧.** ದೃಷ್ಟವಿಷಯಗಳನ್ನು ತಿಳಿಸುವ ಎರಡು ಪ್ರಮಾಣಗಳು, ೩, ೪, ೧೨೬.

**ಪ್ರತ್ಯಕ್ಷಾದಿನಿಶ್ಚಿತಭೇದಃ - ಬೃಹ-೧.** ಪ್ರತ್ಯಕ್ಷವೇ ಮುಂತಾದ ಲೌಕಿಕ ಪ್ರಮಾಣಗಳಿಂದ ನಿಶ್ಚಿತವಾಗಿರುವ ಭೇದ, ೩೨೦.

**ಪ್ರತ್ಯಕ್ಷಾದಿವಿರೋಧಃ, ಪ್ರತ್ಯಕ್ಷಾದಿಪ್ರಮಾಣವಿಪ್ರತಿಷೇಧಃ - ಬೃಹ-೧.** ಪ್ರತ್ಯಕ್ಷವೇ ಮುಂತಾದ ಲೌಕಿಕಪ್ರಮಾಣಗಳಿಗೆ ವಿರೋಧ, ೧೨೫, ೩೨೦.

**ಪ್ರತ್ಯಕ್ಷಾನುಮಾನೋಪಮಾನಾಗಮಾಃ - ಮುಂ.** ವಿಷಯದ ತತ್ತ್ವವನ್ನು ತಿಳಿಸುವ ನಾಲ್ಕು ಪ್ರಮಾಣಗಳು, ೪೫.

**ಪ್ರತ್ಯಕ್ಚೇತನಃ, ಪ್ರತ್ಯಕ್ಚೇತಯಿತಾ - ಭ.ಗೀ.** ಒಳಗಿರುವ ಚೈತನ್ಯ, ಆತ್ಮ, ೮೨೨.

**ಪ್ರತ್ಯಕ್ಸ್ವರೂಪಮ್ - ಮುಂ.** ನಮ್ಮ ಒಳಗಿನ ಸ್ವರೂಪ, ಆತ್ಮ, ೭೭.

**ಪ್ರತ್ಯಗಾತ್ಮಾ - ಬ್ರ.ಸೂ-೧.** ಒಳಗಿರುವ ನಿಜವಾದ ಆತ್ಮ, ೩, ೮, ೧೩೯, ೧೪೩, ೧೯೫, ೨೦೭, ೨೧೯, ೩೬೮ ; **ಬ್ರ.ಸೂ-೨.** ಒಳಗಿರುವ ಆತ್ಮನು. ವಿಷಯಿಯಾದ ಪ್ರತ್ಯಗಾತ್ಮನಲ್ಲಿಯೂ ಅಧ್ಯಾಸವಾಗಬಹುದು, ಅವನು ಅಸ್ಮತ್ಪ್ರತ್ಯಯ ವಿಷಯನೂ ಆಗುವದುಂಟು, ೧-೩ ; ಇವನು ಅಪರೋಕ್ಷನಾಗಿರುವದರಿಂದ ಪ್ರಸಿದ್ಧನು, ೧-೩೩ ; ಸರ್ವಸಾಕ್ಷಿ, ೧-೮ ; ಪ್ರತ್ಯಗಾತ್ಮಸಂಬಂಧವು ಹೆಚ್ಚಾಗಿರುವದು

ಬ್ರಹ್ಮವೇ, ೧-೧೩೯ ; ಆತ್ಮನನ್ನು ವ್ಯಕ್ತ ಎಂದು ಮುಂತಾಗಿ ಶ್ರುತಿಯಲ್ಲಿ ಹೇಳಿರುವದು ವಾಗಾದಿಗಳಿಂದ ವಿವೇಚಿಸುವದಕ್ಕಾಗಿ, ೧-೧೪೩ ; ಒಂದೇ ದೇಹದಲ್ಲಿ ಇಬ್ಬರು ಪ್ರತ್ಯಗಾತ್ಮರಿರಲಾರರು, ೧-೧೯೫ ; ವೈಶ್ವಾನರನನ್ನು ಪ್ರತ್ಯಗಾತ್ಮನೆಂದು ಆಧ್ಯಾನ ಮಾಡಬೇಕೆಂದು ವಿಧಿಸಿದೆ, ೧-೨೦೭ ; ವೈಶ್ವಾನರನನ್ನು ಅಭಿವಿಮಾನನೆಂದಿರುವದು ಪ್ರತ್ಯಗಾತ್ಮನೆಂದು ತಿಳಿಸುವದಕ್ಕೇ, ೧-೨೧೯ ; ಅನ್ನಮಯಾದಿಗಳ ಪರಂಪರೆಯಿಂದ ಪ್ರತ್ಯಗಾತ್ಮನಿರ್ಧಾರಣೆ ಮಾಡಿದೆ, ೧-೨೬೮ ; ಕಠದಲ್ಲಿ ರಥರೂಪಕಕ್ಕೆ ಪ್ರತ್ಯಗಾತ್ಮ ಬ್ರಹ್ಮಾವಗತಿಯೇ ಗುರಿ, ೧-೩೦೭ ; ಶ್ರುತಿಯಲ್ಲಿ ವಾಙ್ಮನಸಾತೀತವೆಂದಿರುವದು ಪ್ರತ್ಯಗಾತ್ಮಬ್ರಹ್ಮವನ್ನೇ, ೨-೨೯೫ ; ನೇತಿ ನೇತಿ ಎಂದು ಹೇಳಿರುವದು ಅವಿಷಯನಾದ ಪ್ರತ್ಯಗಾತ್ಮನೇ ಬ್ರಹ್ಮವೆಂದು ತಿಳಿಸುವದಕ್ಕೆ, ೨-೨೯೬ ; **ಈಶ.** ಒಳಗಿರುವ ಆತ್ಮ , ೩ ; **ಕೇನ.** ಒಳಗಿನ ಆತ್ಮ , ದೇಹೇಂದ್ರಿಯಗಳೇ ಮುಂತಾದವುಗಳೆಲ್ಲಕ್ಕೂ ಸಾಕ್ಷಿಯಾಗಿರುವ ಆತ್ಮ, ೩, ೬, ೭, ೯, ೫೮, ೬೬, ೭೮, ೮೪; **ಕಠ.** ಒಳಗಿನ ತಿರುಳಾಗಿರುವದು, ಆತ್ಮ, ೭೯, ೯೭, ೯೮, ೧೦೦, ೧೧೧, ೧೧೯ ; **ಮಾಂ.** ಒಳಗಿನ ಆತ್ಮ, ೮, ೧೨ ; **ತೈ.** ಒಳಗಿರುವ ಆತ್ಮ, ನಮ್ಮ ಸ್ವರೂಪ ೯೪, ೧೨೨; **ಛಾಂ.** ಪ್ರಾಣಿಗಳೊಳಗಿರುವ ಆತ್ಮ, ೬೭೪ ; **ಬೃಹ-೧.** ನಮ್ಮ ಒಳಗಿನ ಆತ್ಮ, ೩೫೧; **ಭ.ಗೀ.** ನಮ್ಮ ಒಳಗಿನ ಆತ್ಮ, ೧೦೯, ೧೧೮, ೨೭೫, ೩೦೪, ೪೮೦, ೪೯೪, ೪೯[illegible], ೫೦೨, ೭೮೫, ೮[illegible] ೮೯೦, ೧೧೦೫, ೧೧[illegible] **ಶಂ. ವಿ.** ನಮ್ಮೊಳಗಿರುವ ಆತ್ಮ. ಆತ್ಮಶಬ್ದವು ಸಾಮಾನ್ಯ ಪ್ರತ್ಯಗಾತ್ಮನನ್ನೇ ತಿಳಿಸುವದೆಂಬುದು ಶಾಂಕರಪ್ರಕ್ರಿಯೆಯ ಅಭ್ಯುಪಗಮ, ಕ. ೨-೧-೧.

**ಪ್ರತ್ಯಗಾತ್ಮಾ, ಪ್ರತ್ಯಕ್ಚೇತಯಿತಾ** - ಬೃಹ-೨. ಒಳಗಿನ ಆತ್ಮ, ೪೫, ೪೬.

**ಪ್ರತ್ಯಗಾತ್ಮಗ್ರಾಹ್ಯತಾ** - ಬೃಹ-೨. ಆತ್ಮನು ತನ್ನನ್ನು ತಾನೇ ನಾನು - ಎಂದು ಗ್ರಹಿಸುವದು, ೧೮೦.

**ಪ್ರತ್ಯಗಾತ್ಮವೇದ್ಯತಾ** - ಬೃಹ-೧. ತನ್ನೊಳಗೇ ಇರುವ ಆತ್ಮನೆಂದು ತಿಳಿಯ ಬೇಕಾದದ್ದು, (ಹೊರಗಲ್ಲ), ೩೦೬.

**ಪ್ರತ್ಯಗಾತ್ಮೇಕ್ಷಣನಿಷೇಧಕ** - ಬೃಹ-೧. ಪ್ರತ್ಯಗಾತ್ಮನನ್ನು ಕಂಡುಕೊಳ್ಳುವದಕ್ಕೆ ಅಡ್ಡಿ ಮಾಡುವ (ಇಂದ್ರಿಯಗಳ ವಿಷಯ ರಾಗಗಳು), ೨೨೭.

**ಪ್ರತ್ಯಗಾತ್ಮಬ್ರಹ್ಮ** - ಕೇನ. ನಮ್ಮೆಲ್ಲರ ತೀರ ಒಳಗಿನ ಆತ್ಮನೇ ಆಗಿರುವ ಪರಮಾರ್ಥ, ೪, ೬.

**ಪ್ರತ್ಯಗಾತ್ಮಬ್ರಹ್ಮಾವಗತಿಃ** - ಬ್ರ.ಸೂ-೧. ಎಲ್ಲಕ್ಕೂ ಒಳಗಿರುವ ಆತ್ಮನಾಗಿರುವ ಬ್ರಹ್ಮದ ನಿಶ್ಚಯ, ೩[illegible]

**ಪ್ರತ್ಯಯಃ** - **ಮಾಂ.** ವಿಷಯದ ಅರಿವು, ೯೨, ೧೯೦, ೧೯೨ ; **ಈಶ.** ವಿಷಯವನ್ನು ತಿಳಿಸುವ ಮನಸ್ಸಿನ ವೃತ್ತಿ, ೧೫ ; **ಕೇನ.** ಮನಸ್ಸಿನ ವೃತ್ತಿಗಳ ರೂಪವಾದ ಜ್ಞಾನ, ೫೨, ೫೩ ; **ಶಾಂ. ನಿ.** ಅರಿವು, ವೃತ್ತಿಜ್ಞಾನ.

**ಪ್ರತ್ಯಯಾವಭಾಸಃ** - **ತೈ.** ಪ್ರತ್ಯಯದಲ್ಲಿ ತೋರುವ ಚೈತನ್ಯದ ಹೊಳಪು,

**ಪ್ರತ್ಯವಾಯಃ** - **ಕಠ.** ಕರ್ಮವನ್ನು ಬಿಟ್ಟದ್ದರಿಂದ ಆಗುವ ದೋಷ, ೧೭ ; **ತೈ.** ಕರ್ಮವನ್ನು ಮಾಡದೆ ಇದ್ದರೆ ತೋರಿಕೊಳ್ಳುವ ದೋಷ, ೩., ೫, ೭, ೭೧ ; **ಛಾಂ.** ಕರ್ಮವನ್ನು ಮಾಡದಿದ್ದರೆ ದೋಷ, ೧೮೧ ; **ಬೃಹ-೧.** ಮಾಡದ್ದರಿಂದಾಗುವ ದೋಷ, ೨೦೪ ; **ಬೃಹ-೨.** ನಿತ್ಯಕರ್ಮವನ್ನು ಮಾಡದ್ದರಿಂದಾಗುವ ದೋಷ, ೨೬೯; **ಭ.ಗೀ.** ನಿತ್ಯಕರ್ಮವನ್ನು ಮಾಡದಿದ್ದರೆ ಆಗುವ ನರಕಪ್ರಾಪ್ತಿಯೇ ಮುಂತಾದದ್ದು, ೮೩, ೧೪೮, ೧೮೧, ೨೬೬, ೨೬೭, ೨೬೯, ೧೦೧೭, ೧೧೨೮.

**ಪ್ರತ್ಯಸ್ತಮಯಃ** - **ಬ್ರ.ಸೂ-೧.** ಪ್ರಲಯ, ೩೯೩.

**ಪ್ರತ್ಯಸ್ತಮಿತಸರ್ವೋಪಾಧಿವಿಶೇಷಮ್** **ಐತ.** ಉಪಾಧಿಗಳೆಂಬ ವಿಶೇಷಗಳು ಯಾವವೂ ಇಲ್ಲದ, ೭೬.

**ಪ್ರತ್ಯುಪಸ್ಥಾಪಿತ** - **ಶಾಂ. ನಿ.** ಅವಿದ್ಯೆಯು ತಂದೊಡ್ಡಿದ, ಅವಿದ್ಯೆಯು ಕಲ್ಪಿಸಿದ ನಾಮ ರೂಪಗಳು (ಸೂ. ೨-೨-೨), ಕಾರ್ಯಕರಣಗಳು (೧-೨-೨೦), ಅಂತಃಕರಣ (೧-೨-೧೨) ಇವೆಲ್ಲ ಅವಿದ್ಯಾಪ್ರತ್ಯುಪಸ್ಥಾಪಿತ.

**ಪ್ರಥಮಃ, ಪ್ರಥಮಜಃ** - **ಮುಂ.** ದೇವತೆಗಳೆಲ್ಲರಿಗಿಂತಲೂ ಮೊದಲು ಹುಟ್ಟಿದ ಮಿಗಿಲಿಲ್ಲದ ಉತ್ತಮಗುಣಗಳುಳ್ಳ ಹಿರಣ್ಯಗರ್ಭನು, ೭, ೪೨, ೬೦.

**ಪ್ರಥಮಜಃ** - **ಕಠ.** ಅವ್ಯಕ್ತದಿಂದ ಮೊದಲು ಹುಟ್ಟುವ ಹಿರಣ್ಯಗರ್ಭ, ೧೦೩., ೧೨೦ ; **ಪ್ರಶ್ನ.** ಎಲ್ಲಕ್ಕೂ ಮೊದಲು ಹುಟ್ಟಿದವನು, ಹಿರಣ್ಯಗರ್ಭ, ೩೪ ; **ತೈ.** ಎಲ್ಲಕ್ಕೂ ಮೊದಲು ಹುಟ್ಟಿದ ಹಿರಣ್ಯಗರ್ಭನ ಬುದ್ಧಿ, ೧೩೯, ೧೪೧ ; **ಬೃಹ-೨.** ಮೊದಲು ಹುಟ್ಟಿದ ಹಿರಣ್ಯಗರ್ಭ, ೬೯, ೩೭೦.

**ಪ್ರಥಮಜಃ ಶರೀರೀ** - **ಐತ.** ಮೊದಲು ಹುಟ್ಟಿದ ಶರೀರಿ, ವಿರಾಟ್ಪುರುಷ, ೪೮, ೮೭.

**ಪ್ರಥಮಜಃ, ಪ್ರಥಮಶರೀರೀ** - **ಬೃಹ-೧.** ಮೊದಲು ಹುಟ್ಟಿದ ವಿರಾಡ್ರೂಪನಾದ ಅಗ್ನಿ, ೩೧, ೩೨, ೩೩ ; **ಕಠ.** ಹಿರಣ್ಯಗರ್ಭನಿಂದ ಮೊದಲು ಶರೀರಿಯಾಗಿ ಹುಟ್ಟುವ ವಿರಾಟ್ಪುರುಷ, ೨೬ ; **ಮುಂ.** ಮೊದಲು ಶರೀರಿಯಾಗಿ ಹಿರಣ್ಯ ಗರ್ಭನಿಂದ ಹುಟ್ಟಿದ ವಿರಾಟ್ಪುರುಷ, ೬೧.

**ಪ್ರಥಮೋತ್ಪಾದಿತಃ ಪಿಣ್ಡಃ** - ಐತ. ಮೊದಲು ಹುಟ್ಟಿಸಿದ ಶರೀರವು ; ವಿರಾಟ್ಪುರುಷನ ಶರೀರ, ೩.೮.

**ಪ್ರದೀಪಃ** - ಬ್ರ.ಸೂ-೧. ದೀಪ (ಒಂದು ದೀಪವು ಮತ್ತೊಂದನ್ನು ಅನುಸರಿಸಿ ಬೆಳಗುವದಿಲ್ಲ). ಬೆಳಕಿಗೆ ಬೆಳಕಿನ ಅನುಕರಣವಿಲ್ಲವೆಂಬುದಕ್ಕೆ ದೃಷ್ಟಾಂತ, ೨೭೩..

**ಪ್ರದೀಪನಿರ್ವಾಣಮ್** - ಮುಂ. ದೀಪವು ಆರಿ ಅವ್ಯಕ್ತವಾಗುವದು, ಮುಕ್ತರು ಪರಮಾತ್ಮನಲ್ಲಿ ಸೇರುವದಕ್ಕೆ ದೃಷ್ಟಾಂತ, ೧೧೮.

**ಪ್ರಧಾನಮ್** - ಬ್ರ.ಸೂ-೧. ಸಾಂಖ್ಯರು ಒಪ್ಪಿರುವ ಮೂಲಪ್ರಕೃತಿ, ೨೬, ೬೫, ೬೭, ೬೮, ೭೨, ೭೭, ೮೧, ೮೩., ೮೬, ೧೦೫, ೧೯೨, ೧೯೭, ೨೦೧, ೩.೩.೩., ೩.೪೮, ೩.೫೩., ೩.೫೮ ; ಬ್ರ.ಸೂ-೨. ಸಾಂಖ್ಯರು ಜಗತ್ಕಾರಣವೆಂದು ತರ್ಕಿಸಿರುವ ಮೂಲಪ್ರಕೃತಿ, (ಒಂದನೆಯ ಸಂಪುಟದ ಶಬ್ದಾನುಕ್ರಮಣಿಕೆಯನ್ನು ನೋಡಿ.) ಪ್ರಧಾನಕಾರಣವಾದದ ಖಂಡನೆ, ೨- ೫ರಿಂದ ೨೦. ; ಆನಂದಾದಿಧರ್ಮಗಳಿಗೆ ವಿಶೇಷ್ಯವಾಗಿರುವ ಬ್ರಹ್ಮ , ೨-೩.೩.೬ ; **ಪ್ರಶ್ನ.** ಸತ್ತ್ವರಜಸ್ತಮೋಗುಣಗಳ ಸಾಮ್ಯಾವಸ್ಥೆಯ ಪ್ರಕೃತಿ, ೧೦೧, ೧೦೫, ೧೦೬, ೧೦೭, ೧೦೮ ; ಅಧೀನವಲ್ಲದ, ಮುಖ್ಯವಾದ, ೬, ೧೦೭ ; ಐತ. ಸಾಂಖ್ಯರು ಜಗತ್ಕಾರಣವೆಂದು ಹೇಳುವ ಮೂಲ ಪ್ರಕೃತಿ, ೨೯ ; ಛಾಂ. ಜಗತ್ಕಾರಣವೆಂದು ಸಾಂಖ್ಯರು ಕಲ್ಪಿಸಿರುವ ಕಾರಣ, ೪೫೬.

**ಪ್ರಧ್ವಂಸಾಭಾವಃ** - ತೈ. ವಸ್ತು ನಾಶವಾದ ಬಳಿಕ ತೋರುವ ಅಭಾವ ೯.

**ಪ್ರಧ್ವಂಸಾದ್ಯಭಾವಾಃ** - ಭ.ಗೀ. ವಸ್ತು ಹಾಳಾದ ಮೇಲೆ ಆಗುವ ಅಭಾವ, ಅನ್ಯೋನ್ಯಾಭಾವ, ಅತ್ಯಂತಾಭಾವ, ೧೦೫೮.

**ಪ್ರಧಾನಾದೀನಿ** - ಬ್ರ.ಸೂ-೧. ಪ್ರಧಾನ, ಪರಮಾಣುಗಳು, ಮುಂತಾದ (ಕಲ್ಪಿತಜಗತ್ಕಾರಣಗಳು), ೬೪.

**ಪ್ರಧಾನಾವಸ್ಥಾ** - ಬ್ರ.ಸೂ-೧. ಗುಣಗಳು ಮೂರು ಸಮವಾಗಿರುವ ಪ್ರಲಯಾವಸ್ಥೆ, ೬೫.

**ಪ್ರಧಾನಮಲ್ಲನಿಬರ್ಹಣನ್ಯಾಯಃ** - ಬ್ರ.ಸೂ-೧. ಮುಖ್ಯನಾದ ಜಟ್ಟಿಯನ್ನು ಗೆದ್ದರೆ ಮಿಕ್ಕವರನ್ನು ಗೆದ್ದಂತೆ ಎಂಬ ನ್ಯಾಯ, (ಸಾಂಖ್ಯರನ್ನು ಗೆದ್ದರೆ ಮಿಕ್ಕ ದ್ವೈತ ವಾದಿಗಳನ್ನು ಗೆದ್ದಂತೆ ಎಂಬುದಕ್ಕೆ ಉದಾಹರಣೆ) ೩೯೭, ೪೩೦.

**ಪ್ರಪಞ್ಚೋಪಶಮಃ** - ಮಾಂ. ಅನಾತ್ಮವಾದ ದ್ವೈತವು ಇಲ್ಲವಾಗುವದು, ೧೨, ೪೨, ೬೮, ೧೨೦, ೧೨೭.

**ಪ್ರಮಾ, ಪ್ರಮಿತಿಃ** - **ಬೃಹ-೧.** ನಿಶ್ಚಿತವಾದ ಫಲವದ್ವಿಜ್ಞಾನ, ೧೪೧, ೩.೨೧ ; **ನೈ.** ಯಥಾರ್ಥಜ್ಞಾನ. ಪ್ರಮಾಕರ್ಮವಾದ ಪ್ರಮೇಯದಲ್ಲಿ ಪ್ರಮೆಯುಂಟಾಗಬೇಕು, ಕರ್ತೃವಾದ ಪ್ರಮಾತೃವಿನಲ್ಲಲ್ಲ , ೩.-೮೭; ಪ್ರತ್ಯಕ್ಷಾದಿವಿರುದ್ಧವಾದ ಜ್ಞಾನವು ಪ್ರಮೆಯಾಗಲಾರದು, ೩-೮೯; ಪ್ರಮಾಣಗಳು ಪ್ರಮಿತಿಯನ್ನು ಬೆಳೆಯಿಸಿ ಪರಿಪೂರ್ಣಪ್ರಮೆಯನ್ನು ಮಾಡುತ್ತವೆ ಎಂಬುದು ತಪ್ಪು, ೩-೯೦ ಕೆಲವೇ ದಿನಗಳ ಭಾವನಾಭ್ಯಾಸವು ಸ್ಥಿರವೆಂಬುದಕ್ಕೆ ಪ್ರಮೆಯು (ಪ್ರಮಾಣವು) ಇಲ್ಲ, ೩-೯೨; ವಾಕ್ಯವು ಪ್ರತ್ಯಕ್ಷಾದಿವಿರುದ್ಧವಾಗಿ ಪ್ರಮೆಯನ್ನುಂಟು ಮಾಡಿದರೆ ಪ್ರತ್ಯಕ್ಷವು ಗೌಣವೆನ್ನಬೇಕು, ೩-೯೬; ತನ್ನ ವಿಷಯದಲ್ಲಿ ಪ್ರಮೆಯನ್ನುಂಟುಮಾಡದ್ದು ಪ್ರಮಾಣವೇ ಅಲ್ಲ, ೧-೯೧, ೩-೧ ; **ಶಾಂ. ನಿ.** ಪ್ರಮಾಣದಿಂದುಂಟಾಗುವ ಜ್ಞಾನ. ಉ. ಸಾ. ಪ. ೧೮-೧೮೭ ; ಆತ್ಮಚೈತನ್ಯವೇ ಪ್ರಮೆಯ ಸ್ವರೂಪ, ಉಪ. ಗ. ೫೭.

**ಪ್ರಮಾಣಮ್** - ಬ್ರ.ಸೂ-೧. ಪ್ರತ್ಯಕ್ಷವೇ ಮುಂತಾದ ಪ್ರಮೇಯ ಕರಣಗಳು, ೫, ೩೩, ೨೯ ; **ಬೃಹ-೧.** ಯಥಾರ್ಥಜ್ಞಾನಕ್ಕೆ ಕರಣ, ೫೩, ೧೪೧ ; **ನೈ.** ಪರಲೋಕಸಂಬಂಧವಾದ ಸಾಧ್ಯಸಾಧನಭಾವವನ್ನು ವಚನಪ್ರಮಾಣದಿಂದ ತಿಳಿಯಬೇಕು, ೩-೨೭; **ಲೌಕಿಕಪ್ರಮಾಣಸಿದ್ಧವಾದ** ಸಾಧನಗಳನ್ನು ಉಪಯೋಗಿಸಿಕೊಂಡೇ ಬೇಕಾದದ್ದನ್ನು ಪಡೆಯುವದಕ್ಕೂ ಬೇಡದ್ದನ್ನು ತಪ್ಪಿಸಿಕೊಳ್ಳುವದಕ್ಕೂ ಪ್ರವರ್ತಿಸುತ್ತಾರೆ, ೧-೨೯; ಭ್ರಾಂತಿಯೇ ಪ್ರವೃತ್ತಿನಿಮಿತ್ತವೆಂಬುದು ಪ್ರತ್ಯಕ್ಷಾದಿಪ್ರಮಾಣಗಳಿಂದ ಸಿದ್ಧವಾಗುತ್ತದೆ, ೧-೩೦; ಐಕಾತ್ಮ್ಯವನ್ನು ಪ್ರಮಾಣಬಲದಿಂದ ಅರಿತುಕೊಳ್ಳಬೇಕಾದದ್ದಿಲ್ಲ , ೧-೮೯; ಆತ್ಮನಿಂದಲೇ ಪ್ರಮಾಣಗಳ ಸಿದ್ಧಿ, ೨-೩೭; ಪ್ರಮಾಣಗಳಿಗೆಲ್ಲ ತಮ್ಮ ವಿಷಯವನ್ನು ತಿಳಿಸುವದೇ ಸ್ವಭಾವ, ೨-೫; ಪ್ರಮಾಣವನ್ನು ಅಸಡ್ಡೆಮಾಡುವದಕ್ಕೆ ಕಾರಣವಾದ ಅನುವಾದ, ಸಂಶಯ, ವಿಪರೀತಬೋಧನ - ಇವುಗಳು ಯಾವವೂ ಶ್ರುತಿಯಲ್ಲಿಲ್ಲ, ೩-೩೫ ರಿಂದ ೩೮ ; ಪ್ರಮಾಣಾಂತರಕ್ಕೆ ಅವಿಷಯನಾದ ಆತ್ಮನನ್ನೇ ಶ್ರುತಿ ತಿಳಿಸುತ್ತದೆ, ೩-೩೫, ೪೭; ಒಂದು ಪ್ರಮಾಣಕ್ಕೆ ಒಂದೇ ವಿಷಯ, ಒಂದಕ್ಕೆ ಅನೇಕ ಪ್ರಮಾಣಗಳಿಲ್ಲ, ೧-೮೬; ಪ್ರಮಾಣಗಳು ಭಿನ್ನವಿಷಯಕವಾದ್ದರಿಂದ ವಾಕ್ಯಪ್ರತ್ಯಕ್ಷಗಳಿಗೆ ವಿರೋಧವಿಲ್ಲ, ೩-೮೩, ೮೬; ಪ್ರಮಾಣಗಳಿಗೆ ಪರಸ್ಪರವಿರೋಧವೆಂಬುದು **ಪುರುಷಮೋಹ**ದಿಂದ, ೩-೯೬ ; ಪ್ರಮಾಣಗಳು ತಮ್ಮ

ಮಹಿಮೆಯಿಂದಲೇ ವಿಷಯವನು ತಿಳಿಸುತ್ತವೆ, ಒಂದಕ್ಕೊಂದು ಸಹಾಯವಾಗಬೇಕಾಗಿಲ್ಲ, ೩.-೮೬; ಅಪೂರ್ವಾರ್ಥವನ್ನು ತಿಳಿಸದೆ ಇದ್ದರೆ ಪ್ರಮಾಣವೇ ಅಲ್ಲ, ೨.-೮೩, ೧೨೨; **ದುಃಖಿತ್ವವು** ಪ್ರಮಾಣಬದ್ಧಮೂಲವಾದರೆ **ಪ್ರಸಂಖ್ಯಾನದಿಂದಲೂ** ಹೋಗಬಾರದು, ೩-೮೮; ಪ್ರಮಾಣ, ಪ್ರಮಾಣಾಭಾಸ- ಇವೆರಡರಲ್ಲಿಯೂ ಆತ್ಮನ ಜ್ಞಾನವು ನಾಶವಾಗದೆ ಇರುತ್ತದೆ. ೨-೭೯ ; **ಶಾಂ. ನಿ.** ಪ್ರಮೆಗೆ ಕರಣವಾಗಿರುವ ಪ್ರತ್ಯಕ್ಷಾದಿಗಳು, ಅಧ್ಯಾ. ಭಾ.

**ಪ್ರಮಾಣಾಂತರ - ಬ್ರ.ಸೂ-೧.** ಬೇರೊಂದು ಪ್ರಮಾಣ ; ಶಾಸ್ತ್ರವಲ್ಲದ ಪ್ರಮಾಣ, ೨೭, ೨೯, ೪೩.೧ ; ಪ್ರತ್ಯಭಿಜ್ಞಾನಕ್ಕಿಂತ ಬೇರೆಯಾದ ಪ್ರಮಾಣ, ೨೯೯.

**ಪ್ರಮಾಣಾನಿ - ಬೃಹ-೨.** ಪ್ರತ್ಯಕ್ಷ, ಅನುಮಾನ, ಉಪಮಾನ, ಅರ್ಥಾಪತ್ತಿ ಶಬ್ದ - ಮುಂತಾದ ಯಥಾರ್ಥಜ್ಞಾನಸಾಧನಗಳು, ೩.೧, ೩.೪.

**ಪ್ರಮಾಣಪ್ರಮೇಯವ್ಯವಹಾರಃ - ಬ್ರ.ಸೂ-೧.** ಇದು ಅರಿಯುವದಕ್ಕೆ ಸಾಧನ, ಇದು ಅರಿಯಲ್ಪಡತಕ್ಕದ್ದು - ಎಂಬ ವ್ಯವಹಾರ (ಇದು ಅಧ್ಯಸ್ತ), ೫, ೬ ; **ಬ್ರ.ಸೂ-೨.** ಅರಿಯುವದಕ್ಕೆ ಸಾಧನ, ಅರಿಯಲ್ಪಡುವ ವಸ್ತು - ಇವುಗಳನ್ನು ತಿಳಿಸುವ ಪ್ರತ್ಯಕ್ಷಾದಿವ್ಯವಹಾರಗಳು. ಇವು ಅವಿದ್ಯಾಪೂರ್ವಕ, ೧-೫, ೬ ; ಗೊತ್ತಾದ ಪ್ರಮಾಣದಿಂದ ಸಿದ್ಧವಾಗದಿರುವದೇ ಲೋಕಸಿದ್ಧ , ೧-೨೯೯ ; ಶಾಸ್ತ್ರವಲ್ಲದ ಪ್ರಮಾಣದಿಂದ ಬ್ರಹ್ಮಾವಗತಿಯಾಗಲಾರದು, ೧-೨೭ ; ಬ್ರಹ್ಮವು ಭೂತ ವಸ್ತುವಾದರೂ ಪ್ರಮಾಣಾಂತರ ವಿಷಯವಲ್ಲ , ೧-೨೯, ೪೨೮ ; **ಬ್ರಹ್ಮಕಾರಣವಾದವು** ಪ್ರಮಾಣಾಂತರಸಿದ್ಧವಾದ ಭೋಕ್ತೃಭೋಗ್ಯವಿಭಾಗಕ್ಕೆ ವಿರುದ್ಧವಲ್ಲ, ೧-೪೩.೧, ೪೩.೨ ; ಸಂಭವಿಸುತ್ತದೆ, ಸಂಭವಿಸುವದಿಲ್ಲ ಎಂಬುದು ಪ್ರಮಾಣಪ್ರವೃತ್ತ್ಯಪ್ರವೃತ್ತಿಗಳಿಂದ, ೨-೫೮ ; ವಿಜ್ಞಾನವು ತಾನೇ ಬೆಳಗುತ್ತದೆ ಎಂದರೆ ನಿಷ್ಪ್ರಮಾಣಕವಾಗುವದು, ೨-೬೦ ; ಶೂನ್ಯವಾದಿಪಕ್ಷವು ಸರ್ವಪ್ರಮಾಣವಿರುದ್ಧ, ೨-೬೪ ; ಸರ್ವಪ್ರಮಾಣಗಳೂ ಬ್ರಹ್ಮದಲ್ಲಿ ಕೊನೆಗಾಣುವವು, ೧-೪೯೩ ; ಪ್ರಮಾಣಸಿದ್ಧವಾದ ವ್ಯವಹಾರವನ್ನು ಮತ್ತೊಂದು ತತ್ತ್ವದ ಆಧಾರವಿಲ್ಲದೆ ಅಲ್ಲಗಳೆಯುವದು ಆಗಲಾರದು, ೨-೬೪ ; ಅನೇಕಾಂತವಾದವನ್ನೇ ಒಪ್ಪಿರುವವರು ಪ್ರಮಾಣಾದಿಗಳನ್ನು ನಿಶ್ಚಯಿಸಲಾರರು, ೨-೬೭ ; ಆತ್ಮಭೇದವು ಉಪಾಧಿ ಕೃತವೆಂದರೆ ಪ್ರತ್ಯಕ್ಷಾದಿಪ್ರಮಾಣಗಳು ಹೊಂದುತ್ತವೆ, ೧-೪೪೩ ; ಬ್ರಹ್ಮಾತ್ಮೈಕತ್ವ ಜ್ಞಾನವಾಗುವವರೆಗೆ ಪ್ರಮಾಣಪ್ರಮೇಯವ್ಯವಹಾರವು ಸ್ವಪ್ನವ್ಯವಹಾರದಂತೆ ತತ್ಕಾಲಕ್ಕೆ ಸತ್ಯವಾಗಿರುತ್ತದೆ, ೧-೬೩, ೨-೪೩೬, ೨-೫೧೦, ೫೮೫ ; **ಭ.ಗೀ.** ಇದು ಪ್ರಮಾಣ, ಇದು ಪ್ರಮೇಯ - ಎಂಬ ವ್ಯವಹಾರ, ೧೩.೫, ೧೦೮೫.

**ಪ್ರಮಾಣಪ್ರವೃತ್ತಿಃ** - ಬ್ರ.ಸೂ-೧. ಪ್ರಮಾಣದ ವ್ಯಾಪಾರ, ೫.

**ಪ್ರಮಾಣಪ್ರಮೇಯಬುದ್ಧಿಃ** - **ಛಾಂ.** ಇದು ಅರಿಯುವ ಸಾಧನ, ಇದು ಅರಿಯಲ್ಪಡುವ ವಸ್ತು ಎಂಬ ಬುದ್ಧಿ, ೧೭೯.

**ಪ್ರಮಾಣಲಕ್ಷಣಮ್** - ಬ್ರ.ಸೂ-೧. ಪೂರ್ವಮೀಮಾಂಸದಲ್ಲಿ ಪ್ರಮಾಣವಿಚಾರವನ್ನು ಮಾಡಿರುವ ಗ್ರಂಥಭಾಗ, ೪೦೨.

**ಪ್ರಮಾತಾ - ಶಾಂ.** ನಿ. ದೇಹೇಂದ್ರಿಯಗಳನ್ನು ತಾನು ತನ್ನದೆಂದು ತಿಳಿದಿರುವ ಜ್ಞಾತೃ, ಅಧ್ಯಾ. ಭಾ. ; ಪ್ರಮಾತೃವಿನ ನಿಜವಾದ ಸ್ವರೂಪವು ಆತ್ಮನೇ, ಉಪ. ಗ. ೬೧.

**ಪ್ರಮಾತೃ, ಪ್ರಮಾಣ, ಪ್ರಮೇಯಾನಿ - ನೈ. ಗ್ರಾಹಕ, ಗ್ರಹಣ, ಗ್ರಾಹ್ಯ ; ಜ್ಞಾತೃ, ಜ್ಞಾನ, ಜ್ಞೇಯ ; ದ್ರಷ್ಟೃ, ದರ್ಶನ, ದೃಶ್ಯ.** ಪ್ರಮಾತ್ರಾದಿವಿಭಾಗವು ಅಧ್ಯಾಸಮಾತ್ರ; ಅದಕ್ಕೂ ಕೂಟಸ್ಥಾತ್ಮನಿಗೂ ಅಜ್ಞಾನವೇ ಸಂಬಂಧ, ೩.-೧; ಪ್ರಮಾತ್ರಾದಿಗಳಿಗೆ ಹಾನೋಪಾದಾನಗಳುಂಟು; ಅದಕ್ಕಿಂತ ಆತ್ಮನು ಬೇರೆಯೆಂಬುದನ್ನು ಅನ್ವಯವ್ಯತಿರೇಕಗಳಿಂದ ಅರಿತುಕೊಳ್ಳಬೇಕು, ೩-೪೬ ; ಪ್ರಮಾತ್ರಾದಿವ್ಯವಹಾರವು ಪರಾಗ್ವಿಷಯಕವಾದದ್ದು, ೩-೫೨; ಪ್ರಮಾತ್ರಾದಿಗಳಿಗೆ **ಅನವಬೋಧವೇ ಉಪಾದಾನ,** ೨-೧೧೬.

**ಪ್ರಮಾತೃತ್ವಮ್** - ಬ್ರ.ಸೂ-೧. ಪ್ರಮಾಣದಿಂದ ಅರಿಯುವವನಾಗಿರುವವಿಕೆ, (ಇದು ಅಧ್ಯಸ್ತ), ೫ ; **ಭ.ಗೀ.** ಅರಿಯುವವನೆಂಬ ಆವಿದ್ಯಕರೂಪ, ೧೩೫.

**ಪ್ರಮಾತೃತ್ವಾದಿಭೇದಃ - ಮಾಂ.** ಪ್ರಮಾತೃ, ಪ್ರಮಾಣ, ಪ್ರಮೇಯ - ಎಂಬ ಭೇದ - ೩೯.

**ಪ್ರಮೇಯಮ್ - ನೈ.** ಪ್ರಮಾಣದಿಂದ ಅರಿಯುವ ವಿಷಯ. ಆತ್ಮನು ಪ್ರಮೇಯನಲ್ಲ, ಪ್ರಮೇಯವಿಲಕ್ಷಣ, (ಅವ), ೨-೧; ಪ್ರಮಾತೃ, ಪ್ರಮೇಯ- ಇವುಗಳನ್ನು ಅರಿಯಬೇಕೆಂಬ ಇಚ್ಛೆಯುಂಟಾದಾಗ ತಾನೇ ತೋರುತ್ತಿರುವ ಆತ್ಮನೇ ವೇದಾಂತದಲ್ಲಿ ಅಜ್ಞಾತವಾಗಿರುವ ಪ್ರಮೇಯವು, ೩-೮.

**ಪ್ರಯೋಜಕಮ್ - ಬೃಹ-೨.** ಕಾರ್ಯಕರಣಗಳನ್ನು ಕರ್ಮದಲ್ಲಿ ತೊಡಗಿಸುವ ಕಾಮಕರ್ಮಾದಿಗಳು, ೨೫, ೨೯ ;

**ಪ್ರಯೋಜನಮ್ - ಈಶ.** ಅಧಿಕಾರಿ, ಅಭಿಧೇಯ, ಪ್ರಯೋಜನ (ಫಲ), ಸಂಬಂಧ - ಎಂಬ ನಾಲ್ಕು ಅನುಬಂಧಗಳು ಗ್ರಂಥಕ್ಕೆ ಇರಬೇಕು, ೨ ; **ಕಠ.** ನಮಗೆ

ಆಗಬೇಕಾದ ಫಲ, ಗ್ರಂಥದ ನಾಲ್ಕು ಅನುಬಂಧಗಳಲ್ಲಿ ಒಂದು, ೪೬, ೪೮ ; ಮುಂ. ವಿದ್ಯೆಗೆ ಫಲ, ಗ್ರಂಥಕ್ಕೆ ಇರಬೇಕಾದ ನಾಲ್ಕು ಅನುಬಂಧಗಳಲ್ಲಿ ಒಂದು, ೨, ೩, ೬; ಮಾಂ. ಗ್ರಂಥದ ಒಂದು ಅನುಬಂಧ, ೧, ೨ ; ಫಲ, ೨, ೭.

ಪ್ರಲಯಃ - ಬ್ರ.ಸೂ-೧. ಜಗತ್ತೆಲ್ಲವೂ ಆತ್ಮನಲ್ಲಿ ಅಡಗುವದು, ೨೨, ೨೩೯.

ಪ್ರವಚನಮ್ - ತೈ. ಅಧ್ಯಯನ, ಬ್ರಹ್ಮಯಜ್ಞ, ೫೨, ೫೪, ೫೫.

ಪ್ರವರ್ಗ್ಯಾನ್ತಂ ಬ್ರಾಹ್ಮಣಮ್ - ಈಶ. ಶುಕ್ಲಯಜುರ್ವೇದದ ಕರ್ಮಭಾಗವನ್ನು ವಿವರಿಸುವ ಭಾಗ, ೩೩.

ಪ್ರವೃತ್ತಫಲ, ಪ್ರಸೂತಫಲ, ಪ್ರಾರಬ್ಧಫಲ - ಭ.ಗೀ. ಫಲವನ್ನು ಕೊಟ್ಟಿರುವ ಕರ್ಮ, ೩೦೮, ೮೧೮, ೮೨೦, ೧೧೩೨.

ಪ್ರವೃತ್ತಫಲಾನಿ - ಮುಂ. ಫಲವನ್ನು ಕೊಟ್ಟುಬಿಟ್ಟಿರುವ, ಪ್ರಾರಬ್ಧ ಕರ್ಮಗಳು, ೧೨೦.

ಪ್ರವೃತ್ತಫಲಮ್ - ಛಾಂ. ಫಲವನ್ನುಂಟುಮಾಡುವದಕ್ಕೆ ಆರಂಭಿಸಿರುವ (ಕರ್ಮ), ೫೨೯.

ಪ್ರವೃತ್ತಿಃ - ಕಠ. ಕರ್ಮಗಳಲ್ಲಿ ತೊಡಗುವದು, ಕರ್ಮಮಾರ್ಗ, ೯೦ ; ನೈ. ತೊಡಗುವದು. ಜ್ಞಾನಿಗೆ ಪ್ರವೃತ್ತಿನಿವೃತ್ತಿಧರ್ಮಗಳು ಯಾವವೂ ನಿಜವಾಗಿಲ್ಲ, ೪-೫೪; ಜ್ಞಾನಿಗೆ ಕರ್ಮಪ್ರವೃತ್ತಿಯ ಬೀಜವಾದ ಕಾಮವೇ ಹೋಗಿಬಿಟ್ಟಿರುತ್ತದೆ, ೪-೬೧, ೬೫; ಪ್ರವೃತ್ತಿ ನಿವೃತ್ತಿಗಳೆರಡೂ ಅವಿದ್ಯಾಕಾರ್ಯ ೪-೬೯; ಕರ್ಮಪ್ರವೃತ್ತಿಗೆ ಭ್ರಾಂತಿಯೇ ನಿಮಿತ್ತ, ೧-೨೯; ದೇಹವ್ಯತಿರಿಕ್ತಾತ್ಮವಾದಿಗಳಿಗೂ ಅಜ್ಞಾನದಿಂದಲೇ ಕರ್ಮದಲ್ಲಿ ಪ್ರವೃತ್ತಿ, ೧-೯೨.

ಪ್ರವೃತ್ತಿನಿವೃತ್ತೀ - ಬ್ರ.ಸೂ-೧. ಯಾವದಾದರೊಂದರಲ್ಲಿ ತೊಡಗುವದು, ಯಾವದಾದರೊಂದರಿಂದ ಹಿಂಜರಿಯುವದು (ಶಾಸ್ತ್ರವು ಇವನ್ನೇ ಹೇಳಬೇಕೆಂದು ಕೆಲವರು), ೩೯, ೫೪ ; ಭ.ಗೀ. ವರ್ಣಾಶ್ರಮಧರ್ಮ ಮತ್ತು ಜ್ಞಾನ ವೈರಾಗ್ಯರೂಪ ಧರ್ಮ, ೧, ೧೪೨, ೨೨೮, ೧೦೫೬ ; ಕರ್ಮದಲ್ಲಿ ತೊಡಗುವದು, ಬಿಡುವದು, ೯೩೬.

ಪ್ರವೃತ್ತಿಲಕ್ಷಣಧರ್ಮಃ - ಈಶ. ವಿಧಿನಿಷೇಧಗಳನ್ನು ಪಾಲಿಸುವ ಧರ್ಮ, ೩೩.

ಪ್ರವ್ರಜಿತಃ - ಬ್ರ.ಸೂ-೧. ಕರ್ಮಸಂನ್ಯಾಸವನ್ನು ಮಾಡಿದವನು, ೫೭.

**ಪ್ರವಿಲಾಪನಮ್** - ಬ್ರ.ಸೂ-೧. ಅವಿದ್ಯೆಯಿಂದ ತೋರುತ್ತಿರುವ ನಾನಾತ್ವವನ್ನು ವಿದ್ಯೆಯಿಂದ ತೊಲಗಿಸಿಕೊಳ್ಳುವದು, ೨೨೩ ; **ಮಾಂ.** ನಿಜವಾದ ಸ್ವರೂಪದಲ್ಲಿ ತೋರಿಕೆಯನ್ನು ಜ್ಞಾನದಿಂದ ಅಡಗಿಸುವದು, ೭, ೯.

**ಪ್ರಶಾಂತಸರ್ವಕ್ಲೇಶರಜಃ** - **ಮಾಂ.** ಅವಿದ್ಯೆಯೇ ಮುಂತಾದ ಯಾವ ಧೂಳೂ ಇಲ್ಲವಾಗಿರುವ ಮನಸ್ಸು, ೧೯೦.

**ಪ್ರಸವಬೀಜಾತ್ಮಕತ್ವಮ್** - **ಮಾಂ.** ಜೀವರೂಪವನ್ನು ಪಡೆಯುವದಕ್ಕೆ ಕಾರಣವಾಗಿರುವದು, ೨೩, ೨೪.

**ಪ್ರಸಿದ್ಧ** - ಬ್ರ.ಸೂ-೧. ಪ್ರಮಾಣಾಂತರದಿಂದ ಗೊತ್ತಾಗಿರುವ, ೧೯, ೫೯ ; ಶಾಸ್ತ್ರಪ್ರಸಿದ್ಧ, ೬೫ ; ರೂಢವಾಗಿರುವ, ೧೧೭, ೧೨೧, ೧೨೨, ೧೨೫.

**ಪ್ರಸೂತಫಲಮ್, ಪ್ರವೃತ್ತಫಲಮ್** - **ಶಾಂ. ನಿ.** ಫಲವನ್ನು ಕೊಟ್ಟಿರುವ ಕರ್ಮ, ಪ್ರಾರಂಭವಾಗಿರುವ ಫಲವುಳ್ಳ ಕರ್ಮ, ಗೀ. ಭಾ. ೧೮-೬೩, ಸೂ. ಭಾ. ೪-೧-೧೫.

**ಪ್ರಸಂಖ್ಯಾನಮ್** - **ನೈ.** ವಾಕ್ಯಯುಕ್ತಿಗಳ ಅಭ್ಯಾಸಮಾಡುವದೆಂಬ ನಿದಿಧ್ಯಾಸನ. ಪ್ರಸಂಖ್ಯಾನವಾದದ ಖಂಡನೆ, ೩-೮೨, ೮೮ ರಿಂದ ೯೩, ೧೧೭ರಿಂದ ೧೨೫; ಶ್ರವಣಾದಿಗಳಲ್ಲಿಯೇ ಪ್ರಸಂಖ್ಯಾನವನ್ನು ಒಪ್ಪಬಹುದು, ೩-೧೨೫, ೧೨೬.

**ಪ್ರಾಗಭಾವಃ** - ಭ.ಗೀ. ವಸ್ತು ಹುಟ್ಟುವ ಮುಂಚಿನ ಅಭಾವ, ೧೦೮೮, ೧೦೮೯.

**ಪ್ರಾಕೃತಃ** - **ಕಠ.** ಪ್ರಕೃತಿಯಿಂದಾಗಿರುವ ದೇಹಾದಿಗಳಲ್ಲಿ ಅಭಿಮಾನಿ ಯಿರುವವ, ೩೫, ೫೮, ೮೩, ೧೫೪.

**ಪ್ರಾಕೃತಂ ಜ್ಯೋತಿಃ** - ಬ್ರ.ಸೂ-೧. ಭೌತಿಕವಾದ ಜ್ಯೋತಿ, (ಚೈತನ್ಯ ರೂಪವಾದ ಜ್ಯೋತಿಯಲ್ಲ), ೧೨೬, ೧೨೭.

**ಪ್ರಾಜ್ಞಃ** - ಬ್ರ.ಸೂ-೧. ಪ್ರಜ್ಞೆಯು ಎಂದರೆ ಚೈತನ್ಯವು ಯಾವಾಗಲೂ ಸ್ವರೂಪವಾಗಿಯೇ ಇರುವ (ಪರಮೇಶ್ವರ), ೨೭೨, ೨೭೩, ೩೨೯, ೩೪೬, ೩೪೮, ; ಬ್ರ.ಸೂ-೨. ಚೈತನ್ಯರೂಪನಾದ ಪರಮೇಶ್ವರ, ೧-೨೭೨, ೨೭೩ ; ಪ್ರಾಜ್ಞನನ್ನು ಸುಷುಪ್ತ್ಯುತ್ಕ್ರಾಂತಿಗಳಲ್ಲಿ ಜೀವನಿಗಿಂತ ಬೇರೆಯಾಗಿ ಶ್ರುತಿ ಹೇಳುತ್ತದೆ, ೧-೩೨೯ ; ಪ್ರಾಜ್ಞನನ್ನೇ ಅಶಬ್ದಾದಿಧರ್ಮಗಳುಳ್ಳವನೆಂದು ಶ್ರುತಿಗಳು ಹೇಳುತ್ತವೆ, ೧-೩೪೬ ; ಜೀವಪ್ರಾಜ್ಞರಿಗೆ ಅಭೇದ, ೧-೩೪೯, ೩೫೦ ; ಪ್ರಾಜ್ಞನನ್ನು ಅರಿಯುವದರಿಂದ ಶೋಕನಾಶ, ೧-೩೪೯ ; ಪ್ರಾಜ್ಞನಿಗೆ ಉಪಾಸನೆಯಲ್ಲಿ ಅಣೀಯಸ್ತ್ವವ್ಯಪ

ದೇಶವಿರುವಂತೆಯೇ ಜೀವನಿಗೂ ಉಪಾಧಿವಶದಿಂದ ಅಣುತ್ವವ್ಯಪದೇಶ, ೨-೧೩.೯ ; ಪ್ರಾಜ್ಞನು ಸರ್ವೇಶ್ವರನಾದ್ದರಿಂದ ಸ್ವಪ್ನದಲ್ಲಿಯೂ ಆತನಿಗೆ ಅಧಿಷ್ಠಾತೃತ್ವವುಂಟು, ೨-೨೫೮ ; **ಮಾಂ.** ಜ್ಞಾತೃತ್ವವನ್ನು ಪಡೆಯುವ ಚೈತನ್ಯರೂಪ ಅಥವಾ ಚೈತನ್ಯವೆಂಬ ಅಸಾಧಾರಣಧರ್ಮವುಳ್ಳ ಆತ್ಮರೂಪ, ಸುಷುಪ್ತಾತ್ಮ, ೧೬, ೨೦, ೨೮, ೨.೦, ೪೩., ೪೮ ; **ಬೃಹ-೨.** ಪರಮಾತ್ಮ, ೨೦೪, ೨೨೬ ; **ಶಾಂ. ನಿ.** (೧) ಸುಷುಪ್ತಾಭಿಮಾನಿಯಾದ ಆತ್ಮ, ಮಾಂ. ಭಾ. ೫ (ಭಾ. ಭಾ. ೧೬) ; (೨) ಈಶ್ವರ, ಸೂ. ಭಾ. ೧-೩.-೪೨.

ಪ್ರಾ ೧

೧೩.೫, ೧೩.೭, ೧೪೧, ೩.೧೫ ; (ಈಶ್ವರ), ೧೨೧, ೧೨೩., ೧೨೪, ೧೩.೭, ೫.೧೬ ; ಅಪರಬ್ರಹ್ಮ, (ಸಮಷ್ಟಿದೇವತಾರೂಪ) ಹಿರಣ್ಯಗರ್ಭ, ೨೪೯, ೨೮೩. ; ಇಂದ್ರಿಯ, ೪೧೪ ; **ಬ್ರ.ಸೂ-೨.** ಇಂದ್ರಿಯ ; ಮುಖ್ಯಪ್ರಾಣ. ಮುಖ್ಯಪ್ರಾಣನೂ ಬ್ರಹ್ಮದ ಕಾರ್ಯವೇ, ೨-೧೮೭ ; ಇದು ವಾಯುವಿಕಾರವಿಶೇಷ, ೨-೧೯೦ ; ಪ್ರಾಣವು ಕರಣವೇ, ೨-೧೯೧ ; ಇಂದ್ರಿಯಗಳಂಥ ಕರಣವಲ್ಲ, ೨-೧೯೩. ; ಶರೀರೇಂದ್ರಿಯಗಳ ಸ್ಥಿತಿಯೂ ಉತ್ಕ್ರಾಂತಿಯೂ ಪ್ರಾಣಾಧೀನ, ೨-೧೯೨. ; ಇದಕ್ಕೆ ಐದು ವೃತ್ತಿಗಳು, ೨-೧೯೪ ; ಇದು ಅಣು ಎಂದರೆ ಸೂಕ್ಷ್ಮ, ಪರಿಚ್ಛಿನ್ನ, ೨-೧೯೫; ಇದು ಇಂದ್ರಿಯವಲ್ಲ , ೨-೨೦೦ ; ಬ್ರಹ್ಮ. ಇಂದ್ರಿಯವಿಷಯಾದಿಗಳಿಗೆ ಸುಷುಪ್ತಿಯಲ್ಲಿ ಲಯವಾಗುವದು ಪ್ರಾಣಾಖ್ಯ ಬ್ರಹ್ಮದಲ್ಲಿ, ೧-೨೨೩., ೨-೨೬೪ ; ಪ್ರಾಣಕ್ಕೂ ಪ್ರಾಣನೆಂದೂ ಮನ ಆಖ್ಯ ಜೀವನು ಇದಕ್ಕೆ ಕಟ್ಟುಬಿದ್ದಿರುವನೆಂದೂ ಹೇಳಿರುವ ಪ್ರಾಣನೂ ಬ್ರಹ್ಮವೇ, ೧-೧೨೪ ; ಇಂದ್ರನು ತನ್ನನ್ನು ಪ್ರಾಣನೆಂದು ಕರೆದುಕೊಂಡಿರುವದು ಬ್ರಹ್ಮವೆಂಬ ಅಭಿಪ್ರಾಯದಿಂದ, ೧-೧೩.೭ ; ಜಗದ್ವ್ಯಾಪಾರಕ್ಕೆ ಕಾರಣವಾದ ಪ್ರಾಣವು ಬ್ರಹ್ಮವೇ, ೧-೩.೧೬ ; ಹಿರಣ್ಯಗರ್ಭನೆಂಬ ಅಪರಬ್ರಹ್ಮ , ೧-೨೪೯, ೨೮೩. ; **ಕೇನ.** ಇಂದ್ರಿಯಗಳ ವ್ಯಾಪಾರಕ್ಕೆಲ್ಲ ಕಾರಣವಾಗಿರುವ ಪ್ರಾಣ ; ಘ್ರಾಣೇಂದ್ರಿಯ, ೧೪, ೧೯, ೩.೮ ; **ಕಠ.** ಪ್ರಾಣವೇ ಮುಂತಾದ, ವೃತ್ತಿಯುಳ್ಳ ವಾಯು, ೧೪೧, ೧೪೫ ; ಪರಮಾತ್ಮ , ೧೨೩., ೧೬೦ ; **ಪ್ರಶ್ನ.** ಪ್ರಜಾಪತಿಯು ಸೃಷ್ಟಿಮಾಡಿದ ಆತ್ಮರೂಪವಾದ ಶಕ್ತಿವಿಶೇಷ, ೫, ೬, ೭. ೯, ೧೭, ೧೮ ; ಇಂದ್ರಿಯಗಳು, ೨೭, ೩.೧ ; ಹಿರಣ್ಯಗರ್ಭ, ೨೨, ೪೮, ೧೧೨ ; ಅಧ್ಯಾತ್ಮಿಕಪ್ರಾಣ, ಮುಖ್ಯಪ್ರಾಣ, ೨೬, ೨೭ ; **ಮುಂ.** ಕ್ರಿಯಾಶಕ್ತಿಪ್ರಧಾನವಾದ ವಾಯು, ಹಿರಣ್ಯಗರ್ಭ, ೨೩., ೫೪, ೫೭, ೬೦ ; ಮುಖ್ಯಪ್ರಾಣ, ೮೧, ೧೭೦ ; **ಮಾಂ.** ಕಾರಣಾತ್ಮನು, ೩.೦, ೧೦೬, ೧೦೭, ೧೦೮ ; **ಐತ.** ಕ್ರಿಯಾಶಕ್ತಿಪ್ರಧಾನನಾದ ಹಿರಣ್ಯಗರ್ಭ, ೮೫, ೮೭ ; **ಬೃಹ-೧.** ಹಿರಣ್ಯಗರ್ಭಲಿಂಗಾತ್ಮನು, ಕರಣಾತ್ಮನು, (ಹೊರಗೆ ವಾಯುವೂ ಒಳಗೆ ಪ್ರಾಣವೂ ಆಗಿರುವವನು), ೪೮, ೪೯ ; ೩.೧, ೬೧,

೨೮೫ ; ಮುಂದಕ್ಕೆ ಹೋಗುವ ಪ್ರಾಣವೃತ್ತಿ, ೨೫೨ ; ಬೃಹ-೨. ಮುಖ್ಯಪ್ರಾಣ, ೨೭, ೧೯೦ ; ಪ್ರಾಣವೃತ್ತಿ, ೪೫, ೧೪೦ ; ಘ್ರಾಣೇಂದ್ರಿಯ, ೧೯, ೭೨ ; ಸಮಷ್ಟಿ ವ್ಯಷ್ಟಿಪ್ರಾಣ, ಸೂತ್ರ, ಹಿರಣ್ಯಗರ್ಭ, ವಾಯು, ೪೩, ೧೦೪ ; ಪರಮಾತ್ಮ, ೨೭೮, ೨೯೫ ; ಶಾಂ. ನಿ. (೧) ಶರೀರದಲ್ಲಿರುವ ಪ್ರಾಣಾಪಾನಾದಿ ಪಂಚವೃತ್ತಿಗಳುಳ್ಳ ವಾಯು, ೨-೪-೮ ; (೨) ಹಿರಣ್ಯಗರ್ಭ, ೧-೧-೮.

**ಪ್ರಾಣಕರಣಸಂಘಾತಃ** - ಛಾಂ. ಪ್ರಾಣ ಮತ್ತು ಕರಣಗಳು ಸೇರಿದ ಒಟ್ಟು (ಸೂಕ್ಷ್ಮಶರೀರ), ೫೦೪.

**ಪ್ರಾಣನಾದೀನಿ** ಬಹ-೨. ಬ್ರಹ್ಮವನ್ನು ಊಹಿಸುವದಕ್ಕೆ ಗುರುತುಗಳಾಗಿರುವ ಕಾರ್ಯಕರಣಸಂಘಾತದ ಉಸಿರಾಡುವದೇ ಮುಂತಾದ ವ್ಯಾಪಾರಗಳು, ೪೫, ೪೬.

**ಪ್ರಾಣಾಃ** - ಮುಂ. ಇಂದ್ರಿಯಗಳು ೬೭, ೭೭, ೧೦೬ ; ಬೃಹ-೧. ಕರಣಗಳು ೪೫, ೪೬, ೬೫, ೨೪೭ ; ಬೃಹ-೨. ವಾಗಾದಿಕರಣಗಳು, ೨೨, ೨೩ ; ಶಾಂ. ನಿ. ಕರಣಗಳು ಹನ್ನೊಂದು, ಸೂ. ಭಾ. ೨-೪-೬.

**ಪ್ರಾಣಪಿಣ್ಡಸಮುದಾಯಃ, ಪ್ರಾಣಶರೀರಸಂಘಾತಃ** ಬೃಹ-೧. ಶರೀರೇಂದ್ರಿಯಗಳ ಸಮೂಹ, ೧೪೭, ೨೮೪.

**ಪ್ರಾಣಮಯಃ** - ತೈ. ವಾಯುವಿಕಾರವಾದ ಕೋಶ, ೧೨೩, ೧೨೪, ೧೨೫, ೧೩೭, ೨೧೦.

**ಪ್ರಾಣವೃತ್ತಯಃ** - ತೈ. ಪ್ರಾಣ, ಅಪಾನ - ಮುಂತಾದ ಪ್ರಾಣದ ವ್ಯಾಪಾರಗಳು, ೧೨೪.

**ಪ್ರಾಣಾತ್ಮಾ** - ಬೃಹ-೨. ಸುಷುಪ್ತಿಯಲ್ಲಿರುವ ಪ್ರಾಜ್ಞ, ೧೫೫.

**ಪ್ರಾಣಾತ್ಮದರ್ಶನಮ್, ಪ್ರಾಣಾತ್ಮಪ್ರತಿಪತ್ತಿಃ** - ಬೃಹ-೧. ಪ್ರಾಣನೇ ತಾನೆಂಬ ಉಪಾಸನೆ, ೨೪೦, ೨೫೨..

**ಪ್ರಾಣಾತ್ಮಾಭಿಮಾನಃ** - ಬೃಹ-೧. ತಾನೇ ಪ್ರಾಣನೆಂಬ ಅಭಿಮಾನ, ೬೮.

**ಪ್ರಾಣಾದಿವೃತ್ತಯಃ** - ಬೃಹ-೧. ಪ್ರಾಣ, ಅಪಾನ - ಮುಂತಾದ ಪ್ರಾಣದ ಐದು ವೃತ್ತಿಗಳು, ೨೧೪.

**ಪ್ರಾಣಾನಾಂ ಧಾರಯಿತಾ** - ಶಾಂ. ನಿ. ಪ್ರಾಣಗಳನ್ನು ಧರಿಸುವ ಜೀವ, ಸೂ. ಭಾ. ೧-೧-೬.

**ಪ್ರಾಣಾಯಾಮಃ** - ಶಾಂ. ನಿ. ಪ್ರಾಣಗಳನ್ನು ತಡೆಗಟ್ಟುವ ಕ್ರಮ, ಸೂ. ಭಾ. ೨-೧-೨೦.

**ಪ್ರಾಣವಿಜ್ಞಾನ** - ಛಾಂ. ಉದ್ಗೀಥವನ್ನು ಪ್ರಾಣನೆಂದು ಉಪಾಸನೆ ಮಾಡವದು, ೩೨.

**ಪ್ರಾಣಸಂಬಂಧಃ** - ಛಾಂ. (ಆತ್ಮನು, ಜೀವನೆನಿಸಿರುವದಕ್ಕೆ ಕಾರಣವಾದ), ಕರಣಸಂಬಂಧ, ೪೦೫.

**ಪ್ರಾಪ್ತಾಣಿಮಾದ್ಯೈಶ್ವರ್ಯಃ** - ಶಾಂ. ನಿ. ಅಣಿಮಾದಿಸಿದ್ಧಿಗಳನ್ನು ಪಡೆದು ಕೊಂಡಿರುವ ಯೋಗಿ. ಸೂ. ಭಾ. ೧-೨-೧೮.

**ಪ್ರಾಯಶ್ಚಿತ್ತಮ್** - ಛಾಂ. ಪಾಪವನ್ನು ಕಳೆಯುವದಕ್ಕೆ ಮಾಡಿದ ಕರ್ಮ, ೫೨೯ ; ಶಾಂ. ನಿ. ದೋಷವನ್ನು ಕಳೆಯುವದಕ್ಕಾಗಿ ವಿಧಿಸಿದ ಕರ್ಮ, ಸೂ. ಭಾ. ೪-೧-೧೩.

**ಪ್ರಾರಬ್ಧಫಲ** - ಶಾಂ. ನಿ. ಫಲವನ್ನು ಕೊಟ್ಟುಬಿಟ್ಟಿರುವ ಕರ್ಮ, ಗೀ. ೫-೧೩. (ಭಾ. ಭಾ. ೩೪೩). 'ಪ್ರಾರಬ್ಧ' ಎಂದಿಷ್ಟೇ ಸ್ವತಂತ್ರವಾಗಿ ಪ್ರಾರಬ್ಧಫಲಕರ್ಮ ವೆಂಬರ್ಥದಲ್ಲಿ ಭಾಷ್ಯದಲ್ಲಿ ಪ್ರಯೋಗವಾಗಿಲ್ಲ.

**ಪ್ರಾವಾದುಕಃ** - ಶಾಂ. ನಿ. ವಾದಿ, ಮಾಂ. ಕಾ. ಭಾ. ೪-೮೮.

**ಪ್ರೀತಿಃ** - ಶಾಂ. ನಿ. ಆನಂದ. ನಿರತಿಶಯಪ್ರೀತಿಯೇ ಸ್ವರ್ಗಶಬ್ದ-ವಾಚ್ಯವೆಂದೂ ಅದು ಕರ್ಮದಿಂದ ದೊರೆಯುವದೆಂದೂ ಹೇಳುತ್ತಿದ್ದ ಮೀಮಾಂಸಕರ ಮತವನ್ನು ತೈತ್ತಿರೀಯಭಾಷ್ಯದಲ್ಲಿ ಅವತರಣಿಕೆಯಲ್ಲಿ ಕೊಟ್ಟಿದೆ.

**ಪ್ರೇತ್ಯ** - ಶಾಂ. ನಿ. ಇಲ್ಲಿಂದ ಹೊರಟುಹೋಗಿ, ಸತ್ತು - ಮುಕ್ತಿಯು ಸತ್ತ ಬಳಿಕ ಆಗುವ ಫಲವಲ್ಲವೆಂಬುದನ್ನು ತಿಳಿಸುವದಕ್ಕೆ ಆಚಾರ್ಯರು ಈ ಶಬ್ದವನ್ನು ಪುತ್ರಮಿತ್ರಾದಿ ಗಳಲ್ಲಿ ನಾನು ನನ್ನದು ಎಂಬ ಅಭಿಮಾನವನ್ನು ಬಿಟ್ಟು - ಎಂಬರ್ಥದಲ್ಲಿ ವ್ಯಾಖ್ಯಾನ ಮಾಡಿರುತ್ತಾರೆ. ಕೇ. ಭಾ. ೧-೨ ; ತೈ. ಭಾ. ೨-೮.

# ಫ

**ಫಲಜಿಜ್ಞಾಸ್ಯಭೇದಃ** - ಬ್ರ.ಸೂ-೧. ಮುಂದೆ ಆಗುವ ಫಲ, ನಿತ್ಯಫಲ ; ಅನುಷ್ಠಾನವನ್ನು ಬಯಸುವ ಕರ್ಮ, ಅನುಷ್ಠಾನವನ್ನು ಬಯಸದ ಬ್ರಹ್ಮ ಎಂದು ಫಲಜಿಜ್ಞಾಸ್ಯಗಳು ಬೇರೆ ಬೇರೆಯಾಗಿರುವದು, ೧೨, ೪೦.

**ಫಲಪರ್ಯನ್ತ** - ಬ್ರ.ಸೂ-೧. ಫಲರೂಪವಾದ ಬ್ರಹ್ಮಾತ್ಮಭಾವದಲ್ಲಿ ಕೊನೆಗಾಣುವ (ಜ್ಞಾನ), ೩.೮.

**ಫಲಭಾವಃ - ಮಾಂ.** ಅಜ್ಞಾನದ ಕಾರ್ಯವಾದ ತಪ್ಪುತಿಳಿವಳಿಕೆ, ೪೫.

**ಫಲಮ್ - ಬ್ರ.ಸೂ-೨.** ಸಾಧಿಸಬೇಕಾದದ್ದು. ಧರ್ಮಜ್ಞಾನಕ್ಕೆ ಅಭ್ಯುದಯವು ಫಲ, ಬ್ರಹ್ಮಜ್ಞಾನಕ್ಕೆ ನಿಃಶ್ರೇಯಸವು ಫಲ, ೧-೧೨, ೪೦ ; ಅಪರಬ್ರಹ್ಮದ ಉಪಾಸನೆಗೆ ಆಗುವ ಜಗದೈಶ್ವರ್ಯಫಲವು ಸಂಸಾರಗೋಚರವೇ, ೨-೫೮೬ ; ನಿರ್ವಿಶೇಷಬ್ರಹ್ಮಜ್ಞಾನಕ್ಕೆ ಮೋಕ್ಷವೊಂದೇ ಫಲ, ಉಪಾಸನೆಗೆ ಗುಣ ವಿಶೇಷಪ್ರತೀಕವಿಶೇಷಗಳಿಂದ ಆಗುವ ಫಲದಲ್ಲಿ ತಾರತಮ್ಯವಿರುವದು, ೧-೧೨೮ ; ಕರ್ಮದ ಫಲವು ಈಶ್ವರನಿಂದಲೇ, ೨-೩೧೪ ; ಕರ್ಮಾನುರೂಪವಾದ ಜೀವರನ್ನು ಸೃಜಿಸುವದೆಂಬುದೇ ಅವನು ಕರ್ಮಫಲಹೇತುವೆಂಬುದರ ಅರ್ಥ, ೨-೩.೧೭ ; ಬ್ರಹ್ಮವಿದ್ಯೆಯ ಫಲವು ಅನುಭವಾರೂಢ, ಕಾಲಾಂತರದಲ್ಲಾಗುವದಲ್ಲ, ೨-೪೫೨ ; **ಮಾಂ.** ಧರ್ಮಾಧರ್ಮಗಳ ಫಲವಾದ ಶರೀರ, ೨೩.೪, ೨೩.೬, ೨೩.೮, ೨೪೦, ೨೫೫ ; **ನೈ.** (೧) ಕರ್ಮದ ಕಾರ್ಯ. ಕಾಮ್ಯಕರ್ಮಕ್ಕೆ ಸ್ವರ್ಗಾದಿಫಲ, ೧-೨೬, ೪೬; ನಿತ್ಯಕರ್ಮಕ್ಕೆ ಫಲವಿಲ್ಲವೆಂದು ಮೀಮಾಂಸಕರು, ದುರಿತಕ್ಷಯವೇ ಅದಕ್ಕೆ ಫಲ, ೧-೨೬, ೨೮, ೮೨; ಜ್ಞಾನದ ಫಲವು ಪ್ರತ್ಯಕ್ಷವಾಗಿ ಕೂಡಲೆ ಅನುಭವಕ್ಕೆ ಬರುತ್ತದೆ, ೧-೯೦. (೨) ಪ್ರಮಾಣದ ಫಲವಾದ ಅರಿವು. ಪ್ರಮೇಯದ ವಿಷಯಕ್ಕೆ ಅಜ್ಞಾತಜ್ಞಾಪನವೇ ಫಲವು, ಆದರೆ ಚೈತನ್ಯರೂಪನಾದ ಆತ್ಮನಿಗೆ ಅಜ್ಞಾನನಾಶವಲ್ಲದೆ ಮತ್ತೇನೂ ಫಲವಿಲ್ಲ, ೨-೯೯, ೧೦೫ ; **ಶಾಂ. ನಿ.** (೧) ಕ್ರಿಯೆಯ ಫಲ, ಜ್ಞಾನದ ಫಲ. ಧರ್ಮಜಿಜ್ಞಾಸೆಯ ಫಲವು ಅನುಷ್ಠಾನಾಪೇಕ್ಷವು ; ಜ್ಞಾನಫಲವು ಜ್ಞಾನಸಮಕಾಲದಲ್ಲಿ ಆಗುವದು. ಸೂ. ಭಾ. ೧-೧-೧. (೨) ಕರ್ಮದ ಫಲವಾದ ದೇಹ, ಗೀ. ಭಾ. ೧೩-೨ (ಭಾ. ಭಾ. ೨೨೨). (೩) ಫಲರೂಪವಾದ ಜ್ಞಾನ, ಅವಗತಿ, ಉ. ಸಾ. ಗ. ೫೨.

**ಫಲಮ್, ಕಾರ್ಯಮ್ - ಬೃಹ-೨.** ಕರ್ಮದ ಅಥವಾ ಉಪಾಸನೆಯ ಫಲ, ೧೦, ೧೧.

**ಫಲಸಙ್ಕಲ್ಪಃ, ಫಲಾಭಿಸನ್ಧಿಃ, ಫಲಾಸಙ್ಗಃ - ಭ.ಗೀ.** ಕರ್ಮಫಲದಲ್ಲಿ ಆಸಕ್ತಿ, ೫, ೭, ೧೨, ೧೬೬, ೨೮೫, ೫೫೭ ; **ಶಾಂ. ನಿ.** ಫಲವನ್ನು ಮನಸ್ಸಿಗೆ ತಂದುಕೊಳ್ಳುವದು, ಇಚ್ಛಿಸುವದು. ಅದಕ್ಕೆ ಅಂಟಿಕೊಳ್ಳುವದು, ಗೀ. ಭಾ. ಭಾ. ಭಾ. ೫ ; ೯-೯.

**ಫಲಹೇತೂ - ಭ.ಗೀ.** ಧರ್ಮಾಧರ್ಮಗಳೆಂಬ ಹೇತು, ಅವುಗಳ ಫಲವಾದ ಶರೀರ, ಇವು, ೭೬೫.

# ಬ

**ಬದ್ಧಃ - ಶಾಂ. ನಿ.** ಸಂಸಾರಿಯಾದ ಜೀವನು, ಮಾಂ. ಕಾ. ೨-೩.೨.

**ಬನ್ಧನಮ್, ಬನ್ಧಃ - ಬೃಹ-೨.** ಕಟ್ಟು, ಜೀವನ ಸಂಸಾರಕ್ಕೆ ಕಾರಣವಾದದ್ದು, ೨, ೨೯ ; **ಶಾಂ. ನಿ.** ಸಂಸಾರಕ್ಕೆ ಕಟ್ಟುಬಿದ್ದಿರುವದು. ಉಪ. ಪ. ೧೫-೪೯.

**ಬಂಧಮೋಕ್ಷಃ - ಬೃಹ-೨.** ಬಂಧದಿಂದ ಬಿಡುಗಡೆ, ಪರಮಪುರುಷಾರ್ಥ, ೨೧, ೫೦.

**ಬಲವತ್ - ನೈ.** ವಿದ್ಯಾವಿದ್ಯೆಗಳಲ್ಲಿ ವಿದ್ಯೆಯೇ ಪ್ರಬಲ, ೧-೩.೫, ೩.೮; ತತ್ತ್ವಮಸ್ಯಾದಿವಾಕ್ಯಜ್ಞಾನವೇ ಪ್ರತ್ಯಕ್ಷಜ್ಞಾನಕ್ಕಿಂತ ಪ್ರಬಲ, ೩.-೯೪, ೯೫.

**ಬಹಿಷ್ಪವಮಾನಮ್ - ಛಾಂ.** ಒಂದಾನೊಂದು ಸಾಮಸ್ತೋತ್ರ, 'ಉಪಾಸ್ಮೈಗಾಯತ', 'ದವಿದ್ಯುತತ್ಯ', 'ಪವಸ್ವ' ಎಂಬ ಮೂರು ತೃಚಗಳಿಂದಾಗಿರುವ ಒಂಬತ್ತು ಋಕ್ಕುಗಳ ಗಾನ, ೧೦೪.

**ಬಹಿರಙ್ಗಮ್ - ಭ.ಗೀ.** ಜ್ಞಾನಕ್ಕೆ ಹೊರಗಿನ ಸಾಧನ, ಕರ್ಮ, ೨.೭೬, ೩.೮೦, ೨.೮೪.

**ಬಹಿಷ್ಕರಣಾನಿ - ಭ.ಗೀ.** ಹೊರಗಿನ ಇಂದ್ರಿಯಗಳು, ೭೯.

**ಬೃಹತ್ - ಛಾಂ.** ಒಂದಾನೊಂದು ಸಾಮ, ('ತ್ವಾಮಿದಿ ಹವಾಮಹೇ' ಋ. ೬-೪೬-೧), ೧೫೩..

**ಬೃಹತೀಸಹಸ್ರ - ಐತ.** ಗದ್ಯರೂಪವಾದ ಒಂದಾನೊಂದು ಸ್ತುತಿ, ೪.

**ಬೃಹದಾರಣ್ಯಕಮ್ - ಈಶ.** ಶುಕ್ಲಯಜುರ್ವೇದದ ಸಂಹಿತೆಯೂ ಬ್ರಾಹ್ಮಣವೂ ಆದಬಳಿಕ ಜ್ಞಾನವನ್ನು ವಿವರಿಸುವದಕ್ಕೆ ಬಂದಿರುವ ಭಾಗ, ೩೨..

**ಬ್ರಹ್ಮ - ಬ್ರ.ಸೂ-೧.** ಅದ್ವಿತೀಯವಾಗಿರುವ ಎಲ್ಲರ ಆತ್ಮ, ೧೪, ೧೮, ೧೯, ೨೦, ೨೯, ೩.೫, ೪೦, ೪೩, ೬೨, ೬೪, ೮೭, ೯೧, ೧೦೮, ೧೧೭, ೧೨೧, ೧೨೫, ೧೩೫, ೧೪೬, ೧೫೧, ೧೬೫, ೧೮೦, ೨೨೦, ೨೪೮, ೨೬೪. ೨.೨೫ ; **ಬ್ರ.ಸೂ-೨.** ಅದ್ವಿತೀಯನಾದ ಎಲ್ಲರ ಆತ್ಮ, ಯಾವ ವಿಶೇಷವೂ ಇಲ್ಲದ ಜ್ಞೇಯಬ್ರಹ್ಮವು ಪರಬ್ರಹ್ಮವೆಂದೂ ವಿಕಾರಧರ್ಮಗಳಿಂದೊಡಗೂಡಿದ ಉಪಾಸ್ಯಬ್ರಹ್ಮವು ಅಪರಬ್ರಹ್ಮವೆಂದೂ ಎರಡು ವಿಧವಾಗಿ ಶ್ರುತಿಯಲ್ಲಿ ಬ್ರಹ್ಮವನ್ನು ತಿಳಿಸಿದೆ. ಪರಬ್ರಹ್ಮ,

ಅಪರಬ್ರಹ್ಮ - ಎರಡೂ ನಿಜವಾಗಿ ಒಂದೇ, ೧-೫೭೫, ೫೮೫ (ಟೀಕೆಯನ್ನು ನೋಡಿ) ; ಬ್ರಹ್ಮಪ್ರಧಾನವಾದ ವಾಕ್ಯಗಳು ಬ್ರಹ್ಮಸ್ವರೂಪದ ವಿಷಯಕ್ಕೆ ಪ್ರಬಲ, ಉಪಾಸನಾವಾಕ್ಯಗಳನ್ನೂ ಅವಕ್ಕೆ ವಿರುದ್ಧವಾಗದಂತೆ ಅರ್ಥಮಾಡಿಕೊಳ್ಳಬೇಕು, ೨-೨೮೧ ; ಬ್ರಹ್ಮಸ್ವರೂಪವಾದ ಆನಂದವು ಎಲ್ಲಕ್ಕೂ ಮಿಗಿಲಾದದ್ದು, ೧-೯೯ ; ಬ್ರಹ್ಮಸ್ವರೂಪವು ಜೀವಸ್ವರೂಪಕ್ಕಿಂತ ಅಧಿಕ, ೧-೪೫೫, ೨-೪೪೫ ; ಬ್ರಹ್ಮವು ಆತ್ಮನಾಗಿರುವದರಿಂದ ಪ್ರಸಿದ್ಧ, ೧-೧೯ ; ಇದು ಎಲ್ಲವನ್ನೂ ಬೆಳಗುವ ಸ್ವಯಂಜ್ಯೋತಿ, ೧-೨೭೪ ; ಬ್ರಹ್ಮಭಾವವೇ ಮೋಕ್ಷ, ೧-೪೯ ; ಬ್ರಹ್ಮಾತ್ಮಜ್ಞಾನದಿಂದ ಕೃತಕೃತ್ಯತೆ, ೧-೫೩ ; ಕಾರ್ಯಬ್ರಹ್ಮವನ್ನು ಗೌಣವೃತ್ತಿಯಿಂದ ಬ್ರಹ್ಮವೆನ್ನುವರು, ೧-೫೭೫ ; ಕೇನ. ಎಲ್ಲಕ್ಕೂ ದೊಡ್ಡದು, ಎಲ್ಲರ ಆತ್ಮನಾಗಿರುವ ಪರಮಾರ್ಥ, ೨೦, ೨೩, ೨೪ ; ಕಠ. ಬ್ರಾಹ್ಮಣ, ೮೩, ೧೦೯ ; ಎಲ್ಲಕ್ಕೂ ಹೆಚ್ಚಿನ ತತ್ತ್ವ, ಪರಮಾತ್ಮತತ್ತ್ವ, ೩, ೬೫, ೮೫, ೮೬, ೧೦೭, ೧೨೨, ೧೨೩, ೧೨೪, ೧೩೦, ೧೪೨, ೧೪೫, ೧೫೮, ೧೭೨, ೧೭೭ ; ಪ್ರಶ್ನ. ಬ್ರಾಹ್ಮಣಜಾತಿ, ೨೯ ; ಪರಮಾತ್ಮ, ೩೯ ; ಮುಂ. ಎಲ್ಲಕ್ಕೂ ದೊಡ್ಡದು, ಪರಮಾತ್ಮ, ೬, ೮, ೪೭, ೭೨, ೭೩, ೭೪, ೭೬, ೮೦, ೮೭, ೧೦೩, ೧೧೦, ೧೧೬, ೧೧೮, ೧೧೯ ; ಮಾಂ. ಮಿಗಿಲಿಲ್ಲದ ತತ್ತ್ವ, ಪರಮಾತ್ಮ, ೭, ೮, ೬೮, ೭೦, ೭೧, ೧೨೮, ೧೩೦, ೧೫೦, ೧೯೬, ೧೯೭, ೨೦೦, ೨೧೧, ೨೬೮, ೨೬೯ ; ತೈ. ಓಂಕಾರ ೩೪, ೫೧ ; ದೊಡ್ಡದು ೯೨, ೯೪, ೧೦೮ ; ಪರಮಾತ್ಮ ೨೮, ೩೬, ೪೩, ೪೬, ೧೮೫ ; ಛಾಂ. ಪರಮಾತ್ಮ, ೩೪೫ ; ಸತ್ಯಲೋಕದಲ್ಲಿರುವ ಹಿರಣ್ಯಗರ್ಭ, ೩೪೫ ; ಬೃಹ-೧. ಯಜುಸ್ಸು, ೫೩ ; ಬ್ರಾಹ್ಮಣ ಜಾತ್ಯಭಿಮಾನಿಯಾದ ಅಪರಬ್ರಹ್ಮ, ೧೮೦, ೧೮೧ ; ಬ್ರಾಹ್ಮಣ ಜಾತಿ, ೧೮೫, ೩೬೦ ; ಪರಮಾತ್ಮ, ೫೦, ೧೪೯, ೧೫೭ ; ಬೃಹ-೨. ದೊಡ್ಡದು, ದೊಡ್ಡದೆಂಬ ದೃಷ್ಟಿಯಿಂದ ಉಪಾಸನೆಮಾಡತಕ್ಕ ಗೌಣಬ್ರಹ್ಮ, ೧೪೨, ೧೪೩ ; ಸೋಪಾಧಿಕವಾದ ಬ್ರಹ್ಮ, ಸಗುಣಬ್ರಹ್ಮ, ಪ್ರಾಣ, ೧೦೪, ೩೧೦ ; ಎಲ್ಲಕ್ಕೂ ಹೆಚ್ಚಿನ, ತೀರ ಒಳಗಿನ ಆತ್ಮರೂಪವಾದ ಮುಖ್ಯಬ್ರಹ್ಮ, ೫೪, ೭೩; ಭ.ಗೀ. ಪರಮಾತ್ಮ, ೧೨, ೨೯, ೩೧, ೧೧೪, ೧೪೧, ೨೮೩, ೨೮೪, ೨೮೫, ೨೮೭, ೩೫೬, ೪೯೮, ೫೦೨, ೬೧೯, ೬೭೪, ೭೨೪, ೭೯೦, ೮೩೬ ; ಬ್ರಾಹ್ಮಣ್ಯ, ೧, ೨೨೯ ; ವೇದ, ೧೭೭, ೨೯೮ ; ಬ್ರಹ್ಮ ಶಕ್ತಿ, ೪೯೦ ; ತ್ರಿಗುಣಾತ್ಮಕಪ್ರಕೃತಿ, ೮೫೦ ; ಸೈ. ಪರಮಾತ್ಮ. ಏಕರಸವಾದ ಅದ್ವೈತಬ್ರಹ್ಮವಾದದಂತೆ ನಾನಾರಸಬ್ರಹ್ಮವಾದದಲ್ಲಿಯೂ ಕರ್ಮಜ್ಞಾನಸಮುಚ್ಚಯವು ಸಿದ್ಧಿಸುವದಿಲ್ಲ, ೧-೬೮; ಆಮ್ನಾಯವೆಲ್ಲ ಕ್ರಿಯಾರ್ಥವೆಂಬುದು ಜೈಮಿನಿಗಳ ಅಭಿಪ್ರಾಯವಲ್ಲವಾದ್ದರಿಂದ ಬ್ರಹ್ಮವಸ್ತುವನ್ನು ತಿಳಿಸುವ ಶಾರೀರಕವನ್ನು ಬಾದರಾಯಣರು ರಚಿಸಿರುತ್ತಾರೆ, ೧-೯೧; ಬ್ರಹ್ಮವಾಗಿದೇನೆ ಎಂಬ ಬುದ್ಧಿಯಿಂದ ಅಹಂಬುದ್ಧಿ ಹೋಗುತ್ತದೆ, ೨-೨೯; ನಾನು ಎಂಬ ವಾಕ್ಯಾರ್ಥಜ್ಞಾನವನ್ನು ಅಭ್ಯಾಸಮಾಡುತ್ತಿದ್ದರೆ ಆವಾಕ್ಯಾರ್ಥಜ್ಞಾನವು

ಬೇರೆಯಾಗುತ್ತದೆ ಎಂಬುದು ಸರಿಯಲ್ಲ, ೧-೬೭; ಬ್ರಹ್ಮವು ನಾನು ಎಂಬ ಜ್ಞಾನದಿಂದ ವಾಙ್ಮನಸ್ಸುಗಳಿಗೆ ಗೋಚರವಾಗುವದು, ೩-೧; ಜ್ಞಾನ್ಯಜ್ಞಾನಿತ್ವಗಳು ಕಲ್ಪಿತವೆಂದು ಅರಿತು ಕೊಂಡಿರುವವನು ಶ್ರೇಷ್ಠನಾದ ಬ್ರಹ್ಮಜ್ಞಾನಿ, ೪-೫೩.; ಬ್ರಹ್ಮಸಂಸ್ಥರಾದ ಆ ಆರ್ಯರ ಸೇವೆಯಿಂದ ಜ್ಞಾನವನ್ನು ಹೊಂದಿ ಈ ಪ್ರಕರಣವನ್ನು ಬರೆದಿದೆ, ೪-೭೬.

**ಬ್ರಹ್ಮಕಾರಣವಾದಃ, ಈಶ್ವರಕಾರಣವಾದಃ** - ಬ್ರ.ಸೂ-೧. ಬ್ರಹ್ಮವೇ ಜಗತ್ತಿಗೆ ಕಾರಣವೆಂಬ ವೇದಾಂತವಾದ, ೩೯೭, ೪೦೧, ೪೦೨, ೪೦೪, ೪೩೧.

**ಬ್ರಹ್ಮಕಾರಣವಾದಃ, ಈಶ್ವರಕಾರಣವಾದಃ, ಚೇತನಕಾರಣವಾದಃ** - ಬ್ರ.ಸೂ-೨. ಬ್ರಹ್ಮವೇ ಜಗತ್ಕಾರಣವೆಂಬ ವೇದಾಂತ ದರ್ಶನದ ವಾದ, ಅದ್ವಿತೀಯಚೇತನಸ್ವರೂಪವಾದ ಬ್ರಹ್ಮವೇ ಜಗತ್ತಿಗೆ ಉಪಾದಾನವೂ ನಿಮಿತ್ತವೂ ಆಗಿದೆ - ಎಂಬೀ ವಾದಕ್ಕೆ ಸಾಂಖ್ಯವೈಶೇಷಿಕಾದಿಗಳ ಕಾರಣವಾದಗಳು ವಿರುದ್ಧ, ೧-೩೯೭ ; ಈ ವಾದವು ಸ್ಮೃತಿಗಳಲ್ಲಿಯೂ ಇದೆ, ೧-೪೦೧ ; ಶ್ರುತಿಗಳಿಗೆ ಇದರಲ್ಲಿಯೇ ತಾತ್ಪರ್ಯ, ೧-೪೦೨ ; ಈ ವಾದದಲ್ಲಿ ಭೋಕ್ತ್ರಾದಿವಿಭಾಗವೂ ಹೊಂದುತ್ತದೆ, ೧-೪೩೧, ೪೩೨.

**ಬ್ರಹ್ಮಚರ್ಯಮ್** - ಕಠ. ಗುರುವಿನ ಬಳಿಯಲ್ಲಿದ್ದು ಶಾಸ್ತ್ರಾಭ್ಯಾಸ, ಬ್ರಹ್ಮವಿಚಾರವೇ ಮುಂತಾದದ್ದನ್ನು ಮಾಡುವದು, ಮೈಥುನವನ್ನು ಬಿಟ್ಟಿರುವದು, ೬೮ ; **ಪ್ರಶ್ನ.** ಮೈಥುನಾಸಮಾಚರಣ, ೩ ; ಋತುಕಾಲಭಾರ್ಯಾಗಮನ, ೧೮ ; **ತೈ.** ಮೈಥುನಾಸಮಾಚರಣ, ೮೨, ೮೩, ೮೫ ; **ಭ.ಗೀ.** ಗುರುಶುಶ್ರೂಷೆಯೇ ಮುಂತಾದದ್ದು, ೪೦೩, ೫೧೪.

**ಬ್ರಹ್ಮಚೋದನಾ** - ಬ್ರ.ಸೂ-೧. ಬ್ರಹ್ಮವನ್ನು ತಿಳಿಸುವ ವೇದವಾಕ್ಯ, ೧೨.

**ಬ್ರಹ್ಮಜಜ್ಞ** - **ಕಠ.** ಹಿರಣ್ಯಗರ್ಭನಿಂದ ಹುಟ್ಟಿದ ಸರ್ವಜ್ಞನಾದ ವಿರಾಟ್ಪುರುಷ, ೪, ೨೮.

**ಬ್ರಹ್ಮಜ್ಞಾನಮ್, ಬ್ರಹ್ಮವಿದ್ಯಾ** - ಭ.ಗೀ. ಬ್ರಹ್ಮವನ್ನು ಸರಿಯಾಗಿ ಅರಿತುಕೊಳ್ಳುವದು, ೨೮೭, ೫೪೪, ೫೪೫, ೧೧೪೧ ; **ಶಾಂ. ನಿ.** ಬ್ರಹ್ಮದ ಸರಿಯಾದ ಜ್ಞಾನ, ಗೀ. ಭಾ. ಭಾ. ೬೦೦, ಮುಂ. ಭಾ. ೧-೧-೧.

**ಬ್ರಹ್ಮಜಿಜ್ಞಾಸಾ** - ಬ್ರ.ಸೂ-೧. ಬ್ರಹ್ಮವನ್ನು ವಿಚಾರದಿಂದ ತಿಳಿಯಬೇಕೆಂಬ ಇಚ್ಛೆ, ೧೧, ೧೨, ೧೪, ೧೫, ೨೦, ೨೮.

**ಬ್ರಹ್ಮಜಿಜ್ಞಾಸವಃ** - ಐತ. ಬ್ರಹ್ಮವನ್ನು ಅರಿಯಬಳಸುವವರು, ೮೦.

**ಬ್ರಹ್ಮದರ್ಶನಮ್, ಬ್ರಹ್ಮವಿದ್ಯಾ, ಬ್ರಹ್ಮವಿಜ್ಞಾನಮ್** - ಬ್ರ.ಸೂ-೧. ಬ್ರಹ್ಮವನ್ನು ಕಂಡುಕೊಳ್ಳುವದು, ಬ್ರಹ್ಮಜ್ಞಾನ, ೪೪, ೪೭, ೧೩೭, ೨೯೪ ; ಬ್ರ.ಸೂ-೨. ಅದ್ವಿತೀಯಬ್ರಹ್ಮದ ಜ್ಞಾನ. ಬ್ರಹ್ಮದರ್ಶನದಿಂದ ನೇರಾಗಿ ಸರ್ವಾತ್ಮಭಾವ, ೧-೪೪ ; ಬ್ರಹ್ಮವಿದ್ಯೆಯು ಪ್ರತ್ಯಕ್ಷಾದಿಗಳಂತೆ ವಸ್ತುತಂತ್ರ, ವಸ್ತುವನ್ನು ಇದ್ದಂತೆ ತಿಳಿಸುವದು, ೧-೪೭ ; ಇದರಿಂದ ಸರ್ವಕರ್ಮಕ್ಷಯ, ೧-೧೩೭ ; ಈ ಜ್ಞಾನವಾಗುವವರೆಗೇ ವಿಧಿಗಳೂ ಪ್ರಮಾಣಗಳೂ, ೧-೬೩.

**ಬ್ರಹ್ಮದೃಷ್ಟಿಃ** - ಛಾಂ. ಬ್ರಹ್ಮವೆಂದು ಭಾವಿಸುವದು, ೨೭೭, ३೦೬ ; ಬೃಹ-೧. ಬ್ರಹ್ಮವೆಂದು ಭಾವಿಸುವದು, ೫೦, ೫೧.

**ಬ್ರಹ್ಮನಿಷ್ಠಃ** - ಕೇನ. ಬ್ರಹ್ಮದಲ್ಲಿಯೇ ನೆಲೆನಿಂತಿರುವವನು, ೯ ; ಮುಂ. ಉಪಾಸನೆಯಿಂದ ಅಥವಾ ಜ್ಞಾನದಿಂದ ಬ್ರಹ್ಮದಲ್ಲಿಯೇ ನೆಲೆನಿಂತವನು, ೪೭.

**ಬ್ರಹ್ಮಬುದ್ಧ್ಯುಪಮೃದಿತ** - ಭ.ಗೀ. ಬ್ರಹ್ಮವೆಂಬ ಬುದ್ಧಿಯಿಂದ ಬಾಧಿತವಾದ ೨೮೪, ೨೮೫.

**ಬ್ರಹ್ಮಪರಾಃ, ಬ್ರಹ್ಮನಿಷ್ಠಾಃ** - ಪ್ರಶ್ನ. ಬ್ರಹ್ಮವೇ ಹೆಚ್ಚೆಂದು, ಬ್ರಹ್ಮದ ಉಪಾಸನೆಯಲ್ಲಿಯೇ ನಿಂತವರು, ಹಿರಣ್ಯಗರ್ಭನ ಉಪಾಸಕರು, ೨.

**ಬ್ರಹ್ಮಪುರಮ್** - ಮುಂ. ಬ್ರಹ್ಮವನ್ನು ಅರಿತುಕೊಳ್ಳಬಹುದಾದ ಸ್ಥಾನ, ಹೃದಯ, ೮೦.

**ಬ್ರಹ್ಮಪ್ರತಿಪತ್ತಿಃ** - ಛಾಂ. ಬ್ರಹ್ಮಪ್ರಾಪ್ತಿ, ೨.

**ಬ್ರಹ್ಮಭಾವಃ, ಬ್ರಹ್ಮಾತ್ಮತ್ವಮ್, ಬ್ರಹ್ಮಾತ್ಮಭಾವಃ** - ಬ್ರ.ಸೂ-೧. ಬ್ರಹ್ಮಸ್ವರೂಪನಾಗಿರುವದು, ३೮, ೪೯, ೮೫, ೧೪೮, ३೨೧, ೪३೫, ೪३೭, ೪೫೪ ; ಬ್ರ.ಸೂ-೨. ಬ್ರಹ್ಮಸ್ವರೂಪವಾಗಿರುವದು. ಇದರ ಜ್ಞಾನದಿಂದ ಸರ್ವಕ್ಲೇಶನಾಶ, ೧-३೮ ; ಇದೇ ಮೋಕ್ಷ, ೧-೪೯ ; ಇದರಿಂದಲೇ ಅಶರೀರತ್ವ, ೧-३೨೧ ; ಶಾಸ್ತ್ರೀಯವಾದ ಬ್ರಹ್ಮಾತ್ಮತ್ವವು ಶಾರೀರಾತ್ಮತ್ವಕ್ಕೆ ಬಾಧಕ, ೧-೪३೫ ; ಬ್ರಹ್ಮಾತ್ಮತ್ವಜ್ಞಾನವು ಅಸತ್ಯವಾದ ವೇದಾಂತವಾಕ್ಯದಿಂದಲೂ ಆಗಬಹುದು, ೧-೪३೭ ; ಬ್ರಹ್ಮ ಭೂತನಾದವನಿಗೆ ಕರ್ಮಲೇಪವಿಲ್ಲ, ೧-೧೪೦.

**ಬ್ರಹ್ಮಭೂತಃ, ಬ್ರಹ್ಮೀಭೂತಃ, ಬ್ರಹ್ಮತಾಂ ಗತಃ** - ಬ್ರ.ಸೂ-೧. ಜ್ಞಾನದಿಂದ ಬ್ರಹ್ಮವಾದವನು, ೧೪೦ ; 'ಬ್ರಹ್ಮವಾದವನು' ಎಂದು ಸುಷುಪ್ತನನ್ನು ಕುರಿತು ಜನರು ಆಡುವ ಮಾತು, ೨೫೯.

**ಬ್ರಹ್ಮಭೂತಃ** - ಭ.ಗೀ. ಬ್ರಹ್ಮವೇ ಆದ ಜೀವನ್ಮುಕ್ತ, ३೬೯, ೪೨३, ೧೧೦೪.

**ಬ್ರಹ್ಮಯೋಗಃ** - **ಭ.ಗೀ.** ಬ್ರಹ್ಮದಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಳ್ಳುವದು, ೩೬೩.

**ಬ್ರಹ್ಮಲೋಕಃ** - **ಬ್ರ.ಸೂ-೧.** ಹಿರಣ್ಯಗರ್ಭನ ಲೋಕ, ೨೫೨, ೨೫೬ ; ಬ್ರಹ್ಮ , ೨೫೯ ; **ಬ್ರ.ಸೂ-೨.** ಹಿರಣ್ಯಗರ್ಭನೆಂಬ ಕಾರ್ಯಬ್ರಹ್ಮದ ಲೋಕ. ಓಂಕಾರಪ್ರತೀಕವನ್ನು ಆಶ್ರಯಿಸಿ ಬ್ರಹ್ಮವೆಂದು ಉಪಾಸನೆಮಾಡಿದವನಿಗೆ ಬ್ರಹ್ಮಲೋಕಪ್ರಾಪ್ತಿಯೂ ಕ್ರಮಮುಕ್ತಿಯೂ ಆಗುವವು, ೧-೨೫೨ ; ಇದಕ್ಕೆ ಸತ್ಯಲೋಕವೆಂದು ಹೆಸರು, ೧-೨೫೯ ; ಸಗುಣೋಪಾಸಕರಿಗೆಲ್ಲ ಈ ಲೋಕವೇ ಪ್ರಾಪ್ಯ, ೨-೫೬೫ ; ಈ ಲೋಕಕ್ಕೆ ಹೋದವರಿಗೆ ಜ್ಞಾನದ್ವಾರದಿಂದ ಕ್ರಮಮುಕ್ತಿ, ೨-೫೭೬ ; ಈ ಲೋಕದಿಂದ ಪುನರಾವೃತ್ತಿಯಿಲ್ಲ, ೨-೬೧೨ ; ಬ್ರಹ್ಮವೆಂಬ ಲೋಕ, ಬ್ರಹ್ಮ. ಬ್ರಹ್ಮವನ್ನು ಲೋಕವೆಂಬುದು ಗೌಣವೃತ್ತಿಯಿಂದ, ೨-೫೭೪ ; ಸುಷುಪ್ತಾವಸ್ಥೆಯಲ್ಲಿ ಜೀವರಿಗೆ ಲೋಕಪ್ರಾಪ್ತಿ , ೨-೫೫೯ ; **ಈಶ.** ಹಿರಣ್ಯ ಗರ್ಭನಿರುವ ಸತ್ಯಲೋಕ, ೧೧ ; **ಕಠ.** ಬ್ರಹ್ಮ, ೭೦, ೧೦೮ ; ಬ್ರಹ್ಮನ ಲೋಕ, ೭೦, ೧೬೪, ೧೬೫ ; **ಪ್ರಶ್ನ.** ಹೆಚ್ಚಿನ ಚಂದ್ರಲೋಕ, ೨೧, ೨೨ ; ಹಿರಣ್ಯಗರ್ಭನ ಲೋಕ, ೨೨, ೮೩, ೮೬ ; **ಮುಂ.** ಕರ್ಮಕ್ಕೆ ಸಿಕ್ಕುವ ಹೆಚ್ಚಿನ ಲೋಕ, ಸ್ವರ್ಗ, ೩೬ ; ಬ್ರಹ್ಮ, ೧೦೮ ; **ಛಾಂ.** ಬ್ರಹ್ಮನಿರುವ ಲೋಕ, ೬೨೭, ೬೨೮, ೬೩೩ ; **ಬೃಹ-೨.** ಹಿರಣ್ಯ ಗರ್ಭನ ಲೋಕ, ೬೦, ೨೩೭ ; ಅಂಡಕ್ಕೆ ಕಾರಣವಾದ ಭೂತಗಳು, ೬೫, ೬೬ ; ಪರಮಾತ್ಮಸ್ವರೂಪ, ೨೩೩, ೨೪೦ ; ಕರ್ತೃಭೋಕ್ತೃವಾದ ಜೀವ, ೨೪೯ ; **ಶಾಂ. ನಿ.** ಜ್ಞಾನಕರ್ಮಸಮುಚ್ಚಯದಿಂದ ಪಡೆಯುವ ಕಾರ್ಯ ಬ್ರಹ್ಮಲೋಕ, ಸತ್ಯಲೋಕ, ಕಾ. ೩-೩-೫, ಸೂ. ಭಾ. ೧-೩-೧೩ ; ಬ್ರಹ್ಮವೆಂಬ ಲೋಕ, ಬ್ರಹ್ಮ, ಛಾಂ. ಭಾ. ೮-೩-೨, ಸೂ. ಭಾ. ೧-೩-೧೫.

**ಬ್ರಹ್ಮನಿರ್ವಾಣಮ್** - **ಭ.ಗೀ.** ಬ್ರಹ್ಮದಲ್ಲಿ ಸೇರಿಹೋಗುವ ಮೋಕ್ಷ, ೧೪೧, ೩೬೯, ೩೭೦, ೩೭೧.

**ಬ್ರಹ್ಮವಾಕ್ಯಮ್** - **ಬ್ರ.ಸೂ-೧.** ಬ್ರಹ್ಮವನ್ನು ತಿಳಿಸುವ ವಾಕ್ಯ, (ಅಬ್ರಹ್ಮವನ್ನು ತಿಳಿಸುವದಲ್ಲ), ೧೪೦ ; **ಶಾಂ. ನಿ.** ಬ್ರಹ್ಮವನ್ನು ಹೇಳುವ ವಾಕ್ಯ, ಬ್ರಹ್ಮೋಪಾಸನೆಯ ವಾಕ್ಯವಲ್ಲ, ಸೂ. ಭಾ. ೩-೨-೨೧.

**ಬ್ರಹ್ಮವಾದಿನಃ** - **ಮಾಂ.** ಬ್ರಹ್ಮವು ಜಗತ್ಕಾರಣವೆಂಬ ವೇದಾಂತಿಗಳು, ೧೬೬.

**ಬ್ರಹ್ಮವಾದೀ** - **ಶಾಂ. ನಿ.** ಬ್ರಹ್ಮವು ಜಗತ್ಕಾರಣವೆಂಬ ವಾದಿ, ಸೂ. ಭಾ. ೨-೨-೩೯.

**ಬ್ರಹ್ಮವರ್ಚಸಮ್** - ತೈ. ಉಪಾಸನೆಯಿಂದ ಅಥವಾ ಶಮದಮಜ್ಞಾನಾದಿಗಳಿಂದ ಬರುವ ತೇಜಸ್ಸು ೧೭, ೨೩೮.

**ಬ್ರಹ್ಮವಿತ್** - ಪ್ರಶ್ನ. ದೊಡ್ಡತತ್ತ್ವವನ್ನು ಬಲ್ಲವ, ೩೮ ; ಹಿರಣ್ಯಗರ್ಭನ ತತ್ತ್ವವನ್ನು ಬಲ್ಲವ, ೧೧ ; ತೈ. ಬ್ರಹ್ಮವನ್ನು ಅರಿತುಕೊಂಡವನು ೫೮, ೧೦೮ ; ಐತ. ಬ್ರಹ್ಮವನ್ನು ಬಲ್ಲ ಜ್ಞಾನಿ, ೫೮, ೮೧ ; ಭ.ಗೀ. ಬ್ರಹ್ಮವನ್ನು ಅರಿತುಕೊಂಡಿರುವವನು, ೧೩೯, ೨೪೪, ೨೭೨, ೨೮೩, ೨೮೯, ೩೬೨, ೫೩೭.

**ಬ್ರಹ್ಮವಿದ್** - ಛಾಂ. ಸಾಕ್ಷಾತ್ಕಾರಮಾಡಿಕೊಂಡಿರುವ ಉಪಾಸಕ, ೨೨೬, ೨೭೫, ೩೨೩, ೩೩೯, ೩೪೫.

**ಬ್ರಹ್ಮವಿದಃ** - ಮುಂ. ವೇದಾರ್ಥವನ್ನು ಬಲ್ಲವರು, ೧೩ ; ಬ್ರಹ್ಮವನ್ನು ಅರಿತಿರುವವರು, ೪೮, ೯೭, ೧೧೭, ೧೨೨, ೧೨೩.

**ಬ್ರಹ್ಮವಿತ್‌ಸಂಪ್ರದಾಯಃ** - ಕೇನ. ಬ್ರಹ್ಮವನ್ನು ಬಲ್ಲವರು ತಮ್ಮ ಶಿಷ್ಯರಿಗೆ ತಿಳಿಸುತ್ತಾಬಂದಿರುವದು, ೪೦.

**ಬ್ರಹ್ಮವಿದ್ಯಾ** - ಕೇನ. ಬ್ರಹ್ಮವನ್ನು ಅರಿತುಕೊಳ್ಳುವದು, ೪೬, ೬೪, ೮೪, ೮೯; ಕಠ. ಬ್ರಹ್ಮವನ್ನು ಅರಿತುಕೊಳ್ಳುವದು, ೩, ೧೮೮ ; ಮುಂ. ಪರಮಾತ್ಮನನ್ನು ಅರಿತುಕೊಳ್ಳುವದು, ೨, ೪, ೫, ೬, ೮, ೯, ೧೭, ೪೫, ೪೮, ೪೯, ೭೮, ೯೭, ೧೨೪, ೧೨೫, ೧೨೬ ; ತೈ. ಅಪರಬ್ರಹ್ಮದ ಜ್ಞಾನ ೧೪ ; ಪರಬ್ರಹ್ಮದ ಜ್ಞಾನ, ೧, ೧೧, ೫೯, ೯೧, ೯೪, ೨೨೮ ; ಐತ. ಬ್ರಹ್ಮದ ಜ್ಞಾನ, ೮೧.

**ಬ್ರಹ್ಮವಿದ್ಯಾ, ಬ್ರಹ್ಮವಿಜ್ಞಾನಮ್** - ಬೃಹ-೧. ಬ್ರಹ್ಮವನ್ನು ಅರಿತುಕೊಳ್ಳುವದು, ೧, ೨, ೫, ೯೭ ; ಛಾಂ. ಉಪಾಸನೆ, ೨೨೭, ೨೨೯, ೨೭೫.

**ಬ್ರಹ್ಮವಿದ್ಯಾ, ಬ್ರಹ್ಮದರ್ಶನಮ್, ಪರಮಾತ್ಮದರ್ಶನಮ್, ಆತ್ಮೈಕತ್ವದರ್ಶನಮ್** - ಬೃಹ-೨. ಎಲ್ಲರ ಆತ್ಮನಾದ ಪರಮಾರ್ಥತತ್ತ್ವದ ಜ್ಞಾನ, ೨೨, ೫೬.

**ಬ್ರಹ್ಮವಿಜ್ಞಾನಮ್** - ತೈ. ಬ್ರಹ್ಮದ ಅರಿವು, ಅನುಭವ, ೫೯.

**ಬ್ರಹ್ಮವಿದ್ಯಾಚಾರ್ಯಃ** - ಕಠ. ಬ್ರಹ್ಮವಿದ್ಯೆಯನ್ನು ತಿಳಿದುಕೊಂಡು ಮತ್ತೊಬ್ಬರಿಗೂ ತಿಳಿಸುವ ಗುರು, ೧.

**ಬ್ರಹ್ಮವಿದ್ಯಾಪ್ರತಿಪತ್ತಿಃ** - ಮಾಂ. ಪರಮಾರ್ಥತತ್ತ್ವದ ತಿಳಿವಳಿಕೆ, ೫, ೧೫೦, ೧೭೩.

ಬ್ರಹ್ಮಶರೀರಮ್ - ಪ್ರಶ್ನ. ಬ್ರಹ್ಮಸ್ವರೂಪವು, ೧೧೮.

ಬ್ರಹ್ಮಸಂಸ್ಥಃ - ಛಾಂ. ಬ್ರಹ್ಮದಲ್ಲಿಯೇ ನಿಷ್ಠನಾಗಿರುವವನು ; ಪ್ರಣವ ಸೇವೆಯನ್ನು ಮಾಡುತ್ತಿರುವವನು, ೧೭೬, ೧೭೮, ೧೭೯.

ಬ್ರಹ್ಮಸ್ವಭಾವಃ - ಬ್ರ.ಸೂ-೧. ಸ್ವಭಾವದಿಂದಲೇ ಬ್ರಹ್ಮವಾಗಿರುವ (ಜೀವನು), ೧೭೪.

ಬ್ರಹ್ಮಹತ್ಯಾ - ಛಾಂ. ಅನೇಕಜನ್ಮಗಳಿಗೆ ಕಾರಣವಾದ ಬ್ರಹ್ಮಹತ್ಯೆ, ೪೧೦.

ಬ್ರಹ್ಮಿಷ್ಠಃ - ಪ್ರಶ್ನ. ಎಲ್ಲಕ್ಕೂ ದೊಡ್ಡ ತತ್ತ್ವವನ್ನು ಬಲ್ಲವ, ೩೮.

ಬ್ರಹ್ಮಾ - ಕಠ. ಬ್ರಹ್ಮನು, ಹಿರಣ್ಯಗರ್ಭ, ೨೮, ೪೩, ೧೮೪ ; ಮುಂ. ಬ್ರಹ್ಮವಿದ್ಯಾಸಂಪ್ರದಾಯಕರ್ತೃವಾದ ಹಿರಣ್ಯಗರ್ಭನು, ೭, ೮ ; ತೈ. ಸಮಷ್ಟಿವ್ಯಷ್ಟಿ ರೂಪನಾದ ಹಿರಣ್ಯಗರ್ಭ, ೨೮೦ ; ಭ.ಗೀ. ಹಿರಣ್ಯಗರ್ಭ, ೭೦೦, ಚತುರ್ಮುಖ, ೬೭೦.

ಬ್ರಹ್ಮಾತ್ಮತತ್ವದರ್ಶೀ - ಬ್ರ.ಸೂ-೧. ಬ್ರಹ್ಮವೇ ತಾನೆಂದು ತಿಳಿದವನು, ೪೩೫ ; ಐತ. ಬ್ರಹ್ಮವೇ ಆತ್ಮನೆಂಬುದನ್ನು ಕಂಡುಕೊಂಡಿರುವವನು, ೯.

ಬ್ರಹ್ಮಾತ್ಮಪ್ರತ್ಯಯಃ - ಕಠ. ಬ್ರಹ್ಮವು ನಮ್ಮ ಆತ್ಮನೆಂಬ ತಿಳಿವಳಿಕೆ, ೧೮೨ ; ಶಾಂ. ನಿ. ಬ್ರಹ್ಮವು ನಮ್ಮ ಆತ್ಮನೇ ಎಂಬ ತಿಳಿವಳಿಕೆ, ಕಾ. ಭಾ. ೨-೩-೧೫.

ಬ್ರಹ್ಮಾತ್ಮತಾಪ್ರತಿಬೋಧಃ, ಬ್ರಹ್ಮಾತ್ಮತಾವಿಜ್ಞಾನಮ್ - ಬ್ರ.ಸೂ-೧. ಬ್ರಹ್ಮವೇ ತಾನೆಂದು ತಿಳಿಯುವದು, ೪೩೬.

ಬ್ರಹ್ಮಾತ್ಮವಿಜ್ಞಾನಮ್ - ಐತ. ಬ್ರಹ್ಮನೇ ಆತ್ಮನೆಂಬ ಅರಿವು, ೧೨.

ಬ್ರಹ್ಮಾತ್ಮಾ - ಶಾಂ. ನಿ. ಬ್ರಹ್ಮರೂಪವಾದ ಆತ್ಮನು, ಎಲ್ಲರಿಗೂ ಆತ್ಮನಾಗಿರುವ ಪರಮಾತ್ಮನು, ಸೂ. ಭಾ. ೧-೧-೫.

ಬ್ರಹ್ಮಾತ್ಮೈಕತ್ವಮ್, ಬ್ರಹ್ಮಾತ್ಮೈಕ್ಯಮ್ - ಬ್ರ.ಸೂ-೧. ಬ್ರಹ್ಮವೂ ಆತ್ಮನೂ ಒಂದೇ ಎಂಬುದು, ೪೫, ೪೬, ೬೨.

ಬ್ರಹ್ಮಾತ್ಮೈಕತ್ವಮ್ - ಐತ. ಬ್ರಹ್ಮವೇ ನಮ್ಮ ಆತ್ಮನು, ಅದ್ವಿತೀಯನಾದ ಆತ್ಮನು ಒಬ್ಬನೇ ಎಂಬುದು, ೨೭.

ಬ್ರಹ್ಮಾತ್ಮೈಕತ್ವಮ್, ಬ್ರಹ್ಮೈಕತ್ವಮ್ - ಬೃಹ-೧. ನಮ್ಮಗಳ ಆತ್ಮನಾಗಿರುವ ಬ್ರಹ್ಮವೊಂದೇ ನಿಜವಾಗಿರುವದೆಂಬುದು, ೧, ೩೨೦ ; ಭ.ಗೀ. ಬ್ರಹ್ಮವೂ ಆತ್ಮನೂ ಒಂದೇ ತತ್ತ್ವವಾಗಿರುವದು, ೨೮೯, ೪೨೫, ೪೨೬, ೧೦೪೧.

ಬ್ರಹ್ಮಾತ್ಮೈಕತ್ವದರ್ಶನಮ್ - ಮುಂ. ಬ್ರಹ್ಮರೂಪನಾದ ಆತ್ಮನು ಒಬ್ಬನೇ ಪರಮಾರ್ಥವೆಂದು ಕಂಡುಕೊಳ್ಳುವದು, ೫.

ಬ್ರಹ್ಮಾತ್ಮೈಕತ್ವವಿಜ್ಞಾನಮ್ - ಕಠ. ಬ್ರಹ್ಮವೂ ನಮ್ಮ ಆತ್ಮನೂ ಒಬ್ಬನೇ ಎಂಬ ತಿಳಿವಳಿಕೆ, ೩೨, ೧೮೨.

ಬ್ರಹ್ಮಾತ್ಮದರ್ಶನಮ್ - ಬೃಹ-೧. ಬ್ರಹ್ಮವು ನಮ್ಮ ಆತ್ಮನೆಂಬ ತಿಳಿವಳಿಕೆ. ೧೫೭.

ಬ್ರಹ್ಮಾದಯಃ - ಬೃಹ-೧. ಬ್ರಹ್ಮವೇ ಮೊದಲಾದ ಜೀವರು, ೧೫೩.

ಬ್ರಹ್ಮಾದಿಮನುಷ್ಯಪರ್ಯನ್ತಾನಿ - ಬೃಹ-೨. ಪರಮಾನಂದದ ಅಂಶಗಳನ್ನು ತಾರತಮ್ಯದಿಂದ ಉಪಜೀವಿಸಿಕೊಂಡಿರುವ ಮನುಷ್ಯನವರೆಗಿನ ಪ್ರಾಣಿಗಳು, ೨೩೪.

ಬ್ರಹ್ಮಾದಿಸ್ತಮ್ಬಪರ್ಯನ್ತಮ್ - ಐತ. ಬ್ರಹ್ಮನಿಂದ ಹಿಡಿದು ಸ್ಥಾವರ ಪ್ರಾಣಿಯವರೆಗೆ, ೮೮ ; ಛಾಂ. ಬ್ರಹ್ಮದಿಂದ ಹಿಡಿದು ಸ್ಥಾವರದವರೆಗಿನ (ಜಗತ್ತು),

ಬ್ರಹ್ಮಾದಿಸ್ಥಾವರಾನ್ತ - ಬೃಹ-೧. ಬ್ರಹ್ಮನಿಂದ ಹಿಡಿದು ೫, ೧೨೦.

ಬ್ರಹ್ಮಾದಿಸ್ತಮ್ಬಪರ್ಯನ್ತಾನಿ, ಬ್ರಹ್ಮಾದಿಸ್ಥಾವರಾನ್ತಾನಿ - ಬ್ರ.ಸೂ-೧. ಬ್ರಹ್ಮನಿಂದ ಹಿಡಿದು ಸ್ಥಾವರದವರೆಗಿನ ಪ್ರಾಣಿಗಳು, ೪೨, ೬೨ ; ಕಠ. ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಯವರೆಗಿನವು, ೭೫, ೧೦೧, ೧೨೪ ; ಮುಂ. ಹಿರಣ್ಯಗರ್ಭನಿಂದ ಹಿಡಿದು ಸ್ಥಾವರಪ್ರಾಣಿಗಳವರೆಗಿನ ಜೀವರುಗಳು, ೧೯, ೯೫ ; ಬೃಹ-೨. ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಗಳವರೆಗಿನ ಭೂತಗಳು, ೫೬, ೬೭, ೭೧ ; ಭ.ಗೀ. ಹಿರಣ್ಯ ಗರ್ಭನಿಂದ ಹಿಡಿದು ಸ್ಥಾವರಪ್ರಾಣಿಯವರೆಗಿನ ಪ್ರಾಣಿಗಳು, ೧೮೧, ೨೩೮, ೩೦೪, ೪೨೬, ೫೪೮, ೫೫೦, ೭೫೭, ೮೨೮ ; ಶಾಂ. ನಿ. ಹಿರಣ್ಯಗರ್ಭನಿಂದ ಹಿಡಿದು ಸ್ಥಾವರದ ವರೆಗಿನ ಭೂತಗಳು, ಕಾ. ಭಾ. ೧-೩-೧೨, ೨-೧-೧೦.

ಬ್ರಹ್ಮಾನನ್ದಃ - ಬ್ರ.ಸೂ-೧. ಲೌಕಿಕಾನಂದಗಳಿಗೆಲ್ಲ ಹೆಚ್ಚಿನದಾದ ಬ್ರಹ್ಮ ಸ್ವರೂಪವಾದ ಆನಂದ, ೯೯ ; ತೈ. ಬ್ರಹ್ಮದ ಸ್ವರೂಪವಾದ ಆನಂದ, ೧೯೭ ; ಶಾಂ. ನಿ. ಬ್ರಹ್ಮದ ಸ್ವರೂಪವಾದ ಆನಂದ, ತೈ. ಭಾ. ೨-೮, (ಭಾ. ಭಾ. ೧೯೬).

ಬ್ರಹ್ಮಾವಗತಿಃ, ಬ್ರಹ್ಮಾತ್ಮಾವಗತಿಃ - ಬ್ರ.ಸೂ-೧. ಬ್ರಹ್ಮಜ್ಞಾನ, ಬ್ರಹ್ಮವೇ ತಾನೆಂಬ ಜ್ಞಾನ, ೨೭, ೫೬, ೬೪ ; ಶಾಂ. ನಿ. ಬ್ರಹ್ಮವೇ ಸತ್ಯವೆಂದೂ ನಮ್ಮ ಆತ್ಮನೆಂದೂ ಮಾಡಿಕೊಳ್ಳುವ ನಿಶ್ಚಯ, ಸೂ. ಭಾ. ೧-೧-೧.

**ಬ್ರಹ್ಮೋಪಲಬ್ಧಿದ್ವಾರಾಣಿ** - ತೈ. ಬ್ರಹ್ಮವನ್ನು ಅರಿತುಕೊಳ್ಳುವದಕ್ಕೆ ಸಾಧನಗಳಾದ ಶರೀರಾದಿಗಳು ೨೩೦, ೨೩೧, ೨೩೨.

**ಬಾಧಃ** - ಬ್ರ.ಸೂ-೧. ತಪ್ಪೆಂದು ಹೊಡೆದುಹಾಕುವದು, ೨೮೯ ; ಬ್ರ.ಸೂ-೨. ಜ್ಞಾನವನ್ನು ತಪ್ಪೆಂದು ಹೊಡೆದುಹಾಕುವದು. ನಿಶ್ಚಿತವಾದ ಪ್ರತ್ಯಭಿಜ್ಞಾನವನ್ನು ಮತ್ತೊಂದು ಪ್ರಮಾಣವು ಹೊಡೆಯಲಾರದು, ೧-೨೮೯ ; ಅಕರ್ತ್ರಾತ್ಮಜ್ಞಾನವು ಮಿಥ್ಯಾಜ್ಞಾನವನ್ನು ಬಾಧಿಸಿಯೇ ಕರ್ಮಗಳನ್ನು ನಾಶಗೊಳಿಸುತ್ತದೆ. ೨-೫೩೨ ; ಬಾಧಿತವಾದ ಮಿಥ್ಯಾಜ್ಞಾನವೂ ಸಂಸ್ಕಾರವಶದಿಂದ ಸ್ವಲ್ಪಕಾಲ ಅನುವೃತ್ತವಾಗಿರಬಹುದು, ೨-೫೩೨.

**ಬಾಧ್ಯಬಾಧಕಭಾವಃ** - ನೈ. ಕರ್ಮಕ್ಕೂ ಜ್ಞಾನಕ್ಕೂ ಬಾಧ್ಯಬಾಧಕಭಾವವಿದೆ, ೧-೨೯, ವಿದ್ಯೆಯು ಅವಿದ್ಯೆಯನ್ನು ಬಾಧಿಸಿದ ಬಳಿಕ ಅವಿದ್ಯೆಯು ಆ ವಿದ್ಯೆಯನ್ನು ಮತ್ತೆ ಬಾಧಿಸಲಾರದು, ೧-೩೮; ತತ್ತ್ವಂಪದಾರ್ಥಗಳ ಅದ್ವಿತೀಯಪ್ರತ್ಯಕ್ತ್ವಗಳೇ ಬಾಧಕ, ದುಃಖಿತ್ವಸದ್ವಿತೀಯತ್ವಗಳೇ ಬಾಧ್ಯ ಎಂಬುದಕ್ಕೆ ಕಾರಣ, ೩-೬೯,೮೦; ಆತ್ಮನ ಬೋಧಾಬೋಧಗಳು ಬಾಧ್ಯಬಾಧಕವಾದರೂ ಆತ್ಮಸ್ಪರ್ಶಿಗಳಲ್ಲ, ೩-೧೦೭; ಪ್ರತ್ಯಕ್ಷಾಗಮಗಳಿಗೆ ವಿರೋಧವಾದರೆ ಬಾಧ್ಯಬಾಧಕಭಾವವಿರುತ್ತದೆ, ೩-೮೫.

**ಬಾಲ್ಯಮ್** - ಬೃಹ-೨. ಜ್ಞಾನಬಲಭಾವ, ಜ್ಞಾನವನ್ನು ಸಂಪಾದಿಸಿಕೊಂಡು ಅನಾತ್ಮಪ್ರತ್ಯಯವನ್ನು ತಿರಸ್ಕಾರಮಾಡುವ ಸಾಧನ, ೬೨.

**ಬಾಹ್ಯಲೋಕಾಃ** - ಬೃಹ-೨. ಹೊರಗಿರುವ ಮನುಷ್ಯಾದಿಲೋಕಗಳು, ೩೦೯, ೩೧೦.

**ಬಾಹ್ಯಾರ್ಥಪ್ರತ್ಯಯಾನುಸಾರಿಣಃ** - ಮುಂ. ಹೊರಗಿನ ವಿಷಯವನ್ನೇ ಕಾಣುವ ಅರಿವಿನ ಅಜ್ಞರು, ೮೫.

**ಬಾಹ್ಯೇನ್ದ್ರಿಯಾಣಿ** - ಬ್ರ.ಸೂ-೧. ವಾಕ್ಕೇ ಮುಂತಾದ ಹೊರಗಿನ ವಿಷಯಗಳನ್ನು ಗ್ರಹಿಸುವ ಇಂದ್ರಿಯಗಳು, (ಅಂತಃಕರಣವಲ್ಲ), ೩೩೭.

**ಬಾಹ್ಯೈಷಣಾ** - ಮಾಂ. ಹೊರಗಿನ (ಅನಾತ್ಮವನ್ನು) ಬಯಸುವದು, ೧೨೫.

**ಬ್ರಾಹ್ಮಣಃ, ಬ್ರಹ್ಮವಿತ್** - ಬೃಹ-೨. ಬ್ರಹ್ಮಜ್ಞಾನಿಯಾದ ಮುಖ್ಯಬ್ರಾಹ್ಮಣ, ೬೨, ೬೩.

**ಬ್ರಾಹ್ಮಣಾಃ** - ಮಾಂ. ಬ್ರಹ್ಮಜ್ಞಾನಿಗಳು, ೧೯೯.

**ಬಿಂಬಮ್** - **ಶಾಂ. ನಿ.** ಚಂದ್ರಾದಿಗಳ ಪ್ರತಿಬಿಂಬ, ಉಪ. ಸಾ. ೧೭-೩೪.

**ಬೀಜಮ್, ಬೀಜನಿದ್ರಾ** - **ಮಾಂ.** ತಪ್ಪುತಿಳಿವಳಿಕೆಗೆ ಕಾರಣವಾಗಿರುವ ಅಜ್ಞಾನ, ೪೯ ; **ಶಾಂ. ನಿ.** ಎಚ್ಚರಕನಸುಗಳಿಗೆ ಕಾರಣವಾದ ನಿದ್ರೆ, ಅಜ್ಞಾನ. ಉಪ. ಸಾ. ೧೬-೧೮, ಮಾಂ. ಕಾ. ಭಾ. ೧-೧೩, ೧೪.

**ಬೀಜಭಾವಃ** - **ಮಾಂ.** ಕಾರಣವಾದ ಅ[illegible]೫, ೬೨, ೬೮, ೮೪, ೧೯೨.

**ಬೀಜಶಕ್ತಿಃ** - **ಬ್ರ.ಸೂ-೧.** ನಾಮರೂಪಗಳ ಸೂಕ್ಷ್ಮಾವಸ್ಥೆಯಾದ ಅವ್ಯಾಕೃತ, ೩೩೮, ೩೩೯ ; **ಬ್ರ.ಸೂ-೨.** ನಾಮರೂಪಗಳ ವಿಂಗಡಕ್ಕೆ ಕಾರಣವಾದ ಶಕ್ತಿ, ಅವ್ಯಾಕೃತ, ೧-೩೩೮ ; ಈ ಶಕ್ತಿಗೆ ವಿದ್ಯೆಯಿಂದ ನಾಶ, ೧-೩೩೯ ; **ಶಾಂ. ನಿ.** ಪರಮೇಶ್ವರನನ್ನು ಆಶ್ರಯಿಸಿಕೊಂಡಿರುವ ಜಗತ್ಕಾರಣಶಕ್ತಿ. ಇದಕ್ಕೆ ಪ್ರಕೃತಿ, ಆಕಾಶ, ಅಕ್ಷರ, ಮಾಯಾ, ಅವ್ಯಕ್ತ - ಎಂಬ ಹೆಸರುಗಳೂ ಉಂಟು. ಸೂ. ಭಾ. ೧-೪-೩.

**ಬೀಜಾಙ್ಕುರವತ್, ಬೀಜಾಙ್ಕುರನ್ಯಾಯೇನ** - **ಬ್ರ.ಸೂ-೧.** ಬೀಜದಿಂದ ಮೊಳಕೆ, ಮೊಳಕೆಯಿಂದ ಮತ್ತೊಂದು ಬೀಜ ಹೀಗೆ ಅನಾದಿಯಾಗಿರುವ ಸಾಲಿನಂತೆ, ೪೭೪, ೪೭೫ ; **ಶಾಂ. ನಿ.** ಅನಾದಿಯಾಗಿರುವದಕ್ಕೆ ದೃಷ್ಟಾಂತ, ಸೂ. ಭಾ. ೨-೧-೩೬. ಅನಾದಿಯಾದದ್ದಕ್ಕೆ ನಾಶವುಂಟೆಂಬುದು ವ್ಯವಹಾರದೃಷ್ಟಿಯಿಂದ ಮಾತ್ರ ; ನಿಜವಾಗಿ ಅನಾದಿಯಾದದ್ದು ಇಲ್ಲ. ಮಾಂ. ಕಾ. ೪-೨೦.

**ಬೀಜಾಙ್ಕುರೌ** - **ಮಾಂ.** ಒಂದಕ್ಕೊಂದು ಕಾರಣವಾಗಿರುವ ಬೀಜ ಮೊಳಕೆಗಳು, ೩೭, ೨೪೫, ೨೪೬, ೨೪೭.

**ಬೀಜಾತ್ಮಾ** - **ಮಾಂ.** ಜಗತ್ತಿಗೆ ಕಾರಣವಾಗಿರುವ ಆತ್ಮನು, ೩೦, ೧೬೦.

**ಬೀಜಾವಸ್ಥಾ** - **ಮಾಂ.** ಅನ್ಯಥಾಗ್ರಹಣದ ಎಚ್ಚರಕನಸುಗಳಿಗೆ ಕಾರಣವಾಗಿರುವ ಅಜ್ಞಾನಾವಸ್ಥೆ, ೨೬ ; **ಬೃಹ-೧.** ಸಾಧ್ಯಸಾಧನಪ್ರಪಂಚದ ಸೂಕ್ಷ್ಮಾವಸ್ಥೆ, ೧೧೭, ೧೧೮.

**ಬುದ್ಧಾಃ** - **ಮಾಂ.** ಪಂಡಿತರೆಂದುಕೊಳ್ಳುವ ವಾದಿಗಳು, ೧೪೪, ೨೪೯ ; ಅದ್ವೈತವಾದಿಗಳು, ೨೮೭, ೩೩೪, ೩೩೫, ೩೪೭.

**ಬುದ್ಧ್ಯಾದಿದೇಹಾನಾತ್ಮಾ, ದೇಹಾದಿಬುದ್ಧ್ಯನಾತ್ಮಾ** - **ನೈ.** ಬುದ್ಧಿಯಿಂದ ದೇಹದವರೆಗೆ ಸಂಶಯಗ್ರಸ್ತವಾಗಿರುವ ಅನಾತ್ಮಗಳು, ೨-೧೫, ೧೮ ; ೪-೪, ೧೦.

**ಬುದ್ಧ್ಯಾದ್ಯುಪಾಧಯಃ** - **ಬ್ರ.ಸೂ-೧.** ಜೀವತ್ವಕ್ಕೆ ಹೇತುವಾಗಿರುವ ಅಂತಃಕರಣ, ಇಂದ್ರಿಯ, ದೇಹ - ಮುಂತಾದ ಉಪಾಧಿಗಳು, ೧೪೩, ೨೬೨.

**ಬುದ್ಧಿಃ, ಧೀಃ** - ಬ್ರ.ಸೂ-೧. ಅಂತಃಕರಣ, ೧೬೭, ೧೬೮, ೧೬೯ ; ನಿಶ್ಚಯಾತ್ಮಕವಾದ ಅಂತಃಕರಣ, ೨೬೪, ೨೬೬, ೩೩೬, ೩೩೭ ; **ಕೇನ.** ನಿಶ್ಚಯ ಮಾಡುವ, ಅಂತಃಕರಣವೃತ್ತಿ, ಅಂತಃಕರಣ, ೧೮, ೫೬ ; **ಕಠ.** ನಿಶ್ಚಯಾತ್ಮಕವಾದ ಅಂತಃಕರಣವೃತ್ತಿ; ಈ ಮಾತನ್ನು ಅಂತಃಕರಣವೆಂಬರ್ಥದಲ್ಲಿಯೂ ಉಪಯೋಗಿಸುವದುಂಟು. ೮೮, ೮೯, ೯೨, ೯೬ ; ಮಹತ್ತತ್ತ್ವ, ೧೦೩, ೧೦೫, ೧೭೪, ೧೭೭; **ಪ್ರಶ್ನ.** ಅಂತಃಕರಣದ ನಿಶ್ಚಯಾತ್ಮಕವೃತ್ತಿ , ೭೨ ; **ಮಾಂ.** ನಿಶ್ಚಯಾತ್ಮಕವಾದ ಅಂತಃಕರಣವೃತ್ತಿ , ೧೧ ; **ತೈ.** ನಿಶ್ಚಯಮಾಡುವ ಅಂತಃಕರಣ, ೧೩೮ ; **ಭ.ಗೀ.** ಜ್ಞಾನ, ೮೧, ೮೪, ೮೬, ೧೪೨ ; ಆತ್ಮಜ್ಞಾನ, ೧೨, ೧೦೧, ೧೨೭, ೧೫೨, ೬೧೫ ; ಅಂತಃಕರಣ, ೪೩, ೧೦೩, ೧೦೫, ೧೨೧, ೧೫೩ ; ತಿಳಿದುಕೊಳ್ಳುವ ಸಾಮರ್ಥ್ಯ, ೬೦೭ ; ನಿಶ್ಚಯಾತ್ಮಕವಾದ ಅಂತಃಕರಣ, ೪೩, ೨೨೩, ೨೨೬, ೨೨೭, ೩೪೯, ೩೭೭, ೫೦೮, ೭೩೬, ೭೪೫, ೮೨೮, ೧೦೫೬ ; ಸಮಷ್ಟಿ ಬುದ್ಧಿ, ೭೮೦ ; ಇದನ್ನು ಮಾಡಿ ಇದನ್ನು ಪಡೆಯಬೇಕೆಂಬ ಬುದ್ಧಿ , ೧೯೬ ; **ನೈ.** (೧) **ಅಂತಃಕರಣ.** ಆತ್ಮನು ಬುದ್ಧಿಗೂ ಸಾಕ್ಷಿ, ೧-೧, ೨-೮೦; ಬುದ್ಧಿಗಳಿಂದ ಆತ್ಮನ ಸ್ವರೂಪಾಪಹಾರ-ವಾಗುವದಿಲ್ಲ. ೨-೪೯; ಪರಿಣಾಮಿಯಾದ ಬುದ್ಧಿಯನ್ನು ಕೂಟಸ್ಥನಾದ ಆತ್ಮನು ನೋಡುತ್ತಾನೆ, ೨-೭೧; ಬುದ್ಧಿಗೂ ಆತ್ಮನಿಗೂ ತಾರತಮ್ಯ , ೨-೭೧ ರಿಂದ ೭೫; ಬುದ್ಧಿಯ ಎಲ್ಲಾ ವಿಕಾರಗಳಿಗೂ ಆತ್ಮನು ಸಾಕ್ಷಿ , ೨-೭೭; ಆತ್ಮಜ್ಯೋತಿಯನ್ನೂ ಬುದ್ಧಿಯನ್ನೂ ಅನುಮಾನದಿಂದ ವಿಂಗಡಿಸಿಕೊಳ್ಳಬೇಕು, ೨-೯೭; ಬುದ್ಧ್ಯಾದಿಗಳಂತೆ ಆತ್ಮನು ವ್ಯವಹಿತನಾಗಿಲ್ಲ, ೨-೯೮; ಬುದ್ಧಿಯಂತೆ ಆತ್ಮನಿಗೆ ಮತ್ತೊಂದರಿಂದ ಸಿದ್ಧಿಯಾಗಬೇಕಾದದ್ದಿಲ್ಲ, ೨-೧೧೦ ; ಆತ್ಮನಿಂದ ಬೇರ್ಪಡಿಸಿದರೆ ಬುದ್ಧ್ಯಾದಿಗಳು ಷಷ್ಠಗೋಚರದಂತೆ ಅಭಾವರೂಪವೇ, ೨-೧೧೪; ಕಾಮಗಳೆಲ್ಲ ಹೋಗಲು ಬುದ್ಧಿಯು ಆತ್ಮನನ್ನು ಸೇರಿಕೊಳ್ಳುವದು, ೧-೪೮. (೨) **ಬುದ್ಧಿವೃತ್ತಿ.** ಪುರುಷಬುದ್ಧಿಯಿಂದ ಸ್ಥಾಣುಬುದ್ಧಿಯು ಬಾಧಿತವಾಗುವಂತೆ ಬ್ರಹ್ಮಬುದ್ಧಿಯಿಂದ ಅಹಂಬುದ್ಧಿ ತೊಲಗುತ್ತದೆ, ೨-೨೯; ಅಹಂಬುದ್ಧಿ ಹೋದರೆ ಮಮಬುದ್ಧಿಯೂ ಹೋಗುತ್ತದೆ, ೨-೩೦; ಬುದ್ಧಿಯು ಹುಟ್ಟಿದರೂ ಆತ್ಮನಲ್ಲಿ ವಿಕಾರವಾಗದು, ೨-೬೧, ೬೩; ಆತ್ಮನು ಬುದ್ಧಿವೃತ್ತಿಗಳಿಗೆ ನಿರ್ವಿಕಾರನಾಗಿಯೇ ಅಭಿವ್ಯಂಜಕನು, ೨-೬೬; ಬುದ್ಧಿವೃತ್ತಿಗಳೆಲ್ಲ ಆತ್ಮಚೈತನ್ಯದಿಂದ ವ್ಯಾಪ್ತವಾಗಿರುತ್ತವೆ, ೨-೬೯; ಬುದ್ಧಿಯ ಉತ್ಪತ್ತಿಸ್ಥಿತಿನಾಶಗಳಿಂದ ಆತ್ಮನಿಗೆ ಉತ್ಪತ್ತ್ಯಾದಿಗಳಾಗುವದಿಲ್ಲ, ೨-೭೯; ಬ್ರಾಹ್ಮಣಬುದ್ಧಿ ಚಂಡಾಲಬುದ್ಧಿ ಎರಡಕ್ಕೂ ಆತ್ಮಚೈತನ್ಯವೇ ಭಾಸಕ, ೨-೮೮; ಘಟಬುದ್ಧಿಘಟಗಳಿಗೆ ದ್ರಷ್ಟೃವು ಬೇರೆಯಿರುವಂತೆ ಅಹಂಬುದ್ಧಿ ಅಹಂಗಮ್ಯ - ಈ ಎರಡಕ್ಕಿಂತ

ದೃಗ್ರೂಪಚೈತನ್ಯವು ಬೇರೆಯಾಗಿರುತ್ತದೆ, ೨-೧೦೦ ; **ಶಾಂ. ನಿ.** ಜ್ಞಾನ, ಆತ್ಮಜ್ಞಾನ, ಅಂತಃಕರಣ, ತಿಳಿದುಕೊಳ್ಳುವ ಸಾಮರ್ಥ್ಯ, ನಿಶ್ಚಯಾತ್ಮಕ ಅಂತಃಕರಣ, ಸಮಷ್ಟಿಬುದ್ಧಿ ಇದನ್ನು ಮಾಡಿ ಇದನ್ನು ಪಡೆಯಬೇಕೆಂಬ ಬು[illegible] ಇಷ್ಟುಅರ್ಥಗಳಿಗೂ ಉದಾಹರಣೆಗಳು ಗೀತಾಭಾಷ್ಯದಲ್ಲಿ ದೊರೆಯುವವು.

**ಬುದ್ಧಿಕರ್ಮಣೀ - ಭ.ಗೀ.** ಶಾಸ್ತ್ರೋಕ್ತ ಜ್ಞಾನಕರ್ಮಗಳು, ೧೦, ೧೧, ೧೪೯, ೧೫೨.

**ಬುದ್ಧಿ ಪ್ರತ್ಯಯಸಾಕ್ಷೀ, ಬೌದ್ಧಪ್ರತ್ಯಯಸಾಕ್ಷೀ - ಮುಂ.** ಅಂತಃಕರಣದಲ್ಲಿ ಆಗುವ ಅರಿವುಗಳಿಗೆ ಸಾಕ್ಷಿ, ೭೬, ೭೮.

**ಬುದ್ಧಿವೃತ್ತಿಃ - ಭ.ಗೀ.** ಅಂತಃಕರಣದ ವೃತ್ತಿ (ಜ್ಞಾನ, ಅಜ್ಞಾನ ಮುಂತಾದದ್ದು), ೪೩ ; **ಶಾಂ. ನಿ.** [illegible], ಅಜ್ಞಾನ ಮುಂತಾದ ಅಂತಃಕರಣವೃತ್ತಿ.

**ಬುದ್ಧೀನ್ದ್ರಿಯಾಣಿ - ಪ್ರಶ್ನ.** ಚಕ್ಷುಸ್ಸು, ಶ್ರೋತ್ರ, ನಾಸಿಕ, ಜಿಹ್ವೆ, ತ್ವಕ್ಕು - ಎಂಬ ಅರಿವಿನ ಇಂದ್ರಿಯಗಳು, ೨೪, ೨೫, ೭೨ ; **ಮುಂ.** ಅರಿಯುವ ಇಂದ್ರಿಯಗಳು, ಚಕ್ಷುರಾದಿಗಳು, ೧೯, ೫೪ ; **ಭ.ಗೀ.** ವಿಷಯದ ಅರಿವನ್ನುಂಟುಮಾಡುವ ಇಂದ್ರಿಯಗಳು, ೧೬೬, ೭೮೦ ; **ಶಾಂ. ನಿ.** ಜ್ಞಾನೇಂದ್ರಿಯಗಳು, ಚಕ್ಷುರಾದಿಗಳು.

**ಬೋಧಃ - ನೈ.** (೧) ಜ್ಞಾನ. ಆತ್ಮನಿಗೆ ಅಹಂಕಾರವು ಧರ್ಮವಾಗಿದ್ದರೆ ಬೋಧದಂತೆ ಅದೂ ನಿತ್ಯವಾಗಿರಬೇಕಿತ್ತು , ೨-೩೩; (೨) **ಸಮ್ಯಜ್ಞಾನ.** ಜ್ಞಾನಕ್ಕಿಂತ ಮೊದಲೇ ಮತ್ತೊಂದು ದೇಹದ ದುಃಖವಿರುವದಿಲ್ಲ ; ಜ್ಞಾನವಾದಮೇಲೆ ಯಾವ ದುಃಖವೂ ಇರುವದಿಲ್ಲ , ೨-೯೦; (೩) ಚೈತನ್ಯ. ಬೋಧಸ್ವರೂಪನೇ ಆಗಿರುವ ಆತ್ಮನನ್ನು ಹೇಳುವದರಿಂದ ಶ್ರುತಿಯು ಅಧಿಕಾರಿಗೆ ಅನುಭವವನ್ನುಂಟುಮಾಡಿಯೇ ತೀರುತ್ತದೆ. ೩-೩೮.

**ಬೋದ್ಧೃತ್ವಮ್ - ನೈ.** ಜ್ಞಾತೃತ್ವ. ಆತ್ಮನು ಕೂಟಸ್ಥಬೋಧದಿಂದ ಬೋದ್ಧೃ ; ಆದರ ಸಂಬಂಧದಿಂದ ಬುದ್ಧಿಯು ಬೋದ್ಧೃ, ೩-೧೫; ಆತ್ಮನಿಗಿರುವ ಬೋಧವು ಅನಿಮಿತ್ತವಾಗಿರುತ್ತದೆ, ಬುದ್ಧಿಯ ಬೋದ್ಧೃತ್ವಕ್ಕೆ ಅದು ಕಾರಣವು, ೩-೧೧; ಬುದ್ಧಿಯ ಬೋದ್ಧೃತ್ವವು ಪ್ರತ್ಯಯದ ಉತ್ಪತ್ತಿಯಿಂದ ಆತ್ಮನಿಗೆ ಸ್ವಾಭಾವಿಕ, ೩-೧೯.

**ಬೋಧಾಬೋಧಾತ್ಮಕಂ ತತ್ತ್ವಮ್ - ಕಠ.** ಜ್ಞಾನರೂಪವಾಗಿಯೂ ಜಡ ರೂಪವಾಗಿಯೂ ಇರುವ ಮಹತ್ತತ್ತ್ವ, ೯೮.

# ಭ

**ಭಕ್ತಿಃ** - ಬ್ರ.ಸೂ-೧. ಗೌಣವೃತ್ತಿ, ೨೫೫ ; **ಛಾಂ.** ಸಾಮದ ಅವಯವ, ಪ್ರಸ್ತಾವ, ಉದ್ಗೀಥ - ಮುಂತಾದವು, ೭, ೧೦೬, ೧೩೩, ೧೩೫, ೧೩೬ ; **ಶಾಂ. ನಿ.** ಆರ್ತಾದಿಗಳು ಭಗವಂತನಲ್ಲಿ ಮಾಡುವ ಪ್ರೇಮ ; ಜ್ಞಾನಿಯು ಮಾಡುವ ಪರಭಕ್ತಿ ಎಂಬ ಜ್ಞಾನನಿಷ್ಠೆ, ಗೀ. ಭಾ. ೧೮-೫೪.

**ಭಗವತ್ತತ್ತ್ವಮ್** - ಭ.ಗೀ. ಭಗವಂತನ ಪರಮಾರ್ಥಸ್ವರೂಪ, ೪೭೫, ೮೯೧, ೯೨೪, ೯೨೫, ೧೧೩೬.

**ಭಗವಾನ್** - ಬ್ರ.ಸೂ-೧. ಪೂಜ್ಯರಾದ. (ಸೂತ್ರಕಾರರು), ೨೧ ; (ಉಪವರ್ಷಾಚಾರ್ಯರು), ೩೮೯ ; **ಕಠ.** ಸೂಕ್ಷ್ಮವಿಚಾರಗಳನ್ನು ಬಲ್ಲ ಪೂಜ್ಯನು, ೧, ೬೬ ; **ಭ.ಗೀ.** ಐಶ್ವರ್ಯಾದಿಷಡ್ಗುಣವುಳ್ಳ, ಸರ್ವಜ್ಞನಾದ, ೧, ೨, ೪, ೯, ೧೦, ೧೧, ೧೨, ೧೫, ೪೪, ೪೬, ೫೪, ೧೪೨, ೧೪೯, ೧೫೨, ೨೧೬, ೪೮೭, ೫೪೩, ೫೬೬, ೬೦೧, ೬೧೮, ೭೨೬, ೭೫೪, ೮೪೫, ೯೧೬ ; ಪೂಜ್ಯರಾದ (ವ್ಯಾಸರು), ೨, ೪೪ ; **ಶಾಂ. ನಿ.** (೧) ಪೂಜ್ಯ ; (೨) ಐಶ್ವರ್ಯಾದಿಷಡ್ಗುಣವುಳ್ಳ ಸರ್ವಜ್ಞನಾದ ಭಗವಂತ.

**ಭರ್ತೃಪ್ರಪಂಚಃ** - ಬೃಹ-೧. ಆಚಾರ್ಯರು ಹೆಸರಿಸದೆ ಇದ್ದರೂ ಟೀಕೆಯಲ್ಲಿ ಪರಾಮರ್ಶಿಸಿರುವ ವೃತ್ತಿಕಾರರು ; ಆಚಾರ್ಯರು ಇವರನ್ನು ಅಲ್ಲಲ್ಲಿ ಖಂಡಿಸಿರುತ್ತಾರೆ, ೧೫೦, ೧೫೧, ೧೮೭ ; **ಬೃಹ-೨.** ಆಚಾರ್ಯರಿಗಿಂತ ಹಿಂದಿನ ಭೇದಾಭೇದವಾದಿಗಳಾದ ವೃತ್ತಿಕಾರರು, ೨೫, ೩೧ (?), ೪೭, ೫೨, ೫೬ (?), ೯೩, ೨೨೮, ೨೩೯ (?), ೨೭೩ (?), ೩೦೫, ೩೪೯.

**ಭಯಮ್** - ಬೃಹ-೨. ಅವಿದ್ಯೆ, ಅವಿದ್ಯಾಕಾರ್ಯವಾದ ಅಂಜಿಕೆ, ಸಂಸಾರ, ೧೫೨, ೧೫೬.

**ಭ್ರಮಃ, ಭ್ರಾನ್ತಿಃ** - ಬೃಹ-೨. ಸಂಸಾರಕ್ಕೆ ಕಾರಣವಾದ ತಪ್ಪುತಿಳಿವಳಿಕೆ, ಅವಿದ್ಯೆ, ೫೫, ೧೩೯.

**ಭಾಗವತಾಃ** - ಬ್ರ.ಸೂ-೨. ಪಾಂಚರಾತ್ರಾಗಮವನ್ನು ಒಪ್ಪಿರುವವರು. ಅವರ ಮತವು ಬಹುಮಟ್ಟಿಗೆ ವೇದಾಂತಸಮ್ಮತ, ೨-೮೨ ರಿಂದ ೮೪ ; ಅವರು ಹೇಳುವ ಜೀವೋತ್ಪತ್ತಿವಾದದ ಖಂಡನೆ, ೨-೮೪ ರಿಂದ ೮೬ ; ಆ ಮತದಲ್ಲಿ ಇತರ ದೋಷಗಳು, ೨-೮೭.

**ಭಾವಃ - ಮಾಂ.** ಪದಾರ್ಥ, ೭೬, ೭೭, ೮೧, ೯೬, ೯೯, ೧೦೦, ೨೮೬ ; ಭ.ಗೀ. ಅಂತಃಕರಣಾಶಯವು, ೬೧೭ ; ಬುದ್ಧಿಯೇ ಮುಂತಾದ ಭಾವಗಳು, ೬೦೮; ಸ್ವಭಾವ, ೪೭೩ ; ವಸ್ತುಗಳು, ೬೦೧, ೬೨೩ ; ಭಾವನೆ, ಅದರಲ್ಲಿರುವ ತಾತ್ಪರ್ಯ, ೬೧೨ ; **ಶಾಂ. ನಿ.** (೧) ಅಂತಃಕರಣಾಶಯ, ಗೀ. ಭಾ. ೧೦-೧೧ ; (೨) ಬುದ್ಧಿಯೇ ಮುಂತಾದ ಭಾವಗಳು, ಗೀ. ಭಾ. ೧೦-೪,೬ ; (೩) ಸ್ವಭಾವ ಗೀ. ಭಾ. ೭೨-೧೫ ; (೪) ವಸ್ತು, ಗೀ. ಭಾ. ೧೦-೧ ; (೫) ಭಾವನೆ, ಅದರಲ್ಲಿಯೇ ಅಭಿನಿವೇಶ, ಗೀ. ಭಾ. ೧೦-೮.

**ಭಾವನಾ - ಬೃಹ-೧.** ವಿಧಿಯ ಬಲದಿಂದ ಹೊಸದಾಗಿ ಏನನ್ನಾದರೂ ಉಂಟುಮಾಡಿಕೊಳ್ಳುವದು ; ಕರ್ಮದಂತೆ ಬ್ರಹ್ಮವಿದ್ಯೆಗೂ ಭಾವನೆಯುಂಟೆಂದು ಕೆಲವರು, ೧೩೫ ; ನೈ. ಭಾವನೆಯನ್ನು ಕೂಡಿಸಿಕೊಳ್ಳುವದರಿಂದ ಅಜ್ಞಾನವು ನಿಶ್ಶೇಷವಾಗಿ ಹೋಗುವದೆಂಬ ವಾದವು ಸರಿಯಲ್ಲ, ೧-೬೭; ಪ್ರಸಂಖ್ಯಾನವು ಅಭ್ಯಾಸದಿಂದ ಬೆಳೆಯುತ್ತದೆ ಎಂದರೆ ಅದು ಭಾವನೆಯ ಐಕಾಗ್ರ್ಯವೇ ಆಗುತ್ತದೆ, ಆಗ ಅದರ ಫಲವು ನಿಯತವಾಗಲಾರದು, ೩-೯೦ ರಿಂದ ೯೩.

**ಭಾವನಾಪರಿಪಾಕಃ - ಐತ.** ಸಂಚಿತವಾಸನೆಯು ಪಕ್ವವಾಗುವದು, ೮೦ ; ಭ.ಗೀ. ಜ್ಞಾನಸಾಧನಗಳ ಭಾವನೆಯು ಪಕ್ವವಾದದ್ದು ೭೮೮ ; **ಶಾಂ. ನಿ.** ಜ್ಞಾನಸಾಧನಗಳ ಭಾವನೆಯು ಪಕ್ವವಾದದ್ದು ; ಇದರಿಂದಲೇ ತತ್ತ್ವಜ್ಞಾನವುಂಟಾಗುವದು, ಭ. ಗೀ. ೧೩-೧೧.

**ಭಾವನಾವಿಜ್ಞಾನಮ್ - ಶಾಂ. ನಿ.** ಉಪಾಸನೆಯಿಂದಾಗುವ ಪ್ರತ್ಯಯವಿಶೇಷ, ಸಾಕ್ಷಾತ್ಕಾರ, ಸೂ. ಭಾ. ೪-೧-೧೨.

**ಭಾವರೂಪತ್ವಮ್ - ಐತ.** ಧರ್ಮರೂಪವಾಗಿರುವದು, ೪೫.

**ಭಾವವಿಕಾರಃ - ಬ್ರ.ಸೂ-೧.** ವಸ್ತುಗಳಿಗೆ ಆಗುವ ಹುಟ್ಟು ಮುಂತಾದ ವಿಕಾರಗಳು, ೨೫ ; **ಮುಂ.** ಪದಾರ್ಥಗಳಿಗೆ ಆಗುವ ಹುಟ್ಟು, ಇರವು, ಮಾರ್ಪಾಡು ಮುಂತಾದ ಆರು ವಿಕಾರಗಳು, ೫೩ ; **ಮಾಂ.** ವಸ್ತುಗಳಿಗೆ ಆಗುವ ಹುಟ್ಟು, ಇರವು, ಬೆಳವಣಿಗೆ ಮುಂತಾದ ವಿಕಾರಗಳು, ೫೩ ; ಭ.ಗೀ. ವಸ್ತುಗಳಿಗೆ ಆಗುವ ಹುಟ್ಟುವಿಕೆ, ಬೆಳೆಯುವಿಕೆ - ಮುಂತಾದ ಮಾರ್ಪಾಡು ೪೦, ೪೨, ೪೫, ೪೭೯, ೮೨೮.

**ಭಾವವಿಕಾರಾಃ - ಶಾಂ. ನಿ.** ವಸ್ತುವಿನಲ್ಲಿ ಆಗುವ ಹುಟ್ಟುವದು, ಇರುವದು, ಬೆಳೆಯುವದು, ಮುಂತಾದ ಆರು ವಿಕ್ರಿಯಗಳು.

**ಭಾವಾಃ - ಮುಂ.** ಜೀವರುಗಳು, ೫೧.

**ಭಾವಾಭಾವೌ** - ನೈ. ನಾನು ದೇಹಾದಿಗಳು - ಎಂಬ ಭಾವಜ್ಞಾನ, ನಾನು ದೇಹಾದಿಗಳಲ್ಲ ಎಂದು ಅನುಮಾನದಿಂದಾಗುವ ಅಭಾವಜ್ಞಾನ-ಇವೆರಡನ್ನೂ ವಾಕ್ಯವು ತೊಲಗಿಸುತ್ತದೆ, ೩-೧೧೩ ರಿಂದ ೧೧೫; **ತತ್ತ್ವಮಸಿವಾಕ್ಯ**ದಿಂದ ಭಾವಾಭಾವಗಳ ನಿತ್ಯ ಸಾಕ್ಷಿಯಾಗಿರುವ ಆತ್ಮನನ್ನು ಅರಿತುಕೊಳ್ಳಬೇಕು, ೪-೮.

**ಭಾವಾತ್ಮಕಮ್** - ಐತ. ಇರುವ ವಸ್ತುರೂಪ, ಇಲ್ಲದ ಅಭಾವ-ರೂಪವಲ್ಲ, ೧೩.

**ಭಿಕ್ಷಾ** - **ಶಾಂ. ನಿ.** ಪರಮಹಂಸಪರಿವ್ರಾಜಕನಿಗೆ ತನ್ನದೆಂಬ ವಸ್ತುವಿಲ್ಲದ್ದರಿಂದ ಆಹಾರಾರ್ಥವಾಗಿ ಅವನು ಬೇಡಿ ತೆಗೆದುಕೊಳ್ಳುವ ಪದಾರ್ಥ.

**ಭಿಕ್ಷಾಚರ್ಯಮ್, ಭಿಕ್ಷಾಟನಮ್** - **ಐತ.** ತನ್ನದೆಂಬುದಿಲ್ಲದ್ದರಿಂದ ಸಂನ್ಯಾಸಿಯು ಮಾಡುವ ಭಿಕ್ಷಾಟನ, ೭, ೧೫, ೧೬.

**ಭಿಕ್ಷಾಚರಣಮ್** - **ಛಾಂ.** ಸಂನ್ಯಾಸಿಯು ಭಿಕ್ಷೆಯಿಂದ ಆಹಾರವನ್ನು ಸಂಪಾದಿಸುವದು, ೧೮೧.

**ಭಿಕ್ಷುಕಃ** - **ಛಾಂ.** ಸಂನ್ಯಾಸಿ, ೧೮೨.

**ಭಿನ್ನಸಾಕ್ಷಿಕ, ಭಿನ್ನಸಾಧನ** - **ನೈ.** ಗ್ರಾಹಕಾದಿಗಳೂ ತಮಗಿಂತ ಬೇರೆಯಾದ ಸಾಕ್ಷಿಯಿಂದ ಸಿದ್ಧವಾಗುತ್ತವೆ, ೨-೧೦೬, ೧೦೯.

**ಭಿನ್ನಾಭಿನ್ನ** - **ನೈ.** ಬೇರೆಯೂ ಆಗಿ ಬೇರೆಯಲ್ಲದೆಯೂ ಇರುವದು. ಬ್ರಹ್ಮವು ನಮ್ಮ ಆತ್ಮನಿಗಿಂತ ಭಿನ್ನಾಭಿನ್ನವೆಂಬುದು ತನಗೆ ತಾನೇ ವಿರುದ್ಧವಾಗಿರುತ್ತದೆ, ಏಕೆಂದರೆ ಭಿನ್ನವಾಗಿದ್ದರೆ ಅಭಿನ್ನವಾಗಲೇ ಆರದು, ಈ ಪಕ್ಷದಲ್ಲಿ ಅಭಿನ್ನವಾಗಿರುವ ಬ್ರಹ್ಮಕ್ಕೆ ಎಲ್ಲರ ದುಃಖವೂ ಗಂಟುಬೀಳುತ್ತದೆ, ೧-೭೮.

**ಭೂತ** - **ಬ್ರ.ಸೂ-೨.** ಇರುವ ಪರಿನಿಷ್ಠಿತವಸ್ತು, ಭೂತವಸ್ತುಪರವಾದ ವೇದಭಾಗವೂ ಇದೆ, ೧-೫೪ ; ಬ್ರಹ್ಮಜಿಜ್ಞಾಸೆಗೆ ಭವ್ಯವಾದ, ಮುಂದೆ ಆಗಬೇಕಾಗಿರುವ, ಧರ್ಮವು ವಿಷಯವಲ್ಲ, ಭೂತವಾದ ಬ್ರಹ್ಮವೇ ವಿಷಯ, ೧-೧೨, ೪೦ ; **ಮಾಂ.** ಇರುವ, ನಿಜವಾಗಿರುವ (ವಸ್ತು), ೨೧೮, ೨೨೦, ೨೬೦ ; **ಶಾಂ. ನಿ.** (೧) ಇದ್ದುಕೊಂಡಿರುವ, ಮಾಂ. ಕಾ. ಭಾ. ೪-೪ (ಭಾ. ಭಾ. ೨೨೦) ; (೨) ಪರಮಾರ್ಥವಾದ, ಮಾಂ. ಕಾ. ೪-೨೫ (ಭಾ. ಭಾ. ೨೬೦).

**ಭೂತಮ್** - **ಭೂತವಸ್ತು** - **ಬ್ರ.ಸೂ-೧.** ಈಗಲೇ ಇರುವ (ವಸ್ತು), ೧೨, ೨೮, ೫೪ ; **ಬ್ರ.ಸೂ-೨.** ನಾಲ್ಕುಬಗೆಯ ಪ್ರಾಣಿಗಳಲ್ಲಿ ಒಂದು. ಭೂಮಿಯು

ಭೂತಗಳನ್ನು ಒಳಗೊಳ್ಳುವಂತೆ ಬ್ರಹ್ಮವು ಜಗತ್ತನ್ನು ಉಪಸಂಹಾರ ಮಾಡಿಕೊಳ್ಳುತ್ತದೆ, ೧-೩೯೮ ; ಭೂತಗಳು ಉಪಸಂಹಾರವಾದ ತಮ್ಮ ಧರ್ಮವನ್ನು ಭೂಮಿಗೆ ಅಂಟಿಸದ ಹಾಗೆ ಪ್ರಪಂಚವು ಲಯವಾದಾಗ ಬ್ರಹ್ಮಕ್ಕೆ ತನ್ನ ದೋಷವನ್ನು ಅಂಟಿಸದು, ೧-೪೨೨ ; ಬ್ರಹ್ಮಾದಿಸ್ಥಾವರಾಂತಭೂತಗಳ ಪ್ರಾಪ್ತಿಯು ಧರ್ಮಾ-ಧರ್ಮನಿಮಿತ್ತ, ೧-೪೨ ; ಪ್ರಜಾಪತಿಯು ಸರ್ವಭೂತಾಂತರಾತ್ಮನು, ೧-೨೦೪ ; ಆಕಾಶಾದಿಪಂಚಭೂತಗಳಲ್ಲಿ ಒಂದು. ಭೂತಗಳು ಬ್ರಹ್ಮದಿಂದಲೇ ಹುಟ್ಟುತ್ತವೆ, ೧-೧೧೯, ೧೨೩ ; ಭೂತಗಳ ಉತ್ಪತ್ತ್ಯಾದಿಗಳು ಬ್ರಹ್ಮಾಧೀನ, ೨-೧೧೪ ; ಶಾಂ. ನಿ. ಪರಮಾತ್ಮನನ್ನು ಶ್ರುತಿಯಲ್ಲಿ 'ಮಹದ್ ಭೂತಮ್' ಎಂದು ಕರೆದಿದೆ. ಮೂರು ಕಾಲಕ್ಕೂ ಇರುವದು ಎಂದರ್ಥ. ಬೃ. ಭಾ.

**ಭೂತಗ್ರಾಮಃ** - ಬ್ರ.ಸೂ-೧. ನಾಲ್ಕು ಬಗೆಯ ಪ್ರಾಣಿಗಳು, ೨೯೮, ೪೨೨.

**ಭೂತಧಾತುಃ** - ಬ್ರ.ಸೂ-೧. ಭೌತಿಕವಸ್ತು, ೩೦೨.

**ಭೂತಪ್ರಕೃತಿಃ** - ಬ್ರ.ಸೂ-೧. ಭೂತಗಳಿಗೆ ಕಾರಣ, (ಅವ್ಯಾಕೃತ), ೩೫೭.

**ಭೂತಮಾತ್ರಾಃ** - ಬ್ರ.ಸೂ-೧. ಭೂತಗಳ ತನ್ಮಾತ್ರೆಗಳು, ವಿಷಯಗಳು, ೧೪೨ ; ತೈ. ಭೂತಗಳ ಅಂಶಗಳು ೯೩.

**ಭೂತಮಾತ್ರಾಸಂಸರ್ಗಃ** - ಛಾಂ. ಭೂತಗಳ ಅಂಗದ ಸಂಬಂಧ, ೪೬೩ ; ಬೃಹ-೨. ಭೂತಗಳ ಅಂಶದ ಸಂಬಂಧ, (ಬಿಡಿಯರಿವಿಗೆ ಕಾರಣ), ೨೧೪, ೩೩೦.

**ಭೂತಯೋನಿಃ** - ಮುಂ. ಭೂತಗಳಿಗೆಲ್ಲ ಕಾರಣವಾದ ಬ್ರಹ್ಮ , ೧೯, ೨೦, ೨೩.

**ಭೂತವಸ್ತು** - ಶಾಂ. ನಿ.. ಸಿದ್ಧವಾಗಿರುವ ವಸ್ತು, ಧರ್ಮಾದಿಗಳಂತೆ ಸಾಧ್ಯವಾದದ್ದಲ್ಲ. ಸೂ. ಭಾ. ೧-೧-೨. ಇದಕ್ಕೆ ಪರಿನಿಷ್ಪನ್ನವಸ್ತು, ಪರಿನಿಷ್ಠಿತವಸ್ತು-ಎಂದೂ ಹೆಸರುಂಟು.

**ಭೂತಸೂಕ್ಷ್ಮಮ್, ಭೂತಪ್ರಕೃತಿಃ** - ಬ್ರ.ಸೂ-೧. ಭೂತಗಳ ಸೂಕ್ಷ್ಮಸ್ಥಿತಿ (ಅವ್ಯಾಕೃತ), ೨೦೧, ೩೩೮ ; ಬ್ರ.ಸೂ-೨. ಜಗತ್ತಿನ ನಾಮರೂಪಬೀಜಶಕ್ತಿಯಾದ ಅವ್ಯಾಕೃತ, ಇದರಲ್ಲಿ ಅಜಾತ್ವ ಕಲ್ಪನೆ, ೧-೩೫೭ ; ಅಕ್ಷರವೆಂಬ ಹೆಸರಿನ ಇದಕ್ಕಿಂತ ಹೆಚ್ಚಿನ ಅಕ್ಷರವು ಪರಮಾತ್ಮನು, ೧-೨೦೧ ; ಇದಕ್ಕೆ ಅವ್ಯಕ್ತವೆಂದೂ ಹೆಸರು, ೧-೪೩೮ ; ದೇಹಾಂತರಪ್ರಾಪ್ತಿಗೆ ಬೇಕಾದ ಭೂತಗಳ ಬೀಜ, ೨-೨೧೨, ೨೧೪, ೨೧೫ ; ಕಠ. ಭೂತಗಳ ಸೂಕ್ಷ್ಮರೂಪ, ೯೮ ; ಶಾಂ. ನಿ. (೧) ಭೂತಗಳ

ಸೂಕ್ಷ್ಮರೂಪ, ಸೂ. ಭಾ. ೩-೧-೧ ; ಅವ್ಯಾಕೃತವೆಂಬ ಜಗತ್ತಿನ ಕಾರಣರೂಪ, ಸೂ. ಭಾ. ೧-೨-೨೧.

**ಭೂತಾಕಾಶ, ಭೌತಿಕಾಕಾಶ** - **ಶಾಂ. ನಿ.** ಭೂತರೂಪವಾದ ಆಕಾಶವು, ಅವ್ಯಾಕೃತಾಕಾಶವಲ್ಲ.

**ಭೂತಾಕಾಶಮ್** - **ಬ್ರ.ಸೂ-೧.** ಮಹಾಭೂತಗಳಲ್ಲೊಂದಾದ ಆಕಾಶ, ೧೧೮, ೧೮೧, ೨೫೪, ೨೫೬, ೨೬೧, ೩೨೬.

**ಭೂತಾರ್ಥಾನುವಾದಃ** - **ಭ.ಗೀ.** ಇದ್ದದ್ದನ್ನೇ ಹೇಳಿಕೊಂಡಿರುವದು, ೨೭೭.

**ಭೂತಾನಿ** - **ಬ್ರ.ಸೂ-೧.** ಮಹಾಭೂತಗಳು. ಆಕಾಶಾದಿಗಳು, ೧೧೭, ೧೧೯,೧೨೨, ೧೨೩; ಜೀವಾವಿಷ್ಟವಾದ ಪ್ರಾಣಿಗಳು, ೧೨೩, ೨೦೪ ; **ತೈ.** ಪ್ರಾಣಿಗಳು ೧೨೮, ೧೨೯, ೨೦೬ ; **ಛಾಂ.** ಪ್ರಾಣಿಗಳು, ೪೬೧ ; **ಭ.ಗೀ.** ಬ್ರಹ್ಮಾದಿಯಾಗಿ ಸ್ಥಾವರದವರೆಗಿನ ಪ್ರಾಣಿಗಳು, ೨, ೬೦, ೧೮೧, ೨೩೮, ೩೦೪, ೪೨೬, ೬೦೦, ೬೦೮, ೬೨೧, ೮೨೮ ; ವಿನಾಯಕ ಮುಂತಾದವು, ೫೮೫, ೯೬೪ ; **ಶಾಂ. ನಿ.** (೧) ಪಂಚಭೂತಗಳು ; (೨) ಬ್ರಹ್ಮಾದಿಸ್ತಂಬ ಪರ್ಯಂತವಾದ ಪ್ರಾಣಿಗಳು.

**ಭೂತೇನ್ದ್ರಿಯಲಕ್ಷಣಾ ಮಾತ್ರಾಃ** - **ಬ್ರ.ಸೂ-೧.** ಭೂತಗಳು, ಇಂದ್ರಿಯಗಳು - ಎಂಬ ಮಾತ್ರೆಗಳು, ೩೮೬.

**ಭೂತೋಪದೇಶಃ** - **ಬ್ರ.ಸೂ-೧.** ಇರುವ ವಸ್ತುವನ್ನು ತಿಳಿಸುವದು, ೫೫.

**ಭೂಮಾ** - **ಕೇನ.** ಎಲ್ಲಕ್ಕೂ ಹೆಚ್ಚಿನ ಬ್ರಹ್ಮ, ೩೨, ೪೩.

**ಭೂಮಿಃ** - **ಭ.ಗೀ.** ಪೃಥಿವೀತನ್ಮಾತ್ರೆ, ೪೫೮, ಮನಸ್ಸಿನ ಅಂತಸ್ತು, ೪೩೫, ೫೧೨ ; **ಶಾಂ. ನಿ.** (೧) ನೆಲ, ಪ್ರಥಿವೀರೂಪವಾದ ಭೂತ ; (೨) ಮನಸ್ಸಿನ ಅಂತಸ್ತು. ಗೀ. ಭಾ. ೬-೩೫.

**ಭೇದಃ, ಭಿದಾ, ನಾನಾತ್ವಮ್** - **ನೈ.** ದ್ವೈತವು, ಬೇರೆಯಾಗಿರುವದು. ಬ್ರಹ್ಮದಲ್ಲಿ ನಾನಾತ್ವವಿದೆ ಎಂಬ ವಾದಿಗಳ ಪಕ್ಷದಲ್ಲಿ ಆ ಬ್ರಹ್ಮವು ಆತ್ಮನಿಗಿಂತ ಭಿನ್ನವಾದರೂ ಅಭಿನ್ನವಾದರೂ ಭಿನ್ನಾಭಿನ್ನವಾದರೂ ಜ್ಞಾನಕರ್ಮಸಮುಚ್ಚಯವು ಸಿದ್ಧಿಸುವದಿಲ್ಲ, ೧-೬೮ ರಿಂದ ೭೮; ನಾನಾತ್ವರೂಪವಾದ ದ್ವೈತವು ತನಗೆತಾನಾಗಲಿ ಅವಗತಿರೂಪದಿಂದಲಾಗಲಿ ಉಭಯರೂಪದಿಂದಾಗಲಿ ಸಿದ್ಧವಿಲ್ಲದ್ದರಿಂದ ಹುಸಿಯೇ, ೨-೧೧೨; ಅನಾತ್ಮಜ್ಞಾನವು ಭೇದಜ್ಞಾನವು, ಸಾಕ್ಷಿಜ್ಞಾನವು ಭೇದಾಭಾವಜ್ಞಾನವು - ಎಂಬ ವಿವೇಕವೂ ಅವಿದ್ಯಾಕಾರ್ಯವಾದ್ದರಿಂದ

ಚೈತನ್ಯೈಕಜ್ಞಾನದಿಂದ ತೊಲಗುವದು, ೩-೬; ಅಂತಃಕರಣದಲ್ಲಿರುವ ಬೋಧಪ್ರತ್ಯಕ್ಷ್ಯಗಳಿಗೆ ಭೇದವುಂಟು, ಆತ್ಮನಲ್ಲಿ ಅವಕ್ಕೆ ಭೇದವಿಲ್ಲ, ೩-೧೩, ೧೪.

**ಭೇದಾಃ - ಮಾಂ.** ಬೇರೆ ಬೇರೆಯಾಗಿ ಕಾಣುವ ಪದಾರ್ಥಗಳು, ೮೨, ೮೪, ೮೫, ೮೯, ೯೪, ೯೮, ೯೯, ೧೦೦.

**ಭೇದದೃಷ್ಟಿವಿಷಯಃ - ಬೃಹ-೧.** ಉಪಾಸ್ಯ , ಉಪಾಸಕ - ಎಂಬ ಭೇದದ ಅವಿದ್ಯಾದೃಷ್ಟಿಗೆ ವಿಷಯವಾದದ್ದು, ೨೬೦.

**ಭೋಕ್ತಾ - ಕಠ.** ಶರೀರ, ಇಂದ್ರಿಯಗಳು, ಮನಸ್ಸು - ಇವುಗಳಿಂದ ವಿಷಯಗಳನ್ನು ಅನುಭವಿಸುವ ಆತ್ಮ , ೮೯ ; **ಶಾಂ. ನಿ.** ಅನುಭವಿಸುವವನು. ಜೀವನು ಉಪಾಧಿಯಿಂದ ಭೋಕ್ತೃ ವಾಗಿರುತ್ತಾನೆ, ಕ. ಭಾ. ೧-೩-೪.

**ಭೋಕ್ತೃತ್ವಮ್ - ಪ್ರಶ್ನ.** ಅನುಭವಿಸುವ ಸ್ವಭಾವ, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮.

**ಭೋಕ್ತೃಭೋಗ್ಯವಿಭಾಗಃ - ಬ್ರ.ಸೂ-೧.** ಅನುಭವಿಸುವ ಜೀವರು, ಅನುಭವಿಸಲ್ಪಡುವ ವಿಷಯಗಳು - ಎಂಬ ವಿಂಗಡ, ೪೩೧.

**ಭೋಗಾಪವರ್ಗೌ - ಬ್ರ.ಸೂ-೧.** ಪ್ರಧಾನದಿಂದ ಪುರುಷರಿಗೆ ಆಗುವ ಸಂಸಾರಮೋಕ್ಷಗಳು, ೭೭ ; **ತೈ.** ಕರ್ಮಫಲದ ಭೋಗ ಮತ್ತು ಮುಕ್ತಿ ೧೦೮ ; **ಶಾಂ. ನಿ.** ಸಂಸಾರದ ಸುಖದುಃಖಭೋಗ, ಅವುಗಳಿಂದ ಬಿಡುಗಡೆ ಎಂಬ ರೂಪದ ಮೋಕ್ಷ - ಇವು.

**ಭೋಜ್ಯಾದ್ ವ್ಯಾವೃತ್ತಿಃ - ಬೃಹ-೧.** ಹಿರಣ್ಯಗರ್ಭಪದವಿಯಲ್ಲಿಯೂ ವಿರಕ್ತನಾಗಿರುವದು, ೧೫೦.

**ಭ್ರಾನ್ತಿಃ - ನೈ.** ಮೋಹ, ತಪ್ಪು ತಿಳಿವಳಿಕೆ. ಭ್ರಾಂತಿಯಿಂದ ಪ್ರಾಪ್ತವಾದದ್ದನ್ನು ಪಡೆಯುವದಕ್ಕೂ ಪರಿಹೃತವಾದದ್ದನ್ನು ಪರಿಹರಿಸಿಕೊಳ್ಳುವದಕ್ಕೂ ಯತ್ನಿಸುವದು, ೧-೩೧; ಭ್ರಾಂತಿಜ್ಞಾನವೇ ಕರ್ಮಕ್ಕೆ ಅಂಗ, ಪ್ರವರ್ತಕ, ೧-೨೯, ೬೦; ಅಜ್ಞಾನ ವಿದ್ದಾಗಲೇ ಭ್ರಾಂತಿಯಾಗುವದು, ೨-೩೧; ಆತ್ಮಭ್ರಾಂತಿಯು ಆಲಂಬನವಿಲ್ಲದೆ ಇರುವದರಿಂದ ವಿಚಾರಕ್ಕೆ ನಿಲ್ಲುವದಲ್ಲ, ೩-೬೬.

**ಭ್ರಾಂತಿದರ್ಶನಮ್ - ಮಾಂ.** ತಪ್ಪು ತಿಳಿವಳಿಕೆ, ೨೬೧.

**ಭ್ರಾಂತಿಪ್ರತ್ಯಯಃ - ಭ.ಗೀ.** ತಪ್ಪು ತಿಳಿವಳಿಕೆ, ೧೧೪೨ ; **ಶಾಂ. ನಿ.** ತಪ್ಪಾಗಿ ತಿಳಿಯುವ ಪ್ರತ್ಯಯ ; ಇದನ್ನು ಮಿಥ್ಯಾಜ್ಞಾನ, ಮಿಥ್ಯಾಪ್ರತ್ಯಯ - ಎಂದೂ

ಕರೆಯುತ್ತಾರೆ. ದೇಹಾದಿಗಳೇ ತಾನೆಂಬ ಮಿಥ್ಯಾಪ್ರತ್ಯಯದಿಂದಲೇ ಕರ್ತೃತ್ವ ಭೋಕ್ತೃತ್ವರೂಪವಾದ ಸಂಸಾರಾನರ್ಥವು. ಗೀ. ಭಾ. ೧೮-೬೭.

**ಭ್ರಾಂತಿವಿಜ್ಞಾನಾಧ್ಯಾರೋಪಿತ - ಬೃಹ-೧.** ಅಜ್ಞಾನದಿಂದ ಬ್ರಹ್ಮದಲ್ಲಿ ಹುಟ್ಟುಗಟ್ಟಿಕೊಂಡಿರುವ (ವಿಶೇಷಗಳು), ೧೫೦.

**ಭ್ರಾಮಕಮ್ - ಭ.ಗೀ.** ಸೂಜಿಗಲ್ಲು, ತಾನು ಕೆಲಸಮಾಡದೆ ಮತ್ತೊಂದನ್ನು ಕೆಲಸಮಾಡಿಸುವ ವಸ್ತುವಿಗೆ ದೃಷ್ಟಾಂತ, ೧೧೪೨ ; **ಶಾಂ. ನಿ.** ಸೂಜಿಕಲ್ಲು; ತಾನು ಕೆಲಸಮಾಡದೆ ಮತ್ತೊಂದನ್ನು ಕೆಲಸಮಾಡಿಸುವ ವಸ್ತುವಿಗೆ ದೃಷ್ಟಾಂತ, ಗೀ. ಭಾ. ೧೮-೬೬ (ಭಾ. ಭಾ. ೬೦೧).

# ಮ

**ಮನಃ - ಬ್ರ.ಸೂ-೧.** ಅಂತಃಕರಣ, ೮೫, ೨೫೫ ; ಮನಸ್ಸು ಉಪಾಧಿಯಾಗಿರುವ ಜೀವ, ೨೫ ; ಮನನಶಕ್ತಿಯುಳ್ಳ ಅಂತಃಕರಣ, ೨೬೪, ೨೬೬, ೩೩೬, ೩೩೭ ; **ಈಶ.** ಸಂಕಲ್ಪವಿಕಲ್ಪಾತ್ಮಕವಾದ ಅಂತಃಕರಣ, ೧೧ ; **ಕೇನ.** ಸಂಕಲ್ಪಿಸುವ ಅಂತಃಕರಣವೃತ್ತಿ, ಅಂತಃಕರಣ, ೧೦, ೧೩, ೧೫, ೧೮, ೨೪, ೩೪, ೫೫ ; **ಕಠ.** ಸಂಕಲ್ಪವಿಕಲ್ಪಗಳನ್ನು ಮಾಡುವ ಅಂತಃಕರಣವೃತ್ತಿ ; ಅಂತಃಕರಣವೆಂಬ ಅರ್ಥದಲ್ಲಿಯೂ ಈ ಶಬ್ದದ ಪ್ರಯೋಗವಾಗುತ್ತದೆ, ೮೮, ೮೯, ೯೦, ೧೨೬ ; **ಪ್ರಶ್ನ.** ಮನಸ್ಸು, ಅಂತಃಕರಣದ ಮನನವೃತ್ತಿ, ೭೨ ; **ಮುಂ.** ಸಮಷ್ಟಿಯ ಜ್ಞಾನಶಕ್ತಿ, ಅಂತಃಕರಣ, ೨೩, ೫೭ ; **ಮಾಂ.** ಮನನಮಾಡುವ ಅಂತಃಕರಣವೃತ್ತಿ, ೧೧ ; **ತೈ.** ಸಂಕಲ್ಪವನ್ನು ಮಾಡುವ ಅಂತಃಕರಣ, ೧೩೧ ; **ಬೃಹ-೧.** ನಾನಾವೃತ್ತಿಗಳುಳ್ಳ ಅಂತಃಕರಣ, ೨೧೨ ; **ಭ.ಗೀ.** ಸಂಕಲ್ಪವಿಕಲಾತ್ಮಕವಾದ ಅಂತಃಕರಣ, ೧೨೯, ೨೨೩, ೨೨೬, ೩೪೯, ೩೭೩, ೫೦೮, ೬೩೦, ೭೩೬, ೭೪೫, ೮೨೮ ; ಅಂತಃಕರಣ, ೩೬೦, ೪೦೦, ೪೦೨, ೪೨೦, ೪೨೨, ೪೨೩, ೪೩೫, ೫೧೬, ೭೦೯, ೭೨೭, ೭೩೬, ೯೦೭, ೯೭೪, ೯೮೦, ೧೦೫೫ ; ಮನಸ್ಸಿಗೆ ಕಾರಣವಾದ ಅಹಂಕಾರತತ್ತ್ವ, ೪೫೮ ; **ಶಾಂ. ನಿ.** (೧) ಸಂಶಯಸಂಕಲ್ಪವಿಕಲ್ಪಾದಿಗಳನ್ನು ಮಾಡುವ ಅಂತಃಕರಣ, ಸೂ. ಭಾ. ೨-೩.-೩೨.

**ಮನ ಉಪಾಧಿಕಃ - ಬ್ರ.ಸೂ-೧.** ಮನಸ್ಸೇ ಉಪಾಧಿಯಾಗುಳ್ಳ (ಜೀವ), ೨೫೫.

**ಮನನವಿಜ್ಞಾನೇ - ಛಾಂ.** ವಿಚಾರಮಾಡುವದು, ಅನುಭವಕ್ಕೆ ತಂದುಕೊಳ್ಳುವದು, ೫೯೪, ೬೦೧.

**ಮನಸೋ (ಜಪಃ) - ಶಾಂ. ನಿ.** ವಿಧಿಯಜ್ಞ, ಜಪಯಜ್ಞ, ಉಪಾಂಶು - ಇವುಗಳೆಲ್ಲಕ್ಕಿಂತಲೂ ಹೆಚ್ಚಿನ ಸಾಧನವಾದ ಜ್ಞಾನಯಜ್ಞವು, ಗೀ. ಭಾ. ೧೮-೭೦.

**ಮನಃಸ್ಪಂದನಮ್ - ಮಾಂ.** ಮನಸ್ಸಿನ ವ್ಯಾಪಾರ, ೧೪.

**ಮನುಃ - ಬೃಹ-೧.** ವಿರಾಟ್ಪುರುಷನಿಂದ ಹುಟ್ಟಿದ (ಪ್ರಜಾಪತಿ), ೧೦೭, ೧೦೮.

**ಮನುಷ್ಯಪಿತೃದೇವಲೋಕಾಃ - ಐತ.** ಕರ್ಮಿಗಳೂ ಉಪಾಸಕರೂ ಪಡೆಯುವ ಮೂರು ಲೋಕಗಳು, ೨೦.

**ಮನುಷ್ಯಾಃ - ಶಾಂ. ನಿ.** ಶಾಸ್ತ್ರಕ್ಕೆ ಮನುಷ್ಯರೇ ಅಧಿಕಾರಿಗಳು ಎಂಬ ಮೀಮಾಂಸಕರ ಪಕ್ಷವನ್ನು ಆಚಾರ್ಯರೂ ಒಪ್ಪಿರುತ್ತಾರೆ ; ಕರ್ಮಗಳಿಗೆ ತ್ರೈವರ್ಣಿಕರೇ ಅಧಿಕಾರಿ ಗಳೆಂಬ ಅಭಿಪ್ರಾಯದಿಂದ ಅವರನ್ನು ಮಾತ್ರ ಮನುಷ್ಯರೆಂದು ಕರೆದಿರುತ್ತಾರೆ (ಸೂ. ಭಾ. ೧-೩-೨೫) ಗೀ. ಭಾ. ೪-೧೧.

**ಮನುಷ್ಯಾದಿಹಿರಣ್ಯಗರ್ಭಪರ್ಯನ್ತಾಃ, ಮನುಷ್ಯಾದಿಬ್ರಹ್ಮಾನ್ತಾಃ - ಬ್ರ.ಸೂ-೧.** ಮನುಷ್ಯನಿಂದ ಹಿಡಿದು ಬ್ರಹ್ಮನವರೆಗಿನ ಪ್ರಾಣಿಗಳು, ೪೨, ೨೯೪.

**ಮನುಷ್ಯಾದಿಹಿರಣ್ಯಗರ್ಭಪರ್ಯನ್ತಾನಿ - ಶಾಂ. ನಿ.** ಮನುಷ್ಯನಿಂದ ಹಿಡಿದು ಹಿರಣ್ಯ ಗರ್ಭನವರೆಗಿನ ಭೂತಗಳು ಮೇಲುಮೇಲಕ್ಕೆ ಹೋದಂತೆ ಜ್ಞಾನೈಶ್ವರ್ಯಾದಿಗಳು ಹೆಚ್ಚುತ್ತಾ ಹೋಗಿರುವವು, ಸೂ. ಭಾ. ೧-೩-೩೦.

**ಮನುಷ್ಯಾದಿಸ್ತಂಬಪರ್ಯನ್ತಾಃ, ಮನುಷ್ಯಾದಿನಾರಕಸ್ಥಾವರಾನ್ತಾಃ - ಬ್ರ.ಸೂ-೧.** ಮನುಷ್ಯನಿಂದ ಹಿಡಿದು ಸ್ಥಾವರದವರೆಗಿನ ಕೆಳಗಿನ ಅಂತಸ್ಥಿನ ಪ್ರಾಣಿಗಳು, ೪೨, ೨೯೪.

**ಮನುಷ್ಯಾದಿಸ್ತಂಬಪರ್ಯನ್ತಾನಿ - ಶಾಂ. ನಿ.** ಮನುಷ್ಯಾದಿಸ್ಥಾವರದವರೆಗಿನ ಪ್ರಾಣಿಗಳು. ಇವರಲ್ಲಿ ಜ್ಞಾನ, ಐಶ್ವರ್ಯ - ಮುಂತಾದವು ಕಡಿಮೆ ಕಡಿಮೆಯಾಗುತ್ತಾ ಬಂದಿರುವದು ಕಾಣುತ್ತದೆ. ಸೂ. ಭಾ. ೧-೩-೩೦.

**ಮನ್ದಬ್ರಹ್ಮವಿದಃ - ಕಠ.** ಬ್ರಹ್ಮವನ್ನು ಚೆನ್ನಾಗಿ ಅರಿಯದವರು. ಅಪರಬ್ರಹ್ಮವನ್ನು ಉಪಾಸನೆಮಾಡುವವರು, ೧೮೩ ; **ಪ್ರಶ್ನ.** ಅಲ್ಪಬ್ರಹ್ಮವನ್ನು ಬಲ್ಲವರು, ಬ್ರಹ್ಮದ ನಿಜವನ್ನು ಅರಿಯದವರು, ೬೩ ; **ಶಾಂ. ನಿ.** ಬ್ರಹ್ಮವನ್ನು ಸರಿಯಾಗಿ ತಿಳಿದುಕೊಳ್ಳದೆ ಇರುವವರು, ಅಪರಬ್ರಹ್ಮವನ್ನೇ ಉಪಾಸನೆ ಮಾಡುವವರು, ಕ. ಭಾ. ೨-೩-೧೫.

**ಮನ್ದಮಧ್ಯಮಧಿಯಃ, ಮನ್ದಮಧ್ಯಮದೃಷ್ಟಯಃ** - ಮಾಂ. ಬ್ರಹ್ಮಜ್ಞಾನಕ್ಕೆ ಅಧಮಾಧಿಕಾರಿಗಳು ಮತ್ತು ಮಧ್ಯಮಾಧಿಕಾರಿಗಳು ; ಓಂಕಾರವನ್ನು ಬ್ರಹ್ಮಕ್ಕೆ ಪ್ರತೀಕವಾಗಿ ಅಥವಾ ವಾಚಕವಾಗಿ ಉಪಯೋಗಿಸುವ ಸಾಧಕರು, ೬೮, ೧೫೯.

**ಮನ್ತ್ರಾವೃತ್ತಿಃ, ಮಾನಸೋ ಜಪಃ** - ತೈ. ಮಂತ್ರವನ್ನು ಮನಸ್ಸಿನಲ್ಲಿಯೇ ಮತ್ತೆ ಮತ್ತೆ ತಿರುಗಿಸುವದು ೧೩೧, ೧೩೩.

**ಮನೋನಿಗ್ರಹಃ** - ಮಾಂ. ಬ್ರಹ್ಮಜ್ಞಾನಕ್ಕಾಗಿ ಮನಸ್ಸನ್ನು ಹಿಡಿತದಲ್ಲಿಡುವದು, ೨೦೦, ೨೦೧, ೨೦೨, ೨೧೦.

**ಮನೋಮಯಃ** - ಮುಂ. ಮನೋವೃತ್ತಿಗಳಿಂದ ತಿಳಿಯಬರುವ ಆತ್ಮ, ೮೧; ತೈ. ಪ್ರಾಣಮಯದೊಳಗಿರುವ ಕೋಶ ೧೩೧, ೧೩೭ ; ಮನಸ್ಸಿನಿಂದ ಉಪಾಸ್ಯನಾಗಿರುವ, ಮನಸ್ಸಿನ ಅಭಿಮಾನಿಯಾದ (ಹಿರಣ್ಯಗರ್ಭ) ೪೦, ೪೩, ೪೫.

**ಮನೋರಥಃ** - ಮಾಂ. ಮನಸ್ಸಿನಲ್ಲಿಯೇ ಕಲ್ಪಿಸಿಕೊಳ್ಳುವದು, ೮೫, ೯೦, ೯೬, ೯೭ ; ಶಾಂ. ನಿ. ಮನಸ್ಸಿನಲ್ಲಿಯೇ ಭಾವಿಸಿಕೊಳ್ಳುವದು, ಮಾಂ. ಕಾ. ಭಾ. ೨-೧೩.

**ಮನೋವಿಕಲ್ಪನಾ** - ಮುಂ. ಮನಸ್ಸಿನಿಂದ ವಿಕಲ್ಪಿಸಿದ ಹುಸಿತೋರಿಕೆ, ೧೧೩ ; ಶಾಂ. ನಿ. ಮನಸ್ಸಿನಿಂದ ಕಲ್ಪಿಸಿ ಹೊರಗಿದೆ ಎಂದು ಭಾವಿಸುವ ಭ್ರಾಂತಿಯ ತೋರಿಕೆಗಳು, ಹಗ್ಗದ ಹಾವು ಮುಂತಾದವು. ಪ್ರಾತಿಭಾಸಿಕವಾದ ದೃಶ್ಯಗಳು ಅವಿದ್ಯೆಯಿಂದ ಉತ್ಪನ್ನವಾಗುವವೆಂಬ ಈಚಿನ ವೇದಾಂತಿಗಳ ಮತವು ಭಾಷ್ಯದಲ್ಲಿಲ್ಲ. ಮಾಂ. ಕಾ. ಭಾ. ೨-೩೨.

**ಮಮ** - ನೈ. ನನ್ನದೆಂಬ ಅಭಿಮಾನ. ಇದು ಅನಾತ್ಮಧರ್ಮ, ೨-೨೨; ನಾನೆಂಬ ಬುದ್ಧಿ ಹೋದರೆ ನನ್ನದೆಂಬುದೂ ಹೋಗಿಬಿಡುತ್ತದೆ, ೨-೩೦; ಜ್ಞಾತೃವಿಗೆ ಇದು ಎಂಬ ಅರಿವೂ ವಿಷಯದ ಉಪಕಾರಾಪಕಾರಗಳಿಂದಾದ ಅಹಂಕಾರದ ವಿಕಾರದಿಂದ ನನ್ನದೆಂಬ ಅರಿವೂ ಆಗುತ್ತವೆ, ೩-೬೧; ಸುಷುಪ್ತಿಯಲ್ಲಿ ಈ ಎರಡು ಅರಿವುಗಳೂ ಇರುವದಿಲ್ಲ , ೩-೬೨; ಶ್ರುತಿವಾಕ್ಯದಿಂದ ನಾನುನನ್ನದೆಂಬಿವು ಆತ್ಮನಲ್ಲಿಲ್ಲವೇ ಇಲ್ಲವೆಂಬ ಬುದ್ಧಿಯುಂಟಾಗುವದು, ೨-೧೧೭.

**ಮಹತ್ತತ್ತ್ವಮ್** - ತೈ. ಮೊದಲು ಹುಟ್ಟಿದ ಹಿರಣ್ಯಗರ್ಭನ ಬುದ್ಧಿ, ೧೩೯; ಭ.ಗೀ. ಅಹಂಕಾರಕ್ಕೆ ಕಾರಣವಾಗಿರುವ ಮಹತ್ ಬುದ್ಧಿ - ಎಂಬ ಹೆಸರಿನ ತತ್ತ್ವ, ೪೫೮.

**ಮಹದಾದಯಃ, ಮಹದಾದ್ಯಾಃ** - ಬ್ರ.ಸೂ-೧. ಮೂಲ ಕಿಯಿಂದುಂಟಾಗುವ ಕಾರ್ಯಗಳು, ೩೩., ೩೫೮.

**ಮಹದಾದಯಃ** - ಪ್ರಶ್ನ. ಪ್ರಧಾನದಿಂದ ಉಂಟಾಗುವದೆಂದು ಸಾಂಖ್ಯರು ಹೇಳುವ ಮಹತ್ತು, ಅಹಂಕಾರ, ತನ್ಮಾತ್ರೆಗಳು, ೧೦೧, ೧೦೫.

**ಮಹದಹಙ್ಕಾರತನ್ಮಾತ್ರಾದಯಃ, ಮಹದಾದಯಃ** - ಭ.ಗೀ. ಪ್ರಕೃತಿಯ ಕಾರ್ಯಗಳಾದ ಮಹತ್ತುಮುಂತಾದವು, ೪೫೮, ೭೮೨, ೮೩೪, ೮೬೮.

**ಮಹಾನ್** - ಬ್ರ.ಸೂ-೧. ಹಿರಣ್ಯಗರ್ಭನ ಬುದ್ಧಿ, ೩೩೭, ೩೩೯, ೩೪೧ ; ಜೀವ, ೩೩೭, ೩೪೦.

**ಮಹಾನ್ ಆತ್ಮಾ** - ಬ್ರ.ಸೂ-೨. ದೊಡ್ಡ ಆತ್ಮ. ಇದು ಸಾಂಖ್ಯರ ಮಹತ್ತತ್ತ್ವವಲ್ಲ, ಹಿರಣ್ಯಗರ್ಭನ ಬುದ್ಧಿ ಅಥವಾ ಜೀವ, ೧-೩೩೭ ; ಕಠದಲ್ಲಿ ಇದಕ್ಕೆ ಹಿರಣ್ಯಗರ್ಭನ ಬುದ್ಧಿಯೆಂದು ಅರ್ಥಮಾಡಿದಾಗ ಅವ್ಯಕ್ತವೆಂದರೆ ಮಾಯೆ ; ಜೀವನೆಂದು ಅರ್ಥಮಾಡಿದಾಗ ಅವಿದ್ಯೆ, ೧-೩೩೯ ರಿಂದ ೩೪೧ ; ಕಠ. ಅವ್ಯಕ್ತದಿಂದಾಗಿರುವ ಚಿದ್ರೂಪಜಡರೂಪಗಳ ಒಟ್ಟು ; ಹಿರಣ್ಯಗರ್ಭನ ಬುದ್ಧಿ, ೯೮, ೧೦೩, ೧೬೯ ; ಶಾಂ. ನಿ. ಭೋಕ್ತೃವಾದ ಜೀವ, ಅಥವಾ ಹಿರಣ್ಯ ಗರ್ಭನ ಬುದ್ಧಿ, ಸೂ. ಭಾ. ೧-೪-೧.

**ಮಹಾಕಾಶಃ** - ಬ್ರ.ಸೂ-೧. ಘಟಾಕಾಶವೇ ಮುಂತಾದ ವಿಭಾಗಗಳಾಗಿ ಕಲ್ಪಿತವಾಗಿರುವ ದೊಡ್ಡ ಆಕಾಶ, ೧೯೫, ೨೩೨, ೪೩೪.

**ಮಹಾಪ್ರಲಯಃ** - ಬ್ರ.ಸೂ-೧. ಎಲ್ಲವೂ ಸಂಪೂರ್ಣವಾಗಿ ನಾಶವಾಗುವ ಪ್ರಲಯ, ದೈನಂದಿನಪ್ರಲಯವಲ್ಲ, ೨೯೪ ; ಶಾಂ. ನಿ. ಎಲ್ಲವೂ ಸಂಪೂರ್ಣವಾಗಿ ನಾಶವಾಗುವ ಸ್ಥಿತಿ, ಅವಾಂತರಪ್ರಲಯವಲ್ಲದ ಸ್ಥಿತಿ, ಸೂ. ಭಾ. ೧-೩-೩೦.

**ಮಹಾಮಾಯಮ್** - ಬ್ರ.ಸೂ-೧. ಹೆಚ್ಚಿನ ಮಾಯಾಶಕ್ತಿಯುಳ್ಳ ಬ್ರಹ್ಮ, ೪೭೭.

**ಮಹಾಭೂತಾನಿ** - ಪ್ರಶ್ನ. ಸ್ಥೂಲವಾದ ಪೃಥ್ವಿಯೇ ಮುಂತಾದ ಐದು ಭೂತಗಳು, ೨೫, ೧೧೨ ; ಭ.ಗೀ. ಸೂಕ್ಷ್ಮಭೂತಗಳು, ೭೮೦ ; ಶಾಂ. ನಿ. ಸ್ಥೂಲಭೂತಗಳು, ಎಲ್ಲಾ ಭೂತಗಳ ಬೆರಕೆಯುಳ್ಳವಾಗಿ ಗೋಚರವಾಗುವ ಭೂತಗಳು, ಪ್ರ. ಭಾ. ೬-೪. ಸೂಕ್ಷ್ಮಭೂತಗಳಾದ ತನ್ಮಾತ್ರೆಗಳು, ಗೀ. ಭಾ. ೧೩-೫.

**ಮಹಾವಾಕ್ಯಮ್** - ಬ್ರ.ಸೂ-೧. ಒಟ್ಟುವಾಕ್ಯ, ಒಳವಾಕ್ಯವನ್ನು ಸೇರಿಸಿಕೊಂಡಿರುವ ವಾಕ್ಯ, ೩೦೩ ; **ಶಾಂ.** ನಿ. (೧) ಎರಡು ಮೂರು ಒಳತಾತ್ಪರ್ಯವುಳ್ಳ ಅವಾಂತರ ವಾಕ್ಯಗಳು ಸೇರಿ ಒಂದು ಮಹಾವಾಕ್ಯವಾಗುವದು. ಮಹಾವಾಕ್ಯದಲ್ಲಿ ಮುಖ್ಯ ತಾತ್ಪರ್ಯವಿದ್ದರೂ ಅವಾಂತರವಾಕ್ಯಗಳು ಪ್ರಮಾಣಾಂತರಸಿದ್ಧವಲ್ಲದ ಪ್ರಮಾಣಾಂತರವಿರುದ್ಧವಲ್ಲದ ಅಭಿಪ್ರಾಯವನ್ನು ತಾತ್ಪರ್ಯದಿಂದ ಹೇಳಬಹುದು. ಸೂ. ಭಾ. ೧-೩-೩೩. (**'ತತ್ತ್ವಮಸಿ'** ಮುಂತಾದವುಗಳನ್ನು ಮಹಾವಾಕ್ಯವೆಂಬ ಹೆಸರಿನಿಂದ ಕರೆದಿರುವುದು ಭಾಷ್ಯದಲ್ಲಿ ಕಂಡುಬರುವದಿಲ್ಲ.)

**ಮಹಾಸರ್ಗಮಹಾಪ್ರಲಯೌ** - ಬ್ರ.ಸೂ-೧. ಇಡಿಯ ಜಗತ್ತು ಹುಟ್ಟುವದು, ಅಡಗುವದು ; ೨೯೫.

**ಮಹಾಸುಪ್ತಿ** - **ಶಾಂ.** ನಿ. ದೊಡ್ಡನಿದ್ರೆ, ಅವ್ಯಕ್ತವೆಂಬ ನಾಮರೂಪಗಳ ಅವ್ಯಾಕೃತಾವಸ್ಥೆ ಮಾಯೆ. ಸೂ. ಭಾ. ೧-೪-೩.

**ಮರೀಚ್ಯುದಕಮ್** - **ಪ್ರಶ್ನ.** ಬಿಸಿಲುಕುದುರೆಯ ನೀರು, ನಿಜವಾದ ನೀರಲ್ಲದೆ ನೀರಿನಂತೆ ತೋರುವದು, ೬೭.

**ಮರೀಚಿಜಲಮ್, ಮರೀಚ್ಯುದಕಮ್** - ಭ.ಗೀ. ಬಿಸಿಲುಕುದುರೆಯ ನೀರು, ಹುಸಿತೋರಿಕೆ, ೨೮, ೮೯೫ ; **ಶಾಂ.** ನಿ. ಬಿಸಿಲು ಕುದುರೆಯಲ್ಲಿ ತೋರುವ ಹುಸಿತೋರಿಕೆಯ ನೀರು. ಜಗತ್ತು ಹುಸಿಯೆಂಬುದಕ್ಕೆ ದೃಷ್ಟಾಂತ, ಗೀ. ಭಾ. ೨-೧೬.

**ಮಹೇಶ್ವರಃ** - **ಐತ.** ಎಲ್ಲ ಈಶ್ವರರಿಗೂ ಈಶ್ವರನಾದ ಆತ್ಮ, ೪೬ ; **ಶಾಂ.** ನಿ. ಈಶ್ವರರಾದವರೆಲ್ಲರಿಗೂ ಈಶ್ವರನಾದ ಪರಮಾತ್ಮನು, ಗೀ. ಭಾ. ೧೩-೨೨. ಈಶ್ವರನೆಂದರೆ ಮಾಯಾವಿಶಿಷ್ಟನೆಂದೇ ಅರ್ಥಮಾಡಬೇಕೆಂಬ ನಿರ್ಬಂಧವು ಭಾಷ್ಯದಲ್ಲಿ ಕಾಣುವದಿಲ್ಲ.

**ಮಾರ್ಗಃ** - **ಶಾಂ.** ನಿ. ಕರ್ಮಿಗಳು ಫಲಭೋಗಕ್ಕೆ ಹೋಗುವ ಪಿತೃಯಾಣಮಾರ್ಗ ; ಉಪಾಸಕರು ಹೋಗುವ ದೇವಯಾನಮಾರ್ಗ. ಉಪಾಸಕರು ಮಾರ್ಗ ಚಿಂತನೆಯನ್ನೂ ಮಾಡಬೇಕು. ತೈ. ಭಾ. ೧-೬.

**ಮಾರ್ಗಯಾಚನಮ್** - **ಈಶ.** ಉಪಾಸಕನು ಬ್ರಹ್ಮಲೋಕಕ್ಕೆ ಹೋಗುವ ಮಾರ್ಗವನ್ನು ಬೇಡಿಕೊಳ್ಳುವದು, ೩೮, ೪೨.

**ಮಾನುಷವಿತ್ತಮ್** - **ಈಶ.** ಗೋವು ಮುಂತಾದವುಗಳು, ಅವುಗಳ ಸಹಾಯದಿಂದ ಮಾಡುವ ಕರ್ಮ, ೩೩.

**ಮಾನುಷಂ ವಿತ್ತಮ್** - ಬೃಹ-೧. ಗೋವು ಮುಂತಾದ - ಕರ್ಮಕ್ಕೆ ಸಾಧನವಾದ ವಿತ್ತ, ೧೯೮.

**ಮಾಯಾ** - ಬ್ರ.ಸೂ-೧. ಅವ್ಯಾಕೃತ, ೩೩೯, ೪೪೦ ; ಮಾಯೆ (ಕಣ್ಣು ಕಟ್ಟಿನವನು ತೋರಿಸುವ ದೃಶ್ಯ), ೩೯೮, ೪೨೪, ೪೫೪ ; ಬ್ರ.ಸೂ-೨. ಕಣ್ಣುಕಟ್ಟಿನ ವಿದ್ಯೆಯಿಂದ ತೋರುವ ಹುಸಿತೋರಿಕೆ. ಮಾಯಾವಿಯು ಮಾಯೆಯನ್ನು ನಿಲ್ಲಿಸಿ ಕೊಂಡಿರುವಂತೆ ಈಶ್ವರನು ಜಗತ್ತನ್ನು ನಿಲ್ಲಿಸಿಕೊಂಡಿರುತ್ತಾನೆ, ೧-೩೯೮ ; ಮಾಯಾವಿಗೆ ಮಾಯೆಯ ಸೋಂಕಿಲ್ಲದಂತೆಯೂ ಕನಸು ಕಾಣುವವನಿಗೆ ಕನಸಿನ ಮಾಯೆಯ ಸೋಂಕಿಲ್ಲದಂತೆಯೂ ಅವಸ್ಥಾತ್ರಯಮಾಯೆಯ ಸೋಂಕು ಸಾಕ್ಷಿಯಾದ ಆತ್ಮನಿಗಿಲ್ಲ, ೧-೪೨೪ ; ಕಲ್ಪಿತಮಾಯಾವಿಗಿಂತ ಪರಮಾರ್ಥ ಮಾಯಾವಿ ಬೇರೆಯಾಗಿರುವಂತೆ ಅವಿದ್ಯಾಕಲ್ಪಿತ ಜೀವನಿಗಿಂತ ಈಶ್ವರನು ಬೇರೆ, ೧-೧೦೪ ; ಪರಮೇಶ್ವರನಿಗೂ ಇಚ್ಛಾವಶದಿಂದ ಮಾಯಾಮಯರೂಪ-ವುಂಟಾಗಬಹುದು, ೧-೧೧೫ ; ಸ್ವಪ್ನವು ಮಾಯಾಮಾತ್ರ, ೧-೨೫೬ ಪ್ರಪಂಚವೆಲ್ಲವೂ ಮಾಯಾಮಾತ್ರವೇ, ೧-೨೫೯ ಕ್ಷಣಿಕವಿಜ್ಞಾನವು ಮಾಯೆ, ಸ್ವಪ್ನ, ಮರೀಚ್ಯುದಕ, ಗಂಧರ್ವನಗರ - ಮುಂತಾದವುಗಳ ಪ್ರತ್ಯಯಗಳಂತೆ ವಿಷಯರಹಿತವೆಂಬ ಬೌದ್ಧವಾದವು ಸರಿಯಲ್ಲ , ೨-೫೭, ೬೧ ; ಅವಿದ್ಯಾಕಲ್ಪಿತವಾದ ಅವ್ಯಾಕೃತ, ಇದರ ಬೀಜಶಕ್ತಿಯು ಮಾಯಾಮಯ, ೧-೩೩೯ ; ಮಾಯೆಯನ್ನು ಆತ್ಮನೆಂದಾಗಲಿ ಅಲ್ಲವೆಂದಾಗಲಿ ನಿರೂಪಿಸುವದಕ್ಕಾಗದೆ ಇರುವದರಿಂದ ಅವ್ಯಕ್ತವೆನ್ನುವರು, ೧-೩೩೯, ೪೪೦ ; ಒಬ್ಬನೇ ಆಗಿರುವ ಈಶ್ವರನಿಗೆ ಸ್ವಭಾವದಿಂದ ಔದಾಸೀನ್ಯವೂ ಮಾಯೆಯಿಂದ ಪ್ರವರ್ತಕತ್ವವೂ ಇರಬಹುದು, ೨-೯, ೧೫ ; ಮಹಾಮಾಯವಾಗಿರುವ ಬ್ರಹ್ಮದಲ್ಲಿ ಕಾರಣ ಧರ್ಮಗಳೆಲ್ಲ ಹೊಂದುತ್ತವೆ, ೧-೪೭೭ ; ಕಠ. ಕಣ್ಣುಕಟ್ಟಿನಿಂದ ತೋರುವ ವಸ್ತು, ೧೫೭, ೧೫೮ ; ಪರಮೇಶ್ವರನ ಮಾಯಾಶಕ್ತಿ, ೧೦೧ ; ಅವಿದ್ಯಾರೂಪದಿಂದ ತೋರಿಕೊಳ್ಳುವ ಮಾಯೆ, ೧೦೧ ; ಪ್ರಶ್ನ. ಮಿಥ್ಯಾಚಾರ, ೨೨ ; ಮಾಂ. ಹುಸಿಯಾಗಿ ತೋರುವ ನಾಮರೂಪಗಳು, ೨೯, ೩೧ ; ಇಂದ್ರಜಾಲ ಅಥವಾ ಅದರಿಂದ ತೋರುವ ವಸ್ತು, ೩೧, ೫೫, ೫೭ ; ೧೦೫, ೧೧೦, ೧೨೬, ೧೨೭ ; ಅವಿದ್ಯೆ, ೯೪, ೧೬೫, ೧೭೨, ೧೭೮, ೧೭೯, ೧೮೦, ೧೮೧ ; ಬೃಹ-೧. ಇಂದ್ರಿಯಪ್ರಜ್ಞೆ, ಮಿಥ್ಯಾಭಿಮಾನ, ೪೦೭ ; ಭ.ಗೀ. ಭಗವಂತನ ವಿಕಾರಕಾರಣಶಕ್ತಿ, ಪ್ರಕೃತಿ, ೨, ೨೦೮, ೨೩೮, ೪೫೮, ೪೭೧, ೪೭೨, ೪೭೩, ೮೯೨, ೮೯೫, ೮೯೬ ; ಮೋಸ, ೯೨೭, ೧೧೦೧ ; ಕಣ್ಣುಕಟ್ಟು, ೩೩, ೮೭೮, ೧೧೪೨ ; ಶಾಂ. ನಿ. (೧) ಕಣ್ಣುಕಟ್ಟು ಇಂದ್ರಜಾಲ, ಮಾಂ. ಕಾ. ೧-೧೭ ; (೨) ಅವಿದ್ಯಾಕಲ್ಪಿತವಾದ ನಾಮರೂಪಗಳು, ಇವು ಆತ್ಮನೂ ಅಲ್ಲ, ಆತ್ಮನಿಗಿಂತ ಬೇರೆಯೂ ಅಲ್ಲ; ಗೊತ್ತುಪಡಿಸಿ ಹೇಳುವದಕ್ಕೆ

ಬಾರದ ಹುಸಿತೋರಿಕೆಯಾಗಿವೆ. ಸೂ. ಭಾ. ೨-೧-೧೪. ಅವಿದ್ಯೆಯೇ, ಮಾಯೆ - ಎಂಬ ಉಪದೇಶವು ಭಾಷ್ಯದಲ್ಲಿಲ್ಲ, ಸೂ. ಭಾ. ೧-೪-೩ನ್ನು ನೋಡಿ.

**ಮಾಯಾತ್ಮಾ - ಮುಂ.** ಹುಸಿತೋರಿಕೆಯ ಆತ್ಮ, ಜೀವ, ೯೨ ; **ಶಾಂ. ನಿ.** ಹುಸಿತೋರಿಕೆಯ ಆತ್ಮ, ಜೀವ, ಮುಂ. ಭಾ. ೯೨.

**ಮಾಯಾನಿರ್ಮಿತಹಸ್ತೀ - ಭ.ಗೀ.** ಮಾಯೆಯಿಂದ ಹುಟ್ಟಿದ ಆನೆ, ಹುಸಿತೋರಿಕೆ, ೮೨೬.

**ಮಾಯಾಮಯ - ಬ್ರ.ಸೂ-೧.** ಹುಸಿಯಾದ (ಉಪಾಸ್ಯಬ್ರಹ್ಮರೂಪ), ೧೧೫ ; **ಶಾಂ. ನಿ.** ಹುಸಿತೋರಿಕೆಯ, ಗೀ. ಭಾ. ೪-೯, ೧೫-೧.

**ಮಾಯಾಮಯ, ಮಾಯಾರೂಪ - ಭ.ಗೀ.** ಹುಸಿತೋರಿಕೆಯ (ಜನ್ಮ), ೨೪೦. (ಸಂಸಾರವೃಕ್ಷ), ೮೯೨.

**ಮಾಯಾಮಯೀ ಮಹಾಸುಪ್ತಿಃ - ಬ್ರ.ಸೂ-೧.** ಮಾಯಾರೂಪವಾದ ನಿದ್ರೆ, ಅವ್ಯಾಕೃತಶಕ್ತಿ, ೩೩೯.

**ಮಾಯಾಮರೀಚ್ಯುದಕಗನ್ಧರ್ವನಗರಾಕಾರ (?) ಸ್ವಪ್ನಜಲಬುದ್ಬುದಫೇನ-ಸಮಾಃ - ಮುಂ.** ಮಾಯೆ, ಬಿಸಿಲುಕುದುರೆಯ ನೀರು, ಗಂಧರ್ವನಗರ, ಕನಸು, ನೀರುಗುಳ್ಳೆ, ನೊರೆ - ಇವುಗಳಂತೆ ಅಸತ್ಯ, ಅನಿತ್ಯ, ಅಶುಚಿಯಾಗಿರುವ ಲೋಕಗಳು, ೪೫.

**ಮಾಯಾವೀ - ಬ್ರ.ಸೂ-೧.** ಕಣ್ಣುಕಟ್ಟು ಮಾಡುವವ, (ಪರಮೇಶ್ವರನು ಜೀವರಿಗಿಂತ ಬೇರೆ ಎಂಬುದಕ್ಕೆ ದೃಷ್ಟಾಂತ, ೧೦೪, (ಪರಮೇಶ್ವರನು ಜಗತ್ತಿಗೆ ಸ್ಥಿತಿ-ಕಾರಣನೆಂಬುದಕ್ಕೆ ದೃಷ್ಟಾಂತ), ೩೯೮, (ಪರಮೇಶ್ವರನಿಗೆ ಸಂಸಾರದ ಸೋಂಕಿಲ್ಲವೆಂಬುದಕ್ಕೆ ದೃಷ್ಟಾಂತ), ೪೨೪, (ಪರಮೇಶ್ವರನು ಜಗತ್ತನ್ನು ಉಪಸಂಹಾರಮಾಡುತ್ತಾನೆಂಬುದಕ್ಕೆ ದೃಷ್ಟಾಂತ), ೪೫೪ ; **ಮಾಂ.** ಐಂದ್ರಜಾಲಿಕ, ೩೧, ೫೫, ೧೦೫, ೧೪೭, ೧೭೭.

**ಮಾಯಾಸಂವ್ಯವಹಾರಃ - ಭ.ಗೀ.** ಮಾಯೆಯಿಂದಾದ ವ್ಯವಹಾರದ ದೃಷ್ಟಿ, ೨೫೧ ; **ಶಾಂ. ನಿ.** ಅವಿದ್ಯೆಯಿಂದಾದ ವ್ಯವಹಾರ, ೪-೧೩.

**ಮಾಯೋಪಾಧಿಭೂತಾಃ - ಭ.ಗೀ.** ಹುಸಿಯಾದ ಉಪಾಧಿಗಳಾಗಿರುವ ಗುಣಗಳು, ೮೭೮ ; **ಶಾಂ. ನಿ.** ಹುಸಿಯಾದ ಉಪಾಧಿಯಾಗಿರುವ ಸತ್ತ್ವರಜ-ಸ್ತಮೋಗುಣಗಳು, ೧೪-೨೦.

**ಮಿಥ್ಯಾ - ಈಶ.** ಹುಸಿತೋರಿಕೆಯು, ೪ ; **ಮಾಂ.** ಹುಸಿತೋರಿಕೆ. ೮೬ ; **ಶಾಂ. ನಿ.** ಹುಸಿತೋರಿಕೆ, ಮಾಂ. ಕಾ. ಭಾ. ೨-೭.

**ಮಿಥ್ಯಾಜ್ಞಾನಮ್, ಮಿಥ್ಯಾಪ್ರತ್ಯಯಃ, ಮಿಥ್ಯಾಭಿಮಾನಃ. ಬ್ರ.ಸೂ-೧.** ತಪ್ಪುತಿಳಿವಳಿಕೆ, ಅಧ್ಯಾಸರೂಪವಾದ ಅವಿದ್ಯೆ, ೧, ೯, ೨೮, ೪೫, ೫೫, ೫೭, ೫೮, ೫೯, ೬೦, ೧೬೨, ೨೬೭.

**ಮಿಥ್ಯಾಜ್ಞಾನಮ್ - ಬ್ರ.ಸೂ-೨.** ತಪ್ಪುತಿಳಿವಳಿಕೆ, ಮಿಥ್ಯಾಪ್ರತ್ಯಯಃ, ಮಿಥ್ಯಾಭಿಮಾನಃ, ಮಿಥ್ಯಾಬುದ್ಧಿಃ - ಇವೆಲ್ಲ ಇದರ ಪರ್ಯಾಯಗಳು. ಮಿಥ್ಯಾಜ್ಞಾನದಿಂದ ವ್ಯವಹಾರ, ೧-೧ ; ಅಧ್ಯಾಸವು ಮಿಥ್ಯಾಪ್ರತ್ಯಯರೂಪ, ೧-೯ ; ಮಿಥ್ಯಾಜ್ಞಾನವು ತತ್ತ್ವಜ್ಞಾನಕ್ಕೆ ವಿಪರೀತ, ೧-೨೮ ; ಇದಕ್ಕೆ ಬ್ರಹ್ಮಾತ್ಮೈಕತ್ವಜ್ಞಾನದಿಂದ ನಿವೃತ್ತಿ, ೧-೪೫ ; ವಸ್ತೂಪದೇಶದಿಂದಲೂ ಸಂಸಾರಹೇತುವಾದ ಮಿಥ್ಯಾಜ್ಞಾನವು ತೊಲಗಬಹುದು, ೧-೫೫ ; ಅನಾತ್ಮವಾದ ದೇಹಾದಿಗಳಲ್ಲಿ ಆತ್ಮತ್ವಾಭಿಮಾನವು ಮಿಥ್ಯಾಬುದ್ಧಿಯಿಂದ, ೧-೫೯, ೬೦ ; ಬ್ರಹ್ಮಜ್ಞಾನದಿಂದ ಇದು ತೊಲಗಿದರೆ ದುಃಖಭಯಾದಿಗಳಿರಲಾರವು, ೧-೫೭ ; ತಪ್ಪು ತಿಳಿವಳಿಕೆಯಿಂದಲೇ ಉಪಭೋಗ, ೧-೧೬೨ ; ಸಶರೀರತ್ವವು ಮಿಥ್ಯಾಜ್ಞಾನನಿಮಿತ್ತವಾದ್ದರಿಂದ ಅಶರೀರತ್ವವು ಬದುಕಿರುವಾಗಲೇ ಇದೆ, ೧-೫೮, ೬೦ ; ಜೀವಪರಮೇಶ್ವರಭೇದವು ಮಿಥ್ಯಾಜ್ಞಾನಕೃತ, ೧-೨೬೭ ; ಕ್ಷೇತ್ರಜ್ಞಭೇದವೂ ಕಲ್ಪಿತವೇ, ೧-೩೫೭ ; ನಾನಾತ್ವವು ಮಿಥ್ಯಾಜ್ಞಾನವಿಜೃಂಭಿತ, ೧-೪೩೫, ೪೫೬ ; ಸ್ಥಿತಿಯಲ್ಲಿ ವಿಭಾಗವ್ಯವಹಾರವೂ ಪ್ರಲಯದಲ್ಲಿ ವಿಭಾಗಶಕ್ತಿಯೂ ಮಿಥ್ಯಾಜ್ಞಾನಪ್ರತಿಬದ್ಧ, ೧-೪೨೫ ; **ಕೇನ.** ತಪ್ಪು ತಿಳಿವಳಿಕೆ, ೬೮ ; **ನೈ.** ತಪ್ಪು ತಿಳಿವಳಿಕೆ. (೧) ಅನಾತ್ಮವನ್ನು ಆತ್ಮನೆಂದು ತಿಳಿಯುವ ಮಿಥ್ಯಾಜ್ಞಾನವೇ ಅಜ್ಞಾನವು, ಅನಾತ್ಮವಿವೇಕವೇ ಜ್ಞಾನವು- ಎಂಬ ಸಾಂಖ್ಯರ ಮತ ಸರಿಯಲ್ಲ ೩-೬; ಮಿಥ್ಯಾಜ್ಞಾನಕ್ಕಿಂತ ಬೇರೆಯಾದ ಸಂಸಾರಕಾರಣವಾದ ಅಜ್ಞಾನವಿಲ್ಲವೆನ್ನುವವರ ಮತವೂ ಸರಿಯಲ್ಲ, ೩-೮; ಜ್ಞಾನವು ಹುಟ್ಟಿದಮಾತ್ರದಿಂದ ಅಜ್ಞಾನವನ್ನು ನಾಶಗೊಳಿಸುತ್ತದೆ, ಅನ್ಯಥಾಮತಿಯು ಅದಕ್ಕಿಂತ ಬೇರೆಯಲ್ಲ, ೪-೫೭.

**ಮಿಥ್ಯಾಜ್ಞಾನಮ್, ಮಿಥ್ಯಾದರ್ಶನಮ್, ಮಿಥ್ಯಾಪ್ರತ್ಯಯಃ - ಭ.ಗೀ.** ತಪ್ಪು ತಿಳಿವಳಿಕೆ, ೧೭೯, ೨೬೭, ೨೬೮, ೩೨೩, ೩೨೫, ೬೧೭, ೮೨೬, ೮೭೫, ೧೧೩೮, ೧೧೩೯, ೧೧೪೦ ; **ಶಾಂ. ನಿ.** ತಪ್ಪುತಿಳಿವಳಿಕೆ, ಜ್ಞಾನಾಭಾವ, ಅನ್ಯಥಾಜ್ಞಾನ - ಇವಕ್ಕಿಂತ ವ್ಯತಿರಿಕ್ತವಾದ **ಅನಿರ್ವಚನೀಯಾವಿದ್ಯೆ** ಎಂಬರ್ಥದಲ್ಲಿ ಭಾಷ್ಯದಲ್ಲಿ ಪ್ರಯೋಗವಿಲ್ಲ.

**ಮಿಥ್ಯಾಜ್ಞಾನಕಲ್ಪಿತ, ಮಿಥ್ಯಾಜ್ಞಾನಪ್ರತಿಬದ್ಧ , ಮಿಥ್ಯಾಜ್ಞಾನವಿಜೃಂಭಿತ** - ಬ್ರ.ಸೂ-೧. ಭ್ರಾಂತಿಯಿಂದ ತೋರುವ, ಅಧ್ಯಸ್ತವಾದ, ೩೫೭, ೪೩೫, ೪೫೬.

**ಮಿಥ್ಯಾದರ್ಶನಮ್** - ಮಾಂ. ತಪ್ಪು ತಿಳಿವಳಿಕೆ, ೧೬೦ ; ೨೧೨, ೩೪೫.

**ಮಿಥ್ಯಾದರ್ಶೀ** - ಬ್ರ.ಸೂ-೧. ತಪ್ಪು ತಿಳಿವಳಿಕೆಯವ, ೩೮೦.

**ಮಿಥ್ಯಾಜ್ಞಾನವಿಜೃಮ್ಭಿತಮ್** - ಕಠ. ತಪ್ಪು ತಿಳಿವಳಿಕೆಯಿಂದ ತೋರುವ ಭೇದ, ೧೦೪.

**ಮಿಥ್ಯಾಧ್ಯಾಸಃ** - ನೈ. ಹುಸಿಯ ತೋರಿಕೆ. ಅಹಂಮಮತ್ವಾದಿಗಳು ಆತ್ಮನಲ್ಲಿ ಬರಿಯ ಅಧ್ಯಾಸವೇ, ೨-೧೧೬; ಪ್ರಮಾತೃತ್ವಾದಿಯೆಲ್ಲ ಮಿಥ್ಯಾಧ್ಯಾಸವೇ, ೩-೧; ಮಿಥ್ಯಾಸಿದ್ಧ (ದ್ವೈತ) ೨-೪೪,೪೫, ಮಿಥ್ಯಾಸ್ವಭಾವ (ಭೇದ) ೨-೯೫-ಇವಕ್ಕೂ ಮಿಥ್ಯಾಧ್ಯಾಸವೆಂದೇ ಅರ್ಥ.

**ಮಿಥ್ಯಾಬುದ್ಧಿಃ** - ಬ್ರ.ಸೂ-೧. ತಪ್ಪು ತಿಳಿವಳಿಕೆ, ೭೧.

**ಮಿಥ್ಯಾಬುದ್ಧಿಃ, ಮಿಥ್ಯಾಜ್ಞಾನಮ್** - ಬೃಹ-೧. ತಪ್ಪು ತಿಳಿವಳಿಕೆ, ೫೪, ೧೩೮, ೧೪೫.

**ಮಿಥ್ಯಾಭಿಮಾನಃ** - ಕೇನ. ಒಣಹೆಮ್ಮೆ, ತಪ್ಪು ತಿಳಿವಳಿಕೆ, ೬೭, ೬೮.

**ಮೀಮಾಂಸಕಾಃ** - ಬೃಹ-೧. ಕರ್ಮಕಾಂಡವನ್ನು ಮಾತ್ರ ಪ್ರಮಾಣವಾಗಿ ಹಿಡಿಯುವವರು, ४, ೩೦೭ ; ನೈ. ಕರ್ಮದಿಂದಲೇ ಮುಕ್ತಿಯೆನ್ನುವವ. ಇವನ ಮತದ ಖಂಡನೆಯು ಈ ಪ್ರಕರಣದ ಒಂದನೆಯ ಅಧ್ಯಾಯದಲ್ಲಿದೆ. ಅಹಂಪ್ರತ್ಯಯಗ್ರಾಹ್ಯವಾಗಿರುವದರಿಂದಲೇ ಆತ್ಮನು ಗ್ರಾಹಕನೆಂಬ ಮೀಮಾಂಸಕನ ಮತದ ಖಂಡನೆ, ೨-೨೪ ರಿಂದ ೪೩ರವರೆಗೆ.

**ಮುಕ್ತಃ** - ಬೃಹ-೨. ಅವಿದ್ಯಾಕಾಮಕರ್ಮಗಳಿಂದ ಬಿಡುಗಡೆಯಾದವನು, (ಜ್ಞಾನಿ), ೨೨, ೨೩ ; **ಶಾಂ. ನಿ.** (೧) ಆತ್ಮಸ್ವರೂಪವನ್ನು ಜ್ಞಾನದಿಂದ ಪಡೆದವನು, ಸೂ. ಭಾ. ೪-೪-೨ (೨) ಸಗುಣೋಪಾಸನೆಯ ಫಲವಾಗಿ ಸಮನಸ್ಕನಾಗಿ ಈಶ್ವರ ಸಾಯುಜ್ಯವನ್ನು ಪಡೆದವನು, ಸೂ. ಭಾ. ೪-೪-೧೬.

**ಮುಕ್ತಿಃ** - ಬೃಹ-೨. ಮುಕ್ತಿಗೆ ಎಂದರೆ ವಾಗಾದಿಗಳ ಅಗ್ನ್ಯಾದಿಭಾವಕ್ಕೆ ಸಾಧನವಾದ ಉಪಾಸನೆ, ೬ ರಿಂದ ೯ ; ನೈ. ಸಂಸಾರದಿಂದ ಬಿಡುಗಡೆ. ಅವಿದ್ಯಾನಾಶವೇ ಮುಕ್ತಿ, ೧-೭; ಮುಕ್ತಿಯು ಕರ್ಮದಿಂದಲೇ ಆಗುವದೆಂಬ ಮತ, ೧-೯ ರಿಂದ ೨೧; ಅದರ ಖಂಡನೆ, ೧-೨೨ ರಿಂದ ೧ನೆಯ ಅಧ್ಯಾಯದ

ಕೊನೆಯವರೆಗೆ; ಮುಕ್ತಿಹೇತುವಾದ ಜ್ಞಾನವು ಪುರುಷತಂತ್ರವಲ್ಲ , ೧-೮೮; ಜ್ಞಾನದಿಂದಲೇ ಮುಕ್ತಿ, (ಅವ) ೧-೯೯.

**ಮುಕ್ತೇಷುಃ -** ಬೃಹ-೧. ಬಿಟ್ಟಬಾಣದಂತಿರುವ ಪ್ರಾರಬ್ಧ ಕರ್ಮಕ್ಕೆ ದೃಷ್ಟಾಂತ, ೧೪೨, ೧೭೩ ; **ಭ.ಗೀ.** ಬಿಟ್ಟ ಬಾಣ, ಪ್ರಾರಬ್ಧಕರ್ಮವು ಫಲವನ್ನು ಕೊಟ್ಟೇ ಮುಗಿಯುವದೆಂಬುದಕ್ಕೆ ದೃಷ್ಟಾಂತ, ೮೧೧ ; **ಶಾಂ. ನಿ.** ಬಿಟ್ಟ ಬಾಣ ; ಪ್ರಾರಬ್ಧಕರ್ಮವು ಫಲವನ್ನು ಕೊಟ್ಟೇ ಮುಗಿಯುವದೆಂಬುದಕ್ಕೆ ದೃಷ್ಟಾಂತ ಗೀ. ಭಾ. ೧೩-೨೩ ; ಬೃ. ಭಾ. ೧-೪-೭.

**ಮುಖ್ಯಃ ಪ್ರಾಣಃ - ಬ್ರ.ಸೂ-೧.** ವಾಯುವಿಕಾರವಾದ ಪ್ರಾಣಾದಿವೃತ್ತಿಗಳುಳ್ಳ ಪ್ರಾಣ, ೧೨೨, ೧೪೧, ೧೪೨, ೧೪೪, ೩೭೦, ೩೭೧ ; **ಪ್ರಶ್ನ.** ಶರೀರದಲ್ಲಿ ಮುಖನಾಸಿಕೆಗಳ ಮೂಲಕ ಸಂಚರಿಸುವ ಪ್ರಾಣಗಳಿಗೆಲ್ಲ ಆಧಾರವಾಗಿರುವ ಪ್ರಾಣ, ೨೬, ೪೦, ೪೭.

**ಮುನಿಃ - ಬೃಹ-೨.** ಪಾಂಡಿತ್ಯಬಾಲ್ಯಗಳನ್ನು ಪೂರೈಸಿಕೊಂಡು ಆತ್ಮಮನನದಲ್ಲಿಯೇ ಇರುವ ಯೋಗಿ, ೬೨, ೩೦೮ ; **ಮಾಂ.** ತತ್ತ್ವವನ್ನು ಮನನಮಾಡುವವ, ೭೪, ೩೪೨ ; **ಶಾಂ. ನಿ.** (೧) ಸಂನ್ಯಾಸಿ ; (೨) ತತ್ತ್ವವನ್ನು ಮನನ ಮಾಡಿದವ, ಸೂ. ಭಾ. ೩-೪-೪೭.

**ಮುಮುಕ್ಷುಃ - ಛಾಂ.** ಮೋಕ್ಷೇಚ್ಛೆಯುಳ್ಳವನು, ೫೨೬ ; **ಈಶ.** ಮೋಕ್ಷವನ್ನು ಬಯಸುವವನು, ೧೫ ; **ಭ.ಗೀ.** ಮೋಕ್ಷವನ್ನು ಪಡೆಯಲಿಚ್ಛಿಸುವವನು, ೧೨೩, ೧೪೭, ೧೪೮, ೨೦೨, ೨೪೭, ೨೫೫, ೩೦೬, ೩೧೦, ೬೭೪, ೮೮೭, ೯೯೨ ; **ಶಾಂ. ನಿ.** ಸಾಧ್ಯಸಾಧನಗಳಲ್ಲಿ ವಿರಕ್ತನಾಗಿ ಮೋಕ್ಷವನ್ನೇ ಬಯಸುವವನು.

**ಮುಮುಕ್ಷವಃ - ನೈ.** ಮೋಕ್ಷವನ್ನು ಪಡೆದುಕೊಳ್ಳಬೇಕೆಂಬ ಇಚ್ಛೆಯುಳ್ಳವರು. ಮುಮುಕ್ಷುತ್ವವು ಸಂಸಾರದ ಯಾಥಾತ್ಮ್ಯವನ್ನು ತಿಳಿದುಕೊಂಡು ವಿರಕ್ತರಾದವರಿಗೇ ಉಂಟಾಗುತ್ತದೆ. ೧-೫೨, ೨-೬; ಆದ್ದರಿಂದ ಮುಮುಕ್ಷುಗಳು ಚಿತ್ತಶುದ್ಧಿಗಾಗಿ ನಿತ್ಯನೈಮಿತ್ತಿಕಕರ್ಮಗಳನ್ನು ಮಾಡುತ್ತಿರಬೇಕು. ೧-೫೦; ;ಮುಮುಕ್ಷುವಾದವರಿಗೆ ಶ್ರುತಿವಾಕ್ಯದಿಂದ ಅಹಂಕಾರಾದಿಗಳ ಸೋಂಕು ಆತ್ಮನಿಗಿಲ್ಲವೆಂಬ ನಿಶ್ಚಯವುಂಟಾಗುತ್ತದೆ, ೨-೧೧೭.

**ಬ್ರ.ಸೂ-೧.** ಮೋಕ್ಷವೇ ಬೇಕೆಂಬ ತೀವ್ರೇಚ್ಛೆಯಿರುವಿಕೆ, ೧೩.

**ಮೂರ್ಛಾವಸ್ಥಾ** - **ಶಾಂ. ನಿ.** ಸ್ವಲ್ಪಮಟ್ಟಿಗೆ ಸುಷುಪ್ತಿಯನ್ನೂ ಸ್ವಲ್ಪಮಟ್ಟಿಗೆ ಮರಣವನ್ನೂ ಹೋಲುವ ಅವಸ್ಥೆ. ಈ ಅವಸ್ಥೆಯಲ್ಲಿ ಜೀವರು ಸಂಪೂರ್ಣವಾಗಿಯೇ ಬ್ರಹ್ಮದಲ್ಲಿ ಸೇರಿಹೋಗಿರುತ್ತಾರೆ, ಸೂ. ಭಾ. ೩-೨-೧೦.

**ಮೂರ್ತಾಮೂರ್ತೇ** - **ಪ್ರಶ್ನ.** ಸ್ಥೂಲಸೂಕ್ಷ್ಮಗಳು, ೬ ; **ತೈ.** ವ್ಯಾಕೃತ-ನಾಮರೂಪಗಳು ೧೭೯, ೧೮೧, ೨೦೬ ; **ಬೃಹ-೧.** ಆಕಾರವಿರುವ, ತೋರುವ, ಆಕಾರವಿಲ್ಲದ ; ಪಂಚಭೂತಾತ್ಮಕವಾದ (ಬ್ರಹ್ಮದ ಎರಡು ರೂಪಗಳು), ೩೨೮, ೩೩೬.

**ಮೂರ್ತಾಮೂರ್ತತದ್ವಾಸನಾತ್ಮಕ** - **ಬೃಹ-೧.** ಮೂರ್ತಾಮೂರ್ತಗಳು ಮತ್ತು ಅವುಗಳ ವಾಸನೆ (ಎಂಬ ಸತ್ಯಶಬ್ದವಾಚ್ಯವಾದ) ಜಗತ್ತು, ೭, ೩೩೫.

**ಮೂಲಕಾರಣಮ್** - **ಶಾಂ. ನಿ.** ಜಗತ್ತಿಗೆಲ್ಲ ಕಾರಣವಾಗಿರುವ ಪರಬ್ರಹ್ಮ, ಸೂ. ಭಾ. ೨-೧-೧೮.

**ಮೃಗತೃಷ್ಣಾಮ್ಬು:** - **ಶಾಂ. ನಿ.** ಬಿಸಿಲುಕುದುರೆಯಲ್ಲಿ ತೋರುವ ಹುಸಿನೀರು, ಅತ್ಯಂತವಾಗಿ ಅಸಂಭಾವಿತವಾದ ವಸ್ತು, ತೈ. ಭಾ. ೨-೧.

**ಮೃಗತೃಷ್ಣಿಕಾ** - **ಬೃಹ-೧.** ಕುಡಿಯುವ ನೀರೆಂದು ಜಿಂಕೆಯೂ ಜನರೂ ಭ್ರಮಿಸುವ ಬಿಸಿಲುಕುದುರೆ, ೫೪ ; **ಭ.ಗೀ.** ಬಿಸಿಲುಕುದುರೆ, ಹುಸಿತೋರಿಕೆ, ೩೩, ೨೬೨.

**ಮೃಗತೃಷ್ಣಿಕೋದಕಾದಿ** - **ಬ್ರ.ಸೂ-೧.** ಬಿಸಿಲುಕುದುರೆಯ ಹುಸಿನೀರು ಮುಂತಾದದ್ದು, ೪೩೫, ೪೩೭.

**ಮೃತ್ಯು:** - **ಈಶ.** ಲೌಕಿಕವಾದ ಜ್ಞಾನಕರ್ಮಗಳು, ೨೬ ; ಅನೈಶ್ವರ್ಯವು, ಅಧರ್ಮಾದಿಗಳು, ೩೨ ; **ಕಠ.** ಯಮ, ೨೪, ೨೫, ೨೬, ೪೨, ೪೬, ೧೮೮ ; ಅವಿದ್ಯಾಕಾಮಕರ್ಮಗಳು, ೧೦೭, ೧೧೩, ೧೮೧ ; ಜನನಮರಣಗಳು ೧೪೨, ೧೨೫, ೧೩೬ ; **ಬೃಹ-೧.** ಸ್ವಾಭಾವಿಕಕರ್ಮವಿಜ್ಞಾನಗಳು, ಪಾಪದ ಅಂಟು, ೪೩, ೪೪ ; ಬುದ್ಧ್ಯವಸ್ಥನಾದ ಹಿರಣ್ಯಗರ್ಭ, ೨೫, ೨೬ ; ಸಾವು, ೪೨ ; **ಬೃಹ-೨.** ಗ್ರಹಾತಿಗ್ರಹಗಳೂ ಅದರ ಪ್ರಯೋಜಕಗಳಾದ ಅವಿದ್ಯಾಕಾಮಕರ್ಮಗಳೂ, ೧೬, ೨೨ ; **ಶಾಂ. ನಿ.** ಮರಣ ; ಯಮ ; ಅವಿದ್ಯಾಕಾಮಕರ್ಮಗಳು, ಕ. ಭಾ. ೧-೨-೧೫..

**ಮೃತ್ಯುಪಾಶ:** - **ಕಠ.** ಅಧರ್ಮ, ಅಜ್ಞಾನ, ರಾಗ, ದ್ವೇಷ - ಮುಂತಾದವು, ೩೦ ; ಜನನಮರಣಗಳು, ೧೨೫ ; **ಶಾಂ. ನಿ.** ಅಧರ್ಮ, ಅಜ್ಞಾನ, ರಾಗ, ದ್ವೇಷ - ಮುಂತಾದವು, ಕ. ಭಾ. ೧-೧-೧೯.

**ಮೃತ್ಸುವರ್ಣಾದೀನಿ, ಮೃದಾದಿ** - ಬ್ರ.ಸೂ-೧. ಮಣ್ಣು, ಚಿನ್ನ ಮುಂತಾದ ಉಪಾದಾನಕಾರಣಗಳು, ೩೪೯, ೩೯೦, ೩೯೧, ೩೯೪.

**ಮೃತ್ಯೋರ್ಮೃತ್ಯುಃ** - ಬೃಹ-೨. ಸಂಸಾರಕ್ಕೆ ಕಾರಣವಾದ ಸಪ್ರಯೋಜಕವಾದ ಮೃತ್ಯುವಿಗೂ ಮೃತ್ಯು (ಆತ್ಮಜ್ಞಾನ), ೨೧, ೨೨.

**ಮೃತ್ಯೋರತ್ಯಯಃ** - ಬೃಹ-೨. ಆಸಂಗಸಹಿತವಾದ ಕರ್ಮವನ್ನು ದಾಟುವದು, ದೇವತಾರೂಪಪ್ರಾಪ್ತಿ, ೫.

**ಮೃತ್ಯೋರೂಪಾಣಿ** - ಬೃಹ-೨. ಕರ್ಮಾದಿರೂಪದ ಮೃತ್ಯುವಿನ ರೂಪಗಳು, ಕಾರ್ಯಕರಣಗಳು, ೧೭೬, ೧೯೭.

**ಮೋಕ್ಷಃ** - ಬ್ರ.ಸೂ-೧. ಜ್ಞಾನದಿಂದಾಗುವ ಸಂಸಾರವಿಮೋಚನೆ, ಅಶರೀರತ್ವ, ೪೨, ೪೩, ೧೨೮ ; **ಮುಂ.** ಸಂಸಾರದಿಂದ ಬಿಡುಗಡೆ, ೨೭, ೪೩, ೭೭, ೭೮ ; **ತೈ.** ಸಂಸಾರದಿಂದ ಬಿಡುಗಡೆ ೩, ೮, ೯, ೧೦, ೧೧ ; **ಛಾಂ.** ಪರಮಪುರುಷಾರ್ಥ, ೩, ೪೧೦ ; **ಭ.ಗೀ.** ಜ್ಞಾನದಿಂದ ಪಡೆಯುವ ಪರಮಪುರುಷಾರ್ಥ, ೯, ೧೪, ೧೪೧, ೧೪೪, ೧೪೬, ೧೫೦, ೧೭೨, ೨೪೩, ೨೪೬, ೨೮೭, ೩೧೩, ೫೪೩, ೫೬೪, ೮೨೮, ೮೪೪, ೮೭೫, ೮೮೮ ; **ಶಾಂ. ವಿ.** ಅವಿದ್ಯಾದಿಬಂಧಗಳು ತೊಲಗುವದು. ಮೋಕ್ಷವೆಂಬುದು ಕಾರ್ಯವೆಂಬ ಮತವು ಆಚಾರ್ಯರಿಗೆ ಸಮ್ಮತವಿಲ್ಲ, ಮುಂ. ಭಾ. ೩-೨-೬ (ಭಾ. ಭಾ. ೧೧೯).

**ಮೋಕ್ಷಃ, ಮುಕ್ತಿಃ, ಅಮೃತತ್ವಮ್, ಕೈವಲ್ಯಮ್, ನಿರ್ವಾಣಮ್** - ಬ್ರ.ಸೂ-೨. ಬಂಧವನ್ನು ತಪ್ಪಿಸಿಕೊಳ್ಳುವದು. ಸಮ್ಯಗ್ಜ್ಞಾನದಿಂದ ಮೋಕ್ಷವೆಂದು ಎಲ್ಲಾ ಮೋಕ್ಷವಾದಿಗಳೂ ಒಪ್ಪಿರುತ್ತಾರೆ, ೧-೪೨೯ ; ಅಶರೀರತ್ವವೇ ಮೋಕ್ಷ, ೧-೪೨ ; ಇದು ನಿತ್ಯವೆಂಬುದು ಮೋಕ್ಷವಾದಿಗಳಿಗೆಲ್ಲ ಸಮ್ಮತ, ೧-೪೩ ; ಬ್ರಹ್ಮವಿದ್ಯೆಯ ಅನಂತರವೇ ಆಗುವದು, ೧-೪೪ ; ಇದಕ್ಕೆ ಪ್ರತಿಬಂಧವಾದ ಅವಿದ್ಯೆಯನ್ನೂ ಕಳೆಯುವದೇ ವಿದ್ಯೆಯ ಫಲ, ೧-೪೫ ; ಇದು ಉತ್ಪಾದ್ಯಾದಿಚತುರ್ವಿಧವಲ್ಲ, ೧-೪೮, ೪೯ ; ದೇವಯಾನದಿಂದಾಗುವ ಅಮೃತತ್ವವು ಆಪೇಕ್ಷಿಕ, ೨-೫೪೮ ; ಮುಕ್ತಾವಸ್ಥೆಯಲ್ಲಿ ವಿದ್ಯೆಯಿಂದ ಅಕರ್ತೃತ್ವ, ೨-೧೫೨ ; ಜ್ಞಾನಕ್ಕೆ ಇದು ನಿಶ್ಚಿತ ಫಲ, ೨-೩೮೧ ; ಬ್ರಹ್ಮವೇ ಮುಕ್ತಾವಸ್ಥೆ, ೧-೪೯, ೨-೪೯ ; ಇದರಲ್ಲಿ ತಾರತಮ್ಯವಿಲ್ಲ, ೨-೪೯ ; ಜ್ಞಾನಿಗೆ ಆರಬ್ಧಕ್ಷಯವಾದ ಮೇಲೆ ಕೈವಲ್ಯವೇ, ೨-೫೩೮ ; ಜೀವನ ಬಂಧಮೋಕ್ಷಗಳು ಈಶ್ವರಾಧೀನ, ೨-೨೬೦ ; ಸುಷುಪ್ತಿ ಕೈವಲ್ಯಗಳಲ್ಲಿ ವಿಶೇಷ ಜ್ಞಾನವಿರುವದಿಲ್ಲ, ೨-೬೦೬ ; ಸಮ್ಯಗ್ದರ್ಶಿಗಳಿಗೆ ನಿತ್ಯಸಿದ್ಧನಿರ್ವಾಣವಿರುವದರಿಂದ ಪುನರಾವೃತ್ತಿಶಂಕೆಯಿಲ್ಲ, ೨-೬೧೨ ; ಜ್ಞಾನದಿಂದ ಸದ್ಯೋಮುಕ್ತಿ, ೧-೯೨.

**ಮೋಕ್ಷಃ , ಮುಕ್ತಿಃ** - ಬೃಹ-೧. ಬ್ರಹ್ಮವಿದ್ಯೆಯಿಂದಾಗುವ ಬ್ರಹ್ಮಪ್ರಾಪ್ತಿ, ೯೭, ೧೩.ಶ, ೧೪೬.

**ಮೋಕ್ಷಃ , ವಿಮೋಕ್ಷಃ** - ಬೃಹ-೨. ಸಂಸಾರಬಂಧನದಿಂದ ಬಿಡುಗಡೆ, ೨೧, ೩೪೦.

**ಮೋಕ್ಷಧರ್ಮಾಃ** - ಈಶ. ಭಾರತದ ಶಾಂತಿಪರ್ವದಲ್ಲಿ ಮೋಕ್ಷ ವಿಚಾರವನ್ನು ತಿಳಿಸುವ ಭಾಗ,೧.

**ಮೋಕ್ಷಪ್ರತಿಬನ್ಧನಿವೃತ್ತಿಃ** - ಬ್ರ.ಸೂ-೧. ಮೋಕ್ಷಕ್ಕೆ ಅಡ್ಡಿಯಾಗಿರುವ ಅವಿದ್ಯೆಯನ್ನು ತೊಲಗಿಸುವದು, ೪ಶ.

**ಮೋಕ್ಷಸಾಧನಮ್, ಮೋಕ್ಷಕಾರಣಮ್** - ಬೃಹ-೨. ಮೋಕ್ಷವನ್ನುಂಟು ಮಾಡುವ ಜ್ಞಾನ, ೨೭೬, ೨೮೧ ರಿಂದ ೨೮೪.

**ಮೋಹಃ** - ಭ.ಗೀ. ಅವಿವೇಕ, ಮಿಥ್ಯಾಪ್ರತ್ಯಯ, ೨೦, ೨೧, ೧೦೩, ೧೦೪, ೩೦೪, ೪೯೪, ೬೧೭, ೬ಶ೨, ೮೬೬, ೯೩೯, ೧೦೧೪, ೧೦ಶ೦, ೧೧೧ಶ, ೧೧ಶ೩ ; ನೈ. ಭ್ರಾನ್ತಿ, ಅಜ್ಞಾನ. ವೇದಾಂತವಾಕ್ಯದಿಂದಾದ ಜ್ಞಾನವೇ ಮೋಹವನ್ನು ಕಳೆಯುತ್ತದೆ, ಕರ್ಮವಲ್ಲ, ೧-೮; ಮೋಹದಿಂದ ಹಿತಾಹಿತಗಳ ಪ್ರಾಪ್ತಿಪರಿಹಾರೇಚ್ಛೆ, ೧-೨೯, ೩೨; ಪರಿಹೃತವೇ ಆಗಿ ಆಪ್ತವೇ ಆಗಿರುವ ಹಾನಪ್ರಾಪ್ತಿಗಳಿಗೆ ಮೋಹವೊಂದೇ ಅಡ್ಡಿ ೧-೩೪; ಆತ್ಮನೇ ಆಗಿರುವ ಬ್ರಹ್ಮದ ಅನಾಪ್ತಿ ಮೋಹದಿಂದ, ಮೋಹದ ಅಡ್ಡಿಯನ್ನು ಕಳೆಯುವದಕ್ಕೆ ಕರ್ತವ್ಯವು ವ್ಯರ್ಥ, ೧-೬೯, ೭೦; ಬೌದ್ಧರು ಮೋಹದಿಂದ ಶ್ರುತಿಯನ್ನು ಕೈಬಿಟ್ಟಿರುತ್ತಾರೆ, ೩-೩೪; ಮೋಹದಿಂದಾಗಿರುವ ಜ್ಞಾತೃತ್ವದಿಂದ ಇದಂ ಪ್ರತ್ಯಯವಾಗುವದು, ೩-೬೧, ೬೨; ದ್ವೈತಕ್ಕೆ ಮೋಹವೇ ಕಾರಣ, ೨-೪೪; ಕ್ರಿಯಾಕಾರಕಫಲರೂಪವಾದ ತೋರಿಕೆಗೆ ಮೋಹವೊಂದೇ ಉಪಾದಾನ, ೨-೯೯; ಮೋಹವು ಹೋದರೂ ಬಾಧಿತಾನುವೃತ್ತಿಯಿಂದ ಮೋಹದ ಕಾರ್ಯವಾದ ನಿವೃತ್ತಿಕರ್ಮವು ಇದ್ದು ಕೊಂಡಿರಬಹುದು, ೪-೬೦ ; **ಶಾಂ. ನಿ.** ಅವಿದ್ಯೆ, ವಿಪರೀತಜ್ಞಾನ. ೧೦-೧, ೧೮-೨೩ ; ಇದು ಮನಸ್ಸನ್ನು ಆಶ್ರಯಿಸಿಕೊಂಡಿರುತ್ತದೆ, ಬೃ. ಭಾ. ೩-ಶ-೧.

**ಮೌನಮ್** - ಬೃಹ-೨. ಪಾಂಡಿತ್ಯಬಾಲ್ಯಗಳ ಫಲವಾಗಿ ದೊರಕುವ

), ೬೩.

# ಯ

**ಯಜಮಾನತ್ವಮ್** - ಬ್ರ.ಸೂ-೧. ಯಾಗವನ್ನು ಮಾಡುವವನಾಗಿರುವಿಕೆ, (ಆತ್ಮನು ಯಜಮಾನನೆಂಬುದು ಮಿಥ್ಯಾಜ್ಞಾನದಿಂದಲೇ), ೫೮.

**ಯಜುಃ** - ಶಾಂ. ನಿ. ಮನೋವೃತ್ತಿ ಎಂಬ ಉಪಾಧಿಯಿಂದ ಪರಿಚ್ಛಿನ್ನವಾಗಿರುವ, ಒಂದಾನೊಂದು ಮನೋವೃತ್ತಿಯಲ್ಲಿರುವ ಆತ್ಮಚೈತನ್ಯವೇ ಯಜುಸ್ಸು. ಆತ್ಮನನ್ನು ತಿಳಿಸುವ ಯಜುರ್ವೃತ್ತಿಯು ನಿತ್ಯವೆಂದು ಭಾವಿಸುವದಕ್ಕೆ ಇದೇ ಕಾರಣ. ಋಗಾದಿಗಳನ್ನೂ ಹೀಗೆಯೇ ತಿಳಿಯಬೇಕು. ತೈ. ಭಾ. ೨-೩.

**ಯಜ್ಞಃ** - ಬೃಹ-೨. ಯಾಗ, ೩, ೧೩ ; ಯಜಮಾನ, ಯಾಗ ಮಾಡುವವನು, ೬ ; ಶಾಂ. ನಿ. (೧) ಯಾಗ ; (೨) ಆತ್ಮ. ಸೋಪಾಧಿಕನಾದ ಆತ್ಮನನ್ನು ನಿರುಪಾಧಿಕವಾದ ಬ್ರಹ್ಮರೂಪದಿಂದ ಕಾಣುವದೇ ಒಂದು ಹೋಮವೆಂದು ಗೀತೆಯಲ್ಲಿ ಹೊಗಳಿದೆ. ಗೀ. ಭಾ. ೪-೨೫.

**ಯಜ್ಞಾಂಗವಿಷಯದರ್ಶನಾನಿ** - ಬೃಹ-೨. ಯಜ್ಞದ ಅಂಗಗಳನ್ನು ಉಪಾಸನೆ ಮಾಡುವ ಪ್ರಕಾರಗಳು, ೧೦.

**ಯಜ್ಞಾಯಜ್ಞೀಯಮ್** - ಛಾಂ. ಒಂದು ಸಾಮ (ಯಜ್ಞಾಯಜ್ಞಾವೋ... ಋ. ೬-೪೮-೧), ೧೬೩.

**ಯಜ್ಞೋಪವೀತಾದೀನಿ** - ಬೃಹ-೨. ಉಪವೀತ, ನಿವೀತ, ಪ್ರಾಚೀನಾವೀತ ಎಂಬ ಕರ್ಮಸಾಧನಗಳು, ೫೬, ೫೭.

**ಯಮಪ್ರಧಾನಾನಿ** - ಬೃಹ-೨. ಮಾನಸಕರ್ಮಪ್ರಧಾನವಾದ ಸಾಧನಗಳು (ಧ್ಯಾನಾದಿಗಳು), ೩೪೩.

**ಯಮನಿಯಮಾದಿಃ** - ಛಾಂ. ಸಂನ್ಯಾಸಿಯ ಧರ್ಮಗಳು, ೧೮೨.

**ಯಮನಿಯಮಾದಯಃ** - ಶಾಂ. ನಿ. ಕರ್ತೃತ್ವಬುದ್ಧಿಯಿರುವಾಗ ಕರ್ಮದ ಒಂದು ಭಾಗವನ್ನು ಸಂನ್ಯಾಸಮಾಡುವವನಿಗೆ ಯಮನಿಯಮಾದಿಗಳು ಅತ್ಯವಶ್ಯ, ಗೀ. ಭಾ. ೫, ಭಾ. ಭಾ. ೩೧೮.

**ಯಥಾಕಾಮಿತ್ವಮ್** - ಐತ. ಮನಬಂದಂತೆ ನಡೆಯುವದು, ೨೫.

**ಯಥಾವಸ್ಥಿತ. ಯಥಾಭೂತ** - ನೈ. ಇದ್ದದ್ದು ಇದ್ದಂತೆ ಇರುವ ಸಿದ್ಧವಸ್ತು. ವೇದಾಂತವಾಕ್ಯವು ಇಂಥ ವಸ್ತುವನ್ನು ತಿಳಿಸುವದು, ೧-೨೯, ೩-೪೭, ೬೪.

**ಯಥೇಷ್ಟಾಚರಣಮ್** - ನೈ. ಜ್ಞಾನಿಗೆ ಯಥೇಷ್ಟಾಚಾರವಿರಲಾರದು, ೪-೬೨ ರಿಂದ ೬೭.

**ಯಥಾಪ್ರಸಿದ್ಧಃ** - **ಶಾಂ. ನಿ.** ಲೋಕದಲ್ಲಿ ವ್ಯವಹಾರಸಿದ್ಧವಾಗಿರುವ, ಪರಮಾರ್ಥವಲ್ಲದ. ಭೇದವ್ಯವಹಾರವು. ಯಥಾಪ್ರಸಿದ್ಧವಾದ ಆಯಾ ಕಲಿತವಸ್ತುವಿನ ವಿಷಯವೆಂದು ಭಾಷ್ಯದಲ್ಲಿ ಅಲ್ಲಲ್ಲಿ ಹೇಳಿದೆ. ಗೀ. ಭಾ. ೧೩-೨, ಭಾ. ಭಾ. ೨೨೧

**ಯಾವಜ್ಜೀವಶ್ರುತಿಃ** - ಭ.ಗೀ. ಬದುಕಿರುವವರೆಗೂ ಕರ್ಮವನ್ನು ವಿಧಿಸುವ ಶ್ರುತಿ, ೮, ೧೪೩ ; **ಶಾಂ. ನಿ.** ಬದುಕಿರುವವರೆಗೂ ಅಗ್ನಿಹೋತ್ರಾದಿಗಳನ್ನು ಮಾಡಬೇಕೆಂಬ ಶ್ರುತಿಯು ಅಜ್ಞಾನಿಗಳ ವಿಷಯ. ಐ. ಭಾ. ೨, ಭಾ. ಭಾ. ೧೬.

**ಯಾವಜ್ಜೀವಾದಿಶ್ರುತಿಃ** - ಐತ. ಬದುಕಿರುವವರೆಗೂ ಕರ್ಮವನ್ನು ಮಾಡಬೇಕೆಂದು ಹೇಳುವ ಶ್ರುತಿ, ೧೬, ೨೨.

**ಯಾವಜ್ಜೀವಾದಿಶ್ರುತಯಃ** - ತೈ. ಬದುಕಿರುವವರೆಗೂ ಕರ್ಮವನ್ನು ಮಾಡಬೇಕೆಂದು ವಿಧಿಸುವ ಶ್ರುತಿಗಳು ೮೨.

**ಯುಕ್ತಃ** - ಭ.ಗೀ. ಧ್ಯಾನಯೋಗಿ, ೧೧೮, ೨೬೧, ೩೪೨, ೩೬೯, ೩೯೩, ೪೦೩, ೪೧೧ ; ಈಶ್ವರನಲ್ಲಿ ಮನಸ್ಸಿಟ್ಟಿರುವ ಕರ್ಮಯೋಗಿ, ೩೪೭ ; ಬಲ್ಲವನು, ೧೯೬ ; **ಶಾಂ. ನಿ.** (೧) ಧ್ಯಾನಯೋಗಿ, ಸಮಾಹಿತಚಿತ್ತ ಗೀ. ಭಾ. ೬-೮, ಭಾ. ಭಾ. ೩೮೬ ; (೨) ಈಶ್ವರನಲ್ಲಿ ಮನಸ್ಸನ್ನು ಇಟ್ಟಿರುವ ಕರ್ಮಯೋಗಿ, ಗೀ. ಭಾ. ೫-೧೨, ಭಾ. ಭಾ. ೩೪೦. (೩) ಬಲ್ಲವನು, ಮಿಕ್ಕವರಿಗೆ ಮೇಲುಪಜ್ತಿಯಾಗಿರುವವನು, ಗೀ. ಭಾ. ೩-೨೬. ಭಾ. ಭಾ. ೧೮೯. (೪) ತತ್ತ್ವದಲ್ಲಿಯೇ ನೆಲೆನಿಂತವನು, ಗೀ. ಭಾ. ೩೩೫. '**ಯುಕ್ತಾಹಾರ, ಯುಕ್ತಚೇಷ್ಟ** - ಮುಂತಾದ ಶಬ್ದಗಳಲ್ಲಿ ಅತಿಯಾಗಿ ಹೆಚ್ಚಾಗಿ ಅಥವಾ ತೀರ ಕಡಿಮೆಯಾಗಿಲ್ಲದ ಎಂಬರ್ಥವಿದೆ.

**ಯುಕ್ತವಾಕ್ಯತದಾಭಾಸಾಃ** - ಬ್ರ.ಸೂ-೧. ಸರಿಯಾದ ಯುಕ್ತಿ, ಸರಿಯಾದ ವಾಕ್ಯ, ಮತ್ತು ಇವುಗಳಂತೆ ತೋರುವ ಹುಸಿಯುಕ್ತಿ, ಆ ಅರ್ಥವನ್ನು ಕೊಡದ ವಾಕ್ಯ - ಇವು, ೨೦.

**ಯುಕ್ತ್ಯಾಭಾಸಃ** - **ಶಾಂ. ನಿ.** ಯುಕ್ತಿಯಂತೆ ತೋರುವ ತಪ್ಪು ತರ್ಕ.

**ಯುಕ್ತಿಃ** - ಶಾಂ. ನಿ. ಅನುಮಾನ, ತರ್ಕ. ದೃಷ್ಟದ ಸಾಮ್ಯದಿಂದ ಅದೃಷ್ಟವನ್ನು ಸಾಧಿಸುವದರಿಂದ ಯುಕ್ತಿಯು ಅನುಭವಕ್ಕೆ ಹತ್ತಿರ. ಸೂ. ಭಾ. ೨-೧-೪. ಶ್ರುತಿಯೂ ಯುಕ್ತಿಯನ್ನು ಅಥವಾ ತರ್ಕವನ್ನು ಬಯಸುತ್ತದೆ. ಸೂ. ಭಾ. ೧-೧-೧.

**ಯುಷ್ಮತ್ಪ್ರತ್ಯಯಗೋಚರಃ** - ಬ್ರ.ಸೂ-೧. ನೀನು ಎಂಬ ಅರಿವಿಗೆ ಗೋಚರವಾದ (ವಿಷಯ), ೧.

**ಯುಷ್ಮತ್ಪ್ರತ್ಯಯಾಪೇತ** - ಬ್ರ.ಸೂ-೧. ನೀನು ಎಂಬ ಅರಿವಿಗೆ ಗೋಚರವಲ್ಲದ (ಆತ್ಮ), ೩.

**ಯೋಗಃ** - ಬ್ರ.ಸೂ-೧. ಅಣಿಮಾದಿಗಳೆಂಬ ಐಶ್ವರ್ಯವನ್ನು ಕೊಡುವ ಯೋಗ, ೩೦೪ ; ಪರಮಾತ್ಮನನ್ನು ಅರಿಯುವದಕ್ಕೆ ಬೇಕಾದ ಅಧ್ಯಾತ್ಮಯೋಗ, ನಿದಿಧ್ಯಾಸನ, ೩೩೭, ೪೦೬ ; ವೇದನಿರಪೇಕ್ಷವಾದ ಯೋಗಮಾರ್ಗ, ೪೦೭ ; ಯೋಗಶಾಸ್ತ್ರವನ್ನವಲಂಬಿಸುವವರು, ೪೦೭ ; ಬ್ರ.ಸೂ-೨. ಪಾತಂಜಲರು ಒಪ್ಪಿರುವ ಚಿತ್ತವೃತ್ತಿನಿರೋಧರೂಪಸಾಧನ, ಮತ್ತು ಪಾತಂಜಲಮತದವನು. ಯೋಗಮಾರ್ಗ ದಿಂದಲೇ ನಿಃಶ್ರೇಯಸವಿಲ್ಲ, ೧-೪೦೭ ; ಈ ಮತದವರು ದ್ವೈತಿಗಳು, ೧-೪೦೭ ; ವೇದಾಂತವಿರುದ್ಧವಾದ ಅಂಶದಲ್ಲಿ ಅವರಮತವು ಗ್ರಾಹ್ಯ, ೧-೪೦೭ ; ಯೋಗಿಗಳು ಸತ್ತ್ವ ಗುಣದಿಂದ ಸರ್ವಜ್ಞರಾಗುವರೆಂದು ನಂಬಿಕೆ, ೧-೬೫, ೬೮ ; ಈಶ್ವರಪ್ರಸಾದದಿಂದ ಯೋಗಿಪ್ರತ್ಯಕ್ಷಜ್ಞಾನ, ೧-೬೯ ; ಯೋಗಿಗಳಿಗೆ ಅಣಿಮಾದಿಸಿದ್ಧಿ ೧-೧೮೮ ; ಯೋಗಿಗಳಿಗೆ ಅನೇಕ ಶರೀರಗಳು, ೧-೨೫೩, ೨-೬೦೫ ; ಯೋಗದಿಂದ ಇಷ್ಟದೇವತಾದರ್ಶನ, ೧-೩೦೪ ; ಶ್ರುತಿಯಲ್ಲಿ ಹೇಳಿರುವ ವೈದಿಕಧ್ಯಾನ, ೧-೪೦೭ ; ಶ್ರುತಿಯಲ್ಲಿ ಇದರ ವರ್ಣನೆ, ೨-೩೩೭, ೩೪೬, ೪೦೬ ; ಕಠ. ಆತ್ಮನನ್ನು ತಿಳಿಯುವದಕ್ಕೆ ಬೇಕಾದ ಸಾಧನ, ೬೪. ಇಂದ್ರಿಯಗಳನ್ನು ಸ್ಥಿರವಾಗಿ ಹಿಡಿದಿಟ್ಟುಕೊಳ್ಳುವದು, ೧೭೫ ; ಮುಂ. ಜ್ಞಾನಪ್ರಾಪ್ತಿಗೆ ಉಪಾಯ, ಧ್ಯಾನ, ಅಹಿಂಸೆ, ಸತ್ಯ - ಮುಂತಾದ ಸಾಧನ, ೯೨ ; ಭ.ಗೀ. ಮೋಕ್ಷಸಾಧನವಾದ ಕರ್ಮಯೋಗ, ೯, ೮೪, ೧೦೨, ೩೧೦, ೩೧೯, ೩೨೭, ೩೩೪, ೩೩೯, ೭೩೯, ೮೨೨ ; ಧ್ಯಾನಯೋಗ, ೮೧, ೩೧೦, ೩೬೩, ೩೭೭, ೩೭೯, ೩೮೫, ೪೦೦, ೪೦೯, ೪೧೯, ೪೩೬, ೪೪೭, ೪೫೩, ೭೩೮ ; ಜ್ಞಾನನಿಷ್ಠೆ, ೨೨೮, ೨೨೯, ೨೩೦, ೨೩೧, ೨೩೨, ೨೩೪, ೩೧೭, ೬೧೦ ; ಭಗವಂತನ ಯೋಗ ಸಾಮರ್ಥ್ಯ, ೪೯೧, ೬೨೪, ೬೬೧ ಪ್ರಾಣಾಯಾಮಾದಿರೂಪವಾದ ಅಷ್ಟಾಂಗಯೋಗ, ೨೯೩, ೭೩೩ ; ಯೋಗವನ್ನು ತಿಳಿಸುವ ಕೃಷ್ಣಾರ್ಜುನಸಂವಾದ ರೂಪವಾದ ಗ್ರಂಥ, ೬, ೧೫ ; ಉಪಾಸನೆ, ೭೩೩, ೭೩೭, ೭೪೩ ; ಶಾಂ. ನಿ. (೧)

ಮೋಕ್ಷಸಾಧನವಾದ ಕರ್ಮಯೋಗ, (೨) ಉಪಾಸನೆ (ಗೀ. ಭಾ. ೮-೨೩, ಭಾ. ಭಾ. ೨೩). (೩) ಸಮ್ಯಗ್ದರ್ಶನಕ್ಕೆ ಕಾರಣವಾದ ಧ್ಯಾನಯೋಗ ಅಥವಾ ನಿದಿಧ್ಯಾಸನ, (ಗೀ. ಭಾ. ೬-೩, ೮-೨೯, ಭಾ. ಭಾ. ೩೭೮, ೪೧೮, ಸೂ. ಭಾ. ೩-೨-೨೪), (೪) ಜ್ಞಾನನಿಷ್ಠೆ (ಗೀ. ಭಾ. ಭಾ. ಭಾ. ೨೨೧), (೫) ಭಗವಂತನ ಯೋಗಸಾಮರ್ಥ್ಯ, (ಗೀ. ಭಾ. ೯-೫, ಭಾ. ಭಾ. ೫).

**ಯೋಗಕ್ಷೇಮಃ** – ಭ.ಗೀ. ಬೇಕಾದದ್ದನ್ನು ಸಂಪಾದಿಸಿಕೊಳ್ಳುವ ಯೋಗ, ಅದನ್ನು ಕಾಪಾಡಿಕೊಳ್ಳುವ ಕ್ಷೇಮ, ೮೮, ೫೭೮, ೫೭೯.

**ಯೋಗಕ್ಷೇಮೌ** – ಕಠ. ಬೇಕಾದದ್ದನ್ನು ಸಂಪಾದಿಸಿಕೊಳ್ಳುವದು, ಅದನ್ನು ಕಾಪಾಡಿಕೊಳ್ಳುವದು, ೫೦.

**ಯೋಗಕ್ರಿಯಾಃ** – ಪ್ರಶ್ನ. ಅವಸ್ಥಾತ್ರಯಾತ್ಮರನ್ನು ಚಿಂತಿಸುವ ಉಪಾಸನಾ ಕ್ರಿಯೆಗಳು, ೮೪.

**ಯೋಗಧರ್ಮಾನುಸೇವನಮ್** – ಬೃಹ-೨. ಯಮನಿಯಮಾದಿಗಳನ್ನು ಅನುಷ್ಠಾನಮಾಡುವದು, ೨೫೯.

**ಯೋಗಾಭ್ಯಾಸಃ** – ಶಾಂ. ನಿ. ಆತ್ಮಧ್ಯಾನದ ಅಭ್ಯಾಸ. ಇದರ ಮೂಲಕ ಕರ್ಮದಿಂದ ಪ್ರತ್ಯಕ್ಪ್ರವಣತೆ, ೧-೫೨.

**ಯೋಗೀ** – ಬ್ರ.ಸೂ-೧. ಸತ್ತ್ವಗುಣದಿಂದಾದ ಜ್ಞಾನವು ಮಿಗಿಲಿಲ್ಲದಷ್ಟಾದವ, ೬೫, ೬೮, ೬೯ ; ಅಣಿಮಾದಿಸಿದ್ಧಿಗಳುಳ್ಳವ, ೧೮೮, ೨೮೩ ; **ಮಾಂ.** ಅದ್ವೈತಜ್ಞಾನವಿಲ್ಲದ ಸಾಧಕನು, ೧೯೯, ೨೦೦, ೨೦೭ ; **ಛಾಂ.** ಉಪಾಸಕ, ೨೨೪, ೬೫೧ ; **ಯೋಗೀಶ್ವರಃ** – ಬ್ರಹ್ಮಚಿಂತನೆಯಲ್ಲಿ ನಿಂತವನು, ೫೪೮; **ಬೃಹ-೨.** ಉಪಾಸಕನು, ೨೮೩, ೨೮೬ ; ಯೋಗಸಿದ್ಧನು, ೧೩೯ ; ಪರಮಾತ್ಮಜ್ಞಾನನಿಷ್ಠನು, ಮುನಿ ೬೨, ೩೦೮ ; **ಭ.ಗೀ.** ಕರ್ಮಿ, ೫೩೫, ೫೩೮ ; ಉಪಾಸಕ, ೫೩೪, ೫೩೫, ೫೪೦, ೫೪೧ ; ಜ್ಞಾನಕ್ಕಾಗಿ ಧ್ಯಾನಮಾಡುವವನು, ೪೦೫, ೪೦೭, ೪೧೩ ; **ಶಾಂ. ನಿ.** ಯೋಗವುಳ್ಳವನು. ಯೋಗಶಬ್ದಕ್ಕೆ ಹೇಳಿರುವ ವಿಶೇಷಾರ್ಥಗಳನ್ನೆಲ್ಲ ಈ ಶಬ್ದಕ್ಕೆ ಹೊಂದಿಸಿಕೊಂಡು ಸಂದರ್ಭಾನುಸಾರವಾಗಿ ಅರ್ಥಮಾಡಿ ಕೊಳ್ಳಬೇಕು.

**ಯೋಗಿನಃ** – **ಮುಂ.** ಇಂದ್ರಿಯಪ್ರಧಾನರಲ್ಲದೆ ಅಂತರ್ಮುಖರಾದವರು, ೧೧೦೩ ; **ಬೃಹ-೧.** ಇಂದ್ರಿಯಗಳ ಹಂಗಿಲ್ಲದೆ ಮನಸ್ಸಿನಿಂದಲೇ ಎಲ್ಲವನ್ನೂ ಅರಿತುಕೊಳ್ಳಬಲ್ಲ ಯೋಗಿಗಳು, ೨೨, ೧೦೫.

# ರ

**ರಜಃಸತ್ತ್ವತಮಾಂಸಿ - ಬ್ರ.ಸೂ-೧.** ಸಾಂಖ್ಯರು ಒಪ್ಪಿರುವ ಪ್ರಧಾನದಲ್ಲಿರುವ ಮೂರು ಗುಣಗಳು, ೩೫೪.

**ರಜ್ಜುಃ - ಬ್ರ.ಸೂ-೧.** ಹಗ್ಗ, ಹಾವೆಂದು ಭ್ರಾಂತಿಯಿಂದ ಕಲ್ಪಿಸಿದ್ದಕ್ಕೆ ಆಸ್ಪದವಾಗಿರುವದು, ೫೪, ೩೫೧.

**ರಜ್ಜುಸರ್ಪಃ - ಬ್ರ.ಸೂ-೧.** ಹಗ್ಗದಲ್ಲಿ ಭ್ರಾಂತಿಯಿಂದ ತೋರುವ ಹಾವು, ೪೩೭ ; **ಮಾಂ.** ಹಗ್ಗದಲ್ಲಿ ಕಲ್ಪಿಸಿದ ಹಾವು, ೩೭, ೪೩, ೫೭, ೮೮, ೧೦೮, ೧೧೩, ೧೧೪, ೧೧೭, ೧೧೯, ೧೨೬, ೧೩೦, ೧೭೮, ೧೮೩, ೨೦೦, ೨೮೨ ; **ಶಾಂ. ನಿ.** ಹಗ್ಗದಲ್ಲಿ ತೋರುವ ಹಾವು. ಹಾವು ಭ್ರಾಂತಿಯಿಂದ ತೋರುವದೇ ಹೊರತು ನಿಜವಾಗಿ ಹಗ್ಗದಲ್ಲಿ ಉತ್ಪನ್ನವಾಗಿರುವದಿಲ್ಲವೆಂಬುದು ಆಚಾರ್ಯರ ಮತವು. ಪ್ರಾತಿಭಾಸಿಕಸರ್ಪವು ತತ್ಕಾಲದಲ್ಲಿ ಹುಟ್ಟಿರುವದೆಂಬ ಮತವು ಭಾಷ್ಯದಲ್ಲಿಲ್ಲ. (ಸೂ. ಭಾ. ೧-೪-೬, ಭಾ. ಭಾ. ೩೫೧, ಮಾಂ. ಕಾ. ಭಾ. ೧-೧೭, ಭಾ. ಭಾ. ೫೫, ೨-೩೭, ಭಾ. ಭಾ. ೧೧೩)

**ರಜ್ಜುಸರ್ಪವಿವೇಕಃ - ಮಾಂ.** ಹಗ್ಗವು ಸತ್ಯವೆಂದೂ, ಅದರಲ್ಲಿ ಕಲ್ಪಿತವಾದ ಹಾವು ಅಸತ್ಯವೆಂದೂ ವಿಂಗಡಿಸಿ ಅರಿತುಕೊಳ್ಳುವದು, ೭೯ ; **ಶಾಂ. ನಿ.** ಹಾವು ನಿಜವಾಗಿ ಇಲ್ಲದೆ ತೋರುವ ಹುಸಿಯೆಂದೂ ಹಗ್ಗವೇ ನಿಜವಾದದ್ದೆಂದೂ ವಿಂಗಡಿಸಿ ತಿಳಿಯುವಿಕೆ. ಆತ್ಮಾನಾತ್ಮ ವಿವೇಕಕ್ಕೆ ದೃಷ್ಟಾಂತ. ಮಾಂ. ಭಾ. ೭೧ ಭಾ. ಭಾ. ೩೯.

**ರಥನ್ತರಮ್ - ಛಾಂ.** ಒಂದು ಬಗೆಯ ಸಾಮ (ಅಭಿತ್ವಾ ಶೂರ, ಋ, ೭-೩೨-೨೨) ೧೪೯.

**ರಯಿಃ - ಪ್ರಶ್ನ.** ಪ್ರಜಾಪತಿಯು ಸೃಷ್ಟಿಸಿರುವ ಭೋಗ್ಯಶಕ್ತಿ, ೫, ೬, ೧೭, ೧೮.

**ರಸಾದಿಕ್ರಮಃ - ಐತ.** ಅನ್ನರಸವೇ ಮುಂತಾದ ಕ್ರಮದಿಂದ ರೇತಸ್ಸಾಗುವ ರೀತಿ, ೭೪ ; **ಛಾಂ.** ಅನ್ನವು ರಸ, ರಕ್ತ, ಮಾಂಸ - ಮುಂತಾದ ಕ್ರಮದಿಂದ ಪರಿಣಮಿಸುವಿಕೆ, ೫೦೧.

**ರಸಾದಿಭಾವಃ - ತೈ.** ಅನ್ನವು ರಸವೇ ಮುಂತಾದ ರೂಪದಿಂದ ಮಾರ್ಪಡುವದು, ೧೧೯.

**ರಹಸ್ಯಮ್ - ಛಾಂ.** ವಿದ್ಯೆ, ಉಪಾಸನೆ ಮತ್ತು ಜ್ಞಾನ, ೫, ೩೪೬.

**ರಾಗದ್ವೇಷೌ** - ನೈ. ರಾಗದ್ವೇಷಗಳು. ಇದಕ್ಕೆ ಒಳ್ಳೆಯದು ಕೆಟ್ಟದ್ದು ಎಂಬ ಅಧ್ಯಾಸವೇ ಕಾರಣ (ಅವ). ವಿದ್ಯೆಯುಂಟಾದಮೇಲೂ ರಾಗದ್ವೇಷಗಳು ಕಾಣುವವೆಂಬುದು ಸರಿಯಲ್ಲ, ೧-೩೮, ೪-೬೭.

**ರಾಗಾದಿದೋಷಾಃ, ರಾಗಾದಿಕ್ಲೇಶಾಃ** - **ಭ.ಗೀ.** ರಾಗ, ದ್ವೇಷ - ಮುಂತಾದ ಚಿತ್ತದೋಷಗಳು, ೧೨, ೭೧೭, ೭೬೬ ; **ಶಾಂ. ನಿ.** ರಾಗ, ಭಯ, ಕ್ರೋಧ - ಮುಂತಾದ ದೋಷಗಳು ; ರಾಗಾದಿದೋಷಗಳಿಲ್ಲದವರಿಗೇ ಆತ್ಮಾವಗತಿ ಯಾಗುವದು. ಸೂ. ಭಾ. ೧-೩-೨, ಮಾಂ. ಕಾ. ಭಾ. ೨-೩೫, ರಾಗಾದಿಗಳಿಂದಲೇ ಅವಿದ್ಯಾದೃಷ್ಟಿ, ಪ್ರವೃತ್ತಿ ಗೀ. ಭಾ. ೧೨-೨, ಭಾ. ಭಾ. ೧೮೪. ೧೩-೨, ಭಾ. ಭಾ. ೨೨೬.

**ರಾಜನಮ್** - **ಛಾಂ.** ಒಂದು ಬಗೆಯ ಸಾಮ, (ತದಿದಾಸ ಭುವನೇಷು, ಋ. ೧೦-೧೨೦-೧), ೧೬೫.

**ರಾಜಾ** - **ಬೃ.ಸೂ-೧.** ದೊರೆ (ಸಂನಿಧಾನಮಾತ್ರದಿಂದ ಕರ್ತೃತ್ವಕ್ಕೆ ದೃಷ್ಟಾಂತ), ೫೪ ; (ದೊರೆಗೆ ಪ್ರಯೋಜನವನ್ನುಂಟುಮಾಡುವ ಭೃತ್ಯನಲ್ಲಿ ಆತ್ಮಶಬ್ದ ಪ್ರಯೋಗವಿರಬಹುದೆಂಬುದಕ್ಕೆ ದೃಷ್ಟಾಂತ), ೭೭ ; (ಲೀಲಾರ್ಥವಾಗಿ ತೃಪ್ತರೂ ಪ್ರವರ್ತಿಸುವರೆಂಬುದಕ್ಕೆ ದೃಷಾ , ೪೭೧.

**ರೇವತ್ಯಃ** - **ಛಾಂ.** ಒಂದು ಬಗೆಯ ಸಾಮ, (ರೇವತೀರ್ನಃ ಸಧಮಾದೇ ಋ. ೧-೩೦-೧೩), ೧೬೧.

## ಲ

**ಲಕ್ಷಣಮ್** - **ತೈ.** ಅಸಾಧಾರಣಮ್, ೯೬, ೧೦೩, ೨೩.೩.

**ಲಕ್ಷ್ಯಮುಕ್ತೇಷುಃ** - **ಛಾಂ.** ಗುರಿಯಿಟ್ಟು ಬಿಟ್ಟ ಬಾಣ, ೫೨೯.

**ಲಕ್ಷ್ಯಲಕ್ಷಣಭಾವಃ** - **ನೈ.** ತತ್ತ್ವಂಪದಾರ್ಥಗಳು ಅದ್ವಿತೀಯ ಪ್ರತ್ಯಗಾತ್ಮನಲ್ಲಿ ಲಕ್ಷಣವಾಗಿರುವಿಕೆ, ೩-೩,೧೧,೨೬.

**ಲಬ್ಧಾಗಮಃ** - **ಬೃಹ-೨.** ಅತೀಂದ್ರಿಯವಿಷಯದ ಉಪದೇಶವನ್ನು ಪಡೆದುಕೊಂಡಿರುವವ, ೪೦.

**ಲಯಃ** - **ಮಾಂ.** ತನಿನಿದ್ರೆ, ೨೦೩, ೨೦೬ ; **ಶಾಂ. ನಿ.** ಕಾರಣದಲ್ಲಿ ಅಡಗುವದು, ಸುಷುಪ್ತಿ; ಪ್ರಲಯ. ಸೂ. ಭಾ. ೧-೧-೯ ; ಮಾಂ ಕಾ. ೩-೪೨, ಭಾ. ಭಾ. ೨೦೩.

**ಲಿಙ್ಗಮ್ - ಬ್ರ.ಸೂ-೧.** ಬ್ರಹ್ಮವೇ ಮುಂತಾದ ವಸ್ತುವಿನ ನಿರ್ಣಯಕ್ಕೆ ಬೇಕಾದ ಧರ್ಮ, ೯೧, ೧೧೯, ೧೨೪, ೧೨೫, ೧೩೬, ೧೪೧, ೧೭೦ ; **ಕಠ.** ಗುರುತು, ಆತ್ಮನನ್ನರಿತುಕೊಳ್ಳುವದಕ್ಕೆ ಬೇಕಾದದ್ದು, ೧೩೭ ; **ಮುಂ.** ವಚನವು ನೇರಾಗಿ ಹೇಳದೆ ಇದ್ದರೂ ಅರ್ಥವಶದಿಂದ ಅಭಿಪ್ರಾಯವನ್ನು ತಿಳಿಸುವ ಗುರುತು, ೫ ; ಸೂಕ್ಷ್ಮಶರೀರ, ೬೮ ; ಸಂನ್ಯಾಸ, ೧೧೬ ; **ಬೃಹ-೧.** ವಸ್ತುವನ್ನು ಗೊತ್ತುಪಡಿಸುವದಕ್ಕೆ ಸಾಧಕವಾದ ಗುರುತು, ೪, ३೨೫ ; ಕರಣಾತ್ಮಕವಾದ ಸೂಕ್ಷ್ಮ ಶರೀರ ; ಇದಕ್ಕೆ 'ಲಿಂಗಾತ್ಮಾ', ಲಿಂಗಪುರುಷಃ ಎಂದೂ ಹೆಸರು, ೩೪೨, ೩೪೬ ; **ಬೃಹ-೨.** ಗುರುತು, ಅನುಮಾನಕ್ಕೆ ಹೇತು, ೮೨, ೮೪ ; ಕರಣಾತ್ಮಕವಾದ ಲಿಂಗಶರೀರ, ೪೯, ೬೯ ; ಸ್ಮಾರ್ತಪಾರಿವ್ರಾಜ್ಯವ್ಯಂಜಕವೇಷ, ೫೬, ೫೭ ; **ನೈ.** (೧) ಗುರುತು. ರಾಗವು ಅಜ್ಞಾನದ ಗುರುತು, ೪-೬೭. (೨) ಅನುಮಾನಕ್ಕೆ ಕರಣವಾದ ಹೊಗೆ ಮುಂತಾದದ್ದು. ಗಡಿಗೆ ಮುಂತಾದವು ಪರಂಪರೆಯಿಂದ ಅಹಂಕಾರಕ್ಕೆ ಲಿಂಗವಾಗಿರುವಂತೆ ದೃಶ್ಯವಾದ ಅಹಂಕಾರವೂ ದ್ರಷ್ಟೃವಾದ ಆತ್ಮನಿಗೆ ಲಿಂಗ, ೩.-೫೬; ಬುದ್ಧ್ಯಾದಿಗಳಿಗೆ ಅನಾತ್ಮತ್ವವು ಲಿಂಗದಿಂದಲೂ ಸಿದ್ಧವಾದರೂ ಅಷ್ಟರಿಂದ ಅವುಗಳ ನಿವೃತ್ತಿಯಾಗದಾದ್ದರಿಂದ ವಾಕ್ಯವು ಬೇಕು, ೩-೩೩; ಲಿಂಗವು ವಸ್ತುವಿದೆಯೆಂದು ಮಾತ್ರ ಸಾಧಿಸುತ್ತದೆ, ನೇರವಾಗಿ ತಿಳಿಸಲಾರದು, ೩.-೫೭ ; **ಶಾಂ. ವಿ.** (೧) ಗುರುತು, ಧೂಮಾದಿಹೇತು, ಸೂ. ಭಾ. ೨-೧-೧೧ ; (೨) ಶ್ರುತಿಯಲ್ಲಿ ಸ್ಪಷ್ಟವಾಗಿ ಹೇಳದೆ ಇದ್ದರೂ ಆದನ್ನು ತಿಳಿಸುವ ಜ್ಞಾಪಕಶಬ್ದ, ಸೂ. ಭಾ. ೧-೧-೨೨, (೩) ಸೂಕ್ಷ್ಮಶರೀರ, ಸೂ. ಭಾ. ೨-೪-೬.

**ಲಿಙ್ಗಮ್, ಲಿಙ್ಗಶರೀರಮ್ - ಈಶ.** ಮನಸ್ಸುಮುಂತಾದವುಗಳಿಂದಾಗಿರುವ ಸೂಕ್ಷ್ಮಶರೀರ, ೧೯, ೩೭.

**ಲಿಙಾದಯಃ - ಬ್ರ.ಸೂ-೧.** ಲಿಙ್, ಲೋಟ್, ತವ್ಯ-ಮುಂತಾದ ವಿಧಿಯನ್ನು ಹೇಳುವ ಶಬ್ದರೂಪಗಳು, ೪೯.

**ಲಿಙ್ಗಾತ್ಮಾ - ಪ್ರಶ್ನ.** ಆತ್ಮನೊಡನೆ ಸೇರಿಕೊಂಡಿರುವ ಲಿಂಗಶರೀರ ೪೩ ; ಸಮಷ್ಟಿಲಿಂಗಾತ್ಮನಾದ ಹಿರಣ್ಯಗರ್ಭ, ೮೩.

**ಲಿಙ್ಗಾತ್ಮಾ, ಹೃದಯಾತ್ಮಾ, ಲಿಙ್ಗೋಪಾಧಿಃ - ಬೃಹ-೨.** ತೈಜಸ, ಲಿಂಗೋಪಾಧಿಕನಾದ ಆತ್ಮ, ೧೫೪, ೧೫೫.

**ಲಿಙ್ಗಾದಿ - ಬ್ರ.ಸೂ-೧.** ಅನುಮಾನಕ್ಕೆ ಬೇಕಾದ ಗುರುತು, ಉಪಮಾನಕ್ಕೆ ಬೇಕಾದ ಸಾದೃಶ್ಯ - ಮುಂತಾದವುಗಳು (ಇವು ಬ್ರಹ್ಮಕ್ಕಿಲ್ಲ) ೪೧೭, ೪೨೮.

**ಲಿಙ್ಗೋಪಾಧಿಃ - ಮುಂ.** ಲಿಂಗ (ಸೂಕ್ಷ್ಮ) ಶರೀರವೆಂಬ ಉಪಾಧಿಯುಳ್ಳ ಜೀವನು, ೯೧ ; **ಶಾಂ.** ನಿ. ಲಿಂಗಶರೀರ ಅಥವಾ ಸೂಕ್ಷ್ಮಶರೀರವೆಂಬ ಉಪಾಧಿಯುಳ್ಳ ಜೀವ, ಮುಂ. ಭಾ. ೩-೧-೧. ಅವಿದ್ಯಾಕಾಮಕರ್ಮಗಳಿಗೆ ಇವನೇ ಆಶ್ರಯ, ಎ. ಭಾ. ೯೧.

**ಲಿಙ್ಗೋಪಾಧಿಸಂಬಂಧಕೃತ - ಬೃಹ-೧.** ಲಿಂಗಶರೀರದ ಸಂಬಂಧದಿಂದಾದ (ವಿಶೇಷಾತ್ಮಸ್ವರೂಪ), ೨೮೯.

**ಲೀಲಾನ್ಯಾಯಃ - ಬ್ರ.ಸೂ-೧.** ಆಟದಂತೆ (ಸೃಷ್ಟಿ), ೩೨.

**ಲೋಕಃ - ಬ್ರ.ಸೂ-೧.** ಲೋಕ ; ದೃಷ್ಟಾಂತಕ್ಕಾಗಿ ಉದಾಹರಿಸುವದು, ೨, ೨೨೧, ೪೧೫, ೪೩೧, ೪೫೭ ; ಜನ, ೧೯ ; ಭೋಗಭೂಮಿ, ೨೫೯ ; ಪ್ರತ್ಯಕ್ಷಾದಿ ಪ್ರಮಾಣ, ೧೬೬, ೨೯೯ ; **ಬ್ರ.ಸೂ-೨.** ಲೋಕದ ಅನುಭವ, ದೃಷ್ಟಾಂತ. ಅಧ್ಯಾಸಕ್ಕೆ ಲೋಕಾನುಭವ, ೧-೨ ; ವಿಲಕ್ಷಣೋತ್ಪತ್ತಿಗೆ, ೧-೪೧೫ ; ಕಾರಣಕ್ಕೆ ಅನನ್ಯವಾದ ಕಾರ್ಯಗಳು ವಿಭಕ್ತವಾಗಿರುವದಕ್ಕೆ ೧-೪೩೨ ; ಒಂದೇ ಕಾರಣದಿಂದ ಕಾರ್ಯ-ವೈಚಿತ್ರ್ಯವಾಗುವದಕ್ಕೆ, ೧-೪೫೭ ; ಕಾರಣವು ಅಸಹಾಯಕವಾಗಿ ಪರಿಣಮಿಸು-ವದಕ್ಕೆ, ೧-೪೫೯ ; ಚೇತನರೂ ಅಸಹಾಯರಾಗಿ ನಾನಾರೂಪರಾಗಬಹುದೆಂಬುದಕ್ಕೆ, ೧-೪೬೧ ; ಬ್ರಹ್ಮದ ವಿಷಯದಲ್ಲಿ ಲೋಕದಂತೆ ಇರಬೇಕೆಂಬ ನಿರ್ಬಂಧವಿಲ್ಲ, ಏಕೆಂದರೆ ಅದು ಅನುಮಾನಗಮ್ಯವಲ್ಲ, ೧-೩೯೬ ; ಇಂಥ ಪ್ರಮಾಣವೆಂಬ ಗೊತ್ತಿಲ್ಲದಿರುವ ಲೋಕಪ್ರಸಿದ್ಧಿ ೧-೨೯೯ ; ಇದನ್ನು ಸಂಭವವಿರುವಲ್ಲಿ ಒಪ್ಪಬೇಕು, ೧-೩೦೪ ; ಲೋಕವ್ಯವಹಾರವು ಅಧ್ಯಾಸಪೂರ್ವಕ ೧-೧ ; ಸಾಂಖ್ಯರ ಮಹದಾದಿಗಳು ಲೋಕಸಿದ್ಧವಲ್ಲ, ವೇದಸಿದ್ಧವೂ ಅಲ್ಲ, ೧-೪೦೪ ; ಪ್ರತ್ಯಕ್ಷಾದಿಲೌಕಿಕಪ್ರಮಾಣಗಳು ಆತ್ಮನಿಶ್ಚಯವಾಗುವವರೆಗೆ ಪ್ರಮಾಣ, ೧-೬೩, ೪೩೬ ; ಭೋಗಭೂಮಿ. ದೇವಯಾನಶ್ರುತಿಯಲ್ಲಿ ಹೇಳಿರುವ ಅಗ್ನಿಲೋಕವೇ ಮುಂತಾದವು ಭೋಗಭೂಮಿಗಳಾದರೂ ಅಗ್ನಿಯೇ ಮುಂತಾದವರು ಆತಿವಾಹಿಕರಾಗಬಹುದು, ೨-೫೭೬ ರಿಂದ ೫೭೧ ; **ಕೇನ.** ಭೋಗಸ್ಥಾನ, ೫ ; ನಾನುನನ್ನದೆಂಬ ಮಿಥ್ಯಾಭಿಮಾನ, ಶರೀರ, ೨೩, ೬೨ ; **ಮುಂ.** ಭೋಗಸ್ಥಾನ, ೩೨, ೩೬, ೪೨, ೬೧, ೬೫, ೭೪, ೧೦೮ ; ಇಂದ್ರಿಯಸ್ಥಾನ, ೬೭ ; ಕರ್ಮಫಲ, ೨೮, ೪೦, ೪೧, ೪೫, ೬೫ ; ಬ್ರಹ್ಮ, ೧೧೮ ; **ಬೃಹ-೧.** ಪುತ್ರಾದಿ ಸಾಧನದಿಂದ ಗೆದ್ದುಕೊಳ್ಳುವ ಮೂರು ಲೋಕಗಳು, ೨೩೦, ೨೩೧ ; ಕರ್ಮಜ್ಞಾನಸಾಧ್ಯವಾದ ಫಲ, ೪೭ ; ಉಪಕಾರಿಯಾಗಿರುವದರಿಂದ ಭೋಗ್ಯನಾಗಿರುವ ಕರ್ಮಿ, ೧೯೩ ; **ಬೃಹ-೨.** ಇಹಲೋಕ ಅಥವಾ ಪರಲೋಕ,

೧೭೦, ೧೮೪ ; ಆನಂದತಾರತಮ್ಯವುಳ್ಳ ಪಿತೃಲೋಕಾದಿಗಳು, ೨೩೭ ; ಹೊರಗಿನಲೋಕಗಳಿಗಿಂತ ಬೇರೆಯಾದ ಆತ್ಮ, ಬ್ರಹ್ಮ, ೨೪೦, ೩೦೯ ; ಮನುಷ್ಯ, ಪಿತೃ, ದೇವ - ಎಂಬ ಅನಾತ್ಮ ಲೋಕಗಳಲ್ಲಿ ಒಂದು, ೫೬, ೩೦೯ ; ಪಿತೃಲೋಕ ವಿಭಾಗ, ೪೫೫ ; ಕಾರ್ಯಕರಣಸಂಘಾತ, ೧೮೬ ; **ಶಾಂ. ನಿ.** (೧) ಭೋಗಸ್ಥಾನ, ಭೂಲೋಕಾದಿಯಾಗಿ ಸತ್ಯಲೋಕದ ವರೆಗಿನ ಲೋಕಗಳು, ಮುಂ. ಭಾ. ೧-೨-೩ (ಭಾ. ಭಾ. ೩೨) ; (೨) ಇಂದ್ರಿಯ ಸ್ಥಾನಗಳು, ಮುಂ. ಭಾ. ೨-೧-೮ ; (೩) ಕರ್ಮಫಲ, ಮುಂ. ಭಾ. ೧-೨-೧ ; (೪) ನಾನು ನನ್ನದೆಂಬ ಮಿಥ್ಯಾಭಿಮಾನ, ಶರೀರ ; ಕೇ. ಭಾ. ೧-೨ (ಭಾ. ಭಾ. ೨೩) ; (೫) ಲೋಕದಲ್ಲಿ ಕಂಡಿರುವ ದೃಷ್ಟಾಂತ, ಸೂ. ಭಾ. ೨-೧-೩೩ ; (೬) ಲೋಕಪ್ರಸಿದ್ಧಿ, ಸೂ. ಭಾ. ೧-೩-೩೨ ; (೭) ಬೇರೆಬೇರೆ ಸಾಧಕರಿಗೆ ಕಾಣಬರುವ, ಅಥವಾ ಪ್ರಾಪ್ಯವಾಗಿರುವ ಬ್ರಹ್ಮ ಮುಂ. ೩-೩-೬.

**ಲೋಕಾಃ - ಈಶ.** ಕರ್ಮಫಲವನ್ನು ಅನುಭವಿಸುವ ಸ್ಥಲಗಳು, ೯.

**ಲೋಕತ್ರಯಮ್ - ಕೇನ.** ಮನುಷ್ಯಲೋಕ, ಪಿತೃಲೋಕ, ದೇವಲೋಕ - ಎಂಬ ಮೂರು ಲೋಕಗಳು, ೫.

**ಲೋಕದೃಷ್ಟಿಃ** ಬೃಹ-೧. ಸಾಮಾನ್ಯಜನರ ವ್ಯವಹಾರದೃಷ್ಟಿ, (ಪರಮಾರ್ಥವಲ್ಲ), ೧೬೪ ; **ಶಾಂ. ನಿ.** ಪರಮಾರ್ಥವಾದ ಶಾಸ್ತ್ರದೃಷ್ಟಿಯಲ್ಲ ಸ್ವಾಭಾವಿಕವಾಗಿ ಜನರಿಗೆ ಇರುವ ದೃಷ್ಟಿ, ಸೂ. ಭಾ. ೨-೨-೩, ಗೀ. ಭಾ. ೧೮-೧೭ (ಭಾ. ಭಾ. ೪೯೪).

**ಲೋಕಬುದ್ಧಿಸಿದ್ಧಮ್ - ಈಶ.** ಸಾಮಾನ್ಯರ ತಿಳಿವಳಿಕೆಗೆ ಗೊತ್ತಿರುವ, ೧.

**ಲೋಕಾಯತಿಕಾಃ - ಬ್ರ.ಸೂ-೧.** ಲೋಕದಲ್ಲಿ ಪ್ರಸಿದ್ಧರಾಗಿರುವ ಚಾರ್ವಾಕರು, ೨೦ ; ಪ್ರಶ್ನ. ಚೈತನ್ಯವೆಂಬುದು ಭೂತಗಳ ಧರ್ಮವೆನ್ನುವ ಚಾರ್ವಾಕರು, ೯೦ ; ಬೃಹ-೧. ಶರೀರವೇ ಆತ್ಮನೆಂಬ ಚಾರ್ವಾಕರು, ೪.

**ಲೋಕಾಲೋಕೌ - ಬೃಹ-೨.** ಕರ್ಮಫಲಭೋಗಕ್ಕೆ ಬೇಕಾದ ಈ ಲೋಕ ಮತ್ತು ಆಚೆಗೆ ಇರುವ ಅಲೋಕ, ೪೧.

**ಲೋಕವೇದೌ - ಬ್ರ.ಸೂ-೧.** ಲೌಕಿಕಪ್ರಮಾಣಗಳು ಮತ್ತು ವೇದ-ಪ್ರಮಾಣ, ೧೧೬, ೧೨೧, ೪೦೪.

**ಲೋಕವ್ಯವಹಾರಃ** - ಬ್ರ.ಸೂ-೧. ಜನರ ಕರ್ತೃತ್ವಭೋಕ್ತೃತ್ವರೂಪವಾದ ವ್ಯವಹಾರ, ಪ್ರಮಾಣಪ್ರಮೇಯವ್ಯವಹಾರ, ೧, ೪೨೮ ; ಬೃಹ-೧. ಜನರ ವ್ಯವಹಾರ (ಅರಿವು ಮತ್ತು ಮಾತಾಡುವಿಕೆ), ೧೫೯.

**ಲೋಕಸಂಗ್ರಹಃ** - ಭ.ಗೀ. ಜನರು ಶಾಸ್ತ್ರವಿಹಿತಮಾರ್ಗವನ್ನು ಬಿಟ್ಟು ತಪ್ಪು ಹಾದಿಯಲ್ಲಿ ನಡೆಯದಂತೆ ಒಳ್ಳೆಯ ಮಾರ್ಗದಲ್ಲಿ ನಡೆದು ತೋರಿಸುವದು. ೧೨, ೧೩, ೧೮೫, ೧೮೬, ೧೮೮, ೧೯೫, ೨೫೫, ೨೭೨, ೨೭೪, ೩೪೦.

**ಲೌಕಾಯತಿಕಾಃ** - ಬ್ರ.ಸೂ-೧. ಲೋಕದಲ್ಲಿ ಪ್ರಸಿದ್ಧರಾಗಿರುವ ಚಾರ್ವಾಕರು ; **ಶಾಂ. ನಿ.** ಲೋಕದಲ್ಲಿ ಎಲ್ಲೆಲ್ಲಿಯೂ ಕಾಣಬರುವ ಚಾರ್ವಾಕರು. ಸೂ. ಭಾ. ೧-೧-೧.

**ಲೌಕಿಕ** - ನೈ. ವೇದಪ್ರಮಾಣದಿಂದಾದದ್ದಲ್ಲದ. ಪ್ರತ್ಯಕ್ಷಾದಿಗಳು ಲೌಕಿಕಪ್ರಮಾಣಗಳು, (ಅವ); ಲೌಕಿಕಪ್ರಮಾಣಗಳಿಂದ ಕಂಡ ಸಾಧನಗಳಿಂದಲೇ ಹಿತಪ್ರಾಪ್ತಿಗೂ ಅಹಿತಪರಿಹಾರಕ್ಕೂ ಹವಣಿಸುತ್ತಾರೆ, ೧-೨೯; ವಾಕ್ಯಾರ್ಥಜ್ಞಾನವು ಲೌಕಿಕಪ್ರಮಾಣಗಳಿಗೆ ಸಿಕ್ಕತಕ್ಕದ್ದಲ್ಲ, ೩-೫೩; ಆತ್ಮನು ಲೌಕಿಕಪ್ರಮೇಯ ವಿಲಕ್ಷಣನು, ೨-೧೦೫; ಲೌಕಿಕವಾದ ರಜ್ಜುಸರ್ಪದ ಅಧ್ಯಾಸದಂತೆ ಆತ್ಮಾನಾತ್ಮರ ಇತರೇತರಾಧ್ಯಾಸವೂ ಅವಿದ್ಯೆಯನ್ನಾಶ್ರಯಿಸಿಕೊಂಡೇ ಆಗುತ್ತದೆ, ೨-೧೦೧; ಬ್ರಹ್ಮವು ಆತ್ಮನಿಗಿಂತ ಭಿನ್ನಾಭಿನ್ನ ಎಂದರೆ ಭಿನ್ನಾಭಿನ್ನಪದಗಳ ಅರ್ಥಗಳು ಅಲೌಕಿಕವಾಗುವವು, ಲೋಕದಲ್ಲಿ ಪ್ರಸಿದ್ಧವಿಲ್ಲದ ಅರ್ಥಗಳೆಂದಾಗುವದು, ೧-೭೮.

**ಲೌಕಿಕಃ** - ಬೃಹ-೧. ಲೋಕಸಿದ್ಧವಾದ (ವಸ್ತು, ಪದಪದಾರ್ಥಗಳು, ವ್ಯವಹಾರ), ೧೪೭, ೧೮೪.

**ಲೌಕಿಕಂ ಜ್ಞಾನಮ್** - ತೈ. ವೃತ್ತಿ ರೂಪವಾದ ಜ್ಞಾನವು ೧೦೨ ; **ಶಾಂ. ನಿ.** ವೃತ್ತಿಜ್ಞಾನ, ಬ್ರಹ್ಮಸ್ವರೂಪವಾದ ಜ್ಞಾನವಲ್ಲ, ತೈ. ಭಾ. ೨-೧, (ಭಾ. ಭಾ. ೧೦೨).

**ಲೌಕಿಕದೃಷ್ಟಿಃ** - ಭ.ಗೀ. ಶಾಸ್ತ್ರಸಂಸ್ಕಾರವಿಲ್ಲದ ಜನರ ಸ್ವಾಭಾವಿಕ ದೃಷ್ಟಿ, ೧೦೩೫.

**ಲೌಕಿಕಪ್ರಜ್ಞಾ** - **ಶಾಂ. ನಿ.** ಸಾಮಾನ್ಯದೃಷ್ಟಿಯ ಜನರಿಗಿರುವ ತಿಳಿವಳಿಕೆ, ತೈ. ಭಾ. ೧-೪.

**ಲೌಕಿಕಪ್ರಮಾಣಾನಿ** - **ಶಾಂ. ನಿ.** ಪ್ರತ್ಯಕ್ಷಾದಿಗಳು, ಶಾಸ್ತ್ರವಲ್ಲ, ಸೂ. ಭಾ. ೨-೧-೧೪.

**ಲೌಕಿಕಮಾನನ್ದಜಾತಮ್** - ಬ್ರ.ಸೂ-೧. ಲೋಕದಲ್ಲಿ ಆಗುವ ವಿಷಯಸುಖಗಳು, (ಬ್ರಹ್ಮಾನಂದವಲ್ಲ), ೧೦೮.

**ಲೌಕಿಕವಿಜ್ಞಾನಮ್** - ಮುಂ. ಸಾಮಾನ್ಯರ ಇಂದ್ರಿಯಗಳಿಂದಾಗುವ ಅರಿವು, ೭೩.

**ಲೌಕಿಕವೈದಿಕವ್ಯವಹಾರೌ** - ಬ್ರ.ಸೂ-೧. ಜನರು ಮಾಡುವ ಪ್ರತ್ಯಕ್ಷಾದಿವ್ಯವಹಾರಗಳು, ಮತ್ತು ಶಾಸ್ತ್ರದಲ್ಲಿ ಪ್ರಸಿದ್ಧವಾಗಿರುವ ಕರ್ಮೋಪಾಸನಾವ್ಯವಹಾರ, ೪೩೫, ೪೩೮.

**ಲೌಕಿಕಾನಂದಃ** - **ತೈ.** ವಿಷಯಗಳಿಂದ ಆಗುವ ಸುಖ, ೧೯೬, ೧೯೭ ; **ಶಾಂ.** ನಿ. ವಿಷಯಗಳಿಂದ ಜನರಿಗೆ ಆಗುವ ಸುಖ, ಬ್ರಹ್ಮಸ್ವರೂಪವಾದ ಆನಂದವಲ್ಲ, ತೈ. ಭಾ. ೨-೮ (ಭಾ. ಭಾ. ೧೯೬).

**ಲೌಕಿಕಾನಿ ಗಾನಾನಿ** - ಬ್ರ.ಸೂ-೧. ಜನರು ಹಾಡುವ ಗೀತೆಗಳು (ಸಾಮಗಳಲ್ಲ), ೧೧೪, ೧೧೫.

**ಲೌಕಿಕಾನಿ ಪ್ರಮಾಣಾನಿ** - ಬ್ರ.ಸೂ-೧. ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳು, (ವೇದವಲ್ಲ), ೪೩೬.

**ಲೌಕಿಕೀ ದೃಷ್ಟಿಃ** - ಬ್ರ.ಸೂ-೨. ಚಕ್ಷುಃಸಂಯುಕ್ತವಾದ ಅಂತಃಕರಣ ವೃತ್ತಿ, ೪೬, ೪೮.

**ವರ್ತಮಾನಾಪದೇಶಃ** - ಬೃಹ-೨. ವಿಧಾಯಕಶಬ್ದವಿಲ್ಲದೆ ವರ್ತಮಾನಕಾಲದ ಕ್ರಿಯಾಪದ ಮಾತ್ರವಿರುವ ವಾಕ್ಯ, ೫೭.

**ವನ್ಧ್ಯಾಪುತ್ರಃ** - ಬ್ರ.ಸೂ-೧. ಬಂಜೆಯ ಮಗ, (ಮಾತಿನಿಂದ ಹೇಳುವದಷ್ಟೇ ಹೊರತು ವಸ್ತುವಿಲ್ಲವೆಂಬ ವಿಕಲ್ಪಕ್ಕೆ ಉದಾಹರಣೆ), ೪೪೯ ; **ಮಾಂ.** ಬಂಜೆಯ ಮಗ, ಅತ್ಯಂತವಾಗಿಲ್ಲದ್ದು, ೧೭೯ ; **ಭ.ಗೀ.** ಬಂಜೆಯ ಮಗ, ಅತ್ಯಂತವಾಗಿಲ್ಲದ ವಸ್ತು, ೧೦೮೬, ೧೦೮೮ ; **ಶಾಂ. ನಿ.** ಬಂಜೆಯ ಮಗ, ನಿಜವಾಗಿಲ್ಲದೆ ಇದ್ದರೂ ಶಬ್ದಮಾತ್ರದಿಂದ ತಿಳಿಸಿದ್ದರಿಂದ ಆಗುವ ವಿಕಲ್ಪಕ್ಕೆ ದೃಷ್ಟಾಂತ, ಗೀ. ಭಾ. ೧೮-೪೮, (ಭಾ. ಭಾ. ೧೦೮೬).

**ವಸ್ತು** - **ಬ್ರ.ಸೂ-೨.** ಇರುವ ಪದಾರ್ಥ, ಆಗಬೇಕಾದದ್ದಲ್ಲ, ಶಾಸ್ತ್ರವು ವಸ್ತುಮಾತ್ರವನ್ನು ಹೇಳಿದರೂ ಪ್ರಯೋಜನವಿದೆ, ೧-೪೧ ; ಕೇವಲ ವಸ್ತುವನ್ನು ಹೇಳುವ

ವೇದಭಾಗವೂ ಇದೆ, ೧-೫೪ ; ಬ್ರಹ್ಮಜ್ಞಾನವು ವಸ್ತುತಂತ್ರ, ೧-೨೮, ೪೭, ೫೧ ; ಜ್ಞಾನವು ವಸ್ತುತಂತ್ರವಾದ್ದರಿಂದ ಒಂದೇ ರೂಪವಾಗಿರುತ್ತದೆ, ೧-೪೨೯ ; ನಿತ್ಯ , ಅನಿತ್ಯ ಎಂಬ ವ್ಯವಹಾರವು ಆ ವಸ್ತುವಿಗೆ ಸಂಭವಿಸಲಾರದು, ೨-೫೦ ; ನ್ಯೈ. ಇರುವ ಪದಾರ್ಥ. ವೇದಾಂತದಲ್ಲಿ ಹೇಳಿರುವ ಜ್ಞಾನವು ವಸ್ತು ಬೋಧಕ, ೧-೩, ೧೯; ಆತ್ಮವಸ್ತುಬೋಧಮಾತ್ರದಿಂದಲೇ ಪುರುಷಾರ್ಥ ವಾಗುತ್ತದೆ, ೧-೩೫; ಅವಿದ್ಯೆಯು ಯಥಾವಸ್ತುವಾಗಿ ತಿಳಿಸುವದಿಲ್ಲ , ವಿದ್ಯೆಯು ಅದಕ್ಕೆ ವಿರುದ್ಧ , ೧-೫೬; ಪರಮಾರ್ಥವಸ್ತುವನ್ನು ಕ್ರಿಯಾಕಾರಕಫಲಗಳು ಸ್ವಲ್ಪವೂ ಮುಟ್ಟವು, ೨-೫೧ ; ವಸ್ತುವನ್ನೇ ತಿಳಿಸುವ ವಾಕ್ಯವು ಕ್ರಿಯಾಪರವಾಗಲಾರದು, ಏಕೆಂದರೆ ವಸ್ತುವಿನಲ್ಲಿ ಹಾಗೂ ಇರಬಹುದು, ಹೀಗೂ ಇರಬಹುದು - ಎಂಬ ವಿಕಲ್ಪವಿಲ್ಲ, ೩-೮೨; ಜ್ಞಾನವು ವಸ್ತುತಂತ್ರ, ಕರ್ಮವು ವಸ್ತು ತಂತ್ರವಲ್ಲ, ೧-೭೬.

**ವಸ್ತುತನ್ತ್ರ** - ಬ್ರ.ಸೂ-೧. ವಸ್ತುವಿಗೆ ಅಧೀನವಾಗಿ ಆಗುವ (ಜ್ಞಾನ), ೨೮, ೪೭, ೫೧, ೪೨೯ ; ಶಾಂ. ನಿ. ಕರ್ತೃವಿಗಾಗಲಿ ವಿಧಿಗಾಗಲಿ ವಶವಾಗಿರದೆ ವಸ್ತುಸ್ವಭಾವಕ್ಕನುಗುಣವಾಗಿ ಆಗುವ ಜ್ಞಾನ. ಸ್ತ್ರೀಯನ್ನು ಅಗ್ನಿಯೆಂದು ತಿಳಿಯಬೇಕೆಂಬ ವಿಧಿಗೆ ಅನುಗುಣವಾಗಿ ತಿಳಿಯುವದು ವಸ್ತುತಂತ್ರಜ್ಞಾನವಲ್ಲ, ಧ್ಯಾನ ; ಬೆಂಕಿಯನ್ನು ಬೆಂಕಿಯೆಂದು ತಿಳಿಯುವದೂ ಬ್ರಹ್ಮವನ್ನು ಬ್ರಹ್ಮವೆಂದು ತಿಳಿಯುವದೂ ವಸ್ತುತಂತ್ರವಾದಜ್ಞಾನ, ಸೂ. ಭಾ. ೧-೧-೪.

**ವಸ್ತುಮಾತ್ರಕಥನಮ್** - ಬ್ರ.ಸೂ-೧. ಕರ್ಮಕ್ಕೆ ಸಂಬಂಧವಿಲ್ಲದ ಬರಿಯ ವಸ್ತುವನ್ನೇ ಹೇಳುವದು, ೪೧, ೫೭.

**ವಸ್ತುಸ್ವರೂಪಾನ್ವಾಖ್ಯಾನಮ್, ಸ್ವರೂಪಾನ್ವಾಖ್ಯಾನಮ್** - ಬೃಹ-೧. ವಸ್ತುವನ್ನು ಇದ್ದಂತೆ ತಿಳಿಸುವದು, (ಅನುಷ್ಠೇಯಕರ್ಮವನ್ನು ತಿಳಿಸುವದಲ್ಲ), ೧೩೫, ೧೪೧.

**ವಸ್ತುಸ್ವರೂಪಾವಧಾರಣಮ್** - ಬ್ರ.ಸೂ-೧. ವಸ್ತುವು ಇದ್ದಂತೆ ಅದನ್ನು ಗೊತ್ತುಪಡಿಸಿಕೊಳ್ಳುವದು, ವಿದ್ಯೆ , ೪.

**ವಸ್ತ್ವನ್ತರಪ್ರತ್ಯುಪಸ್ಥಾಪಿಕಾ, ಅನ್ಯತ್ವಪ್ರತ್ಯುಪಸ್ಥಾಪಕಹೇತುಃ** - ಬೃಹ-೨. ಮತ್ತೊಂದು ವಸ್ತುವನ್ನು ಕಲ್ಪಿಸಿ ತಂದೊಡ್ಡುವ (ಅವಿದ್ಯೆ), ೨೧೪, ೨೧೫.

**ವಸ್ತ್ವಾಕೃತಿಃ** - ಛಾಂ. ವಸ್ತುಸಾಮಾನ್ಯ, ೪೫೨.

**ವಾಕ್** - ಬೃಹ-೧. ಶಬ್ದ, ೧೦, ೩೩, ೨೧೩ ; ವಾಗಿಂದ್ರಿಯ ಮತ್ತು ಅದರ ಅಭಿಮಾನಿದೇವತೆ, ೫೮, ೫೯, ೬೯ ; ವೇದತ್ರಯ, ೩೨, ೩೪ ; ವಕ್ತ್ರ, ೧೩೧.

**ವಾಕ್ಯಜನಿತವಿಜ್ಞಾನಮ್, ವಾಕ್ಯಜನಿತಾತ್ಮವಿಜ್ಞಾನಮ್, ವೇದವಾಕ್ಯಜನಿತ-ವಿಜ್ಞಾನಮ್** - ಬೃಹ-೧. ವೇದವಾಕ್ಯದಿಂದ ಉಂಟಾದ ತಿಳಿವಳಿಕೆ, ೫೩, ೧೩೭.

**ವಾಕ್ಪ್ರಪಞ್ಚಃ** - ಮಾಂ. ಹೆಸರುಗಳ ಪ್ರಪಂಚ, ಹೆಸರು, ವಸ್ತು - ಎಂದು ವಿಂಗಡಿಸಿಕೊಂಡಿರುವ ದ್ವೈತದಲ್ಲಿ ಹೆಸರುಗಳ ಭಾಗ, ೪.

**ವಾಕ್ಯಪ್ರಮಾಣಮ್** - ಛಾಂ. ಶ್ರುತಿವಾಕ್ಯರೂಪವಾದ ಪ್ರಮಾಣ, ೫೪೧.

**ವಾಕ್ಯಪ್ರಮಾಣಕಾಃ** - ಬೃಹ-೧. ವಾಕ್ಯವನ್ನೂ ಪ್ರಮಾಣವೆನ್ನುವ (ಮೀಮಾಂಸಕಾದಿಗಳು), ३೨೨.

**ವಾಕ್ಯಮ್** - ನೈ. ವೇದಾಂತದಲ್ಲಿರುವ ವೇದಾಂತಾಗಮ ವಾಕ್ಯದಿಂದಲೇ ಸಮ್ಯಗ್ಜ್ಞಾನವಾಗುವದು, (ಅವ), ೧-೮; ಈ ವಾಕ್ಯವು ಸ್ವತಃ ಸಿದ್ಧವಾದ ವಸ್ತುವನ್ನು ಹೇಳುವದಿಲ್ಲವೆಂದು ಮತ್ತೊಂದು ವಾಕ್ಯಾರ್ಥವನ್ನು ಕಲ್ಪಿಸುವದು ಯಾರಿಂದಲೂ ಆಗಲಾರದು, ೧-೯೮, ೩-೧೧೯; ವಾಕ್ಯಜ್ಞಾನವನ್ನು ಅಭ್ಯಾಸಮಾಡುವದರಿಂದ ಅವಾಕ್ಯಾರ್ಥರೂಪವಾದ ಮತ್ತೊಂದು ಜ್ಞಾನವುಂಟಾಗುವದೆಂದು ಹೇಳುವದು ಸರಿಯಲ್ಲ ,೧-೬೭; ಆತ್ಮವಸ್ತು ವಾಕ್ಯೈಕಗಮ್ಯವಲ್ಲ, ಅನುಭವಮಾತ್ರಸ್ವರೂಪವಾಗಿದೆ, ೧-೮೯; ವಾಕ್ಯವು ತತ್ತ್ವವನ್ನು ತಿಳಿಸುವದಿಲ್ಲವೆಂಬವರ ಪಕ್ಷದಲ್ಲಿ ವಾಕ್ಯವು ಅಪ್ರಮಾಣವಾಗುತ್ತದೆ, ೩-೧೨೨; ವಾಕ್ಯವು ಕ್ರಿಯಾರ್ಥಕವಲ್ಲ, ೧-೯೧.

(ವಿಶೇಷಃ ವಾಕ್ಯಾರ್ಥವನ್ನೇ ಕಾರಣಾಂತರದಿಂದ ಅವಾಕ್ಯಾರ್ಥವೆಂದು ಕರೆಯುವದರಿಂದ ಸೌಕರ್ಯಕ್ಕಾಗಿ ಅದರ ವಿವರವನ್ನು ಈ ಕೆಳಗೆ ಕೊಟ್ಟಿದೆ).

***ಅವಾಕ್ಯಾರ್ಥಃ*** - ತತ್ತ್ವಮಸ್ಯಾದಿವಾಕ್ಯಗಳಿಂದ ತದರ್ಥವೇ ತ್ವಮರ್ಥವು ಎಂಬ ಅವಾಕ್ಯಾರ್ಥವನ್ನು ಅರಿತು ವಾಙ್ಮನಸ್ಸುಗಳನ್ನು ಮೀರಿದ ಸ್ವರೂಪನಾಗುವನು, ३-೧, ೨; ಅವಾಕ್ಯಾರ್ಥತ್ವವನ್ನು ವಾಕ್ಯದ ಪದಗಳ **ಸಾಮಾನಾಧಿಕರಣ್ಯವೇ** ಮುಂತಾದವುಗಳಿಂದ ಅರಿತುಕೊಳ್ಳುತ್ತಾನೆ ; ವಾಕ್ಯದಿಂದ **ಸಂಸರ್ಗಾತ್ಮಕಜ್ಞಾನ**ವಾಗುವದೆಂದೂ ಅದರ ಅಭ್ಯಾಸದಿಂದ ಅವಾಕ್ಯಾರ್ಥಾತ್ಮಕವಾದ ನೇರಾದ ಜ್ಞಾನವಾಗುವದೆಂದೂ ಹೇಳುವದು ಸರಿಯಲ್ಲ, ವಾಕ್ಯದಿಂದಲೇ ನೇರಾಗಿ ಆ ಜ್ಞಾನವಾಗುತ್ತದೆ, ३-೯ ರಿಂದ ೧೨, ३೯.

**ವಾಕ್ಯಶೇಷಃ** - ಬ್ರ.ಸೂ-೧. ಉಪಕ್ರಮದಲ್ಲಿ ಸಂದಿಗ್ಧವಾದದ್ದನ್ನು ನಿರ್ಣಯಿಸುವ ಮುಂದಿನ ವಾಕ್ಯಭಾಗ, ೧೧೭, ೧೨೦, ೧೨೨, ೧೨३, ೨೫೭,

೨೫೯, ೩೬೨, ೩೭೧, ೩೭೪ ; ಬೃಹ-೧. ಒಂದು ವಿಷಯವನ್ನು ಹೇಳಿದ ವಾಕ್ಯದ ಹಿಂದುಗಡೆ ಅದೇ ವಿಷಯಕ್ಕೆ ಹೇಳಿರುವದು, ೧೪೩.

**ವಾಕ್ಯಾಭಾಸಯುಕ್ತ್ಯಾಭಾಸಾಃ** - ಬ್ರ.ಸೂ-೧. ಪ್ರಮಾಣವಾಕ್ಯಗಳಂತೆಯೂ ಸರಿಯಾದಯುಕ್ತಿಗಳಂತೆಯೂ ತೋರುವವಾಕ್ಯಗಳು ಮತ್ತು ಹುಸಿಯುಕ್ತಿಗಳು, ೨೦, ೬೪.

**ವಾಗಾದಿಸಂಯಮಃ** - ಬ್ರ.ಸೂ-೧. ಪರಮಾತ್ಮನನ್ನು ಅರಿತುಕೊಳ್ಳುವದಕ್ಕೆ ಮಾಡಬೇಕಾದ ವಾಗಾದಿಗಳ ವಿಲಯ, ೩೪೬.

**ವಾಚಾರಮ್ಭಣಮ್** - **ಛಾಂ.** ಬರಿಯ ಮಾತಿನಿಂದ ಹೇಳಲ್ಪಡುವ (ಕಾರ್ಯ), ೨೩೫, ೪೪೭, ೪೬೮.

**ವಾಮದೇವ್ಯಮ್** - **ಛಾಂ.** ಒಂದು ಬಗೆಯ ಸಾಮ, ("ಕಯಾನಶ್ಚಿತ್ರ ಆಭುವತ್" ಋ. ೪-೩೧-೧), ೧೫೧.

**ವಾಯುಃ** - ಬ್ರ.ಸೂ-೧. ಪ್ರಾಣ, ೧೩೫, ೧೩೭, ೩೧೫ ; ವಾಯುದೇವತೆ, ೩೧೬ ; **ತೈ.** ಕ್ರಿಯಾಶಕ್ತಿಪ್ರಧಾನವಾದ ಅಪರಬ್ರಹ್ಮ, ಸೂತ್ರಾತ್ಮ ೧೪.

**ವಾಯುಃ, ಸೂತ್ರಾತ್ಮಾ** - **ಬೃಹ-೨.** ಅಶ್ವಮೇಧಯಾಜಿಗಳು, ಅದನ್ನು ಸಂಪಾದನೆಯಿಂದ ಉಪಾಸನೆಮಾಡುವವರೂ ಪಡೆಯುವ ಕ್ರಿಯಾಪ್ರಧಾನವಾದ ಸಮಷ್ಟಿವ್ಯಷ್ಟಿರೂಪ, ಸೂತ್ರಾತ್ಮ, ೪೩, ೬೭, ರಿಂದ ೬೯, ೭೫, ರಿಂದ ೭೭.

**ವಾಯುವಿಕಾರಃ** - ಬ್ರ.ಸೂ-೧. ವಾಯುವಿನ ಕಾರ್ಯವಿಶೇಷವಾದ ಪಂಚವೃತ್ತಿಪ್ರಾಣ, ೧೨೧, ೧೨೨, ೧೨೪.

**ವಾಸನಾ** - **ಪ್ರಶ್ನ.** ಕನಸಿನಲ್ಲಿ ಬೇರೆಯ ವಸ್ತುವಿನಂತೆ ತಪ್ಪುತಿಳಿವಳಿಕೆಯಿಂದ ತೋರುವ ಮನಸ್ಸಿನ ಸಂಸ್ಕಾರ, ೬೬, ೬೭ ; **ಮಾಂ.** ಅನುಭವದಿಂದ ಉಂಟಾಗುವ ಸಂಸ್ಕಾರ, ೧೪, ೨೨, ೯೬, ೧೯೦ ; **ಬೃಹ-೨.** ಎಚ್ಚರದ ಅನುಭವದಿಂದಾದ ಅಂತಃಕರಣ ಸಂಸ್ಕಾರ, ೧೮೬, ೧೮೭.

**ವಾಸನಾಃ** - **ಬೃಹ-೧.** ಅನುಭವದಿಂದುಂಟಾಗುವ ಸ್ಮೃತಿಗೆ ಕಾರಣವಾಗಿರುವ ಸಂಸ್ಕಾರಗಳು, ೧೬೧, ೧೯೪.

**ವಾಸನಾವಿಶಿಷ್ಟಃ** - ಬ್ರ.ಸೂ-೧. ಅಂತಃಕರಣವಾಸನೆಗಳಿಂದ ಕೂಡಿದ ಸ್ವಪ್ನಾಭಿಮಾನಿಯಾದ ಜೀವ, ೮೫.

**ವಾಸುದೇವಃ - ಭ.ಗೀ.** ಭಗವಂತ, ಪರಮಾರ್ಥವಸ್ತುತತ್ತ್ವ, ೬, ೭, ೧೫, ೪೬, ೫೪, ೧೧೮, ೨೦೩, ೨೦೫, ೨೧೬, ೨೩೫, ೪೭೬, ೪೭೮, ೪೮೦, ೧೧೧೦, ೧೧೧೧.

**ವಾಸುದೇವಾಖ್ಯಃ - ಕಠ.** ಪರಮಾತ್ಮನು, ೯೬.

**ವಿಕಲ್ಪನಾ - ವಿಕಲ್ಪಃ - ಬ್ರ.ಸೂ-೧.** ಹೀಗೂ ಇರಬಹುದು, ಹಾಗೂ ಇರಬಹುದು - ಎಂಬುದು, ೨೮, ೩೬೫, ೩೬೯, ೪೬೪ ; **ಬ್ರ.ಸೂ-೨.** ಹಾಗೂ ಇರಬಹುದು, ಹೀಗೂ ಇರಬಹುದು ಎನ್ನುವದು. ಕ್ರಿಯೆಯಲ್ಲಿರುವಂತೆ ವಸ್ತುವಿನಲ್ಲಿ ವಿಕಲ್ಪವಿರಲಾರದು, ೧-೨೮ ; ಜಗತ್ಕಾರಣದ ವಿಷಯದಲ್ಲಿ ವಿಕಲ್ಪಕ್ಕೆ ಅವಕಾಶವಿಲ್ಲ , ೧-೩೬೫ ; ಪ್ರಪಂಚವು ಅಸತ್ತಾಗಿತ್ತು ಎಂಬ ಶ್ರುತಿಯಲ್ಲಿ ವಿಕಲ್ಪಾಂತರವಿಲ್ಲ, ೧-೩೬೯ ; ನಿರವಯವಬ್ರಹ್ಮವು ಪರಿಣಮಿಸುತ್ತದೆ ಎಂಬಲ್ಲಿ ವಿಕಲ್ಪವಿಲ್ಲ, ೧-೪೬೪ ; **ಮಾಂ.** ಮನಸ್ಸಿನ ಕಲ್ಪನೆ, ಹುಸಿತೋರಿಕೆ, ೪, ೩೫, ೩೮, ೪೧, ೪೨, ೫೬, ೫೭, ೧೦೩, ೧೦೪, ೧೧೪, ೧೮೩, ೧೭೬, ೩೧೯ ; **ಶಾಂ. ನಿ.** (೧) ವಿಷಯಗಳನ್ನು ಇಂಥಿಂಥದ್ದೆಂದು ಕಲ್ಪಿಸುವ ಮನಸ್ಸಿನ ಧರ್ಮ ; (೨) ಹೀಗೂ ಆಗಬಹುದು, ಹಾಗೂ ಆಗಬಹುದೆಂದು ಕಲ್ಪಿಸುವದು. ಕ್ರಿಯೆಯಲ್ಲಿ ವಿಕಲ್ಪವಿರಬಹುದು, ವಸ್ತುವಿನಲ್ಲಿರಲಾರದು. ಸೂ. ಭಾ. ೧-೧-೪.

**ವಿಕಲ್ಪಃ - ಈಶ.** ವಿಧವಿಧವಾಗಿ ಕಲ್ಪಿಸುವ ಮನಸ್ಸು , ೧೧ ; ಹೀಗೂ ಇರಬಹುದು, ಹಾಗೂ ಇರಬಹುದು - ಎಂದು ಕಲ್ಪಿಸುವದು, ೪೨ ; **ತೈ.** ವಸ್ತುವಿಲ್ಲದೆ ಬರಿಯ ಮಾತಿನಿಂದ ಉಂಟಾಗುವ ಪ್ರತ್ಯಯ ; ದ್ರವ್ಯ , ಗುಣ ಎಂದು ಮುಂತಾಗಿ ಕಲ್ಪಿಸುವದು, ೧೫೧, ೧೭೭, ೨೨೧.

**ವಿಕಾರಃ - ಬ್ರ.ಸೂ-೧.** ಕಾರ್ಯ, ೧೧೦, ೧೧೫, ೧೪೭, ೧೬೫, ೧೯೦, ೨೨೩, ೨೩೮, ೩೯೪, ೪೧೦, ೪೩೨, ೪೩೫, ೪೩೭ ; **ಬ್ರ.ಸೂ-೨.** ಕಾರ್ಯ. ವಿಕಾರದ ಧರ್ಮಗಳನ್ನು ಸೇರಿಸಿಕೊಂಡು ಉಪಾಸನೆಮಾಡಬೇಕೆಂದು ವಿಧಿಸಿದೆ, ೧-೧೧೫ ; ಪರಮಾತ್ಮನು ವಿಕಾರಗಳನ್ನು ಸಂಹರಿಸುವದರಿಂದ ಅತ್ತೃ, ೧-೧೬೫ ; ಇವನು ಒಳಗಿದ್ದು ಆಳುವದರಿಂದ ಅಂತರ್ಯಾಮಿ, ೧-೧೯೦ ; ಶ್ರುತಿಯಲ್ಲಿ ವಿಕಾರವೆಂಬ ಅನೃತವನ್ನು ಧ್ಯಾನಿಸುವವನ ನಿಂದೆಯಿದೆ, ೧-೨೨೩ ; ಬ್ರಹ್ಮವೇ ವಿಕಾರರೂಪದಿಂದ ಪರಿಣಮಿಸುತ್ತದೆ, ೧-೩೯೪ ; ಅತ್ಯಂತಸಾರೂಪ್ಯವಿದ್ದರೆ ಪ್ರಕೃತಿವಿಕಾರಭಾವವಿಲ್ಲ , ೧-೪೧೫ ; ಜ್ಞಾನವಾಗುವವರೆಗೂ ವಿಕಾರದಲ್ಲಿ ಅನೃತತ್ವಬುದ್ಧಿಯುಂಟಾಗದು, ೧-೪೩೬ ; ವಿಕಾರವೆಲ್ಲವೂ ವಿಭಕ್ತವಾಗಿರುತ್ತದೆ, ೨-೯೮ ; ಒಂದು ವಿಕಾರದಿಂದ ಇನ್ನೊಂದು ಉಂಟಾಗುವದೆಂದರೆ ಅನವಸ್ಥೆ ,

೨-೧೨೬ ; ಪರಮೇಶ್ವರನೇ ಆಯಾ ಕಾರಣರೂಪದಿಂದ ಆಯಾ ವಿಕಾರವನ್ನು ಸೃಜಿಸುತ್ತಾನೆ, ೨-೧೨೩ ; ತೈ. ಕಾರ್ಯ, ೯೮, ೧೮೧ ; ಛಾಂ. ಕಾರ್ಯ, (ಅನಾತ್ಮ), ೨೩.೫, ೪೪೭, ೪೬೫, ೪೬೮, ೪೭೧, ೬೧೧ ; ಬೃಹ-೧. ಪರಿಣಾಮ, ಕಾರ್ಯ, ೩೧೪, ೩.೧೬ ; ಭ.ಗೀ. ವಸ್ತುವಿಗೆ ಆಗುವ ಹುಟ್ಟು, ಬೆಳವಣಿಗೆ - ಮುಂತಾದ ಆರು ಮಾರ್ಪಾಡುಗಳಲ್ಲಿ ಒಂದು, ೪೦, ೪೨ ; ಸಾಂಖ್ಯರು ಹೇಳುವ ಮಹತ್ತೇ ಮುಂತಾದ ಹದಿನಾರು ಕಾರ್ಯಗಳು, ೮೧೦ ; ಕಾರ್ಯ, ೨೬, ೨೯, ೮೮, ೮೧೯, ೮೧೧ ; ಶಾಂ. ನಿ. (೧) ಮಾರ್ಪಾಡು, ಸೂ. ಭಾ. ೧-೧-೨ ; (೨) ಕಾರ್ಯ, (ಕಾರಣವಲ್ಲ), ಸೂ. ಭಾ. ೧-೧-೧೩.

**ವಿಕಾರ್ಯ** - ಬ್ರ.ಸೂ-೧. ಮಾರ್ಪಡಿಸುವದಕ್ಕಾಗತಕ್ಕದ್ದು. (ಕರ್ಮ-ಕಾರ್ಯದ ನಾಲ್ಕು ವಿಧಗಳಲ್ಲಿ ಒಂದು), ೪೮, ೪೯.

**ವಿಕಾರ್ಯಮ್** - **ಈಶ.** ಮಾರ್ಪಾಡಾಗತಕ್ಕದ್ದು ; ಕರ್ಮದ ಫಲಕ್ಕಿರುವ ನಾಲ್ಕು ರೂಪಗಳಲ್ಲಿ ಒಂದು, ೧.

**ವಿಕಾರಜಾತಮ್** - **ಈಶ.** ಕಾರ್ಯಸಮೂಹವು, ೩.

**ವಿಕಾರಾನೃತಜೀವಾತ್ಮ ವಿಜ್ಞಾನಮ್** - **ಛಾಂ.** ಕಾರ್ಯವೂ ಹುಸಿಯೂ ಆದ ಜೀವಾತ್ಮನೆಂಬ ತಿಳಿವಳಿಕೆ, ೫೪೦.

**ವಿಕ್ರಿಯಾ** - ಭ.ಗೀ. ವಸ್ತುವಿಗೆ ಆಗುವ ಹುಟ್ಟು ಮುಂತಾದ ಮಾರ್ಪಾಡು, ೩೯, ೪೦, ೪೫.

**ವಿಕ್ಷೇಪಃ** - ಭ.ಗೀ. ಚಿತ್ತದ ಚಂಚಲತೆ, ೧೦೫, ೪೩೫.

**ವಿಚಿತ್ರಶಕ್ತಿಯೋಗಃ** - ಬ್ರ.ಸೂ-೧. ಬಗೆಬಗೆಯ ಶಕ್ತಿಯುಳ್ಳದ್ದಾಗಿರುವದು, ೪೫೬, ೪೬೮.

**ವಿಜ್ಞಾನಮ್** - ಬ್ರ.ಸೂ-೧. ಬೌದ್ಧರು ಒಪ್ಪಿರುವ ಕ್ಷಣಿಕವಾದ ವಿಜ್ಞಾನ, ೨೦; ಬ್ರಹ್ಮ - ಮುಂತಾದದ್ದರ ಅನುಭವರೂಪವಾದ ಅರಿವು ; ೪೫, ೪೬ ; **ಪ್ರಶ್ನ.** ಆಲೋಚನೆ, ೫ ; ಅನುಭವ, ೬೮ ; ಚೈತನ್ಯ ೬೮ ; ಬುದ್ಧ್ಯಾದಿಗಳು, ೭೪ ; ಅರಿಯುವ ಸ್ವಭಾವ, ೭೪; **ಮುಂ.** ಬ್ರಹ್ಮವನ್ನು ಶಾಸ್ತ್ರಾಚಾರ್ಯರ ಉಪದೇಶದಿಂದ ಇಂಥದ್ದೆಂದು ಗೊತ್ತಾಗಿ ಅರಿತುಕೊಳ್ಳುವದು, ೪೭, ೭೦, ೮೧, ೮೩, ೧೧೨, ೧೧೮; **ತೈ.** ಉಪಾಸನೆ ೨೪, ೫೩ ; ಆತ್ಮಜ್ಞಾನ ೧೧, ೪೦, ೫೯, ೭೮, ೧೦೯ ; ವೇದಾರ್ಥನಿಶ್ಚಯ ೧೩೮, ೧೩೯, ೧೪೧ ; **ಬೃಹ-೨.** ಬುದ್ಧಿವೃತ್ತಿಯಾದ ಕ್ಷಣಿಕವಿಜ್ಞಾನ, ೧೭೭, ೧೭೮ ; ಸರ್ವಗ್ರಾಹಕವಾದ ಚೈತನ್ಯ , ೧೭೯ ;

ವಿಶೇಷವಿಜ್ಞಾನ, ೨೪೯ ; ಭ.ಗೀ. ಶಾಸ್ತ್ರಗುರುಗಳಿಂದ ತಿಳಿದದ್ದನ್ನು ಅನುಭವಕ್ಕೆ ತಂದುಕೊಳ್ಳುವದು, ೪೫, ೯೦, ೧೧೬, ೨೨೪, ೪೫೪, ೫೪೫ ; ಚೈತನ್ಯ, ೭೭೩. ; ಬೃಹ-೧. ಅಂತಃಕರಣ, ೨೦೭ ; ಉಪಾಸನೆ, ೬, ೮, ೫೬ ; ವಸ್ತುವನ್ನು ಇದ್ದಂತೆ ತಿಳಿದುಕೊಳ್ಳುವ ಅರಿವು, ೫, ೭, ೧೩೪.

**ವಿಜ್ಞಾನಕ್ರಿಯಾಶಕ್ತಿ ದ್ವಯಮ್** - ಕಠ. ಅರಿಯುವ ಶಕ್ತಿ, ಕೆಲಸಮಾಡುವ ಶಕ್ತಿ - ಎಂಬ ಎರಡು ಹಿರಣ್ಯಗರ್ಭನ ಶಕ್ತಿಗಳು, ೧೫೭.

**ವಿಜ್ಞಾನಘನ** - ಬೃಹ-೧. ಬರಿಯರಿವಿನ ಗಟ್ಟಿಯಾದ (ಪ್ರಜ್ಞಾನಘನನಾದ ಆತ್ಮ) ೩೭೨, ೩೭೫.

**ವಿಜ್ಞಾನಮಯಃ** - ಬ್ರ.ಸೂ-೧. ವಿಜ್ಞಾನವೆಂಬ ಉಪಾಧಿಯುಳ್ಳ (ಜೀವ), ೩೭೭, ೩೭೮ ; **ಮುಂ.** ಬುದ್ಧಿವಿಜ್ಞಾನವೆಂಬ ಉಪಾಧಿಯುಳ್ಳ ಜೀವ, ೧೨೦ ; **ತೈ.** ವೇದಾರ್ಥನಿಶ್ಚಯದಿಂದಾದ ಬುದ್ಧಿ, ಒಂದು ಕೋಶ, ೧೩೮, ೧೩೯, ೧೪೦, ೧೪೧, ೧೫೩, ೨೧೦.

**ವಿಜ್ಞಾನಮಯಃ, ವಿಜ್ಞಾನಾತ್ಮಾ** - ಬೃಹ-೧. ವಿಜ್ಞಾನದ ಎಂದರೆ ಅಂತಃಕರಣದಲ್ಲಿ, ಆದರಿಂದ ಅರಿಯಲ್ಪಡುತ್ತಾ ಅರಿಯುವವನಾಗಿರುವ (ಆತ್ಮ), ೨೮೭, ೨೯೩ ; ಬೃಹ-೨. ವಿಜ್ಞಾನಪ್ರಾಯನು, ಬುದ್ಧಿವಿಜ್ಞಾನಸಂಪರ್ಕದಿಂದ ಕಾಣಬರುವ ಜೀವರೂಪನಾದ ಆತ್ಮ, ೧೫೭, ೧೭೧ ; ಪರಮಾತ್ಮವಿಜ್ಞಪ್ತಿ ವಿಕಾರ (ಭ.ಪ್ರ.), ೧೭೧.

**ವಿಜ್ಞಾನವಾದಿನಃ** - ಬೃಹ-೧. ತನ್ನನ್ನು ತಾನರಿಯುವ ಕ್ಷಣಿಕವಿಜ್ಞಾನವೇ ಆತ್ಮನೆಂಬ ಬೌದ್ಧರು, ೧೨೬, ೧೯೬.

**ವಿಜ್ಞಾನಾತ್ಮಾ** - ಬ್ರ.ಸೂ-೧. ಅರಿಯುವ ಅಂತಃಕರಣವೆಂಬ ಉಪಾಧಿ ಯುಳ್ಳವ, (ಜೀವ), ೧೦೪, ೧೧೬, ೧೭೦, ೧೭೩, ೧೮೪, ೨೨೬, ೨೫೩, ೨೭೭, ೩೭೯, ೩೮೩, ೩೮೬, ೩೮೮ ; **ಪ್ರಶ್ನ.** ಅರಿಯುವ ಸ್ವಭಾವದ ಜೀವನು, ೭೪ ; **ಶಾಂ.** ನಿ. ಬುದ್ಧಿ ಎಂಬ ಉಪಾಧಿಯುಳ್ಳ ಜೀವ, ಸೂ. ಭಾ. ೧-೨-೧೭.

**ವಿಜ್ಞಾನಾತ್ಮ ಪರಮಾತ್ಮಾನೌ** - ಬ್ರ.ಸೂ-೧. ಜೀವ ಮತ್ತು ಪರಮಾತ್ಮ - ಇವರು, ೧೭೦, ೧೭೧, ೧೭೨.

**ವಿಜ್ಞಾನಸ್ವಭಾವಃ** - ಕಠ. ಅರಿವಿನ ಸ್ವರೂಪವೇ ಆಗಿರುವ ಆತ್ಮನು, ೧೧೫.

**ವಿಜ್ಞಾನೈಕರಸಮ್** - ಕಠ. ಅರಿವೆಂಬ ಒಂದೇ ಜಾತಿಯ ಬ್ರಹ್ಮ, ೧೨೩.

**ವಿಜ್ಞಪ್ತಿಸ್ವಭಾವಃ** - **ಛಾಂ.** ಚೈತನ್ಯರೂಪವಾದ (ಆತ್ಮನ ಬೆಳಕು), ೬೨೩.

**ವಿಜಿಜ್ಞಾಸಿತವ್ಯ** - **ಛಾಂ.** ತನ್ನ ಅನುಭವಕ್ಕೆ ತಂದುಕೊಳ್ಳಬೇಕಾದ (ಉಪಾಸ್ಯ ಅಥವಾ ಜ್ಞೇಯ), ೬೦೭, ೬೦೮, ೬೪೬, ೬೪೮.

**ವಿತಥ** - **ಮಾಂ.** ಹುಸಿಯಾದ, ೭೬, ೮೪, ೧೨೪, ೧೪೭.

**ವಿತ್ತಮ್** - **ಬೃಹ-೧.** ಗವಾದಿಮಾನುಷವಿತ್ತ, ಮತ್ತು ಉಪಾಸನಾರೂಪವಾದ ದೈವವಿತ್ತ - ಎಂಬ ಸಾಧನ, ೧೯೫, ೧೯೮.

**ವಿದ್ಯಾ** - **ಬ್ರ.ಸೂ-೨.** ವಸ್ತುಸ್ವರೂಪವನ್ನು ನಿರ್ಧರಿಸುವ ಜ್ಞಾನ; ಉಪಾಸನೆ; **ಈಶ.** ಉಪಾಸನೆ, ೨೨, ೨೪, ೨೬ ; ಪರಮಾತ್ಮನನ್ನು ಅರಿತುಕೊಳ್ಳುವದು, ೨೦, ૩೬ ; **ಕೇನ.** ಉಪಾಸನೆ, ೫ ; ಜ್ಞಾನ, ೪೬, ೬೪, ೮೪ ; **ಪ್ರಶ್ನ.** ಬ್ರಹ್ಮಜ್ಞಾನ, ೧, ೫೧, ೭೬, ೧೦೯ ; ಉಪಾಸನೆ, ೧೪, ೫೧ ; **ಕಠ.** ಬ್ರಹ್ಮದ ಉಪಾಸನೆ ಅಥವಾ ಅರಿವು, ೨, ೪, ೫, ೬, ೪೮, ೮೪, ೮೭ ; **ಮುಂ.** ಆತ್ಮಜ್ಞಾನ, ೧, ೨, ೫, ೬, ೮, ೯, ೧೧೨, ೧೧೪, ೧೨೨, ೧೨೬ ; **ತೈ.** ಉಪಾಸನೆ ಮತ್ತು ಜ್ಞಾನ ૩೦, ೫೬, ೬೯, ೮೨ ; ಜ್ಞಾನ, ೫೯, ೭೮, ೮೨, ೮૩, ೮೪, ೮೫, ೮೬, ೨೧೮ ; **ಛಾಂ.** ಉಪಾಸನೆ ೨, ೧೬, ೨೨೮, ೨೬೮, ೨೭೪, ೨೯೭, ૩૩೪, ૩೮೬ ; ಜ್ಞಾನ, ೪೪૩, ೬೦೪, ೬೦೮ ; **ಬೃಹ-೧.** ಉಪಾಸನೆ, ೬, ೧೫೦ ; ವಸ್ತುತಂತ್ರವಾದ ಅರಿವು, (ಆತ್ಮಜ್ಞಾನ), ೧೫೧, ೧೭೦ ; **ಬೃಹ-೨.** ಸಾಯುವಕಾಲಕ್ಕೆ ಹಿಂಬಾಲಿಸುವ ಕರ್ಮಪೂರ್ವಪ್ರಜ್ಞೆಗಳೊಡನಿರುವ ಜ್ಞಾನಸಾಮಾನ್ಯ, ೨೬೦ ; ಕರ್ಮಾರ್ಥವಾದ ವೇದವಿದ್ಯೆ, ೨೮೭ ; ಅವಿದ್ಯೆಯನ್ನು ಕಳೆಯುವ ಆತ್ಮಜ್ಞಾನ, ೫೮, ೨೧೦ ; ಉಪಾಸನೆ, ೨೧೦ ; **ಭ.ಗೀ.** ಆತ್ಮಜ್ಞಾನರೂಪವಾದ ಅಂತಃಕರಣವೃತ್ತಿ, ೪૩, ೪೪, ૩೫೦, ೭೫೯.

**ವಿದ್ಯಾಕ್ರಿಯಾಶಕ್ತಿಸಂಮೂರ್ಛಿತಾತ್ಮಾ** - **ಛಾಂ.** ಜ್ಞಾನಶಕ್ತಿಕ್ರಿಯಾಶಕ್ತಿಗಳೆರಡೂ ಸೇರಿರುವ ಪ್ರಾಣ, ೬೮೦.

**ವಿದ್ಯಾಪರಿಪಾಕಃ** - **ತೈ.** ಜ್ಞಾನವು ಬಲಿತುಕೊಳ್ಳುವದು, ೮೨.

**ವಿದ್ಯಾಪ್ರತ್ಯಯಸಂತತಿಃ** - **ಬೃಹ-೧.** ವಾಕ್ಯಜ್ಞಾನವನ್ನು ಸತತವಾಗಿ ಅಭ್ಯಾಸ ಮಾಡುವದು, ೧೭೧.

**ವಿದ್ಯಾವಿದ್ಯಾಪ್ರತ್ಯಯೌ** - **ಛಾಂ.** ಆತ್ಮಸ್ವರೂಪನಿಶ್ಚಯರೂಪವಾದ ಪ್ರತ್ಯಯ, ಆತ್ಮನ ವಿಷಯದ ಮಿಥ್ಯಾಪ್ರತ್ಯಯ - ಇವುಗಳು, ೧೭೯.

**ವಿದ್ವಾನ್ - ಮುಂ.** ಉಪಾಸಕ, ೬೭, ಜ್ಞಾನಿ, ೧೦೩ ; **ಬೃಹ-೧.** ಉಪಾಸಕ, ೬೭ ; ಜ್ಞಾನಿ, ೧೯೬ ; **ಭ.ಗೀ.** ಆತ್ಮತತ್ತ್ವವನ್ನು ತಿಳಿದುಕೊಂಡಿರುವವನು, ೪೨, ೪೩, ೪೪, ೪೬, ೧೩೬, ೧೯೪.

**ವಿದ್ಯಾವಾನ್, ವಿದ್ವಾನ್ - ತೈ.** ಆತ್ಮಜ್ಞಾನಿ, ೧೫೫, ೧೫೬, ೧೯೩, ೨೦೯, ೨೨೨, ೨೨೬.

**ವಿದ್ಯಾಸಮಾಧಿಃ ಬ್ರ.ಸೂ-೧.** ಉಪಾಸನೆಯಿಂದಾದ ಚಿತ್ತ ಸಮಾಧಾನ, ೪೨.

**ವಿದ್ಯಾಸಂಪ್ರದಾಯಕರ್ತೃಪಾರಂಪರ್ಯಮ್ - ಮುಂ.** ಬ್ರಹ್ಮವಿದ್ಯೆಯನ್ನು ಶಿಷ್ಯರಿಗೆ ಹೇಳಿಕೊಡುವ ಗುರುಗಳ ಪರಂಪರೆ, ೧.

**ವಿದ್ಯಾಸಂಪ್ರದಾನನ್ಯಾಯಃ - ಛಾಂ.** ಜ್ಞಾನದ ರಹಸ್ಯವನ್ನು ಉಪದೇಶ ಮಾಡುವ ವಿಧಾನ, ೪೧೯.

**ವಿದ್ಯಾಸಹಿತಮ್, ವಿದ್ಯಾಸಂಯುಕ್ತಮ್ - ಬೃಹ-೨.** ಉಪಾಸನೆ-ಯಿಂದೊಡಗೂಡಿದ (ಕರ್ಮ), ೩೧, ೩೬, ೫೬.

**ವಿಧ್ವಸ್ತಸರ್ವೋಪಾಧಿ, ಸರ್ವೋಪಾಧಿವಿವರ್ಜಿತ - ಭ.ಗೀ.** ಎಲ್ಲಾ ಉಪಾಧಿಗಳೂ ನಾಶವಾಗಿರುವ, ಯಾವ ಉಪಾಧಿಯೂ ಇಲ್ಲದ (ಆತ್ಮ), ೭೨೪, ೮೩೪.

**ವಿಧಿಃ - ಬ್ರ.ಸೂ-೨.** ಹೀಗೆ ಮಾಡಬೇಕೆಂದು ತಿಳಿಸುವ ವೇದವಾಕ್ಯ. ವಿಧಿ ರೂಪವಾದ ಶಾಸ್ತ್ರವು ಅವಿದ್ಯಾಪೂರ್ವಕ, ೧-೭ ವಿಧಿಯೆಂಬುದು ಕರ್ತವ್ಯವಿಷಯದಲ್ಲಿ ಸಾಧಕ, ೧-೨೮ ; ವಿಧಿಸಂಬಂಧವಿಲ್ಲದಿದ್ದರೆ ವೇದವಾಕ್ಯಗಳಿಗೆ ಸಾರ್ಥಕವಿಲ್ಲವೆಂಬ ವಾದವೂ, ಅದರ ಖಂಡನೆಯೂ, ೧-೩೫, ೩೮ ; ಪ್ರತಿಪತ್ತಿ ವಿಧಿಗೆ ಬ್ರಹ್ಮವೂ ಶೇಷವೆಂಬ ವಾದವೂ ಅದರ ಖಂಡನೆಯೂ, ೧-೩೯ ರಿಂದ ೬೨; ಶಾಸ್ತ್ರಕ್ಕೆ ಪ್ರವೃತ್ತಿನಿವೃತ್ತಿವಿಧಿಗಳ ಸಂಬಂಧವಿರಲೇಬೇಕೆಂಬುದು ಸರಿಯಲ್ಲ, ೧-೫೪ ; ವಿಧಿಪ್ರಧಾನವಲ್ಲದ ಬ್ರಹ್ಮವಾಕ್ಯಗಳಿಂದಲೇ ಬ್ರಹ್ಮವಿಜ್ಞಾನ, ೨-೩೧೮ ; ಜ್ಞಾನವಾದಬಳಿಕ ವಿಧಿವ್ಯಾಪಾರವಿಲ್ಲ, ೧-೬೩ ; ವಿಧಿಯಂತಿರುವ ಶ್ರವಣಾದಿವಚನಗಳ ಗತಿ, ೧-೫೨; ಬ್ರಹ್ಮಸಂಸ್ಥವಾಕ್ಯವೂ ವಿಧಿಯೇ, ೨-೪೫೮ ; ಪ್ರಾಣಸಂವಾದದಲ್ಲಿರುವದು ಸರ್ವಾನ್ನಭಕ್ಷಣವಿಧಿಯಲ್ಲ, ಅರ್ಥವಾದ, ೨-೪೭೩; ವಿಧಿಪ್ರಧಾನವಲ್ಲದ ವಿದ್ಯಾವಾಕ್ಯದಲ್ಲಿದ್ದರೂ ಮೌನವನ್ನು ಪಾಕ್ಷಿಕವಾಗಿ ವಿಧಿಸಿದೆ, ೨-೪೯೨ ; ನೈ. ಹೀಗೆ ಮಾಡಬೇಕೆಂದು ಹೇಳುವ ವಾಕ್ಯ. ಬ್ರಹ್ಮಸ್ವರೂಪದಲ್ಲಿಯೇ

ನಿಂತಿರುವವನಿಗೆ ಅದರ ಪ್ರಾಪ್ತಿಗಾಗಿ ವಿಧಿ ಬೇಕಿಲ್ಲ, ೧-೩೪, ೭೩.; ಕಾಮಿಗಳು ಅನೇಕರಾಗಿರುವದರಿಂದ ಶ್ರುತಿಸ್ಮೃತಿಗಳಲ್ಲಿ ಕಾಮ್ಯಕರ್ಮವನ್ನು ವಿಧಿಸುವ ವಾಕ್ಯಗಳು ಹೇರಳವಾಗಿವೆ, ೧-೮೫; ಆತ್ಮಜ್ಞಾನಕ್ಕಾಗಿ ಸಾಧನವನ್ನು ಮಾಡಬೇಕೆಂಬ ವಿಧಿಗಳೂ ಇವೆ, ೧-೮೭; ಆತ್ಮದರ್ಶನವನ್ನು ಶ್ರುತಿಯಲ್ಲಿ ವಿಧಿಸಿಲ್ಲ, ವಿಧಿಸಿದೆ ಎಂದು ಒಪ್ಪಿಕೊಂಡರೂ ಅದು **ನಿಯಮವಿಧಿಯೋ ಪರಿಸಂಖ್ಯಾನವಿಧಿಯೋ** ಆಗಬಹುದು, ೧-೮೮; ವಿಧಿಯಿಲ್ಲದೆ ಅನುಷ್ಠಾನಮಾಡಬಾರದೆಂಬುದು **ಕಾಲಾಂತರಫಲದ** ಕರ್ಮಕ್ಕೆ ಹೊಂದುತ್ತದೆ, ಈಗಲೆ ಫಲವನ್ನು ಕೊಡುವ ಜ್ಞಾನಕ್ಕೆ ಹೊಂದದು, ೧-೯೦; ಅನ್ವಯವ್ಯತಿರೇಕನ್ಯಾಯವು ವಿಧಿಪರಿಪ್ರಾಪಿತ, ೩-೫; ಪ್ರಸಂಖ್ಯಾನವಿಧಿಯನ್ನು ಒಪ್ಪದಿದ್ದರೆ ಆರೂಢಪತಿತತ್ವವು ಸಿದ್ಧಿಸುವದಿಲ್ಲವೆಂಬುದಿಲ್ಲ, ತ್ವಮರ್ಥದ ಜ್ಞಾನಕ್ಕೆ ವಿಧಿಯನ್ನು ಒಪ್ಪಿದರೆ ಸಾಕು, ೩-೧೨೬; ಅಜ್ಞನು ವಿಧಿಪ್ರತಿಷೇಧಗಳಿಗೆ ಕಟ್ಟುಬಿದ್ದು ಸಂಸಾರವನ್ನು ಪಡೆಯುತ್ತಾನೆ, ೧-೩೯, ೪೧.

**ವಿಧಿಚ್ಛಾಯಾನಿ** - ಬ್ರ.ಸೂ-೧. ಆತ್ಮವಿಷಯವಾದ ದರ್ಶನಶ್ರವಣಾದಿಗಳನ್ನು ಮಾಡಬೇಕೆಂದು ತಿಳಿಸುವ, ವಿಧಿಗಳಂತೆ ಕಾಣುವ ವಚನಗಳು, ೫೨.

**ವಿಧಿಪ್ರಯುಕ್ತಶ್ರವಣಮ್** - ಬೃಹ-೧. ವಿಧಿಯಿಂದ ಪ್ರೇರಿತವಾಗಿ ಮಾಡುವ ವಾಕ್ಯಶ್ರವಣ, ೧೩೭, ೧೪೦.

**ವಿಧಿಶಾಸ್ತ್ರಮ್** - ಬೃಹ-೧. ಕರ್ಮಕಾಂಡ, ೩೨೫.

**ವಿಪರ್ಯಯಃ** - ಕೇನ. ತಪ್ಪುತಿಳಿವು, ೪೬.

**ವಿಪರೀತಗ್ರಹಣಮ್, ವಿಪರೀತಾಧಿಗಮಃ** - **ಛಾಂ.** ತಪ್ಪಾಗಿ ತಿಳಿದು-ಕೊಳ್ಳುವದು, ೪೫೨, ೬೪೮, ೬೫೨, ೬೫೪, ೬೫೫.

**ವಿಪರೀತಜ್ಞಾನಮ್, ವಿಪರೀತಪ್ರತ್ಯಯಃ** - ಬೃಹ-೧. ತಪ್ಪುತಿಳಿವಳಿಕೆ, ೫೪, ೧೩೮.

**ವಿಪರೀತಪ್ರತ್ಯಯಃ** - ಬೃಹ-೨. ಅವಿದ್ಯೆಯಿಂದ ಭ್ರಾಂತಿಗೆ ಕಾರಣವಾದ ತಪ್ಪು ತಿಳಿವಳಿಕೆ, ೫೫.

**ವಿಪರೀತಪ್ರತ್ಯಯಾಭಾಸಃ, ವಿಪರೀತಪ್ರತ್ಯಯಭ್ರಾನ್ತಿಃ** - ಬೃಹ-೧. ಜ್ಞಾನಿಗೂ ತೋರುವ ತಪ್ಪುತಿಳಿವಳಿಕೆಯಂತಿರುವ ವಾಸನಾಜನಿತಜ್ಞಾನ, ೧೭೩.

**ವಿರಾಟ್** - **ಮುಂ.** ಹಿರಣ್ಯಗರ್ಭನಿಂದ ಉತ್ಪನ್ನನಾಗುವ ತ್ರೈಲೋಕ್ಯ-ಶರೀರನಾದ ಆತ್ಮ, ೬೦; **ಛಾಂ.** ಪ್ರಜಾಪತಿಬ್ರಹ್ಮ, ೨೨೭; ಅನ್ನ, ೧೦೮; **ಬೃಹ-೧.** ಹಿರಣ್ಯಗರ್ಭನಿಂದಾದ ಸಮಷ್ಟಿಸ್ಥೂಲೋಪಾಧಿಯ (ಪ್ರಜಾಪತಿ), ೩೦, ೩೧.

**ವಿಹಿತಾಕರಣ ಪ್ರತಿಷಿದ್ಧಾಚರಣೇ** - ಬೃಹ-೨. ಶಾಸ್ತ್ರವು ಹೇಳಿದ್ದನ್ನು ಮಾಡದೆ, ಮಾಡಬಾರದೆಂದಿರುವದನ್ನು ಮಾಡುವ (ತಪ್ಪು) ೫೭.

**ವಿವೇಕಾಭ್ಯಾಸಃ** - ಭ.ಗೀ. ಆತ್ಮಸ್ವರೂಪವನ್ನೇ ಅನುಸಂಧಾನ ಮಾಡುತ್ತಿರುವದು, ೮೯೫.

**ವಿವೇಕಬುದ್ಧಿಃ** - ಭ.ಗೀ. ಶಾಸ್ತ್ರದಿಂದುಂಟಾದ ಸರಿಯಾದ ತಿಳಿವಳಿಕೆ - ೮೫, ೧೦೩, ೨೦೩.

**ವಿವೇಕಜ್ಞಾನಮ್, ವಿವೇಕದರ್ಶನಮ್, ವಿವೇಕವಿಜ್ಞಾನಮ್, ವಿವೇಕಪ್ರಜ್ಞಾ** - ಭ.ಗೀ. ಆತ್ಮಸ್ವರೂಪವನ್ನು ಸರಿಯಾಗಿ ವಿಂಗಡಿಸಿ ತಿಳಿದುಕೊಳ್ಳುವದು, ೧, ೭, ೮೬, ೧೦೪, ೧೧೧, ೧೧೬, ೧೨೯, ೧೩೨, ೨೯೨, ೩೪೯, ೩೫೦, ೪೮೨.

**ವಿವೇಕವಿಜ್ಞಾನಮ್** - ಮಾಂ. ಆತ್ಮ , ಅನಾತ್ಮ - ಇವುಗಳನ್ನು ವಿಂಗಡಿಸಿಕೊಂಡು ಇದ್ದದ್ದು ಇದ್ದಂತೆ ಅರಿಯುವದು, ೧೯೨.

**ವಿಶ್ವಃ, ವಿರಾಡಾತ್ಮಾ, ವೈಶ್ವಾನರಃ** - ಮಾಂ. ಎಚ್ಚರದವಸ್ಥೆಯ ಸಮಷ್ಟ್ಯಾತ್ಮ, ೧೧, ೧೨, ೨೦, ೨೧, ೨೨, ೨೮, ೩೪, ೪೩, ೪೭, ೫೦, ೬೦.

**ವಿಶ್ವಜಿನ್ನ್ಯಾಯಃ** - ಬೃಹ-೨. ವಿಶ್ವಜಿತ್ತೆಂಬ ಯಾಗಕ್ಕೆ ಮಿಕ್ಕ ಯಾವ ಫಲವನ್ನೂ ಹೇಳದಿರುವದರಿಂದ ಸ್ವರ್ಗಫಲವನ್ನು ಕಲ್ಪಿಸುವಂತೆ (ನಿತ್ಯಕರ್ಮಕ್ಕೆ ಫಲವನ್ನು ಕಲ್ಪಿಸುವದು), ೩೧.

**ವಿಶಿಷ್ಟಜ್ಞಾನಮ್** - ಬೃಹ-೧. ವಾಕ್ಯಜ್ಞಾನದ ಅಭ್ಯಾಸದಿಂದ ಉಂಟಾಗುವ ಸಾಕ್ಷಾತ್ಕಾರರೂಪವಾದ ಹೊಸ ಅರಿವೆಂದು ಕೆಲವರೆನ್ನುವ ಜ್ಞಾನ, ೧೩೬.

**ವಿಶಿಷ್ಟೋಪಾಧಿಕೃತ** - ಭ.ಗೀ. ಒಂದಾನೊಂದು ಗೊತ್ತಾದ ಉಪಾಧಿಯಿಂದ ತೋರುವ (ವಿಭೂತಿ), ೯೧೬.

**ವಿಶುದ್ಧವಿಜ್ಞಾನಘನಸ್ವಭಾವಮ್** - ಕಠ. ವಿಷಯದ ಕಲಂಕವಿಲ್ಲದ ಬರಿಯರಿವೇ ಆಗಿರುವ ಬ್ರಹ್ಮ, ೧೩೧.

**ವಿಶುದ್ಧಸತ್ತ್ವಃ** - ಕೇನ. ಅಂತಃಕರಣಶುದ್ಧಿಯಾದವನು, ೩ ; ಭ.ಗೀ. ಕರ್ಮದಿಂದ ಚಿತ್ತಶುದ್ಧಿಯನ್ನು ಪಡೆದವನು, ೧೨, ೩೪೦.

**ವಿಶುದ್ಧಾತ್ಮಾ, ವಿಶುದ್ಧಸತ್ತ್ವಃ** - ಬೃಹ-೨. ಕರ್ಮದಿಂದ ಅಂತಃಕರಣ ಶುದ್ಧಿಯನ್ನು ಪಡೆದವ, ೩೦೬, ೩೦೭.

**ವಿಶೇಷಣಮ್** - ತೈ. ಸಜಾತೀಯವಸ್ತುಗಳಿಂದ ಬೇರ್ಪಡಿಸುವ ಧರ್ಮ, ೯೫.

**ವಿಶೇಷಣವಿಶೇಷ್ಯಭಾವಃ** - ನೈ. ತತ್ತ್ವಮಸಿವಾಕ್ಯದ ತತ್ತ್ವಂಪದಗಳ ಅರ್ಥಗಳಿಗೆ ವಿಶೇಷಣವಿಶೇಷ್ಯಭಾವದಿಂದ ಅವಿವಕ್ಷಿತವಾದ ದುಃಖಿತ್ವ-ಪಾರೋಕ್ಷ್ಯಗಳನ್ನು ತಳ್ಳಿಹಾಕಬೇಕಾಗಿದೆ, ೩-೨, ೯, ೧೦.

**ವಿಶೇಷರಹಿತಃ** - **ಕಠ.** ಇಂಥದ್ದೆಂದು ಹೇಳುವದಕ್ಕೆ ಆಗುವ ವಿಕಲ್ಪವಿಲ್ಲದವ, ೧೭೮.

**ವಿಶೇಷವಿಜ್ಞಾನಮ್**- **ಬ್ರ.ಸೂ-೧.** ಬಿಡಿಯರಿವು, ೨೬೨, ೨೭೦, ೩೮೬, ೩೮೭; **ಕಠ.** ಗಡಿಗೆ, ಬಟ್ಟೆ, ಕಲ್ಲು - ಎಂದು ಬಿಡಿಬಿಡಿಯಾಗಿ ಆಗುವ ಅರ್ಥವು, ೭೭ ; **ಬೃಹ-೧.** ಎಚ್ಚರದಲ್ಲಿರುವ, ಸುಷುಪ್ತಿಯಲ್ಲಿಲ್ಲದ, ಬಿಡಿಯರಿವು, ೨೯೮, ೨೯೯ ; **ಬೃಹ-೨.** ಇಂಥದ್ದು ಎಂಬ ಬಿಡಿಯರಿವು, ೨೧೪, ೨೫೯.

**ವಿಶೇಷಸಂಜ್ಞಾ** - **ಬೃಹ-೧.** ಅಜ್ಞಾನಾವಸ್ಥೆಯಲ್ಲಿ ಶರೀರಾದಿಗಳಲ್ಲಿರುವ ವಿಶೇಷಾಭಿಮಾನ, ೩೭೪, ೩೭೫.

**ವಿಶೇಷಾತ್ಮಾ, ಅವಿದ್ಯಾಕಲ್ಪಿತ ಆತ್ಮಾ** - **ಬೃಹ-೧.** ಉಪಾಧಿಗಳಿಂದ ಬೇರೆ ಬೇರೆಯಾಗಿ ತೋರುವ ಕಲ್ಪಿತಾತ್ಮ, ೩೦೩, ೩೭೩.

**ವಿಷಯಃ** - **ಬ್ರ.ಸೂ-೧.** ಯಾವದನ್ನು ಅರಿಯುತ್ತಾರೋ ಅದು, ೧, ೩, ೨೯, ೭೬ ; ಶಬ್ದಾದಿಗಳು, ೨೯, ೩೩೭ ; **ಮಾಂ.** ಜ್ಞಾನಕ್ಕೆ ಗೋಚರವಾದ ವಸ್ತು, ೧೪, ೧೬; **ಭ.ಗೀ.** ಅರಿಯಲ್ಪಡುವ ಅನಾತ್ಮ, ಕ್ಷೇತ್ರ, ೮೫೫ ; ಶಬ್ದಾದಿಗಳಲ್ಲಿ ಒಂದು, ೮೯೪, ೯೦೭ ; ಇಂದ್ರಿಯ, ೧೧೪ ; **ಶಾಂ. ವಿ.** (೧) ಶಬ್ದಸ್ಪರ್ಶಾದಿಗಳು ; (೨) ಅರಿಯಲ್ಪಡುವ ಅನಾತ್ಮ, (ವಿಷಯಿಯಾದ ಆತ್ಮನಲ್ಲ).

**ವಿಷಯವಿಷಯ್ಯಾಕಾರಃ** - **ಬೃಹ-೨.** ಪರಮಾನಂದದ ಅಂಶವು ಲೋಕದಲ್ಲಿ ಅಭಿವ್ಯಕ್ತವಾಗುವ ವಿಷಯವಿಷಯಿಗಳ ರೂಪ, ೨೩೪.

**ವಿಷಯವಿಷಯ್ಯಾಕಾರಸ್ಪಂದನಮ್** - **ಮಾಂ.** ತಾನೇ ವಿಷಯದ ಆಕಾರವಾಗಿಯೂ ತಾನೇ ವಿಷಯಿಯ ಆಕಾರವಾಗಿಯೂ ತೋರುಕೊಳ್ಳುವ ವ್ಯಾಪಾರ, ೧೬.

**ವಿಷಯವಿಷಯ್ಯಾಭಾಸತ್ವಮ್** - **ಬೃಹ-೨.** (ಬೌದ್ಧರ ಪ್ರಕ್ರಿಯೆಯಂತೆ) ಕ್ಷಣಿಕವಿಜ್ಞಾನಕ್ಕೆ ಆಗುವ ವಿಷಯ, ವಿಷಯಿ ಎಂಬ ಆಕಾರದ ಮೂಲ, ೧೮೨.

**ವಿಷಯವಿಷಯಿತ್ವಮ್** - **ಬೃಹ-೧.** ತಾನೇ ಅರಿಯುವದೂ ಅರಿಯಲ್ಪಡತಕ್ಕದ್ದೂ ಆಗಿರುವದು, (ಗ್ರಾಹ್ಯಗ್ರಾಹಕತ್ವ), ೧೨೬.

**ವಿಷಯವಿಷಯಿಲಕ್ಷಣಃ** - ಪ್ರಶ್ನ. ತಾನೇ ವಿಷಯವೂ ವಿಷಯಿಯೂ ಆಗುವ ಹಿರಿಮೆ, ೬೧.

**ವಿಷಯವಿಷಯಿಸಂಬನ್ಧಃ** - ತೈ. ಇದನ್ನು ಅನುಭವಿಸುವದು, ಇದು ಅನುಭವಿಸುವದು - ಎಂಬ ಸಂಬಂಧ, ೧೯೬, ೨೦೮, ೨೨೨.

**ವಿಷಯವಿಷಯಿಣೌ** - ಭ.ಗೀ. ಎಲ್ಲವನ್ನೂ ಅರಿಯುವ ಆತ್ಮ, ಆತನಿಗೆ ಗೋಚರವಾಗುವ ಅನಾತ್ಮ, ಇವು, ೮೨೬.

**ವಿಷಯೀ** - ಬ್ರ.ಸೂ-೧. ಅರಿಯುವವನು, ಆತ್ಮ, ೧ ; **ಮಾಂ.** ಅರಿಯುವ (ಚೈತನ್ಯ), ೧೪.

**ವಿಷಯೇಂದ್ರಿಯಸಂಯೋಗಃ** - ಬ್ರ.ಸೂ-೧. ಸುಖದುಃಖಗಳಿಗೆ ಕಾರಣವಾಗಿರುವ ವಿಷಯಗಳ ಮತ್ತು ಇಂದ್ರಿಯಗಳ ಸೇರುವಿಕೆ, ೪೨.

**ವಿಷ್ಣುಃ** - ಬ್ರ.ಸೂ-೧. ಶಾಲಗ್ರಾಮದಲ್ಲಿ ಪೂಜ್ಯನಾಗಿರುವ ವಿಷ್ಣು (ಬ್ರಹ್ಮಕ್ಕೆ ಸ್ಥಾನವಿರಬಹುದೆಂಬುದಕ್ಕೆ ದೃಷ್ಟಾಂತ), ೧೭೯ ; **ಮುಂ.** ವಿರಾಟ್ಪುರುಷ, ೬೧.

**ವಿಷ್ಣುತ್ವಾದಿಕರಣಮ್** - ಬೃಹ-೧. ಪ್ರತಿಮೆಯೇ ಮುಂತಾದವುಗಳನ್ನು ಭಾವನೆಯಿಂದ ವಿಷ್ಣುವೇ ಮುಂತಾಗಿ ಮಾಡಿಕೊಳ್ಳುವದು, ೯.

**ವಿಷ್ಣ್ವಾದಿಬುದ್ಧಿಃ** - ಛಾಂ. ಪ್ರತಿಮೆಯೇ ಮುಂತಾದದ್ದರಲ್ಲಿ ವಿಷ್ಣುವೇ ಮುಂತಾದ ದೇವತೆಗಳ ಬುದ್ಧಿ, ೫೪೨, ೫೫೨.

**ವಿಷ್ಣೋಃ ಪರಮಂ ಪದಮ್, ವೈಷ್ಣವಂ ಪದಮ್** - ಭ.ಗೀ. ಪರಮಾತ್ಮನ ಉತ್ಕೃಷ್ಟಸ್ಥಾನ, ಪರಮಾತ್ಮಭಾವ, ಮುಕ್ತಿ, ೪೩೦, ೫೩೧, ೮೯೬.

**ವೀಕ್ಷಾಪನ್ನಃ** - ನೈ. ಆಲೋಚನಾಪರನಾಗಿರುವವನು. ಅನ್ವಯವ್ಯತಿರೇಕಗಳಿಂದ ಪದಾರ್ಥಜ್ಞಾನವನ್ನು ಮಾಡಿಕೊಂಡಬಳಿಕವೂ ನಾನು ಯಾರು ಎಂಬುದನ್ನರಿಯದೆ ಕಳವಳಪಡುತ್ತಿರುವವನಿಗೇ ತತ್ತ್ವಮಸಿ ಎಂಬ ವಾಕ್ಯದ ಉಪದೇಶ, ೩-೫, ೩-೫೩, ೪-೩೪.

**ವೃಕ್ಷಃ** - ಬ್ರ.ಸೂ-೧. ಮರ, ಸ್ವಗತಭೇದವುಳ್ಳ ವಿಚಿತ್ರವಸ್ತುವಿಗೆ ದೃಷ್ಟಾಂತ, ೨೨೩, ೪೩೫.

**ವೃಕ್ಷಸಮುದ್ರಾದಿವತ್** ಬೃಹ-೧. ಮರವು ಕೊಂಬೆ ಕವಲುಗಳಾಗಿರುವಂತೆ, ಕಡಲು ತೆರೆಗುಳ್ಳೆಗಳಾಗಿರುವಂತೆ - ಹೀಗೆ (ತನ್ನೊಳಗೆ ಭೇದವೂ ಇರುವ ವಿಚಿತ್ರಬ್ರಹ್ಮ), ೩೧೬.

**ವೃಕ್ಷಾಗ್ರೇ ಶ್ಯೇನಃ** - ಬ್ರ.ಸೂ-೧. 'ಮರದ ಮೇಲೆ ಗಿಡಗ' (ಮರಕ್ಕೆ ಸಂಬಂಧ ಪಟ್ಟಿದ್ದರೂ ಪಡದಿದ್ದರೂ ಈ ಸಪ್ತಮೀವಿಭಕ್ತಿಯನ್ನು ಪ್ರಯೋಗಿಸುವರು ; ಬ್ರಹ್ಮವು ದ್ಯುಲೋಕದಲ್ಲಿದೆ ಎಂಬುದು ಹೀಗೆ - ಎಂದು ದೃಷ್ಟಾಂತ), ೧೩೪.

**ವೃತ್ತಯಃ** - ಐತ. ಅಂತಃಕರಣದ ಬೇರೆಬೇರೆಯ ಮಾರ್ಪಾಡುಗಳು, ೮೫, ೮೬.

**ವೃತ್ತಿಃ** - ಕೇನ. ಮನಸ್ಸಿನ ಅಥವಾ ಪ್ರಾಣದ ವ್ಯಾಪಾರ, ೨೦, ೩೪, ೩೫, ೩೬, ೩೮ ; ಕಠ. ಗ್ರಂಥದ ವಿವರಣೆ, ೧, ಶಬ್ದದ ವ್ಯಾಪಾರ, ೫, ನಡತೆ, ೧೩ ; ಪ್ರಶ್ನ. ಪ್ರಾಣದ ವ್ಯಾಪಾರ, ೩೭ ; ಮಾಂ. ಅವಸ್ಥೆ, ೧೫, ೯೦, ೯೧ ; ತೈ. ಭಾಷ್ಯ ೧೧೦, ೧೭೭; ಪ್ರಾಣದ ವ್ಯಾಪಾರ ೧೨೪ ; ಮನಸ್ಸಿನ ಅಲೆ ೧೦೮, ೧೩೨ ; ಭ.ಗೀ. ವ್ಯಾಖ್ಯಾನ, ೩೭೬ ; ಅಂತಃಕರಣದ ವಿಕಾರವಿಶೇಷ, ೪೩, ೪೦೩ ; ಶಾಂ. ನಿ. (೧) ಅಂತಃಕರಣದ ಅಥವಾ ಇಂದ್ರಿಯಗಳ ವ್ಯಾಪಾರ ; ಸೂ. ಭಾ. ೧-೧-೨೩, ೨-೩-೩೨ ; (೨) ಶಬ್ದವ್ಯಾಪಾರ, ೧-೧-೭.

**ವೇದಪ್ರಮಾಣಜನಿತ** - ಬ್ರ.ಸೂ-೧. ವೇದವಾಕ್ಯದಿಂದ ಅರಿತು ಪಡೆದುಕೊಂಡ (ಬ್ರಹ್ಮಾತ್ಮಭಾವ), ೫೭.

**ವೇದಾಚಾರ್ಯಃ** - **ಈಶ.** ವೇದಗಳನ್ನು ವಿಂಗಡಿಸಿದ ವ್ಯಾಸರು, ೭.

**ವೇದಾರ್ಥಃ** - ಬ್ರ.ಸೂ-೧. (ಚೇತನವಾದ ಬ್ರಹ್ಮವೇ ಜಗತ್ತಿಗೆ ನಿಮಿತ್ತೋಪಾದಾನಕಾರಣವೆಂಬ) ವೇದದಲ್ಲಿ ಹೇಳಿರುವ ವಿಷಯ, ೪೭೭ ; **ಈಶ.** ವೇದದಲ್ಲಿ ಉಪದೇಶಿಸಿರುವ ಧರ್ಮ, ೫, ೨೦, ೩೩.

**ವೇದೋಕ್ತಂ ಪಾರಿವ್ರಾಜ್ಯಮ್** - **ಛಾಂ.** ಶ್ರುತಿವಿಹಿತವಾದ ಸಂನ್ಯಾಸ, ೧೮೪.

**ವೇದಾಂತ** - ಬ್ರ.ಸೂ-೧. ಉಪನಿಷತ್ತು, ೯, ೩೯, ೪೦, ೧೬೫, ೩೬೬, ೩೯೧, ೩೯೭, ೪೪೧.

**ವೇದಾನ್ತಃ, ವೇದಾವಸಾನಮ್** - ನೈ. ಉಪನಿಷತ್ತು, ವೇದಾಂತದಲ್ಲಿ ಆತ್ಮ ವಸ್ತುವಿಷಯಕಜ್ಞಾನವಿದೆ, ೧-೩, ೪-೭೭; ವೇದಾಂತವಾಕ್ಯಜ್ಞಾನವೇ ಅಜ್ಞಾನವನ್ನು ಕಳೆಯುತ್ತದೆ, ೧-೮; ಈ ಜ್ಞಾನವನ್ನು ಈ ಪ್ರಕರಣದಲ್ಲಿ ಹೇಳಿರುತ್ತದೆ, ೪-೫೨ ; **ಶಾಂ. ನಿ.** (೧) ಉಪನಿಷತ್ತು ೧-೪-೧೪ ; (೨) ಉಪನಿಷತ್ತುಗಳಲ್ಲಿರುವ ವೇದಾಂತ ಶಾಸ್ತ್ರ, ಗೀ. ಭಾ. ೧೮-೧೩.

**ವೇದಾಂತಪ್ರಮಾಣಮ್** - **ಛಾಂ.** ಶ್ರುತಿವಾಕ್ಯರೂಪಪ್ರಮಾಣ, ೧೮೫.

**ವೇದಾನ್ತಮೀಮಾಂಸಾ, ವೇದಾನ್ತವಾಕ್ಯಮೀಮಾಂಸಾ** - ಬ್ರ.ಸೂ-೧. ಉಪನಿಷದ್ವಾಕ್ಯವನ್ನು ವಿಚಾರ ಮಾಡುವ ಶಾಸ್ತ್ರ, ೧೦, ೨೦.

**ವೇದಾನ್ತವಾಕ್ಯಸಮನ್ವಯಃ** - ಬ್ರ.ಸೂ-೧. ವೇದಾಂತವಾಕ್ಯಗಳು ವಸ್ತುವನ್ನೇ ಹೇಳುವದರಲ್ಲಿ ಸಮನ್ವಿತವಾಗಿರುವುವು, ೬೨.

**ವೇದಾಂತವಾದಃ** - ಬ್ರ.ಸೂ-೧. ಉಪನಿಷತ್ತನ್ನು ಪ್ರಮಾಣವಾಗಿ ಹೇಳುವವರ ವಾದ, ೩೯೭.

**ವೇದಾಂತವಾದಿನಃ** - ಬ್ರ.ಸೂ-೧. ಉಪನಿಷತ್ತನ್ನು ಪ್ರಮಾಣವಾಗಿ ಹಿಡಿದಿರುವ ವಾದಿಗಳು, ೩೮೮.

**ವೇದಾಂತವಾಕ್ಯಾನಿ** - ಬ್ರ.ಸೂ-೧. ಉಪನಿಷದ್ವಾಕ್ಯಗಳು, ೬೪, ೬೫, ೨೮೦, ೩೩೩, ೪೦೮.

**ವೇದಾನ್ತವಾಕ್ಯಾವಿರೋಧಿ** - ಬ್ರ.ಸೂ-೧. ಉಪನಿಷದ್ವಾಕ್ಯಕ್ಕೆ ವಿರೋಧ ವಲ್ಲದ (ತರ್ಕ), ೨೮.

**ವೇದಾನ್ತಾಃ** - ಬ್ರ.ಸೂ-೨. ವೇದಾಂತಗಳು, ಉಪನಿಷತ್ತುಗಳು, ಈ ಶಬ್ದಕ್ಕೆ ಶಾಸ್ತ್ರಮ್, ಶಬ್ದಃ ಆಗಮಃ ವೇದಃ - ಇವೆಲ್ಲ ಪರ್ಯಾಯಗಳು. ವೇದಾಂತಗಳಿಗೆಲ್ಲ ಆತ್ಮೈಕತ್ವವಿದ್ಯೆಯೇ ಅರ್ಥ, ೧-೯ ; ಸೂತ್ರಗಳು ವೇದಾಂತವಾಕ್ಯಗಳನ್ನೇ ಕುರಿತು ರಚಿತವಾಗಿವೆ, ಅನುಮಾನವನ್ನು ಹೇಳುವದಿಲ್ಲ, ೧-೨೭ ; ವೇದಾಂತವಾಕ್ಯಕ್ಕೆ ಅವಿರುದ್ಧವಾದ ಅನುಮಾನವೂ ಪ್ರಮಾಣವಾಗಬಹುದು, ೧-೨೮ ; ವೇದ-ಪ್ರಮಾಣದಿಂದುಂಟಾಗುವ ಬ್ರಹ್ಮಾತ್ಮಭಾವಕ್ಕೆ ಸಂಸಾರಿತ್ವವು ವಿರುದ್ಧ, ೧-೫೭; ಬ್ರಹ್ಮವೇ ಸೃಷ್ಟಿಸ್ಥಿತಿಸಂಹಾರಕಾರಣವೆಂದು ವೇದಾಂತಗಳಲ್ಲಿ ಪ್ರಸಿದ್ಧವಾಗಿದೆ, ೧-೬೫; ಚೇತನಕಾರಣವಾದಕ್ಕೆ ವೇದಾಂತಗಳಲ್ಲಿ ಗತಿಸಾಮಾನ್ಯ, ೧-೮೭, ೮೯, ೨೨೨, ೩೬೬ ; ಪರಬ್ರಹ್ಮದಿಂದಲೇ ಭೂತಗಳು ಉತ್ಪನ್ನವಾಗುವವೆಂಬುದು ವೇದಾಂತಗಳಲ್ಲಿ ಮರ್ಯಾದೆ, ೧-೧೧೯ ; ವೇದಾಂತವಾಕ್ಯಗಳ ಪ್ರವೃತ್ತಿ ಎರಡು ಬಗೆ : ಕೆಲವು ಪರಮಾತ್ಮನ ಸ್ವರೂಪವನ್ನು ತಿಳಿಸುತ್ತವೆ, ಕೆಲವು ವಿಜ್ಞಾನಾತ್ಮಪರಮಾತ್ಮರ ಐಕ್ಯವನ್ನು ತಿಳಿಸುತ್ತವೆ, ೧-೨೮೦ ; ಶಬ್ದಾರ್ಥಸಂಬಂಧವು ಔತ್ಪತ್ತಿಕವಾದ್ದರಿಂದ ವೇದವು ಪ್ರಮಾಣವೆಂಬುದು ಮೀಮಾಂಸಕರ ಸಿದ್ಧಾಂತ, ೧-೨೮೫ ; ವೇದಪ್ರ[illegible]ಪುಷ್ಯರಂತೆ ವಿಷಯವನ್ನು ಮರೆಮಾಚಿ ತಿಳಿಸುವದೆಂದು ಕಲ್ಪಿಸುವದು ಅ[illegible] ೨-೯೭ ; ಸರ್ವವೇದಾಂತಗಳಲ್ಲಿಯೂ ಬ್ರಹ್ಮಕ್ಕೆ ಪ್ರಕೃತಿತ್ವವನ್ನು ಸಾಧಿಸುವ ಪ್ರತಿಜ್ಞಾ ದೃಷ್ಟಾಂತಗಳಿವೆ, ೧-೩೪೬ ; ಪ್ರತಿವೇದಾಂತಗಳಲ್ಲಿಯೂ ಬ್ರಹ್ಮಕ್ಕೆ ಪ್ರಕೃತಿತ್ವವನ್ನು ಸಾಧಿಸುವ ಪ್ರತಿಜ್ಞಾದೃಷ್ಟಾಂತಗಳಿವೆ, ೧-೩೯೧ ; ಪ್ರಾಜ್ಞವಿಜ್ಞಾನದಿಂದ ಲೋಕನಾಶವೆಂದು

ವೇದಾಂತಸಿದ್ಧಾಂತ, ೧-೩೪೯ ; ವೇದಕ್ಕೆ ನಿರಪೇಕ್ಷಪ್ರಾಮಾಣ್ಯ, ಪುರುಷವಚನವು ಮೂಲಾಂತರಾಪೇಕ್ಷ, ೧-೨೮೭, ೪೦೩ ; ವೇದವು ನಿತ್ಯವೂ ಬೋಧಕವೂ ಆಗಿರುವದರಿಂದ ಇದ್ದದ್ದನ್ನೇ ಹೇಳುತ್ತದೆ, ೧-೪೨೯ ; ಸ್ವತಂತ್ರಕರ್ತೃವನ್ನು ಸ್ಮರಿಸದಿರುವದು - ಮುಂತಾದವುಗಳಿಂದ ವೇದನಿತ್ಯತ್ವವು ಮೀಮಾಂಸದಲ್ಲಿ ಸಿದ್ಧ ೧-೨೯೨ ; ಅವಸ್ಥಾತ್ರಯವು ಮಾಯಾಮಾತ್ರವೆಂಬುದಕ್ಕೆ ವೇದಾಂತಾರ್ಥ-ಸಂಪ್ರದಾಯವಿದರ ವಚನ, ೧-೪೨೪ ; ವಿಜ್ಞಾನಾತ್ಮ - ಪರಮಾತ್ಮಭೇದವು ಪರಮಾರ್ಥವಲ್ಲವೆಂಬುದನ್ನು ಎಲ್ಲಾವೇದಾಂತಿಗಳೂ ಒಪ್ಪಬೇಕು, ೧-೩೮೮ ; ಪರಮಾರ್ಥಾವಸ್ಥೆಯಲ್ಲಿ ಯಾವ ವ್ಯವಹಾರವೂ ಇಲ್ಲವೆಂದು ವೇದಾಂತಗಳೆಲ್ಲ ಹೇಳುತ್ತಿವೆ, ೧-೪೪೧ ; ತತ್ತ್ವಜ್ಞಾನವು ವೇದಾಂತವಾಕ್ಯಗಳಿಂದಲೇ, ತರ್ಕದಿಂದಲ್ಲ, ೧-೪೦೮ ; ಚೇತನಕಾರಣವಾದವೇ ವೇದಾರ್ಥ, ೧-೪೭೭ ; ಶಾರೀರಕಶಾಸ್ತ್ರವು ವೇದಾಂತವಾಕ್ಯಗಳ ತಾತ್ಪರ್ಯವನ್ನು ನಿರೂಪಿಸುವದಕ್ಕೇ ಬಂದಿದೆ, ೨-೧ ; ವೇದಾಂತಗಳಲ್ಲಿ ಪರಮಾತ್ಮನೇ ಮುಖ್ಯವಾಗಿ ವೇದ್ಯನೆಂದು ಹೇಳಿದೆ, ೨-೧೨೮ ; ಸರ್ವವೇದಾಂತಗಳಲ್ಲಿಯೂ ಈಶ್ವರನೇ ಸೃಷ್ಟಿಗೆ ಹೇತುವೆಂದು ಹೇಳಿದೆ, ೨-೩೧೭ ; **ಮಾಂ.** ಉಪನಿಷತ್ತುಗಳು, ೧, ೯೪, ೧೦೯, ೧೨೧, ೧೩೨, ೩೩೮, ೩೬೬ ; **ಬೃಹ-೧.** ಉಪನಿಷತ್ತುಗಳು, ೧೩೯, ೩೨೪ ; **ಭ.ಗೀ.** ಉಪನಿಷತ್ತುಗಳು, ೯೯೦.

**ವೇದಾನ್ತಾಚಾರ್ಯೋಪದೇಶಃ** - **ಭ.ಗೀ.** ವೇದಾಂತಶಾಸ್ತ್ರದ ಮತ್ತು ಗುರುಗಳ ಉಪದೇಶ, ೧೦೩೨.

**ವೇದಾನ್ತಾರ್ಥಸಂಪ್ರದಾಯಃ** - **ಭ.ಗೀ.** ವೇದಾಂತದ ಅರ್ಥವನ್ನು ಶಿಷ್ಯರಿಗೆ ತಿಳಿಸುವದು, ೯೧೫.

**ವೈತಥ್ಯಮ್** - **ಮಾಂ.** ಹುಸಿಯಾಗಿರುವದು, ೭೬, ೮೧, ೮೨.

**ವೈನಾಶಿಕಃ** - **ಪ್ರಶ್ನ.** ಯಾವದೂಸ್ಥಿರವಲ್ಲವೆಂಬ ಬೌದ್ಧ, ೯೦, ೯೫.

**ವೈನಾಶಿಕಾಃ** - **ಮಾಂ.** ಯಾವದೂ ನಿಜವಾಗಿಲ್ಲವೆಂಬ ಬೌದ್ಧರು, ೯೪, ೨೧೨ ; **ಬೃಹ-೧.** ಸ್ಥಿರವಸ್ತುವನ್ನೊಪ್ಪದ ಬೌದ್ಧರು, ೪, ೩೪೨.

**ವೈನಾಶಿಕಾಃ, ಮಹಾವೈನಾಶಿಕಾಃ** - **ಛಾಂ.** ಯಾವುದೊಂದು ವಸ್ತುವೂ ಪರಮಾರ್ಥವಾಗಿಲ್ಲ- ಎನ್ನುವವರು, ೪೫೧, ೪೫೩.

**ವೈರಾಗ್ಯಮ್** - **ನೈ.** ಕರ್ಮದಿಂದ ಚಿತ್ತಶುದ್ಧಿಯಾಗಿ ಸಂಸಾರದ ನಿಜವು ತಿಳಿದವನಿಗೆ ಬ್ರಹ್ಮಲೋಕಾದಿಗಳಲ್ಲಿಯೂ ವೈರಾಗ್ಯವನ್ನುಂಟುಮಾಡುತ್ತದೆ, ೧-೪೫, ೪೬, ೪೭, ೫೧.

**ವೈರಾಜಂ ಪದಮ್** - ಕಠ. ವಿರಾಟ್ಪುರುಷನ ಸ್ಥಾನ, ೨೮, ೩೦.

**ವೈರಾಜಸಾಮ** - **ಛಾಂ.** ಒಂದು ಬಗೆಯ ಸಾಮ, ('ಪಿಬಾ ಸೋಮಮಿನ್ದ್ರಮನ್ದತು ತ್ವಾ', ಋ, ೧.೧೩೦) ೧೦೮, ೧೫೦.

**ವೈರೂಪಮ್** - **ಛಾಂ.** ಒಂದು ಬಗೆಯ ಸಾಮ, (ಯದ್ಯಾವಇನ್ದ್ರ ತೇ ಶತಮ್', ಋ, ೮,೭೦,೫) ೧೫೫.

**ವೈಶ್ವದೇವ್ಯಮ್** - **ಛಾಂ.** ಒಂದು ಬಗೆಯ ಸಾಮ, (ಪ್ರಮಿತ್ರಾಯ ಪ್ರಾರ್ಯಮ್ಣೇ ಋ. ೮-೧೦೧-೫), ೧೦೮.

**ವೈಶೇಷಿಕಾಃ** - **ಛಾಂ.** ಸತ್ತೆಯೆಂಬ ಸಾಮಾನ್ಯವಿದೆಯೆಂಬ (ವೈಶೇಷಿಕ) ವಾದಿಗಳು, ४५೦ ; **ಬೃಹ-೧.** ಆತ್ಮನಲ್ಲಿ ವಿಶೇಷವನ್ನೊಪ್ಪುವ ಕಣಾದರ ಅನುಯಾಯಿಗಳು, ३४೨, ३४३ ; **ಭ.ಗೀ.** ಅಂತ್ಯವಿಶೇಷಗಳೆಂಬ ಪದಾರ್ಥವನ್ನು ಒಪ್ಪುವವರು, ಕಣಾದಶಿಷ್ಯರು, ೧೦೮೭, ೧೦೮೯.

**ವೈಶೇಷಿಕದರ್ಶನಮ್** - **ಬ್ರ.ಸೂ-೨.** ಕಾಣಾದರು ಕಂಡುಹಿಡಿದ ಪರಮಾಣುವಾದದ ಸಿದ್ಧಾಂತ. ಪ್ರಧಾನಕಾರಣವಾದದ ನಿರಾಕರಣವು ಈ ವಾದಕ್ಕೆ ಅನ್ವಯಿಸುತ್ತದೆ, ೧-೩೯೭, ४३೦ ; ಈ ದರ್ಶನದ ಖಂಡನೆ, ೨-೨೬ ರಿಂದ ४೦.

**ವೈಷ್ಣವೀ ಮಾಯಾ** - **ಭ.ಗೀ.** ಭಗವಂತನ ಮಾಯಾಶಕ್ತಿ, ೨, ೨೩೮.

**ವ್ಯಕ್ತಯಃ** - **ಬ್ರ.ಸೂ-೧.** ಒಂದು ಜಾತಿಗೆ ಸೇರಿದ ಬಿಡಿಗಳು, ೨೮೬.

**ವ್ಯಕ್ತಾವ್ಯಕ್ತಾತ್ಮಕಮ್** - **ಭ.ಗೀ.** ನಾಮರೂಪಗಳಿಂದ ಬಿಡಿಯಾಗಿ ತೋರುವ, ಮತ್ತು ತೋರದ (ಜಗತ್ತು), ೫೫೯.

**ವ್ಯಭಿಚಾರೀ** - **ನೈ.** ಸ್ವರೂಪವು ಇದ್ದದ್ದು ಇದ್ದಂತೆ ಇರದೆ ಮಾರ್ಪಡುತ್ತಿರುವದು. ಅನಾತ್ಮವೆಲ್ಲ ವ್ಯಭಿಚಾರಿ, ೨-೭೮; ಪ್ರತ್ಯಕ್ಷಾದಿಗಳ ಪ್ರಾಮಾಣ್ಯವು ವ್ಯಭಿಚಾರಿ, ವಾಕ್ಯಜ್ಞಾನವೇ ಅವ್ಯಭಿಚಾರಿ, ३-೯४.

**ವ್ಯವಧಾನಮ್** - **ಬೃಹ-೨.** ಮೋಕ್ಷಕ್ಕೆ ಇರುವ ಮರೆ (ಅವಿದ್ಯೆ), ೩೧, ೩೨.

**ವ್ಯವಹಾರಃ** - **ಬ್ರ.ಸೂ-೧.** ಹೇಳುವದು, ಅರಿಯುವದು - ಎಂಬ ನಡೆನುಡಿ, ೨೬೫, ೨೯೧, ೨೯೯, ४४೦, ४४೧ ; **ಮಾಂ.** ಶಬ್ದಪ್ರಯೋಗ ಮತ್ತು ಜ್ಞಾನ - ಇವುಗಳು, ೧೧೧ ; **ಭ.ಗೀ.** ಅವಿದ್ಯೆಯಿಂದಾಗಿರುವ ಲೌಕಿಕವೈದಿಕ-ವ್ಯವಹಾರ, ೧೩೨.

**ವ್ಯವಹಾರಸತ್ತ್ವಮ್ - ಮಾಂ.** ವ್ಯವಹಾರದಲ್ಲಿ ಸತ್ಯವೆಂದೆನಿಸಿರುವ, ನಿಜವಾಗಿ ಸತ್ಯವಲ್ಲದ, ೮, ೩.೨೦.

**ವ್ಯಾಕೃತ - ಮಾಂ.** ಬಿಡಿಬಿಡಿಯಾಗಿರುವ, ೨೩ ; **ಛಾಂ.** ನಾಮರೂಪವಾಗಿ ವಿಂಗಡಿಸಿದ, ೪೬೬, ೪೬೭ ; **ಶಾಂ. ನಿ.** ನಾಮರೂಪಗಳೆಂದು ವಿಂಗಡವಾಗಿರುವ, ಸೂ. ಭಾ. ೧-೧-೨.

**ವ್ಯಾಕೃತಮ್ - ಈಶ.** ನಾಮ, ರೂಪ, ಕರ್ಮ - ಎಂದು ವಿಂಗಡಿಸಿಕೊಂಡಿರುವ ಜಗತ್ತು, ೨೭ ; **ಕೇನ.** ಬಿಡಿಬಿಡಿಯಾದ ನಾಮರೂಪಗಳಿಂದ ತೋರುವ ಜಗತ್ತು, ೨೭ ; **ಪ್ರಶ್ನ.** ನಾಮರೂಪಗಳಾಗಿ ವಿಂಗಡಿಸಿಕೊಂಡಿರುವ (ಪ್ರಪಂಚ), ೫೧ ; **ಬೃಹ-೧.** ನಾಮರೂಪಗಳಾಗಿ ಬಿಡಿಯಾಗಿರುವ (ಜಗತ್ತು), ೫, ೧೧೬, ೧೧೭ ; **ಬೃಹ-೨.** ನಾಮರೂಪಗಳಾಗಿ ವಿಂಗಡಿಸಿ ಹರಡಿರುವದು, ೯೫.

**ವ್ಯಾಕೃತಬೀಜಮ್ - ಕೇನ.** ವ್ಯಾಕೃತಜಗತ್ತಿನ ಕಾರಣ, ಅವ್ಯಾಕೃತ, ೨೭.

**ವ್ಯಾಕೃತನಾಮರೂಪೇ - ಬ್ರ.ಸೂ-೧.** ಬಿಡಿಬಿಡಿಯಾದ ನಾಮ-ರೂಪಗಳು, ೩೩೮.

**ವ್ಯಾಕೃತಾವ್ಯಾಕೃತ, ವ್ಯಕ್ತಾವ್ಯಕ್ತ - ಬೃಹ-೧.** ನಾಮರೂಪಗಳಾಗಿ ವಿಂಗಡಿಸಿ, ತೋರುವ, ಮತ್ತು ಹಾಗೆ ತೋರದೆ ಅವುಗಳ ಮೂಲರೂಪವಾಗಿರುವ, (ಅನಾತ್ಮ), ೭, ೨೦೨.

**ವ್ಯಾಕೃತಾವ್ಯಾಕೃತಲಕ್ಷಣಾಃ - ಮುಂ.** ಸೂಕ್ಷ್ಮರೂಪದಿಂದ ಅವ್ಯಕ್ತವಾಗಿಯೂ ಕಾರ್ಯರೂಪದಿಂದ ವಿಂಗಡಿಸಿಕೊಂಡೂ ಇರುವ ಲೋಕಗಳು, ೪೫.

**ವ್ಯಾವಹಾರಿಕ - ಬ್ರ.ಸೂ-೧.** ವ್ಯವಹಾರದಲ್ಲಿ ಮಾತ್ರ ತೋರುವ (ಪರಮಾರ್ಥವಲ್ಲ), ೪೩೩ ; **ಮಾಂ.** ವ್ಯವಹಾರದಲ್ಲಿ ಸತ್ಯವೆಂದೆನಿಸುವ (ಬಂಧಮೋಕ್ಷಗಳು), ೧೩೮ ; **ಶಾಂ. ನಿ.** ಶಬ್ದಪ್ರತ್ಯಯರೂಪವಾದ ವ್ಯವಹಾರಕ್ಕೆ ಸೇರಿದ್ದು, ಪರಮಾರ್ಥವಲ್ಲ, ಸೂ. ಭಾ. ೨-೧-೧೪.

**ವ್ಯಾವಹಾರಿಕಮ್ - ಛಾಂ.** ವ್ಯವಹಾರದಲ್ಲಿ ನಿಜವೆಂದು ತೋರುವ, ೬೧೧.

**ವ್ಯಾವೃತ್ತ್ಯನುವೃತ್ತೀ - ಛಾಂ.** ಅನ್ವಯವ್ಯತಿರೇಕಗಳು, ೪೯೩.

**ವ್ಯಾಸಃ - ಈಶ.** ವೇದವನ್ನು ವಿಂಗಡಿಸಿರುವ ವ್ಯಾಸರು, ೭.

**ವ್ರಾತ್ಯಃ - ಪ್ರಶ್ನ.** ಸಂಸಾರದ ಅಪೇಕ್ಷೆಯಿಲ್ಲದೆ ಶುದ್ಧವಾಗಿರುವ ಪ್ರಾಣ, ಹಿರಣ್ಯಗರ್ಭ, ೩೪.

**ವ್ಯುತ್ಥಾನಮ್ - ಐತ.** ಗಾರ್ಹಸ್ಥ್ಯವನ್ನು ಬಿಟ್ಟು ಏಳುವ ಸಂನ್ಯಾಸ, ೧೩, ೧೪, ೨೪, ೨೫ ; **ಬೃಹ-೨.** ವಿರುದ್ಧವಾಗಿ ಏಳುವದು, ಏಷಣೆಗಳನ್ನೆಲ್ಲ ಬಿಟ್ಟೇಳುವ ಪರಮಹಂಸಪಾರಿವ್ರಾಜ್ಯ , ೫೬ ರಿಂದ ೫೯.

**ವ್ಯೋಮ - ಬ್ರ.ಸೂ-೧.** (ಆಕಾಶ, ತಲಮಲಿನತ್ವದ ಅಧ್ಯಾರೋಪದಿಂದ), ಮಲಿನವಾಗುವದು, ೧೬೨ ; (ಅಸಂಗವಾಗಿರುತ್ತದೆ), ೨೬೫, ೨೬೭.

# ಶ

**ಶಕ್ತಿಃ - ಬ್ರ.ಸೂ-೧.** ಜಗತ್ತು ಪ್ರಲಯವಾಗುವಾಗ ಉಳಿಯುವ ನಾಮರೂಪಬೀಜಶಕ್ತಿ, ೨೯೫, ೩೩೯, ೩೫೬, ೪೪೦, ೪೫೬, ೪೫೮ ; **ಶಾಂ. ನಿ.** ಜಗತ್ತು ಪ್ರಲಯವಾಗಲು ಉಳಿಯುವ ನಾಮರೂಪಬೀಜಶಕ್ತಿ, ಅವ್ಯಾಕೃತ (ಸೂ. ಭಾ. ೧-೩-೩೦, ಭಾ. ಭಾ. ೨೯೫).

**ಶಕ್ವರ್ಯಃ - ಛಾಂ.** ಒಂದು ಬಗೆಯ ಸಾಮ, ('ಪ್ರೋಷ್ವಸ್ಮೈ ಪುರೋರಥಮ್', ಋ. ೧೦, ೧೩೩-೧) ೧೫೯.

**ಶತರೂಪಾ - ಬೃಹ-೧.** ಮನುವಿನ ಮಗಳು, (ಪ್ರಾಣಿಗಳ ಉತ್ಪತ್ತಿಗೆ ಕಾರಣಳಾದವಳು), ೧೦೭, ೧೦೮.

**ಶಮಃ - ತೈ.** ಅಂತಃಕರಣನಿಗ್ರಹ, ೮೨ ; **ಭ.ಗೀ.** ಸರ್ವಕರ್ಮಸಂನ್ಯಾಸ, ೩೭೭, ೩೭೮, ೩೮೫ ; ಅಂತಃಕರಣವನ್ನು ಬಿಗಿಹಿಡಿಯುವದು, ೬೦೭, ೧೦೭೩ ; **ಶಾಂ. ನಿ.** (೧) ಅಂತಃಕರಣವನ್ನು ಬಿಗಿಹಿಡಿಯುವದು ; (೨) ಸರ್ವಕರ್ಮಸಂನ್ಯಾಸ, ಭ. ಗೀ. ೬-೩, ಭಾ. ಭಾ. ೩೭೮.

**ಶಬ್ದಃ - ಬ್ರ.ಸೂ-೧.** ವಿಷಯವನ್ನು ತಿಳಿಸುವ ಶಬ್ದ, ೨೦೭, ೨೦೯, ೨೨೩, ೨೫೯, ೨೮೫ ; ಶಬ್ದಪ್ರಮಾಣ ಶ್ರುತಿ, ೧೫೬, ೪೧೨, ೪೩೩, ೪೫೧, ೪೬೨, ೪೬೩; ಶ್ರೋತ್ರೇಂದ್ರಿಯ ವಿಷಯ, ೪೨೦, ೪೨೬, ೪೫೧ ; **ಬ್ರ.ಸೂ-೨.** ವಿಷಯವನ್ನು ತಿಳಿಸುವ ವಾಚಕ. ಶಬ್ದಪ್ರತ್ಯಯಗಳು ಗೌಣವಾಗಬೇಕಾದರೆ ಮುಖ್ಯವಸ್ತುವು ಬೇರೆಯಿರುವದು ತಿಳಿಯಬರಬೇಕು, ೧-೫೯ ; ಆತ್ಮಶಬ್ದವು ಚೇತನಾಚೇತನಗಳಿಗೆ ಸಮಾನವೆನ್ನುವದು ಸರಿಯಲ್ಲ, ೧-೮೧ ; ವೈಶ್ವಾನರ, ಆತ್ಮ - ಎಂಬ ಸಾಧಾರಣ ಶಬ್ದಗಳನ್ನು ಶ್ರುತಿಯಲ್ಲಿ ಬ್ರಹ್ಮಪರವೆಂದು ನಿಶ್ಚಯಿಸುವದಕ್ಕೆ ಕಾರಣ, ೧-೨೦೭ ; ಬ್ರಹ್ಮಲೋಕಶಬ್ದವನ್ನು ಬ್ರಹ್ಮವಾಚಕವಾಗಿ ಗ್ರಹಿಸಲು ಕಾರಣ, ೧-೨೫೯;

ಶಬ್ದಾರ್ಥಗಳ ನಿತ್ಯಸಂಬಂಧದ ವಿಚಾರ, ೧-೨೮೫, ೨೮೬, ೨೯೩ ; ಶಬ್ದದಿಂದ ಜಗತ್ತು ಹುಟ್ಟುತ್ತದೆ, ೧-೨೮೭ ; ಶಬ್ದವು ಸ್ಫೋಟಾತ್ಮಕವೆಂಬ ಮತದ ಖಂಡನೆ, ವರ್ಣಪಕ್ಷಸ್ಥಾಪನೆ, ೧-೨೮೯ ರಿಂದ ೨೯೦ ; ಶಬ್ದಾರ್ಥವ್ಯವಹಾರಮಾತ್ರದಿಂದ ವಸ್ತುಸಿದ್ಧಿಯಿಲ್ಲ , ೨-೩೨ ; ಲೋಕದಲ್ಲಿ ಆತ್ಮಶಬ್ದಕ್ಕೆ ಪ್ರತ್ಯಗಾತ್ಮನೆಂದೇ ಅರ್ಥವಿರುವದರಿಂದ ಶ್ರುತಿಯಲ್ಲಿಯೂ ಸಾಮಾನ್ಯವಾಗಿ ಹಾಗೆಯೇ ಗ್ರಹಿಸಬೇಕು, ೨-೩೪೪ ; ಶಬ್ದಪ್ರಮಾಣ, ಶ್ರುತಿ. ಪ್ರಧಾನವು ಶಬ್ದ ಪ್ರಮಾಣಕವಲ್ಲ, ೧-೬೭ ; ಶಬ್ದವು ಒಪ್ಪಿರುವ ಮನನವು ಶುಷ್ಕತರ್ಕವಲ್ಲ, ೧-೪೧೮ ; ಕಾರ್ಯವು ಕಾರಣಕ್ಕಿಂತ ಅನ್ಯವಲ್ಲವೆಂಬುದಕ್ಕೆ ವಾಚಾರಂಭಣಶಬ್ದ , ೧-೪೩೩ ; ಕಾರ್ಯವು ಹುಟ್ಟುವ ಮುಂಚೆಯೂ ಇತ್ತೆಂಬುದಕ್ಕೆ ಸದ್ವಾಚಕಶಬ್ದ, ೧-೪೫೧ ; ಬ್ರಹ್ಮವು ಶಬ್ದಪ್ರಮಾಣಕ, ೧-೪೬೩ ; ಶಬ್ದವು ಗೌಣವಾಗಿರುವದುಂಟಾದರೂ ಶಬ್ದಪ್ರಮಾಣಕವಾದ ವಿಷಯದಲ್ಲಿ ಹಾಗೆಂದು ಕಲ್ಪಿಸುವದು ಅಯುಕ್ತ , ೧-೮೦ ; ಶಬ್ದಗಮ್ಯನಾದ ಈಶ್ವರನು ಈಕ್ಷಾಪೂರ್ವಕಕರ್ತೃವಾದ್ದರಿಂದ ನಿಮಿತ್ತಕಾರಣಮಾತ್ರನಾಗಿರ-ಬೇಕೆಂಬುದು ಕುತರ್ಕ, ೧-೩೯೬ ಶಬ್ದಪ್ರಮಾಣಕರಾದವರು ಮಂತ್ರಾರ್ಥವಾದಗಳಲ್ಲಿರುವ ಇಂದ್ರಾದಿಗಳ ವಿಗ್ರಹತ್ತ್ವವನ್ನು ಇಲ್ಲವೆನ್ನಬಾರದು, ೧-೩೦೩ ; ಶ್ರೋತ್ರೇಂದ್ರಿಯವಿಷಯವಾದ ಸದ್ದು. ಶಬ್ದಾದಿಗಳ ಅರಿವು ಅನುಕೂಲವೆಂದಾದರೆ ಮುಂದುವರೆಯುವದೂ ಪ್ರತಿಕೂಲವಾದರೆ ಹಿಂಜರಿಯುವದೂ ಪಶ್ವಾದಿಗಳಿಗೂ ಮನುಷ್ಯರಿಗೂ ಸಮಾನ, ೧-೬ ; ಶಬ್ದಾದಿಗಳಿಂದೊಡಗೂಡಿದ ಜಗತ್ತು ಬ್ರಹ್ಮಕ್ಕಿಂತ ಬೇರೆಯಾಗಿಲ್ಲ, ೧-೪೨೦ ; ನೈ. ಶಬ್ದವು ಅರ್ಥದಲ್ಲಿ ಪ್ರವರ್ತಿಸುವದಕ್ಕೆ ಬೇಕಾದ **ಷಷ್ಠ್ಯಾದಿಗಳು** ಯಾವವೂ ಆತ್ಮನಲ್ಲಿಲ್ಲ, ೩-೧೦೩; ಶಬ್ದವು **ಅಭಿಧಾನಾಭಿಧೇಯತ್ವಸಂಬಂಧವನ್ನು** ಇಟ್ಟುಕೊಳ್ಳದೆಯೇ ಆತ್ಮನನ್ನು ತಿಳಿಸುತ್ತದೆ, ೩-೧೦೪, ೧೦೫; ಬೇರೆ ಬೇರೆ ವಿಷಯಗಳ ಪ್ರಮಾಣಗಳಿಗೆ ವಿರೋಧವಿಲ್ಲವೆಂಬುದಕ್ಕೆ ಶಬ್ದದ ಉದಾಹರಣೆ, ೩-೮೪; ಶಬ್ದಪ್ರಮಾಣಕ್ಕೂ ಪ್ರತ್ಯಕ್ಷಕ್ಕೂ ವಿರೋಧವಿಲ್ಲ, ವಿರುದ್ಧವಾದರೆ ಆಭಾಸಮಾತ್ರ , ೩-೮೫ ; **ಶಾಂ. ನಿ.** (೧) ಮಾತು, (ವಸ್ತುವಲ್ಲ) ; (೨) ಶ್ರೋತ್ರೇಂದ್ರಿಯಕ್ಕೆ ವಿಷಯವಾದ ಸದ್ದು; (೩) ಶಬ್ದಪ್ರಮಾಣ.

**ಶಬ್ದಪ್ರತ್ಯಯಾಗೋಚರ** - **ಭ.ಗೀ.** ಮಾತಿಗಾಗಲಿ ಅರಿವಿಗಾಗಲಿ ವಿಷಯವಾಗದೆ ಇರುವದು, ೭೫೭.

**ಶಬ್ದಪ್ರತ್ಯಯೌ** - **ಬ್ರ.ಸೂ-೧.** ಮಾತನಾಡುವದು, ಅರಿಯುವದು, - ಎಂಬಿವು, ೫೯, ೭೧ ; **ಬೃಹ-೧.** ಅನಾತ್ಮವನ್ನು ಮಾತ್ರ ತಿಳಿಸಬಲ್ಲ ಮಾತು, ಅರಿವು-ಇವು, ೧೪೩.

**ಶಬ್ದಪ್ರಮಾಣಕ** - ಬೃಹ-೧. ಶ್ರುತಿಯನ್ನು ಪ್ರಮಾಣವೆಂದು ಒಪ್ಪಿರುವವ, ೩೦೩ ; ಶಬ್ದ ಪ್ರಮಾಣದಿಂದ ಮಾತ್ರ ತಿಳಿಯಬರುವ (ಬ್ರಹ್ಮ), ೮೦ ; ಶಾಂ. ನಿ. (೧) ಶ್ರುತಿಯನ್ನೇ ಪ್ರಮಾಣವೆಂದು ಒಪ್ಪಿರುವವ. ಸೂ. ಭಾ. ೧-೩-೩೩ ; (೨) ಶಬ್ದಪ್ರಮಾಣದಿಂದ ಮಾತ್ರವೇ ತಿಳಿಯಬರುವ ಬ್ರಹ್ಮ ಮುಂತಾದದ್ದು. ಸೂ. ಭಾ. ೧-೧-೭.

**ಶಬ್ದಬ್ರಹ್ಮ** - ಭ.ಗೀ. ಕರ್ಮಾನುಷ್ಠಾನದ ಫಲ, ೪೪೭.

**ಶಬ್ದಾದಿಹೀನ** - ಬ್ರ.ಸೂ-೧. ಶಬ್ದ, ಸ್ಪರ್ಶ - ಮುಂತಾದ ಗುಣಗಳಿಲ್ಲದ (ಪ್ರಧಾನ), ೩೪೫, (ಪ್ರಪಂಚ), ೩೨೦.

**ಶಬ್ದಾನುಗಮಃ** - ತೈ. ಅರ್ಥವೂ ಮಾತುಗಳಿಗೆ ಹೊಂದಿಕೊಂಡಿರುವದು, ೧೫೮.

**ಶಬ್ದಪ್ರವೃತ್ತಿನಿಮಿತ್ತಾನಿ** - ಮಾಂ. ಶಬ್ದವು ತಿಳಿಸುವದಕ್ಕೆ ನಿಮಿತ್ತವಾಗಿರುವ ಜಾತಿ, ದ್ರವ್ಯ, ಗುಣ - ಮುಂತಾದವು, ೩೪, ೩೫.

**ಶಬ್ದಪ್ರವೃತ್ತಿಃ** - ಬೃಹ-೧. ನಾಮ, ಜಾತಿ - ಮುಂತಾದವುಗಳನ್ನು ನಿಮಿತ್ತ ಮಾಡಿಕೊಂಡು ಶಬ್ದವು ವಸ್ತುವನ್ನು ತಿಳಿಸುವದು, ೩೪೮.

**ಶಬ್ದೈಕಪ್ರಮಾಣಗಮ್ಯಮ್** - ಭ.ಗೀ. ಶಬ್ದವೆಂಬ ಪ್ರಮಾಣವೊಂದರಿಂದಲೇ ತಿಳಿದು ಬರುವ ಬ್ರಹ್ಮ, ೭೯೩.

**ಶಮಾದೀನಿ** - ಬ್ರ.ಸೂ-೨. ಶಮ, ದಮ ಮುಂತಾದ ಜ್ಞಾನಸಾಧನಗಳು. ಯಜ್ಞಾದಿಗಳಿಲ್ಲದಿದ್ದರೂ ಶಮಾದಿಗಳು ಅವಶ್ಯ, ೨-೪೭೦ ; ಯಜ್ಞಾದಿಗಳಿಗಿಂತ ಇವು ಜ್ಞಾನಕ್ಕೆ ಹತ್ತಿರದ ಸಾಧನ, ೨-೪೭೧ ; ಶಮದಮಾದಿಗಳಿಂದ ಪುಷ್ಟಿಗೊಂಡ ಬ್ರಹ್ಮನಿಷ್ಠತ್ವವೇ ಭಿಕ್ಷುವಿನ ಆಶ್ರಮವಿಹಿತಕರ್ಮ, ೨-೪೬೦.

**ಶಮೋಪಾಯಃ** - ಬೃಹ-೧. ಕರ್ಮವನ್ನುಬಿಟ್ಟು ಶಾಂತನಾಗಿರುವದು, ೫೬.

**ಶ್ರದ್ಧಾ** - ಮುಂ. ಹಿರಣ್ಯಗರ್ಭಾದ್ಯುಪಾಸನೆ, ೪೨.

**ಶರಾವಾದಯಃ** - ಬ್ರ.ಸೂ-೧. ಶ್ರಾವೆಯೇ ಮುಂತಾದ ಕಾರ್ಯಗಳು (ಅನನುರೂಪವಾದ ಚಿನ್ನವೇ ಮುಂತಾದ ಕಾರಣದಿಂದ ಆಗವು), ೪೧೦.

**ಶರೀರಭೇದಃ** - ಐತ. ಶರೀರದ ನಾಶ, ೮೧.

**ಶರೀರಮ್** - ಬ್ರ.ಸೂ-೨. ದೇಹವು, ಅಶರೀರತ್ವವೇ ನಿತ್ಯಸಿದ್ಧವಾದ ಮೋಕ್ಷ ೧-೪೩, ೬೦ ; ಶರೀರವು ಇದೆ ಎಂಬುದು ಮಿಥ್ಯಾಜ್ಞಾನ, ೧-೫೮ ;

ಶರೀರಾದಿಸಂಬಂಧವಿಲ್ಲದೆಯೇ ಈಶ್ವರನಿಗೆ ಜ್ಞಾನವಿರಬಹುದು, ೧-೭೦ ; ಜೀವನು ಶರೀರದಲ್ಲಿಯೇ ಇರುವದರಿಂದ ಶಾರೀರನೆನಿಸಿರುತ್ತಾನೆ, ೧-೧೫೪ ; ಶರೀರದಿಂದ ಆತ್ಮನನ್ನು ವಿಂಗಡಿಸಿ ಅರಿತುಕೊಳ್ಳುವದನ್ನೇ ಶ್ರುತಿಯಲ್ಲಿ ಶರೀರವನ್ನು ಬಿಟ್ಟೇಳುವದೆಂದಿದೆ, ೧-೨೬೬ ; ಸ್ಥೂಲ, ಸೂಕ್ಷ್ಮ ಎಂಬ ಶರೀರಗಳು, ೧-೩೪೨, ೩೪೩ ; ಪರಮಾತ್ಮನೇ ಉಪಾಧಿಪರಿಚ್ಛಿನ್ನನಾದಾಗ ಶಾರೀರನೆನಿಸುತ್ತಾನೆ, ೧-೧೫೮ ; ಮುಕ್ತರಾದ ಸಗುಣೋಪಾಸಕರಿಗೆ ಶರೀರವಿರುವದೂ ಇಲ್ಲದಿರುವದೂ ವಿಕಲ್ಪದಿಂದ, ೨-೬೦೨, ೬೦೩ ; ಮುಕ್ತರಿಗೆ ಅನೇಕಶರೀರಗಳಿರುವಲ್ಲಿ ಎಲ್ಲದರಲ್ಲಿಯೂ ಸ್ಥಿತಿ, ೨-೬೦೫.

**ಶರೀರದ್ವಯಮ್** - ಬ್ರ.ಸೂ-೧. ಸ್ಥೂಲ, ಸೂಕ್ಷ್ಮ - ಎಂಬ ಎರಡು ಶರೀರಗಳು, ೩೪೨, ೩೪೩ ; **ಶಾಂ. ನಿ.** ಸ್ಥೂಲ ಮತ್ತು ಸೂಕ್ಷ್ಮ ಎಂಬ ಎರಡು ಶರೀರಗಳು, ಸೂ. ಭಾ. ೧-೪-೩.

**ಶರೀರಪರಿಣಾಮವೃತ್ತಿಲಾಭಃ** - ಬೃಹ-೧. ಪ್ರಾಣನು ಆಯಾ ಶರೀರಕ್ಕೆ ತಕ್ಕಷ್ಟು ವ್ಯಾಪಾರವನ್ನು ಪಡೆಯುವದು, ೮೫.

**ಶರೀರಪಾತಃ** - **ಮುಂ.** ದೇಹವು ಬೀಳುವದು, ಸಾವು, ೧೧೭ ; **ಮಾಂ.** ಶರೀರವು ಬಿದ್ದುಹೋಗುವದು, ಸಾಯುವದು, ೧೨೮ ; ಬೃಹ-೧. ಶರೀರವು ಬಿದ್ದು ಹೋಗುವದು, ಸಾವು, ೧೭೩.

**ಶರೀರಪಾತೋತ್ತರಕಾಲಮ್** - ಬ್ರ.ಸೂ-೨. ಶರೀರವು ಬಿದ್ದ ಮೇಲೆ (ದೇವಭಾವ) ೧೪೫ ; ಮೋಕ್ಷವು ಶರೀರವು ಬಿದ್ದಬಳಿಕವಲ್ಲ, ೨೭೧.

**ಶರೀರಪ್ರಬನ್ಧಃ** - ಐತ. ಶರೀರಗಳ ಸಾಲು, ೮೧.

**ಶರೀರಾತ್ ಸಮುತ್ಥಾನಮ್** - ಬ್ರ.ಸೂ-೧. ಶರೀರವನ್ನು ಅದರ ಅಭಿಮಾನವನ್ನು ಬಿಟ್ಟು ವಿವೇಚಿಸಿಕೊಳ್ಳುವುದು, ೨೬೫ ; **ಶಾಂ. ನಿ.** ಶರೀರವನ್ನು ಬಿಟ್ಟೇಳುವದು, ತಾನು ಅಶರೀರನೆಂಬುದನ್ನು ವಿವೇಕದಿಂದ ತಿಳಿದುಕೊಳ್ಳುವದು, ಸೂ. ಭಾ. ೧-೩-೧೯.

**ಶರೀರಾತ್ಮಭಾವನಾ** - **ಛಾಂ.** ದೇಹವೇ ತಾನೆಂದು ಬಗೆಯುವದು, ೬೨೩.

**ಶರೀರಾದಿಬುದ್ಧ್ಯನ್ತಾಃ** - ನೈ. ಶರೀರ, ಇಂದ್ರಿಯ, ಮನಸ್ಸು , ಬುದ್ಧಿ - ಇವುಗಳು. ಶರೀರಾದಿಯಾದ ಅನಾತ್ಮವೇ ನಾನೆಂಬ ಮಿಥ್ಯಾಜ್ಞಾನವೇ ಅಜ್ಞಾನವೆಂಬ ಸಾಂಖ್ಯರ ಮತ ಸರಿಯಲ್ಲ , ೩-೬; ಇವು ಅನಾತ್ಮವೆಂದು ತಿಳಿದರೂ ತಾನು ಯಾರೆಂಬ ಜಿಜ್ಞಾಸೆ ತಪ್ಪುವದಿಲ್ಲ, ೪-೧೦.

**ಶರೀರೇನ್ದ್ರಿಯಾದೀನಿ, ಶರೀರೇನ್ದ್ರಿಯಮನೋಬುದ್ಧಿವೇದನೋಪಾಧಯಃ** - ಬ್ರ.ಸೂ-೧. ಶರೀರ, ಇಂದ್ರಿಯ, ಮನಸ್ಸು, ಬುದ್ಧಿ, ಮೋಹ, ವೇದನೆ - ಎಂಬ ಉಪಾಧಿಗಳು, ೬೬, ೨೬೭.

**ಶರೀರೇನ್ದ್ರಿಯಸಂಘಾತಃ** - ಬೃಹ-೧. ಶರೀರವೂ ಇಂದ್ರಿಯಗಳೂ ಒಟ್ಟು ಸೇರಿ ಕೆಲಸಮಾಡುವ ಗುಂಪು, (ಕಾರ್ಯ ಕರಣಸಂಘಾತ), ೧೯೩.

**ಶರೀರೋಪಾದಾನಮ್** - ಬೃಹ-೧. ಶರೀರವನ್ನು ಗ್ರಹಿಸುವದು, ಹುಟ್ಟುವದು, ೪೨.

**ಶ್ರವಣಮ್** - ಬ್ರ.ಸೂ-೧. ಆತ್ಮವಿಚಾರವಾಗಿ ಶ್ರುತಿಯನ್ನು ಕೇಳುವದು, ಶ್ರುತಿಯ ತಾತ್ಪರ್ಯವನ್ನು ಗೊತ್ತುಮಾಡಿಕೊಳ್ಳುವದು, ೪೧, ೬೧ ; **ಶಾಂ. ನಿ.** ವೇದಾಂತವಾಕ್ಯವನ್ನು ಕೇಳಿ ಅರ್ಥವನ್ನು ಅರಿತುಕೊಳ್ಳುವದು. ಉತ್ತಮಾಧಿಕಾರಿಗಳಿಗೆ ತತ್ತ್ವಮಸ್ಯಾದಿವಾಕ್ಯಗಳ ಶ್ರವಣಮಾತ್ರದಿಂದಲೇ ಜ್ಞಾನವಾಗುತ್ತದೆ, ಸೂ. ಭಾ. ೪-೧-೪.

**ಶ್ರವಣಮನನನಿದಿಧ್ಯಾಸನಾನಿ, ಶ್ರವಣಾದೀನಿ** - ಬ್ರ.ಸೂ-೨. ಆತ್ಮದರ್ಶನಕ್ಕೆ ಅಂತರಂಗಸಾಧನಗಳಾದ ಶ್ರವಣಾದಿಗಳು. ಶ್ರವಣಾದಿವಿಧಿಚ್ಛಾಯೆಯ ವಚನಗಳು ಆತ್ಮನ ಕಡೆಗೆ ಮುಮುಕ್ಷುವನ್ನು ತಿರುಗಿಸುವದಕ್ಕೆ, ೧-೫೨ ; ಇವು ತತ್ತ್ವಜ್ಞಾನವನ್ನೇ ವಿಧಿಸುವದಿಲ್ಲ , ೨-೨೯೧ ; ಇವು ಜ್ಞಾನಕ್ಕೆ ಅಂತರಂಗಸಾಧನ, ೨-೫೫೭ ; ಮನನನಿಧಿಧ್ಯಾಸನಗಳೂ ಶ್ರವಣದಂತೆ ಬ್ರಹ್ಮಾವಗತಿಗೇ, ಅವಗತಿಯಾದ ಮೇಲೆ ಮಾಡತಕ್ಕವಲ್ಲ, ೧-೬೧ ; ಶ್ರವಣವಲ್ಲದೆ ಮನನವೂ ಬೇಕೆಂದು ಶ್ರುತಿ ಹೇಳುತ್ತದೆ, ೧-೪೦೯ ; ಶ್ರುತಿಸಮ್ಮತವಾದ ಮನನದ ಜಾತಿ, ೧-೪೧೮ ; ಬೃಹದಾರಣ್ಯಕದಲ್ಲಿ ಹೇಳಿರುವ ಶ್ರವಣಾದಿಗಳು ವಿಜ್ಞಾನಾತ್ಮನ ವಿಷಯವಲ್ಲ , ಪರಮಾತ್ಮನ ವಿಷಯ, ೧-೩೮೦.

**ಶ್ರವಣಮನನನಿದಿಧ್ಯಾಸನಾನಿ** - ಬ್ರ.ಸೂ-೧. ಜ್ಞಾನಸಾಧನಗಳು, ೪೧, ೬೧ ; **ತೈ.** ಆತ್ಮನ ವಿಷಯವಾಗಿ ಕೇಳುವದು ಆಲೋಚಿಸುವದು, ಚಿಂತಿಸಿ ಅನುಭವಕ್ಕೆ ಹೊಂದಿಸಿಕೊಳ್ಳುವದು, ೮೫ ; **ಬೃಹ-೧.** ಆತ್ಮಜ್ಞಾನಕ್ಕಾಗಿ ಮಾಡಬೇಕಾದ ಮುಖ್ಯ ಸಾಧನಗಳು,, ೧೧೫, ೩೫೯ ; **ಶಾಂ. ನಿ.** ಆತ್ಮವಿಷಯದ ವೇದಾಂತವಾಕ್ಯಗಳ ಶ್ರವಣ. ಅವುಗಳಿಗೆ ಪೂರ್ವಾಪರವಿರೋಧವಿಲ್ಲವೆಂಬುದನ್ನು ತರ್ಕಮಾಡುವದು, ಅನುಭವಕ್ಕೆ ತಂದುಕೊಳ್ಳುವದು ; ಇವು ಮೂರೂ ಬ್ರಹ್ಮಜ್ಞಾನಕ್ಕೆ ನೇರಾದ ಸಾಧನಗಳು. ಬೃ.ಭಾ. ೧-೪-೨.

**ಶಶವಿಷಾಣಮ್** - **ಮಾಂ.** ಮೊಲದ ಕೊಂಬು, ಅತ್ಯಂತವಾಗಿ ಇಲ್ಲದ ವಸ್ತು ೩೬, ೧೧೩, ೨೫೩, ೨೭೦, ೨೮೦, ೨೮೪ ; **ಬೃಹ-೧.** (ಅತ್ಯಂತವಾಗಿ ಇಲ್ಲದ) ಮೊಲದ ಕೊಂಬು, ೨೪ ; **ಭ.ಗೀ.** ಮೊಲದ ಕೊಂಬು, ಅತ್ಯಂತವಾಗಿ ಇಲ್ಲದ ಪದಾರ್ಥ, ೧೦೮೫ ; **ಶಾಂ. ನಿ.** ಮೊಲದ ಕೊಂಬು, ಎಂದಿಗೂ ಇಲ್ಲದ್ದು ; ಅಭಾವವು ಭಾವದಂತಲ್ಲವೆಂಬುದನ್ನು ಸ್ಪಷ್ಟಪಡಿಸುವದಕ್ಕೋಸ್ಕರ ಅದನ್ನು ಮೊಲದ ಕೊಂಬು, ಬಂಜೆಯ ಮಗ ಮುಂತಾದ ವಿಕಲ್ಪಗಳಿಗೆ ಹೋಲಿಸುವದು ಭಾಷ್ಯದಲ್ಲಿ ರೂಢಿ, ಗೀ. ಭಾ. ೧೮-೪೮, ಭಾ.ಭಾ. ೧೦೮೬, ಸೂ. ಭಾ. ೨-೧-೧೮. ಅತ್ಯಂತವಾಗಿ ಇಲ್ಲದಿರುವ ವಸ್ತು ವಿಕಲ್ಪ ಮಾತ್ರ (ಅಭಾವಕ್ಕೆ ದೃಷ್ಟಾಂತ), ೧೮-೪೮, ಭಾ. ಭಾ. ೧೦೮೬.

**ಶಾನ್ತಿಃ** - **ಭ.ಗೀ.** ಅಂತಃಕರಣದ ನಿಗ್ರಹ, ೧೨೭, ೯೨೭, ೯೨೮ ; ಮೋಕ್ಷ, ೧೩೭, ೧೩೯, ೩೧೩, ೩೪೭, ೪೦೫.

**ಶಾರೀರಃ** - **ಬ್ರ.ಸೂ-೧.** ಶರೀರವೆಂಬ ಉಪಾಧಿಯಲ್ಲಿರುವ (ಜೀವ), ೯೮, ೧೪೭, ೧೫೪, ೧೫೮, ೧೬೧, ೧೭೪, ೧೮೬, ೧೯೩, ೨೦೫, ೨೫೧, ೩೨೭, ೩೩೦, ೪೩೫, ೪೫೪, ೪೭೬ ; **ಬ್ರ.ಸೂ-೨.** ಜೀವ, ಪರಮಾತ್ಮನೂ ಶರೀರದಲ್ಲಿರುತ್ತಾನಾದರೂ ಜೀವನಂತೆ ಶರೀರದಲ್ಲಿ ಮಾತ್ರವೇ ಇರುವದಿಲ್ಲವಾದ್ದರಿಂದ ಜೀವನೇ ಶಾರೀರನು, ಈಶ್ವರನಲ್ಲ, ೧-೧೫೪ ; ಅವಿದ್ಯಾಕಲ್ಪಿತನಾದ ಶಾರೀರನಿಗಿಂತ ಈಶ್ವರನು ಬೇರೆ, ೧-೧೦೪ ; ಪರಮೇಶ್ವರನನ್ನೇ ಉಪಾಧಿಗಳಿಂದ ಶಾರೀರನೆಂದು ಅವಿವೇಕಿಗಳು ಕಲ್ಪಿಸಿಕೊಂಡಿರುತ್ತಾನೆ, ೧-೧೫೮ ; ಶಾರೀರಾಂತರ್ಯಾಮಿಗಳ ಭೇದವು ಪಾರಮಾರ್ಥಿಕವಲ್ಲ, ೨-೧೯೫ ; **ಶಾಂ. ನಿ.** ಶರೀರವೆಂಬ ಉಪಾದಿಯುಳ್ಳ ಜೀವ, ಸೂ. ಭಾ. ೧-೧-೧೨.

**ಶಾರೀರಕಮ್** - **ನೈ.** ವೇದಾಂತಾರ್ಥವನ್ನು ವಿಚಾರಮಾಡುವ ಶಾಸ್ತ್ರ, ಬ್ರಹ್ಮಸೂತ್ರ. ಬ್ರಹ್ಮವಸ್ತುಸ್ವರೂಪವನ್ನು ಮಾತ್ರ ವಿಚಾರಮಾಡುವ ಈ ಶಾಸ್ತ್ರದ ಪ್ರಾರಂಭವೇ ಸರ್ವವೇದಕ್ಕೂ ಕರ್ಮವು ಅರ್ಥವೆಂಬವರ ಮತವು ತಪ್ಪೆಂದು ತಿಳಿಸುತ್ತದೆ, ೧-೯೧.

**ಶಾರೀರಕಮೀಮಾಂಸಾ** - **ಬ್ರ.ಸೂ-೧.** ಜೀವನ ಪರಮಾರ್ಥವನ್ನು ವಿಚಾರಮಾಡುವ ವೇದಾಂತಶಾಸ್ತ್ರ, ೯.

**ಶಾಲಗ್ರಾಮೇ ಹರಿಃ, ಶಾಲಗ್ರಾಮೇ ವಿಷ್ಣುಃ** - **ಬ್ರ.ಸೂ-೧.** ಶಾಲಗ್ರಾಮದಲ್ಲಿ ವಿಷ್ಣು (ಪರಮಾತ್ಮನನ್ನು ಉಪಾಸನೆಮಾಡುವದಕ್ಕೆ ಸ್ಥಾನವನ್ನು ಹೇಳಿದೆ - ಎಂಬುದಕ್ಕೆ ದೃಷ್ಟಾಂತ), ೧೩೯, ೧೭೯, ೨೫೭ ; **ಶಾಂ. ನಿ.** ಶಾಲಗ್ರಾಮಶಿಲೆಯಲ್ಲಿ

ವಿಷ್ಣುವಿರುವನೆಂಬ ಬುದ್ಧಿ; ಪ್ರತೀಕೋಪಾಸನೆಗೆ, ಅಥವಾ ವ್ಯಾಪಕನಿಗೂ ಒಂದು ಪ್ರದೇಶವಿರಬಹುದೆಂಬುದಕ್ಕೆ, ದೃಷ್ಟಾಂತ, ಸೂ. ಭಾ. ೧-೨-೧೫.

**ಶಾಸ್ತ್ರಮ್** - ಬ್ರ.ಸೂ-೧. ವೇದ, ೩೨, ೩೩, ೩೪, ೩೮, ೧೬೨, ೨೭೯, ೨೮೧ ; ಬ್ರ.ಸೂ-೨. ವೇದಃ, ವೇದಾನ್ತಃ, ಆಗಮಃ, ಶಬ್ದಃ, ಶ್ರುತಿಃ - ಇವೆಲ್ಲ ಪರ್ಯಾಯಗಳು. ಬ್ರಹ್ಮವು ಶಾಸ್ತ್ರಕ್ಕೆ ಕಾರಣ, ೧-೩೨ ; ಶಾಸ್ತ್ರವು ಬ್ರಹ್ಮಕ್ಕೆ ಪ್ರಮಾಣ, ೧-೩೩ ; ಶಾಸ್ತ್ರವು ಕರ್ಮವನ್ನೇ ತಿಳಿಸುತ್ತದೆ ಎಂಬುದು ವಿಧಿಪ್ರತಿಷೇಧಶಾಸ್ತ್ರದ ವಿಷಯ, ೨-೫೫ ; ಶಾಸ್ತ್ರವು ವಿಧಿಶೇಷವಾಗಿಯಲ್ಲ, ಸ್ವತಂತ್ರವಾಗಿಯೇ ಬ್ರಹ್ಮಕ್ಕೆ ಪ್ರಮಾಣವಾಗಿದೆ, ೧-೬೨ ; ಶಾಸ್ತ್ರವು ಬ್ರಹ್ಮದಲ್ಲಿ ಕಲ್ಪಿತವಾದ ವೇದ್ಯತ್ವಾದಿಭೇದವನ್ನು ಕಳೆಯುವದರಿಂದ ಪ್ರಮಾಣ, ೧-೪೭ ; ಶಾಸ್ತ್ರಪ್ರಾಮಾಣ್ಯವು ಅನುಮಾನಗಮ್ಯವಲ್ಲ, ೧-೩೮ ; ನಿರ್ದೋಷವಾದ ಶಾಸ್ತ್ರವನ್ನು ಅಪ್ರಮಾಣವೆನ್ನಲಾಗದು, ೧-೬೮ ; ಶಾಸ್ತ್ರ-ದೃಷ್ಟಿಯಲ್ಲಿ ಆತ್ಮನಿಗೆ ಭೋಗವೇ ಇಲ್ಲ, ೧-೬೨ ; ಶಾಸ್ತ್ರಕ್ಕೆ ಮನುಷ್ಯರು ಮುಖ್ಯಾಧಿಕಾರಿಗಳು, ೧-೨೭೯ ; ದೇವತೆಗಳೂ ಋಷಿಗಳೂ ಅಧಿಕಾರಿಗಳೇ, ೧-೨೮೧ ; ಮೋಕ್ಷವು ಕೇವಲ ಶಾಸ್ತ್ರದೃಷ್ಟ, ಅದೃಷ್ಟ - ಎಂಬ ವೃತ್ತಿಕಾರರ ಮತವು ಸರಿಯಲ್ಲ, ೧-೪೦ ; ವಾಮದೇವನಂತೆ ಶಾಸ್ತ್ರದೃಷ್ಟಿಯಿಂದ ಇಂದ್ರನು ತನ್ನನ್ನು ಪರಮಾತ್ಮನೆಂದು ತಿಳಿದುಕೊಂಡಿರುತ್ತಾನೆ, ೧-೧೪೦ ; ಕಾರಣವು ಹೊರಗಿನ ನಿಮಿತ್ತವನ್ನು ಬಯಸದೆ ಕಾರ್ಯವನ್ನುಂಟುಮಾಡಬಹುದೆಂಬುದು ಲೋಕದೃಷ್ಟಿಯಿಂದ, ಈಶ್ವರನ ಅಪೇಕ್ಷೆಯಿಂದಲೇ ಮಾಡುವದೆಂಬುದು ಶಾಸ್ತ್ರದೃಷ್ಟಿಯಿಂದ, ೨-೧೧ ; ಜೀವನಿಗೆ ಮಹತ್ವವನ್ನು ಹೇಳಿರುವದು ಶಾಸ್ತ್ರದೃಷ್ಟಿಯಿಂದ, ೨-೧೨೮ ಶಾರೀರತ್ವವೂ ಸ್ವಾಭಾವಿಕ, ಬ್ರಹ್ಮಾತ್ಮತ್ವವು ಶಾಸ್ತ್ರೀಯ, ೧-೪೩೫ ; ಮೋಕ್ಷಶಾಸ್ತ್ರಗಳಲ್ಲಿ ಹೇಳಿರುವ ಜಲಸೂರ್ಯಕದೃಷ್ಟಾಂತ, ೨-೨೮೫, ೨-೨೮೭ ; **ಈಶ.** ವೇದವು, ೬, ೨೧, ೩೩, ೪೧ ; **ಮಾಂ.** ವೇದಾಂತವಾಕ್ಯ , ೧೧೪, ೧೧೫, ೧೫೧, ೧೬೦, ೨೧೨, ೨೧೬ ; ಅಲಾತಶಾಂತಿಪ್ರಕರಣ, ೨೦೩ ; **ಐತ.** ವೇದ, ೭೨, ೭೭ ; **ಬೃಹ-೧.** ವೇದ, ೩, ೫, ೪೫ ; **ಭ.ಗೀ.** ಗೀತೆಯಲ್ಲಿ ಹೇಳಿರುವ ವೇದಾಂತ, ೯೨೫ ; ಗೀತೆಯ ಹದಿನೈದನೆಯ ಅಧ್ಯಾಯ, ೯೨೫ ; ವೇದ, ೪೪, ೪೫, ೨೭೯, ೯೫೪, ೯೫೫, ೯೫೬, ೯೫೮ ; **ಶಾಂ. ನಿ.** ಋಗ್ವೇದವೇ ಮುಂತಾದ ವೇದ ; ಕರ್ಮಕ್ಕೂ ಬ್ರಹ್ಮಕ್ಕೂ ಪ್ರಮಾಣ, ಗೀ. ಭಾ. ೨-೨೧, ಭಾ. ಭಾ. ೪೦.

**ಶಾಸ್ತ್ರಮ್, ಶ್ರುತಿಃ, ಶಬ್ದಃ, ವೇದಃ** - **ಬೃಹ-೨.** ವೇದ, ೨, ೩೭ ; **ನೈ.** (೧) ವೇದ, ವೇದಾಂತವಾಕ್ಯ. ಶಾಸ್ತ್ರವು ಹಿತಾ ಹಿತಪ್ರಾಪ್ತಿಪರಿಹಾರಗಳಿಗೆ ಉಪಾಯವನ್ನು ಮಾತ್ರ ತಿಳಿಸುತ್ತದೆ, ೧-೨೯; ಶಾಸ್ತ್ರವು ಪದಾರ್ಥದಲ್ಲಿಲ್ಲದ ಶಕ್ತಿಯನ್ನು ಅದಕ್ಕೆ ಉಂಟುಮಾಡಲಾರದು, ೧-೩೦, ೩-೯೩; ಪ್ರಸಂಖ್ಯಾನದ ಫಲವು ಶಾಸ್ತ್ರಬಲದಿಂದ

ಸ್ಥಿರವಾಗಿರಲಾರದು, ಏಕೆಂದರೆ ಶಾಸ್ತ್ರವು ಇದ್ದದ್ದನ್ನು ತಿಳಿಸುವದೇ ಹೊರತು ಇಲ್ಲದ್ದನ್ನುಂಟುಮಾಡಲಾರದು, ೩-೯೩; ವಿಧಿಪ್ರತಿಷೇಧಶಾಸ್ತ್ರಕ್ಕೆ ಅಜ್ಞನೇ ಅಧಿಕಾರಿ, ೧-೩೧; ನಿವೃತ್ತಿಶಾಸ್ತ್ರವನ್ನು ಮೀಮಾಂಸಕರು ಒಪ್ಪುವದಿಲ್ಲ, ೧-೨೯; ಆತ್ಮನ ಸ್ವಭಾವವು ನಿವೃತ್ತಿಶಾಸ್ತ್ರಕ್ಕೆ ವಿರುದ್ಧವಲ್ಲವಾಗಿ ಜ್ಞಾನಿಗೆ ನಿವೃತ್ತಿರೂಪವಾದ ಅಮಾನಿತ್ವಾದಿಗಳು ಇದ್ದೇ ಇರುವವು, ೪-೬೯; ಜ್ಞಾನಿಯು ಕರ್ಮಾಧಿಕಾರವನ್ನು ಸುಟ್ಟುಹಾಕಿಕೊಂಡಿರುವದರಿಂದ ಶ್ರುತಿಯ ತಲೆಯಮೇಲೆ ನಿಂತಿರುತ್ತಾನೆ, ವೇದಕಿಂಕರನಲ್ಲ, ೧-೪೦ ; ನೈಷ್ಕರ್ಮ್ಯಪರವಾದ ಶ್ರುತಿಯೂ ಇದೆ, ೧-೮೭ ; ಅನಾತ್ಮವನ್ನು ವಿಂಗಡಿಸಿಕೊಂಡಿರುವವನಿಗೆ ಶ್ರುತಿಯು "ತತ್ತ್ವಮಸಿ" ಎಂದು ಹೇಳುತ್ತದೆ, ೩-೫; ಶ್ರುತಿಯನ್ನು ಅನಾದರಮಾಡಿ ಬರಿಯ ಅನುಮಾನವನ್ನು ನಂಬಬಾರದು, ೩-೩೪. (೨) ತಾತ್ಪರ್ಯಲಿಂಗವಾದ ವಾಚಕಶಬ್ದ . ಶ್ರುತ್ಯಾದಿಗಳಿಂದ ವಾಕ್ಯಾರ್ಥವನ್ನು ಅರಿತುಕೊಳ್ಳಬೇಕು, ೩-೩೨. (೩) ಶ್ರವಣ. ವಾಕ್ಯಜ್ಞಾನದ ಪ್ರಸಂಖ್ಯಾನವನ್ನು ನಾವು ಒಪ್ಪದಿದ್ದರೂ ಶ್ರವಣಾದಿಗಳಲ್ಲಿ ಇದನ್ನು ಒಪ್ಪಿರುತ್ತೇವೆ, ೩-೧೨೫.

**ಶಾಸ್ತ್ರಗುರುಪ್ರಸಾದಃ, ಶಾಸ್ತ್ರಾಚಾರ್ಯೋಪದೇಶಃ** - ಬೃಹ-೧. ವೇದ ಮತ್ತು ವೇದಾಚಾರ್ಯರ ಉಪದೇಶದಿಂದಾಗುವ ಅನುಗ್ರಹ, ೩೨೭, ೩೭೩.

**ಶಾಸ್ತ್ರತರ್ಕೌ, ಶಾಸ್ತ್ರನ್ಯಾಯೌ** - ಬೃಹ-೨. ತತ್ತ್ವನಿರ್ಣಯಕ್ಕೆ ಅವಶ್ಯವಾದ ಆಗಮೋಪಪತ್ತಿಗಳು, ೩೨೨, ೩೩೫.

**ಶಾಸ್ತ್ರತಾತ್ಪರ್ಯವಿದಃ** - ಬ್ರ.ಸೂ-೧. ವೇದದ ತಾತ್ಪರ್ಯವನ್ನು ಬಲ್ಲ (ಶಬರಸ್ವಾಮಿಗಳು), ೩೯, ೫೫.

**ಶಾಸ್ತ್ರನಿಮಿತ್ತ** - ಬೃಹ-೧. ಶಾಸ್ತ್ರದಲ್ಲಿ ಹೇಳಿರುವ ಕಾರಣ ಅನುಸರಿಸಬೇಕಾದ (ಕಾಲಾದಿ), ೫೬.

**ಶಾಸ್ತ್ರದೃಷ್ಟ** - ಬ್ರ.ಸೂ-೧. ಶಾಸ್ತ್ರದಿಂದ ಮಾತ್ರವೇ ತಿಳಿಯಬರುವ, ೪೦.

**ಶಾಸ್ತ್ರದೃಷ್ಟಿಃ** - ಭ.ಗೀ. ಶಾಸ್ತ್ರದಲ್ಲಿ ಹೇಳಿರುವ ದೃಷ್ಟಿಯನ್ನೇ ಅವಲಂಬಿಸಿರುವವನು, ೨೧೦ ; **ಶಾಂ. ನಿ.** ಶಾಸ್ತ್ರದಲ್ಲಿ ಹೇಳಿರುವ ತತ್ತ್ವದೃಷ್ಟಿ, ಆ ದೃಷ್ಟಿಯನ್ನವಲಂಬಿಸಿರುವ ಪುರುಷ. ಸೂ. ಭಾ. ೨-೨-೩, ಗೀ. ಭಾ. ೩-೩೪.

**ಶಾಸ್ತ್ರಪ್ರಮಾಣಕಮ್, ಶಾಸ್ತ್ರಲಕ್ಷಣಮ್** - **ಈಶ.** ವೇದವೆಂಬ ಪ್ರಮಾಣದಿಂದ ತಿಳಿಯಬರತಕ್ಕದ್ದು, ೩೩, ೪೧.

**ಶಾಸ್ತ್ರಪ್ರಮಾಣಕತ್ವ** - ಬ್ರ.ಸೂ-೧. (ಬ್ರಹ್ಮವು) ಶಾಸ್ತ್ರದಿಂದಲೇ ತಿಳಿಯಬರುವದೆಂಬುದು, ೩೫, ೩೯, ೪೧.

**ಶಾಸ್ತ್ರಪ್ರಮಾಣಜನಿತ** - ಭ.ಗೀ. ಶಾಸ್ತ್ರವೆಂಬ ಪ್ರಮಾಣದಿಂದ ಹುಟ್ಟಿದ, (ಜ್ಞಾನ), ೨೭೯.

**ಶಾಸ್ತ್ರಪ್ರಮಾಣಕ** - ಶಾಂ. ನಿ. (೧) ವೇದಮಾತ್ರದಿಂದಲೇ ತಿಳಿದುಬರುವ ಬ್ರಹ್ಮ; ಸೂ. ಭಾ. ೧-೧-೪ ; (೨) ವೇದವೇ ಪ್ರಮಾಣವೆಂದು ನಂಬುವವ.

**ಶಾಸ್ತ್ರಪ್ರಾಮಾಣ್ಯಮ್** - ಬ್ರ.ಸೂ-೧. ಶಾಸ್ತ್ರವು ಪ್ರಮಾಣವೆಂಬುದು (ತರ್ಕದಿಂದ ಸಿದ್ಧಪಡಿಸತಕ್ಕದ್ದಲ್ಲ), ೩೮.

**ಶಾಸ್ತ್ರವಿಷಯವಿಭಾಗಃ** - ಭ.ಗೀ. ಗೀತಾಶಾಸ್ತ್ರದ ವಿಷಯವನ್ನು ವಿಂಗಡಿಸಿ ತಿಳಿಸುವದು, ೮೦.

**ಶಾಸ್ತ್ರಾಚಾರ್ಯೋಪದೇಶಃ** - ಮಾಂ. ಶ್ರುತಿಯ ಮತ್ತು ಗುರುಗಳ ಉಪದೇಶ, ೧೮೬ ; ಭ.ಗೀ. ಶಾಸ್ತ್ರವೂ ಗುರುಗಳೂ ಹೇಳಿಕೊಟ್ಟದ್ದು, ೪೫, ೧೨೧, ೫೧೯, ೮೩೬, ೮೪೪, ೧೦೩೪ ; ಶಾಂ. ನಿ. ಶಾಸ್ತ್ರ ಗುರು - ಇವರ ಉಪದೇಶ. ತತ್ತ್ವವನ್ನು ತಿಳಿಯುವದಕ್ಕೆ ಶಾಸ್ತ್ರದಿಂದಾದ ಅರಿವು, ಗುರುಬೋಧೆಯಿಂದಾದ ಅರಿವು, ಮತ್ತು ತನ್ನ ಅರಿವು - ಇವು ಮೂರೂ ಒಂದಾಗಬೇಕು. ಗೀ. ಭಾ. ೧೩-೩೦, ೧೩-೩೪.

**ಶಾಸ್ತ್ರಾದ್ಯಪೇಕ್ಷಮ್** - ಬ್ರ.ಸೂ-೧. ಶಾಸ್ತ್ರ, ಗುರು - ಇವರಿಂದ ಮಾತ್ರ ತಿಳಿಯಬರುವ, ಅನುಭವವೇದ್ಯವಾದ, ೧೮೭.

**ಶಾಸ್ತ್ರಾರ್ಥಃ** - ಛಾಂ. ಶಾಸ್ತ್ರವು ತಾತ್ಪರ್ಯದಿಂದ ಹೇಳುವ ವಿಷಯ, ೫೮೪ ; ಭ.ಗೀ. ಶಾಸ್ತ್ರದಲ್ಲಿ ಹೇಳಿರುವ ವಿಷಯ ೧೫೬, ೧೭೯, ೨೧೦, ೨೧೧, ೨೨೪.

**ಶಾಸ್ತ್ರಾರ್ಥಸಂಪ್ರದಾಯಃ, ಶಾಸ್ತ್ರಸಂಪ್ರದಾಯಃ** - ಭ.ಗೀ. ಗುರುಶಿಷ್ಯರ ಮೂಲಕ ಬಂದಿರುವ ಶಾಸ್ತ್ರಾರ್ಥ, ೭೬೯, ೧೧೪೩, ೧೧೪೭.

**ಶಾಸ್ತ್ರಾನರ್ಥಕ್ಯಮ್** - ಭ.ಗೀ. ಶಾಸ್ತ್ರವು ಹೊರಟಿರುವದು ವ್ಯರ್ಥವಾಗುವಿಕೆ, ೭೬೨, ೭೬೩, ೭೬೪, ೮೦೮, ೮೧೮.

**ಶಾಶ್ವತಂ ಸುಖಮ್** - ಕಠ. ನಿತ್ಯವಾದ ಆತ್ಮಸ್ವರೂಪವೇ ಆಗಿರುವ ಸುಖ, ೧೩೨.

**ಶಾಸ್ತ್ರೀಯಮ್** - ಬೃಹ-೨. ಶಾಸ್ತ್ರವಿಹಿತವಾದ ಪುಣ್ಯಕರ್ಮ ಅಥವಾ ಉಪಾಸನೆ, ೩೦, ೪೨೬.

**ಶಾಸ್ತ್ರೀಯವ್ಯವಹಾರಃ** - ಬ್ರ.ಸೂ-೧. ಶಾಸ್ತ್ರದಲ್ಲಿ ಹೇಳಿರುವಂತೆ ಮಾಡುವ (ಕರ್ಮ - ಮುಂತಾದದ್ದು), ೭.

**ಶಾಸ್ತ್ರೋಪದೇಶಾನರ್ಥಕ್ಯಮ್ ಉಪದೇಶಾನರ್ಥಕ್ಯಮ್** - ಬೃಹ-೧. ಶಾಸ್ತ್ರದ ಉಪದೇಶವು ವ್ಯರ್ಥ (ವಾಗುವದೆಂದು ವಾದಿಗಳು ಹೊರಿಸುವ ದೋಷ), ೧೫೪, ೩೧೨.

**ಶಿಷ್ಟಪ್ರವಾದಃ** - **ಮುಂ.** ಬ್ರಹ್ಮವನ್ನು ತಿಳಿದವರು ಹೇಳಿಕೊಳ್ಳುವ ಮಾತು, ೧೧ ; **ಶಾಂ. ನಿ.** ಶಾಸ್ತ್ರಾರ್ಥವನ್ನು ಬಲ್ಲವರ ಹೇಳಿಕೆ.

**ಶಿರೋವ್ರತಮ್** - **ಮುಂ.** ಶಿರಸ್ಸಿನಲ್ಲಿ ಅಗ್ನಿಧಾರಣೆ ಮಾಡುವ ಅಥರ್ವ ವೇದಪ್ರಸಿದ್ಧವಾದ ವ್ರತ, ೧೨೫.

**ಶುಷ್ಕತರ್ಕಃ** - ಬ್ರ.ಸೂ-೧. ಪ್ರಮಾಣರಹಿತ ತರ್ಕ, ೪೧೮ ; **ಶಾಂ. ನಿ.** ಪ್ರಮಾಣದ ಬಲವಿಲ್ಲದ ಒಣಯುಕ್ತಿ, ಸೂ. ಭಾ. ೨-೧-೬.

**ಶುಕಾದಯಃ** - ಬ್ರ.ಸೂ-೧. ಗಿಳಿ ಮುಂತಾದವು (ಬೇರೆ ಬೇರೆ ಸ್ಥಲಗಳಲ್ಲಿರುವ ವಸ್ತುಗಳಿಗೆ ದೃಷ್ಟಾಂತ), ೧೫೯.

**ಶುಕ್ತಿಃ** - **ಶಾಂ. ನಿ.** ಕಪ್ಪೆಯ ಚಿಪ್ಪು ಬೆಳ್ಳಿಯಂತೆ ತೋರಿದರೂ ನಿಜವಾದ ಕಪ್ಪೆಯ ಚಿಪ್ಪೇ ಆಗಿರುವಂತೆ, ಜಗತ್ತಾಗಿ ತೋರಿದರೂ ಆತ್ಮನು ನಿಜವಾಗಿ ಆತ್ಮನೇ ಎಂಬುದಕ್ಕೆ ಈ ದೃಷ್ಟಾಂತವನ್ನು ಭಾಷ್ಯದಲ್ಲಿ ಕೊಟ್ಟಿದೆ.

**ಶುಕ್ತಿಕಾ** - ಬ್ರ.ಸೂ-೧. ಕಪ್ಪೆಚಿಪ್ಪು (ಬೆಳ್ಳಿಯಂತೆ ತೋರುವದು, ಅಧ್ಯಾಸಕ್ಕೆ ದೃಷ್ಟಾಂತ), ೨ ; ಇದರಲ್ಲಾಗುವ (ಬೆಳ್ಳಿ ಎಂಬ ಶಬ್ದಪ್ರತ್ಯಯಗಳು ಮಿಥ್ಯೆ), ೫೯.

**ಶುಕ್ತಿಕಾಯಾಂ ರಜತಾಭಾವಃ** - ಭ.ಗೀ. ಕಪ್ಪೆಯ ಚಿಪ್ಪಿನಲ್ಲಿ ಹುಟ್ಟುಗಟ್ಟಿದ ಬೆಳ್ಳಿಯು ನಿಜವಾಗಿಲ್ಲದಿರುವಿಕೆ, ೨೬೨.

**ಶುದ್ಧಬ್ರಹ್ಮ** - ಬ್ರ.ಸೂ-೧. ಯಾವ ವಿಕಾರಧರ್ಮವನ್ನೂ ಆರೋಪಿಸದ ಬರಿಯ ಬ್ರಹ್ಮ , ೧೫೨ ; ದೇವತಾದಿಮಿಶ್ರವಿಲ್ಲದ ಉಪಾಸ್ಯಬ್ರಹ್ಮ , ೩೦೦ ; **ಬ್ರ.ಸೂ-೨.** ನಿರ್ಗುಣಬ್ರಹ್ಮ , ಪರಬ್ರಹ್ಮ , ಬ್ರಹ್ಮವು ಮನೋರಹಿತವೆಂದು ಹೇಳಿರುವದು ಶುದ್ಧಬ್ರಹ್ಮದ ವಿಷಯ, ಮನೋಮಯವೆಂದಿರುವದು ಸಗುಣ ಬ್ರಹ್ಮದ ವಿಷಯ, ೧-೧೫೨ ; ದೇವತಾದಿಮಿಶ್ರವಲ್ಲದ ಉಪಾಸ್ಯಬ್ರಹ್ಮ, ಶುದ್ಧ ಬ್ರಹ್ಮವಿದ್ಯೆಗೆ ದೇವಾದಿಗಳಿಗೂ ಅಧಿಕಾರವುಂಟು, ೧-೩೦೦ ; **ಶಾಂ. ನಿ.**

ಅಧ್ಯಾರೋಪಿತವಾದ ಗುಣಗಳ ಸಂಬಂಧವಿಲ್ಲದ ಬರಿಯಬ್ರಹ್ಮ, ಸೂ. ಭಾ. ೧-೨-೨.

**ಶುದ್ಧಸತ್ತ್ವಮ್** - ಛಾಂ. ದೋಷಸಂಬಂಧವಿಲ್ಲದ ಅಂತಃಕರಣ, ೬೧೨, ೬೩೬, ೬೭೦.

**ಶೃಂಖಲಾಪ್ರತ್ಯಯಃ** - ಬೃಹ-೨. ಸರಪಳಿಯಂತೆ ಎರಡು ಕೊಂಡಿಗಳು ಕೂಡಿರುವ ಸಾದೃಶ್ಯಪ್ರತ್ಯಯ, ೧೮೧.

**ಶ್ರುತಹಾನ್ಯಶ್ರುತಕಲ್ಪನಾ** - ಬೃಹ-೧. ಶ್ರುತಿಯಲ್ಲಿ ಹೇಳಿದ್ದನ್ನು ಬಿಟ್ಟು, ಹೇಳದೆ ಇರುವದನ್ನು ಕಲ್ಪಿಸುವ ದೋಷ, ೧೫೧ ; ಭ.ಗೀ. ಹೇಳಿರುವದನ್ನು ಬಿಟ್ಟು ಹೇಳದೆ ಇರುವದನ್ನು ಕಲ್ಪಿಸುವದು, ೨೬೮, ೭೬೯.

**ಶ್ರುತಹಾನ್ಯಶ್ರುತಕಲ್ಪನೇ** - ಬ್ರ.ಸೂ-೧. ಶ್ರುತಿಯಲ್ಲಿ ಹೇಳಿರುವದನ್ನು ಬಿಡುವದು, ಹೇಳದೆ ಇರುವದನ್ನು ಕಲ್ಪಿಸುವದು, ೩೭ ; ಶಾಂ. ನಿ. ವಾಕ್ಯದಲ್ಲಿ ಹೇಳಿರುವದನ್ನು ಬಿಟ್ಟು, ಹೇಳದೆ ಇರುವದನ್ನು ಕಲ್ಪಿಸುವ ದೋಷ.

**ಶ್ರುತಾರ್ಥಪರಿತ್ಯಾಗಃ** - ಛಾಂ. ಶ್ರುತಿಯಲ್ಲಿ ಹೇಳಿದ ವಿಷಯವನ್ನು ಕೈಬಿಡುವದು, ೪೬೦.

**ಶ್ರುತಿಃ** - ಬ್ರ.ಸೂ-೨. ವೇದ, ವೇದಾಂತ. ಬ್ರಹ್ಮಜಿಜ್ಞಾಸೆಯಲ್ಲಿ ಬರಿಯ ಶ್ರುತ್ಯಾದಿಗಳಲ್ಲದೆ ಅನುಭವಾದಿಗಳೂ ಪ್ರಮಾಣ, ೧-೨೮ ; ಅಶರೀರತ್ವವೆಂಬ ಮೋಕ್ಷದಲ್ಲಿ ಧರ್ಮಾಧರ್ಮಗಳಿಲ್ಲವೆಂಬುದಕ್ಕೆ ಶ್ರುತಿ, ೧-೫೩ ; ಪರಮಾತ್ಮನೇ ನನ್ನ ಆತ್ಮನೆಂಬ ಅರ್ಷದರ್ಶನಕ್ಕೆ ಶ್ರುತಿ, ೧-೧೪೦ ; ಶ್ರುತಿಪ್ರಮಾಣ ; ಅಂತರ್ಯಾಮಿಗಿಂತ ಬೇರೊಬ್ಬ ದಷ್ಟೃವಿಲ್ಲವೆಂಬುದಕ್ಕೆ, ೧-೧೯೫ ; ಆತ್ಮನು ಏಕರಸನೆಂಬುದಕ್ಕೆ, ೧-೨೪೧ ; ಸುಷುಪ್ತಿ ಸುಖವು ಆತ್ಮಸುಖರೂಪವೆಂಬುದಕ್ಕೆ, ೧-೨೪೧ ; ಬ್ರಹ್ಮಜ್ಞಾನದಿಂದ ಪರಮಪುರುಷಾರ್ಥವೆಂಬುದಕ್ಕೆ, ೧-೩೬೭ ; ಪರಮಾರ್ಥಾವಸ್ಥೆಯಲ್ಲಿ ವ್ಯವಹಾರವಿಲ್ಲವೆಂಬುದಕ್ಕೆ, ೧-೪೪೦, ೪೪೧, ಜಗತ್ತು ಹುಟ್ಟುವ ಮುಂಚೆ ಕಾರಣರೂಪದಲ್ಲಿತ್ತೆಂಬುದಕ್ಕೆ, ೧-೪೪೪, ೪೫೧ ; ಜೀವರೂಪಕ್ಕಿಂತ ಬ್ರಹ್ಮರೂಪವು ಅಧಿಕವೆಂಬುದಕ್ಕೆ ೧-೪೫೫, ೨-೪೪೫ ; ಬ್ರಹ್ಮವು ಪರಿಪೂರ್ಣಶಕ್ತಿಯುಳ್ಳದ್ದೆಂಬುದಕ್ಕೆ, ೧-೪೫೯, ೪೬೮, ೪೬೯ ; ಬ್ರಹ್ಮಕಾರಣವಾದದಲ್ಲಿ ಕೃತ್ಸ್ನಪ್ರಸಕ್ತಿಯಿಲ್ಲವೆಂಬುದಕ್ಕೆ, ೧-೪೬೩ ; ಈಶ್ವರನು ಕರ್ಮಸಾಪೇಕ್ಷನಾಗಿ ಸೃಷ್ಟಿಮಾಡುತ್ತಾನೆಂಬುದಕ್ಕೆ, ೧-೪೬೩ ; ಸಂಸಾರವು ಅನಾದಿ ಎಂಬುದಕ್ಕೆ, ೧-೪೭೬ ; ಒಂದನ್ನರಿತರೆ ಎಲ್ಲವನ್ನೂ ಅರಿತಂತೆ ಎಂಬ ಶ್ರುತಿಯಿಂದ

ಆಕಾಶೋತ್ಪತ್ತಿ ಸಾಧನೆ, ೨-೯೫ ; ಪರಮೇಶ್ವರನೇ ಆಯಾ ರೂಪದಿಂದ ಸಂಕಲ್ಪಿಸಿ ಕಾರ್ಯವನ್ನು ಸೃಜಿಸುತ್ತಾನೆಂಬುದಕ್ಕೆ ೨-೧೧೨ ; ಜೀವನಿಗೆ ದೇಹನಿಮಿತ್ತವಾದ ಜನನಮರಣಗಳಿಲ್ಲವೆಂಬುದಕ್ಕೆ, ೨-೧೧೮ ಜೀವನಿಗೆ ಸ್ವತಃ ಉತ್ಪತ್ತಿಯಿಲ್ಲವೆಂಬುದಕ್ಕೆ, ೨-೧೨೧ ; ಜೀವನು ಚೈತನ್ಯ ಸ್ವರೂಪನೆಂಬುದಕ್ಕೆ, ೨-೧೨೪ ; ಜೀವನ ಅಣುತ್ವಾದಿಗಳು ಉಪಾಧಿವಶದಿಂದ ಎನ್ನುವದಕ್ಕೆ, ೨-೧೩೮ ; ಜೀವನಿಗೆ ಬುದ್ಧಿ ಸಂಬಂಧವು ಸಂಸಾರದಲ್ಲೆಲ್ಲ ಇರುವದೆಂಬುದಕ್ಕೆ, ೨-೧೪೧ ; ಜೀವನ ದುಃಖವು ಪರಮಾತ್ಮನಿಗಿಲ್ಲವೆಂಬುದಕ್ಕೆ, ೨-೧೬೩ ; ಜೀವನು ಭೂತಸೂಕ್ಷ್ಮದೊಡನೆ ದೇಹಾಂತರವನ್ನು ಪಡೆಯುತ್ತಾನೆಂಬುದಕ್ಕೆ, ೨-೨೧೪ ; ಜೀವನು ಸುಷುಪ್ತಿಯಲ್ಲಿ ಬ್ರಹ್ಮತಾದಾತ್ಮ್ಯವನ್ನು ಹೊಂದುತ್ತಾನೆಂಬುದಕ್ಕೆ, ೨-೨೬೬ ; ಪರಮಾತ್ಮನು ಚಿನ್ಮಾತ್ರನೆಂಬುದಕ್ಕೆ, ೨-೨೮೩, ೨೮೪ ; ಈಶ್ವರನಿಂದಲೇ ಕರ್ಮಫಲವೆಂಬುದಕ್ಕೆ, ೨-೩೧೫ ; ಪಾರಿವ್ರಾಜ್ಯವು ಕರ್ತವ್ಯವೆಂಬುದಕ್ಕೆ, ೨-೪೫೮, ೪೬೧ ; ಜ್ಞಾನಕ್ಕೆ ಕರ್ಮಗಳು ಸಾಧನವೆಂಬುದಕ್ಕೆ, ೨-೪೬೯ ; ಶಮದಮಾದಿಗಳು ಜ್ಞಾನಕ್ಕೆ ಅವಶ್ಯವಾಗಿ ಬೇಕೆಂಬುದಕ್ಕೆ, ೨-೪೭೦ ಬ್ರಹ್ಮರೂಪವಾದ ಮುಕ್ತಿಯಲ್ಲಿ ತಾರತಮ್ಯವಿಲ್ಲವೆಂಬುದಕ್ಕೆ, ೨-೪೯೯ ; ಜ್ಞಾನವಾದ ಬಳಿಕ ಕರ್ಮವು ಕ್ಷಯವಾಗುವದೆಂಬುದಕ್ಕೆ ೨-೫೨೮, ೫೨೯ ; ಜ್ಞಾನವಾದ ಬಳಿಕವೂ ಬಾಧಿತವಾದ ಪ್ರಾರಬ್ಧಕರ್ಮಗಳ ಅನುವೃತ್ತಿಯಿರಬಹುದೆಂಬುದಕ್ಕೆ, ೨-೫೩೧ ; ಬ್ರಹ್ಮಜ್ಞಾನಿಗೆ ಪ್ರಾಣೋತ್ಕ್ರಾಂತಿಯಿಲ್ಲವೆನ್ನುವದಕ್ಕೆ, ೨-೫೫೩, ೫೫೪ ; ಮುಕ್ತನು ಬ್ರಹ್ಮಕ್ಕಿಂತ ವಿಭಕ್ತನಾಗಿರುವದಿಲ್ಲವೆಂಬುದಕ್ಕೆ, ೨-೫೯೪ ; ಬ್ರಹ್ಮಲೋಕದಲ್ಲಿ ಕ್ರಮಮುಕ್ತಿಯನ್ನು ಹೊಂದಿದವರಿಗೂ ಅನಾವೃತ್ತಿಯೆಂಬುದಕ್ಕೆ, ೨-೬೧೨.

**ಶ್ರುತಿಸ್ಮೃತಿನ್ಯಾಯಪ್ರಸಿದ್ಧ** - ಬ್ರ.ಸೂ-೧. ಶ್ರುತಿಯಿಂದಲೂ ಸ್ಮೃತಿಯಿಂದಲೂ ಯುಕ್ತಿಯಿಂದಲೂ ಗೊತ್ತಾಗಿರುವ, ೪೨.

**ಶೂನ್ಯಮ್** - ಬ್ರ.ಸೂ-೧. ಏನೂ ಇಲ್ಲದ್ದು (ಆತ್ಮನ ಸ್ವರೂಪವೇ ಇಲ್ಲವೆಂಬ ಬೌದ್ಧರ ವಾದ), ೨೦.

**ಶೂನ್ಯವಾದಃ** - ಮಾಂ. ಯಾವದೂ ನಿಜವಾಗಿಲ್ಲವೆಂಬ ಬೌದ್ಧರ ವಾದ, ೨೬೭, ೩೪೦.

**ಶೇಷಃ** – ಕೇನ. ಕರ್ಮಕ್ಕೆ ಅಥವಾ ಉಪಾಸನೆಗೆ ಅಂಗವಾದದ್ದು, ೮೩.

**ಶ್ರೇಯಃ** - ಮುಂ. ಒಳ್ಳೆಯದು, ಉತ್ತಮಫಲವಾದ ಮುಕ್ತಿ, ೩೮, ೪೧ ; ಭ.ಗೀ. ಮುಕ್ತಿ, ೨೧೦, ೭೪೧, ೭೫೯.

**ಶ್ರೇಯೋದ್ವಾರಮ್** - ಬ್ರ.ಸೂ-೧. ಮೋಕ್ಷಕ್ಕೆ ಬಾಗಿಲಾದ (ಜ್ಞಾನ), ೩.೮೮.

**ಶ್ರೇಯಃಸಾಧನಾನಿ** - ಬ್ರ.ಸೂ-೧. ಪುರುಷಾರ್ಥಕ್ಕೆ ಸಾಧನ, ೧೪.

**ಶೇಷಪ್ರತಿಪತ್ತಿಕರ್ಮ, ಪ್ರತಿಪತ್ತಿಕರ್ಮ** - ಬೃಹ-೨. ಉಳಿದಿದ್ದರೆ ವಿನಿಯೋಗವನ್ನು ಹೇಳುವ ಕರ್ಮ, ೬೧, ೨೮೧.

- ಬ್ರ.ಸೂ-೧. ಒಂದು ಅಂಗವಾಗಿ ಮತ್ತೊಂದು ಪ್ರಧಾನವಾಗಿರುವದು, ೧೨.

**ಶ್ವೇತಾಶ್ವತರಾಃ** - **ಈಶ.** ಕೃಷ್ಣಯರ್ಜುವೇದದ ಒಂದು ಶಾಖೆಯನ್ನು ಅಧ್ಯಯನಮಾಡುವವರು, ೨೦.

**ಶ್ರೋತೃಚತುಷ್ಟಯಮ್** - ನೈ. (೧) ಅನಾತ್ಮವು ಇಲ್ಲವೇ ಇಲ್ಲವೆಂಬ ಅರಿವಿನಿಂದ ತನ್ನ ಆತ್ಮನು ಅವಾಕ್ಯಾರ್ಥರೂಪನಾದ ಅದ್ವಿತೀಯಬ್ರಹ್ಮವು ಎಂದು ತಿಳಿಯುವವನು ; (೨) ವಾಕ್ಯಶ್ರವಣಮಾತ್ರದಿಂದಲೇ ಈ ಜ್ಞಾನವನ್ನು ಪಡೆದುಕೊಳ್ಳುವವನು ; (೩) ಶ್ರವಣಮಾಡಿದ ಬಳಿಕ ತಾನೇ ಅನ್ವಯವ್ಯತಿರೇಕವನ್ನು ಮಾಡಿಕೊಂಡು ಅವಾಕ್ಯಾರ್ಥವನ್ನು ಅರಿತು ಕೊಳ್ಳುವವನು ; (೪) ಯಾವನಿಗೆ ಅನ್ವಯವ್ಯತಿರೇಕಗಳಿಂದ ಪದಾರ್ಥಜ್ಞಾನ ಮಾಡಿಸಿಕೊಟ್ಟು ಮತ್ತೆ ಮತ್ತೆ ಶ್ರವಣಮಾಡಿಸಬೇಕಾಗಿದೆಯೋ ಅವನು- ಹೀಗೆ ನಾಲ್ಕು ಜನ ಶ್ರೋತೃಗಳು. ಕಡೆಯ ಶ್ರೋತೃವೇ ಈ ಗ್ರಂಥಕ್ಕೆ ಅಧಿಕಾರಿ, ಅವನಿಗೆ ದಶಮನ ದೃಷ್ಟಾಂತದಿಂದ ವಾಕ್ಯಜ್ಞಾನ, ೩-೬೪.

**ಶ್ರೌತಕರ್ಮ** - **ಕೇನ.** ಶ್ರುತಿಯಲ್ಲಿ ಹೇಳಿರುವ ಅಗ್ನಿಹೋತ್ರಾದಿಕರ್ಮಗಳು, ೨ ; ಭ.ಗೀ. ಶ್ರುತಿಯಲ್ಲಿ ವಿಧಿಸಿರುವ ಅಗ್ನಿಹೋತ್ರಾದಿಕರ್ಮ, ೮, ೯, ೧೨, ೧೪೪, ೧೪೫, ೫೭೦, ೫೮೩.

**ಶ್ರೌತಂ ಕರ್ಮ** - **ಮುಂ.** ಶ್ರುತಿಯಲ್ಲಿ ವಿಧಿಸಿರುವ ಅಗ್ನಿಹೋತ್ರವೇ ಮುಂತಾದ ಕರ್ಮ, ೪೧.

**ಶೋಕಮೋಹೌ** - ಭ.ಗೀ. ಯಾವದಾದರೊಂದು ವಸ್ತುವನ್ನು ಕುರಿತು ಶೋಕಿಸುವದು ಮತ್ತು ಅದಕ್ಕೆ ಕಾರಣವಾದ ಅಜ್ಞಾನ, ೨, ೭, ೨೫, ೩೫, ೩೬, ೬೬, ೮೧.

**ಶೋಕಮೋಹಾದಿನಿವೃತ್ತಿಃ** - ಬೃಹ-೧. (ಬ್ರಹ್ಮೈಕತ್ವಜ್ಞಾನದಿಂದಾಗುವ) ಶೋಕಾದಿಗಳು ತೊಲಗುವ ಫಲ, ೩೨೧.

# ಷ

**ಷಡ್ಭಾವವಿಕಾರಾಃ** - ನೈ. ಪದಾರ್ಥಗಳ ಆರು ವಿಕಾರಗಳು. ಅಂತಃಕರಣದ ವೃತ್ತಿಗಳು ಹುಟ್ಟುವದು, ಇರುವದು, ಬೆಳೆಯುವದು, ಮಾರ್ಪಡುವದು, ಕ್ಷಯವಾಗುವದು, ನಾಶವಾಗುವದು - ಎಂಬ ಆರು ವಿಕಾರಗಳನ್ನೂ ಆತ್ಮಚೈತನ್ಯದಿಂದ ವ್ಯಾಪ್ತವಾಗಿಯೇ ಅನುಭವಿಸುತ್ತವೆ, ೨-೮೨; ಆತ್ಮನಲ್ಲಿ ಆರು ಭಾವವಿಕಾರಗಳೂ ಇಲ್ಲ, ೧-೯೭, ೨-೮೫, ೩-೧.

**ಷಷ್ಠಗೋಚರಃ** - ನೈ. ಆರನೆಯ ಪ್ರಮಾಣಕ್ಕೆ ವಿಷಯವಾದ ಅಭಾವ. ಬುದ್ಧ್ಯಾದಿಗಳು ಆತ್ಮನಿಂದ ಬೇರ್ಪಡಿಸಿದಾಗ ಅಭಾವವೇ, ಇಲ್ಲವೇ ಇಲ್ಲ, ೨-೧೧೪.

**ಷಷ್ಠೀ** - ನೈ. ಸಂಬಂಧ, ಷಷ್ಠೀ, ಗುಣ, ಕ್ರಿಯೆ, ಜಾತಿ, ರೂಢಿ - ಎಂಬ ಆರು ಶಬ್ದಪ್ರವೃತ್ತಿನಿಮಿತ್ತಗಳೂ ಆತ್ಮನಲ್ಲಿಲ್ಲ, ೩-೧೦೩.

# ಸ

**ಸಙ್ಕಲ್ಪಃ** - **ಈಶ.** ಹೀಗೆ ಮಾಡುವೆನೆಂದು ಕಲ್ಪಿಸುವ ಮನಸ್ಸಿನ ವೃತ್ತಿ, ೧೧; **ಕೇನ.** ಅಂತಃಕರಣದ ಮನೋವೃತ್ತಿ, ಹೀಗೆ ಮಾಡುವೆನೆಂದು ಯೋಚಿಸಿ-ಕೊಳ್ಳುವದು, ೧೩, ೧೮, ೨೪.

**ಸಂಕಲ್ಪವಿಕಲ್ಪಾದ್ಯಾತ್ಮಕಮ್** - ಬೃಹ-೧. ಹೀಗೆ ಮಾಡುವೆನೆಂದು ಸಂಕಲ್ಪಿಸುವದು, ಹೀಗೆ ಹೀಗೆಂದು ಕಲ್ಪಿಸುವದು - ಮುಂತಾದ ವೃತ್ತಿಗಳ (ಅಂತಃಕರಣ), ೨೮೭.

**ಸಙ್ಕಲ್ಪವಿಕಲ್ಪಾದ್ಯಾರಮ್ಭಕಮ್** - **ಕಠ.** ಸಂಕಲ್ಪ, ವಿಕಲ್ಪ - ಮುಂತಾದವುಗಳಿಗೆ ಕಾರಣನಾದ, ೯೮.

**ಸಂಕಲ್ಪವಿಕಲ್ಪಾದಿಲಕ್ಷಣಮ್** - **ಕಠ.** ಹೀಗೆ ಮಾಡುವೆನೆಂದು ಕಲ್ಪಿಸುವದು, ಇದು ಇಂಥದ್ದೆಂದು ಕಲ್ಪಿಸುವದು, ಮುಂತಾದ ವ್ಯಾಪಾರವುಳ್ಳ ಮನಸ್ಸು, ೮೮.

**ಸಂಕಲ್ಪಾದಿರೂಪಮ್** - **ಕಠ.** ಸಂಕಲ್ಪವೇ ಮುಂತಾದದ್ದನ್ನು ಮಾಡುವ ಮನಸ್ಸು, ೧೭೨.

**ಸಂಕಲ್ಪಾದಿವ್ಯಾವೃತ್ತಮ್** - **ಕಠ.** ಸಂಕಲ್ಪವೇ ಮುಂತಾದ ವ್ಯಾಪಾರಗಳಿಂದ ಹಿಂತಿರುಗಿದ ಮನಸ್ಸು, ೧೭೪.

**ಸಂಕ್ಷೇಪವಿಸ್ತರೋಕ್ತಿ** - ಮುಂ. ಮೊದಲು ಸಂಗ್ರಹವಾಗಿಯೂ ಆಮೇಲೆ ವಿಸ್ತಾರವಾಗಿಯೂ ಹೇಳಿದ ವಿಷಯ, ೫೯.

**ಸಂಗಃ** - ಬೃಹ-೨. ಕಾರ್ಯಕರಣಗಳ ಸಂಬಂಧ, ೧೨೬, ೨೦೦.

**ಸಂಘಾತಃ** - ಕೇನ. ಒಂದಕ್ಕೊಂದು ಕೂಡಿ ಆಗಿರುವ ಒಟ್ಟು ೧೨ ; ಐತ. ಎಲ್ಲವೂ ಸೇರಿ ಕೆಲಸಮಾಡುವ ಅವಯವಗಳ ಗುಂಪು, ೫೩.

**ಸಂನ್ಯಾಸಃ** - ಈಶ. ಕರ್ಮವನ್ನು ಬಿಡುವದು, ೩, ೩೩ ; ಬೃಹ-೨. ಜ್ಞಾನಕ್ಕೆ ಅಂಗವಾದ ಅಥವಾ ಜ್ಞಾನದಿಂದ ಅರ್ಥಪ್ರಾಪ್ತವಾಗುವ ಏಷಣಾತ್ಯಾಗ, ಪರಮಹಂಸಪಾರಿವ್ರಾಜ್ಯ, ೫೦, ೫೩ ; ಭ.ಗೀ. ಗೃಹಸ್ಥನು ಶಾಸ್ತ್ರೀಯಕರ್ಮಗಳನ್ನು ಬಿಡುವದು, ನಾಲ್ಕನೆಯ ಆಶ್ರಮವನ್ನು ಸ್ವೀಕರಿಸುವದು, ೧೬೧, ೩೨೧, ೩೨೨, ೩೨೫, ೩೨೭, ೩೨೯, ೩೩೪.

**ಸಂನ್ಯಾಸೀ** - ಈಶ. ಕರ್ಮವನ್ನು ಬಿಟ್ಟವನು, ೭, ೨೦ ; ಭ.ಗೀ. ಎಲ್ಲಾ ಕರ್ಮಗಳನ್ನೂ ಬಿಟ್ಟಿರುವ ಜ್ಞಾನಿ, ೯೦, ೧೦೮, ೧೦೯, ೧೩೯, ೧೪೮, ೧೮೦, ೨೮೯.

**ಸಂನ್ಯಾಸಿನಃ** - ಮಾಂ. ಸರ್ವಕರ್ಮಗಳನ್ನೂ ಬಿಡುವ ಪರಮಹಂಸರು, ೧೨೧.

**ಸಂನ್ಯಾಸಯೋಗಃ** - ಮುಂ. ಸರ್ವಕರ್ಮವನ್ನೂ ತ್ಯಾಗಮಾಡುವದೆಂಬ ಜ್ಞಾನಸಾಧನ, ೧೧೮.

**ಸಂಪತ್** - ಬೃಹ-೨. ಕರ್ಮಗಳನ್ನು ಆಯಾ ಫಲವನ್ನು ಕೊಡುವಂತೆ ಮಾಡುವ ಉಪಾಸನೆ, ಅಥವಾ ಫಲವನ್ನೇ ಉಪಾಸನೆಯಿಂದ ಪಡೆಯುವದು, ೧೦.

**ಸಂಪತ್ತಿಃ , ಸಂಪಾದನಮ್** - ಬೃಹ-೧. ಹೀಗೆ ಎಂದು ಒಂದರಲ್ಲಿ ಮತ್ತೊಂದರ ದೃಷ್ಟಿಯನ್ನು ಹಾಕುವದು ; ಉದಾಹರಣೆಗೆ ಅಶ್ವಮೇಧಸಂಬಂಧವಾದ ಪಶುವೇ ತಾನೆಂದು ಮಾಡುವ ಉಪಾಸನೆ, ೬, ೧೫೬.

**ಸಂಪನ್ಮಾತ್ರಮ್** - ಬ್ರ.ಸೂ-೧. ಒಂದರ ಧರ್ಮವನ್ನು ಇನ್ನೊಂದಕ್ಕೆ ಅಂಟಿಸಿ ಉಪಾಸನೆ ಮಾಡುವದು, ೬೯.

**ಸಂಪ್ರಸಾದಃ** - ಬ್ರ.ಸೂ-೧. (ಸುಷುಪ್ತಿಯಲ್ಲಿರುವ) ಜೀವ, ೨೬೨, ೨೭೦ ; ಬೃಹ-೨. ದೇಹೇಂದ್ರಿಯವ್ಯಾಪಾರದ ಕಲ್ಮಷವಿಲ್ಲದೆ ತಿಳಿಯಾಗಿರುವ ತನಿನಿದ್ರೆ, (ಸುಷುಪ್ತಿ), ೧೯೭, ೧೯೮.

**ಸಂಪ್ರದಾನಕಾರಕಮ್** - ಬೃಹ-೨. ಕರ್ಮಕ್ಕೆ ಬೇಕಾದ ಅಗ್ನ್ಯಾದಿ-ದೇವತೆ, ೩೩೮.

**ಸಂಪ್ರದಾಯಕರ್ತಾ** - ಮಾಂ. ಶಿಷ್ಯರಿಗೆ ಉಪದೇಶಿಸುವದಕ್ಕೆ ಮೊದಲು ಮಾಡಿದವನು, ೨೧೩..

**ಸಂಪ್ರದಾಯವಿದಃ** - ಬೃಹ-೧. ಅದ್ವೈತವೇದಾಂತಸಂಪ್ರದಾಯವನ್ನು ಬಲ್ಲವರು, (ದ್ರವಿಡಾಚಾರ್ಯರು), ೩೧೬ ; ಭ.ಗೀ. ವೇದಾಂತಸಂಪ್ರದಾಯವನ್ನು ಬಲ್ಲವರು, ೭೯೭.

**ಸಂಪ್ರದಾಯಬುದ್ಧಿಃ** - ಬೃಹ-೧. ಗುರುಶಿಷ್ಯರಿಂದ ಬಂದಿರುವ ಬುದ್ಧಿ, ೩೨೫.

**ಸಂಬನ್ಧಃ** - ಬ್ರ.ಸೂ-೨. ಎರಡು ವಸ್ತುಗಳಿಗಿರುವ ಕಾರ್ಯಕಾರಣಭಾವವೇ ಮುಂತಾದ ಸಂಬಂಧ. ಸಾಂಖ್ಯವಾದದಲ್ಲಿ ಪ್ರಧಾನಪುರುಷರಿಗೆ ಸಂಬಂಧವು ಹೊಂದುವದಿಲ್ಲ, ೨-೧೫ ; ವೈಶೇಷಿಕರ ತಂತ್ರದಲ್ಲಿ ಸಮವಾಯಸಂಬಂಧಕ್ಕೂ ಸಂಬಂಧಾಂತರದ ಅಪೇಕ್ಷೆಯುಂಟಾಗಿ ಅನವಸ್ಥೆಯಾಗುವದು, ೨-೨೯ ; ಸಮವಾಯಸಂಬಂಧಖಂಡನೆ, ೨-೩೬ ; ಸಂಯೋಗ, ಸಮವಾಯ - ಎಂಬೀ ಸಂಬಂಧಗಳು ಸಂಬಂಧಿಗಳಿಗಿಂತ ವ್ಯತಿರಿಕ್ತವಾಗಿರುವದಕ್ಕೆ ಪ್ರಮಾಣವಿಲ್ಲ, ೨-೩೭ ; ತಾರ್ಕಿಕರು ಒಪ್ಪಿರುವ ಈಶ್ವರನಿಗೂ ಪ್ರಧಾನಪುರುಷರಿಗೂ ಸಂಬಂಧವಿಲ್ಲ, ೨-೭೬ ; ವೇದಾಂತದಲ್ಲಿ ಕಾರ್ಯಕ್ಕೂ ಪರಮೇಶ್ವರನಿಗೂ ತಾದಾತ್ಮ್ಯಸಂಬಂಧವಿದೆ, ೨-೭೬ ; **ಈಶ.** ಹಿಂದಿನ ಗ್ರಂಥಕ್ಕೂ ಈ ಗ್ರಂಥಭಾಗಕ್ಕೂ ಈ ಗ್ರಂಥದಲ್ಲಿರುವ ವಿಷಯಕ್ಕೂ ಪ್ರಯೋಜನಕ್ಕೂ ಇರುವ ಸಂಬಂಧವು, ೨ ; **ಮಾಂ.** ಗ್ರಂಥಕ್ಕೆ ಇರಬೇಕಾದ ಅನುಬಂಧಗಳಲ್ಲಿ ಒಂದು, ೧, ೨.

**ಸಂಬನ್ಧಗ್ರಹಣಾಪೇಕ್ಷಃ** - ಬ್ರ.ಸೂ-೧. ವಾಚ್ಯವಾಚಕಸಂಬಂಧವನ್ನು ಗ್ರಹಿಸುವದನ್ನಿಟ್ಟುಕೊಂಡು ತಿಳಿಸುವ (ಶಬ್ದ), ೨೮೮.

**ಸಂಭೂಯ ಕರ್ತೃತ್ವಮ್** - ಭ.ಗೀ. ಮತ್ತೊಂದರೊಡನೆ ಸೇರಿಕೊಂಡು ಒಬ್ಬನಿಗೋಸ್ಕರ ಕೆಲಸ ಮಾಡುವದು, ೧೦೩೬.

**ಸಂಯೋಗಃ** - ಕೇನ. ಬೇರೆಬೇರೆಯಾಗಿರುವ ಎರಡು ವಸ್ತುಗಳು ಸೇರಿಕೊಳ್ಳುವ ಸಂಬಂಧ, ೫೫.

**ಸಂಯೋಗಜಮ್** - ಐತ. ಎರಡರ ಕೂಡುವಿಕೆಯಿಂದ ಉಂಟಾಗತಕ್ಕದ್ದು ೬೬, ೬೮, ೬೯.

**ಸಂಯೋಗವಿಯೋಗೌ** - ಬೃಹ-೨. (ಕಾರ್ಯಕರಣಗಳನ್ನು) ಸೇರುವದು, ಬಿಡುವದು, ೧೮೩.

**ಸಂವತ್ಸರಃ** - ಬೃಹ-೧. ಕಾಲನಿರ್ಮಾತೃವಾದ ಪ್ರಜಾಪತಿ, ಮತ್ತು ಕಾಲ, ೩೨ ; ವರ್ಷ, ೩೨, ೪೦, ೨೦೮.

**ಸಂವತ್ಸರಾಃ** - ಈಶ. ಪ್ರಜಾಪತಿಬ್ರಹ್ಮರು, ೧೯.

**ಸಂವೃತಮ್** - ಬೃಹ-೨. ಆವೃತವಾದದ್ದು ಕಲ್ಪಿತರೂಪ, ೧೭೭.

**ಸಂವ್ಯವಹಾರಃ** - ತೈ. ಹಾಗೆಂದು ತಿಳಿಯುವದು, ಮಾತನಾಡುವದು, ೨೬೨.

**ಸಂವ್ಯವಹಾರಮಾತ್ರಮ್** - ಬೃಹ-೧. ವಿವೇಕಿಗಳೂ ವಸ್ತುವು ತೋರಿದಂತೆಯೇ (ನಿಜವಾಗಿ ಅದು ಹಾಗಿಲ್ಲದಿದ್ದರೂ) ವ್ಯವಹರಿಸುವದು, ೩೧೭.

**ಸಂಶಯಃ** - ಈಶ. ಹೀಗೆ ಹಾಗೆ - ಎಂದು ಒಂದು ಪದಾರ್ಥದಲ್ಲಿ ಎರಡು ಕಡೆಗೆ ತೂಗಾಡುವ ಮನಸ್ಸಿನ ವೃತ್ತಿ , ೪೨ ; ನೈ. ಪ್ರಮಾಣವನ್ನು ಅನಾದರಮಾಡುವದಕ್ಕೆ ಅನುವಾದ, ಸಂಶಯ, ವಿಪರೀತಪ್ರತಿಪಾದನ-ಇವೇ ಕಾರಣ, ೩-೩೫; ಅನುಮಾನದಿಂದ ಸಂಶಯಹೇತುವೆಲ್ಲವೂ ಹೋದಮೇಲೆ ವಾಕ್ಯಜ್ಞಾನದಲ್ಲಿ ಸಂಶಯವಾಗಲಾರದು, ೩-೩೬; ಆತ್ಮನು ಅವಗತಿರೂಪನಾಗಿರುವದರಿಂದ ಸಂಶಯಕ್ಕೆ ಕಾರಣವಿಲ್ಲ, ಎಲ್ಲಿ ಸಂಶಯವಿರುವದೋ ಅದು ಆತ್ಮನಲ್ಲ , ೩-೩೭; ಆತ್ಮನಲ್ಲಿ ಸಂಶಯಕ್ಕೆ ಕಾರಣವಿಲ್ಲವಾದ್ದರಿಂದ ಅವನು ಪ್ರಮೇಯನಲ್ಲ, ೩-೪೨.

**ಸಂಸರ್ಗಃ** - ನೈ. ಸೇರಿಕೊಳ್ಳುವದು, ಸಂಬಂಧ. ಪದಾರ್ಥಗಳ ಸಂಸರ್ಗವೇ ವಾಕ್ಯಾರ್ಥವು; ಪದಾರ್ಥಗಳು ಒಂದಕ್ಕೊಂದು ಅಂಗಾಂಗಿಭಾವದಿಂದ ಸೇರಿಕೊಂಡು ಒಂದಾನೊಂದು ವಿಶೇಷಾರ್ಥವನ್ನು ಹೇಳುತ್ತವೆ- ಎಂಬುದು ಮೀಮಾಂಸಕರ ಮತ. ಉದಾಹರಣೆ 'ನೀಲಮುತ್ಪಲಮ್' ಎಂಬಲ್ಲಿ ನೀಲತ್ವ (ಕಪ್ಪು), ಉತ್ಪಲತ್ವ (ನೈದಿಲೆ) ಎಂಬೆರಡು ಪದಾರ್ಥಗಳ ಸಂಸರ್ಗವು ವಾಕ್ಯಾರ್ಥವು. ಇದೇ ವಾಕ್ಯದಲ್ಲಿ ಅನೀಲ, ಅನುತ್ಪಲ- ಇವುಗಳಿಂದ ಭಿನ್ನವೆಂದು ವಾಕ್ಯವು ತಿಳಿಸುತ್ತದೆಯಾದ್ದರಿಂದ ಭೇದವು ವಾಕ್ಯಾರ್ಥವೆಂದು ಕೆಲವರ ಮತವು. ಉದ್ದೇಶ್ಯವಾದ ಪದಾರ್ಥವು ತನ್ನ ಗುಣದೊಡನೆ ಸೇರಿಯೇ ವಿಧೇಯಪದಾರ್ಥದೊಡನೆ ಸಂಸರ್ಗವಾಗುವದಿಲ್ಲ, ೩-೨೫; ವೇದಾಂತ ವಾಕ್ಯದಿಂದ ಆದ ಜ್ಞಾನವು ಅಹಂಬ್ರಹ್ಮಪದಾರ್ಥಗಳ ಸಂಸರ್ಗವನ್ನು ಹೇಳುತ್ತದೆ ಎಂಬವರ ಮತ ಸರಿಯಲ್ಲ , ೧-೬೭, ೩-೭೬; ಆ ವಾಕ್ಯವು ಭೇದವನ್ನಾಗಲಿ

ಸಂಸರ್ಗವನ್ನಾಗಲಿ ಹೇಳುವದಿಲ್ಲ, ಅದ್ವಿತೀಯಪ್ರತ್ಯಗಾತ್ಮನೆಂಬ ಒಂದೇ ಅವಾಕ್ಯಾರ್ಥವನ್ನು ಹೇಳುತ್ತದೆ, ೩-೨೬, ೭೬.

**ಸಂಸಾರಃ - ಬ್ರ.ಸೂ-೧.** (ಬೀಜಾಂಕುರಗಳಂತೆ ಮತ್ತೆ ಮತ್ತೆ ಆಗತ್ತಿರುವ) ಜನನಮರಣಗಳು, ೪೭೪, ೪೭೫, ೪೭೬ ; **ಬ್ರ.ಸೂ-೨.** ಸುಖದುಃಖಾನುಭವ, ಜನನಮರಣಗಳು, ಸುಖದುಃಖತಾರತಮ್ಯರೂಪವಾದ ಸಂಸಾರರೂಪವು ಅನಿತ್ಯ, ೧-೪೨ ; ಕರ್ತೃತ್ವಭೋಕ್ತೃತ್ವವೇ ಜೀವನ ಸಂಸಾರಧರ್ಮ, ೧-೧೭೪ ; ಸಂಸಾರವು ಅನಾದಿ, ೨-೪೭೪, ೪೭೫, ೪೭೬ ; ಸಂಸಾರಕ್ಕೆ ಬೀಜಗಳಾದ ಅವಿದ್ಯಾದಿಗಳ ನಾಶವು ಬ್ರಹ್ಮಜ್ಞಾನದಿಂದ, ೧-೧೮ ; ಜೀವನ ಸಂಸಾರಿತ್ವವು ಅವಿದ್ಯೆಯಿಂದ, ಅಸಂಸಾರಿತ್ವವು ನಿಜವಾದದ್ದು, ೧-೧೭೧ ; ಸಂಸಾರವು ಮಾಯೆ, ೧-೪೨೪ ; ಸಂಸಾರವ್ಯತಿರಿಕ್ತನಾದ ಈಶ್ವರ, ೧-೨೭ ; ಸಂಸಾರಿತ್ವವಿರುವವರೆಗೂ ಜೀವನಿಗೆ ಬುದ್ಧಿಸಂಬಂಧ, ೨-೧೪೦ ; ಯಾವ ಸಂಸಾರಧರ್ಮವೂ ಇಲ್ಲದ ಬ್ರಹ್ಮವೆಂಬ ಅನುಭವಸ್ವರೂಪವೇ ತತ್ಪದದ ಅರ್ಥ, ೨-೫೦೬ ; ಈಶ್ವರನಿಗೆ ಸಂಸಾರ್ಯಾತ್ಮತ್ವವನ್ನು ಶಾಸ್ತ್ರದಲ್ಲಿ ಹೇಳಿಲ್ಲ, ಸಂಸಾರಿಗೆ ಸಂಸಾರಿತ್ವವನ್ನು ಅಲ್ಲಗಳೆದು ಈಶ್ವರಾತ್ಮತ್ವವನ್ನು ಹೇಳಿದೆ, ೨-೫೧೦ ; **ಕಠ.** ಹುಟ್ಟುಹೊಂದುಗಳನ್ನು ಪಡೆಯುವದು, ೬೩, ೮೭, ೯೩ ; **ಬೃಹ-೧.** ಬೇರೆ ಬೇರೆಯ ಜನ್ಮಗಳನ್ನು ಪಡೆಯುವದು, ಸುಖದುಃಖಭೋಗ, ೫, ೯೭, ೧೧೧ ; **ಬೃಹ-೨.** ಸುಖದುಃಖಗಳನ್ನನುಭವಿಸುವ ಬಂಧ, ೩೦, ೫೫, ೨೬೬ ; **ಭ.ಗೀ.** ಕರ್ಮವನ್ನು ಮಾಡಿ ಫಲವನ್ನು ಭೋಗಿಸುವದಕ್ಕಾಗಿ ಹುಟ್ಟಿ ಸುಖದುಃಖಗಳನ್ನು ಅನುಭವಿಸುವದು, ೪, ೭, ೮೫, ೧೩೯, ೩೮೯, ೩೯೦, ೭೩೪, ೭೬೨, ೭೬೭, ೮೧೦, ೮೯೨, ೮೯೬, ೯೨೦, ೧೧೩೯, ೧೧೪೨ ; **ನೈ.** ಗೃಹೀತ್ರಾದಿರೂಪವಾದ ಸಂಸಾರವು, ೨-೯೭; ಅವಿದ್ಯೆಯೂ ಆದರಿಂದಾದ ಕಾಮವೂ ಸಂಸಾರಕ್ಕೆ ಬೀಜ, ೧-೭, ೪೩; ಅವಿದ್ಯೆಯ ಅನ್ವಯವಿದ್ದರೆ ಸಂಸಾರದ ಅನ್ವಯ, ೧-೩೯; ಸಂಸಾರವು ಅನಾತ್ಮ, ಅವಿದ್ಯಾಶ್ರಿತ, ೨-೯೭; ವೇದಾಂತಜ್ಞಾನವು ಸಂಸಾರವನ್ನು ತೊಲಗಿಸುತ್ತದೆ, ೧-೩; ಸಂಸಾರಬೀಜವಾದ ಅವಿದ್ಯೆಯಲ್ಲಿ ಇರುವಾತನು ಬರಿಯ ಆತ್ಮಾನಾತ್ಮವಿಭಾಗದಿಂದಲೇ ಮುಕ್ತಿಯನ್ನು ಬಯಸುತ್ತಾನೆ, ೪-೧೬; ತತ್ತ್ವಮಸಿವಾಕ್ಯದಲ್ಲಿ ತ್ವಂಪದಾರ್ಥದಲ್ಲಿ ತೋರುವ ಸಂಸಾರಿತ್ವವು ತತ್ಪದಾರ್ಥದ ಅದ್ವಿತೀಯತ್ವಕ್ಕೆ ವಿರುದ್ಧವಾಗಿದ್ದು ತತ್ಪದಾರ್ಥದಲ್ಲಿ ತೋರುವ ಪಾರೋಕ್ಷ್ಯವು ತ್ವಂಪದಾರ್ಥದಲ್ಲಿರುವ ಪ್ರತ್ಯಗಾತ್ಮತ್ವಕ್ಕೆ ವಿರುದ್ಧವಾಗಿರುವದರಿಂದ ಅವೆರಡೂ ಬಾಧಿತವಾಗಿ ಅದ್ವಿತೀಯಪ್ರತ್ಯಗಾತ್ಮ ಜ್ಞಾನವಾಗುತ್ತದೆ, ೩-೭೯; ವಾಕ್ಯಜ್ಞಾನವಾದಾಗ ಸಂಸಾರವೆಲ್ಲವೂ ಅವಗತಿರೂಪನಾದ ಆತ್ಮನೇ ಆಗಿಬಿಡುತ್ತದೆ, ೪-೩೮ ; **ಶಾಂ. ನಿ.** ಜನನಮರಣಗಳು, ಸುಖದುಃಖಭೋಗ.

**ಸಂಸಾರಕಾರಣಮ್, ಸಂಸಾರಬೀಜಮ್** - ಭ.ಗೀ. ಸಂಸಾರಕ್ಕೆ ನಿಮಿತ್ತ (ಶೋಕಮೋಹಗಳು), ೭, ೩೬, ೪೬೮.

**ಸಂಸಾರಗತಯಃ - ಮುಂ.** ಸಂಸಾರಿಗಳು ಹೋಗಿ ಪಡೆಯುವ ಲೋಕಗಳು, ೪೩, ೪೫ ; ಬೃಹ-೨. ಉತ್ತರಮಾರ್ಗ, ದಕ್ಷಿಣಮಾರ್ಗ, ಅಧೋಗತಿ - ಎಂಬ ಮೂರು ಗತಿಗಳು, ೪೨೬.

**ಸಂಸಾರದೋಷಾಃ - ಐತ.** ಹಸಿವು, ನೀರಡಿಕೆ, ಶೋಕ, ಮೋಹ, ಮುಪ್ಪು, ಸಾವು - ಮುಂತಾದವು, ೮.

**ಸಂಸಾರಧರ್ಮಃ** - ಬ್ರ.ಸೂ-೧. ಕರ್ತೃತ್ವಭೋಕ್ತೃತ್ವವೇ ಮುಂತಾದ ಸಂಸಾರಕಾರಣವಾದ ಜೀವನ ಧರ್ಮ, ೧೭೪.

**ಸಂಸಾರಧರ್ಮಾಃ - ಈಶ.** ಶೋಕ, ಮೋಹ - ಮುಂತಾದ ಸಂಸಾರಕ್ಕೆ ಕಾರಣವಾದ ಧರ್ಮಗಳು, ೨, ೧೧.

**ಸಂಸಾರಬೀಜಮ್ - ಕೇನ.** ಸಂಸಾರವೆಂದರೆ ಹುಟ್ಟಿ ಸತ್ತು ಮತ್ತೆ ಹುಟ್ಟುತ್ತಾ ಸುಖದುಃಖಗಳನ್ನು ಅನುಭವಿಸುತ್ತಿರುವದು ; ಸಂಸಾರಬೀಜವೆಂದರೆ ಅದಕ್ಕೆ ಕಾರಣವಾದ ಅಜ್ಞಾನ, ೪, ೮೯ ; **ಕಠ.** ಸಂಸಾರಕ್ಕೆ ಕಾರಣವಾದ ಅಜ್ಞಾನ, ಕಾಮ, ಕರ್ಮ, ೨, ೩೨ ; **ತೈ.** ಸಂಸಾರಕ್ಕೆ ಕಾರಣವಾದ ಅಜ್ಞಾನ, ೯೦.

**ಸಂಸಾರಬೀಜಾನಿ** - ಬ್ರ.ಸೂ-೧. ಸಂಸಾರಕ್ಕೆ ಕಾರಣವಾಗಿರುವ ಅವಿದ್ಯೆ, ಕಾಮ, ಕರ್ಮ, ೧೮ ; **ಶಾಂ. ನಿ.** ಸಂಸಾರಕ್ಕೆ ಕಾರಣವಾಗಿರುವ, ಅವಿದ್ಯೆ, ಕಾಮ, ಕರ್ಮ, ಸೂ. ಭಾ. ೧-೧-೧, ಕ. ೧-೧-೧೯.

**ಸಂಸಾರಮಾಯಾ - ಬ್ರ.ಸೂ-೧.** ಸಂಸಾರವೆಂಬ ಹುಸಿಯಾದ ದೃಶ್ಯ, ೪೨೪.

**ಸಂಸಾರಮೋಕ್ಷಗತೀ** - ಬ್ರ.ಸೂ-೧. ಸಂಸಾರವನ್ನು ಹೊಂದುವದು, ಮೋಕ್ಷವನ್ನು ಹೊಂದುವದು - ಎಂಬ ಜೀವನ ಎರಡು ಗತಿಗಳು, ೩೩೭.

**ಸಂಸಾರಹೇತುಃ - ಕಠ.** ಸಂಸಾರಕ್ಕೆ ಕಾರಣವಾದ ಅಜ್ಞಾನ, ಕಾಮ, ಕರ್ಮ,

**ಸಂಸ್ಕಾರಃ - ಬ್ರ.ಸೂ-೧.** ವಸ್ತುವಿನ ದೋಷವನ್ನು ತೆಗೆಯುವದು ಅಥವಾ ಅದಕ್ಕೆ ಗುಣವನ್ನು ಸೇರಿಸುವದು, ೪೯ ; (ಉಪನಯನಾದಿಗಳು), ೩೧೦ ; (ಅನುಭವದಿಂದಾದ), ಅಥವಾ ಕರ್ಮದಿಂದಾದ ವಾಸನೆ, ೨೮೮, ೨೯೧, ೩೧೩ ; ಬ್ರ.ಸೂ-೨. ದೋಷವನ್ನು ತೆಗೆದು ಗುಣವನ್ನು ಸೇರಿಸುವದು. ಬ್ರಹ್ಮಸ್ವರೂಪವಾದ

ಮೋಕ್ಷವು ಸಂಸ್ಕಾರ್ಯವಾಗಲಾರದು, ೧-೪೯ ; ಉಪನಯನಾದಿಗಳು, ಶೂದ್ರನಿಗೆ ಸಂಸ್ಕಾರವಿಲ್ಲವಾದ್ದರಿಂದ ವೇದಪೂರ್ವಕವಿದ್ಯೆಯಲ್ಲಿ ಅಧಿಕಾರವಿಲ್ಲ, ೨-೩೧೦ ; ಅನುಭವದಿಂದಾದ ವಾಸನೆ. ವರ್ಣಜ್ಞಾನದ ಸಂಸ್ಕಾರದಿಂದ ಸ್ಫೋಟವ್ಯಕ್ತಿಯೆಂಬ ವಾದ, ೧-೨೮೮, ೨೯೧ ; ವಿದುರಾದಿಗಳಿಗೆ ಪೂರ್ವಜನ್ಮಸಂಸ್ಕಾರದಿಂದ ಜ್ಞಾನೋತ್ಪತ್ತಿ, ೧-೩೧೩ ; ಕೇನ. ಚಿತ್ತವು ಶುದ್ಧಿಯಾಗಲು ಅದರಲ್ಲುಂಟಾಗುವ ಒಂದು ಬಗೆಯ ಯೋಗ್ಯತೆ, ೩ ; ಮಾಂ. ವಾಸನೆ, ಸ್ಮೃತಿಗೆ ಕಾರಣ, ೧೪, ೧೩೭ ; ಬೃಹ-೨. ದೋಷವನ್ನು ತೆಗೆದು ಗುಣವನ್ನು ಹಾಕುವದು, ೩೬, ೩೦೬ ; ಸತ್ತ ಮೇಲೆ ಮಾಡುವ ಕರ್ಮ, ೧೨೫ ; ಶಾಂ. ನಿ. (೧) ಗುಣವನ್ನುಂಟುಮಾಡುವದು, ದೋಷವನ್ನು ತೆಗೆಯುವದು. ಸೂ. ಭಾ. ೧-೧-೪ ; (೨) ಅಂತಃಕರಣದಲ್ಲಿ ಅನುಭವದಿಂದಾಗುವ ವಾಸನೆ, ೧-೩-೨೮ (ಭಾ. ಭಾ. ೨೮೮).

**ಸಂಸ್ಕಾರ್ಯಮ್ - ಈಶ.** ಅತಿಶಯವನ್ನು ಹೊಂದತಕ್ಕದ್ದು; ಕರ್ಮಫಲದ ನಾಲ್ಕು ರೂಪಗಳಲ್ಲಿ ಒಂದು, ೧.

**ಸಂಸ್ಕೃತಾತ್ಮಾ - ಕಠ.** ಸಂಸ್ಕಾರವನ್ನು ಹೊಂದಿದ ಬುದ್ಧಿಯುಳ್ಳವ, ೫೭.

**ಸಂಸ್ಕೃತಬುದ್ಧಿಃ - ಕಠ.** ಶಾಸ್ತ್ರಾಚಾರ್ಯರಿಂದ ಸಂಸ್ಕಾರವನ್ನು ಹೊಂದಿದ ಬುದ್ಧಿ, ೧೦೨ ; **ಶಾಂ. ನಿ.** ಶಾಸ್ತ್ರಾಚಾರ್ಯರ ಉಪದೇಶದ ಸಂಸ್ಕಾರವುಳ್ಳ ಬುದ್ಧಿ, ಐಕಾಗ್ರ್ಯವನ್ನು ಹೊಂದಿದ ಬುದ್ಧಿ, ಕ. ೧-೩-೧೨.

**ಸಂಸಾರೀ - ಬ್ರ.ಸೂ-೧.** ಸಂಸಾರವನ್ನು ಹೊಂದಿರುವ (ಜೀವನು), ೨೦, ೭೦, ೭೧, ೯೫, ೧೦೨, ೧೧೨, ೧೧೩, ೩೨೭, ೩೨೮, ೩೩೧, ೩೩೯ ; **ಮಾಂ.** ಸಂಸಾರದಲ್ಲಿ ತೊಳಲುವ ಜೀವ, ೫೩, ೧೧೨.

**ಸಂಸಾರೀ, ಸಂಸಾರ್ಯಾತ್ಮಾ - ಬೃಹ-೧.** ಸಂಸಾರದಲ್ಲಿ ತೊಳಲುವ ಜೀವ, ೧೧೩, ೧೨೩.

**ಸಂಸಾರಿಣಃ - ಕಠ.** ಸಂಸಾರವನ್ನು ಹೊಂದುವ ಜೀವರು, ೯೯.

**ಸಂಸಾರಿತ್ವಮ್ - ಬೃಹ-೨.** ಸಂಸಾರವನ್ನನುಭವಿಸುವದೆಂಬ ಅವಿದ್ಯಾ-ಸ್ವಭಾವ, ೫೪.

**ಸಂಸಾರಿತ್ವಾಸಂಸಾರಿತ್ವೇ - ಬ್ರ.ಸೂ-೧.** ಅವಿದ್ಯೆಯಿಂದಾಗುವ ಸಂಸಾರಿತ್ವ, ನಿಜವಾಗಿರುವ ಅಸಂಸಾರಿತ್ವ ಎಂಬ ಜೀವನ ಪರಸ್ಪರವಿಲಕ್ಷಣ-ಧರ್ಮಗಳು, ೧೭೧.

**ಸಂಸಾರಿವ್ಯತಿರಿಕ್ತೇಶ್ವರಃ** - ಬ್ರ.ಸೂ-೧. ಜೀವನಿಗಿಂತ ಬೇರೆಯಾಗಿರುವ ಈಶ್ವರ (ತಾರ್ಕಿಕರು ಒಪ್ಪಿರುವ ಈಶ್ವರ), ೨೭ ; **ಶಾಂ. ನಿ.** ಸಂಸಾರಿಯಾದ ಜೀವನ ಆತ್ಮನಲ್ಲದ ತಟಸ್ಥನಾದ ಈಶ್ವರನು. ಸೂ. ಭಾ. ೧-೧-೨.

**ಸಂಸಿದ್ಧಿಃ** - ಭ.ಗೀ. ಮುಕ್ತಿ, ೧೩, ೧೮೫, ೫೨೦ ; ಸತ್ತ್ವಶುದ್ಧಿ, ೧೩ ; ಯೋಗಫಲವಾದ ಜ್ಞಾನ, ೪೩೮, ೪೪೫, ೪೪೯.

**ಸಂಹತ** - **ಬ್ರ.ಸೂ-೨.** ಒಂದುಗೂಡಿ ಪರಾರ್ಥವಾಗಿರುವದು. ಅಹಂಪ್ರತ್ಯಯಗಮ್ಯನಾದ ಆತ್ಮನು ದೇಹಾದಿಸಂಹತನು, ೧-೪೯ ; ದೇಹಚೇತನಗಳು ಸಂಹತವಾಗಿವೆ ಎಂದರೆ ಪುರುಷನಿಗೆ ಅಶುದ್ಧ್ಯಾದಿ-ದೋಷಗಳುಂಟಾಗುವವು, ೨-೨೦ ; ಅಚೇತನವಾದ ಪರಮಾಣುಗಳು ಭೂತ-ಭೌತಿಕರೂಪವಾಗಿ ಸಂಹತವಾಗುವವೆಂಬ ಸೌಗತವಾದವು ಸರಿಯಲ್ಲ, ೨-೪೨, ೪೪ ; ಪ್ರಾಣನು ಸಂಹತನಾದ್ದರಿಂದ ಸ್ವತಂತ್ರನಲ್ಲ, ೨-೧೯೧. ಸಂಹತವಸ್ತುಗಳ ಸಮುದಾಯವೇ ಸಂಘಾತವು ; **ಕಾರ್ಯಕರಣಸಂಘಾತಶಬ್ದವನ್ನು ನೋಡಿ** ; **ಕೇನ.** ಒಂದಕ್ಕೊಂದು ಸೇರಿಕೊಂಡಿರುವದು ; ಉದಾಹರಣೆಗೆ ಕಂಬ, ತೊಲೆಗಳು - ಮುಂತಾಗಿ ಸೇರಿಕೊಂಡು ಮನೆಯಾಗಿರುವವು. ಸಂಹತವಾದವುಗಳು ಪರಾರ್ಥವಾಗಿರುತ್ತವೆ, ೧೬ ; **ಪ್ರಶ್ನ.** ಒಂದರೊಡನೊಂದು ಸೇರಿಕೊಂಡು ಸ್ವತಂತ್ರವಾಗಿರುವ ಬೇರೊಬ್ಬನಿಗಾಗಿ ಕೆಲಸಮಾಡುವ ಸ್ವಭಾವದ, ೩೭, ೫೪, ೭೨, ೮೩ ; **ತೈ.** ಒಂದಕ್ಕೊಂದು ಸಮಪ್ರಧಾನವಾಗಿ ಸೇರಿರುವ (ಜ್ಞಾನಕರ್ಮಗಳು) ೭೪ ; ಒಂದಕ್ಕೊಂದು ಸೇರಿಕೊಂಡು ಮತ್ತೊಬ್ಬನ ಕಾರ್ಯವನ್ನು ಮಾಡುವದು, ೧೮೭ ; **ಐತ.** ಮತ್ತೊಂದರೊಡನೆ ಸೇರಿಕೊಂಡು ಕೆಲಸಮಾಡುವ ವಸ್ತು, ೫೩ ; **ಬೃಹ-೧.** ಸಂಘಾತಕ್ಕೆ ಸೇರಿ ಕೆಲಸಮಾಡುತ್ತಿರುವ (ಪ್ರಾಣ), ೨೮೫ ; **ಭ.ಗೀ.** ಒಂದಕ್ಕೊಂದು ಒಟ್ಟು ಸೇರಿ ಮತ್ತೊಂದಕ್ಕಾಗಿ ಕೆಲಸಮಾಡುವ, ೮೧೬, ೧೦೩೬ ; **ಶಾಂ. ನಿ.** ಅನೇಕಪದಾರ್ಥಗಳು ಒಟ್ಟುಗೂಡಿ, ಸ್ವತಂತ್ರನಾದ ಒಬ್ಬನಿಗೆ ಪ್ರಯೋಜನ-ವನ್ನುಂಟುಮಾಡುವದು. ಉದಾಹರಣೆಗೆ ದೇಹೇಂದ್ರಿಯಗಳು ಸಂಹತವಾಗಿ ಸಂಹತನಾದ ಆತ್ಮಾರ್ಥವಾಗಿ ಕೆಲಸಮಾಡುತ್ತಿರುವವು. ಪ್ರ. ಭಾ. ೩-೧ ; ತೈ. ಭಾ. ೩-೭ (ಭಾ. ಭಾ. ೧೮೬).

**ಸಂಹತಾಃ** - **ಕಠ.** ಒಟ್ಟುಗೂಡಿ ಮತ್ತೊಂದಕ್ಕಾಗಿ ಕೆಲಸಮಾಡುವ ವಸ್ತುಗಳು, ೧೪೦.

**ಸಂಹಿತೋಪನಿಷತ್** - **ಐತ.** ಈ ಉಪನಿಷತ್ತಾದ ಬಳಿಕ ಬರುವ ಐತರೇಯಾರಣ್ಯಕದ ಭಾಗ, ೫.

**ಸಗುಣ** - ಬ್ರ.ಸೂ-೨. ಗುಣಗಳಿಂದೊಡಗೂಡಿದ ಬ್ರಹ್ಮ , ಅಥವಾ ಉಪಾಸನೆ.

**ಸಗುಣಬ್ರಹ್ಮ** - ಬ್ರ.ಸೂ-೧. ನಾಮರೂಪಕಾರ್ಯದ ಗುಣಗಳನ್ನು ಉಪಾಸನೆಗಾಗಿ ಅಧ್ಯಾರೋಪಿಸಿರುವ ಬ್ರಹ್ಮ , ೧೫೨, ೧೭೯ ; **ಶಾಂ. ನಿ.** ಕಾರ್ಯವಾದ ಜಗತ್ತಿನ ಕೆಲವು ಗುಣಗಳನ್ನು ಅಧ್ಯಾರೋಪ ಮಾಡಿಕೊಂಡು ಉಪಾಸನೆಮಾಡಬೇಕೆಂದು ಶ್ರುತಿಯಲ್ಲಿ ಹೇಳಿರುವ ಬ್ರಹ್ಮ, ಸೂ. ಭಾ. ೧-೨-೨, ೧-೨-೧೩ (ಭಾ. ಭಾ. ೧೭೮).

**ಸಗುಣಬ್ರಹ್ಮೋಪಾಸಕಃ** - **ಛಾಂ.** ಗುಣಗಳಿಂದೊಡಗೂಡಿದ ಕಾರ್ಯಬ್ರಹ್ಮವನ್ನು ಉಪಾಸನೆಮಾಡುವವ, ೪೦೫.

**ಸಗುಣಾನ್ಯುಪಾಸನಾನಿ** - ಬ್ರ.ಸೂ-೧. ಸಗುಣಬ್ರಹ್ಮನ ಉಪಾಸನೆಗಳು, ೪೧೧.

**ಸತ್, ಸದಾತ್ಮಾ , ಸದ್ಬ್ರಹ್ಮಾತ್ಮಾ** - **ಛಾಂ.** ಇರವಿನ ಸ್ವರೂಪದ ಬ್ರಹ್ಮ , ೫೨೬, ೫೨೭, ೫೩೩.

**ಸತ್** - ಭ.ಗೀ. ಸತ್ಯವಾಗಿರುವ ಆತ್ಮ , ೨೭ ; ಸಚ್ಛಬ್ದವಾಚ್ಯವಾದ ವಸ್ತು, ೭೯೨, ೭೯೩ ; ಯಾವದನ್ನವಲಂಬಿಸಿ ಮತ್ತೊಂದಿರುವದೋ ಅದು, ಅಥವಾ ಕಾರ್ಯ, ೫೭೩ ; ಬ್ರಹ್ಮದ ಹೆಸರು, ೯೯೦ ; ಸತ್ಕರ್ಮನಿಷ್ಠೆ ೯೯೫.

**ಸತ್ಯಮ್** - **ಈಶ.** ನಿಜವಾಗಿರುವದು, ೩ ; ಅವಶ್ಯವಾಗಿ ಫಲವನ್ನು ಕೊಡುವದು, ೩೫ ; ಹಿರಣ್ಯಗರ್ಭನ ಮತ್ತು ಲಿಂಗಾತ್ಮನ ಹೆಸರು, ೩೫ ; **ಪ್ರಶ್ನ.** ನಿಜವನ್ನೇ ಆಡುವದು, ೨೧ ; ನಿಜವಾಗಿರುವ, ೩೯, ೫೧ ; **ಕಠ.** ಅವಶ್ಯವಾಗಿ ಆಗುವ ಕರ್ಮಫಲ, ೮೫ ; **ಮುಂ.** ಭೂತಪಂಚಕ, ೨೩ ; ಪರಮಾರ್ಥಸತ್ಯವಾದ ಬ್ರಹ್ಮ, ೪೯, ೫೦ ; ನಿಜವಾಗಿ ಫಲವನ್ನು ಕೊಡುವದು, ೨೮ ; ಸುಳ್ಳಾಡದಿರುವದು, ೬೬, ೯೯, ೧೦೧ ; **ತೈ.** ವಾಕ್ಕಾಯಗಳಿಂದ ಮಾಡುವ ಕರ್ಮ ೧೪, ೧೩೯ ; ನಿಜವಾಗಿ ಹೇಳುವದು ೬೨ ; ಮೂರ್ತಾಮೂರ್ತಗಳು ೪೪ ; ನಿಜವಾಗಿ ಮಾರ್ಪಡದೆ ಇರುವದು ೯೮, ೧೦೩, ೧೦೪, ೧೮೦ ; **ಬೃಹ-೧.** ಶಾಸ್ತ್ರಾನುಗುಣವಾಗಿ ಹೇಳುವದು, ೧೮೪ ; ನಾಮರೂಪಗಳು, ಪಂಚಭೂತಗಳು, ೨೫೯, ೩೨೮ ; ಪ್ರಾಣಗಳು ೩೦೪, ೩೨೮.

**ಸತ್ಯಸ್ಯ ಸತ್ಯಮ್** - **ಬೃಹ-೧.** ಪ್ರಾಣಗಳೆಂಬ ಸತ್ಯಕ್ಕೂ ಸತ್ಯನಾಗಿರುವ (ಪರಮಾತ್ಮ), ೩೦೪, ೩೨೭ ; **ಬೃಹ-೨.** ಭೂತಪಂಚಕದ ಪರಮಾರ್ಥರೂಪ, ಆತ್ಮ, ೬೫, ೯೦.

**ಸತ್ಸಂಪತ್ತಿಃ** - ಛಾಂ. ಸದ್ರೂಪನಾದ ಪರಮಾತ್ಮನಲ್ಲಿ ಒಂದಾಗಿಬಿಡುವದು, ೫೨೭, ೫೨೮, ೫೩೬.

**ಸತ್ಕಾರ್ಯವಾದಃ** - ಬ್ರ.ಸೂ-೧. ಕಾರ್ಯವು ಯಾವಾಗಲೂ ಸತ್ಯವೆಂಬ ವಾದ, ೪೪೬ ; ಬ್ರ.ಸೂ-೨. ಕಾರ್ಯವು ಹುಟ್ಟುವದಕ್ಕೆ ಮೊದಲು ಕಾರಣರೂಪದಿಂದ ಇರುವದೆಂಬ ಸಾಂಖ್ಯರ ಮತ್ತು ವೇದಾಂತಿಗಳ ವಾದ, ೧-೪೨೦, ೪೪೬, ೨-೩೪. ಕಾರ್ಯಕಾರಣವಾದ - ಎಂಬ ಶಬ್ದವನ್ನು ನೋಡಿ ; ಶಾಂ. ನಿ. ಇರುವ ಕಾರಣವೇ ಕಾರ್ಯರೂಪವಾಗುವದೆಂಬ ವಾದ, (ಸಾಂಖ್ಯರು ಮತ್ತು ವೇದಾಂತಿಗಳ ವಾದ), ಸೂ. ಭಾ. ೨-೧-೭.

**ಸತ್ಕಾರ್ಯವಾದೀ** - ಬ್ರ.ಸೂ-೧. ಕಾರ್ಯವು ಹುಟ್ಟುವ ಮುಂಚೆಯೂ ಇರುವದೆಂಬ ವಾದವನ್ನು ಹಿಡಿದವ, ೪೨೦.

**ಸತ್ಸತ್ಯಾದ್ವಿತೀಯಾತ್ಮವಿಜ್ಞಾನಮ್** - ಛಾಂ. ಸದ್ರೂಪವಾಗಿರುವ ಪರಮಾರ್ಥಸತ್ಯವಾದ ಅದ್ವಿತೀಯತತ್ತ್ವವೇ ನಾನು - ಎಂಬ ಜ್ಞಾನ, ೫೪೧.

**ಸತ್ಯಂ ಬ್ರಹ್ಮಪುರಮ್** - ಛಾಂ. ನಿಜವಾದ ಬ್ರಹ್ಮಪುರ, ಬ್ರಹ್ಮವೇ, ೬೧೧.

**ಸತ್ಯಲೋಕಃ** - ಬ್ರ.ಸೂ-೧. ಹಿರಣ್ಯಗರ್ಭಬ್ರಹ್ಮನ ಲೋಕ, ೨೫೯ ; ಮುಂ. ಬ್ರಹ್ಮನ ಲೋಕ, ೩೨, ೪೨ ; ಪ್ರಶ್ನ. ಹಿರಣ್ಯಗರ್ಭಲೋಕ, ಬ್ರಹ್ಮಲೋಕ, ೮೩.

**ಸತ್ತ್ವಮ್** - ಕಠ. ಅಂತಃಕರಣ, ಬುದ್ಧಿ, ೧೬೯.

**ಸತ್ತ್ವಶುದ್ಧಿಃ** - ಕೇನ. ಅಂತಃಕರಣದ ರಾಗಾದಿಮಲಗಳು ಹೋಗುವದು, ೨ ; ಭ.ಗೀ. ಅಂತಃಕರಣವು ರಾಗಾದಿದೋಷಗಳಿಲ್ಲದ್ದಾಗುವದು, ೫, ೧೩, ೯೪, ೯೮, ೧೦೧, ೧೦೨, ೧೫೯, ೧೮೫, ೩೪೪, ೩೪೬, ೩೪೭, ೩೭೨, ೩೮೦, ೪೯೬, ೭೩೮, ೮೨೨, ೧೦೨೦.

**ಸತ್ತ್ವಾದ್ಯಭಿಮಾನೀ** - ಶಾಂ. ನಿ. ಅಂತಃಕರಣವೇ ಮುಂತಾದದ್ದರ ಅಭಿಮಾನಿಯಾದ ಜೀವ, ೧-೩-೭, (ಭಾ. ಭಾ. ೨೩೨).

**ಸತ್ತ್ವಾದ್ಯುಪಾಧ್ಯಭಿಮಾನೀ** - ಬ್ರ.ಸೂ-೧. ಅಂತಃಕರಣವೇ ಮುಂತಾದ ಉಪಾಧಿಗಳ ಅಭಿಮಾನಿಯಾದ (ಜೀವ), ೨೩೨.

**ಸತ್ಯಾನೃತೇ** - ಬ್ರ.ಸೂ-೧. ನಿಜವಾಗಿರುವ ಆತ್ಮ , ಹುಸಿತೋರಿಕೆಯ ಅನಾತ್ಮ - ಇವು, ೧, ೪೩೮ ; ಶಾಂ. ನಿ. ಪರಮಾರ್ಥವಾದ ಆತ್ಮ ಮತ್ತು

ಹುಸಿತೋರಿಕೆಯಾದ ಅನಾತ್ಮ, ಸೂ. ಭಾ. ಭಾ. ೧. ಸೂ. ಭಾ. ೨-೧-೧೪ (ಭಾ. ಭಾ. ೪೩೮); ಯಾವಾಗಲೂ ಇರುವ (ಆತ್ಮ), ಹುಸಿತೋರಿಕೆಯ (ಅನಾತ್ಮ). ಅನಾತ್ಮವು ಆತ್ಮ ಎಂದಾಗಲಿ ಅವನಿಗಿಂತ ಬೇರೆಯೆಂದಾಗಲಿ ಹೇಳುವದಕ್ಕಿಲ್ಲದ ಅವಿದ್ಯಾಕೃತವಸ್ತುವಾದ್ದರಿಂದ ಅನೃತ, ಮಿಥ್ಯೆ, ಮೃಷಾ - ಎನ್ನಿಸಿಕೊಳ್ಳುವದು. ಅದರ ತತ್ತ್ವವು ಸತ್ಯವೇ. ಅಧ್ಯಾಸಭಾಷ್ಯ, ಸೂ. ಭಾ. ೨-೧-೧೪.

**ಸತ್ತಾಸಾಮಾನ್ಯಮ್** - ತೈ. ದ್ರವ್ಯಗುಣಕರ್ಮಗಳಲ್ಲಿ ಸಮಾನವಾಗಿರುವ ಇರವು, ೧೦೭.

**ಸತ್ಯಾತ್ಮಾ** - **ಈಶ.** ಸೂರ್ಯನಲ್ಲಿಯೂ ಪುರುಷನಲ್ಲಿಯೂ ಇರುವ ಸತ್ಯವೆಂಬ ಹೆಸರಿನ ಅಪರಬ್ರಹ್ಮ, ಹಿರಣ್ಯಗರ್ಭ, ೩೪, ೨.೫.

**ಸದಸತ್** - **ಮುಂ.** ಸ್ಥೂಲಸೂಕ್ಷ್ಮ ರೂಪದಲ್ಲಿರುವ ಮೂರ್ತಾ-ಮೂರ್ತಗಳಾಗಿರುವ ಬ್ರಹ್ಮ, ೭೩.

**ಸದಸತೀ** - **ಭ.ಗೀ.** ಆತ್ಮಾನಾತ್ಮಗಳು, ೨೭ ; ಕಾರ್ಯಕಾರಣಗಳು, ೫೭೨.

**ಸದಸದ್ವಾದಿನಃ** - **ಕೇನ.** ಸತ್ಕಾರ್ಯವಾದಿಗಳಾದ ಸಾಂಖ್ಯರು ಮತ್ತು ಅಸತ್ಕಾರ್ಯವಾದಿಗಳಾದ ವೈಶೇಷಿಕರು, ೪೧.

**ಸದಸದ್ವಿಭಾಗಃ** - **ಮಾಂ.** ಇರುವದು, ಇಲ್ಲದ್ದು - ಎಂಬ ವಿಭಾಗ, ೯೦.

**ಸದಾತ್ಮಭಾವಃ** - **ಛಾಂ.** ಸದ್ರೂಪವಾದ ಬ್ರಹ್ಮವೇ ತಾನೆಂಬುದು, ೫೪೨.

**ಸದಾಸ್ಪದಮ್** - **ಭ.ಗೀ.** ಸದ್ರೂಪವಾದ ಬ್ರಹ್ಮವೇ ಆಧಾರವಾಗಿರುವ ಹುಸಿತೋರಿಕೆ, ೭೯.

**ಸದೇಕರಸಮ್** - **ಕಠ.** ಸದ್ರೂಪವೆಂಬ ಒಂದೇ ರೂಪವುಳ್ಳ ಬ್ರಹ್ಮ, ೧೫೨.

**ಸದ್ಯೋಮುಕ್ತಿಃ** - **ಬ್ರ.ಸೂ-೧.** ಜ್ಞಾನದಿಂದ ಕೂಡಲೆ ಆಗುವ ಮುಕ್ತಿ, (ಕ್ರಮಮುಕ್ತಿಯಲ್ಲ), ೯೨ ; **ಬೃಹ-೨.** ಜ್ಞಾನವಾದ ಕೂಡಲೆ ಮುಕ್ತನಾಗುವದು, ೪೫೨ ; **ಭ.ಗೀ.** ಜ್ಞಾನವು ಹುಟ್ಟಿದೊಡನೆ ಆಗುವ ಮುಕ್ತಿ, ೩.೭೨, ೫೩.೭, ೧೦೯೩ ; **ಶಾಂ. ನಿ.** ಜ್ಞಾನವಾದ ಕೂಡಲೆ ಆಗುವ ಜೀವನ್ಮುಕ್ತಿ, ಸತ್ತಬಳಿಕ ಆಗುವ ಮುಕ್ತಿಯಲ್ಲ. ಜ್ಞಾನವಾದ ಕೂಡಲೆ ಶರೀರವು ಬಿದ್ದುಹೋಗುವದೆಂಬ ಕೆಲವರ ಪಕ್ಷದ ಸದ್ಯೋಮುಕ್ತಿಯನ್ನು ಆಚಾರ್ಯರು ಒಪ್ಪಿಲ್ಲ, ಸೂ. ಭಾ. ೧-೧-೪, ೧೨ ಗೀ. ಭಾ. ೮-೨೪.

**ಸನ್ಧ್ಯಮ್** - ಭ.ಗೀ. ಇಹಲೋಕಪರಲೋಕಗಳ ಸಂಧಿಯಾದ ಸ್ವಪ್ನ, ೧೮೪, ೧೯೪.

**ಸದ್ಭಾವಃ** - ಮಾಂ. ನಿಜವಾಗಿರುವದು, ೩೦೯.

**ಸನ್ನಜ್ಞಾತಃ** - ನೈ. ಅಜ್ಞಾತವಾಗಿರುವ ಬ್ರಹ್ಮಾತ್ಮ. ಪ್ರತಿಯೊಂದು ಪದಾರ್ಥವೂ ಅಜ್ಞಾತವಾಗಿಯೇ ಇದ್ದು ಸದ್ರೂಪವಾಗಿರುವದರಿಂದ ಆ ಸತ್ತೇ ಅಜ್ಞಾತವು, ೩-೭ ; ಪ್ರಮಾತೃಪ್ರಮಾಣಗಳನ್ನು ಅರಿಯಬೇಕೆಂಬ ಇಚ್ಛೆಯಿಂದಾದ ಯಾವದು ತಾನೇ ತೋರುತ್ತದೆಯೋ, ಯಾವದು ತನ್ನ ಮಹಿಮೆಯಿಂದಲೇ ಸಿದ್ಧವಾಗಿದೆಯೋ ಆ ಆತ್ಮನೇ ಸನ್ನಜ್ಞಾತವೆಂಬುದು, ೩-೮.

**ಸನ್ನಿಧಾನಮ್** - ಬ್ರ.ಸೂ-೧. ಹತ್ತಿರವಿರುವ ವಾಕ್ಯ, (ವಾಕ್ಯತಾತ್ಪರ್ಯವನ್ನು ಗೊತ್ತುಪಡಿಸುವ ಒಂದು ಪ್ರಮಾಣ), ೧೨೩.

**ಸಪ್ತದಶಕಮ್** - ಬೃಹ-೨. ಹದಿನೇಳು ವಿಭಾಗವಾಗಿರುವ (ಲಿಂಗಶರೀರ), ಪಂಚಭೂತಗಳು, ದಶೇಂದ್ರಿಯಗಳು, ಪ್ರಾಣ, ಅಂತಃಕರಣ - ಇವು, ೬೯, ೨೧೦.

**ಸರ್ಪನಿವೃತ್ತಿಃ** - ಮಾಂ. ಕಲ್ಪಿತವಾದ ಹಾವು ಜ್ಞಾನದಿಂದ ಬಾಧಿತವಾಗುವದು, ೩೯.

**ಸರ್ಪಭ್ರಾಂತಿಃ** - ಬ್ರ.ಸೂ-೧. (ಹಗ್ಗವನ್ನು ತಿಳಿದರೆ ಹೋಗುವ), ಹಾವೆಂಬ ಭ್ರಾಂತಿ, ೪೧.

**ಸರ್ಪಾದಿವಿಕಲ್ಪಃ** - ಬ್ರ.ಸೂ-೧. ಹಗ್ಗದ ಹಾವೇ ಮುಂತಾದ ಕಲ್ಪಿತವಸ್ತು, ೩, ೪.

**ಸರ್ಪಾದಿವಿಲಯನಮ್** - ಬ್ರ.ಸೂ-೧. ಹಾವು ಮುಂತಾದವುಗಳನ್ನು ಹಗ್ಗ ಮುಂತಾದವುಗಳ ಅರಿವಿನಿಂದ ಕಳೆದುಕೊಳ್ಳುವದು, ೨೬೮.

**ಸಪ್ತಾನ್ನಸರ್ಗಃ** - ಈಶ. ಕರ್ಮದ ಫಲವಾಗಿ ಹುಟ್ಟುವ ಏಳು ಅನ್ನಗಳು, ೨೦.

**ಸಮದರ್ಶನಃ, ಸಮದರ್ಶೀ** - ಭ.ಗೀ. ಎಲ್ಲೆಲ್ಲಿಯೂ ಒಂದೇ ಬ್ರಹ್ಮವನ್ನು ಕಾಣುವಾತನು, ೩೫೮, ೩೬೦, ೩೭೧, ೪೨೬.

**ಸಮನ್ವಯಃ** - ಬ್ರ.ಸೂ-೧. ವಾಕ್ಯದಲ್ಲಿರುವ ಪದಗಳ ಅಥವಾ ಪದಾರ್ಥಗಳ ಹೊಂದಿಕೆ, ೧೧, ೩೭, ೧೩೭ ; ಬ್ರ.ಸೂ-೨. ವಾಕ್ಯಗಳ, ಅಥವಾ ವಾಕ್ಯದಲ್ಲಿರುವ ಪದಗಳ ಅಥವಾ ಪದಾರ್ಥಗಳ ಹೊಂದಿಕೆ. ಅಥಶಬ್ದಕ್ಕೆ ಮಂಗಲವೆಂದರೆ ಅದಕ್ಕೆ

ವಾಕ್ಯಾರ್ಥದಲ್ಲಿ ಸಮನ್ವಯವಿಲ್ಲದೆ ಹೋಗುವದು, ೧-೧೧ ; ವೇದಾಂತಗಳಲ್ಲಿಲ್ಲ ವಾಕ್ಯಗಳು ತಾತ್ಪರ್ಯದಿಂದ ಬ್ರಹ್ಮಸ್ವರೂಪವನ್ನು ಹೇಳುವದರಲ್ಲಿಯೇ ಸಮನ್ವಯವಾಗಿವೆ, ಅವುಗಳಲ್ಲಿರುವ ಪದಗಳು ಬ್ರಹ್ಮಸ್ವರೂಪದಲ್ಲಿ ಸಮನ್ವಯವಾಗಿವೆ, ೧-೩೭ ; ಬ್ರಹ್ಮಾತ್ಮೈಕ್ಯಜ್ಞಾನವು ಸಂಪದಾದಿರೂಪವೆಂದರೆ ತತ್ತ್ವಮಸ್ಯಾದಿವಾಕ್ಯಗಳ ಪದಸಮನ್ವಯಕ್ಕೆ ವಿರೋಧವಾಗುವದು, ೧-೪೬ ; ಕೌಷೀತಕಿಬ್ರಾಹ್ಮಣೋಪನಿಷತ್ತಿನಲ್ಲಿ ಪ್ರಾಣೋಽಸ್ಮಿ - ಎಂಬ ವಾಕ್ಯದಲ್ಲಿ ಪದ-ಸಮನ್ವಯವು ಬ್ರಹ್ಮಪ್ರತಿಪಾದನಪರವಾಗಿರುತ್ತದೆ, ೧-೧೩೭ ; ಅಸ್ಥೂಲಾದಿ-ವಾಕ್ಯಗಳು ನಿಷ್ಪ್ರಪಂಚಬ್ರಹ್ಮಾತ್ಮತತ್ತ್ವಪ್ರಧಾನವಾದವುಗಳೇ - ಎಂಬುದನ್ನು ಸಮನ್ವಯ ಸೂತ್ರದಲ್ಲಿ ಸ್ಥಾಪಿಸಿದೆ, ೨-೨೮೧ ; ಬ್ರಹ್ಮವಾಕ್ಯಗಳು ವಸ್ತುಪರವೇ ಹೊರತು ವಿಧಿಪ್ರಧಾನವಲ್ಲ ಎಂಬುದು ಸಮನ್ವಯಸೂತ್ರದ ಅಭಿಪ್ರಾಯ, ೨-೩೧೮ ; ಶಾಂ. ನಿ. ವೇದಾಂತವಾಕ್ಯಗಳ ಮತ್ತು ಅವುಗಳಲ್ಲಿರುವ ಪದಗಳ ಅನ್ವಯ. ವಸ್ತುರೂಪವಾದ ಬ್ರಹ್ಮದಲ್ಲಿಯೇ ಸಮನ್ವಯವಾಗುತ್ತದೆ, ಕರ್ಮದಲ್ಲಲ್ಲ, ಸೂ. ೧-೧-೪.

**ಸಮತ್ವಬುದ್ಧಿಃ** - ಭ.ಗೀ. ಫಲವು ಸಿದ್ಧಿಯಾಗಲಿ, ಆಗದಿರಲಿ - ಏರುಪೇರಿಲ್ಲದೆ ಇರುವ ಬುದ್ಧಿ, ೯೫, ೯೬, ೯೭, ೯೮, ೧೦೦, ೩೩೪.

**ಸಮನುಗತ** - ಬ್ರ.ಸೂ-೧. ಒಂದರ್ಥವು ಹೊಂದಿಕೊಂಡೇ ಬಂದಿರುವ, (ವಾಕ್ಯ), ೩೭.

**ಸಮಷ್ಟಿವ್ಯಷ್ಟಿಪ್ರಾಪ್ತಿಃ** - ಬೃಹ-೧. ಸಮಷ್ಟಿಯಾಗಿಯೂ ವ್ಯಷ್ಟಿಗಳಾಗಿಯೂ ಇರುವ ಹಿರಣ್ಯಗರ್ಭನ ಪ್ರಾಪ್ತಿ, ೬.

**ಸಮಷ್ಟಿವ್ಯಷ್ಟ್ಯಾತ್ಮಾ** - ಬೃಹ-೨. ಅಧ್ಯಾತ್ಮಿಕ, ಅಧಿಭೌತಿಕ, ಅಧಿದೈವಿಕ ಎಂದು ಬಿಡಿಯಾಗಿಯೂ ಒಟ್ಟಾಗಿಯೂ ಇರುವ ಪ್ರಾಣ, ಸೂತ್ರ, ೩೯, ೪೦.

**ಸಮಸ್ತವ್ಯಸ್ತ, ಸಾಮಾನ್ಯವಿಶೇಷಯುಕ್ತ** - ನೈ. ಒಟ್ಟಾಗಿಯೂ ಬಿಡಿಬಿಡಿಯ ಜೀವರುಗಳಾಗಿಯೂ ಇರುವ ನಾನಾರಸಬ್ರಹ್ಮವೆಂದು ಭರ್ತೃಪ್ರಪಂಚಾದಿಗಳು ಒಪ್ಪಿರುವ ತತ್ತ್ವ, ೧-೭೩,೭೭; ಆತ್ಮನು ಸಾಮಾನ್ಯವಿಶೇಷಗಳಿಲ್ಲದ ಕೂಟಸ್ಥನಾಗಿರುತ್ತಾನೆ, ೩-೧೭.

**ಸಮಸ್ತಸಾಮ** - ಛಾಂ. ಐದು ಅಥವಾ ಏಳು ಭಾಗಗಳಾಗಿ ವಿಂಗಡಿಸಿ ಉಪಾಸನೆ ಮಾಡಬೇಕಾದ ಒಟ್ಟುಸಾಮ, ೧೧೧, ೧೧೨.

**ಸಮವಾಯಃ** - ಕೇನ. ಗುಣವು ಗುಣಿಯಲ್ಲಿಯೂ, ಜಾತಿಯು ವ್ಯಕ್ತಿಯಲ್ಲಿಯೂ ಕ್ರಿಯೆಯು ಕ್ರಿಯಾವಂತವಾದ ದ್ರವ್ಯದಲ್ಲಿಯೂ ಸೇರಿಕೊಂಡಿರುವ

ನಿತ್ಯಸಂಬಂಧ, ೫೫ ; ಭ.ಗೀ. ಕಾರ್ಯಕಾರಣಗಳಿಗೆ ಇರುವ ಸಂಬಂಧ, ೮೨೬, ೧೦೮೬, ೧೦೮೭, ೧೦೮೮.

**[illegible]ಪ್ರಮಾಣಮ್** - ಭ.ಗೀ. ನಿರ್ದುಷ್ಟವಾದ ಪ್ರಮಾಣ, ವೇದಾಂತವಾಕ್ಯ, ಸ್ಮೃತಿ - ಮುಂತಾದದ್ದು, , ೧೧೯೮.

**ಸಮ್ಯಗ್ದರ್ಶನಮ್** - **ಕೇನ.** ಸರಿಯಾದ ತಿಳಿವಳಿಕೆ, ೫೦ ; **ಬೃಹ-೧.** ಸರಿಯಾದ ಜ್ಞಾನ (ಬ್ರಹ್ಮಜ್ಞಾನ), ೩೩೫, ೩೫೯ ; **ಮಾಂ.** ಸರಿಯಾದ ತಿಳಿವಳಿಕೆ ; ಅದ್ವೈತಜ್ಞಾನ, ೧೬೦, ೧೬೧, ೨೧೨, ೨೧೭.

**ಸಮ್ಯಗ್ದರ್ಶೀ** - **ಭ.ಗೀ.** ಸರಿಯಾಗಿ ತಿಳಿದುಕೊಂಡಿರುವ ಆತ್ಮಜ್ಞಾನಿ, ೩೦೩, ೩೪೦, ೩೪೩, ೩೭೦, ೩೭೧, ೫೭೭, ೮೦೫.

**ಸಮ್ಯಗ್ಜ್ಞಾನಮ್, ಸಮ್ಯಗ್ದರ್ಶನಮ್** - **ಬ್ರ.ಸೂ-೧.** ತಪ್ಪು ತಿಳಿವಳಿಕೆಯನ್ನು ಕಳೆಯುವ ಸರಿಯಾದ ತಿಳಿವಳಿಕೆ, ೧೬೨, ೨೫೨, ೨೬೯, ೩೮೮, ೩೯೯, ೪೦೬, ೪೨೫, ೪೨೯, ೪೩೫, ೪೫೬ ; **ಮುಂ.** ಆತ್ಮನ ಸರಿಯಾದ ತಿಳಿವಳಿಕೆ, ೯೮, ೯೯ ; **ಭ.ಗೀ.** ಸರಿಯಾದ ತಿಳಿವಳಿಕೆ, ಆತ್ಮಜ್ಞಾನ, ೧೧೪, ೧೮೨, ೧೮೫, ೨೨೯, ೨೭೭, ೨೮೭, ೨೮೮, ೨೯೦, ೨೯೮, ೩೦೮, ೩೧೯, ೪೩೨, ೪೩೭, ೫೧೪, ೫೪೪, ೬೧೭, ೭೪೩, ೭೫೭, ೮೨೬, ೮೨೭, ೮೩೦, ೮೩೫, ೮೯೦, ೧೧೨೩, ೧೧೪೨.

**ಸಮ್ಯಗ್ಜ್ಞಾನಮ್, ಸಮ್ಯಗ್ಬೋಧಃ** - **ನೈ.** ಸರಿಯಾದ ಜ್ಞಾನ, ವಿದ್ಯೆ. ಅಜ್ಞಾನದ ನಾಶಕ್ಕೆ ಸಮ್ಯಗ್ಜ್ಞಾನವೊಂದೇ ಸಾಕು, ೧-೩೭; ಸಮ್ಯಗ್ಜ್ಞಾನವು ಬಾಧಕ, ಮತ್ತೊಂದರಿಂದ ಬಾಧ್ಯವಾಗದು, ೧-೩೬; ಸಮ್ಯಗ್ಜ್ಞಾನ, ಸಂಶಯಜ್ಞಾನ, ಮಿಥ್ಯಾಜ್ಞಾನ- ಎಂದು ವಿಂಗಡವಾಗಿರುವದು ಪ್ರತ್ಯಯಗಳಲ್ಲಿಯೇ, ಆತ್ಮಸ್ವರೂಪ ಜ್ಞಾನದಲ್ಲಲ್ಲ, ೩-೨೦; ಸಮ್ಯಗ್ಜ್ಞಾನವು ಬಾಧ್ಯವಾದದ್ದನ್ನೆಲ್ಲ ಒಂದೇ ಸಲಕ್ಕೆ ತೊಲಗಿಸುತ್ತದೆ, ೪-೫೯; ಸಮ್ಯಗ್ಬೋಧವು ಪ್ರವೃತ್ತಿ ನಿವೃತ್ತಿಗಳೆರಡನ್ನೂ ಬಾಧಿಸುತ್ತದೆ, ೪-೫೬.

**ಸಮ್ಯಙ್ಮತಿಃ** - **ಬ್ರ.ಸೂ-೧.** ಸರಿಯಾದ ತಿಳಿವಳಿಕೆ, ೪೨೯.

**ಸಮಾಖ್ಯಾ** - **ಬ್ರ.ಸೂ-೧.** ಹೆಸರು, (ವಾಕ್ಯತಾತ್ಪರ್ಯವನ್ನು ಗೊತ್ತುಪಡಿಸುವದಕ್ಕೆ ಒಂದು ಸಾಧನ), ೯೯.

**ಸಮಾಧಾನಮ್ :** - **ಕಠ.** ಮನಸ್ಸನ್ನು ಅಲುಗಾಡಿಸದೆ ಇಟ್ಟುಕೊಳ್ಳುವ ಯೋಗ, ೧೭೫.

**ಸಮಾಧಾನಮ್, ಸಮಾಧಿಃ** - **ಮಾಂ.** ಮನಸ್ಸನ್ನು ಆತ್ಮನಲ್ಲಿಯೇ ನಿಲ್ಲಿಸಿಕೊಳ್ಳುವಿಕೆ, ೧೬೩, ೧೯೩, ೧೯೫ ; ಆತ್ಮ, ೧೯೫.

**ಸಮಾಧಿಃ** - **ಭ.ಗೀ.** ಅಂತಃಕರಣ, ೮೬ ; ಆತ್ಮ, ೧೦೫ ; ಚಿತ್ತಸಮಾಧಾನ ೪೧೫ ; ವಿವೇಕಪ್ರಜ್ಞೆ, ಜ್ಞಾನ, ೧೦೫, ೧೦೬, ೧೦೭.

**ಸಮಾನಗತಿತ್ವಮ್** - **ಬ್ರ.ಸೂ-೧.** ಒಂದೇ ಜ್ಞಾನವನ್ನುಂಟು ಮಾಡುವದು (ವೇದಾಂತವಾಕ್ಯಪ್ರಾಮಾಣ್ಯಕ್ಕೆ ಕಾರಣ), ೮೭.

**ಸಮಾನಾಧಿಕರಣಾನಿ** - **ತೈ.** ಒಂದೇ ವಸ್ತುವಿನಲ್ಲಿರುವವು, ೯೫.

**ಸನ್ಮಾರ್ಗಃ** - **ತೈ.** ಬ್ರಹ್ಮವನ್ನು ಅರಿಯುವ ಮಾರ್ಗ, ೫೨.

**ಸನ್ಮಾತ್ರಮ್** - **ತೈ.** ಬರಿಯ ಇರವೇ ಆಗಿರುವ ಬ್ರಹ್ಮ ೧೦೧.

**ಸಮಾಹಿತ** - **ಬೃಹ-೨.** ಚಲನೆಯಿಲ್ಲದೆ ಐಕಾಗ್ರ್ಯದಿಂದಿರುವ, ೩೧೫.

**ಸಮಾಹಿತಚಿತ್ತಃ** - **ಕಠ.** ಚಿತ್ತವನ್ನು ಏರುಪೇರಿಲ್ಲದಂತೆ ನಿಲ್ಲಿಸಿ-ಕೊಂಡಿರುವನು, ೮೨.

**ಸಮುಚ್ಚಯಃ** - **ಈಶ.** ಕರ್ಮೋಪಾಸನೆಗಳನ್ನೂ ವ್ಯಾಕೃತಾವ್ಯಾಕೃತೋ-ಪಾಸನೆಗಳನ್ನೂ ಕೂಡಿಸಿ ಅನುಷ್ಠಾನ ಮಾಡುವದು, ೨೩, ೨೯, ೩೧, ೪೧, ೪೨ ; **ತೈ.** (ಜ್ಞಾನಕರ್ಮಗಳನ್ನು) ಸೇರಿಸಿಕೊಂಡು ಅನುಷ್ಠಾನ ಮಾಡುವದು, ೭೭; **ಭ.ಗೀ.** ಕರ್ಮ ಮತ್ತು ಜ್ಞಾನ - ಇವನ್ನು ಸೇರಿಸಿ ಅನುಷ್ಠಾನಮಾಡುವದು, ೯, ೧೨; ೧೪೩, ೧೪೫, ೧೪೭, ೧೫೧, ೧೫೭ ; **ನೈ.** ಕರ್ಮಜ್ಞಾನಗಳು ಸೇರಿ ಮುಕ್ತಿಸಾಧನವಾಗಿರುವದೆಂಬುದು ಸರಿಯಲ್ಲ ೧-೬೦, ೬೬, ೬೮.

**ಸಮೈಕರಸಮ್** - **ಬೃಹ-೨.** ಒಂದೇ ರೂಪದಿಂದಿದ್ದು ಸ್ವಗತವೈಚಿತ್ರ್ಯವಿಲ್ಲದ (ಆತ್ಮ), ೨೭೪, ೨೭೫.

**ಸಲಿಲಫೇನದೃಷ್ಟಾಂತಃ** - **ಬೃಹ-೧.** ನೀರುನೊರೆಯ ದೃಷ್ಟಾಂತ, ನೀರಿಗಿಂತ ನೊರೆಯು ಬೇರೆಯೂ ಅಲ್ಲದೆ ಬರಿಯ ನೀರೂ ಅಲ್ಲದೆ ಇರುವಂತೆ (ನಾಮ ರೂಪಗಳು ಬ್ರಹ್ಮಕ್ಕಿಂತ ಬೇರೆಯೂ ಅಲ್ಲದೆ, ಬರಿಯ ಬ್ರಹ್ಮವೂ ಅಲ್ಲದೆ ಇರುವವೆಂಬ ಹೋಲಿಕೆ), ೧೨೦, ೩೬೫.

**ಸಲೋಕತಾ** - **ಬೃಹ-೧.** ಉಪಾಸನೆಯ ಫಲವಾಗಿ (ಪ್ರಾಣನ) ಲೋಕಕ್ಕೆ ಹೋಗುವದು, ೧೦೪.

**ಸರ್ವಕರ್ಮಕ್ಷಯಃ** - ಬ್ರ.ಸೂ-೧. ಜ್ಞಾನದಿಂದ ಕರ್ಮಗಳೆಲ್ಲ ನಾಶವಾಗುವಿಕೆ, ೧೩೭.

**ಸರ್ವಕರ್ಮಸಂನ್ಯಾಸಃ, ಸರ್ವಕರ್ಮತ್ಯಾಗಃ** - ಭ.ಗೀ. ಜ್ಞಾನಕ್ಕಾಗಿ ಎಲ್ಲಾ ಕರ್ಮಗಳನ್ನೂ ಬಿಡುವದು, ೪, ೭, ೮, ೯, ೪೪, ೪೫, ೪೭, ೧೩೪, ೧೪೭, ೩೨೦, ೩೨೩, ೩೪೭, ೩೬೦, ೩೬೨, ೩೭೨, ೩೮೮, ೧೦೦೪, ೧೦೦೫, ೧೦೧೫, ೧೧೦೮, ೧೧೩೯.

**ಸರ್ವಕರ್ಮಸಾಧನಪರಿತ್ಯಾಗಃ, ಸರ್ವಪರಿತ್ಯಾಗಃ** - ಬೃಹ-೨. ಎಲ್ಲಾ ಕರ್ಮಗಳನ್ನೂ ಅವುಗಳ ಸಾಧನಗಳನ್ನೂ ಬಿಡುವದು, ಪರಮಹಂಸಪಾರಿವ್ರಾಜ್ಯ, ೫೭, ೬೧.

**ಸರ್ವಕರ್ಮಾಭಾವಃ** - ಬೃಹ-೨. ಜ್ಞಾನಿಗೆ ಯಾವ ಕರ್ಮವೂ ಇಲ್ಲದಿರುವದು, ೬೧.

**ಸರ್ವಕರಣಾತ್ಮಾ** - ಬ್ರ.ಸೂ-೧. ಎಲ್ಲರಿಗೂ ಕರಣಸ್ವರೂಪವಾಗಿರುವ, ಸಮಷ್ಟಿಕರಣರೂಪನಾದ (ಹಿರಣ್ಯಗರ್ಭ), ೨೫೦.

**ಸರ್ವಕಲ್ಪನಾಪನಯನಾರ್ಥಸಾರಪರತ್ವಮ್** - ಬೃಹ-೧. ಕಲ್ಪನೆಗಳನ್ನೆಲ್ಲ ಕಳೆಯುವದೆಂಬರ್ಥವೇ ಸಾರವಾಗಿರುವದು, (ಉಪನಿಷತ್ತುಗಳು), ೩೧೭, ೩೧೮.

**ಸರ್ವಕಾರಣಮ್ , ಸರ್ವವಿಕಾರಕಾರಣಮ್** - ಬ್ರ.ಸೂ. ೧. ಎಲ್ಲಕ್ಕೂ ಕಾರಣನಾಗಿರುವ ಪರಮಾತ್ಮ, ೧೧೫, ೧೯೦.

**ಸರ್ವಕಾರಕಶೂನ್ಯ** - ಬ್ರ.ಸೂ. ೧. ಯಾವ ಕಾರಕಗಳೂ ಇಲ್ಲದ (ಬ್ರಹ್ಮ), ೬೩.

**ಸರ್ವಕಾರಣಮ್** - ಕಠ. ಎಲ್ಲಕ್ಕೂ ಕಾರಣವಾದ ಮಾಯೆಯಿಂದ ಎಲ್ಲಾ ರೂಪವನ್ನೂ ತಳೆಯುವ ಬ್ರಹ್ಮ, ೧೦೭.

**ಸರ್ವಕಾರಣಕಾರಣಮ್** - ಕಠ. ಕಾರಣಗಳೆನಿಸಿರುವ ಮಹತ್ತತ್ತ್ವವೇ ಮುಂತಾದವುಗಳಿಗೂ ಕಾರಣವಾಗಿರುವ ಅವ್ಯಾಕೃತ, ೯೯.

**ಸರ್ವಗತ** - ಬ್ರ.ಸೂ-೧. ಎಲ್ಲೆಲ್ಲಿಯೂ ಇರುವ (ಬ್ರಹ್ಮ), ೪೮, ೧೧೫, ೧೨೮, ೧೫೯, ೧೬೦, ೧೭೧, ೨೪೯, ೨೫೭, ೨೭೯ ; ಬ್ರ.ಸೂ-೨. ಎಲ್ಲೆಲ್ಲಿಯೂ ಇರುವ ಬ್ರಹ್ಮ. ಒಂದನೆಯ ಸಂಪುಟದ ಅನುಕ್ರಮಣಿಕೆಯನ್ನು ನೋಡಿ. ಅನ್ಯಪ್ರತಿಷೇಧಶ್ರುತಿಯಿಂದ ಆತ್ಮನು ಸರ್ವಗತನೆಂದಾಗುತ್ತದೆ, ೨-೩೧೩ ; ಬ್ರಹ್ಮವು

ಸರ್ವಗತವಾದ್ದರಿಂದ ಸರ್ವಾಂತರ, ೧-೧೧೫ ; ಸರ್ವಗತಬ್ರಹ್ಮಕ್ಕೆ ಉಪಾಧಿಯಿಂದ ಪರಿಮಾಣ ೧-೧೫೯, ೨೭೯ ; ಸರ್ವಗತವಾಗಿರುವ ಬ್ರಹ್ಮಕ್ಕೆ ಉಪಾಸನೆಗಾಗಿ ಅಥವಾ ಜ್ಞಾನಕ್ಕಾಗಿ ಸ್ಥಾನವಿಶೇಷವನ್ನು ಹೇಳಿದೆ, ೧-೧೭೧, ೧೭೯ ; ಬ್ರಹ್ಮಕ್ಕೆ ಸಾಕ್ಷಾತ್ಸರ್ವಗತತ್ವ, ಜೀವನಿಗೆ ಬ್ರಹ್ಮರೂಪದಿಂದ, ೧-೨೫೭ ; ಸರ್ವಗತ-ವಾಗಿರುವದರಿಂದ ಬ್ರಹ್ಮವು ಆಪ್ಯವಲ್ಲ, ೧-೪೮ ; ಬ್ರಹ್ಮವು ಸರ್ವಗತವಾಗಿದ್ದರೂ ಅದಕ್ಕೆ ಸರ್ವಶರೀರಗಳಲ್ಲಿಯೂ ಸುಖದುಃಖಭೋಗವಿಲ್ಲ, ಇದು ಸರ್ವಗತಾನೇಕಾತ್ಮವಾದಿಗಳಿಗೂ ಒಪ್ಪಿತ, ೧-೧೬೧ ; ಆತ್ಮನು ಸರ್ವಗತನಾದರೂ ಉಪಾಧಿಯಿಂದ ಅವನಿಗೆ ಗಮನವುಂಟು, ೨-೫೮೭.

**ಸರ್ವಗತಃ** - **ಐತ.** ಎಲ್ಲೆಲ್ಲಿಯೂ ವ್ಯಾಪಿಸಿರುವ, ೬೦.

**ಸರ್ವಗತಮ್** -**ತೈ.** ಎಲ್ಲೆಲ್ಲಿಯೂ ಹಬ್ಬಿಕೊಂಡಿರುವದು, ೭೫, ೯೩, ೧೦೮, ೧೧೩, ೨೨೦.

**ಸರ್ವಗತಾನೇಕಾತ್ಮವಾದಿನಃ** - **ಬ್ರ.ಸೂ-೧.** ಎಲ್ಲೆಲ್ಲಿಯೂ ಇರುವ ಅನೇಕ ಆತ್ಮರನ್ನು ಒಪ್ಪಿರುವವರು, ೧೬೧.

**ಸರ್ವಜ್ಞ** - **ಬ್ರ.ಸೂ-೧.** ಎಲ್ಲವನ್ನೂ ಬಲ್ಲ (ನಿತ್ಯಚೈತನ್ಯಸ್ವರೂಪ ಬ್ರಹ್ಮ), ೨೦, ೨೪, ೩೨, ೩೭, ೬೪, ೬೫, ೬೬, ೬೭, ೬೮, ೮೮, ೮೯, ೧೪೫, ೩೯೮, ೩೯೯, ೪೦೦, ೪೨೧, ೪೪೦, ೪೫೫ ; **ಬ್ರ.ಸೂ-೨.** ಎಲ್ಲವನ್ನೂ ಬಲ್ಲವನು. ಬ್ರಹ್ಮವು ಚೈತನ್ಯರೂಪವಾಗಿರುವದರಿಂದ ಮುಖ್ಯಾರ್ಥದಲ್ಲಿ ಸರ್ವಜ್ಞ , ೧-೬೯, ೩.೨೭ ; ಪ್ರಧಾನವು ಸತ್ತ್ವದ್ವಾರಕವಾಗಿ ಸರ್ವಜ್ಞವಾಗಲಾರದು, ೧-೬೮ ; ಸರ್ವಜ್ಞವೂ ಸರ್ವಶಕ್ತಿಯೂ ಮಹಾಮಾಯವೂ ಆಗಿರುವದರಿಂದ ಬ್ರಹ್ಮವು ಜಗತ್ಕಾರಣ, ೧-೪೭೭ ; ಈಶ್ವರನು ಸರ್ವಜ್ಞನು - ಎಂದು ಮುಂತಾಗಿ ಮಾಡುವ ವ್ಯವಹಾರವು ಅವಿದ್ಯಾತ್ಮಕೋಪಾಧಿಯಿಂದ, ಪರಮಾರ್ಥವಾಗಿಯಲ್ಲ , ೧-೪೪೦ ; **ಈಶ.** ಎಲ್ಲವನ್ನೂ ಬಲ್ಲವನು, ಈಶ್ವರ, ೧೯ ; **ಮುಂ.** ಎಲ್ಲವನ್ನೂ ಜ್ಞಾನದಿಂದ ಬೆಳಗುವ ಪರಮಾತ್ಮ, ೨೩, ೨೫, ೮೦ ; **ಮಾಂ.** ಎಲ್ಲವನ್ನೂ ಬಲ್ಲ, ೧೭, ೩೪೨ ; ಎಲ್ಲವೂ ತಾನೇ ಆಗಿ ಚೈತನ್ಯವಾಗಿರುವ ೨೦೯, ೩೪೮ ; **ಐತ.** ಎಲ್ಲವನ್ನೂ ಬಲ್ಲ ಆತ್ಮ, ೩೦, ೩೧, ೫೯, ೬೧, ೬೨, ೮೧ ; **ಭ.ಗೀ.** ಎಲ್ಲವನ್ನೂ ಬಲ್ಲ ಪರಮಾತ್ಮ, ೪೮೫, ೭೨೭ ; ಸರ್ವಜ್ಞನಂತಿರುವ (ವೇದವ್ಯಾಸ), ೨ ; ಜ್ಞಾನಿ, ೯೨೩ ; **ಶಾಂ. ನಿ.** ಎಲ್ಲವನ್ನೂ ಬಲ್ಲ, ಸರ್ವವನ್ನೂ ತಿಳಿಯುವ ಶಕ್ತಿಯುಳ್ಳ ಜ್ಞಾನದ ಈಶ್ವರನು, ೧-೧-೪ (ಭಾ. ಭಾ. ೬೯). ಸರ್ವಜ್ಞತ್ವವೆಂಬುದು ಸ್ವರೂಪಚೈತನ್ಯವೇ, ಸೂ. ಭಾ. ೧-೩-೪೨, (ಭಾ. ಭಾ. ೩.೨೯).

**ಸರ್ವಜ್ಞಮ್** - ತೈ. ಎಲ್ಲವನ್ನೂ ಅರಿಯುವ, ಜ್ಞಾನಮಾತ್ರರೂಪವಾದ, ೫೭, ೧೦೯, ೧೬೧.

**ಸರ್ವಪ್ರತ್ಯಗಾತ್ಮಾ** - ಭ.ಗೀ. ಎಲ್ಲರ ಒಳಗೂ ಹೊರಗೂ ಇರುವ ಆತ್ಮ, ಪರಮಾತ್ಮ, ೧೧೮.

**ಸರ್ವಪ್ರತ್ಯಯಸಾಕ್ಷೀ** - **ಈಶ.** ಎಲ್ಲಾ ಅಂತಃಕರಣದ ಅರಿವುಗಳನ್ನೂ ನೇರಾಗಿ ನೋಡುವ ಆತ್ಮನು, ೧೫ ; **ಭ.ಗೀ.** ಎಲ್ಲಾ ಅರಿವುಗಳನ್ನೂ ನೋಡುತ್ತಿರುವ ಆತ್ಮ, ೩೭೫.

**ಸರ್ವಪ್ರವೃತ್ತಿಬೀಜಮ್** - ತೈ. ಎಲ್ಲಾ ವ್ಯಾಪಾರಗಳಿಗೂ ಕಾರಣವಾಗಿರುವ ಬ್ರಹ್ಮ, ೧೫೧.

**ಸರ್ವಪ್ರಾಪ್ತಿಃ, ಸರ್ವಭಾವಃ - ಸರ್ವಾತ್ಮಭಾವಃ, ಸರ್ವಾತ್ಮಪ್ರಾಪ್ತಿಃ** - ಬೃಹ-೧. ಬ್ರಹ್ಮವನ್ನು ಅರಿತು ಎಲ್ಲವೂ ಆಗುವದು, ಎಲ್ಲರ ಆತ್ಮನೂ ಆಗುವದು, ೧೫೦, ೧೫೧.

**ಸರ್ವಪುರುಷಾರ್ಥಸಾಧನಮ್** - ಬೃಹ-೨. ಎಲ್ಲಾ ಪುರುಷಾರ್ಥಗಳಿಗೂ ಉಪಾಯವಾದ (ಕರ್ಮ), ೩೦.

**ಸರ್ವಬುದ್ಧಿಪ್ರತ್ಯಯಸಾಕ್ಷೀ** - **ಕಠ.** ಅಂತಃಕರಣದ ಪ್ರತ್ಯಯಗಳಿಗೆಲ್ಲ ಸಾಕ್ಷಿ; ಅವುಗಳು ಬೇರ್ಪಟ್ಟರೂ ಒಂದೇ ರೂಪದಿಂದ ಅದನ್ನು ನೋಡುತ್ತಿರುವ ಆತ್ಮ, ೧೦೩.

**ಸರ್ವಭೂತಾನಿ** - **ಈಶ.** ಸ್ಥಾವರಜಂಗಮಪ್ರಾಣಿಗಳೆಲ್ಲವೂ, ೧೫ ; **ಭ.ಗೀ.** ಎಲ್ಲಾ ಪ್ರಾಣಿಗಳು, ಬ್ರಹ್ಮನಿಂದ ಹಿಡಿದು ಸ್ಥಾವರದವರೆಗೆ, ೧೮೧, ೪೨೬, ೪೨೮, ೫೫೪, ೬೪೭, ೭೩೦, ೮೨೮, ೮೫೦.

**ಸರ್ವಭೂತಾನ್ತರಾತ್ಮಾ** - ಬ್ರ.ಸೂ-೧. ಹಿರಣ್ಯಗರ್ಭ, ಸರ್ವಪ್ರಾಣಿಗಳೊಳಗೂ ಕರಣರೂಪದಿಂದ ಇರುವವನು, ೨೦೪ ; ಸರ್ವಭೂತಗಳೊಳಗೂ ಆತ್ಮನಾಗಿರುವ ಪರಮಾತ್ಮ, ೨೦೨ ; **ಕಠ.** ಎಲ್ಲಾ ಪ್ರಾಣಿಗಳಿಗೂ ಒಳಗಿರುವ ಆತ್ಮನಾದ ಪರಮಾತ್ಮನು, ೧೪೭, ೧೫೦, ೧೫೨ ; **ಮುಂ.** ಸರ್ವಭೂತಗಳಿಗೂ ಒಳಗಿನ ಆತ್ಮನಾಗಿರುವ ವಿರಾಟ್ಪುರುಷ, ೬೧.

**ಸರ್ವಮೃತ್ಯುಃ, ಪರಮೃತ್ಯುಃ** - ಬೃಹ-೨. ಎಲ್ಲಕ್ಕೂ ಹೆಚ್ಚಿನ ಮೃತ್ಯು , (ಆತ್ಮಜ್ಞಾನ), ೨೧, ೨೨.

**ಸರ್ವವಿತ್** - ಮುಂ. ಎಲ್ಲದರ ತಿರುಳನ್ನೂ ಬಲ್ಲವ, ೧೧, ೧೨ ; ಎಲ್ಲವನ್ನೂ ಬೇರೆಬೇರೆಯಾಗಿ ಅರಿಯುವ ಪರಮಾತ್ಮ, ೨೫, ೮೦.

**ಸರ್ವವಿಶೇಷಣರಹಿತಮ್** - ಬೃಹ-೨. ಯಾವ ವಿಶೇಷವೂ ಇಲ್ಲದ (ಅಕ್ಷರಬ್ರಹ್ಮ), ೮೦.

**ಸರ್ವವಿಶೇಷಪ್ರತಿಷೇಧಃ** - ಭ.ಗೀ. ಯಾವ ವಿಶೇಷವೂ ಇಲ್ಲವೆನ್ನುವದು, ೭೯೨.

**ಸರ್ವವಿಶೇಷಪ್ರತ್ಯಸ್ತಮಿತಮ್** - ತೈ. ಯಾವ ವಿಶೇಷಗಳೂ ಇಲ್ಲದಿರುವ ಬ್ರಹ್ಮ, ೧೫೧.

**ಸರ್ವವಿಶೇಷಪ್ರತ್ಯಸ್ತಮಿತಸ್ವರೂಪಃ** - ಕಠ. ಯಾವ ವಿಶೇಷವೂ ಇಲ್ಲದ ಸ್ವರೂಪದ ಆತ್ಮ, ೧೦೩.

**ಸರ್ವಸಂಬನ್ಧಾತೀತಮ್** - ಬೃಹ-೨. ತಂದೆ, ತಾಯಿ-ಮುಂತಾದ ಯಾವ ಸಂಬಂಧವೂ ಇಲ್ಲದ, (ಸುಷುಪ್ತಾತ್ಮರೂಪ), ೨೧೭.

**ಸರ್ವಸತ್ತ್ವೋಪಾಧಿಃ** - ಮುಂ. ಒಟ್ಟು ಅಂತಃಕರಣದ ಸತ್ತ್ವಗುಣವೇ ಉಪಾಧಿಯಾಗಿರುವ ಈಶ್ವರ, ೯೧.

**ಸರ್ವಸಂವ್ಯವಹಾರಲೋಪಪ್ರಸಙ್ಗಃ** - ಬೃಹ-೨. ಯಾವ ವ್ಯವಹಾರವೂ ಇಲ್ಲವಾಗುವದೆಂಬ (ಕ್ಷಣಿಕವಾದದ) ದೋಷ, ೧೮೧.

**ಸರ್ವಸಂಸಾರಧರ್ಮಾತೀತ, ಸರ್ವಸಂಸಾರದುಃಖವಿಯುಕ್ತ** - ಬೃಹ-೧. ಯಾವ ಸಂಸಾರಧರ್ಮವೂ ಇಲ್ಲದ (ಆತ್ಮ, ಗಾಢನಿದ್ರೆ), ३೦೦, ३೦೧.

**ಸರ್ವಸಂಸಾರಧರ್ಮಶೂನ್ಯ, ಸರ್ವಸಂಸಾರಧರ್ಮವರ್ಜಿತ, ಸರ್ವಸಂಸಾರಧರ್ಮವಿಲಕ್ಷಣ, ಸರ್ವಸಂಸಾರಧರ್ಮಾತೀತಮ್** - ಬೃಹ-೨. ಸಂಸಾರ ಧರ್ಮವಾದ ಅವಿದ್ಯಾಕಾಮಕರ್ಮಾದಿಗಳು ಯಾವವೂ ಇಲ್ಲದ (ಸುಷುಪ್ತರೂಪ ಆತ್ಮ), ೭೦, ೭೨.

**ಸರ್ವಶಕ್ತಿ** - ಬ್ರ.ಸೂ-೧. ಎಲ್ಲವನ್ನೂ ಉಂಟುಮಾಡುವ ಶಕ್ತಿಯುಳ್ಳ (ಬ್ರಹ್ಮ), ೨೦, ೨೪, ३೭, ೬೪, ೬೫, ೮೯, ೧೪೫, ೪೪೦,

**ಸರ್ವಶಕ್ತಿಃ** - ಐತ. ಎಲ್ಲವನ್ನೂ ಉಂಟುಮಾಡಬಲ್ಲ ಶಕ್ತಿಗಳುಳ್ಳವನು, ३೧, ೫೯, ೬೧.

**ಸರ್ವಾತ್ಮಕ** - **ತೈ.** ಸರ್ವರೂಪವಾಗಿಯೂ ಇರುವ ಅಪರಬ್ರಹ್ಮ, ಮುಕ್ತ, ೪೩ ; ಪರಬ್ರಹ್ಮ, ೯೩.

**ಸರ್ವಾತ್ಮಕವಸ್ತು** - **ಐತ.** ಎಲ್ಲವೂ ತಾನೇ ಆಗಿರುವ ವಸ್ತು, ೧೯.

**ಸರ್ವಾತ್ಮತ್ವಮ್, ಸರ್ವಾತ್ಮಕತ್ವಮ್** - **ಬ್ರ.ಸೂ-೧.** ಎಲ್ಲವೂ ಆಗಿರುವದು, ೧೧೪, ೧೨೬, ೧೩೩, ೧೪೫, ೧೫೧, ೧೫೨, ೨೦೩, ೨೨೯, ೨೩೭, ೨೪೩, ೪೦೩.

**ಸರ್ವಾತ್ಮಾ** - **ಕೇನ.** ಎಲ್ಲರ ಆತ್ಮನಾದ ಬ್ರಹ್ಮ, ೨೯ ; **ಮುಂ.** ಪ್ರತಿಯೊಬ್ಬನಿಗೂ ಆತ್ಮನಾಗಿರುವವನು, ೯೫, ೧೦೭ ; **ತೈ.** ಎಲ್ಲರ ಆತ್ಮನಾದ ಬ್ರಹ್ಮ, ೫೭, ೧೨೭ ; **ಐತ.** ಎಲ್ಲಕ್ಕೂ ಆತ್ಮನಾಗಿರುವ ಪರಮಾತ್ಮ, ೬೦.

**ಸರ್ವಾತ್ಮಾ, ಸರ್ವಾತ್ಮಕಃ** - **ಬೃಹ-೨.** ಎಲ್ಲದರೊಡನೆ, ಒಂದಾಗಿರುವ ಪ್ರಾಣನೆಂಬ ಹೆಸರಿನ (ಪ್ರಾಜ್ಞ), ೧೫೫, ೧೫೬ ; ಎಲ್ಲವೂ ತಾನೇ ಆಗಿರುವ (ಬ್ರಹ್ಮ), ೨೧೧, ೨೬೮, ೩೧೯.

**ಸರ್ವಾತ್ಮೈಕತ್ವಮ್** - **ಕೇನ.** ಸರ್ವರ ಆತ್ಮನೂ ನನ್ನ ಆತ್ಮನೇ - ಎಂಬ ಅದ್ವೈತಭಾವ, ೬೨ ; **ಮಾಂ.** ಎಲ್ಲರ ಆತ್ಮನೂ ಒಬ್ಬನೇ ಆಗಿರುವದು, ೧೨.

**ಸರ್ವಾತ್ಮದರ್ಶನಮ್** - **ಬ್ರ.ಸೂ-೧.** ಒಬ್ಬ ಆತ್ಮನೇ ಎಲ್ಲವೂ ಎಂಬ ಏಕಾತ್ಮದರ್ಶನ, ೪೦೩ ; **ಬೃಹ-೨.** ಎಲ್ಲದರ ಆತ್ಮನಾಗಿರುವ ಬ್ರಹ್ಮದ ಜ್ಞಾನ, ೩೧೬.

**ಸರ್ವಾತ್ಮಭಾವಃ** - **ತೈ.** ಎಲ್ಲವನ್ನೂ ವ್ಯಾಪಿಸಿಕೊಳ್ಳುವದು, ೪೩ ; ಎಲ್ಲವೂ ಆಗುವದು ೯೪, ೨೫೭, ೨೫೮ ; **ಈಶ.** ಎಲ್ಲಕ್ಕೂ ಆತ್ಮನಾಗುವಿಕೆ, ೩೩ ; **ಐತ.** ಎಲ್ಲಕ್ಕೂ ಆತ್ಮನಾಗಿ, ಎಲ್ಲವೂ ತಾನೇ ಆಗುವಿಕೆ, ೮೧ ; **ಬ್ರ.ಸೂ-೧.** ಎಲ್ಲವೂ ತಾನೇ ಆಗುವದೆಂಬ ಬ್ರಹ್ಮ ವಿದ್ಯೆಯ ಫಲ, ೪೪ ; **ಬೃಹ-೨.** (ಮೋಕ್ಷ), ೧೩೯, ೨೧೦ ; ತಾವೇ ಎಲ್ಲವೂ ಆಗಿರುವ ಬ್ರಹ್ಮಸ್ವರೂಪದಿಂದಿರುವದು, ೩೧೭ ; **ಶಾಂ. ನಿ.** ಎಲ್ಲವೂ ತಾನೇ ಆಗಿರುವದೆಂಬ ಬ್ರಹ್ಮಜ್ಞಾನಫಲ. ಸೂ. ಭಾ. ೧-೧-೪, (ಭಾ. ಭಾ. ೪೪).

**ಸರ್ವಾನ್ತರಃ** - **ಬ್ರ.ಸೂ-೧.** ಎಲ್ಲಕ್ಕೂ ಒಳಗಿರುವ (ಪರಮಾತ್ಮ), ೯೭ ; **ಕೇನ.** ದೇಹಾದಿಗಳೆಲ್ಲಕ್ಕೂ ಒಳಗಿರುವ ಮುಖ್ಯಾತ್ಮ, ೧೨, ೨೮.

**ಸರ್ವಾನ್ತರಃ, ಸರ್ವಾನ್ತರತಮಃ** - **ತೈ.** ಎಲ್ಲಕ್ಕೂ ಒಳಗಿರುವ ನಿಜವಾದ ಆತ್ಮ, ೧೮೨, ೨೨೦.

**ಸರ್ವಾನ್ತರಮ್** - **ಮುಂ.** ಎಲ್ಲಕ್ಕೂ ಒಳಗಿರುವ ನಮ್ಮ ಆತ್ಮನಾದ, ೧೦೩.

**ಸರ್ವಾನಾತ್ಮಪ್ರತ್ಯಯತಿರಸ್ಕರಣಮ್** - ಬೃಹ-೨. ಅನಾತ್ಮಪ್ರತ್ಯಯವನ್ನು ಜ್ಞಾನಬಲದಿಂದ ಇಲ್ಲವಾಗಿಸುವದು, ೬೨, ೬೩.

**ಸರ್ವಾನರ್ಥಬೀಜಮ್** - **ಕಠ.** ಎಲ್ಲಾ ಅನರ್ಥಗಳಿಗೂ ಕಾರಣವಾಗಿರುವ ಅಜ್ಞಾನ, ೧೦೫.

**ಸರ್ವಾನನ್ಯಮ್** - **ತೈ.** ಯಾವದಕ್ಕಿಂತಲೂ ಅನ್ಯವಲ್ಲದ, ಎಲ್ಲವೂ ಆಗಿರುವ ಬ್ರಹ್ಮ, ೨೫೮.

**ಸರ್ವೈಕತ್ವಮ್** - **ಛಾಂ.** ಎಲ್ಲದರೊಡನೆ ಒಂದಾಗಿರುವಿಕೆ, ೬೭೯ ; **ಬೃಹ-೨.** ಎಲ್ಲದರೊಡನೆ ಒಂದಾಗಿರುವದು, ತಾನೇ ಎಲ್ಲವೂ ಆಗಿರುವದು, ೧೭, ೨೧೫.

**ಸರ್ವೈಷಣಾವಿನಿರ್ಮುಕ್ತಃ, ಸರ್ವೈಷಣಾವಿನಿವೃತ್ತಃ** ಬೃಹ-೨. ಮನುಷ್ಯಲೋಕಾದಿಗಳ ಆಶೆಯನ್ನೆಲ್ಲ ಬಿಟ್ಟ (ಸಂನ್ಯಾಸಿ), ೩೧೩, ೩೧೫.

**ಸರ್ವೋಪಾಧಿವಿವರ್ಜಿತ** - ಬ್ರ.ಸೂ-೧. ಯಾವ ಉಪಾಧಿಯೂ ಇಲ್ಲದ (ಪರಬ್ರಹ್ಮ), ೯೦ ; **ಶಾಂ. ನಿ.** ಯಾವ ಉಪಾಧಿಯೂ ಇಲ್ಲದ ನಿರ್ವಿಶೇಷ ಬ್ರಹ್ಮ, ಮುಖ್ಯಬ್ರಹ್ಮ, ಸೂ. ಭಾ. ೧-೧-೧೨ (ಭಾ. ಭಾ. ೯೦).

**ಸವಿಕಲ್ಪಕಮ್** - ಭ.ಗೀ. ವಿಶೇಷವುಳ್ಳ ಸಗುಣಬ್ರಹ್ಮ, ೪೯೦.

**ಸವಿಕಲ್ಪವಸ್ತೂನಿ** - **ತೈ.** ದ್ರವ್ಯಾದಿವಿಕಲ್ಪವುಳ್ಳ ವಸ್ತುಗಳು, ೨೨೨.

**ಸವಿಜ್ಞಾನತಾ** - **ಛಾಂ.** ಎಚ್ಚತ್ತ ಜ್ಞಾನದಿಂದೊಡಗೂಡಿರುವದು, ೪೧೩.

**ಸವಿತಾ** - ಬ್ರ.ಸೂ-೧. ನಿತ್ಯಪ್ರಕಾಶನಾದ ಸೂರ್ಯ, (ಸರ್ವಜ್ಞವಾದ ಬ್ರಹ್ಮಕ್ಕೆ [illegible] ೬೯.

**ಸವಿಶೇಷ** - ಬ್ರ.ಸೂ-೧. ವಿಶೇಷಗಳಿಂದ ಕೂಡಿದ (ಬ್ರಹ್ಮ), ೧೦೯.

**ಸವಿಶೇಷನಿರ್ವಿಶೇಷಾತ್ಮಾನೌ** - **ಐತ.** ಇಂಥದ್ದೆಂದು ಹೇಳುವದಕ್ಕೆ ಬರುವ ವಿಶೇಷಗಳಿರುವ ಸಗುಣಬ್ರಹ್ಮ, ಮತ್ತು ಯಾವ ವಿಶೇಷವೂ ಇಲ್ಲದ ಪರಬ್ರಹ್ಮ, ೨೭.

**ಸಶರೀರತ್ವಮ್** - ಬ್ರ.ಸೂ-೧. ಶರೀರದಿಂದೊಡಗೂಡಿರುವದು (ಇದು ಅಜ್ಞಾನಕೃತ), ೫೮, ೬೦, ೨೬೬ ; **ಶಾಂ. ನಿ.** ಶರೀರದಿಂದೊಡಗೂಡಿರುವದು ಮಿಥ್ಯಾಭಿಮಾನ ಕೃತ, ಅಶರೀರತ್ವವೇ ಸ್ವಾಭಾವಿಕ, ೧-೧-೪ (ಭಾ. ಭಾ. ೫೮), ೧-೩-೧೯ (ಭಾ. ಭಾ. ೨೬೬).

**ಸಹಕಾರಿ ಸಾಧನಮ್ - ಕೇನ.** ಒಂದು ಸಾಧನದ ಜೊತೆಯಲ್ಲಿ ಕೆಲಸಮಾಡಿ ಒಂದೇ ಕಾರ್ಯಕ್ಕೆ ನೆರವಾಗುವ ಸಾಧನ, ೮೩, ೮೪.

**ಸಹಕಾರಿಸಾಧನಮ್, ಸಹಕಾರಿಕಾರಣಮ್ - ಬೃಹ-೨.** ಜ್ಞಾನದ ಜೊತೆಗೆ ಮೋಕ್ಷಕ್ಕೆ ಇರಬೇಕೆಂದು ಕಲ್ಪಿಸುವ ಸಾಧನ, ೧೫೮, ೩೩೩.

**ಸಹಕಾರಿ ಸಾಧನಾನಿ - ಮುಂ.** ಜ್ಞಾನವುಂಟಾಗುವದಕ್ಕೆ ಸಹಾಯವಾಗುವ ಸತ್ಯಾಧಿಸಾಧನಗಳು, ೯೮.

**ಸಹಸಿದ್ಧಿ - ಬೃಹ-೧.** ಪ್ರಜಾಪತಿಗೆ ಜೊತೆಯಲ್ಲಿಯೇ ಸಿದ್ಧವಾಗಿರುವ (ಜ್ಞಾನಾದಿಗಳು), ೨೫೩.

**ಸಾಕ್ಷೀ - ಬ್ರ.ಸೂ-೧.** ಅಹಂಪ್ರತ್ಯಯಗೋಚರನಾದ ಜೀವನನ್ನೂ ತನ್ನ ಚೈತನ್ಯದಿಂದ ಬೆಳಗುವ ಆತ್ಮ, ೮, ೪೯, ೫೪, ೬೮ ; **ಬ್ರ.ಸೂ-೨.** ಎಲ್ಲವನ್ನೂ ವಿಕಾರವಿಲ್ಲದೆ ನೋಡುತ್ತಿರುವ ಪ್ರತ್ಯಗಾತ್ಮ. ಸಾಕ್ಷಿಯನ್ನು ಅಂತಃಕರಣಾದಿಗಳಲ್ಲಿಯೂ ಅವನ್ನು ಸಾಕ್ಷಿಯಲ್ಲಿಯೂ ಅಧ್ಯಾಸಮಾಡುತ್ತಾರೆ. ೧-೮ ; ಇವನು ಅಹಂಪ್ರತ್ಯಯ-ಗಮ್ಯನಾದ ಆತ್ಮನಿಗಿಂತ ವಿಲಕ್ಷಣ, ೧-೫೪ ; ಸಾಕ್ಷಿಯು ಉಪನಿಷತ್ತುಗಳಲ್ಲಿ ಮಾತ್ರ ತಿಳಿಯಬರುತ್ತಾನೆ, ೧-೫೪ ; ಅಚೇತನವಾದ ಪ್ರಧಾನವು ಸಾಕ್ಷಿಯಾಗಲಾರದು, ೧-೬೮ ; ಕ್ಷಣಿಕವಿಜ್ಞಾನಕ್ಕಿಂತ ಕೂಟಸ್ಥನಿತ್ಯವಾದ ಸಾಕ್ಷಿ ಬೇರೆ, ೨-೬೦ ; ಸಾಕ್ಷಿಯು ಸ್ವಯಂಸಿದ್ಧ, ೨-೬೦, ೯೯ ; ಸಾಕ್ಷಿಯಾದ ಪರಮಾತ್ಮನ ಅನುಗ್ರಹದಿಂದ ಸಂಸಾರ-ಮೋಕ್ಷಗಳು, ೨-೧೫೫ ; **ಈಶ.** ತನ್ನಲ್ಲಿ ಯಾವ ವಿಕಾರವೂ ಇಲ್ಲದೆಯೇ ನೇರಾಗಿ ನೋಡುವ ಆತ್ಮ, ೧೫ ; **ಭ.ಗೀ.** ತನ್ನಲ್ಲಿ ಯಾವ ವಿಕಾರವೂ ಇಲ್ಲದೆ ಎಲ್ಲವನ್ನೂ ನೋಡುವ ಆತ್ಮ, ೮೧೬, ೯೪೮, ೯೬೭, ೧೦೩೪ ; **ನೈ.** ಎಲ್ಲವನ್ನೂ ಅವಿಕೃತನಾಗಿ ನೋಡುತ್ತಿರುವ ಆತ್ಮ. ಆತ್ಮನು ದುಃಖಿಯಲ್ಲ, ದುಃಖಿತ್ವಕ್ಕೂ ಸಾಕ್ಷಿ, ೨-೭೬; ಬುದ್ಧಿಯ ಉತ್ಪತ್ತ್ಯಾದಿಗಳಿಗೂ ಸಾಕ್ಷಿ, ೨-೭೯, ೩-೪೬; ಗ್ರಾಹಕಾದಿಗಳಿಗೂ ಹಾನೋಪಾದಾನಗಳಿಗೂ ಸಾಕ್ಷಿ, ೨-೧೦೮; ಆಗಮಾಪಾಯಿಯಾದ ಅನಾತ್ಮಕ್ಕೆಲ್ಲ ಸಾಕ್ಷಿ, ೩-೫೪, ೫೫; ಅನಾತ್ಮದಲ್ಲಿ ಭೇದವಿದೆ, ಸಾಕ್ಷಿಯಲ್ಲಿ ಭೇದವಿಲ್ಲ ಎಂಬ ಅರಿವೂ ಅವಿದ್ಯೆಯ ಕಾರ್ಯ, ೩-೬.

**ಸಾಕ್ಷಾತ್ - ಬೃಹ-೨.** ವ್ಯವಧಾನವಿಲ್ಲದ ಸ್ವಸ್ವರೂಪ, (ಆತ್ಮ), ೪೫, ೫೧.

**ಸಾಕ್ಷಾತ್ಕರಣಮ್ - ಬ್ರ.ಸೂ-೨.** ವ್ಯವಧಾನವಿಲ್ಲದಂತೆ ಅಪರೋಕ್ಷವಾಗಿ ಮಾಡಿಕೊಳ್ಳುವದು. ಸಗುಣೇಶ್ವರನ ಉಪಾಸನೆಗಳಿಗೆಲ್ಲ ಸಾಕ್ಷಾತ್ಕರಣವು ಸಮಾನವಾದ ಫಲವು, ೨-೪೨೯ ; ಕಾಮ್ಯೋಪಾಸನೆಗಳಿಗೆ ಇದು ಬೇಕಿಲ್ಲ, ೨-೯

**ಸಾಕ್ಷಾದನುಭವಃ, ಸಾಕ್ಷಾದ್ವಿಜ್ಞಾನಮ್ -** ಕಠ. ಬ್ರಹ್ಮವನ್ನು ನಾನೇ - ಎಂದು ನೇರಾಗಿ ತಿಳಿದುಕೊಳ್ಳುವದು, ೭೫, ೧೧೭, ೧೫೭.

**ಸಾಂಖ್ಯಾಃ -** ಬ್ರ.ಸೂ-೧. ಕಪಿಲರ ಅನುಯಾಯಿಗಳು, (ಅನೇಕಾತ್ಮರನ್ನೂ ಜಗತ್ಕಾರಣವಾದ ಪ್ರಧಾನವನ್ನೂ ಒಪ್ಪಿರುವವರು), ೬೪, ೬೫, ೧೦೫, ૩೪೪, ೩೪೬, ೩೫೩, ೩೫೫, ೩೫೮ ; **ಬ್ರ.ಸೂ-೨.** ಕಾಪಿಲದರ್ಶನವನ್ನು ಅನುಸರಿಸಿದವರು. ಸಾಂಖ್ಯರ ಪ್ರಧಾನಕ್ಕೆ ಬದ್ಧಪ್ರಮಾಣವಿಲ್ಲ, ೧-೬೭ ರಿಂದ ೮೭; ಸಾಂಖ್ಯರು ಉದಾಹರಿಸುವ ಶ್ರುತಿಗಳು ಅವರಿಗೆ ಅನುಗುಣವಲ್ಲ, ೧-೩೩೫ ರಿಂದ ೩೫೨, ೩೫೩ ರಿಂದ ೩೫೭, ೩೫೮ ರಿಂದ ೩೬೪ ; ವೇದಾಂತಕ್ಕೆ ಸಾಂಖ್ಯಸ್ಮೃತಿ-ವಿರೋಧಪರಿಹಾರ, ೧-೩೯೯ ರಿಂದ ೪೦೫ ; ಸಾಂಖ್ಯತರ್ಕವಿರೋಧಪರಿಹಾರ, ೧-೪೦೯ ರಿಂದ ೪೨೯ ; ಸಾಂಖ್ಯಯುಕ್ತಿಖಂಡನೆ, ೨-೪ ರಿಂದ ೨೦ ; **ಛಾಂ.** ಸಾಂಖ್ಯದರ್ಶನವನ್ನೊಪ್ಪುವವರು, ಅವರ ವಸ್ತುಗಳು ಸತ್ಯವೆಂದೊಪ್ಪಿದರೂ ಪಾರಿವ್ರಾಜ್ಯವನ್ನು ಅಂಗೀಕರಿಸಿರುವರು, ಶ್ರುತಿಪ್ರಮಾಣವನ್ನೊಪ್ಪಿದರೂ ಅಚೇತನವಾದ ಪ್ರಧಾನವೇ ಜಗತ್ಕಾರಣವೆನ್ನುವರು, ೧೮೫, ೪೫೬ ; **ಬೃಹ-೧.** ಕಪಿಲರ ಅನುಯಾಯಿಗಳು, ಅನೇಕ ಶುದ್ಧಪುರುಷರನ್ನು ನಂಬಿ ಈಶ್ವರನನ್ನು ಅಲ್ಲಗಳೆಯುವವರು, ೩೦೭, ೩೪೨, ೩೪೩ ; **ನೈ.** ಸಾಂಖ್ಯರು. ಅವರ ಪ್ರಕ್ರಿಯೆಯಿಂದ ಆತ್ಮಾನಾತ್ಮವಿವೇಕ, ೨-೫೮; ಸಾಂಖ್ಯವೇದಾಂತಗಳ ತಾರತಮ್ಯ, ೨-೮೪, ೯೭, ೩-೬.

**ಸಾಂಖ್ಯಃ -** ಭ.ಗೀ. ತತ್ತ್ವಜ್ಞಾನಿ, ೧೫೬, ೧೮೦, ೩೩೬, ಕಪಿಲರ ಅನುಯಾಯಿ, ೧೦೦೩, ೧೦೮೩, ೧೦೮೯.

**ಸಾಂಖ್ಯಮ್ -** ಭ.ಗೀ. ತತ್ತ್ವಜ್ಞಾನ, ೯, ೮೧, ೮೪, ೯೬, ೧೪೨, ೩೩೬ ; ಪದಾರ್ಥಗಳ ತತ್ತ್ವಜ್ಞಾನವನ್ನು ತಿಳಿಸುವ ವೇದಾಂತ, ೧೦೨೭ ; ತತ್ತ್ವವಿಚಾರ, ೮೨೨.

**ಸಾಂಖ್ಯಸ್ಮೃತಿಃ -** ಬ್ರ.ಸೂ-೧. ಸಾಂಖ್ಯರು ಒಪ್ಪಿರುವ ಪ್ರಧಾನಕಾರಣವಾದದ ಶಾಸ್ತ್ರ, ೧೯೨, ೪೦೫, ೪೦೭.

**ಸಾದೃಶ್ಯಪ್ರತ್ಯಯಃ -** ಬೃಹ-೨. ಅದರಂತೆ ಇದು ಎಂಬ ಪ್ರತ್ಯಯ, ೧೮೧.

**ಸಾಧನತ್ರಯಮ್, ದಮಾದಿತ್ರಯಮ್ -** ಬೃಹ-೨. ಸರ್ವೋಪಾಸನಾಶೇಷ-ವಾದ ದಮ, ದಯೆ, ದಾನ - ಎಂಬ ಮೂರು ಸಾಧನ, ೩೬೦, ೩೬೪.

**ಸಾಧನಫಲವಿಲಕ್ಷಣ, ಅಸಾಧನಫಲರೂಪ** - ಬೃಹ-೨. ಯಾವದನ್ನಾದರೂ ಉಪಯೋಗಿಸಿಕೊಂಡು ಮತ್ತೊಂದನ್ನು ಪಡೆಯುವದೆಂಬುದಿಲ್ಲದ (ಆತ್ಮ), ೫೮, ೬೧.

**ಸಾಧರ್ಮ್ಯಮ್** - ಭ.ಗೀ. ಪರಮೇಶ್ವರನ ಸ್ವರೂಪವೇ ಆಗುವದು, ೮೪೮.

**ಸಾಧ್ಯಸಾಧನಭೇದಃ** - ಈಶ. ಇದನ್ನು ಪಡೆಯುವದಕ್ಕೆ ಇದು ಸಾಧನವು - ಎಂಬ ಭೇದ, ೨೧.

**ಸಾಧನವಿಧಾನಮ್** - ಬೃಹ-೨. ಯಜ್ಞೋಪವೀತಾದಿಗಳನ್ನು (ತ್ರಿದಂಡಿ ಸಂನ್ಯಾಸಿಗೆ) ವಿಧಿಸಿರುವದು, ೬೦.

**ಸಾಧ್ಯ** - ಬ್ರ.ಸೂ-೧. ಸಾಧನದಿಂದ ಪಡೆಯಬೇಕಾದ, ೪೨.

**ಸಾಧ್ಯಕ್ಷಮ್** - ಬ್ರ.ಸೂ-೧. ಒಡೆಯನಿರುವ (ಜಗತ್ತಿನ ವ್ಯಾಕರಣ), ೩೬೯.

**ಸಾಧ್ಯಾನಿ** - ತೈ. ಪುತ್ರ, ಕರ್ಮ, ಉಪಾಸನೆ - ಇವುಗಳಿಂದ ಸಿಕ್ಕುವ ಈ ಲೋಕ, ಪಿತೃಲೋಕ - ಇವು, ೮೨.

**ಸಾಧ್ಯಸಾಧನೇ** - ಐತ. ಕರ್ಮಾದಿಸಾಧನಗಳೂ ಪುತ್ರಾದಿಸಾಧ್ಯಗಳೂ, ೧೩, ೧೫, ೮೧ ; ಬೃಹ-೧. ಮನುಷ್ಯಲೋಕ, ಪಿತೃಲೋಕ - ಎಂಬ ಸಾಧ್ಯಗಳು ಮತ್ತು ಪುತ್ರಕರ್ಮಾಪರವಿದ್ಯೆಗಳೆಂಬ ಸಾಧನೆಗಳು, ೫, ೭, ೯೭ ; ಬೃಹ-೨. ಸಾಧನವಾದ ಕರ್ಮಯಜ್ಞೋಪವೀತಾದಿಗಳು, ಸಾಧ್ಯವಾದ ಮನುಷ್ಯಾದಿ ಲೋಕಗಳು, ೫೬, ೨೧೭ ; ನೈ. (೧) ಪಡೆಯಬೇಕಾದದ್ದು ಸಾಧ್ಯ , ಅದಕ್ಕೆ ಉಪಾಯವು ಸಾಧನ. ಪರಲೋಕಸಂಬಂಧವಾದ ಸಾಧ್ಯಸಾಧನಭಾವಕ್ಕೆ ವೇದವಚನವೇ ಬೇಕು, ೧-೨೭; ಕರ್ಮವು ಮುಕ್ತಿಗೆ ಸಾಧನವಲ್ಲ , ೧-೫೩; ಜ್ಞಾನಕರ್ಮಗಳಿಗೆ ಸಾಧ್ಯ ಸಾಧನಭಾವ, ೧-೫೪, ಆತ್ಮಜ್ಞಾನವು ಪುರುಷಾರ್ಥವನ್ನು ಕೊಡುವದಕ್ಕೆ ಮತ್ತೆ ಯಾವ ಸಾಧನವೂ ಬೇಡ, ೧-೩೬; ಜ್ಞಾನದ ಉತ್ಪತ್ತಿಗೆ ಅಮಾನಿತ್ವಾದಿಗಳು ಸಾಧನ, ೪-೬೮, ೭೦. (೨) ತಿಳಿಸಿಕೊಡುವ ಉಪಾಯ. ದ್ರಷ್ಟ್ರಾದಿಗಳಿಗೆ ಬೇರೊಂದು ಸಾಧನ ಬೇಕು, ೨-೧೦೬.

**ಸಾಧ್ಯಸಾಧನಲಕ್ಷಣಮ್** - ಕಠ. ಕರ್ಮಕ್ಕೆ ವಿಷಯವಾದ ಮನುಷ್ಯಪಿತೃ ಬ್ರಹ್ಮಲೋಕರೂಪವಾದ ಅನಿತ್ಯಸಂಸಾರ, ೩೨ ; ಪ್ರಶ್ನ. ಕರ್ಮೋಪಾಸನೆಗಳೆಂಬ ಸಾಧನಗಳು ; ಅವುಗಳಿಂದ ಪಡೆಯುವ ಲೋಕಗಳೆಂಬ ಸಾಧ್ಯಗಳು - ಈ ರೂಪದ, ೫೧.

**ಸಾಧ್ಯಸಾಧನಾನಿ, ಸಾಧನಸಾಧ್ಯಾನಿ** - ಮುಂ. ಪ್ರಜೆ, ಕರ್ಮ, ಉಪಾಸನೆ-ಎಂಬ ಸಾಧನಗಳು, ಅವುಗಳಿಂದಾಗುವ ಮನುಷ್ಯಪಿತೃಲೋಕಗಳು, ೨, ೪೩, ೪೪.

**ಸಾಧ್ಯಸಾಧನಸಂಬಂಧಃ** - ಕೇನ. ಪುತ್ರ, ಮಾನುಷವಿತ್ತ, ದೈವವಿತ್ತ ಎಂಬ ಸಾಧನಗಳು, ಅವುಗಳಿಂದ ಪಡೆಯಬೇಕಾದ ಲೋಕತ್ರಯವೆಂಬ ಸಾಧ್ಯ - ಇವುಗಳ ಸಂಬಂಧ, ೫.

**ಸಾಧನಸಂಪತ್ತಿಃ** - ಬ್ರ.ಸೂ-೧. ಮೋಕ್ಷಕ್ಕೆ ಬೇಕಾದ ಸಾಧನಗಳಿರುವಿಕೆ, ೧೩.

**ಸಾಧುಮಾರ್ಗಃ**.- ತೈ. ವರ್ಣಾಶ್ರಮಾದಿವ್ಯವಸ್ಥೆ, ೧೫೨.

**ಸಾರ್ಥ** - ಬೃಹ-೨. ತನಗಾಗಿ ತಾನಿರುವ, ೧೭೪.

**ಸ್ಮಾರ್ತಕರ್ಮ** - ಕೇನ. ಸ್ಮೃತ್ಯುಕ್ತವಾದ ದೇವಯಜ್ಞವೇ ಮುಂತಾದ ಕರ್ಮಗಳು, ೨.

**ಸಾಮ** - ತೈ. ವೇದದಲ್ಲಿರುವ ಗಾನ ; ಸಮವಾಗಿರುವ ಬ್ರಹ್ಮ, ೨೫೮.

**ಸಾಮಭಕ್ತಯಃ** - ಛಾಂ. ಉಪಾಸನೆಗಾಗಿ ವಿಂಗಡಿಸಿಕೊಳ್ಳಬೇಕಾದ ಸಾಮದ ಭಾಗಗಳು, ೧೧೨ ರಿಂದ ೧೬೭ ರವರೆಗಿನ ಭಾ.ಭಾ.ಗಳನ್ನು ನೋಡಿ.

**ಸಾಮಾನಾಧಿಕರಣ್ಯಾದಿಃ** - ನೈ. ತತ್ತ್ವಮಸ್ಯಾದಿವಾಕ್ಯಗಳಲ್ಲಿ ಪದಗಳು ಒಂದೇ ಅರ್ಥವನ್ನು ಹೇಳುವದು, ಪದಾರ್ಥಗಳಿಗೆ ವಿಶೇಷವಿಶೇಷ್ಯಭಾವವಿರುವದು, ತತ್ತ್ವಂ ಪದಾರ್ಥಗಳಿಗೂ ಅದ್ವಿತೀಯಪ್ರತ್ಯಗಾತ್ಮನಿಗೂ ಲಕ್ಷ್ಯಲಕ್ಷಣಭಾವ ವಿರುವದು ಇವು, ೩-೩, ೯,೧೧.

**ಸಾಮಾನ್ಯವಿಜ್ಞಾನಮ್** - ಕಠ. ಸಾಮಾನ್ಯವಾಗಿ ಎಲ್ಲವನ್ನೂ ಬೆಳಗುವ ಚಿನ್ಮಾತ್ರರೂಪ, ೭೭.

**ಸಾಮಾನ್ಯವಿಶೇಷಾರ್ಥೌ** - ನೈ. ಪದವು ಸಾಮಾನ್ಯಾರ್ಥವನ್ನು ಹೇಳುತ್ತದೆ, ವಾಕ್ಯವು ವಿಶೇಷಾರ್ಥವನ್ನು ಹೇಳುತ್ತದೆ, ೩-೩೨; ವಾಕ್ಯದಲ್ಲಿ ಸಮಾನಾಧಿಕರಣವಾಗಿರುವ ಪದಗಳೆರಡೂ ಸ್ವಪ್ರಧಾನವಾಗಿದ್ದರೆ ಸಾಮಾನ್ಯಾರ್ಥವನ್ನೇ ಹೇಳುತ್ತವೆ, ೩-೭೫.

**ಸಾಮ್ಯಾವಸ್ಥಾ** - ಬ್ರ.ಸೂ-೧. ಸತ್ತ್ವ, ರಜಸ್ಸು ತಮಸ್ಸುಗಳು ಸಮವಾಗಿರುವವೆಂದು ಸಾಂಖ್ಯರು ಹೇಳುವ ಪ್ರಲಯ, ೩೫೪.

**ಸಾಯುಜ್ಯಮ್** - ಬೃಹ-೧. ಉಪಾಸನೆಯಿಂದ (ಪ್ರಾಣನಲ್ಲಿಯೇ) ಒಂದಾಗಿ ಬಿಡುವದು, ೨೫೩.

**ಸಾವಕಾಶ** - ಬ್ರ.ಸೂ-೧. ತಾನು ಹೇಳುವದಕ್ಕೆ ಮತ್ತೊಂದು ವಿಷಯದ ಅವಕಾಶವಿರುವ (ಸ್ಮೃತಿ), ೩೯, ೪೦೭.

**ಸಿದ್ಧಃ** - ಬ್ರ.ಸೂ-೧. ಧರ್ಮಾದ್ಯತಿಶಯದಿಂದ ಸಿದ್ಧಿಯನ್ನು ಪಡೆದವನು, ೧೮೯, ೪೦೭ ; ಭ.ಗೀ. ಹುಟ್ಟುವಾಗಲೇ ಧರ್ಮಜ್ಞಾನಾದಿಗಳಿರುವ, ೬೩೪, ೬೭೮, ೬೯೮ ; ಜ್ಞಾನನಿಷ್ಠೆಗೆ ಯೋಗ್ಯತೆಯನ್ನು ಪಡೆದವ, ೪೫೬.

**ಸಿದ್ಧ** - ಬ್ರ.ಸೂ-೨. ಸಿದ್ಧಿಯನ್ನು ಪಡೆದ. ಈಶ್ವರನು ನಿತ್ಯಸಿದ್ಧನು, ೧-೬೯ ; ಅಣಿಮಾದಿಸಿದ್ಧಿಗಳನ್ನು ಪಡೆದ ಯೋಗಿಯೇ ಅಂತರ್ಯಾಮಿ ಎಂಬ ಪೂರ್ವಪಕ್ಷ, ೧-೧೮೯ ; ದೇವತೆಗಳು ಹುಟ್ಟಿದಂದಿನಿಂದಲೂ ಸಿದ್ಧರು, ೧-೨೮೩ ; ಸಿದ್ಧ-ಪುರುಷರಿಗೆ ಅನ್ಯೋನ್ಯವಿರೋಧವಾದಾಗ ಶ್ರುತಿಯೇ ಗತಿ, ೧-೪೦೨ ; ಪ್ರಾಪ್ತ, ಮೋಕ್ಷವು. ಸಿದ್ಧ, ೨-೫೮೬, ೬೧೨ ; ಪ್ರಮಾಣವನ್ನಪೇಕ್ಷಿಸದ, (ಆತ್ಮ) ಸಾಕ್ಷಿಯು ಸ್ವಯಂಸಿದ್ಧ, ೨-೬೦, ೯೯.

**ಸಿದ್ಧಾಂತಃ** - ಬ್ರ.ಸೂ-೧. ಅಧಿಕರಣದಲ್ಲಿ ಕೊನೆಗೆ ನಿಲ್ಲುವ ಪಕ್ಷ, ೧೭೪ ; ಮುಂ. ವಿಚಾರಮಾಡಿದ ಬಳಿಕ ಏರ್ಪಡುವ ನಿರ್ಣಯ, ೧೪.

**ಸಿದ್ಧಿಃ** - ಭ.ಗೀ. ಜ್ಞಾನಪ್ರಾಪ್ತಿ, ೯೪, ೧೧೯೩ ; ಜ್ಞಾನನಿಷ್ಠಾಯೋಗ್ಯತೆ, ೧೧೭೮, ೧೧೯೫, ೧೧೧೯ ; ಕರ್ಮಫಲಸಿದ್ಧಿ, ೧೦೫೨.

**ಸಿದ್ಧಿಃ, ರಾದ್ಧಿಃ** - ನೈ. (೧) ಉಂಟಾಗುವದು, ಪ್ರಾಪ್ತಿ. ಜ್ಞಾನಸಿದ್ಧಿಯು ವಾಕ್ಯದಿಂದಲೇ ಎಂಬ ಬಗ್ಗೆ ಪೂರ್ವಪಕ್ಷ, ೨-೨೩; ವಾಕ್ಯಾರ್ಥಜ್ಞಾನಪ್ರಾಪ್ತಿಗಾಗಿ ಅನ್ವಯವ್ಯತಿರೇಕ, ೨-೧೦; (೨) ಜ್ಞಾನದಿಂದ ಸಿದ್ಧವಾಗುವದು. ಪ್ರಮಾಣಗಳಿಗೆ ಆತ್ಮನಿಂದ ಸಿದ್ಧಿ, ೨-೩೭; ಆತ್ಮಸಿದ್ಧಿಯಿಂದಲೇ ಅನಾತ್ಮಸಿದ್ಧಿ, ೧-೪; ಅನಾತ್ಮಕ್ಕೆ ಆತ್ಮನಿಗಿಂತ ಬೇರೆ ಅಥವಾ ಆತ್ಮರೂಪದಿಂದ ಸಿದ್ಧಿಯಿಲ್ಲ, ೨-೪೫; ಅವಿದ್ಯೆಯಿದೆ ಎಂಬ ಸಿದ್ಧಿಯು ಅವಿದ್ಯಾಪ್ರಸಿದ್ಧಿಯಿಂದ, ೩-೧೧೧, ೧೧೨.

**ಸುಖದುಃಖೇ** - ನೈ. ಸುಖದುಃಖಗಳು. ದುಃಖಕ್ಕೆ ಅನವಬೋಧವೇ ಕಾರಣ (ಅವ). ನಿಜವಾದ ಅನಾಗಮಾಪಾಯಿಸುಖಕ್ಕೆ ಅನವಬೋಧವೇ ಕಾರಣ, (ಅವ); ನಿಜವಾದ ಅನಾಗಮಾಪಾಯಿ ಸುಖಕ್ಕೆ ಅನವಬೋಧವೇ ಆವರಣ, (ಅವ); ನಿರತಿಶಯಸುಖದ ಪ್ರಾಪ್ತಿಯೂ ನಿಃಶೇಷದುಃಖನಿವೃತ್ತಿಯೂ ಜ್ಞಾನದಿಂದಲೇ, ೧-೩೫; ಆತ್ಮನು ನಿರತಿಶಯಸುಖಹಿತಸ್ವರೂಪನೇ, (ಅವ), ೧-೩೦; ಕರ್ಮಿಯು ದುಃಖರೂಪವಾದ ಸಂಸಾರದಲ್ಲಿ ತೊಳಲುತ್ತಾನೆ, ೧-೪೨; ಆತ್ಮನಿಗೆ ಆಗಂತುಕಸುಖದುಃಖಗಳ ಸಂಬಂಧವಿಲ್ಲ, ೧-೯೪.

**ಸುಪ್ತಾಃ** - ಬೃಹ-೨. ತಮ್ಮ ರೂಪದಿಂದ ಲಯವಾಗಿ ವಾಸನಾರೂಪದಿಂದ ಕಾಣುವ (ಬಾಹ್ಯಾಧ್ಯಾತ್ಮಿಕ), ಭಾಗಗಳು, ೧೮೯.

**ಸುವರ್ಣಮಣಿಲೋಹಾಗ್ನಿವಿಸ್ಫುಲಿಙ್ಗದೃಷ್ಟಾನ್ತಾಃ** - ಬೃಹ-೧. ಜೀವನು ಪರಮಾತ್ಮನಂತೆ ಚೇತನ್ಯೈಕಸ್ವರೂಪನೇ ಎಂದು ತಿಳಿಸುವದಕ್ಕೆ ಶ್ರುತಿಯಲ್ಲಿ ಕೊಟ್ಟಿರುವ ಚಿನ್ನ, ಕಬ್ಬಿಣ, ಬೆಂಕಿಯ ಕಿಡಿ - ಇವುಗಳ ಹೋಲಿಕೆಗಳು, ३.೧೬.

**ಸುವರ್ಣಾದಯಃ** - ಬ್ರ.ಸೂ-೧. ಚಿನ್ನವೇ ಮುಂತಾದ ಉಪಾದಾನಕಾರಣಗಳು, ೨೬೫.

**ಸುವರ್ಣಪ್ರಕೃತಿಕಃ** - ಬ್ರ.ಸೂ-೧. ಚಿನ್ನದಿಂದಾಗಿರುವ (ಕಾರ್ಯ), ೪೧೦, ೪೨೨.

**ಸುಷುಪ್ತ, ಸುಪ್ತ** - ಬೃಹ-೧. ನಿದ್ರಿಸುತ್ತಿರುವವನು, ೨೭೮, ೨೭೯ . ನೈ. ನಿದ್ರಿಸಿದ, ನಿದ್ರೆ. ನಿದ್ರೆಯಿಂದ ಎಚ್ಚತ್ತವನು ನಾನು ಅರಿಯಲಿಲ್ಲ ಎನ್ನುವದರಿಂದ ಅಹಂಕಾರವು ಆತ್ಮನಿಗೆ ಲಕ್ಷಣ, ೨-೫೪; ಜಾಗ್ರತ್ಸ್ವಪ್ನ ಸುಷುಪ್ತಿಗಳ ಸಾಕ್ಷಿಯೆಂದು ಆಗುವ ಜ್ಞಾನವು ಅಪರೋಕ್ಷವಲ್ಲ, ३-೫೭; ಅಹಂಕಾರವು ಆತ್ಮನ ಧರ್ಮವಲ್ಲ ಏಕೆಂದರೆ ಮುಕ್ತಿಸುಷುಪ್ತಿಗಳಲ್ಲಿ ಅದು ಇಲ್ಲ, ೨-३೨; ಸುಷುಪ್ತಿಯಲ್ಲಿ ಜ್ಞಾತೃತ್ವವಾಗಲಿ ಅಹಂಕಾರದ ವಿಕಾರವಾಗಲಿ ಇಲ್ಲದ್ದರಿಂದ 'ಇದು', 'ನನ್ನದು' ಎಂಬ ಅರಿವಿಲ್ಲ, ३-೬೨; ಸುಷುಪ್ತಿಯಲ್ಲಿ ಯಾವ ವಿಕಲ್ಪವೂ ಇಲ್ಲದ ಆತ್ಮನು ಇದ್ದರೂ ಅಲ್ಲಿ ಅಜ್ಞಾನವಿದೆ, ३-೫೮; ಸುಷುಪ್ತಿಯಲ್ಲಿ ಏನೂ ಅರಿಯಲಿಲ್ಲವೆಂದರೆ ಆತ್ಮನ ಚೈತನ್ಯವಿಲ್ಲವೆಂದಲ್ಲ, ಪ್ರತ್ಯಯವಿಲ್ಲವೆಂದೇ ಅಭಿಪ್ರಾಯ, ೪-೨३.

**ಸುಷುಪ್ತಮ್, ಸುಷುಪ್ತಿಃ** - ಬೃಹ-೧. ಗಾಢನಿದ್ರೆಯ ಅವಸ್ಥೆ, ೨೯೮, ೨೯೯ ; **ಬೃಹ-೨.** ತನಿನಿದ್ರೆ, ೧೯೭, ೧೯೮ ; **ಮಾಂ.** ತನಿನಿದ್ರೆ, ೧೫, ೧೬, ೨३, ೬೨, ೨೬೧.

**ಸುಷುಪ್ತಿಃ, ಸುಷುಪ್ತಾವಸ್ಥಾ** - ಬ್ರ.ಸೂ-೧. ಕನಸಿಲ್ಲದ ತನಿನಿದ್ರೆ, ೮೫, ೨೫೯, ೨೬೨, ೨೬೪, ೨೬೭, ೨೭೦, ३೨೯ ; **ಶಾಂ. ನಿ.** ತನಿನಿದ್ರೆ ; ಈ ಅವಸ್ಥೆಯಲ್ಲಿ ಜೀವನು ಅಸಂಸಾರಿಯಾದ ಪರಮಾತ್ಮನಲ್ಲಿ ಬೆರೆತುಹೋಗುತ್ತಾನೆ, ಸೂ. ಭಾ. ೧-೧-೯, ೧-३-೧೫, ೧-३-೨೦, ३-೨-೭, ಇಲ್ಲಿರುವ ಅಜ್ಞಾನಕ್ಕೆ ಐಕ್ಯವೇ ಕಾರಣ, ಸೂ. ಭಾ. ३-೨-೭, ಬೃ. ಭಾ. ೪-३-೨೧.

**ಸುಷುಪ್ತಿ** - ಬ್ರ.ಸೂ-೨. ಕನಸಿಲ್ಲದ ನಿದ್ರೆ. ಇದರಲ್ಲಿ ಉಪಾಧಿ ಕೃತವಿಶೇಷವಿಲ್ಲದ್ದರಿಂದ ಜೀವನು ತನ್ನಲ್ಲಿ ಸೇರಿಕೊಂಡಂತೆ ಆಗುವನು, ೧-೯ ; ಸುಷುಪ್ತಿಯಲ್ಲಿ ಬ್ರಹ್ಮವನ್ನೇ ಸೇರುತ್ತಾನೆ, ೧-೨೫೯, ೨೭೦ ; ಸುಷುಪ್ತಿಯಲ್ಲಿ ಜೀವನು

ಬ್ರಹ್ಮದಲ್ಲಿರುವದಿಲ್ಲ, ಬ್ರಹ್ಮವೇ ಆಗಿರುತ್ತಾನೆ, ೨-೨೬೬ ; ಏಕತ್ವಕಾರಣದಿಂದಲೇ ಸುಷುಪ್ತಿಯಲ್ಲಿ ಅಜ್ಞಾನ, ೨-೨೬೬ ; ನಾಡ್ಯಾದಿಗಳನ್ನು ಹೇಳಿರುವದು ಜೀವನು ಬ್ರಹ್ಮನೆಂಬುದಕ್ಕೆ, ೨-೨೬೭ ; ಸುಷುಪ್ತಿಯಲ್ಲಿ ನಿರ್ವಿಶೇಷಬ್ರಹ್ಮದಲ್ಲಿ ಒಂದಾಗುತ್ತಾನೆ, ೨-೨೭೬ ; ಸುಷುಪ್ತದಲ್ಲಾಗುವ ಬ್ರಹ್ಮಸಂಬಂಧವು ಸ್ವರೂಪಸಂಬಂಧವೇ, ಅದನ್ನು ಸಂಬಂಧವೆಂಬುದು ಉಪಚಾರಕ್ಕೆ ಮಾತ್ರ, ೨-೩೧೦, ೩೧೧. ಇಲ್ಲಿ ದರ್ಶನಾದಿ-ವ್ಯವಹಾರವಿಲ್ಲವೆಂದು ಶ್ರುತಿ ಹೇಳುವದು ಆತ್ಮನು ಸುಖರೂಪನೆಂಬುದಕ್ಕೆ , ೧-೪೧೨ ; ಇಲ್ಲಿ ವಿಶೇಷವಿಜ್ಞಾನವಿಲ್ಲವೆಂಬ ಅಭಿಪ್ರಾಯದಿಂದ, ಜೀವನು ವಿನಾಶವಾಗುತ್ತಾನೆಂದು ಹೇಳಿದೆ, ೧-೨೬೭ ; ಸುಷುಪ್ತಿಯಾದರೂ, ಎಚ್ಚರದ ವ್ಯವಹಾರವು ವಿಚ್ಛೇದವಾಗದಿರುವಂತೆ ಕಲ್ಪಾಂತರವ್ಯವಹಾರ, ೧-೨೯೩ ; ಸುಷುಪ್ತಿ ಪ್ರಲಯಗಳಲ್ಲಿ ಬೀಜರೂಪದಿಂದ ಜೀವನಿಗೆ ಮಿಥ್ಯಾಜ್ಞಾನಕೃತಬುದ್ಧಿಸಂಬಂಧವು, ೨-೧೪೨ ; ಸುಷುಪ್ತಿಸಮಾಧ್ಯಾದಿಗಳಲ್ಲಿ ಅವಿಭಾಗಪ್ರಾಪ್ತಿಯಾದರೂ ಮಿಥ್ಯಾಜ್ಞಾನವು ಹೋಗದೆ ಇರುವದರಿಂದ ಎಚ್ಚರದಲ್ಲಿ ಮತ್ತೆ ವಿಭಾಗವಾಗುತ್ತದೆ, ೧-೪೨೫ ; ಸುಷುಪ್ತಿಪ್ರಲಯಗಳಂತೆ ಮರಣದಲ್ಲಾಗುವ ಸತ್ಸಂಪತ್ತಿಯೂ ಬೀಜಭಾವಾವ-ಶೇಷವಾದದ್ದು, ೨-೫೪೯.

**ಸುಷುಪ್ತಿಸಮಾಧ್ಯಾದಿಕಃ** - ಬ್ರ.ಸೂ-೧. ತನಿನಿದ್ರೆ, ಸಮಾಧಿ - ಮುಂತಾದ ಅವಸ್ಥೆ , ೪೨೫ ; **ಶಾಂ.** ನಿ. ತನಿನಿದ್ರೆ, ಸಮಾಧಿ - ಮುಂತಾದ ಅವಸ್ಥೆಗಳಲ್ಲಿ ಬ್ರಹ್ಮದೊಡನೆ ಸ್ವಾಭಾವಿಕವಾದ ಅವಿಭಾಗವನ್ನೇ ಜೀವನು ಹೊಂದುತ್ತಾನೆ, ಸೂ. ಭಾ. ೨-೧-೯.

**ಸುಷುಮ್ನಾ** - **ಪ್ರಶ್ನ.** ಉಪಾಸಕನು ಬ್ರಹ್ಮಲೋಕಕ್ಕೆ ಹೋಗುವಾಗ ಮಾರ್ಗಪ್ರಾಪ್ತಿಗಾಗಿ ಅನುಸರಿಸಬೇಕಾದ ನಾಡಿ, ೪೪ ; **ಕಠ.** ಒಂದು ನಾಡಿ ; ಇದರ ಮೂಲಕ ಉಪಾಸಕರು ಹೊರಟು ಬ್ರಹ್ಮಲೋಕವನ್ನು ಸೇರುವರೆಂದು ಶಾಸ್ತ್ರಪ್ರಸಿದ್ಧಿ, ೧೮೪ ; **ತೈ.** ಉಪಾಸಕರು ಬ್ರಹ್ಮಲೋಕಕ್ಕೆ ಹೋಗುವಾಗ ಅನುಸರಿಸಬೇಕಾದ ಮಾರ್ಗದ ನಾಡಿ, ೪೨ ; **ಬೃಹ-೨.** ಬ್ರಹ್ಮಲೋಕಕ್ಕೆ ಹೋಗುವ ದ್ವಾರನಾಡಿ, ೨೮೩.

**ಸೂಕ್ಷ್ಮದೇಹಃ** - **ನೈ.** ಅಹಂಮಮತ್ವಯತ್ನೇಚ್ಛಾದಿಗಳು. ಇವು ಅನಾತ್ಮವೆಂದು ಅನ್ವಯವ್ಯತಿರೇಕದಿಂದ ನಿಶ್ಚಯಿಸುವ ಬಗೆ, ೨-೨೨ ರಿಂದ ೯೬.

**ಸೂಕ್ಷ್ಮಶರೀರಮ್** - **ಮುಂ.** ಕರಣಗಳ ಗುಂಪು, ಲಿಂಗಶರೀರ, ೬೮.

**ಸೂಕ್ಷ್ಮಂ ಶರೀರಮ್** - **ಬ್ರ.ಸೂ-೧.** ಕರಣಗಳಿಂದಾಗಿರುವ ಶರೀರ, ೩೪೨, ೩೪೩.

**ಸೂಚೀಪಾಶಾದಿಃ** - ಬ್ರ.ಸೂ-೧. ಸೂಜಿ, ದಾರ - ಮುಂತಾದವುಗಳು, (ಆಕಾಶಕ್ಕೆ ಉಪಾಧಿ), ೧೫೯.

**ಸೂತ್ರಮ್ - ಸೂತ್ರಾತ್ಮಾ - ಈಶ.** ಕ್ರಿಯಾಪ್ರಧಾನವಾಗಿರುವ ಅಪರಬ್ರಹ್ಮ, ವಾಯು, ೨೧.

**ಸೂತ್ರಮ್ - ಬೃಹ-೨.** ಅಶ್ವಮೇಧದರ್ಶನದಿಂದ ಪಡೆಯುವ ಸಮಷ್ಟಿವ್ಯಷ್ಟ್ಯಾತ್ಮಕನಾದ ವಾಯು, ಸತ್ಯ ಎಂಬ ಹೆಸರಿನ ಹಿರಣ್ಯಗರ್ಭ, ೩೯, ೪೩.

**ಸೂತ್ರಭಾಷ್ಯೋಕ್ತಿವತ್ - ಮುಂ.** ಸಂಗ್ರಹವಾಗಿರುವ ಸೂತ್ರದ ವಿಷಯವನ್ನೇ ಭಾಷ್ಯದ ವಿಸ್ತಾರವಾದ ಮಾತಿನಿಂದ ತಿಳಿಸುವಂತೆ (ಸಂಗ್ರಹವಾಗಿ ಒಂದು ಸಲ ಹೇಳಿ ಮತ್ತೊಮ್ಮೆ ವಿಸ್ತಾರವಾಗಿ ಹೇಳುವದು), ೫೯.

**ಸೃಷ್ಟಿಸ್ಥಿತಿಸಂಹಾರಶಕ್ತಿವಿಜ್ಞಾನವತ್ - ಮುಂ.** ಜಗತ್ತನ್ನು ಹುಟ್ಟಿಸುವದು, ಕಾಪಾಡುವದು, ಲಯಗೊಳಿಸುವದು - ಇವುಗಳಿಗೆ ಬೇಕಾದ ಶಕ್ತಿಯೂ ತಿಳಿವಳಿಕೆಯೂ ಇರುವ ಬ್ರಹ್ಮ, ೨೩.

**ಸೇನಾಪತ್ಯಾದಿಶಬ್ದಾಃ - ಬ್ರ.ಸೂ-೧.** ಸೇನಾಪತಿ ಮುಂತಾದ ಸ್ಥಾನವಿಶೇಷಗಳನ್ನು ಹೇಳುವ ಶಬ್ದಗಳು (ಇಂದ್ರಾದಿಶಬ್ದಗಳಿಗೆ ದೃಷ್ಟಾಂತ), ೨೮೬.

**ಸೋಪಾಧಿಕಃ - ಕಠ.** ಉಪಾಧಿಯಿದ ಕೂಡಿರುವ ಆತ್ಮ, ೧೮೦.

**ಸೋಪಾಧಿಕ - ಬೃಹ-೨.** ನಾಮರೂಪಗಳಲ್ಲಿದ್ದು ವ್ಯವಹಾರಕ್ಕೆ ಸಿಕ್ಕುವ ಬ್ರಹ್ಮ, ೩೪೬, ೩೪೭ ; ಭ.ಗೀ. ಉಪಾಧಿಯಿಂದ ಕೂಡಿದ ಆತ್ಮ, ೨೮೯.

**ಸೋಪಾಧಿಕಮ್ - ಈಶ.** ಉಪಾಧಿಯಿಂದ ತೋರುವ ಆತ್ಮರೂಪ, ೧೧ ; ತೈ. ಉಪಾಧಿಗಳಿಂದೊಡಗೂಡಿದ (ಅಪರಬ್ರಹ್ಮ), ೯೦.

**ಸೋಪಾಖ್ಯ - ಬೃಹ-೧.** ಮಾತಿನಿಂದ ಗೊತ್ತುಪಡಿಸಿ ಹೇಳಬಹುದಾದ (ಬ್ರಹ್ಮ), ೧೭೬, ೩೩೫.

**ಸೌಗತಂ ಮತಮ್ - ಬ್ರ.ಸೂ-೨.** ಸುಗತನ, ಬುದ್ಧನ ಅನುಯಾಯಿಗಳ ಮತ. ಇದರ ಪ್ರಭೇದಗಳೂ ಖಂಡನೆಯೂ, ೨-೪೧ ರಿಂದ ೬೫.

**ಸ್ತುತಿನಮಸ್ಕಾರಯಾಗ - ಬಲ್ಯುಪಹಾರಪ್ರಣಿಧಾನ - ಧ್ಯಾನಾದಯಃ, ಪುಷ್ಪೋದಕಾಞ್ಜಲಿಸ್ತುತಿ ನಮಸ್ಕಾರಬಲ್ಯುಪಹಾರ ಸ್ವಾಧ್ಯಾಯಧ್ಯಾನಯೋಗಾದಯಃ - ಬೃಹ-೧.** ಆರಾಧನೆಯಿಂದ ಪರಮಾತ್ಮಭಾವವನ್ನು ಮುಂದೆ ಪಡೆಯಬೇಕೆನ್ನುವವರು ಹೇಳುವ ಸ್ತುತ್ಯಾದಿಪ್ರಕಾರಗಳು, ೧೭೬.

**ಸ್ಥಾಣೌ ಪುರುಷಬುದ್ಧಿಃ** - ಬ್ರ.ಸೂ-೧. ಮೋಟುಮರದಲ್ಲಿ ಮನುಷ್ಯನೆಂಬ ಭಾವ, ೨೬೪.

**ಸ್ಥಾನಮ್** - ಮಾಂ. ಅವಸ್ಥೆ, ೧೧, ೧೪, ೧೫, ೩೭, ೬೦, ೬೧, ೬೨, ೬೬, ೮೨, ೯೩.

**ಸ್ಥಾನತ್ರಯಮ್** - ಬೃಹ-೨. ಜಾಗ್ರತ್ಸ್ವಪ್ನಸುಷುಪ್ತಗಳೆಂಬ ಮೂರವಸ್ಥೆಗಳು, ೨೦೫, ೨೦೭.

**ಸ್ಥಾವರಃ** - ಬೃಹ-೧. ಗಿಡಮರಗಳಂತೆ ಇದ್ದಲ್ಲಿರುವ ಪ್ರಾಣಿ, ೪೬, ೧೭೭, ೩೦೪.

**ಸ್ಥಾವರಜಂಗಮಮ್** - ಬ್ರ.ಸೂ-೧. ಗಿಡಮರ ಮುಂತಾದವು ಮತ್ತು ಪ್ರಾಣಿಗಳು - ಎಂಬ ಚರಾಚರಗಳು, ೧೬೫.

**ಸ್ಥೂಣಾನಿಖನನ** - ಬ್ರ.ಸೂ-೧. ಕಂಬವನ್ನು ಕೂಲಿರಿದು ಗಟ್ಟಿಮಾಡುವದು (ಯುಕ್ತಿದಾರ್ಢ್ಯಕ್ಕೆ ದೃಷ್ಟಾಂತ), ೪೭೨.

**ಸ್ಥೂಲಭೂತಾನಿ** - ಪ್ರಶ್ನ. ಒಂದರಲ್ಲೊಂದು ಬೆರೆತುಕೊಂಡಿರುವ ಮಹಾಭೂತಗಳು, ೭೨.

**ಸ್ಥೂಲಶರೀರಮ್** - ಈಶ. ಇಂದ್ರಿಯಗಳಿಗೆ ಗೋಚರವಾಗುವ ಪ್ರಸಿದ್ಧವಾದ ಶರೀರವು, ೧೯.

**ಸ್ಫಟಿಕಃ** - ಬ್ರ.ಸೂ-೧. ಸ್ವಚ್ಛವಾಗಿದ್ದೇ ಕೆಂಪು ಮುಂತಾಗಿ ತೋರುವ ಮಣಿ, (ಆತ್ಮನ ಸ್ವರೂಪನಿಷ್ಪತ್ತಿಗೆ ದೃಷ್ಟಾಂತ), ೨೬೬.

**ಸ್ಫಟಿಕಮಣಿಃ** - ಭ.ಗೀ. ನಿರ್ಮಲವಾಗಿರುವ ಸ್ಫಟಿಕ (ಸತ್ತ್ವಗುಣಕ್ಕೆ ಉಪಮಾನ), ೮೫೫.

**ಸ್ಪಷ್ಟಚೈತನ್ಯ** - ಬ್ರ.ಸೂ-೧. ಅರಿವಿರುವದೆಂದು ಸ್ಪಷ್ಟವಾಗಿರುವ (ಆತ್ಮರು), ೪೧೩.

**ಸ್ಫೋಟಃ** - ಬ್ರ.ಸೂ-೧. ವರ್ಣಗಳಿಗಿಂತ ವ್ಯತಿರಿಕ್ತವಾಗಿರುವ ಶಬ್ದವೆಂದು ವೈಯಾಕರಣರು ಕಲ್ಪಿಸಿರುವ ರೂಪ, ೨೮೮, ೨೯೧.

**ಸ್ಮೃತಿರೂಪಃ** - ಬ್ರ.ಸೂ-೧. ನೆನಪಿನಂತೆ ವಿಷಯವಿಲ್ಲದ ಭ್ರಾಂತಿ, ೨.

**ಸ್ಮೃತಿ ಸಂತತಿಃ, ಸ್ಮೃತಿ ಸಂತಾನಃ** - ಬೃಹ-೧. ಒಂದು ಸಲ ಉಂಟಾದ ಜ್ಞಾನದ ನೆನಪೇ ಎಡೆಬಿಡದೆ ಇದ್ದುಕೊಂಡಿರುವದು, ೧೩೮, ೧೪೨.

**ಸ್ಮಾರ್ತಂ ಕರ್ಮ** - ಮುಂ. ಸ್ಮೃತಿಯಲ್ಲಿ ಹೇಳಿರುವ ಕರ್ಮ, ೪೧ ; ಭ.ಗೀ. ಸ್ಮೃತಿಯಲ್ಲಿ ವಿಧಿಸಿರುವ ಕರ್ಮ, ೧೧, ೧೨, ೧೪೫, ೧೫೨, ೫೭೦, ೫೮೩.

**ಸ್ಮಾರ್ತಂ ಲಿಂಗಮ್** - ಬೃಹ-೨. ಅಜ್ಞರ ಪಾರಿವ್ರಾಜ್ಯವನ್ನು ಸೂಚಿಸುವ ಸ್ಮೃತಿವಿಹಿತವೇಷ, ೫೬.

**ಸ್ವಕಾರಣಸತ್ತಾಸಂಬನ್ಧಃ** - ಬೃಹ-೧. ಹೊಸದಾಗಿ ಉಂಟಾದ ಕಾರ್ಯಕ್ಕೆ ತನ್ನ ಕಾರಣದೊಡನೆಯೂ ಸತ್ತೆ - ಎಂಬ ಸಾಮಾನ್ಯದೊಡನೆಯೂ ಆಗುವ ಸಂಬಂಧ (ವೆಂಬ ವೈಶೇಷಿಕರು ಕಲ್ಪಿಸಿರುವ ಸಂಬಂಧ), ೨೪.

**ಸ್ವರ್ಗಃ** - ಕೇನ. ಸ್ವರ್ಗಲೋಕ ; ಆನಂದರೂಪವಾದ ಬ್ರಹ್ಮ, ೮೯ ; ಮುಂ. ಕರ್ಮಕ್ಕೆ ಫಲವಾಗಿ ಸಿಕ್ಕುವ ಲೋಕ, ೩೪, ೩೮, ೪೦, ೪೧ ; ಐತ. ಆನಂದ-ರೂಪವಾದ ಬ್ರಹ್ಮ, ೮೧, ೮೯.

**ಸ್ವರ್ಗಲೋಕಃ** - ಕಠ. ವಿರಾಡುಪಾಸನೆಯಿಂದ ಪಡೆಯುವ ಉತ್ತಮಲೋಕ, ೨೩, ೨೫, ೬೨.

**ಸ್ವರ್ಗೋ ಲೋಕಃ** - ಬೃಹ-೨. ಕರ್ಮಫಲ, ೧೦, ೩೩೭ ; ಮೋಕ್ಷ, ೨೮೨.

**ಸ್ವತಃ, ಸ್ವಯಮ್** - ನೈ. ಮತ್ತೊಂದರಿಂದಲ್ಲದೆ, ತಾನೇ. ಆತ್ಮನು ಪ್ರಮಾಣ ಸಿದ್ಧನಲ್ಲ, ಸ್ವತಃಸಿದ್ಧನು, (ಅವ), ೧-೩೬, ೮೯,೯೭; ತತ್ತ್ವಮಸ್ಯಾದಿವಾಕ್ಯಗಳು ಸ್ವತಃಸಿದ್ಧವಾದರ್ಥವನ್ನೇ ತಿಳಿಸುತ್ತವೆ, ೧-೯೮; ಸ್ವತಃಸಿದ್ಧಾತ್ಮನ ಅನವಬೋಧದಿಂದ ಸಂಸಾರವು ಕಾಣಿಸುತ್ತದೆ. ೨-೯೭; ಸ್ವತಃಸಿದ್ಧವಾದ ಆತ್ಮನ ನಿತ್ಯಚೈತನ್ಯದಿಂದ ಬುದ್ಧಿವೃತ್ತಿಗಳೂ ಅವುಗಳಿಂದ ಘಟಾದಿಗಳೂ ಸಿದ್ಧವಾಗುತ್ತವೆ, ೨-೧೧೫; ಸ್ವತಃಸಿದ್ಧನಾದ ಆತ್ಮನಲ್ಲಿ ಅನಾತ್ಮವು ಅಧ್ಯಾರೋಪಿತವಾಗಿದೆ, ೨-೧೦೧; ಆತ್ಮನು ನಿರ್ದುಃಖಿಯೆಂಬುದು ತಾನೇ ಸಿದ್ಧ, ೩-೯೪ ಸ್ವಯಂದೃಶಿ, ೩-೫೫, ಸ್ವಯಂಜ್ಯೋತಿ, ೩-೪೧ ಎಂಬಿವಕ್ಕೆ ತಾನೇ ಬೆಳಗುವ ಆತ್ಮ ಎಂದರ್ಥ; ಆತ್ಮನು ಸ್ವತೋಬುದ್ಧ, ಮತ್ತೊಂದು ಅರಿವಿನಿಂದ ಕಾಣುವವನಲ್ಲ, ೩-೪೯; ಸ್ವತೋಮುಕ್ತ, ಮತ್ತೊಂದರಿಂದ ಸಂಸಾರಬಂಧವನ್ನು ಕಳೆದುಕೊಳ್ಳಬೇಕಾದವನಲ್ಲ, ೩-೪೨.

**ಸ್ವತಂತ್ರಕಾರಣಮ್, ಸ್ವತಂತ್ರಾ ಪ್ರಕೃತಿಃ** - ಬ್ರ.ಸೂ-೧. ಚೇತನವನ್ನು ಬಯಸದೆ ತಾನೇ ಕಾರಣವಾಗಿರುವ (ಪ್ರಧಾನ), ೩೩೫, ೩೩೯, ೩೫೬.

**ಸ್ವತೋಽಪ್ರಾಪ್ತಮ್** - ಐತ. ಪ್ರತ್ಯಕ್ಷಾದಿಗಳಿಂದಲೇ ನಿಶ್ಚಿತ-ವಾಗದಿರುವದು, ೧೧.

**ಸ್ವಧರ್ಮಃ** - ಭ.ಗೀ. ತನ್ನ ವರ್ಣಾಶ್ರಮದ ಧರ್ಮ, ೬೭, ೭೨, ೯೭, ೨೦೭, ೨೧೦, ೨೧೨,

**ಸ್ವಪ್ನಃ** - ಬ್ರ.ಸೂ-೨. ಕನಸು. ಇದು ವ್ಯವಹಾರದೃಷ್ಟಿಯಿಂದ ಮಾಯಿಕ, ೨-೨೫೬ ರಿಂದ ೨೫೯ ; **ಮಾಂ.** ಕನಸೆಂಬ ಅವಸ್ಥೆ, ೧೪, ೧೬, ೫೨, ೬೧, ೭೬, ೭೭, ೭೮, ೭೯, ೮೬, ೮೭, ೮೮, ೯೦, ೯೭, ೯೮, ೯೯, ೧೮೦, ೧೮೨, ೨೭೪, ೩೧೫, ೩೪೬ ; ಕನಸು, ಸುಳ್ಳುತೋರಿಕೆ, ೩೧, ೧೧೦, ೧೨೭.

**ಸ್ವಪ್ನಃ, ಸ್ವಪ್ನಾವಸ್ಥಾ** - ಬೃಹ-೧. ಎರಡನೆಯ ವಸ್ತುವನ್ನು ಕಾಣುವ ನಿದ್ರೆ, ಕನಸು, ೨೯೨, ೨೯೪.

**ಸ್ವಪ್ನಃ, ಸ್ವಾಪಃ** - ಬೃಹ-೨. ಅಂತಃಕರಣವು ಕನಸಿನ ವೃತ್ತಿಯನ್ನು ಪಡೆಯುವ ಅವಸ್ಥೆ, ೬೩, ೧೬೫ ; **ನೈ.** ಕನಸಿನಲ್ಲಿ ಕಾಣುವ ಕಳ್ಳರು, ಆನೆ-ಮುಂತಾದ ಸ್ವಪ್ನ ನಿಮಿತ್ತವು ಎಚ್ಚರಕ್ಕೆ ಕಾರಣ. ಇದರಂತೆ ಜ್ಞಾನಕ್ಕೆ ಶ್ರುತಿವಾಕ್ಯವು ಕಾರಣ, ೨-೧೧೭, ೪-೩೬, ೩೭; ಸುಷುಪ್ತಿಯ ಅಗ್ರಹಣವು ಸ್ವಪ್ನಜಾಗರಗಳಿಗೆ ಬೀಜ, ೪-೪೦,೪೩; ಅನ್ಯಥಾಗ್ರಹಣವೇ ಸ್ವಪ್ನ ೨-೪೨; ಸುಷುಪ್ತಿಯಂತೆ ಸ್ವಪ್ನಜಾಗರಿತಗಳಲ್ಲಿಯೂ ಆತ್ಮನು ನಿರ್ವಿಕಾರಿ, ೪-೪೮.

**ಸ್ವಪ್ನಃ, ಸ್ವಪ್ನದೃಷ್ಟವಸ್ತು** - ಭ.ಗೀ. ಕನಸು, ಕನಸಿನಲ್ಲಿ ಕಂಡ ವಸ್ತು , ಹುಸಿತೋರಿಕೆ, ೩೩, ೮೯೫, ೧೧೪೨.

**ಸ್ವಪ್ನಜಾಗ್ರನ್ಮನಃಸ್ಪನ್ದನಾನಿ** - **ಮಾಂ.** ಕನಸಿನಲ್ಲಿಯೂ ಎಚ್ಚರದಲ್ಲಿಯೂ ವಿಷಯಗಳ ಜ್ಞಾನದ ರೂಪವಾಗಿ ತೋರುವ ಮನೋವ್ಯಾಪಾರಗಳು, ೧೬.

**ಸ್ವಪ್ನದರ್ಶನಮಾಯಾ** - ಬ್ರ.ಸೂ-೧. ಕನಸು ಕಾಣುವದೆಂಬ ಹುಸಿನೋಟ, ೪೨೪.

**ಸ್ವಪ್ನದೃಷ್ಟಹಸ್ತ್ಯಾದಿವತ್** - ಬ್ರ.ಸೂ-೧. ಕನಸಿನಲ್ಲಿ ಕಂಡ ಹುಸಿಯಾದ ಆನೆ ಮುಂತಾದದ್ದರಂತೆ, ೧೭೫.

**ಸ್ವಪ್ನಾದಿಪ್ರತ್ಯಯಃ** - ಛಾಂ. ಕನಸೇ ಮುಂತಾದವುಗಳ, ತತ್ಕಾಲಕ್ಕೆ ಸತ್ಯವೆಂದು ತೋರುವ ಪ್ರತ್ಯಯಗಳು, ೧೮೦.

**ಸ್ವಭಾವಃ** - ಕಠ. ಸ್ವರೂಪ, ೮೯, ೧೧೨, ೧೬೭.

**ಸ್ವಭಾವಃ, ಸ್ವಾಭಾವಿಕಾಜ್ಞಾನಮ್, ಸ್ವಾಭಾವಿಕಾವಿದ್ಯಾ** - **ಮಾಂ.** ಸ್ವಭಾವದಿಂದಿರುವ ಅವಿದ್ಯೆ, ೩೩, ೧೫೩, ೧೭೩.

**ಸ್ವಭಾವಃ - ಬೃಹ-೨.** ಕಾರಣವಿಲ್ಲದೆ ಜನ್ಮವಾಗುವದೆಂಬ ದೇಹವು ತಾನೇ ಕಾಣುವದೆಂಬ (ಚಾರ್ವಾಕರ ವಾದ), ೨೮, ೧೬೦ ; ವಸ್ತುಧರ್ಮ, ೩೦, ೨೧೪ ; **ಭ.ಗೀ.** ಅವಿದ್ಯೆಯಿಂದ ತೋರುವ ಪ್ರಕೃತಿ, ೩೫೨, ೧೦೭೦ ; ಬ್ರಹ್ಮವು ಪ್ರತ್ಯಗಾತ್ಮನಾಗಿರುವ ಸ್ವಭಾವ, ೫೦೨ ; ಜನ್ಮಾಂತರಸಂಸ್ಕಾರ, ೯೬೦, ೧೦೭೦.

**ಸ್ವಭಾವದೋಷಃ - ಕೇನ.** ಚಿತ್ತದಲ್ಲಿ ಸಹಜವಾಗಿ ಕಾಣುವ ದೋಷ, ೪೧.

**ಸ್ವಭಾವವಾದಿನಃ - ಬೃಹ-೧.** ದೇಹವೇ ಆತ್ಮನೆಂದು ವಾದಿಸುವ, (ಚಾರ್ವಾಕರು), ೩.

**ಸ್ವಯಂ ಜ್ಯೋತಿಃ - ಬೃಹ-೨.** ತಾನೇ ಬೆಳಗುವ (ಆತ್ಮ), ೧೭೩, ೧೭೬.

**ಸ್ವಯಂಜ್ಯೋತಿಃಸ್ವಭಾವಮ್ - ಬ್ರ.ಸೂ-೧.** ತಾನೇ ಬೆಳಗುವ ಸ್ವಭಾವದ್ದು, ೪೩.

**ಸ್ವಯಂ ಪ್ರಸಿದ್ಧ - ಬ್ರ.ಸೂ-೧.** ತಾನೇ ಸಿದ್ಧವಾಗಿರುವ, (ಬ್ರಹ್ಮಾತ್ಮತ್ವ), ೪೩೫.

**ಸ್ವಂ ರೂಪಮ್ - ಛಾಂ.** ತನ್ನ ಸ್ವಾಭಾವಿಕವಾದ ಆತ್ಮರೂಪ, ೬೨೩.

**ಸ್ವರೂಪಪ್ರತಿಷ್ಠಃ - ತೈ.** ತನ್ನ ಸ್ವರೂಪದಲ್ಲಿ ನೆಲೆನಿಂತವನು ೧೯೧.

**ಸ್ವಾತ್ಮನಿ ಅವಸ್ಥಾನಮ್ - ತೈ.** ತನ್ನ ಸ್ವರೂಪದಲ್ಲಿ ನೆಲೆನಿಲ್ಲುವದು, ಮೋಕ್ಷ, ೨, ೩, ೭, ೧೧.

**ಸ್ವವಿಷಯಶೂರಾಣಿ - ಬೃಹ-೧.** ತಮ್ಮ ತಮ್ಮ ವಿಷಯವನ್ನು ತಿಳಿಸುವದರಲ್ಲಿ ಮಾತ್ರ ಶೌರ್ಯವುಳ್ಳ (ಪ್ರಮಾಣಗಳು), ೩೨೫.

**ಸ್ವಸಂವೇದ್ಯತಾ, ಸ್ವಾತ್ಮಪ್ರತ್ಯಕ್ಷಮ್ - ಛಾಂ.** ತನ್ನ ಅನುಭವಕ್ಕೆ ಅಳವಡುವದು, ೬೪೬, ೬೫೬.

**ಸ್ವಸ್ವಾಮಿಭಾವ್ಯ(ಸಂಬನ್ಧಃ) - ಬ್ರ.ಸೂ-೧.** ಒಡೆಯ, ಸ್ವತ್ತು ಎಂಬ ಸಂಬಂಧ, ೫೮, ೨೫೫.

**ಸ್ವಸ್ವಾಮಿತ್ವಭೇದಬುದ್ಧಿಃ - ಛಾಂ.** ನಾನು, ನನ್ನದು - ಎಂಬ ಭೇದಬುದ್ಧಿ, ೧೮೧.

**ಸ್ವಾತ್ಮರೂಪಮ್ - ಬ್ರ.ಸೂ-೧.** ತನ್ನ ರೂಪವೇ ಆಗಿರುವ ರೂಪ, ೪೮.

**ಸ್ವಾರ್ಥಃ - ಕಠ.** ಸ್ವತಂತ್ರನಾಗಿರುವವನು, ತನಗಾಗಿರುವವನು, ೧೪೧ ; **ನೈ.** (೧) ಆತ್ಮನು ತನಗಾಗಿ ತಾನು ಇರತಕ್ಕವನು, ಅನಾತ್ಮದಂತೆ ಮತ್ತೊಂದರ

ಅಧೀನವಾಗಿರತಕ್ಕವನಲ್ಲ, ೨-೭೪, ೩-೪೮. (೨) ತನ್ನ ಅರ್ಥ. ವಿಧಿವಾಕ್ಯಗಳೂ ಆತ್ಮವಾಕ್ಯಗಳೂ ತಮ್ಮ ತಮ್ಮ ಅರ್ಥದಲ್ಲಿ ಪ್ರಮಾಣ, ೧-೯೧.

**ಸ್ವಾಪಮೂರ್ಛಾದ್ಯವಸ್ಥಾಃ - ಬ್ರ.ಸೂ-೧.** ನಿದ್ರೆ, ಮೂರ್ಛೆ - ಮುಂತಾದ ದ್ವೈತಶೂನ್ಯಾವಸ್ಥೆಗಳು, ೪೧೨.

**ಸ್ವಾತ್ಮಪ್ರವೃತ್ತಿಸಾಕ್ಷಿಭೂತಮ್ - ಕಠ.** ತನ್ನ ಅಂತಃಕರಣದ ವ್ಯಾಪಾರಕ್ಕೆ ಸಾಕ್ಷಿಯಾಗಿರುವ ಆತ್ಮತತ್ತ್ವ, ೧೬೦.

**ಸ್ವಾತ್ಮಪ್ರತಿಷ್ಠಾ - ಮುಂ.** ತಮ್ಮ ಆತ್ಮನಲ್ಲಿ ನಿಲುಗಡೆಯಲ್ಲಿ ಹೊಂದುವ ಮುಕ್ತಿ, ೨೭.

**ಸ್ವಾಭಾವ್ಯಮ್ - ಬೃಹ-೧.** ಸ್ವರೂಪಸ್ಥಿತಿ, ೨೮೮.

**ಸ್ವಾಭಾವಿಕ - ಬ್ರ.ಸೂ-೧.** ವಿಚಾರರಹಿತವಾದ ಅವಿದ್ಯೆಯ ಅವಸ್ಥೆಯ (ಕರ್ತೃತ್ವಭೋಕ್ತೃತ್ವ), ೨೬೯, (ವ್ಯವಹಾರ), ೪೩೫, (ಶಾರೀರಾತ್ಮತ್ವ), ೪೩೫ ; ಕೃತಕವಲ್ಲ , ನಿತ್ಯಸಿದ್ಧಸ್ವರೂಪವಾದ (ಅಶರೀರತ್ವ), ೪೨ ; ಅನಿಮಿತ್ತವಾದ (ಅವಿಭಾಗಪ್ರಾಪ್ತಿ), ೪೨೫ ; **ಬ್ರ.ಸೂ-೨.** ಅವಿದ್ಯಾಸ್ವಭಾವದಿಂದ ತೋರುವ. ಸ್ವಾಭಾವಿಕವಾದ ಕರ್ತೃತ್ವಭೋಕ್ತೃತ್ವವನ್ನು ಅನುವಾದಮಾಡಿಕೊಂಡು ಕರ್ಮವಿಧಿಗಳು ಹೊರಟಿವೆ, ೧-೨೬೯ ; ಶಾರೀರಾತ್ಮತ್ವವೂ ವ್ಯವಹಾರವೂ ಸ್ವಾಭಾವಿಕ, ೧-೪೩೫ ; ನಿತ್ಯಸಿದ್ಧವಾದ, ಸ್ವರೂಪಕ್ಕೆ ಸೇರಿದ. ಅಶರೀರತ್ವವು ಸ್ವಾಭಾವಿಕ, ೧-೪೨ ; ಜೀವನಿಗೆ ಕರ್ತೃತ್ವವು ಸ್ವಾಭಾವಿಕವಲ್ಲ , ೨-೧೫೩ ; ಅಭೇದವು ಸ್ವಾಭಾವಿಕ, ಭೇದವು ಅವಿದ್ಯಾಕೃತ, ೨-೩೦೧ ; ನಿಮಿತ್ತವನ್ನು ಬಯಸದ. ಸುಷುಪ್ತಿಸಮಾಧಿಗಳಲ್ಲಿ ಸ್ವಾಭಾವಿಕವಾದ ಅವಿಭಾಗಪ್ರಾಪ್ತಿ , ೧-೪೨೫ ; **ಕೇನ.** ಅವಿಚಾರಸ್ವಭಾವದಿಂದ ಆದ, ೨ ; ಸ್ವಭಾವದಿಂದಲೇ ಸಿದ್ಧವಾಗಿರುವ ಸ್ವರೂಪವೇ ಆಗಿರುವ, ೫ ; **ಮುಂ.** ವಿಚಾರದಿಂದಾಗುವ ತಿಳಿವಳಿಕೆಯಿಲ್ಲದವರಿಗೆ ಸ್ವಭಾವದಿಂದಿರುವ, ೪೫ ; **ತೈ.** ಅವಿಚಾರಸ್ವಭಾವದಿಂದ ಇರುವ (ಅಜ್ಞಾನ) ೭೭ ; ಮತ್ತೊಂದರಿಂದ ಆಗದ ಸ್ವರೂಪವಾಗಿರುವ (ಆನಂದ) ; ೯೬, ೨೧೬, ೨೨೨, ೨೫೮ ; **ಬೃಹ-೧.** ಪ್ರಕೃತಿಸಿದ್ಧವಾದ, ತಾನೇ ಇದ್ದುಕೊಂಡಿರುವ. ಅವಿಚಾರಿತ-ಸಿದ್ಧವಾಗಿರುವ, (ದೋಷ), ೫ ; (ಅವಿದ್ಯೆ) ೩೩, ೫೪ ; (ಪಾಪದಲ್ಲಿ ಆಸಕ್ತಿ), ೪೩, ೪೪ ; (ಪ್ರಲಯ), ೩೭೦ ; ಸ್ವರೂಪಕ್ಕೆ ಸೇರಿದ, ಆಗಂತುಕವಲ್ಲದ, ೧೬೦, ೧೬೧ ; **ಬೃಹ-೨.** ಅವಿಚಾರದಶೆಯಲ್ಲಿ ಸ್ವಭಾವದಿಂದಲೇ ಇರುವ, ೫, ೬ ; ಸ್ವರೂಪಕ್ಕೆ ಸೇರಿದ, ೨೧೨, ೨೧೪.

**ಸ್ವಾಭಾವಿಕಮ್** - ಈಶ. ವಿಚಾರವಿಲ್ಲದ ಸ್ವಭಾವದ, ೨, ೩ ; ಸ್ವರೂಪವಾದ, ೧೨ ; ಕಠ. ಅವಿಚಾರದೆಸೆಯಲ್ಲಿರುವ, ೩.೨, ೧೧೨ ; ಭ.ಗೀ. ಸ್ವಭಾವಕ್ಕೆ ಅನು-ಗುಣವಾದ, ೬೭ ; ವಿಚಾರವಿಲ್ಲದೆ, ಸ್ವಭಾವದಿಂದಲೇ ಆಗಿರುವ (ವೇದನ), ೭೫೫.

**ಸ್ವಾರಾಜ್ಯಮ್** - ಛಾಂ. ಮುಕ್ತಿ, ಸ್ವಾತಂತ್ರ್ಯ, ೨೫೬, ೫೪೬, ೬೦೧, ೧೮೧.

**ಸ್ವಾತ್ಮನಿ ಅವಸ್ಥಾನಮ್** - ತೈ. ತನ್ನ ಸ್ವರೂಪದಲ್ಲಿ ನೆಲೆ ನಿಲ್ಲುವದು, ಮೋಕ್ಷ, ೨, ೩, ೭, ೧೧.

# ಹ

**ಹೃತ್, ಹೃದಯಮ್** - ಬೃಹ-೨. ಹೃದಯದಲ್ಲಿರುವ ಬುದ್ಧಿ (ಅಂತಃಕರಣ) ೧೧೫ ರಿಂದ ೧೨೧ ; ಹೃದಯಾತ್ಮನಾದ ತೈಜಸ, ೧೫೫.

**ಹೃದಯಗ್ರಂಥಿಃ** - ಮುಂ. ಹೃದಯಕ್ಕೆ ಗಂಟುಬಿದ್ದಿರುವಂತೆ ಇರುವ ಅವಿದ್ಯಾವಾಸನೆಯ ಫಲವಾದ ಕಾಮವು, ೮೩.

**ಹೃದಯಪುಣ್ಡರೀಕಾಕಾಶಃ, ಹೃದಯಾಕಾಶಃ** - ಪ್ರಶ್ನ. ಹೃದಯದ ಆಕಾಶ, ಲಿಂಗಾತ್ಮನಿರುವ ಸ್ಥಾನ, ೪೩ ; ಸುಷುಪ್ತಿ ಸ್ಥಾನ, ೬೬ ; ಕಠ. ಹೃದಯದಲ್ಲಿರುವ ಆಕಾಶ, ಬ್ರಹ್ಮವು ತೋರುವ ಬುದ್ಧಿ, ೧೩೮, ೧೫೨.

**ಹೃದಯಾಕಾಶಃ** - ತೈ. ಅಪರಬ್ರಹ್ಮದ ಉಪಾಸನೆಗೆ ಸ್ಥಾನ, ೪೦ ; ಬ್ರಹ್ಮ-ವಿಜ್ಞಾನಕ್ಕೆ ಸ್ಥಾನ, ೧೦೮ ; ಐತ. ಸುಷುಪ್ತಿಕಾಲದಲ್ಲಿ ಜೀವನು ಸೇರುವ ಬ್ರಹ್ಮದ ಸ್ವರೂಪದ, ೫೬.

**ಹಾರ್ದಾಕಾಶಃ** - ಕಠ. ಹೃದಯದಲ್ಲಿರುವ ಆಕಾಶ, ಚೈತನ್ಯರೂಪಬ್ರಹ್ಮ, ೮೫ ; ಛಾಂ. ಹೃದಯದಲ್ಲಿರುವ ಆಕಾಶವೆಂಬ ಹೆಸರಿನ ಬ್ರಹ್ಮ, ೨೩೮.

**ಹಾನೋಪಾದಾನೇ** - ಬ್ರ.ಸೂ-೧. ಬಿಡುವದು, ತೆಗೆದುಕೊಳ್ಳುವದು (ಕರ್ಮದ ಫಲ), ೪೧ ; ನೈ. ಹಾನ (ಬಿಡುವದು, ನಾಶ), ಉಪಾದಾನ, ಇವೆರಡೂ ಅನಾತ್ಮಧರ್ಮಗಳು. (ತೆಗೆದುಕೊಳ್ಳುವದು, ಹುಟ್ಟುವದು) - ಇವು ಅಜ್ಞಾನದ ಹಾನವೇ ಮುಕ್ತಿ, ೧-೨೪; ಪರಿಹೃತಪಾದದ್ದರ ಹಾನವನ್ನೂ ಅಜ್ಞಾನದಿಂದ ಬಯಸಬಹುದು, ೧-೩೪; ಹಾನೋಪಾದಾನಗಳಿಗೆ ಸಾಕ್ಷಿಯಾಗಿರುವ ಆತ್ಮನಿಗೆ ಹಾನೋಪಾದಾನಗಳಿಲ್ಲ, ೨-೧೦೮; ಬುದ್ಧಿಯ ಸಮ್ಯಕ್ತ್ವಾದಿಗಳ

ಹಾನೋಪಾದಾನಗಳು ಅವನ್ನು ನೋಡುತ್ತಿರುವ ಸಾಕ್ಷಿಯಲ್ಲಿ ಅಜ್ಞಾನದಿಂದ ಅಧ್ಯಸ್ತವಾಗಿವೆ, ೩-೨೦. ೨೧; ಶಾಸ್ತ್ರವು ಅಹಿತ, ಹಿತ-ಇವುಗಳ ಪ್ರಾಪ್ತಿಗಳಿಗೆ ಉಪಾಯವನ್ನು ಮಾತ್ರ ಹೇಳುತ್ತದೆ, ೧-೩೦; ಹಾನೋಪಾದಾನಗಳುಳ್ಳ ಪ್ರಮಾತ್ರಾದಿಗಳಿಂದ ಹಾನೋಪಾದಾನಗಳಿಲ್ಲದ ಆತ್ಮನನ್ನು ಅನ್ವಯವ್ಯತಿರೇಕಗಳಿಂದ ಬಿಂಗಡಿಸಿಕೊಂಡು ಅರಿಯಬೇಕು, ೩-೪೬; ಹಾನೋಪಾದಾನಗಳ ಸಿದ್ಧಿಯು ; ಹಾನೋಪಾದಾನರಹಿತನಾದ ಆತ್ಮನಿಂದಲೇ ಆಗುತ್ತದೆ, ೩-೨೧.

**ಹಿಂಕಾರಃ - ಛಾಂ.** ಒಂದು ಬಗೆಯ ಸ್ತೋತ್ರ, ೧೦೪.

**ಹಿತಮ್ - ತೈ.** ತನಗೆ ಒಳ್ಳೆಯದಾದ, ಸುಖಕಾರಣವಾದ. ಹಿತಾಹಿತಗಳು ಭ್ರಾಂತಿಯಿಂದ ಅಧ್ಯಸ್ತವಾಗಿವೆ, ೧-೩೦; ನಿರತಿಶಯಹಿತಕ್ಕಿಂತ ಆತ್ಮನು ಬೇರೆಯಲ್ಲ , ೧-೩೦.

**ಹಿರಣ್ಯಗರ್ಭಃ - ಬ್ರ.ಸೂ-೧.** ಕಾರ್ಯಬ್ರಹ್ಮ , ಸತ್ಯಲೋಕದಲ್ಲಿರುವ ಸರ್ವಕರಣಾತ್ಮ , ೨೫೦, ೨೯೪, ೩೩೬ ; **ಬ್ರ.ಸೂ-೨.** ಸತ್ಯಲೋಕದಲ್ಲಿರುವ ಚತುರ್ಮುಖಬ್ರಹ್ಮ , ಕಾರ್ಯಬ್ರಹ್ಮ ; **ಈಶ.** ಕಾರ್ಯಬ್ರಹ್ಮ , ಅಪರಬ್ರಹ್ಮ ; ಉಪಾಸನೆಯಿಂದ ಪಡೆಯಬೇಕಾಗಿರುವ ಉತ್ತಮಗತಿ, ೨೮, ೩೨ ; **ಕಠ.** ಜ್ಞಾನ-ಕ್ರಿಯಾಶಕ್ತಿಗಳ ಸಮಷ್ಟಿಯ ಅಭಿಮಾನಿಯಾದ ಬ್ರಹ್ಮ, ೨೮, ೧೨೦,೧೨೧, ೧೫೭ ; **ಪ್ರಶ್ನ.** ಪರಬ್ರಹ್ಮದಿಂದ ಮೊದಲು ಹುಟ್ಟುವ ಕಡಿಮೆಯ ಬ್ರಹ್ಮ, ೫, ೮೩ ; **ಮುಂ.** ವ್ಯಾಕೃತಪ್ರಪಂಚದಲ್ಲಿ ಎಲ್ಲರಿಗೂ ಕಾರಣನಾಗಿರುವ ಬ್ರಹ್ಮನು, ಕಾರ್ಯಬ್ರಹ್ಮ , ಪ್ರಾಣ, ಅಪರಬ್ರಹ್ಮ , ೨೩, ೨೫ ; **ಮಾಂ.** ಸೂಕ್ಷ್ಮಸಮಷ್ಟಿಯ ಅಭಿಮಾನಿಯಾದ ಆತ್ಮ , ೧೩, ೨೨ ; ವಿರಾಟ್ಪುರುಷ, ೨೧ ; **ತೈ.** ಧರ್ಮಜ್ಞಾನಾದಿಗಳು ಮಿಗಿಲಿಲ್ಲದಷ್ಟು ಇರುವ ಬ್ರಹ್ಮನು, ಅಪರಬ್ರಹ್ಮ, ೨೦೧ ; **ಐತ.** ಜ್ಞಾನಶಕ್ತಿಪ್ರಧಾನವಾದ ಅಪರಬ್ರಹ್ಮ, ೮೭ ; **ಛಾಂ.** ಸತ್ಯಲೋಕದಲ್ಲಿರುವ ಅಪರಬ್ರಹ್ಮ, ೨೨೭, ೨೪೭, ೬೮೮ ; **ಬೃಹ-೧.** ಬುದ್ಧ್ಯವಸ್ಥೆಯಲ್ಲಿರುವ, ಮೃತ್ಯುಶಬ್ದವಾಚ್ಯನಾದವನು, ಪ್ರಜಾಪತಿ, ೨೫, ೧೧೨ ; **ಬೃಹ-೨.** ಸರ್ವದ್ವೈತದೊಡನೆ ಏಕತ್ವದಿಂದಿರುವ ಜಗದಾತ್ಮಸೂತ್ರ, ೨೬, ೩೭೦ ; **ಭ.ಗೀ.** ಪರಮಾತ್ಮನಿಂದ ಅವ್ಯಕ್ತದ ಮೂಲಕವಾಗಿ ಹುಟ್ಟುವ ಬ್ರಹ್ಮನು, ೭೦೦, ೮೫೦, ಆದಿತ್ಯಾಂತರ್ಗತಪುರುಷ, ೫೦೩.

**ಹಿರಣ್ಯ ಗರ್ಭಾದಿವಿದ್ಯಾ - ಬೃಹ-೨.** ಬ್ರಹ್ಮಾದಿದೇವತೆಗಳ ಉಪಾಸನೆ, ೫೬.

**ಹೇತುಫಲಾತ್ಮಕಃ - ಮಾಂ.** ಧರ್ಮಾಧರ್ಮಗಳಿಂದ ಶರೀರವನ್ನು ಪಡೆಯುವ ಜೀವ, ೫೩, ೧೦೧.

**ಹೇತುಫಲೇ** - ಮಾಂ. ಧರ್ಮಾಧರ್ಮಗಳು, ಮತ್ತು ಅವುಗಳ ಕಾರ್ಯವಾದ ಶರೀರ - ಇವು, ೨೩೮, ೨೪೧, ೨೪೨, ೨೪೪, ೨೪೫, ೨೫೧, ೨೫೪, ೨೫೫, ೩೦೫, ೩೦೬.

**ಹೇತುಸ್ವರೂಪಕಾರ್ಯಾಣಿ** - ನೈ. ಜ್ಞಾನಕರ್ಮಗಳಿಗೆ ಹೇತ್ವಾದಿಗಳು ಬೇರೆಬೇರೆಯಾಗಿ ಪರಸ್ಪರ ವಿರುದ್ಧವಾಗಿವೆ, ೧-೬೬.

**ಹೇಯಮ್** - ಕೇನ. ಬೇಡವೆಂದು ಬಿಡತಕ್ಕ , ಅವ್ಯಾಕೃತ, ೨೮.

**ಹೇಯೋಪಾದೇಯರಹಿತ** - ಬ್ರ.ಸೂ-೧. ಬಿಡತಕ್ಕದ್ದು , ತೆಗೆದು-ಕೊಳ್ಳತಕ್ಕದ್ದು ಎಂಬ (ಕರ್ಮಫಲ) ವಿಲ್ಲದ (ಆತ್ಮಜ್ಞಾನ), ೩೫, ೩೮.

**ಹೈರಣ್ಯಗರ್ಭಬುದ್ಧಿಃ** - ಬ್ರ.ಸೂ-೧. ಹಿರಣ್ಯಗರ್ಭಸಮಷ್ಟಿಬುದ್ಧಿಯಾದ (ಮಹತ್ತು), ೩೩೯.

**ಹೈರಣ್ಯಗರ್ಭಂ ತತ್ತ್ವಮ್** - ಕಠ. ಮಹತ್ತತ್ತ್ವವೆಂಬ ಹೆಸರಿನ ಸಮಷ್ಟಿ ಬುದ್ಧಿ, ೯೮.

**ಹೈರಣ್ಯಗರ್ಭಂ ಪದಮ್** - ಕಠ. ಹಿರಣ್ಯಗರ್ಭನ ಸ್ಥಾನ, ೬೩.

---